ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕೃಷ್ಣಮೂರ್ತಿ ಹೆಚ್.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾಡೆಂಬುದು ಜ್ಯೋತಿರ್ಲಿಂಗ

ಭಾಷಾನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕೃಷ್ಣಮೂರ್ತಿ ಹೆಚ್.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

*****

"ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ" ಎಂಬ ವಿಷಯದ ಕುರಿತು ಕೃಷ್ಣಮೂರ್ತಿ ಹೆಚ್. ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಹಾಗೂ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: 07-09-2019

ಸ್ಥಳ: ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

*****

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **"ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ"** ಎಂಬ ಮಹಾಪ್ರಬಂಧವು ಡಾ. ಡಿ. ಪಾಂಡುರಂಗಬಾಬು, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಕೃಷ್ಣಮೂರ್ತಿ ಹೆಚ್.
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: 07-09-2019

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ: ಒಂದು ೦೧-೦೭

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ: ಎರಡು ೦೮-೨೭

೨.೧. ಪರಿಕಲ್ಪನಾತ್ಮಕ ಚರ್ಚೆ

೨.೨. ಅಧ್ಯಯನದ ಸಮೀಕ್ಷೆ

ಅಧ್ಯಾಯ: ಮೂರು ೨೮-೧೨೭

ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸ : ಸಂಬೋಧನೆ, ಉಲ್ಲೇಖ

೩.೧. ಸಂಬೋಧನೆ : ಬಳಕೆಯ ನೆಲೆಗಳು

೩.೨. ಉಲ್ಲೇಖ: ಬಳಕೆಯ ನೆಲೆಗಳು

ಅಧ್ಯಾಯ: ನಾಲ್ಕು ೧೨೮-೨೦೨

ಅಭಿವ್ಯಕ್ತಿ: ಪಾತ್ರಗಳ ವ್ಯಕ್ತಿನಾಮಗಳು

೪.೧. ವ್ಯಕ್ತಿನಾಮಗಳು : ಸಾಮಾಜಿಕ ಆಯಾಮ

೪.೨ ವ್ಯಕ್ತಿನಾಮಗಳಲ್ಲಿ : ಜಾತಿ, ಸ್ತರಸೂಚಕ ಅಂಶಗಳು

೪.೨.೧. ಜಾತಿಸೂಚಕ ವ್ಯಕ್ತಿನಾಮಗಳು

೪.೨.೨. ಲಿಂಗಾಧಾರಿತ ವ್ಯಕ್ತಿನಾಮಗಳು

೪.೨.೩. ವಯಸ್ಸು ಆಧಾರಿತ ವ್ಯಕ್ತಿನಾಮಗಳು

೪.೨.೪ ಶಿಕ್ಷಣ : ವ್ಯಕ್ತಿನಾಮಗಳು

೪.೨.೫. ಧರ್ಮ ಆಧಾರಿತ ವ್ಯಕ್ತಿನಾಮಗಳು

೪.೩. ವ್ಯಕ್ತಿನಾಮಗಳು : ಬಳಕೆಯ ನೆಲೆಗಳು

೪.೪. ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟ

ಅಧ್ಯಾಯ: ಐದು ೨೦೩–೨೬೯

ಸಂಕಥನಗಳು: ಅಭಿವ್ಯಕ್ತಿಯ ಕ್ರಮ

೫.೧. ಬೈಗುಳಗಳು: ಅಭಿವ್ಯಕ್ತಿಯ ಕ್ರಮ

೫.೧.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೨. ಗಾದೆಗಳು: ಅಭಿವ್ಯಕ್ತಿಯ ಕ್ರಮ

೫.೨.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಅಧ್ಯಾಯ: ಆರು ೨೭೦–೩೧೯

ಅಶಾಬ್ದಿಕ ಸಂವಹನ: ಸಾಮಾಜಿಕ ಚಹರೆಗಳು

೬.೧. ಆಂಗಿಕ ಭಾಷೆ : ಸಾಮಾಜಿಕ ಚಹರೆಗಳು

೬.೧.೧. ಆಂಗಿಕ ಭಾಷೆ ಕೆಳಜಾತಿ ಪಾತ್ರಗಳು

೬.೧.೨. ಆಂಗಿಕ ಭಾಷೆ : ಮೇಲ್ಜಾತಿ ಪಾತ್ರಗಳು

೬.೨. ಸಂಕೇತ ಭಾಷೆ : ಸಾಮಾಜಿಕ ಚಹರೆಗಳು

೬.೨.೧. ಸಂಕೇತ ಭಾಷೆ : ಕೆಳಜಾತಿ ಪಾತ್ರಗಳು

೬.೨.೨. ಸಂಕೇತ ಭಾಷೆ : ಮೇಲ್ಜಾತಿ ಪಾತ್ರಗಳು

ಅಧ್ಯಾಯ : ಏಳು ೩೨೦–೩೨೯

ಸಮಾರೋಪ

ಆಕರ ಗ್ರಂಥಗಳು ೩೩೦–೩೩೭

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಭಾಷೆ ಭಾಷಿಕ ಸಮುದಾಯವೊಂದರ ಸಾಮಾಜಿಕ ವ್ಯವಹಾರಗಳ ನಿರ್ವಹಣೆಗೆ ಬಳಕೆಯಾಗುತ್ತದೆ. ವ್ಯಕ್ತಿ ಮತ್ತು ಸಮುದಾಯ ನಡುವಿನ ನಂಟಿನ ಸ್ವರೂಪವನ್ನು ಭಾಷೆಯು ಬಿಂಬಿಸುತ್ತದೆ. ಸಮಾಜವೊಂದರ ಸೃಜನಶೀಲ ವ್ಯವಹಾರಗಳಿಗೆ ಭಾಷಾ ಸಾಮಗ್ರಿಯನ್ನು ಬಳಸುವಾಗ ಆಯಾ ಕ್ಷೇತ್ರದಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಬಳಸುವ ಸಂದರ್ಭ, ಆವರಣ, ಉದ್ದೇಶಕ್ಕೆ ಅನುಗುಣವಾಗಿ ಆಯ್ದುಕೊಳ್ಳುವ, ಹೊಂದಿಸಿಕೊಳ್ಳುವ ಕೆಲಸವನ್ನು ಮಾಡುತ್ತಾರೆ.

ಭಾಷೆಯನ್ನು ಶಾಬ್ದಿಕ ನೆಲೆಯ ಮಿತಿಯಿಂದ ಅಶಾಬ್ದಿಕವಾದ ಆಂಗಿಕ ಚಲನೆ, ವಿವಿಧ ಸಂಕೇಗಳ ವ್ಯಾಪ್ತಿಗೂ ಹಿಗ್ಗಿಸಲಾಗಿರುತ್ತದೆ. ಸೃಜನಶೀಲ ಅಭಿವ್ಯಕ್ತಿಯು'ಭಾಷೆ'ಯೆಂಬುದರ ವ್ಯಾಪ್ತಿಯನ್ನು ಅಭಿವ್ಯಕ್ತಿಯ ಎಲ್ಲಾ ಮಜಲುಗಳಿಗೂ ಅನ್ವಯಿಸುತ್ತದೆ.

ಪ್ರಸ್ತುತ ಅಧ್ಯಯನವು ದಲಿತ ಪಾತ್ರಗಳ ಅಭಿವ್ಯಕ್ತಿಯನ್ನು ಕೆಂದ್ರೀಕರಿಸಿದೆ. ಕನ್ನಡ ಸಮಾಜದ ಸ್ತರವಿನ್ಯಾಸಗಳು, ಏಣಿಶ್ರೇಣಿ, ಸ್ಥಾನಮಾನಗಳು ವ್ಯಕ್ತಿಗಳ ಸಾಮಾಜಿಕ ನೆಲೆಗಳು, ಸಮುದಾಯಗಳ ಸಾಮಾಜಿಕ ಬಳಕೆಯು ವ್ಯಕ್ತಿ ಮತ್ತು ಸಮುದಾಯಗಳ ಸಂಬಂಧದ ಸ್ವರೂಪವನ್ನು ರಚನೆಗಳಲ್ಲಿ ಅಭಿವ್ಯಕ್ತಿಯ ವೈವಿಧ್ಯತೆಯನ್ನು, ಸಾಧ್ಯತೆಗಳನ್ನು ಸಾಮಾಜಿಕ ಚಲನೆಯೊಂದಿಗೆ ಉಂಟಾಗುತ್ತಿರುವ ವಿಕಾಸ, ಬೆಳವಣಿಗೆ ಪಲ್ಲಟಗಳ ಭಾಷಿಕ ಪ್ರತಿಫಲನಗಳನ್ನೂ ಅದರ ಶಾಬ್ದಿಕ ಮತ್ತು ಅಶಾಬ್ದಿಕ ನೆಲೆಗಳಿಂದ ದಲಿತ ಪಾತ್ರಗಳ ಮೂಲಕ ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಸಾಮಾಜಿಕ ಪರಿಸರ, ಸಾಮಾಜಿಕ ವ್ಯವಸ್ಥೆ, ಜಾತಿ, ಧರ್ಮ, ಸಂಸ್ಕೃತಿ, ಲಿಂಗಸಂಬಂಧಿ ಆಯಾಮಗಳು ಭಾಷೆಯ ಸ್ವರೂಪವನ್ನು ನಿರ್ಧರಿಸುತ್ತವೆ. ಸಮುದಾಯದ ಸಾಮಾಜಿಕ ಚಹರೆಗಳು ಮತ್ತು ಸಾಂಸ್ಕೃತಿಕ ಆಯಾಮಗಳು ಭಾಷೆಯಲ್ಲಿಯೂ ಅಭಿವ್ಯಕ್ತಿಗೊಳ್ಳುತ್ತಿರುತ್ತವೆ. ಆಯಾಯ ಸಮುದಾಯ ಸಾಮಾಜಿಕ ಚಹರೆಗಳ ಭಿನ್ನತೆಯನ್ನು ಭಾಷೆಯು ಅಭಿವ್ಯಕ್ತಿಸುತ್ತಿರುತ್ತದೆ.

ಕನ್ನಡ ಭಾಷೆಯಲ್ಲಿರುವ ಸಂಬೋಧನಾ ರೂಪ, ವ್ಯಕ್ತಿನಾಮಗಳು, ಬೈಗುಳ, ಗಾದೆ ಮತ್ತು ಅಶಾಬ್ದಿಕ ಸಂವಹನಗಳಾದ ಆಂಗಿಕ, ಸಂಕೇತಗಳು, ರೂಢಿನುಡಿಗಳು ಜಾತಿಸೂಚಕ ಸಾಮಾಜಿಕ ನೆಲೆಗಳ ಅರ್ಥ ಸಂಬಂಧಗಳನ್ನು ಸಹ ಆಧರಿಸಿ ಸಂವಹನ ಆಗುತ್ತಿರುತ್ತದೆ. ಭಾಷೆಗೆ ಮಡಿ ಮೈಲಿಗೆ ಇಲ್ಲದಿದ್ದರೂ ಒಂದೇ ಭಾಷೆಯನ್ನು ಆಡುವ ಜನಸಮುದಾಯ ಅವರವರ ಸಮುದಾಯಗಳ ಶ್ರೇಣಿಯಲ್ಲಿಯೇ ಅರ್ಥದ ನೆಲೆಗಳನ್ನು ನಿಗದಿಪಡಿಸಿಕೊಂಡಿರುತ್ತಾರೆ.

ಆಳಿನ ಮಾತಿಗೂ ಒಡೆಯನ ಮಾತಿಗೂ ಸಾಮಾಜಿಕ ವ್ಯವಸ್ಥೆಯ ಪ್ರಮಾಣಗಳು ಅನ್ವಯವಾಗಿರುತ್ತವೆ. ಆಳನ್ನು ಅಧಿಕಾರದಿಂದ ಆಳುವುದು ಒಡೆಯನಿಗೆ ಎಷ್ಟು ಸುಲಭವೋ ಅಷ್ಟೇ ಸುಲಭವಾಗಿ ಆಳಿನ ಭಾಷೆಯ ಮೇಲೆ ಯಜಮಾನಿಕೆ ಸಾಧಿಸಲಾಗುತ್ತದೆ. ಯಜಮಾನನ ಅಥವಾ ಒಡೆಯರ ಭಾಷೆ ಆಳ್ವಿಕೆಯ ಮಾತಾಗಿ ಹೇರಲ್ಪಡುತ್ತಿರುತ್ತದೆ. ಆಳಿನ ಭಾಷೆ ಅದಕ್ಕೆ ಹೇಗೆ ಪ್ರತಿಕ್ರಿಯೆ ನೀಡುತ್ತದೆ ಎಂದರೆ ಕೆಲವು ಬಾರಿ ಮೌನ ಬೇಡುವ ಧ್ವನಿಯಾಗಿ ಪ್ರತಿಕ್ರಿಯೆ ನೀಡುತ್ತಿರುತ್ತದೆ.

ಒಡೆಯರ ಅಥವಾ ಮೇಲ್ಜಾತಿಯವರ ಭಾಷೆಗೆ ಕೆಳಜಾತಿಯ ವ್ಯಕ್ತಿಗಳು ಕೆಲವೊಮ್ಮೆ ಮೌನವಾಗಿ, ತಮ್ಮ ನೋವು, ಸಂಕಟ, ರೊಷವನ್ನು ಆಂಗಿಕ ಅಭಿನಯಗಳ ಮೂಲಕವೂ ಅಭಿವ್ಯಕ್ತಿಸುತ್ತಿರುತ್ತಾರೆ. ಆಂಗಿಕ ಅಭಿನಯದ ಮೂಲಕವೂ ಸಾಮಾಜಿಕ ಚಹರೆಗಳನ್ನು ಗುರುತಿಸಬಹುದಾಗಿದೆ.

ಒಂದು ನುಡಿ, ನುಡಿಗಟ್ಟು, ಬೈಗುಳ, ಗಾದೆ, ಹೆಸರು, ಸಂಬೋಧನಾರೂಪದ ಬಳಕೆಯ ಹಿಂದೆ ಸಮುದಾಯವೊಂದರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ಸಾಮಾಜಿಕ ಸ್ತರ ವಿನ್ಯಾಸವನ್ನು ಕಂಡುಕೊಳ್ಳಬಹುದು. ಭಾಷೆಯ ಹಿಂದಿರುವ ಮೌಲ್ಯಗಳು, ಯಜಮಾನಿಕೆಗಳು ಅರ್ಥವನ್ನು ನಿರ್ಧರಿಸಿ, ಸಮುದಾಯದ ಭಾಷೆಯಲ್ಲಿ ಒಂದನ್ನು ಆಳುತ್ತಿರುತ್ತವೆ. ನಿತ್ಯ ಜೀವನದ ಕಷ್ಟ, ಸುಖಗಳನ್ನು ನಿವೇದಿಸಿಕೊಳ್ಳಲು ದಲಿತರು ಯಾವ ಯಾವ ಸ್ವರೂಪದಲ್ಲಿ ಭಾಷೆಯನ್ನು ಸಮಾಜಗಳ ಜೊತೆ ಹಂಚಿಕೊಳ್ಳುತ್ತಾರೆ ಎಂಬುದನ್ನು ದಲಿತರ ನೆಲೆಯಿಂದಲೇ ಪರಿಭಾವಿಸಿದಾಗ ಅರ್ಥದ ನೆಲೆಗಳು ಯಾವುವು? ಯಾರ ಅರ್ಥಗಳು ಯಾವ ಯಾವ ಶ್ರೇಣಿಯಲ್ಲಿವೆ? ಎಂಬುದು ತಿಳಿಯುತ್ತದೆ.

ಒಂದು ಭಾಷೆಯಲ್ಲಿ ನಂಬಿಕೆ, ಆಚರಣೆ, ಬದ್ಧತೆ, ನಡತೆ, ವರ್ತನೆ, ಸ್ವಭಾವ, ಕ್ರಿಯೆ ಹಾಗೂ ಅಭಿವ್ಯಕ್ತಿ ಈ ಎಲ್ಲ ಅಂಶಗಳಿಂದಲೂ ಸಮುದಾಯದ ಸಂಸ್ಕೃತಿ ಮತ್ತು ಸಾಮಾಜಿಕ ನೆಲೆಗಳು ಅಭಿವ್ಯಕ್ತಿಗೊಳ್ಳುತ್ತಿರುತ್ತವೆ. ಶ್ರೇಣೀಕೃತ, ವರ್ಗೀಕೃತ, ಲಿಂಗಾಧಾರಿತ ಸಮಾಜಗಳಲ್ಲಿ ಹೇಗೆ ಅವರವರ ಚಹರೆಗಳು ಆ ಒಂದೇ ಭಾಷಿಕ ವ್ಯವಸ್ಥೆಯಲ್ಲಿ ಹೇಗೆ ಪ್ರತ್ಯೇಕಿಸಿಕೊಂಡಿರುತ್ತದೆ ಎಂಬುದನ್ನು ನೋಡಬಹುದಾಗಿದೆ.

ಕನ್ನಡ ಅಭಿವ್ಯಕ್ತಿಯಲ್ಲಿ ಅಂದರೆ ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳನ್ನು ಆಕರವಾಗಿಟ್ಟುಕೊಂಡು ದಲಿತ ಪಾತ್ರಗಳ ಸಂಬೋಧನೆ, ವ್ಯಕ್ತಿನಾಮ, ಬೈಗುಳ, ಗಾದೆ ಮತ್ತು ಅಶಾಬ್ದಿಕ ಸಂವಹನಗಳ ಮೂಲಕ ಭಾಷೆಯಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ನೋಡಲಾಗುತ್ತದೆ. ಇಲ್ಲಿ ಮುಖ್ಯವಾಗಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳನ್ನು ಕೇಂದ್ರೀಕರಿಸಿ ಚರ್ಚಿಸಲಾಗಿದೆ.

ದಲಿತರು ಅಥವಾ ದಲಿತ ಪಾತ್ರಗಳು ಒಂದು ಬಗೆಯಲ್ಲಿ ಇಡಿಯಾದ ನೋಟ ಸಮಷ್ಟಿ ದನಿ. ಈ ಸಮಷ್ಟಿಯನ್ನು ಬಿಡಿಸಿ ವಿವರಿಸಿದಾಗ ಅನೇಕ ಸಾಮ್ಯ ವಿವರಗಳು ಭಾಷಿಕವಾಗಿ ಕಾಣುತ್ತವೆ. ಹಾಗೆಯೇ ವೈವಿಧ್ಯ, ವಿಭಿನ್ನಧಾರೆಗಳು ಗಮನಕ್ಕೆ ಬರುತ್ತವೆ. ಅವರ ಬದುಕಿನ ಕ್ರಮಗಳಿಂದಲೂ ಭಾಷಿಕ ಸಂಬಂಧಗಳನ್ನು ತಿಳಿಯಲು ಅವಕಾಶವಿದೆ. ಭಾಷೆಯನ್ನು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಕೇವಲ ಅಭಿವ್ಯಕ್ತಿ ಮತ್ತು ಸಂವಹನ ಮಾಧ್ಯಮವಾಗಿ ಮಾತ್ರ ಕಾರ್ಯನಿರ್ವಹಿಸುವುದಿಲ್ಲ. ಭಾಷಾ ಭಿನ್ನತೆ ಪ್ರಾದೇಶಿಕವಾಗಿ, ಲಿಂಗಾಧಾರಿತವಾಗಿ, ವರ್ಗಾಧಾರಿತವಾಗಿ, ಜಾತಿಯಾಧಾರಿತವಾಗಿ ಬದಲಾಗುತ್ತದೆ. ಭಾಷೆಯ ಬಳಕೆಯಲ್ಲಿ ಈ ವ್ಯತ್ಯಾಸಗಳು ಕಂಡು ಬಂದರೂ ಭಾಷೆಗೆ ಈ ಭೇದಗಳು ಇರುವುದಿಲ್ಲ. ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಸೂಕ್ಷ್ಮವಾಗಿ ಗುರುತಿಸುವುದಕ್ಕಾಗಿ ನಾವು ಭಾಷೆಯಲ್ಲಿ ಈ ರೀತಿಯ ವರ್ಗೀಕರಣ ಮಾಡಿಕೊಳ್ಳುತ್ತೇವೆ.

ಸಾಮಾಜಿಕ ಪರಿಸರದಲ್ಲಿ ಬಳಕೆಯಾಗುತ್ತಿರುವ ಭಾಷೆಯಲ್ಲಿ ಜಾತಿಯಾಧಾರಿತ ಮತ್ತು ವರ್ಗಾಧಾರಿತ, ಲಿಂಗಾಧಾರಿತ ಆಯಾಮಗಳನ್ನು ಗುರುತಿಸಬಹುದು. ವ್ಯಕ್ತಿಗಳ ಹೆಸರುಗಳು ಸಹ ಜಾತಿಸೂಚಕ ಚಹರೆಗಳನ್ನು ಸೂಚಿಸುತ್ತಿರುತ್ತವೆ. ಸಂಬೋಧನೆ ಮತ್ತು ಉಲ್ಲೇಖ ಮಾಡುವಾಗಲೂ ಸಹ ಜಾತಿ ಮತ್ತು ವರ್ಗ ಸೂಚಕ ಆಯಾಮಗಳು ಕಂಡುಬರುತ್ತವೆ. 'ದನ ತಿನ್ನುವವನಿಗೆ ಗೊಬ್ಬರದ ಆಣೆ, ಹೊಲೆಯ ಸೂಳೆಮಗ ಎಂಬ ಗಾದೆ ಮತ್ತು ಬೈಗುಳಗಳು ಸಹ ಜಾತಿವಾಚಕವಾಗಿ ಹೇಗೆ ಕೆಲಸಮಾಡುತ್ತವೆ? ಬಳಕೆ ಮಾಡುವವರ ಮನೋಧೋರಣೆ ಏನಾಗಿದೆ? ಎಂಬುದು ಗಮನಿಸಬೇಕಾದ ಸಂಗತಿ. ಒಡೆಯರ ಅಥವಾ ಧಣಿಗಳ ಮುಂದೆ ಕೆಳಜಾತಿಯವರು ಸೊಂಟ ಬಗ್ಗಿಸಿ, ಹೆಗಲ ಮೇಲಿನ ಟವೆಲ್ ತೆಗೆದು ಕೈಮುಗಿಯುವ ಆಂಗಿಕ ಹಾಗೂ ಸನಾದಿ, ತಮಟೆ, ಹಲಗೆ, ಚಪ್ಪಲಿಯಂತಹ ಸಂಕೇತಗಳು, ಜಾತಿ ಸೂಚಕ ಚಹರೆಗಳಾಗಿ ಕಾಣಿಸಿಕೊಳ್ಳುವ ಸಂದರ್ಭಗಳನ್ನು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದೊರಕಿರುವ ಮಾಹಿತಿಯ ಆಧಾರದ ಮೇಲೆ ವ್ಯಕ್ತಿನಾಮ, ಸಂಬೋಧನೆ, ಬೈಗುಳ, ಗಾದೆ ಮತ್ತು ಆಂಗಿಕ ಮತ್ತು ಸಂಕೇತಗಳಲ್ಲಿ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ದಲಿತ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಭಾಷೆಯ ಅಭಿವ್ಯಕ್ತಿ ಒಂದು ಕ್ರಮವಾಗಿದ್ದರೆ ಪಾತ್ರಗಳ ಚಿತ್ರಣ ಸಂದರ್ಭದಲ್ಲಿ ನಿರೂಪಕರ ಅಭಿವ್ಯಕ್ತಿಯ ಸ್ವರೂಪ ಒಂದು ಆಯಾಮದಲ್ಲಿರುತ್ತದೆ. ಹಾಗೆಯೇ ಪಾತ್ರಗಳ ಮಾನಸಿಕ ಒಳತೋಟಿಯನ್ನು ಮತ್ತು ಅಭಿವ್ಯಕ್ತಿಯನ್ನು ಗುರುತಿಸಿ ಹೇಳಬಹುದಾಗಿದೆ. ಎಷ್ಟೋಬಾರಿ ದಲಿತ ಪಾತ್ರಗಳು ತಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಅಭಿವ್ಯಕ್ತಪಡಿಸಲಾಗದೆ ಇರುವಂತಹ ಸಂದರ್ಭಗಳು ಇರುತ್ತವೆ. ತಮ್ಮ ನೋವು, ಅವಮಾನ, ದುಃಖ, ಶೋಷಣೆಗಳನ್ನು, ಅಸಹಾಯಕತೆಯನ್ನು ಪ್ರತಿಭಟಿಸಲಾಗದೆ ಇರುವಂತಹ ಸಂದರ್ಭಗಳು ಹೆಚ್ಚಾಗಿ ಕಂಡುಬರುತ್ತವೆ.

ಕುಡಿತಕ್ಕೆ ಸಂಬಂಧಿಸಿರುವುದನ್ನು ಹೇಳುವುದಾದರೆ ಕೆಳಜಾತಿಯ ವ್ಯಕ್ತಿಗಳು ಹೆಚ್ಚಾಗಿ ಹೆಂಡಕ್ಕೆ ದಾಸರಾಗಿರುತ್ತಾರೆ ಎಂದು ಮೇಲ್ಜಾತಿ ವ್ಯಕ್ತಿಗಳು ಹೇಳುವುದು ಕಂಡುಬರುತ್ತದೆ. ಕೆಳಜಾತಿ ವ್ಯಕ್ತಿಗಳು ದಿನನಿತ್ಯ ಕುಡಿಯುವುದನ್ನು ವ್ಯಂಗ್ಯವಾಗಿ, ಅಸಹ್ಯವಾಗಿ ಕಾಣುತ್ತಾರೆ. ಆದರೆ 'ಭಾರತೀಪುರ' ಕಾದಂಬರಿಯಲ್ಲಿ ಮೇಲ್ಜಾತಿಯ 'ಜಗನ್ನಾಥ' ಮತ್ತು 'ಪುರಾಣಿಕ' ಎಂಬ ಪಾತ್ರಗಳು ಕುಡಿಯುವುದು ಪ್ರತಿಷ್ಠೆಯನ್ನು ಸೂಚಿಸುತ್ತದೆ. ಚೋಮನದುಡಿಯಲ್ಲಿ 'ಚೋಮ' ವೈಶಾಖದಲ್ಲಿ ಲಕ್ಕನ ತಂದೆ 'ನಿಂಗಯ್ಯ,' ಭಾರತೀಪುರ ಕಾದಂಬರಿಯಲ್ಲಿ 'ಪಿಳ್ಳ'ಎಂಬ ಕೆಳಜಾತಿ ಪಾತ್ರಗಳು ಕುಡಿಯುವುದು ಅನಾಗರಿಕತೆ ಎಂಬಂತೆ ಬಿಂಬಿತವಾಗಿದೆ. ಅವರು ಹೆಂಡಕ್ಕೆ ದಾಸರು ಎಂಬುದನ್ನು ಆರೋಪಿಸುವುದನ್ನು ಕಾಣಬಹುದು. ಈ ರೀತಿಯ ಆರೋಪಿತ ನೆಲೆಗಳನ್ನು ಈ ರೀತಿ ಅಭಿವ್ಯಕ್ತಗೊಂಡಿರುವುದಕ್ಕೆ ಕಾರಣಗಳೇನು ಎಂಬುದನ್ನು ನೋಡಲಾಗುತ್ತದೆ.

ಸಂಬೋಧನೆ, ಉಲ್ಲೇಖ, ವ್ಯಕ್ತಿನಾಮ, ಬೈಗುಳ, ಗಾದೆ ಮತ್ತು ಆಂಗಿಕ ಸಂಕೇತಗಳ ಮೂಲಕ ಕನ್ನಡದ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದಲಿತ ಪಾತ್ರಗಳು ಮತ್ತು ದಲಿತೇತರ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ಕುರಿತು ಚರ್ಚಿಸಲಾಗುತ್ತದೆ.

೧.೧ ಅಧ್ಯಯನದ ಉದ್ದೇಶಗಳು

* ದಲಿತ ಸಾಹಿತ್ಯವನ್ನು ಗಮನಿಸಿದಾಗ ಹಲವು ಲೇಖಕರ ವಸ್ತು ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಪ್ರಮುಖವಾಗಿ ಜೀತಪದ್ಧತಿ, ಭೂಮಿಯ ಪ್ರಶ್ನೆ, ಶೋಷಣೆ, ಅಸ್ಪೃಶ್ಯತೆ, ಬಡತನ ಇನ್ನೂ ಮುಂತಾದ ವಸ್ತುಗಳನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದಾರೆ. ಈ ದೃಷ್ಟಿಯಿಂದ ಅನೇಕ ಅಧ್ಯಯನಗಳು ನಡೆದಿವೆ. ಆದರೆ ಸಾಮಾಜಿಕ ಸ್ತರವಿನ್ಯಾಸ ಮತ್ತು ಭಾಷೆಯ ದೃಷ್ಟಿಯಿಂದ ಅಧ್ಯಯನಗಳು ನಡೆದಿರುವುದು ವಿರಳ. ಆದ್ದರಿಂದ ಭಾಷೆಯ ಮೂಲಕ ಸಾಮಾಜಿಕ ಚಹರೆಗಳು ಕನ್ನಡ ಅಭಿವ್ಯಕ್ತಿಯಲ್ಲಿ ಹೇಗೆ ಮೂಡಿಬಂದಿವೆ ಎಂಬುದನ್ನು ಅಧ್ಯಯನ ಮಾಡುವುದು.

* ದಲಿತ ಮತ್ತು ದಲಿತೇತರ ಪಾತ್ರಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಶ್ರೇಣೀಕರಣ ಭಾಷೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ನಿರೂಪಿಸಲಾಗುವುದು.

* ಸಾಮಾಜಿಕ ಸ್ತರದಲ್ಲಿ ಉಂಟಾಗುವ ಚಲನಶೀಲತೆ ಭಾಷಿಕ ಸ್ತರದಲ್ಲಿಯೂ ಚಲನೆ ಮತ್ತು ಪಲ್ಲಟಗಳು ಕಂಡುಬರುತ್ತವೆಯೇ ಎಂಬುದನ್ನು ಗಮನಿಸಿ ಸಾಮಾಜಿಕ ನೆಲೆಯ ದೃಷ್ಟಿಕೋನದಿಂದ ನಿಂತು ಭಾಷಿಕ ರಚನೆಗಳನ್ನು ಅಧ್ಯಯನ ಮಾಡುವುದು.

* ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ದಲಿತೇತರ ಪಾತ್ರಗಳು ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಭಾಷಾ ಘಟಕಗಳಾದ ವ್ಯಕ್ತಿನಾಮ ಸಂಬೋಧನೆ, ಉಲ್ಲೇಖ, ಸಂಕಥನಗಳು ಮತ್ತು ಅಶಾಬ್ದಿಕ ಸಂವಹನಗಳ ಮೂಲಕ ನಿರೂಪಿಸಲಾಗುತ್ತದೆ.

* ದಲಿತ ಪಾತ್ರಗಳಿಗೆ ಆರೋಪಿಸಿರುವ ಭಾಷಿಕ ಸ್ವರೂಪವನ್ನು ಗುರುತಿಸಿ ವಿಶ್ಲೇಷಿಸಲಾಗುವುದು.

* ಶೋಷಣೆಗೆ ಒಳಗಾಗಿರುವುದು ಮತ್ತು ಶೋಷಣೆಯ ಪ್ರತಿಫಲನ ಭಾಷೆಯೊಳಗೆ ಕಾಣಿಸಿಕೊಳ್ಳುತ್ತದೆ. ಜಾತಿ, ವರ್ಗ, ಲಿಂಗ ತಾರತಮ್ಯವನ್ನು ಭಾಷಿಕ ಅಭಿವ್ಯಕ್ತಿಯಲ್ಲಿ ಶೋಧಿಸಲಾಗುವುದು.

* ಸಮಾಜೋ-ಸಾಂಸ್ಕೃತಿಕ ರಾಜಕಾರಣವನ್ನು ಭಾಷಿಕ ದೃಷ್ಟಿಯಿಂದ ನೋಡಿ ವಿಶ್ಲೇಷಿಸಲಾಗುವುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಆಯ್ದ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ಯಾವುದೇ ಕಾಲಘಟ್ಟ, ಸಾಹಿತ್ಯ ಪಂಥಗಳನ್ನು ನಿರ್ದಿಷ್ಟಗೊಳಿಸಿರುವುದಿಲ್ಲ.

ಅಧ್ಯಯನದ ವಿಧಾನ

ಈ ಅಧ್ಯಯನದಲ್ಲಿ ಸಮಾಜೋ-ಭಾಷಿಕ ಅಂಶಗಳಿಗೆ ಒತ್ತು ನೀಡಲಾಗಿದೆ. ಪ್ರಸ್ತುತ ಈ ಅಧ್ಯಯನಕ್ಕೆ ಆಯ್ದ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳ ಭಾಷೆ ಪ್ರಮುಖ ಆಕರವಾಗಿದೆ. ಸಾಹಿತ್ಯಿಕ ಆಕರಗಳ ಆಧಾರದ ಮೇಲೆ ಸಾಮಾಜಿಕ ಹಿನ್ನೆಲೆಯಲ್ಲಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನದಲ್ಲಿ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಸಮಾಜೋ ಭಾಷಿಕ ಅಧ್ಯಯನ ವಿಧಾನದ ಮುಖಾಂತರ ಅಧ್ಯಯನದ ಉದ್ದೇಶ, ವ್ಯಾಪ್ತಿಗಳ ಹಿನ್ನೆಲೆಯಲ್ಲಿ ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆಯ ಸ್ವರೂಪವನ್ನು ವಿಶ್ಲೇಷಿಸಲು ಈ ಶೀರ್ಷಿಕೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಮೊದಲನೆ ಅಧ್ಯಾಯದ ಪ್ರಸ್ತಾವನೆಯಲ್ಲಿ ಭಾಷೆ, ಸಮಾಜ, ಸಂಸ್ಕೃತಿ ಕುರಿತು ಚರ್ಚಿಸಲಾಗಿದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅಧ್ಯಯನದ ಸ್ವರೂಪ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಯೋಜಿಸಿಕೊಂಡ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳಲಾಗಿದೆ.

ಅಧ್ಯಾಯ ಎರಡು : ಪರಿಕಲ್ಪನಾತ್ಮಕ ಚರ್ಚೆ

ಪ್ರಸ್ತುತ ಅಧ್ಯಾಯದಲ್ಲಿ ಶೀರ್ಷಿಕೆಯಲ್ಲಿರುವ ಪರಿಕಲ್ಪನೆಗಳನ್ನು ಕುರಿತು ಚರ್ಚಿಸಲಾಗಿದೆ. ಅಭಿವ್ಯಕ್ತಿ ಎಂದರೇನು? ದಲಿತ ಪಾತ್ರಗಳು ಯಾವುವು? ದಲಿತ ಪದ ಕುರಿತ ವ್ಯಾಖ್ಯಾನ ಮತ್ತು ಭಾಷೆ ಹಾಗೂ ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರ್ವ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಾಯ ಮೂರು : ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸ: ಸಂಬೋಧನೆ ಉಲ್ಲೇಖ

ಪ್ರಸ್ತುತ ಅಧ್ಯಾಯದಲ್ಲಿ ಭಾಷಾ ಘಟಕಗಳಾದ ಸಂಶೋಧನೆ ಮತ್ತು ಉಲ್ಲೇಖಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿರುವ ಬಗೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಕೊಳ್ಳಲಾಗಿದೆ. ಸಂಬೋಧನೆ ಮತ್ತು ಉಲ್ಲೇಖಗಳ ಬಳಕೆಯ ನೆಲೆಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ನಾಲ್ಕು : ಅಭಿವ್ಯಕ್ತಿ: ಪಾತ್ರಗಳ ವ್ಯಕ್ತಿನಾಮಗಳು

ಪ್ರಸ್ತುತ ಅಧ್ಯಾಯದಲ್ಲಿ ವ್ಯಕ್ತಿನಾಮಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಹೇಗೆ ಕಂಡುಬಂದಿವೆ ಎಂಬುದನ್ನು ಚರ್ಚಿಸಲಾಗಿದೆ. ಹಾಗೆಯೇ ವ್ಯಕ್ತಿನಾಮಗಳ ಬಳಕೆ ನೆಲೆಗಳು ಮತ್ತು ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟ ಕಂಡುಬರುವುದಕ್ಕೆ ಕಾರಣಗಳೇನು? ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು : ಸಂಕಥನಗಳು : ಅಭಿವ್ಯಕ್ತಿಯ ಕ್ರಮ

ಈ ಅಧ್ಯಾಯದಲ್ಲಿ ಭಾಷಿಕ ಸಂಕಥನಗಳಾದ ಬೈಗುಳ ಮತ್ತು ಗಾದೆಗಳು ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಅಭಿವ್ಯಕ್ತಿ ಕ್ರಮದಲ್ಲಿ ಸಾಮಾಜಿಕ ಚಹರೆಗಳಾಗಿ ಹೇಗೆ ಕೆಲಸ ಮಾಡಿವೆ ಎಂಬುದನ್ನು ಕುರಿತು ವಿವರಿಸಲಾಗಿದೆ. ಬೈಗುಳ ಮತ್ತು ಗಾದೆಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಆರು : ಅಶಾಬ್ದಿಕ ಸಂವಹನ : ಸಾಮಾಜಿಕ ಚಹರೆಗಳು

ಪ್ರಸ್ತುತ ಈ ಅಧ್ಯಾಯದಲ್ಲಿ ಅಶಾಬ್ದಿಕ ಸಂವಹನ ಘಟಕಗಳಾದ ಆಂಗಿಕ ಮತ್ತು ಸಂಕೇತ ಭಾಷೆಯಲ್ಲಿ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿರುವ ವಿಧಾನದ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಏಳು : ಸಮಾರೋಪ

ಈ ಅಧ್ಯಾಯದಲ್ಲಿ ಒಟ್ಟಾರೆ ಅಧ್ಯಯನದ ಮೂಲಕ ಕಂಡುಕೊಂಡ ಫಲಿತಗಳು ಹಾಗೂ ಅಧ್ಯಯನಕ್ಕೆ ಬಳಸಿಕೊಂಡ ಪರಾಮರ್ಶನ ಗ್ರಂಥಗಳ ಸೂಚಿಯನ್ನು ನೀಡಲಾಗಿದೆ.

* * *

ಅಧ್ಯಾಯ: ಎರಡು

ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ: ಎರಡು

ಪರಿಕಲ್ಪನಾತ್ಮಕ ಚರ್ಚೆ

೨.೧. ಪರಿಕಲ್ಪನಾತ್ಮಕ ಚರ್ಚೆ

ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳ ಮೂಲಕ ದಲಿತ ಮತ್ತು ದಲಿತೇತರ ಪಾತ್ರಗಳು ಅಭಿವ್ಯಕ್ತಿಗೊಂಡಿರುವ ಬಗೆಯನ್ನು ಭಾಷೆಯ ಮೂಲಕ ಚರ್ಚಿಸಲಾಗಿದೆ. ಭಾಷೆಯ ಘಟಕಗಳಾದ ಸಂಬೋಧನೆ, ವ್ಯಕ್ತಿನಾಮ ಹಾಗೂ ಭಾಷಿಕ ಸಂಕಥನಗಳಾದ ಬೈಗುಳ, ಗಾದೆ ಮತ್ತು ಅಶಾಬ್ದಿಕ ಸಂವಹನಗಳಾದ ಆಂಗಿಕ ಅಭಿವ್ಯಕ್ತಿ ಉಡುಪು ಮುಂತಾದವುಗಳ ಮೂಲಕ ದಲಿತ ಪಾತ್ರಗಳ ಸಾಮಾಜಿಕ ಸ್ತರ ವಿನ್ಯಾಸವನ್ನು ಗುರುತಿಸಲಾಗುತ್ತದೆ.

ಈ ಅಧ್ಯಾಯದಲ್ಲಿ ಅಭಿವ್ಯಕ್ತಿ, ದಲಿತ ಪಾತ್ರಗಳು ಮತ್ತು ಭಾಷೆ ಎಂಬ ಮೂರು ಪರಿಕಲ್ಪನೆಗಳ ಕುರಿತು ಚರ್ಚಿಸಲಾಗುತ್ತದೆ. ಅಭಿವ್ಯಕ್ತಿ ಎಂದರೇನು? ದಲಿತ ಪಾತ್ರಗಳು ಎಂದರೆ ಯಾವುವು? ಮತ್ತು ಈ ಅಧ್ಯಯನಕ್ಕೆ ಬಳಸಿಕೊಂಡ ಭಾಷೆಯ ನೆಲೆ ಯಾವುದು? ಎಂಬುದನ್ನು ಕುರಿತು ಚರ್ಚಿಸಲಾಗುತ್ತದೆ. ಅಭಿವ್ಯಕ್ತಿ ಎಂದರೆ ವ್ಯಕ್ತಿಯು ತನ್ನ ಅನುಭವ, ಭಾವನೆ, ಆಲೋಚನೆ, ಚಿಂತನೆಗಳಿಗೆ ಸಾಮಾಜಿಕವಾಗಿ ಅಂಗೀಕೃತವಾದ ಯಾವುದೇ ಒಂದು ಮಾಧ್ಯಮದಲ್ಲಿ, ತಕ್ಕ ಮಟ್ಟಿಗೆ ಖಚಿತವಾದ, ಮೂರ್ತವಾದ ರೂಪವನ್ನು ಕೊಡುವ ಪ್ರಕ್ರಿಯೆಗೆ ಅಭಿವ್ಯಕ್ತಿ ಎಂದು ಹೇಳಬಹುದು. ಕನ್ನಡದಲ್ಲಿ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದಲಿತ ಪಾತ್ರಗಳು ಅಭಿವ್ಯಕ್ತಿಗೊಂಡಿರುವ ಕ್ರಮವನ್ನು ಈ ಅಧ್ಯಯನದಲ್ಲಿ ನೋಡಲಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಅಭಿವ್ಯಕ್ತಿ ಎಂಬುವುದಕ್ಕೆ ಈ ಅರ್ಥಗಳನ್ನು ನೀಡಿದ್ದಾರೆ. ೧. ಪ್ರಕಟವಾಗುವುದು. ೨. ಪ್ರಕಟಪಡಿಸುವಿಕೆ. ೩. ಉಕ್ತಿ; ಹೇಳಿಕೆ. (ಸಂಕ್ಷಿಪ್ತ ಕನ್ನಡ ನಿಘಂಟು, ಪುಟ-೫೭) ಎಂಬ ಅರ್ಥಗಳನ್ನು ನೀಡಲಾಗಿದೆ.

ಜಿ. ವೆಂಕಟಸುಬ್ಬಯ್ಯ ಅವರ ಇಗೋ ಕನ್ನಡ ಸಾಮಾಜಿಕ ನಿಘಂಟು, ಸಂಪುಟ-೧ರಲ್ಲಿ ಅಭಿವ್ಯಕ್ತಿಯ ನಿಷ್ಪತ್ತಿಯನ್ನು ಈ ರೀತಿಯಾಗಿ ಹೇಳಿದ್ದಾರೆ.

"ಅಭಿವ್ಯಕ್ತಿ-ಈ ಶಬ್ದದಲ್ಲಿ ಎರಡು ಭಾಗಗಳಿವೆ. ಅಭಿ+ವ್ಯಕ್ತಿ. ಸಂಸ್ಕೃತದಲ್ಲಿ ಅಭಿ ಒಂದು ಉಪಸರ್ಗ. ವ್ಯಕ್ತಿ ಎಂದರೆ ವಿವೇಚನೆಯಿಂದ ತೋರುವ ಭೇದ ಅಥವಾ ವಿಮರ್ಶೆಯಿಂದ ಕಾಣಬರುವ ವ್ಯತ್ಯಾಸ. ಅಭಿವ್ಯಕ್ತಿ ಎಂದರೆ ಸ್ಫುಟವಾಗಿ ಕಾಣಬರುವಿಕೆ, ಚೆನ್ನಾಗಿ, ಸ್ಪಷ್ಟವಾಗಿರುವಿಕೆ, ಸಕಲವೂ ಸಂಪೂರ್ಣವಾಗಿರುವಿಕೆ. ಮಾತಿನಲ್ಲಿ ಬರಹದಲ್ಲಿ, ಚರ್ಚೆಯಲ್ಲಿ, ವಾಗ್ವಾದದಲ್ಲಿ, ಕಾವ್ಯದಲ್ಲಿ, ನಾಟಕದಲ್ಲಿ ಉಪಯೋಗಿಸುವ ಭಾಷೆಯನ್ನು ಕುರಿತು ಈ ಮಾತನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಕವಿಗಳು ತಾವು ಹೇಳಬೇಕೆಂದಿರುವ ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಬೇಕಾದ ವರ್ಣನೆಗಳನ್ನೂ, ಛಂದಸ್ಸನ್ನೂ, ಶೈಲಿಯನ್ನೂ ಉಪಯೋಗಿಸುತ್ತಾರೆ. ಕಾವ್ಯ ಮೀಮಾಂಸೆಯಲ್ಲಿ ಈ ವಿಚಾರವನ್ನು ಕುರಿತು ವಿವರವಾದ ನಿರೂಪಣೆಗಳಿವೆ. ಶಬ್ದಮಣಿದರ್ಪಣದ ಈ ವಾಕ್ಯವನ್ನು ನೋಡಿ-'ಶಬ್ದಸ್ಪರ್ಶ ರೂಪ ರಸಗಂಧಗಳೊಳ್ಪಂ ಶೋತೇಂದ್ರಿಯವೊಂದರಲ್ಲಿಯ ಶಬ್ದಮುಖದಿನಭಿವ್ಯಕ್ತಿಯಂ ಮೊಳ್ಪಿ ವಿಮಲಸ್ವರೂಪೆಗೆ..... ನಮಸ್ಕರಿಸುವಾತನಪ್ಪಂ' (ವೆಂಕಟಸುಬ್ಬಯ್ಯ ಜಿ., ಇಗೋ ಕನ್ನಡ ಸಾಮಾಜಿಕ ನಿಘಂಟು, ಸಂಪುಟ-೧, ಪುಟ- ೬೬) ಎಂದು ಅಭಿವ್ಯಕ್ತಿಯ ಕುರಿತು ಹೇಳಿದ್ದಾರೆ. ದಲಿತ ಪಾತ್ರಗಳು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಅಭಿವ್ಯಕ್ತಿಗೊಂಡಿರುವ ಕ್ರಮವನ್ನು ಗಮನಿಸಲಾಗುತ್ತದೆ.

ಓ. ಎಲ್ ನಾಗಭೂಷಣ ಸ್ವಾಮಿ ಅವರು ವಿಮರ್ಶೆಯ ಪರಿಭಾಷೆ ಪುಸ್ತಕದಲ್ಲಿ ಅಭಿವ್ಯಕ್ತಿ ಕುರಿತು ಹೇಳಿರುವುದನ್ನು ಉದಾಹರಣೆಯಾಗಿ ನೋಡಬಹುದು. "ಅಭಿವ್ಯಕ್ತಿ: ವ್ಯಕ್ತಿಯು ತನ್ನ ಅನುಭವ, ಅಮೂರ್ತವಾದ ಭಾವನೆ, ಆಲೋಚನೆ, ಚಿಂತನೆಗಳಿಗೆ ಸಾಮಾಜಿಕವಾಗಿ ಅಂಗೀಕೃತವಾದ ಯಾವುದೇ ಒಂದು ಮಾಧ್ಯಮದಲ್ಲಿ, ತಕ್ಕಮಟ್ಟಿಗೆ ಖಚಿತವಾದ ಮೂರ್ತವಾದ ರೂಪವನ್ನು ಕೊಡುವ ಕ್ರಿಯೆ. ತನ್ನ ಅನುಭವ ಇತ್ಯಾದಿಗಳನ್ನು ಸಮಾಜದ ಇತರರೊಂದಿಗೆ ಹಂಚಿಕೊಳ್ಳುವುದು ಮತ್ತು ತನ್ನ ಆಲೋಚನೆ ಚಿಂತನೆಗಳತ್ತ ಅವರನ್ನು ಒಲಿಸಿಕೊಳ್ಳುವುದು ಅಭಿವ್ಯಕ್ತಿಯ ಹಿಂದಿರುವ ಉದ್ದೇಶಗಳು. ಭಾಷೆ (ಮಾತು, ಸಂಭಾಷಣೆ, ಭಾಷಣ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದಂತೆ) ಶಿಲೆ, ಲೋಹ ಇತ್ಯಾದಿ(ಶಿಲ್ಪ ಮತ್ತು ವಾಸ್ತುಗಳಿಗೆ ಸಂಬಂಧಿಸಿದಂತೆ) ಧ್ವನಿ ವಿನ್ಯಾಸ ಮತ್ತು ವಾದ್ಯಗಳು (ಸಂಗೀತಕ್ಕೆ ಸಂಬಂಧಿಸಿದಂತೆ) ದೇಹ ವಿನ್ಯಾಸ, ಅಂಗ ಭಂಗಿಗಳು (ನಾಟ್ಯ ಮತ್ತು ನಾಟಕಗಳಿಗೆ ಸಂಬಂಧಿಸಿದಂತೆ) ಅಭಿವ್ಯಕ್ತಿಯ ವಿವಿಧ ರೂಪಗಳು. ಕನಸು ಕೂಡ ಒಂದು ಅಭಿವ್ಯಕ್ತಿಯೇ ಆದರೂ ಅದು ವೈಯಕ್ತಿಕ ಮಟ್ಟದಲ್ಲಷ್ಟೇ ನಿಲ್ಲುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ಅಭಿವ್ಯಕ್ತಿ ಎಂಬ ಪದ ಅನುಭವಗಳನ್ನು ಓದುಗರಿಗೆ ತಲುಪಿಸಬಲ್ಲ ಮತ್ತು ಅದಕ್ಕೆ ಸಹಾಯಕವಾಗುವ ಲೇಖಕರ ಭಾಷೆ, ಸಾಮರ್ಥ್ಯ,

ಶೈಲಿ, ಕೃತಿಯ ಪ್ರಕಾರ ಇವೆಲ್ಲವನ್ನೂ ಒಳಗೊಳ್ಳುವಂತೆ ಅಥವಾ ಇವುಗಳಲ್ಲಿ ಯಾವುದಾದರೊಂದು ಅಂಶಕ್ಕೆ ಅನ್ವಯವಾಗುವಂತೆ ಬಳಕೆಯಾಗುತ್ತದೆ.

"ಅನುಭವವು ತೀವ್ರವಾದಂತೆಲ್ಲ ಅಂತರಂಗ ಜಗತ್ತು ಹೆಚ್ಚು ಶ್ರೀಮಂತವೂ ನಿಗೂಢ ತರವೂ ಆಗುವುದರಿಂದ ಅಭಿವ್ಯಕ್ತಿಯ ಸಾಧನಗಳಾದ ಬಾಹ್ಯ ಜಗತ್ತಿನ ರೂಪ ಸಾಮಗ್ರಿಗಳು ವಿಪುಲವಾಗುತ್ತ ಹೋಗುತ್ತವೆ. ದೇವತೆಗಳಿಂದ ಹಿಡಿದು ದಾನವ, ಮಾನವ, ಪಶು, ಪ್ರಾಣಿಗಳ ತನಕ, ಭೂಮದಿಂದ ಹಿಡಿದು ಕ್ಷುದ್ರದ ತನಕ ಎಲ್ಲವೂ ಅಂತರಂಗದ ಅನುಭವ ಭಕ್ತಿಯ ಸಾಧನವಾಗುತ್ತದೆ. ಎಂಬಂತೆ ಅಭಿವ್ಯಕ್ತಿ ಅರ್ಥವನ್ನು ತುಂಬ ಹಿಗ್ಗಿಸುವುದು ವಿಮರ್ಶೆಯಲ್ಲಿ ಗೊಂದಲಗಳನ್ನಷ್ಟೆ ಹುಟ್ಟಿಸಬಹುದು.

ಶಾಬ್ದಿಕ ಅಭಿವ್ಯಕ್ತಿಯನ್ನು ಕುರಿತು ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಕುತೂಹಲಕರ ಚಿಂತನೆಯನ್ನು ಕಾಣಬಹುದು. ಅಭಿನವಗುಪ್ತನು ಸಹೃದಯನ ಮನಸ್ಸಿನಲ್ಲಿ ಸುಪ್ತವಾಗಿದ್ದದ್ದು ಸ್ಫುಟವಾಗುವುದೇ ಅಭಿವ್ಯಕ್ತಿ ಎಂದು ತನ್ನ ಅಭಿನವಭಾರತಿಯಲ್ಲಿ ಹೇಳುತ್ತಾನೆ. ಅಂತೆಯೇ ಬೇಂದ್ರೆಯವರ ಪರಾಗ ಕವನವೂ ಓದುಗರ ಮತ್ತು ಕವಿತೆಯ ಸಂಬಂಧವನ್ನು ದುಂಬಿ ಹೂಗಳ ಸಂಬಂಧದಂತೆ ಪರಿಭಾವಿಸಿ "ನನ್ನ ಮುಖಸ್ಪರ್ಶವೂ ಸಾಕು ಹೊಸ ಸೃಷ್ಟಿಯೆ ಬರಬಹುದು" ಎನ್ನುತ್ತದೆ. ಅಭಿವ್ಯಕ್ತಿಯ ಜವಾಬ್ದಾರಿ ಕೇವಲ ಕವಿಯದು ಮಾತ್ರವಲ್ಲ ಓದುಗರದ್ದೂ ಹೌದು. ಅಥವಾ ಮುಖ್ಯವಾಗಿ ಅಭಿವ್ಯಕ್ತಿ ಪೂರ್ಣವಾಗುವುದು ಓದುಗರಲ್ಲಿಯೇ ಎಂಬ ನಿಲುವು ವಾಚಕಾಭಿಮುಖ ವಿಮರ್ಶಾ ಪಂಥಗಳಲ್ಲಿ ಕಾಣುತ್ತದೆ.

ಶಾಬ್ದಿಕ ಅಭಿವ್ಯಕ್ತಿ ಕವಿಗೆ ಎಂದೂ ಅಪೂರ್ಣತೆಯ ಭಾವವನ್ನೆ ತರುತ್ತದೆ. "ಹೇಳಿದರೆ ಹಾಳಾಗುವುದೊ ಅನುಭವ ಸವಿಯ ಹೇಳದಿರೆ ತಾಳಲಾರನೊ ಕವಿಯು" ಎಂಬ ಕುವೆಂಪು ಮಾತನ್ನು ಗಮನಿಸಿ. ಅಭಿವ್ಯಕ್ತಿಸಬೇಕಾದ ಸಂಗತಿ/ಸತ್ಯ ಭಾಷೆಯಾಚೆಗೆ ಇದೆ, ಅದನ್ನು ಭಾಷೆಯಲ್ಲಿ ಹೇಳುವುದೆಂದರೆ ಶಬ್ದಕ್ಕೆ ಲಜ್ಜೆಯಾಗುತ್ತದೆ ಎನ್ನುವ ಧೋರಣೆಯನ್ನು ವಚನಗಳಲ್ಲಿ ಕಾಣಬಹುದು. ಅನುಭವವನ್ನು ಸಮಗ್ರವಾಗಿ ಹಿಡಿದಷ್ಟು ಓದುಗರಿಗೆ/ಕೇಳುಗರಿಗೆ ತಲುಪಿಸಲಾಗದಷ್ಟು ಶಬ್ದಸೂತಕ ಎನ್ನುವ ಮಾತೂ ಹುಟ್ಟಿದೆ.

ಶಾಬ್ದಿಕ ಅಭಿವ್ಯಕ್ತಿಯನ್ನು ಒಂದು ಸಾಧಿತರೂಪವೆಂದು ಪರಿಗಣಿಸುವುದಕ್ಕಿಂತ ಚಲನಶೀಲ ಪ್ರಕ್ರಿಯೆ ಎಂದು ನೋಡುವುದು ಉಪಯುಕ್ತ. ವಕ್ತೃವಿಗೆ ಒಂದು ವಿಪಕ್ಷ ಅಥವಾ ಉದ್ದೇಶ ಇರುವಂತೆ ಶ್ರೋತೃ/ಓದುಗರಿಗೂ ವಿವಕ್ಷೆಗಳಿರುತ್ತವೆ. ಇವು ಕಾಲಾನುಕ್ರಮಲ್ಲಿ ಬದಲಾಗುವುದರಿಂದಲೇ ಬೇರೆ ಬೇರೆ ಕಾಲದ ಶಾಬ್ದಿಕ ರಚನೆಗಳು ನಮ್ಮ ಕಾಲದಲ್ಲಿ ಹೊಸ ಅರ್ಥ ಸಾಧ್ಯತೆಗಳೊಂದಿಗೆ ತೆರೆದುಕೊಳ್ಳುತ್ತವೆ. ಅಭಿವ್ಯಕ್ತಿಗೆ ಆಯ್ದುಕೊಳ್ಳುವ ಮಾಧ್ಯಮ, ಪ್ರಕಾರ, ಭಾಷೆಯ ಸ್ವರೂಪ, ಸಮಕಾಲೀನ ಅಧಿಕಾರ ವಿನ್ಯಾಸ, ವೈಯಕ್ತಿಕವಾದ ದೈಹಿಕ/ಮಾನಸಿಕ/ಬೌದ್ಧಿಕ ಲಕ್ಷಣಗಳು

ಇವೆಲ್ಲ ಅಭಿವ್ಯಕ್ತಿಯ ಸ್ವರೂಪವನ್ನು ನಿರ್ಧರಿಸುತ್ತವೆ, ನಿಯಂತ್ರಿಸುತ್ತವೆ. ಛಂದಸ್ಸು, ವಾಕ್ಯರಚನೆ, ಭಾಷೆಯ ಶಬ್ದಸಂಪತ್ತು ಇವು ಅಭಿವ್ಯಕ್ತಿಯನ್ನು ನಿರ್ಧರಿಸುವುದು ಸುಲಭವಾಗಿ ತಿಳಿಯುತ್ತದೆ. ಆದರೆ ಸಮಾಜವೊಂದು ಒಪ್ಪಿಕೊಂಡ ಲೋಕದೃಷ್ಟಿ ವ್ಯಕ್ತಿಗಳ ಗ್ರಹಿಕೆಯನ್ನೂ ಅಭಿವ್ಯಕ್ತಿ ಕ್ರಮವನ್ನು ಸೂಕ್ಷ್ಮವಾಗಿ ನಿಯಂತ್ರಿಸುತ್ತಿರುತ್ತದೆ.

ಯಾವುದೇ ಅಭಿವ್ಯಕ್ತಿ ಅಂಗೀಕೃತ ಗ್ರಹಿಕೆ/ನಂಬಿಕೆಗಳನ್ನು ಸ್ಫೋಟಿಸುವಂತೆ ಕಂಡಾಗ ಅಂಥದ್ದನ್ನು ಅದುಮಿಡುವ ದಮನಿಸುವ ಕ್ರಿಯೆಯೂ ಮೊದಲಾಗುತ್ತದೆ. ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಂದ ಅಭಿವ್ಯಕ್ತಿಯ ದಮನ ನಡೆದಿರುವುದಕ್ಕೆ ಚರಿತ್ರೆಯಲ್ಲೂ, ಸಾಹಿತ್ಯ ಚರಿತ್ರೆಯಲ್ಲೂ ಅಸಂಖ್ಯಾತ ಉದಾಹರಣೆಗಳಿವೆ. 'ಸಾಹಿತ್ಯ'ವೆಂಬ ಅಧ್ಯಯನ ವಸ್ತುವಿನ ಕಲ್ಪನೆ ಈ ಶತಮಾನದ ಆರಂಭದಲ್ಲಿ ಇಂಗ್ಲಿಷ್ ಶಿಕ್ಷಣಕ್ರಮದಿಂದ ಮೂಡಿತಷ್ಟೆ. ಆ ಕಾಲ್ಪನಿಕ ನಿರ್ವಚನಕ್ಕೆ ಹೊಂದಿಕೆಯಾಗದ ಅಸಂಖ್ಯಾತ ಶಾಬ್ದಿಕ ಅಭಿವ್ಯಕ್ತಿಗಳು ಶಿಕ್ಷಿತರ ಪ್ರಜ್ಞೆಯಾಚೆಗೆ ಉಳಿದುಬಿಟ್ಟವು. ಇದು ಮಲೆ ಮಹದೇಶ್ವರ, ಮಂಟೇಸ್ವಾಮಿಯಂಥ ಕಥನಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಈ ಉದಾಹರಣೆಯು ಹೇಗೆ ಒಂದು ಕಾಲದ ಅಂಗೀಕೃತ ಚಿಂತನಾಕ್ರಮ ಕೆಲವು ಅಭಿವ್ಯಕ್ತಿ ರೂಪಗಳನ್ನು ನಿರ್ಲಕ್ಷಿಸುವಂತೆ ಮಾಡುತ್ತದೆ ಎಂಬುದನ್ನು ಸೂಚಿಸುತ್ತದೆ.

ಶಾಬ್ದಿಕ ಮತ್ತು ಕಲಾತ್ಮಕ ಅಭಿವ್ಯಕ್ತಿಗಳಿಗೆ ಈ ಶತಮಾನದ ಕೊನೆಯ ಕಾಲದಲ್ಲಿ ತೀವ್ರವಾದ ಅಪಾಯ ಒದಗಿದೆ. ಸಮೂಹ ಮಾಧ್ಯಮಗಳ ಬೆಳವಣಿಗೆ ಮತ್ತು ವಾಣಿಜ್ಯ ಆಸಕ್ತಿಗಳು ಕೆಲವು ಬಗೆಯ ಅಭಿವ್ಯಕ್ತಿಗಳನ್ನು ಮಾತ್ರ ಬೆಂಬಲಿಸುತ್ತ ಸ್ಥಳೀಯ ದೇಶೀಯ ಅಭಿವ್ಯಕ್ತಿಗಳು ಕಣ್ಮರೆಯಾಗುತ್ತಿವೆ. ಅಥವಾ ವಾಣಿಜ್ಯ ಮತ್ತು ಸಮೂಹ ಮಾಧ್ಯಮಗಳಿಗೆ ಬೇಡವಾದ ಅಭಿವ್ಯಕ್ತಿಗಳು ಓದುಗ/ಪ್ರೇಕ್ಷಕರಿಗೆ ತಲುಪುವುದು ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಬೆಳೆಯುತ್ತದೆ. (ನಾಗಭೂಷಣ ಓ. ಎಲ್., ವಿಮರ್ಶೆಯ ಪರಿಭಾಷೆ, ಪುಟ-೧೬-೧೮) ಎಂದು ಅಭಿವ್ಯಕ್ತಿಯ ಕುರಿತು ಹೇಳಿದ್ದಾರೆ.

ಶಾಬ್ದಿಕ ಸಂವಹನದ ಮೂಲಕವಷ್ಟೇ ಅಲ್ಲದೆ ಅಶಾಬ್ದಿಕ ಸಂವಹನದ ಮೂಲಕವೂ ವ್ಯಕ್ತಿಗಳ ಭಾವನೆಗಳು ಅಭಿವ್ಯಕ್ತಗೊಳ್ಳುತ್ತಿರುತ್ತವೆ. ಶಾಬ್ದಿಕ ಮತ್ತು ಅಶಾಬ್ದಿಕ ಎರಡೂ ನೆಲೆಯಲ್ಲಿಯೂ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿರುವ ಬಗೆಯನ್ನು ಗ್ರಹಿಸಲಾಗುತ್ತದೆ. ಸಂಭಾಷಣೆಯ ಮೂಲಕ ದಲಿತ ಪಾತ್ರಗಳು ಅಭಿವ್ಯಕ್ತಗೊಳ್ಳುವಂತೆ, ನಿರೂಪಕರ ನಿರೂಪಣೆಯಲ್ಲಿಯೂ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿವೆ.

ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳನ್ನು ಆಕರವಾಗಿಟ್ಟುಕೊಂಡು ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ಗಮನಿಸುವುದು ಗಮನಾರ್ಹ ಸಂಗತಿ. ದಲಿತ ಪಾತ್ರಗಳ ಅಭಿವ್ಯಕ್ತಿಯು ವಿನಂತಿಯ ಧಾಟಿಯಲ್ಲಿರುತ್ತದೆ. ಇದು ನೊಂದವರ, ಶೋಷಣೆಗೆ

ಒಳಗಾದವರ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರ ಅಭಿವ್ಯಕ್ತಿಯ ಕ್ರಮವಾಗಿರುತ್ತದೆ. ಆದೇಶದ ನಿಲುವು ಆಳುವವರ, ಯಜಮಾನರ, ಅಧಿಕಾರವುಳ್ಳವರ ಅಭಿವ್ಯಕ್ತಿಯ ಕ್ರಮವಾಗಿರುತ್ತದೆ. ಮೇಲ್ಜಾತಿ ಪಾತ್ರಗಳನ್ನು ಸಂಬೋಧಿಸುವಾಗ, ಕೇಳುವಾಗ ದಲಿತ ಪಾತ್ರಗಳು ವಿನಂತಿಯ ಧಾಟಿಯಲ್ಲಿ ಅಭಿವ್ಯಕ್ತಿಸುತ್ತವೆ. ಕೆಳಜಾತಿ ಪಾತ್ರಗಳಿಗೆ ಆದೇಶಿಸುವ ಧಾಟಿಯಲ್ಲಿ ಮೇಲ್ಜಾತಿ ಪಾತ್ರಗಳು ಅಭಿವ್ಯಕ್ತವಾಗುತ್ತವೆ. ವ್ಯಕ್ತಿನಾಮಗಳು, ಸಂಬೋಧನೆರೂಪಗಳು, ಬೈಗುಳ, ಗಾದೆಗಳು, ಆಂಗಿಕ ಮತ್ತು ಸಂಕೇತಗಳು ಮೇಲ್ಜಾತಿ ಮತ್ತು ದಲಿತ ಪಾತ್ರಗಳ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಚಹರೆಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಆಚರಣೆ, ನಂಬಿಕೆ, ಸಂಪ್ರದಾಯಗಳು ಕೂಡ ಅವರ ಸಾಮಾಜಿಕ ಚಹರೆಗಳನ್ನು ಅಭಿವ್ಯಕ್ತಗೊಳಿಸುತ್ತಿರುತ್ತವೆ. ಶ್ರೇಣಿಕೃತ, ವರ್ಗೀಕೃತ, ಲಿಂಗಾಧಾರಿತ ಸಮಾಜಗಳಲ್ಲಿ ಹೇಗೆ ಅವರವರ ಚಹರೆಗಳನ್ನು ಆ ಒಂದೇ ಭಾಷಿಕ ವ್ಯವಸ್ಥೆಯಲ್ಲಿ ಹೇಗೆ ಪ್ರತ್ಯೇಕಿಸಿಕೊಂಡಿರುತ್ತದೆ ಎಂಬುದು ಗಮನಿಸುವಂತಹ ಸಂಗತಿ. ಭಾಷೆ, ಉಡುಪು, ಆಚರಣೆ, ನಂಬಿಕೆ, ಬದ್ಧತೆ, ನಡತೆ, ವರ್ತನೆ, ಸ್ವಭಾವ, ಕ್ರಿಯೆ, ಸಂಕೇತಗಳು ಶ್ರೇಣಿಕೃತ, ವರ್ಗೀಕೃತ ಮತ್ತು ಲಿಂಗಾಧಾರಿತ ಸಮಾಜದಲ್ಲಿ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಚಹರೆಗಳ ಅಭಿವ್ಯಕ್ತಿಯಾಗಿ ಕೆಲಸ ಮಾಡುತ್ತಿರುತ್ತವೆ.

ಭಾಷೆಯ ಬಳಕೆಯಲ್ಲೂ ಶ್ರೇಣಿಕೃತ ಜಾತಿ ವ್ಯವಸ್ಥೆಯ ಅಸ್ಪೃಶ್ಯತೆಯು ಬಹಳ ಕಾಲದಿಂದಲೂ ಜಾರಿಯಲ್ಲಿದೆ. ಕೆಳಸಮುದಾಯದವರು ಬಳಸುವ ಭಾಷೆಯಿಂದ, ಉಡುಪಿನಿಂದ, ಆಚರಣೆಯಿಂದ ಅವರ ಸಾಮಾಜಿಕ ಚಹರೆಗಳನ್ನು ಗುರುತಿಸಲಾಗುತ್ತದೆ. ಅವರು ಇಂಥದ್ದೇ ಭಾಷೆಯನ್ನು ಬಳಸಬೇಕು ಅಥವಾ ಪದವನ್ನು ಬಳಸಬೇಕು, ಹೀಗೆ ಸಂಬೋಧಿಸಬೇಕು, ಸಾಂಪ್ರದಾಯಿಕ ವ್ಯಕ್ತಿನಾಮಗಳು ಇಟ್ಟುಕೊಳ್ಳಬೇಕು, ಇದೇ ರೀತಿಯಾದ ಉಡುಪನ್ನು ಧರಿಸಬೇಕು, ಪಾರಂಪರಿಕ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬ ಸಾಮಾಜಿಕ ಒತ್ತಡಗಳಿವೆ. ದಲಿತರು ಉತ್ತಮವಾದ ಉಡುಪನ್ನು ಧರಿಸಿದರೆ, ಪ್ರಮಾಣೀಕೃತ ಭಾಷೆಯನ್ನು ಬಳಸಿದರೆ. ಪಾರಂಪರಿಕ ವೃತ್ತಿಯನ್ನು ಮಾಡದಿದ್ದರೆ. ಸಾಮಾಜಿಕ ನಿಂದನೆಗೆ ಒಳಗಾಗಿರುವ ಸಂದರ್ಭಗಳು ಕಂಡುಬರುತ್ತವೆ. ಉದಾಹರಣೆಗೆ ಶಿವರಾಮ ಕಾರಂತರ 'ಗರ್ಭಗುಡಿ' ನಾಟಕದಲ್ಲಿ ಮಾಂಕು ಎಂಬ ದಲಿತ ವ್ಯಕ್ತಿ ಕುಡಿಯಲು ನೀರು ಕೊಡಿ ಎಂದು ಮೇಲ್ಜಾತಿ ವ್ಯಕ್ತಿಯನ್ನು ಕೇಳಿದಾಗ "ಮುಂಡೇ ಗಂಡನಿಗೆ ನೀರು ಬೇಕಂತೆ **'ಬಾಯಾರು'** ಅನ್ನಲಿಕ್ಕೆ ಸಂಕಟ ನೀರು ಇಲ್ಲಿ ಇಲ್ಲ ನಡಿ. ಬೇಕಾದರೆ ನಿನಗಿಷ್ಟು ಬಾಯಾರು ಹಾಕುವ" ಎಂದು ಹೇಳುತ್ತಾನೆ. **'ಬಾಯಾರು'** ಎಂದರೆ ಕೀಳೆನಿಸಲ್ಪಡುವ ಜನರು ನೀರನ್ನು ಕರೆಯುವ ಹೆಸರು. ಅಂದರೆ ಕೆಳಜಾತಿಯವರು ಕುಡಿಯುವ ನೀರನ್ನು ನೀರು ಎಂದು ಹೇಳುವಂತಿಲ್ಲ, ಬಾಯಾರು ಎನ್ನಬೇಕು ಎಂಬ ಸಾಮಾಜಿಕ ಒತ್ತಡವಿದೆ. ಈ ಬಾಯಾರು ಎಂಬ ಪದ ಕೆಳಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಯ ಅಭಿವ್ಯಕ್ತಿಯಾಗಿದೆ.

ಮೇಲ್ಜಾತಿಯವರನ್ನು ಸಂಬೋಧನೆ ಮಾಡುವಾಗ, ತಮಗಿಂತ ಚಿಕ್ಕವರಿರಲಿ, ಸಮವಯಸ್ಸಿನವರಿರಲಿ, ದೊಡ್ಡವರಿರಲಿ ಅವರನ್ನು ಗೌರವ ಸೂಚಕವಾಗಿಯೇ ಕೆಳಜಾತಿಯವರು ಸಂಬೋಧಿಸಬೇಕು. ಯಜಮಾನಿಕೆ ಮತ್ತು ಜಾತಿಯ ಕಾರಣಕ್ಕಾಗಿ ಈ ರೀತಿಯಾಗಿ ಅಭಿವ್ಯಕ್ತಿಸುತ್ತಿರುವುದನ್ನು ಕಾಣಬಹುದು. ದಲಿತರು ಉತ್ತಮ ಉಡುಪನ್ನು ಧರಿಸಿದಾಗಲೂ ವ್ಯಂಗ್ಯ ಮತ್ತು ನಿಂದನೆಗೆ ಒಳಗಾಗಿರುವ ಸಂದರ್ಭಗಳಿವೆ. ಹೀಗೆ ಶ್ರೇಣೀಕೃತ ಜಾತಿ ವ್ಯವಸ್ಥೆಯ ಸಮಾಜದಲ್ಲಿ ದಲಿತ ಪಾತ್ರಗಳು ಅಭಿವ್ಯಕ್ತಿಕೊಂಡಿರುವುದನ್ನು ಕಾಣಬಹುದು. ಅಭಿವ್ಯಕ್ತಿಯ ಪರಿಕಲ್ಪನೆಯನ್ನು ಈ ರೀತಿಯಾಗಿ ಗ್ರಹಿಸಿ ಕನ್ನಡದ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಬಳಕೆಯಾಗಿರುವ ಸಂಬೋಧನೆರೂಪಗಳು, ವ್ಯಕ್ತಿನಾಮಗಳು, ಬೈಗುಳ, ಗಾದೆ, ಆಂಗಿಕ ಮತ್ತು ಸಂಕೇತಗಳಲ್ಲಿ ಅಭಿವ್ಯಕ್ತಗೊಂಡಿರುವ ಸ್ವರೂಪವನ್ನು ಕುರಿತು ಚರ್ಚಿಸಲಾಗುತ್ತದೆ.

ದಲಿತ ಪಾತ್ರಗಳು ಎಂದರೆ ಯಾವುವು? ಎಂಬ ಪ್ರಶ್ನೆ ಬರುತ್ತದೆ. ಯಾವ ಪಾತ್ರಗಳನ್ನು ದಲಿತ ಪಾತ್ರಗಳು ಎಂದು ಕರೆಯಲಾಗುತ್ತದೆ ಎಂದರೆ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದವರು, ಜಾತಿಯಿಂದ ಅಸ್ಪೃಶ್ಯತೆಗೆ ಒಳಗಾದ ಪಾತ್ರಗಳನ್ನು ದಲಿತ ಪಾತ್ರಗಳು ಎಂದು ಈ ಅಧ್ಯಯನದಲ್ಲಿ ಪರಿಗಣಿಸಲಾಗಿದೆ.

ದಲಿತ ಎಂಬ ಪರಿಕಲ್ಪನೆ ತುಂಬಾ ಚರ್ಚೆಗೆ ಒಳಪಟ್ಟ ವಿಷಯವಾಗಿದೆ. ದಲಿತ ಪದದ ನಿಷ್ಪತ್ತಿಯನ್ನು ಈ ರೀತಿಯಾಗಿ ಹೇಳಲಾಗಿದೆ. 'ದಲ' ಎಂಬುದು ಸಂಸ್ಕೃತ ಪದ. ದಲ ಎಂದರೆ ಚೂರು, ತುಂಡು, ಭಾಗ, ಸೈನ್ಯ ಎಂಬ ಅರ್ಥಗಳಿವೆ. ಆದ್ದರಿಂದ ಇಲ್ಲಿ ಸೈನ್ಯದ ಹರಿತವಾದ ಶಸ್ತ್ರ ಎನ್ನುವ ಅರ್ಥ ಸಮಂಜಸವೆಂದು ಕೆಲವರು ವಾದಿಸಿದ್ದಾರೆ ದಲಿತ ಎಂದರೆ ದಮನಕ್ಕೆ 'ಒಳಗಾದವರು' ಎಂದರ್ಥ. ಶತಶತಮಾನಗಳಿಂದ ತುಳಿತಕ್ಕೆ ಒಳಗಾದವರು ಅಸ್ಪೃಶ್ಯರೇ ಆಗಿದ್ದಾರೆ. ಹೀಗಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಶಕ್ತಿಗಳ ಜೊತೆಗೆ ಅಸ್ಪೃಶ್ಯತೆಯ ಸೂಕ್ಷ್ಮ ಸಂಬಂಧದ ಎಳೆ ಇರುವುದರಿಂದ ದಲಿತ ಎಂದರೆ ಕೇವಲ ಅಸ್ಪೃಶ್ಯನಲ್ಲ ಎನ್ನುವುದನ್ನು ಈ ಪದ ವಿವರಿಸುತ್ತದೆ(ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಯಾನ ಪುಟ-೩) ಈ ರೀತಿಯಾಗಿ ದಲಿತ ಪದದ ನಿಷ್ಪತ್ತಿಯನ್ನು ಹೇಳಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ೧. ಹಿಂದುಳಿದಿದ್ದು; ಮುಂದುವರಿಯದುದು. ೨. (ಆರ್ಥಿಕವಾಗಿ, ಸಾಮಾಜಿಕವಾಗಿ) ಹಿಂದುಳಿದವನು; ಶೋಷಣೆಗೆ ಒಳಗಾದವನು ೩. ಒಡೆದ; ಸೀಳಿದ. ೪. ಅರಳಿದ; ವಿಕಸಿತವಾದ(ಸಂಕ್ಷಿಪ್ತ ಕನ್ನಡ ನಿಘಂಟು, ಪುಟ-೫೮೮) ಎಂಬ ಅರ್ಥಗಳನ್ನು ಈ ನಿಘಂಟಿನಲ್ಲಿ ಕಾಣಬಹುದಾಗಿದೆ.

ಜ್ಯೋತಿ ಬಾಪುಲೆ(೧೮೨೭-೧೮೯೦) ಮೊದಲ ಬಾರಿಗೆ 'ದಲಿತ' ಎನ್ನುವ ಪರಿಭಾಷೆಯನ್ನು ರೂಢಿಗೆ ತಂದರು. ಅವರು 'ದಲಿತುತ್ಥಾನ' ಎಂಬ ನುಡಿಗಟ್ಟನ್ನು ಮೂಲಮಂತ್ರವಾಗಿಸಿಕೊಂಡು,

ಅಸ್ಪೃಶ್ಯ ಸಮುದಾಯಗಳ ಸುಧಾರಣೆಗಾಗಿಯೇ ತಮ್ಮ ಬದುಕನ್ನು ಮೀಸಲಾಗಿಟ್ಟಿದ್ದರು. ಸಂಸ್ಕೃತದಲ್ಲಿ 'ದಲ್' ಎನ್ನುವ ಧಾತು ಸೀಳು, ಛಿದ್ರ, ನಿಷ್ಕಪಟ, ಸ್ವಚ್ಛ ಎನ್ನುವ ಹಲವು ಅರ್ಥಗಳನ್ನು ಕೊಡುತ್ತದೆ. ಜ್ಯೋತಿಬಾ ಫುಲೆಯವರನ್ನು ಗುರುವಾಗಿ ಪರಿಗಣಿಸಿದ ಡಾ. ಅಂಬೇಡ್ಕರ್ ಮುಂದೆ, ತಮ್ಮ 'ಬಹಿಷ್ಕೃತ ಭಾರತ'ದಲ್ಲಿ ದಲಿತ ಎನ್ನುವ ಪರಿಭಾಷೆಯನ್ನು ಬಳಸಿದರು. ಅವರು, "ಮೇಲ್ಜಾತಿಯ ಬ್ರಾಹ್ಮಣರು, ಕೆಳಜಾತಿಯವ ಶೋಷಿಸುವ, ದಮನ ಮಾಡುವ ಮತ್ತು ಪರಿಧೀಕರಿಸುವ ರೀತಿಯನ್ನು ದಲಿತತ್ವ ಸೂಚಿಸುತ್ತದೆ" ಎಂದು ಹೇಳಿದರು.(ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ೧೯೯೦, ಸಂಪುಟ–೯, ಪುಟ–೩೦೪, ಇಂಗ್ಲೀಷ್ ಆವೃತ್ತಿ) ಆದರೆ ಅಂಬೇಡ್ಕರ್ ಈ ಭಾಷೆಯನ್ನು ಹೆಚ್ಚು ಬಳಸಲಿಲ್ಲ.

ನಂತರ, ೭೦ರ ದಶಕದಲ್ಲಿ, ಭಾರತದಲ್ಲಿ ಕೆಳಜಾತಿಗಳ ಕ್ರಾಂತಿಕಾರಕ ಹೋರಾಟ ಪ್ರಾರಂಭವಾದಾಗ, ಮಹಾರಾಷ್ಟ್ರದ 'ದಲಿತ್ ಪ್ಯಾಂಥರ್ಸ್' ಈ ಪರಿಭಾಷೆಯನ್ನು ಒಂದು ಐಡೆಂಟಿಯ ಸಂಕೇತವಾಗಿ ಬಳಸಲಾರಂಭಿಸಲಾಯಿತು. ದಲಿತ್ ಪ್ಯಾಂಥರ್ ಗಂಗಾಧರ ಪಂಟವಾಣೆ ಅವರು 'ದಲಿತ ಎನ್ನುವುದು ಜಾತಿ ಸೂಚಕವಾದ ಪರಿಭಾಷೆಯಲ್ಲ; ಅದೊಂದು ಬದಲಾವಣೆಯ ಸಂಕೇತ. ಮಾನವೀಯತೆಯನ್ನು ಮಾತ್ರ ನಂಬುವ ದಲಿತರು, ತಾರತಮ್ಯವನ್ನು ಬೋಧಿಸುವ ಹಿಂದೂ ಕಲ್ಪನೆಯ ದೇವರು, ಪುನರ್ಜನ್ಮ, ಕರ್ಮ ಸಿದ್ಧಾಂತ, ಸ್ವರ್ಗ, ನರಕದ ಕಲ್ಪನೆ ಮತ್ತು ಹಿಂದೂ ಪವಿತ್ರ ಗ್ರಂಥಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಅವರು ಈ ದೇಶದ ಶೋಷಿತರ ಪ್ರತಿನಿಧಿಗಳು. ದಲಿತತ್ವ ಎನ್ನುವುದು ಒಂದು ಹೊಸ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಡೆಂಟಿಟಿಯ ಕಲ್ಪನೆ. ದಲಿತ ಎನ್ನುವ ಪರಿಭಾಷೆಗೆ ಒಂದು ಕಾಲವಿದ್ದ ಹೀನಾರ್ಥವನ್ನು ಅಳಿಸಿ, ಅದಕ್ಕೆ ಘನತೆಯ, ಇಡೀ ಮನುಷ್ಯಕುಲಕ್ಕೆ ಅಗತ್ಯವಾಗಿರುವ ಸಾಮಾಜಿಕ ನ್ಯಾಯದ ಹೊಸ ಅರ್ಥವನ್ನು ಕೊಡುವುದು ನಮ್ಮ ಉದ್ದೇಶ' ಎಂದು ಹೇಳುತ್ತಾರೆ. ೭೦ರ ನಂತರದ ದಶಕದ ಕೆಳಜಾತಿಗಳ ಹೋರಾಟದಲ್ಲಿ, ಭಾರತದಾದ್ಯಂತ ಹೊಸ ಅರ್ಥದಲ್ಲಿ 'ದಲಿತ' ಪರಿಭಾಷೆ ಬಳಕೆಯಾಗತೊಡಗಿತು. ಆದರೆ, ದಲಿತೇತರರು ಮಾತ್ರ ದಲಿತ ಎನ್ನುವುದನ್ನು 'ಅಸ್ಪೃಶ್ಯ' ಸಮುದಾಯಗಳು ಎನ್ನುವ ಅರ್ಥದಲ್ಲಿಯೇ ಗ್ರಹಿಸುತ್ತಾ ಬಂದಿದ್ದಾರೆ.

ಕನ್ನಡದಲ್ಲಿ ದಲಿತ ಎಂಬ ಪರಿಭಾಷೆಯನ್ನು ಮೊದಲು ಬಳಸಿದವರು ಬೆಳಗಾವಿಯ ದೇವರಾಯ ಇಂಗಳೆ. ಅಂಬೇಡ್ಕರ್ ಅವರ ಅನುಯಾಯಿಯಾಗಿದ್ದ ಇಂಗಳೆ, ೧೯ನೇ ಶತಮಾನದ ಆರಂಭದಲ್ಲಿಯೇ ಉತ್ತರ ಕರ್ನಾಟಕದ ಭಾಗದಲ್ಲಿ ಕೆಳಜಾತಿಗಳ ವಿಮೋಚನೆಗಾಗಿ ಹೋರಾಡಿದವರು. ಅವರು ಹಲವು ಕ್ರಾಂತಿಕಾರಕ ನಾಟಕಗಳನ್ನು ರಚಿಸಿದ್ದಾರೆ. ದೇವರಾಯರು ದಲಿತ, ನಿಮ್ನವರ್ಗ ಎಂಬ ಎರಡೂ ಪರಿಭಾಷೆಗಳನ್ನು ತಮ್ಮ ಬರಹಗಳಲ್ಲಿ ಬಳಸಿದ್ದಾರೆ.

ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್‌ನ ಪ್ರಭಾವದಿಂದ ಕರ್ನಾಟಕದಲ್ಲಿಯೂ ದಲಿತರ ಹೋರಾಟ ಪ್ರಾರಂಭವಾಯಿತು. ಆಗ ಪ್ರೊ. ಬಿ. ಕೃಷ್ಣಪ್ಪನವರ ನೇತೃತ್ವದಲ್ಲಿ 'ದಲಿತ ಸಂಘರ್ಷ

ಸಮಿತಿಯು ೧೯೭೪ರಲ್ಲಿ ಭದ್ರಾವತಿಯಲ್ಲಿ ಪ್ರಾರಂಭವಾಯಿತು. ದಲಿತ ಎಂಬ ಪರಿಭಾಷೆಯನ್ನು ಚಾಲ್ತಿಗೆ ತರುತ್ತಿದ್ದ ಸಮಯದಲ್ಲಿ, ಡಿ.ಎಸ್.ಎಸ್ ನ ನೋಂದಣಿಯಲ್ಲಿ 'ಹರಿಜನ/ಗಿರಿಜನ' ಎಂಬ ಜಾತಿಸೂಚಕ ಪದಗಳೇ ಬಳಕೆಯಾಗಿವೆ.

೭೦ರ ದಶಕದ ನಂತರ, ಕನ್ನಡದಲ್ಲಿ ದಲಿತ ಎಂದರೆ ಪರಂಪರೆಗಿಂತ ಭಿನ್ನವಾದ, ಪರಂಪರೆಯನ್ನು ಉಗ್ರವಾಗಿ ತಿರಸ್ಕರಿಸುವ ಮತ್ತು ಕ್ರಾಂತಿಕಾರಿಯಾಗಿ ಹಕ್ಕೊತ್ತಾಯಗಳನ್ನು ಪ್ರತಿಪಾದಿಸುವ ಚಳವಳಿಗಾರರು, ಬರಹಗಾರರು ಎಂಬ ಅರ್ಥ ಸಾಮಾಜಿಕ-ಸಾಂಸ್ಕೃತಿಕ ವಲಯದಲ್ಲಿ ರೂಪುಗೊಳ್ಳತೊಡಗಿತು. ಪ್ರಗತಿಪರರಿಗೆ ದಲಿತರ ಬಗ್ಗೆ ಮೆಚ್ಚುಗೆ, ಸನಾತನವಾದಿಗಳಿಗೆ ಇರುಸುಮುರುಸು, ತಮ್ಮ ಜಾತಿಯನ್ನು ಗೋಪ್ಯವಾಗಿರಿಸುವ, ಮರೆಯಲೆತ್ನಿಸುವ ಕೆಳಜಾತಿಗಳಿಗೆ ವಿಚಿತ್ರವಾದ ಕಿರಿಕಿರಿ, ಪ್ರಭುತ್ವಕ್ಕೆ ತಲೆನೋವು, ಜಮೀನ್ದಾರಿಶಾಯಿಗೆ ಒಂದು ಎಚ್ಚರಿಕೆ ಹೀಗೆ ನಾನಾ ಅರ್ಥದಲ್ಲಿ 'ದಲಿತ' ಪದ ವ್ಯಕ್ತವಾಗುತ್ತಿತ್ತು.

ದಲಿತ ಸಾಹಿತ್ಯ ಮತ್ತು ಹೋರಾಟ ಕನ್ನಡದ ಸಂಸ್ಕೃತಿಗೆ ದೊಡ್ಡದೊಂದು 'ಪ್ಯಾರಡೈಮ್ ಶಿಫ್ಟ್'ಅನ್ನು, ಅಂದರೆ ಅರ್ಥ ವಿಲ್ಲದವನು ಎಂದು ಮಾಡಿದವು. ಕನ್ನಡದ ಸಂಸ್ಕೃತಿ ಮೀಮಾಂಸೆಗೆ ಈ ಹಂತದಿಂದಾಚೆಗೆ ಬದಲಾಗತೊಡಗಿತು. ದೇವನೂರು ಮಹಾದೇವ ಅವರ 'ಕುಸುಮಬಾಲೆ'ಗೆ ಬೆನ್ನುಡಿ ಬರೆದ ಜಿ. ಎಚ್. ನಾಯಕ್, 'ಈ ಕೃತಿಯನ್ನು ವಿಮರ್ಶಿಸುವುದಕ್ಕೆ ನಮ್ಮ ವಿಮರ್ಶಾ ಮಾನದಂಡಗಳು ನೆರವಾಗುವುದಿಲ್ಲ. ಬಹುಶಃ ನಮ್ಮ ಮಾನದಂಡಗಳನ್ನೇ ಬದಲಾಯಿಸಿಕೊಳ್ಳಬೇಕೊ ಏನೋ?' ಎಂಬ ಮಾತನ್ನು ಹೇಳಿದ್ದರು. ಹೀಗೆ ದಲಿತ ಸಾಹಿತ್ಯವನ್ನು ಒಂದು ನೂತನ ಹಾಗೂ ಪ್ರತ್ಯೇಕವಾದ ಸಾಹಿತ್ಯ ಪ್ರಕಾರವನ್ನಾಗಿಯೇ ನೋಡಬೇಕೆನ್ನುವ ವಾದವೂ ಕೂಡ ಮುನ್ನೆಲೆಗೆ ಬಂತು.

೮೦ರ ದಶಕದ ನಂತರ ದಲಿತ ಸಂಘರ್ಷ ಸಮಿತಿ ಒಡೆಯಲಾರಂಭಿಸಿತು. ಹಾಗೆ ಒಡೆದು ಹೋದ ಕವಲುಗಳೆಲ್ಲವೂ ತಮ್ಮ ತಮ್ಮ ಸಮಿತಿಗೆ ಹೊಸ ಹೊಸ ಐಡೆಂಟಿಟಿಯನ್ನು ಕೊಡಲಾರಂಭಿಸಿದವು. ದಲಿತ ಎನ್ನುವ ಮೂಲಪದ ಹಾಗೇ ಉಳಿದುಕೊಂಡರೂ, ಅಂಬೇಡ್ಕರ್‌ವಾದ, ಬಾಬು ಜಗಜೀವನ್ ರಾವ್‌ವಾದ, ಅಂಬೇಡ್ಕರ್ ಮತ್ತು ಕಾನ್ಶೀರಾಮ್, ಅಂಬೇಡ್ಕರ್ ಮತ್ತು ಬಸವಣ್ಣ ಮತ್ತು ಕುವೆಂಪು ಹೀಗೆ.

೨೧ನೇ ಶತಮಾನದ ಹೊತ್ತಿಗೆ ಈ ಪರಿಭಾಷೆಯನ್ನೇ ವಿಸರ್ಜಿಸಬೇಕು ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಇದೆಲ್ಲದರ ಜೊತೆಗೆ ದಲಿತ ಕವಿ ಕೆ. ಬಿ. ಸಿದ್ದಯ್ಯ, 'ದಲಿತ' ಎನ್ನುವುದಕ್ಕಿಂತ 'ಹೊಲೆಯ' 'ಮಾದಿಗ' ಎನ್ನುವುದೇ ಹೆಚ್ಚು ಆಪ್ತವಾದ ಸಾಮಾಜಿಕ ಸ್ಥಿತಿಯಾಗಿ ನಮ್ಮ ಅನುಭವಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ 'ದಲಿತ' ಎನ್ನುವ ಪದದ ಹೊಸ ಚಿಂತನೆಗಳು ಮೂಡಿಬರುತ್ತಿವೆ(ಚಂದ್ರಪೂಜಾರಿ ಎಂ, ಚಂದ್ರಶೇಖರ ಟಿ. ಆರ್.,

ಶ್ರೀಧರ್ ವಿ. ಎಸ್ (ಸಂ). ಸಾಮಾಜಿಕ ಮತ್ತು ಮಾನವಿಕ ಅಧ್ಯಯನಗಳ ಪರಿಭಾಷಾ ಕೋಶ, ಪುಟ-೮೧-೮೩) ಎಂದು ಬಿ. ಯು. ಸುಮಾ ಅವರು ತಮ್ಮ ಲೇಖನದಲ್ಲಿ 'ದಲಿತ' ಪದದ ಕುರಿತು ಚರ್ಚಿಸಿದ್ದಾರೆ. 'ದಲಿತ' ಎಂಬ ಪದ ಕಾಲ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಅದರ ಅರ್ಥದ ನೆಲೆಗಳು ನಿರ್ಧರಿಸುತ್ತವೆ. 'ದಲಿತ' ಪದ ಬಳಕೆ ಅಸ್ಮಿತೆಯೋ ಅಥವಾ ಅವಮಾನವೋ ಎಂಬುದು ಕಾಲ, ಸಂದರ್ಭ ಮತ್ತು ಮನೋಧೋರಣೆಗೆ ಅನುಗುಣವಾಗಿ ಬಳಕೆಯಾಗುತ್ತಿರುತ್ತದೆ.

'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ದಲಿತ ಪದ ಬಳಕೆ ಕುರಿತು ಪ್ರಕಟವಾದ ಒಂದು ಲೇಖನವನ್ನು ಉದಾಹರಣೆಯಾಗಿ ನೋಡಬಹುದು. ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠ ನೀಡಿದ ನಿರ್ದೇಶನವನ್ನು ಬಳಸಿಕೊಂಡು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು 'ದಲಿತ' ಪದದ ಬದಲಿಗೆ 'ಪರಿಶಿಷ್ಟ ಜಾತಿ'(ಶೆಡ್ಯೂಲ್ಡ್ ಕಾಸ್ಟ್) ಪದ ಬಳಸುವಂತೆ ಎಲ್ಲ ಮಾಧ್ಯಮಗಳಿಗೆ ಸೂಚಿಸಿದ್ದು, ಈಗ ಚರ್ಚೆಗೆ ಕಾರಣವಾಗಿದೆ.

'ದಲಿತ' ಪದ ಬಳಕೆಗೆ ಸಂಬಂಧಿಸಿ ಪರ-ವಿರೋಧ ಅಭಿಪ್ರಾಯಗಳಿವೆ. ಶತಮಾನಗಳಿಂದಲೂ ಮೇಲ್ವರ್ಗದ ದಬ್ಬಾಳಿಕೆ, ದೌರ್ಜನ್ಯಕ್ಕೆ ತುತ್ತಾಗಿ, ಎಲ್ಲ ಸೌಲಭ್ಯಗಳಿಂದ ವಂಚಿತರಾದವರಿಗೆ ದಲಿತ ಎಂಬ ಪದವೇ ಅಸ್ಮಿತೆಯನ್ನು ತಂದುಕೊಟ್ಟಿದೆ ಎಂಬುದು ಒಂದು ವಾದವಾದರೆ, ದಲಿತ ಪದ ಬಳಕೆಯೇ ಗ್ರಾಮೀಣ ಪ್ರದೇಶಗಳಲ್ಲಿ ನಿತ್ಯ ಹಿಂಸೆಗೆ ಕಾರಣವಾಗುತ್ತಿದೆ. ಅದರ ಬಳಕೆ ನಿಲ್ಲಬೇಕು. ದಲಿತ ಎಂದರೆ ಅದೇನೂ ಗೌರವ ಸೂಚಕವಲ್ಲ. ಬದಲಿಗೆ ದಬ್ಬಾಳಿಕೆಗೆ ಒಳಗಾದವರು, ಅವಮಾನದ ಸೂಚ್ಯಾರ್ಥವನ್ನು ವಾಚ್ಯವಾಗಿಸುವ ಪದವಾಗಿದೆ ಎಂಬುದು ಮತ್ತೊಂದು ವಾದ.

ಒಂದಂತೂ ಸ್ಪಷ್ಟ; ದಲಿತ ಪದ ಬಳಕೆಗೆ ಸಂಬಂಧಿಸಿದ ಸಮಾಜದಲ್ಲಿ ಎರಡು ಅಭಿಪ್ರಾಯಗಳಂತೂ ರೂಪುಗೊಂಡಿವೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯ ನೀಡಿರುವ ಈ ಸೂಚನೆಯನ್ನು ಕೈಬಿಡುವಂತೆ ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರುವುದಾಗಿ ಎನ್. ಡಿ. ಎ ಕೂಟದ ಭಾಗವಾಗಿರುವ ಮತ್ತು ರಿಪಬ್ಲಿಕನ್ ಪಕ್ಷದ ನಾಯಕ, ಸಚಿವ ರಾಮದಾಸ್ ಅಠಾವಳೆ ಹೇಳಿದ್ದಾರೆ.

ದಲಿತ ಪದ ನಿಕೃಷ್ಟವಲ್ಲ. ಅದು ಕೆಳಜಾತಿಯವರ ಅಸ್ಮಿತೆಯನ್ನು ಬಡಿದೆಬ್ಬಿಸುವ ಪದ ಎಂಬುದು ಅವರ ಅಂಬೋಣ. ಹಾಗೆಯೇ, ಸುದ್ದಿಗಳಲ್ಲಿ ದಲಿತ ಪದ ಬಳಕೆ ನಿಲ್ಲಿಸುವುದನ್ನು ಒಪ್ಪಿಕೊಳ್ಳಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆಯೂ 'ನ್ಯೂಸ್ ಬ್ರಾಡ್ ಕಾಸ್ಟರ್ ಅಸೋಸಿಯೇಷನ್-ಎನ್‌ಬಿಎ' ನಿರ್ಧಾರ ಕೈಗೊಳ್ಳಲಿದೆ. ಖಾಸಗಿ ಸುದ್ದಿವಾಹಿನಿಗಳ ಪ್ರಾತಿನಿಧಿಕ ಸಂಸ್ಥೆಯಾಗಿರುವ ಎನ್‌ಬಿಎದಲ್ಲಿ ಈಗಾಗಲೇ ಈ ಬಗ್ಗೆ ಚರ್ಚೆ ನಡೆದಿದೆ. ಎನ್‌ಬಿಎ ಸದಸ್ಯರು ಹಾಗೂ ಸುದ್ದಿವಾಹಿನಿಗಳ ಬಹುತೇಕ ಮುಖ್ಯಸ್ಥರು ಸರಕಾರದ ನಿರ್ದೇಶನಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ.

ಇದರ ಹೊರಾತಾಗಿಯೂ ಚರ್ಚೆಯ ಪರಿಧಿ ವಿಸ್ತರಿಸುತ್ತಿದೆ. ದಲಿತ ಎನ್ನುವುದು ಅವಮಾನಕಾರಿ ಪದ ಮತ್ತು ಅಸಂವಿಧಾನಿಕವಾಗಿದೆ. ಹೀಗಿದ್ದಾಗ್ಯೂ, ಸರಕಾರದ ಆಡಳಿತದಲ್ಲಿ ದಲಿತ ಪದ ಬಳಕೆಯಾಗುತ್ತಿದೆ. ಇದನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ಮಹಾರಾಷ್ಟ್ರದ ಪಂಕಜ್ ಮೆಶ್ರಾಮ್(ಖೈರ್ಲಾಂಜಿ, ಹತ್ಯಾಕಾಂಡದಲ್ಲಿ ಹತ್ಯೆಗೀಡಾದ ಭೂತ್ ಮಾಂಗೇ ಕುಟುಂಬದ ಬದುಕುಳಿದ ಸದಸ್ಯ) ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ೨೦೧೯ರಲ್ಲಿ ದಾಖಲಿಸಿದ್ದರು. ಇವರ ಈ ಯತ್ನಕ್ಕೆ ಕೈ ಜೋಡಿಸಿದ್ದು ನ್ಯಾಯವಾದಿ ಶೈಲೇಶ್ ನರ್ನಾವಾಡೆ ಅವರು. ಹೈಕೋರ್ಟ್ ಪೀಠದಲ್ಲಿ ವಾದ ಮಂಡಿಸಿದ ವಕೀಲ ಶೈಲೇಶ್ ಅವರು, "ದಲಿತ ಪದಕ್ಕೆ ಕಾನೂನಿನ ಬೆಂಬಲವೇ ಇಲ್ಲ. ಸಂವಿಧಾನದಲ್ಲೂ ದಲಿತ ಪದ ಬಳಕೆ ಇಲ್ಲ. ಬದಲಿಗೆ ಪರಿಶಿಷ್ಟ ಜಾತಿ ಎಂದು ಬಳಸಲಾಗಿದೆ. ಹೀಗಿರುವಾಗ ದಲಿತ ಪದವನ್ನು ಆಡಳಿತದಲ್ಲಿ ಬಳಸುವುದು ತಪ್ಪು ಎಂದು ವಾದಿಸಿದರು. ಕೋರ್ಟ್‌ಟಿವರ ವಾದವನ್ನು ಪುರಸ್ಕರಿಸಿ ದಲಿತ ಪದ ಬಳಸಿದಂತೆ ನಿರ್ದೇಶನ ನೀಡಿತ್ತು. ಕೇಂದ್ರ ಸರ್ಕಾರವು ಕೋರ್ಟ್‌ನ ಈ ನಿರ್ದೇಶನವನ್ನು ಮಾಧ್ಯಮಗಳಿಗೆ ವಿಸ್ತರಿಸಿದೆ. ಸರಕಾರದ ಈ ನಿರ್ಧಾರದ ಹಿಂದೆ ರಾಜಕೀಯ ಹುನ್ನಾರವಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಹಾರಾಷ್ಟ್ರದ ಖ್ಯಾತ ನಿರ್ದೇಶಕ ಮತ್ತು ನಟ ವೀರೇಂದರ ಗನ್ವೀರ್, "ದಲಿತ ಎನ್ನುವುದು ಹೆಮ್ಮೆಯಲ್ಲ, ಬದಲಿಗೆ ಕರುಣಾಜನಕ ಸ್ಥಿತಿ ಸೂಚಕ ಪದ. ಅದನ್ನು ಶೋಷಿತರನ್ನು ಉನ್ನತಿಕರಿಸುವ ಪರವಾಗಿ ನೋಡಬೇಕೇ ಹೊರತು ಅಸ್ಮಿತೆಯಿಂದಲ್ಲ ಎನ್ನುತ್ತಾರೆ.

ದಲಿತ ಪದ ಬಳಕೆಯನ್ನು ಬೆಂಬಲಿಸುವ ಬಹುತೇಕರು ದಲಿತ ಎಂಬುದು ಜಾತಿಯ ಸೂಚಕವಲ್ಲ ಅದು ತುಳಿತಕ್ಕೊಳಗಾಗಿರುವ, ಮೇಲ್ವರ್ಗಗಳಿಂದ ಶೋಷಣೆಗೊಳಗಾಗಿರುವವರು ತಮ್ಮ ಅಸ್ಮಿತೆ ಎಂದು ಭಾವಿಸುವ ಪದ. ದಲಿತ ಪದ ಬಳಕೆಯ ಮೇಲೆ ನಿಷೇಧ ಬಲಪಂಥೀಯ ರಾಜಕಾರಣದ ಒಂದು ಭಾಗವೇ ಆಗಿದೆ. ದಲಿತ ಮತ್ತು ಆದಿವಾಸಿ ಪದಗಳನ್ನು ನಿಷೇಧಿಸುವ ಮೂಲಕ ಬಲಪಂಥೀಯ ರಾಜಕಾರಣ ತನ್ನ ಹಿತಾಸಕ್ತಿ ಸಾಧಿಸಲು ಹೊರಟಿದೆ. ಹೈಕೋರ್ಟ್ ನಿರ್ದೇಶನವನ್ನೇ ತನ್ನ ಲಾಭಕ್ಕೋಸ್ಕರ ಕೇಂದ್ರ ಸರಕಾರ ಬಳಸಿಕೊಳ್ಳುತ್ತಿದೆ ಎಂದು ಬಹುತೇಕರು ಗಂಭೀರವಾಗಿ ಆರೋಪಿಸುತ್ತಾರೆ.

"ದಲಿತ ಪದ ಅವಮಾನಕಾರಿಯಲ್ಲ. ಅಸ್ಪೃಶ್ಯತೆ ಸೂಚಿಸುವ ನಿರ್ದಿಷ್ಟ ಪದವೂ ಅಲ್ಲ. ಅದನ್ನು ಬಳಸಬೇಡಿ ಎನ್ನುವುದು ಸಣ್ಣತನ. ಜ್ಯೋತಿಬಾ ಫುಲೆ, ಅಂಬೇಡ್ಕರ್ ಅವರು ಈ ಪದವನ್ನು ಜನಪ್ರಿಯಗೊಳಿಸಿದರು. ೭೦ರ ದಶಕದಲ್ಲಿ ಚಳುವಳಿಯ ಅಸ್ಮಿತೆಯಾಗಿ ಹೆಚ್ಚು ಬೆಳಕಿಗೆ ಬಂತು. ಕೇಂದ್ರದ ನಿರ್ಧಾರದ ಹಿಂದೆ ಸಂಘಪರಿವಾರದ ಹುನ್ನಾರವಿದೆ. ಕೇಂದ್ರ ಈ ಪದ ನಿಷೇಧಕ್ಕೆ ಮುಂದಾದರೆ ಸಾಮಾಜಿಕ ಕಾರ್ಯಕರ್ತರು, ದಲಿತರು ಈ ಪದ ಬಳಕೆ

ನಿಲ್ಲಿಸುವುದಿಲ್ಲ ಎನ್ನುತ್ತಾರೆ. ಹೋರಾಟಗಾರರಾದ ಇಂದೂಧರ್ ಹೊನ್ನಾಪುರ ಅವರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಎಚ್ ದಂಡಪ್ಪ ಅವರು, "ದಲಿತ ಪದ ಬಳಕೆಯಲ್ಲಿ ತಪ್ಪಿಲ್ಲ. ಅದು ಈಗಾಗಲೇ ಚಾಲ್ತಿಗೆ ಬಂದಿದೆ. ವಿಶ್ವಸಂಸ್ಥೆಯಲ್ಲಿ ಭಾರತೀಯ ದಲಿತರು ಎಂದೆ ಬಳಸುತ್ತಾರೆ. ಆಫ್ರಿಕಾದ ಕೆಲವು ಜನರನ್ನು ಇದೆ ಕೆಟಗರಿಯಲ್ಲಿ ನೆರವಾಗುತ್ತಿದೆ. ಅದು ದಲಿತರ ಅಸ್ಮಿತೆಯಾಗಿದೆ," ಎನ್ನುತ್ತಾರೆ.

ದಲಿತ ಎನ್ನುವ ಪದ ಒಂದು ಕಾಲಘಟ್ಟದಲ್ಲಿ ರಾಜಕೀಯ ಪದವಾಗಿ ಬಳಕೆಯಾಗಿ ಬಂದಿರುವಂತದ್ದು. ಅದು ದಮನಿತರನ್ನು ಒಂದುಗೂಡಿಸುವ ಪದವಾಗಿದೆ. ಅದಕ್ಕೊಂದು ಇತಿಹಾಸವಿದೆ ದಲಿತ ಎನ್ನುವುದನ್ನು ನಾನಂತೂ ಅವಮಾನ ಎಂದು ಭಾವಿಸುವುದಿಲ್ಲ! ಎಂದು ಸಾಮಾಜಿಕ ಕಾರ್ಯಕರ್ತೆ ದು. ಸರಸ್ವತಿ ಅವರು ಹೇಳಿದ್ದಾರೆ. ಸರಕಾರಿ ಆಡಳಿತದಲ್ಲಿ ಪದ ಬಳಸಬಾರದು ಎಂಬುವುದನ್ನು ಒಪ್ಪಿಕೊಳ್ಳಬಹುದೇ ಹೊರತು ಮಾಧ್ಯಮಗಳಲ್ಲಿ ಬಳಸಬಾರದು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ದಲಿತ ಎಂಬ ಹೆಸರಿನಡಿ ಒಂದುಗೂಡುವ ಶೋಷಿತರು, ದಮನಿತರ ಒಗ್ಗಟ್ಟನ್ನು ಒಡೆಯುವ ತಂತ್ರವಿದು(ವಿಜಯ ಕರ್ನಾಟಕ ಪತ್ರಿಕೆ, ದಲಿತ ಪದ ಬಳಕೆ ಅಸ್ಮಿತೆಯೋ? ಅವಮಾನವೋ?, ದಿನಾಂಕ ಬುಧವಾರ-೧೯ ಸಪ್ಟಂಬರ್-೨೦೧೮, ಪುಟ-೨) ಎಂದು ಇಂದೂಧರ್ ಹೊನ್ನಾಪುರ ಅಭಿಪ್ರಾಯಪಡುತ್ತಾರೆ. ಈ ಅಧ್ಯಯನಕ್ಕೆ ಆಯ್ದುಕೊಂಡ ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಅಸ್ಮಿತೆಗಿಂತ ಅವಮಾನದ ನೆಲೆಯಲ್ಲಿಯೇ ಹೆಚ್ಚು ಬಳಕೆಯಾಗಿರುವುದನ್ನು ಕಾಣಬಹುದು.

ದಲಿತರು ಎಂದರೆ ಯಾರು? ಎಂಬ ಚರ್ಚೆಯು ಕೂಡ ವ್ಯಾಪಕವಾಗಿ ನಡೆದಿದೆ ಎಂಬ ವ್ಯಾಖ್ಯಾನಗಳನ್ನು ಈ ಕೆಳಗಿನಂತೆ ನೋಡಬಹುದು: "ದಲಿತ" ಎಂಬ ಪದವನ್ನು ಅರ್ಥೈಸಲು ಮತ್ತು 'ದಲಿತ' ಎಂದರೆ ಯಾರು? ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಿದವರು ಹಲವಾರು ಜನ. ದಲಿತ-ಬಂಡಾಯ ಚಳುವಳಿಯ ಅಧೀನತೆಯಿಂದ ಹೊರಗಿರುವ ಬರಹಗಾರರು ಅಷ್ಟೇ ಆಸಕ್ತಿವಹಿಸಿ ಅದನ್ನು ಚರ್ಚಿಸಿರುವುದು ವಿಶೇಷ. ಇದು ದಲಿತ ಎಂಬ ಪದ ಹುಟ್ಟಿಸಿದ ಆಸಕ್ತಿ, ಕುತೂಹಲ, ಪ್ರೀತಿ ಎಷ್ಟು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ದಲಿತ ಎಂಬ ಪದ 'ಪ್ರಗತಿಪಂಥ'ದ ಬರಹಗಾರರ ಸಂದರ್ಭದಲ್ಲಿ ಬಳಕೆಗೆ ಬಂದರೂ ಅದನ್ನು ವ್ಯಾಖ್ಯಾನದ ಚೌಕಟ್ಟಿನಲ್ಲಿ ಬಂಧಿಸಿಡುವ ಪ್ರಯತ್ನ ಆರಂಭವಾದುದು ಕರ್ನಾಟಕದ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಸಂದರ್ಭದಿಂದ. ಆದರೆ ಅದರ ಬಿರುಸಿನ ಚರ್ಚೆ ನಡೆದಿದ್ದು ದಲಿತ-ಬಂಡಾಯ ವೇದಿಕೆ ಕಾಣಿಸಿಕೊಂಡಾಗ. ಕಾಲ ಉರುಳುತ್ತಾ ಹೋದರೂ ವ್ಯಕ್ತಿಗತವಾದ ವ್ಯಾಖ್ಯಾನಗಳೇ ಬಳಕೆಯಾಗಿವೆ. ಈ ವ್ಯಕ್ತಿಗತವಾದ ವ್ಯಾಖ್ಯಾನಗಳ ಒಟ್ಟು ವಿಚಾರಗಳನ್ನು ಮೂರು ರೀತಿಯಲ್ಲಿ ಸ್ಪಷ್ಟಪಡಿಸಬಹುದು.

೧. 'ಶೋಷಣೆ ಎಂಬ ಪದಕ್ಕೆ ಜಾತಿ–ಭೇದವಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಎಲ್ಲಾ ಜನರು ದಲಿತರು.'

೨. 'ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು'

೩. 'ಅಸ್ಪೃಶ್ಯರು ಸೇರಿದಂತೆ (ಆ–ವ್ಯಾಖ್ಯಾನದ) ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರು ಅಸ್ಪೃಶ್ಯರ ಹಾಗೆ ಆರ್ಥಿಕ, ಸಾಮಾಜಿಕ, ರಾಜಕೀಯರಂಗದಲ್ಲಿ ಶೋಷಣೆಗೆ ಒಳಗಾದ ಬಡವರು ದಲಿತರೆಂದು ಕರೆಯಿಸಿಕೊಳ್ಳುತ್ತಾರೆ.

ಈ ಬಗೆಯ ಭಿನ್ನಾಭಿಪ್ರಾಯಗಳುಳ್ಳ ವ್ಯಾಖ್ಯಾನಗಳು ಕಾಣಿಸಿಕೊಳ್ಳಲು ಕೆಲವು ನಿರ್ದಿಷ್ಟವಾದ ಕಾರಣಗಳಿವೆ. ಆ ಕಾರಣಗಳನ್ನು ಪರಿಶೀಲಿಸಿದರೆ, ಅಲ್ಲಿರುವ ಗೊಂದಲಗಳು ಸ್ಪಷ್ಟವಾಗುತ್ತವೆ.

೧. ಎಪ್ಪತ್ತರ ದಶಕದಲ್ಲಿಯೇ, ಎಲ್ಲ ರಂಗಗಳಲ್ಲಿಯೂ ಹೋರಾಟ ಆರಂಭವಾಗಿತ್ತು. ಹೀಗಾಗಿ ರಾಜಕೀಯ ರಂಗದಲ್ಲಿ ಒಂದು ಬಗೆಯ ವ್ಯಾಖ್ಯಾನ ಬಳಕೆಯಲ್ಲಿದ್ದರೆ ಸಾಮಾಜಿಕ ರಂಗದಲ್ಲಿ ಇನ್ನೊಂದು ಬಗೆಯ ವ್ಯಾಖ್ಯಾನ ಬಳಕೆಯಲ್ಲಿತ್ತು.

೨. ಬಂಡಾಯ ವೇದಿಕೆ ಅಸ್ತಿತ್ವಕ್ಕೆ ಬಂದಾಗ, ಎಲ್ಲ ಜಾತಿಯ ಬಡವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ 'ದಲಿತ' ಎಂಬ ಪದದ ಅರ್ಥವನ್ನು ವಿಸ್ತರಿಸಿ ವ್ಯಾಖ್ಯಾನಿಸಿತು.

೩. ಅಸ್ಪೃಶ್ಯರೇ ದಲಿತರು ಎಂದು ವ್ಯಾಖ್ಯಾನಿಸಿದರೆ ದಲಿತೇತರರ ಸಹಕಾರ ನಮಗೆ ಸಿಗದೇ ಇರಬಹುದೆಂಬ ಭಯ ದಲಿತ ಬರಹಗಾರರನ್ನು ಆವರಿಸಿದ್ದು, ಯಾವುದೇ ವ್ಯಾಖ್ಯಾನದ ಬಗೆಗೆ ತಲೆಕೆಡಿಸಿಕೊಳ್ಳದೆ, ಯಾವ ವ್ಯಾಖ್ಯಾನವಾದರೂ ಸರಿ ಎಂದು ಒಪ್ಪಿಕೊಂಡ ಮನೋಭಾವ ಅವರಲ್ಲಿತ್ತು.

೪. ಅಸ್ಪೃಶ್ಯ ಬರಹಗಾರರಲ್ಲಿ ಭಿನ್ನಾಭಿಪ್ರಾಯಗಳಿದ್ದಾಗಲೂ ನಿರ್ಭಿಡೆಯಿಂದ ವ್ಯಾಖ್ಯಾನ ಕೊಡಲು ಹಿಂಜರಿದಿದ್ದು ಒಂದು ಮಹತ್ವದ ಕಾರಣವಾಗಿತ್ತು.

೫. ದಲಿತ ಎಂಬ ಪದಕ್ಕೆ ಇತರ ಭಾರತೀಯ ಭಾಷೆಗಳಲ್ಲಿ ಇದ್ದ ತೊಡಕನ್ನು ಗಮನಿಸಿ ಬಾರದಿರುವುದನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಾಗಿತ್ತು.

೬. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಕೊಟ್ಟಿರುವ ಭಿನ್ನ ಅರ್ಥಗಳು ಈ ರೀತಿ ಗೊಂದಲಕ್ಕೆ ಅನುವು ಮಾಡಿಕೊಡಲು ಸಹಕರಿಸಿದಂತಾಗಿತ್ತು.

ಯಾವುದೇ ಒಂದು ಮಾರ್ಗ ಹದಗೊಳ್ಳುವ ಮುನ್ನ ಈ ರೀತಿಯ ಭಿನ್ನಾಭಿಪ್ರಾಯಗಳು ಸಾಮಾನ್ಯ. ಈ ಸಂದರ್ಭ ಗಮನಿಸಬೇಕಾದ ವಿಷಯವೆಂದರೆ ವ್ಯಾಖ್ಯಾನ ಮಾಡಲು ಪ್ರಯತ್ನಿಸಿದವರೆಲ್ಲ ದಲಿತೇತರರು ಎನ್ನುವುದು. ದೇವಯ್ಯ ಹರವೆ ಅವರು ವ್ಯಾಖ್ಯಾನ ಮಾಡಲು ಪ್ರಯತ್ನಿಸಿದ್ದು, ಭಿನ್ನಸಂದರ್ಭಗಳಲ್ಲಿ ಎರಡೂ ರೀತಿಯ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ.

ಅವರಲ್ಲಿರುವ ದ್ವಂದ್ವವನ್ನು ಅರಹುತ್ತದೆ. ಈಗ ಸಾಮಾನ್ಯವಾಗಿ ಈ ಕೆಳಗಿನ ವ್ಯಾಖ್ಯಾನಕ್ಕೆ ಬದ್ಧರಾಗಿ ಮುನ್ನಡೆದದ್ದು ಕಂಡುಬರುತ್ತದೆ.

ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೇ ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರನಿಸಿಕೊಳ್ಳುತ್ತಾರೆ(ಅರವಿಂದ ಮಾಲಗತ್ತಿ ದಲಿತ ಸಾಹಿತ್ಯ ಯಾನ ಪುಟ-೧-೩) ಈ ರೀತಿ ಅರವಿಂದ ಮಾಲಗತ್ತಿ ಅವರು ವಿವಿಧ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ವ್ಯಾಖ್ಯಾನವನ್ನು ನೀಡುತ್ತಾರೆ.

ಸಮಾಜದಲ್ಲಿ ಒಂದು ಸಮುದಾಯಕ್ಕಿಂತ ಒಂದು ಸಮುದಾಯವನ್ನು ಕೀಳಾಗಿ ಕಾಣುವ ಧೋರಣೆಯಿದೆ. ಉದಾಹರಣೆಗೆ ಬ್ರಾಹ್ಮಣರ ಮನೆಯಲ್ಲಿ ಲಿಂಗಾಯತರು, ಲಿಂಗಾಯತರ ಮನೆಯಲ್ಲಿ ಕುರುಬ, ಗೊಲ್ಲ, ಉಪ್ಪಾರ, ಅಗಸ, ನಾಯಕ ಇನ್ನು ಮುಂತಾದವರು. ಕುರುಬ, ಗೊಲ್ಲ, ಉಪ್ಪಾರ, ನಾಯಕರ ಮನೆಯಲ್ಲಿ ಹೊಲೆಯ-ಮಾದಿಗರು ಅಸ್ಪೃಶ್ಯರಾಗಿರುತ್ತಾರೆ. ಹೊಲೆಯ ಮಾದಿಗ ಸಮುದಾಯವನ್ನು ಹೊರತುಪಡಿಸಿ ಮೇಲಿನ ಎಲ್ಲ ಸಮುದಾಯಗಳಲ್ಲೂ ಪರಸ್ಪರ ಮುಟ್ಟುವಿಕೆಯಿದೆ. ಆದರೆ ಕೊಡುಕೊಳ್ಳುವಿಕೆ ಇಲ್ಲ. ಹೊಲೆಯ ಮಾದಿಗ ಸಮುದಾಯದವರು ಮೇಲಿನ ಯಾವ ಸಮುದಾಯದವರನ್ನು ಮುಟ್ಟುವಂತಿಲ್ಲ. ಮುಟ್ಟುವಿಕೆ ಮತ್ತು ಮುಟ್ಟಿಸಿಕೊಳ್ಳುವಿಕೆ ಅನರ್ಹರು ಎಂದು ಭಾವಿಸಲಾಗಿದೆ. ಸಮಾಜದ ಎಲ್ಲ ಸಮುದಾಯಗಳು ಕೀಳಾಗಿ ಕಂಡಿರುವ ಸಮುದಾಯದ ವ್ಯಕ್ತಿಗಳನ್ನು ದಲಿತರು ಎಂದು ಕರೆಯಲಾಗುತ್ತದೆ.

ಈ ಅಧ್ಯಯನದಲ್ಲಿ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಬ್ಬ ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯ ಪಾತ್ರಗಳು ಅಥವಾ ಬಹಿಷ್ಕೃತರೆನಿಸಿಕೊಂಡ ಪಾತ್ರಗಳೆಲ್ಲವೂ ದಲಿತ ಪಾತ್ರಗಳು ಎನಿಸಿಕೊಳ್ಳುತ್ತವೆ ಎಂದು ಅರವಿಂದ ಮಾಲಗತ್ತಿಯವರು ನೀಡಿರುವ ವ್ಯಾಖ್ಯಾನದಂತೆ ಅರ್ಥೈಸಲಾಗಿದೆ. ಈ ರೀತಿಯಾಗಿ ಶೋಷಣೆಗೆ ಒಳಪಟ್ಟ ಪಾತ್ರಗಳನ್ನು ದಲಿತ ಪಾತ್ರಗಳು ಎಂದು ಹೇಳಬಹುದು.

ಕಾದಂಬರಿ, ಚಲನಚಿತ್ರ, ಕತೆ ಮತ್ತು ನಾಟಕಗಳಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದ ಪಾತ್ರಗಳು ಒಬ್ಬ ಮನುಷ್ಯ ಸಮಾಜದೊಂದಿಗೆ ಅವಮಾನಿತರಾಗಿ ಶೋಷಣೆಗೆ ಒಳಪಟ್ಟು ಬದುಕಲಾಗದೆ ಊರ ಹೊರಗೆ ಅಂದರೆ ಕೇರಿಗಳಲ್ಲಿ

ವಾಸಿಸಿ ಸಮಾಜದಲ್ಲಿ ಕೀಳೆಂದು ಭಾವಿಸಲಾಗಿರುವ ವೃತ್ತಿಗಳಿಗೆ ಅವಲಂಬಿತರಾಗಿ ತಮ್ಮ ಹೆಸರಿನ ಮೂಲಕ ಜಾತಿ ಸೂಚಕ ಚಹರೆಗಳು ಕಾಣುತ್ತ ಎಂಬ ಆತಂಕದಿಂದ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯ ಪಾತ್ರಗಳು ಅಥವಾ ಬಹಿಷ್ಕೃತರೆನಿಸಿಕೊಂಡ ಪಾತ್ರಗಳೆಲ್ಲವೂ ದಲಿತ ಪಾತ್ರಗಳೆನಿಸಿಕೊಳ್ಳುತ್ತವೆ. ಈ ಅಧ್ಯಯನದಲ್ಲಿ ಈ ರೀತಿಯ ಪಾತ್ರಗಳನ್ನು ದಲಿತ ಪಾತ್ರಗಳೆಂದು ಪರಿಗಣಿಸಲಾಗಿದೆ. ಈ ಅಧ್ಯಯನದಲ್ಲಿ ದಲಿತ ಪಾತ್ರಗಳನ್ನು ಕೆಳಜಾತಿ ಪಾತ್ರಗಳು ಎಂದು ಉಲ್ಲೇಖಿಸಿ ಬಳಸಲಾಗಿದೆ.

ಈ ಅಧ್ಯಯನದಲ್ಲಿ ಭಾಷೆಯನ್ನು ಕುರಿತು ಹೇಳುವುದಾದರೆ ಭಾಷೆಯ ಘಟಕಗಳಾದ ಸಂಬೋಧನೆ ರೂಪಗಳು, ವ್ಯಕ್ತಿನಾಮಗಳು, ಬೈಗುಳ, ಗಾದೆ ಹಾಗೂ ಅಶಾಬ್ದಿಕ ಸಂವಹನ ಘಟಕಗಳಾದ ಆಂಗಿಕ ಮತ್ತು ಸಂಕೇತಗಳ ಮೂಲಕ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿವೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ವರ್ಗ, ಲಿಂಗ, ವಯಸ್ಸು, ಶಿಕ್ಷಣ ಮುಂತಾದ ಅಂಶಗಳನ್ನು ಒಳಗೊಂಡಂತೆ ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಶ್ರೇಣೀಕೃತ, ವರ್ಗೀಕೃತ, ಲಿಂಗಾಧಾರಿತ ಸಮಾಜಗಳಲ್ಲಿ ಅವರವರ ಚಹರೆಗಳನ್ನು ಒಂದೇ ಭಾಷಿಕ ವ್ಯವಸ್ಥೆಯಲ್ಲಿ ಪ್ರತ್ಯೇಕಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಮೇಲೆ ತಿಳಿಸಿದ ಭಾಷೆಯ ಘಟಕಗಳ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಕಂಡುಕೊಳ್ಳುವುದಾಗಿದೆ. ಸಮಾಜದಲ್ಲಿ ಭಾಷೆಯನ್ನು ಆಡುವವರೆಲ್ಲ ಒಂದೇ ಭಾಷೆಯ ಜನರೇ ಆಗಿದ್ದರು; ಆ ಭಾಷೆಯ ಜೊತೆಗಿನ ಶ್ರೇಣಿಕೃತ ಜಾತಿ ವ್ಯವಸ್ಥೆಯ ಕಾರಣಕ್ಕಾಗಿ ಒಂದೇ ಎಂಬ ಇಡಿಯಾದ ಭಾಷೆಯು ಸಮುದಾಯಗಳ ಸ್ಥಾನಮಾನಗಳಿಗೆ ಅನುಗುಣವಾಗಿ ಸೀಳಿಕೊಂಡಿರುತ್ತದೆ. ಭಾಷೆಯಲ್ಲಿ ಜಾತಿ ಈ ಎರಡು ವ್ಯವಸ್ಥೆಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಬೆರೆತುಕೊಂಡಿರುತ್ತವೆ. ಜಾತಿಯೇ ಅನೇಕ ಬಾರಿ ಭಾಷೆಯನ್ನು ನಿರ್ಧರಿಸುತ್ತಿರುತ್ತದೆ. ಹೀಗೆ ಭಾಷೆಯ ಮೂಲಕ ಸಾಮಾಜಿಕ ಸ್ಥರವಿನ್ಯಾಸವನ್ನು ಕಂಡುಕೊಳ್ಳಬಹುದಾಗಿದೆ.

ಈ ರೀತಿಯಾಗಿ ಅಧ್ಯಯನದಲ್ಲಿ ಅಭಿವ್ಯಕ್ತಿ, ದಲಿತ ಪಾತ್ರಗಳು ಮತ್ತು ಭಾಷೆಯ ಪರಿಕಲ್ಪನೆಗಳನ್ನು ಬಳಸಿಕೊಳ್ಳಲಾಗಿದೆ. ನಿರೂಪಕರ ನಿರೂಪಣೆಯಲ್ಲಿ ವ್ಯಕ್ತಿನಾಮ, ಸಂಬೋಧನೆ ಆಯಾಮ, ಸಂಕಥನ, ಅಶಾಬ್ದಿಕ ಸಂವಹನಗಳಲ್ಲಿ ದಲಿತ ಪಾತ್ರಗಳು ವ್ಯಕ್ತಗೊಂಡಿವೆ. ಹೀಗೆ ಅಭಿವ್ಯಕ್ತಿ ಗೊಂಡಿರುವುದರಲ್ಲೇ ಅವುಗಳ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ. ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳನ್ನು ಅಧ್ಯಯನಕ್ಕೆ ಆಕರಗಳಾಗಿ ಬಳಸಿಕೊಂಡು ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ ಅಭಿವ್ಯಕ್ತಿಗೊಂಡಿರುವ ಬಗೆಯನ್ನು ನೋಡಲಾಗುತ್ತದೆ.

೨.೨. ಅಧ್ಯಯನದ ಸಮೀಕ್ಷೆ

ಸಾಹಿತ್ಯ ಪ್ರಕಾರಗಳನ್ನು ಅನೇಕ ನೆಲೆಯಲ್ಲಿಅಧ್ಯಯನಕ್ಕೆ ಒಳಪಡಿಸಿದ್ದಾರೆ. ಹಾಗೆಯೇ ಚಲನಚಿತ್ರಗಳನ್ನು ಸಹ ಬೇರೆ ಬೇರೆ ನೆಲೆಗಳಿಂದ ಅಧ್ಯಯನ ಮಾಡಿದ್ದಾರೆ. ಕಥೆ, ಕಾದಂಬರಿ ಮತ್ತು ನಾಟಕಗಳ ಕ್ಷೇತ್ರದಲ್ಲಿ ಅಧ್ಯಯನಗಳು ನಡೆದಷ್ಟು ಚಲನಚಿತ್ರಗಳ ಮೇಲೆ ಅಧ್ಯಯನ ನಡೆದಿರುವುದು ವಿರಳ.

ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ಪಾತ್ರಗಳನ್ನು ಕುರಿತು ಅಧ್ಯಯನಗಳು ನಡೆದಿರುವುದು ವಿರಳ. ಸಾಹಿತ್ಯಿಕವಾಗಿ ದಲಿತ ಪಾತ್ರಗಳನ್ನು ದಲಿತ ಸಂವೇದನೆಯ ನೆಲೆಯಿಂದ ಮತ್ತು ಮಹಿಳಾ ಪಾತ್ರಗಳನ್ನು ಸ್ತ್ರೀ ಕೇಂದ್ರಿತ ನೆಲೆಗಳಲ್ಲಿ

ಚರ್ಚಿಸಿರುವುದು ಕಂಡುಬರುತ್ತದೆ. ಆದರೆದಲಿತ ಪಾತ್ರಗಳನ್ನು ಕುರಿತು ಕನ್ನಡ ಅಭಿವ್ಯಕ್ತಿಯಲ್ಲಿ ಭಾಷಿಕವಾಗಿ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನವು ದಲಿತ ಪಾತ್ರಗಳ ಅಭಿವ್ಯಕ್ತಿಯನ್ನು ಕೇಂದ್ರಿಕರಿಸಿದೆ. ಕನ್ನಡ ಸಮಾಜದ ಸ್ತರವಿನ್ಯಾಸಗಳು, ಏಣಿಶೇಣಿ, ಸ್ಥಾನಮಾನಗಳು ವ್ಯಕ್ತಿಗಳ ಸಾಮಾಜಿಕ ನೆಲೆಗಳು, ಸಮುದಾಯಗಳ ಸಾಮಾಜಿಕ ನೆಲೆಗಳು ಭಾಷೆಯೊಳಗೆ ನಿರೂಪಿಸಲ್ಪಟ್ಟವೆ. ಅಂದರೆ ಭಾಷೆಯ ಬಳಕೆಯು ವ್ಯಕ್ತಿ ಮತ್ತು ಸಮುದಾಯಗಳ ಸಂಬಂಧದ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಬರವಣಿಗೆ ಮತ್ತು ದೃಶ್ಯಮಾಧ್ಯಮದ ಸೃಜನಶೀಲ ರಚನೆಗಳಲ್ಲಿ ಅಭಿವ್ಯಕ್ತಿಯ ವೈವಿಧ್ಯತೆಯನ್ನು, ಸಾಧ್ಯತೆಗಳನ್ನು ಸಾಮಾಜಿಕ ಚಲನೆಯೊಂದಿಗೆ ಉಂಟಾಗುತ್ತಿರುವ ವಿಕಾಸ, ಬೆಳವಣಿಗೆ ಪಲ್ಲಟಗಳ ಭಾಷಿಕ ಪ್ರತಿಫಲನಗಳನ್ನು ಅದರ ಶಾಬ್ದಿಕ ಮತ್ತು ಅಶಾಬ್ದಿಕ ನೆಲೆಗಳಿಂದ ದಲಿತ ಪಾತ್ರಗಳ ಮೂಲಕ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ 'ಕನ್ನಡ ಅಭಿವ್ಯಕ್ತಿಯಲ್ಲಿ ದಲಿತ ಪಾತ್ರಗಳು ಮತ್ತು ಭಾಷೆ ಎಂಬ ಶೀರ್ಷಿಕೆಯಡಿ ಅಧ್ಯಯನವನ್ನು ನಡೆಸಲಾಗಿದೆ.

ಕಥೆ, ಕಾದಂಬರಿ, ನಾಟಕ ಮತ್ತು ಚಲನಚಿತ್ರಗಳಲ್ಲಿ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಭೂಮಿಯ ಪ್ರಶ್ನೆ, ಜೀತಾಪದ್ಧತಿ ಮುಂತಾದ ವಿಷಯಗಳ ಕುರಿತು ಅಧ್ಯಯನಗಳು ನಡೆದಿವೆ. ಆದರೆದಲಿತ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸ ಮತ್ತು ಭಾಷಿಕ ದೃಷ್ಟಿಯಿಂದ ಅಧ್ಯಯನಗಳು ನಡೆದಿರುವುದು ವಿರಳ. ಕಾದಂಬರಿ, ನಾಟಕ, ಚಲನಚಿತ್ರಗಳಿಗೆ ಸಂಧಿಸಿದಂತೆ ಕೆಲವು ಅಧ್ಯಯನಗಳನ್ನು ಈ ಕೆಳಗಿನಂತೆ ನೋಡಬಹುದು.

ಅನ್ನಪೂರ್ಣ ಗುಡುದೂರು ಅವರ 'ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು' ಎಂಬ ಪಿಎಚ್.ಡಿ ಮಹಾಪ್ರಬಂಧ (೨೦೦೯)

ಕನ್ನಡ ಕಾದಂಬರಿಗಳಲ್ಲಿ ವಸ್ತು, ಭಾಷೆ, ತಂತ್ರಗಳ ಹಿನ್ನಲೆಯಲ್ಲಿ ಭಾಷೆ ಬಳಕೆಯಲ್ಲಿನ ಸಾದೃಶ್ಯತೆ ಮತ್ತು ವೈದೃಶ್ಯತೆ ಕುರಿತು ಅಧ್ಯಾಯ ಮೂರರಲ್ಲಿ ಚರ್ಚಿಸಿದ್ದಾರೆ. ಸಾಮಾಜಿಕ

ವರ್ಗಗಳು ಮತ್ತು ಭಾಷೆ ಎಂಬ ಅಧ್ಯಾಯದಲ್ಲಿ ಜಾತಿ, ಲಿಂಗ, ಶಿಕ್ಷಣ, ಅಧಿಕಾರ, ಸಂಭೋಧನಾ ರೂಪಗಳು ಗಾದೆಗಳು, ಬೈಗುಳಗಳು ಮತ್ತು ವ್ಯಕ್ತಿನಾಮಗಳನ್ನು ಹಾಗೂ ಅಧ್ಯಾಯ ಐದು, ಆರರಲ್ಲಿ ನುಡಿಬೆರಕೆ, ನುಡಿಪಲ್ಲಟ, ಧ್ವನಿಶೈಲಿ, ಪದಶೈಲಿ, ವಾಕ್ಯಶೈಲಿ ಮತ್ತು ವಿಶಿಷ್ಟ ಪದಕೋಶ ಶೈಲಿ ಕುರಿತು ಚರ್ಚಿಸಿದ್ದಾರೆ.

ಸಾಮಾಜಿಕ ವರ್ಗಗಳು ಮತ್ತು ಭಾಷೆ ಎಂಬ ಅಧ್ಯಾಯದಲ್ಲಿ ವ್ಯಕ್ತಿಯ ಭಾಷೆಯಿಂದಲೇ ಅವರ ಸಾಮಾಜಿಕತೆಯನ್ನು ಗುರುತಿಸಬಹುದು ಎಂಬುದನ್ನು ಅಥವಾ ವ್ಯಕ್ತಿಯ ಭಾಷೆ ಸಾಮಾಜಿಕ ಚಹರೆಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಜಾತಿ, ಲಿಂಗ, ಅಧಿಕಾರ, ಶಿಕ್ಷಣ, ವ್ಯಕ್ತಿನಾಮ, ಸಂಬೋಧನಾರೂಪ, ಗಾದೆ ಮತ್ತು ಬೈಗುಳಗಳಂತಹ ವಿವಿಧ ಸಾಮಾಜಿಕ ಭಿನ್ನಾಂಶಗಳಲ್ಲಿ ಗುರುತಿಸಲಾಗಿದ್ದು ವಿಶ್ಲೇಷಣೆ ಮತ್ತು ನಿದರ್ಶನಕ್ಕೆ ಕಾದಂಬರಿಗಳಿಂದಾಯ್ದ ಉದಾಹರಣೆಗಳನ್ನು ನೀಡುವ ಮೂಲಕ ಚರ್ಚಿಸಲಾಗಿದೆ. ಇಲ್ಲಿ ಕಾದಂಬರಿಗಳಲ್ಲಿನ ಪಾತ್ರಗಳ ಮೂಲಕ ಸಾಮಾಜಿಕ ಸ್ತರ ವಿನ್ಯಾಸವನ್ನು ಗುರುತಿಸಲಾಗಿಲ್ಲ. ಅನ್ನಪೂರ್ಣ ಗುಡುದೂರು ಅವರು ವ್ಯಕ್ತಿನಾಮ, ಸಂಬೋಧನಾರೂಪ, ಗಾದೆ ಮತ್ತು ಬೈಗುಳಗಳನ್ನು ಕಾದಂಬರಿಗಳಲ್ಲಿ ಸಾಮಾಜಿಕ ವರ್ಗಗಳ ಮೂಲಕ ಚರ್ಚಿಸಿದ್ದಾರೆ. ಆದರೆ ಈ ಪ್ರಸ್ತುತ ಅಧ್ಯಯನವು ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿನ ದಲಿತ ಪಾತ್ರಗಳ ಮೂಲಕ ವ್ಯಕ್ತಿನಾಮ, ಸಂಭೋಧನಾ ಆಯಾಮ, ಗಾದೆ ಮತ್ತು ಬೈಗುಳ ಹಾಗೂ ಅಶಾಬ್ದಿಕ ಸಂವಹನಗಳಲ್ಲಿ ಆಂಗಿಕ ಮತ್ತು ಸಂಕೇತ ಭಾಷೆಯ ಮೂಲಕ ಅಧ್ಯಯನ ನಡೆಸಲಾಗಿದೆ.

ರಘುರಾಂ. ಎ ಅವರ ನವ್ಯೋತ್ತರ ಕಾದಂಬರಿಗಳು–ಒಂದು ಅಧ್ಯಯನ ಪಿಎಚ್.ಡಿ ಮಹಾಪ್ರಬಂಧ. (೨೦೦೫)

ರಘುರಾಂ. ಎ ಅವರು ನವ್ಯೋತ್ತರ ಸಂದರ್ಭದ ಕೆಲವು ಲೇಖಕರ ಕಾದಂಬರಿಗಳನ್ನು ಅನುಲಕ್ಷಿಸಿ ಕಾದಂಬರಿಗಳ ಮೇಲೆ ಸಿದ್ಧಾಂತಗಳ ಪ್ರಭಾವ, ಪರಂಪರೆ ಮತ್ತು ಕಾದಂಬರಿಗಳಲ್ಲಿ ವಸ್ತು, ತಂತ್ರ, ಭಾಷೆಯನ್ನು ಕುರಿತು ಸಾಹಿತ್ಯಿಕ ದೃಷ್ಟಿಯಿಂದ ಹೆಚ್ಚಾಗಿ ಅಧ್ಯಯನ ನಡೆಸಿದ್ದಾರೆ. ಈ ರೀತಿ ಸಾಹಿತ್ಯಿಕ ದೃಷ್ಟಿಯಿಂದ ಕಾದಂಬರಿ ಕ್ಷೇತ್ರದಲ್ಲಿ ಕನ್ನಡದಲ್ಲಿ ಹೆಚ್ಚಿನ ಅಧ್ಯಯನಗಳು ನಡೆದಿವೆ. ಆದರೆ ದಲಿತ ಪಾತ್ರಗಳು ಮತ್ತು ಭಾಷೆಯ ದೃಷ್ಟಿಯಿಂದ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ ಎಂದು ಹೇಳಬಹುದು.

ವಂಕಟೇಶಮೂರ್ತಿ ಟಿ ಅವರ 'ಆಧುನಿಕ ಕನ್ನಡ ನಾಟಕಗಳಲ್ಲಿ ಪ್ರಭುತ್ವ ಯಜಮಾನ್ಯತೆ ಹಾಗೂ ಅಧಿಕಾರ ಕೇಂದ್ರಗಳ ಪ್ರತಿನಿಧೀಕರಣ: ವಸ್ತುನಿಷ್ಠ ಅಧ್ಯಯನ (೨೦೦೫)

ವಂಕಟೇಶಮೂರ್ತಿ. ಅವರು ತಮ್ಮ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕನ್ನಡ ನಾಟಕಗಳಲ್ಲಿ ಪ್ರಭುತ್ವ, ಸಂಚಿನ ರಾಜಕಾರಣದ ನೆಲೆಗಳು, ಜಾತಿ, ವರ್ಣ ಮತ್ತು ಅಧಿಕಾರ ಕೇಂದ್ರಗಳು

ಹಾಗೂ ಆಕ್ರಮಣ, ಅನನ್ಯತೆ, ಯಾಜಮಾನ್ಯ, ದೇಶಿಯತೆ ಎಂಬಂತಹ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ. ಕನ್ನಡ ನಾಟಕರಾರರ ಕೆಲವು ನಾಟಕಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಿದ್ದಾರೆ.

ಭಾಷೆ, ಸಂಕಥನ ಮತ್ತು ಯಜಮಾನ್ಯ ಎಂಬ ಅಧ್ಯಾಯದಲ್ಲಿ ಭಾಷೆ ಮತ್ತು ಸಾಮಾಜಿಕ ಸ್ತರಗಳನ್ನು ಕುರಿತು ವಿವರಿಸಿದ್ದಾರೆ. ಅಧೀನತೆಗೆ ಹಾಗೂ ನಿಯಂತ್ರಣಕ್ಕೆ ಒಳಪಡುವ ಅಥವಾ ಒಳಪಡಿಸಿಕೊಳ್ಳುವ ಕ್ರಿಯೆ – ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಇಲ್ಲಿಅಧಿಕಾರ, ಧರ್ಮರಾಜಕೀಯ, ಜಾತಿ, ಲಿಂಗ, ವ್ಯಕ್ತಿ ಸಂಸ್ಕೃತಿ ಮೊದಲಾದ ಅಧಿಕಾರ ಕೇಂದ್ರಗಳಿಗೂ ಭಾಷೆಗೂ ಸಂಬಂಧವಿರುತ್ತದೆ. ತನ್ನ ಅಧೀನಕ್ಕೆ ಒಳಪಟ್ಟ ಸಮುದಾಯವು ಮಾತನಾಡುವ ಭಾಷೆಯ ಮೇಲೆ ಮತ್ತೊಂದು ಸಮುದಾಯದ ಪ್ರಬಲವಾದ ಭಾಷೆಯು ಬೌದ್ಧಿಕ ಕಸರತ್ತಿನ ಮೂಲಕ ಯಜಮಾನ್ಯ ಹಾಗೂ ನಿಯಂತ್ರಣ ಸಾದಿಸಲು ಪ್ರಯತ್ನಿಸುತ್ತಿರುತ್ತದೆ. ಅಲ್ಲದೆ ಒಂದು ಭಾಷಾ ಸಮುದಾಯ ಅನ್ಯಭಾಷಾ ಸಂಸ್ಕೃತಿಯೊಂದಿಗೆ ಸಂಪರ್ಕ ಹೊಂದಿರುವ ಸಂದರ್ಭದಲ್ಲಿ ಜಾತಿ, ಧರ್ಮ, ಅಧಿಕಾರ, ವರ್ಚಸ್ಸು, ಪ್ರಭಾವ, ಉತ್ಪಾದನಾ ಸಂಬಂಧ ಮೊದಲಾದ ಅಧಿಕಾರ ಕೇಂದ್ರಗಳು ಪ್ರಭಾವ ಬೀರುತ್ತಿರುತ್ತವೆ. ಅದರಿಂದಾಗಿ ಇಂಗ್ಲಿಷ್–ಕನ್ನಡ, ಸಂಸ್ಕೃತ–ಕನ್ನಡ, ಶಿಷ್ಟ ಅಶಿಷ್ಟ, ಲಿಖಿತ ಮೌಖಿಕ, ಶಿಕ್ಷಿತ ಅಶಿಕ್ಷಿತ, ಬ್ರಾಹ್ಮಣ ಶೂದ್ರ, ಮೇಲ್ಜಾತಿ ಕೆಳಜಾತಿ, ಗಂಡು ಹೆಣ್ಣು ಮೊದಲಾದ ಪ್ರಬೇಧಗಳು, ವೈರುದ್ಯಗಳು ಕಾಣತೊಡಗುತ್ತವೆ. ಈ ಹಿನ್ನಲೆಯಲ್ಲಿ ವೆಂಕಟೇಶಮೂರ್ತಿ ಅವರು ಇಂಗ್ಲಿಷ್ ಭಾಷೆ ಮತ್ತುಕನ್ನಡ ಭಾಷಾ ವಿರೋಧ ನೆಲೆಗಳು, ಭಾಷೆ ಹಾಗೂ ಅಧಿಕಾರದ ಸಾಂಸ್ಥಿಕ ನೆಲೆಗಳು, ಮಾತು ಬರಹಗಳ ನಡುವಿನ ವೈರುಧ್ಯ, ಭಾಷೆ ಮತ್ತು ಸಾಮಾಜಿಕ ಸ್ತರಗಳು ಒಳಗೊಂಡಂತೆ ಅಧ್ಯಯನ ನಡೆಸಿದ್ದಾರೆ.

ವಿಜಯಲಕ್ಷ್ಮಿಅವರ 'ಕನ್ನಡ ಸಿನಿಮಾ ಮತ್ತು ದೇಸಿ ಸಂಸ್ಕೃತಿ' ಎಂಬ ಪಿಎಚ್.ಡಿ. ಮಹಾಪ್ರಬಂಧ (೨೦೦೭)

ವಿಜಯಲಕ್ಷ್ಮಿ ಅವರು ಕನ್ನಡ ಸಿನಿಮಾಗಳಲ್ಲಿ ದೇಸಿ ಸಂಸ್ಕೃತಿಯ ಅಭಿವ್ಯಕ್ತಿಯ ನೆಲೆಗಳನ್ನು ಕುರಿತು ಚರ್ಚಿಸಿದ್ದಾರೆ. ಚಲನಚಿತ್ರಗಳಲ್ಲಿ ಭಾಷೆಯ ಬಳಕೆ, ನಾಡು ನುಡಿಯಚಿಂತನೆ, ಕನ್ನಡ ಪ್ರಜ್ಞೆ, ಮಾನವೀಯ ಮೌಲ್ಯಗಳು ಹಾಗೂ ಸಾಂಸ್ಕೃತಿಕ ಸಂಘರ್ಷದ ನೆಲೆಗಳಣ್ನು ಕೂಡ ಚರ್ಚಿಸಿದ್ದಾರೆ. ದೇಸಿ ಸಂಸ್ಕೃತಿ ಹಿನ್ನಲೆಯಲ್ಲಿ ಸಾಹಿತ್ಯ ಮತ್ತು ಸಿನಿಮಾ ಸಂಬಂಧದ ಬಗ್ಗೆ ಚರ್ಚಿಸಿದ್ದಾರೆ.

ಕನ್ನಡ ಸಿನಿಮಾ ಮತ್ತು ದೇಸಿ ಸಮುದಾಯಗಳ ಸಂವೇದನೆ ಎಂಬ ಅಧ್ಯಾಯದಲ್ಲಿ ದಲಿತ ಸಂವೇದನೆ, ಬುಡಕಟ್ಟು ಸಂವೇದನೆಗಳನ್ನು ಕನ್ನಡ ಸಿನಿಮಾ ಜಗತ್ತು ಚಿತ್ರಿಸಿರುವ ಬಗೆಯನ್ನು ಕುರಿತು ಹೇಳಿದ್ದಾರೆ.

ದಲಿತ ಸಂವೇದನೆಯಲ್ಲಿ ಸಾಹಿತ್ಯಕ್ಕೂ ಮತ್ತು ಸಿನಿಮಾಕ್ಕೂ ಇರುವ ಸಂಬಂಧವನ್ನು ಭಾಗ್ಯಜ್ಯೋತಿ, ಹೇಮಾವತಿ, ಒಂದು ಊರಿನ ಕಥೆ, ಕೊಟ್ರೇಶಿ ಕನಸು, ಚೋಮನದುಡಿ, ಮಲೆಯ ಮಕ್ಕಳು, ಅಮಾಸ ಮುಂತಾದ ಸಿನಿಮಾಗಳಲ್ಲಿ ದಲಿತ ಸಂವೇದನೆ ಕುರಿತು ಚರ್ಚಿಸಲಾಗಿದೆ. ಇಲ್ಲಿ ದಲಿತ ಪಾತ್ರಗಳ ಸಾಮಾಜಿಕ ಸ್ತರ ವಿನ್ಯಾಸವನ್ನು ಕುರಿತು ಭಾಷಿಕ ನೆಲೆಯಲ್ಲಿ ಚಿತ್ರಿಸಲಾಗಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನ ಈ ರೀತಿಯ ಅಧ್ಯಯನಗಳಿಗಿಂತ ಭಿನ್ನ ಎಂದು ಹೇಳಬಹುದು.

ಪ್ರೇಮಪಲ್ಲವಿ ಸಿ. ಬಿ. ಅವರ 'ಕನ್ನಡ ಚಲನಚಿತ್ರ : ಭಾಷೆ' (೨೦೧೪)

ಪ್ರೇಮಪಲ್ಲವಿ ಅವರು ಕನ್ನಡ ಚಲನಚಿತ್ರ : ಭಾಷೆ ಎಂಬ ಪುಸ್ತಕದಲ್ಲಿ ಕನ್ನಡ ಚಲನಚಿತ್ರಗಳಲ್ಲಿ ಬಳಕೆಯಾಗಿರುವ ಭಾಷೆ, ಚಲನಚಿತ್ರಗಳ ಭಾಷೆಯಲ್ಲಿ ಸಾಮಾಜಿಕ ಚಹರೆಗಳು, ಭಾಷಾ ಬಳಕೆಯ ಪೂರಕ ನೆಲೆಗಳು ಮತ್ತು ಸಿನಿ ಪದಕೋಶವನ್ನು ಕುರಿತು ಚರ್ಚಿಸಿದ್ದಾರೆ.

ಕನ್ನಡ ಚಲನಚಿತ್ರಗಳ ಭಾಷೆಯಲ್ಲಿ ಸಾಮಾಜಿಕ ಚಹರೆಗಳು ಎಂಬ ಅಧ್ಯಾಯದಲ್ಲಿ ಪದಗಳ ಬಳಕೆ, ವಾಕ್ಯಗಳ ಬಳಕೆ, ಉಚ್ಚಾರಣಾ ರೂಪಗಳು, ವ್ಯಕ್ತಿನಾಮಗಳ ಸಂಭಾಷಣೆ, ಸಂಭೋಧನಾ ರೂಪಗಳು, ಬೈಗುಳಗಳ ಬಳಕೆ ಮತ್ತು ಚುಡಾಯಿಸುವ ಪ್ರಕ್ರಿಯೆ ಕುರಿತು ಅಧ್ಯಯನ ಮಾಡಿದ್ದಾರೆ.

ಇಲ್ಲಿ ವ್ಯಕ್ತಿನಾಮಗಳು, ಸಂಭೋಧನಾ ರೂಪಗಳು ಮತ್ತು ಬೈಗುಳಗಳ ಬಗ್ಗೆ ಚರ್ಚೆ ಮಾಡಿದ್ದಾರೂ ದಲಿತ ಪಾತ್ರಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಿಲ್ಲ. ನಾಯಕ ಪಾತ್ರಗಳು, ನಾಯಕಿ ಪಾತ್ರಗಳು, ಪುರುಷ ಪಾತ್ರಗಳು, ಸ್ತ್ರೀ ಪಾತ್ರಗಳು, ಹಾಸ್ಯ ಪಾತ್ರಗಳು, ಪೋಷಕ ಪಾತ್ರಗಳನ್ನು ಕೇಂದ್ರಿಕರಿಸಿ ಅಧ್ಯಯನವನ್ನು ಮಾಡಿರುವುದು ಕಂಡುಬರುತ್ತದೆ.

ಹನುಮಂತಯ್ಯ ಎಲ್. ಅವರ 'ಕಥಾಕಥನ' (೧೯೯೯)

ಬಂಡಾಯ ಕಥೆಗಳಲ್ಲಿ 'ದಲಿತ ಪ್ರಜ್ಞೆ' ಎಂಬ ಹೆಸರಿನ ಪಿಎಚ್.ಡಿ ಮಹಾಪ್ರಬಂಧ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ ದಲಿತ ಬಂಡಾಯ ಕಥೆಗಳನ್ನು ಕೇಂದ್ರವಾಗಿಟ್ಟುಕೊಂಡು ದಲಿತ ಸಂವೇದನೆಯ ನೆಲೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಬಂಡಾಯ ಕಥೆಗಳಲ್ಲಿ ವರ್ಣ, ಜಾತಿ, ಅಸ್ಪೃಶ್ಯತೆಯ ಪರಿಕಲ್ಪನೆಗಳನ್ನು ಕಥೆಗಳ ಮೂಲಕ ಅಧ್ಯಯನ ಮಾಡಿದ್ದಾರೆ. ದಲಿತ ಸಂವೇದನೆಯ ಜೊತೆಗೆ ಮುಸ್ಲಿಂ ಸಂವೇದನೆ ಮತ್ತು ಲಿಂಗಭೇದ ನೀತಿಗಳನ್ನು ಮುಖ್ಯವಾಗಿಟ್ಟುಕೊಂಡಿದ್ದಾರೆ. ದಲಿತ ಪಾತ್ರಗಳನ್ನು ಭಾಷಿಕ ದೃಷ್ಟಿಯಿಂದ ಅಧ್ಯಯನ ನಡೆಸಿರುವುದು ಕಂಡುಬರುವುದಿಲ್ಲ.

ಈ ರೀತಿಯಾಗಿ ಕನ್ನಡ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಕಥೆ, ನಾಟಕಗಳನ್ನು ಕುರಿತು ಕನ್ನಡದಲ್ಲಿ ವಿವಿಧ ನೆಲೆಯ ಅಧ್ಯಯನಗಳು ನಡೆದಿವೆ. ಹಾಗೆಯೇ ಚಲನಚಿತ್ರ

ಕ್ಷೇತ್ರದಲ್ಲೂ ಸಹ ಹಲವು ಅಧ್ಯಯನಗಳು ನಡೆದಿವೆ. ಆದರೆ ದಲಿತ ಪಾತ್ರಗಳು ಮತ್ತು ಅವುಗಳ ಭಾಷಿಕ ದೃಷ್ಟಿಯಿಂದ ಅಧ್ಯಯನಗಳು ನಡೆದಿರುವು ವಿರಳ. ಆದ್ದರಿಂದ ಭಾಷೆಯನ್ನು ಶಾಬ್ದಿಕ ನೆಲೆಯ ಮಿತಿಯಿಂದ ಅಶಾಬ್ದಿಕವಾದ ಆಂಗಿಕ ಚಲನೆ, ವಿವಿಧ ಸಂಕೇತಗಳ ವ್ಯಾಪ್ತಿಗೂ ಹಿಗ್ಗಿಸಲಾಗಿದೆ. ಸೃಜನಶೀಲ ಅಭಿವ್ಯಕ್ತಿಯು ಭಾಷೆಯೆಂಬುದರ ವ್ಯಾಪ್ತಿಯನ್ನು ಅಭಿವ್ಯಕ್ತಿಯ ಎಲ್ಲಾ ಮಜಲುಗಳಿಗೂ ಅನ್ವಯಿಸಿ ಪ್ರಸ್ತುತ ಅಧ್ಯಯನವು ದಲಿತ ಪಾತ್ರಗಳ ಅಭಿವ್ಯಕ್ತಿಯನ್ನು ಕೇಂದ್ರಿಕರಿಸಿ ಕನ್ನಡ ಸಮಾಜದ ಸ್ತರ ವಿನ್ಯಾಸಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

* * *

ಅಧ್ಯಾಯ: ಮೂರು

ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸ: ಸಂಬೋಧನೆ, ಉಲ್ಲೇಖ

ಅಧ್ಯಾಯ: ಮೂರು

ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸ: ಸಂಬೋಧನೆ, ಉಲ್ಲೇಖ

೩.೧. ಸಂಬೋಧನೆ : ಬಳಕೆಯ ನೆಲೆಗಳು

೩.೧.೧. ಕೆಳಜಾತಿಪಾತ್ರಗಳು ಮೇಲ್ಜಾತಿಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೧.೧. ಕೆಳಜಾತಿ ಪುರುಷ ಪಾತ್ರಗಳು ಮೇಲ್ಜಾತಿ ಪುರುಷರ ಪಾತ್ರಗಳನ್ನು ಸಂಬೋಧಿಸುವ ಕ್ರಮ

೨.೧.೧.೨. ಕೆಳಜಾತಿ ಪುರುಷ ಪಾತ್ರಗಳು ಮೇಲ್ಜಾತಿ ಮಹಿಳಾ ಪಾತ್ರಗಳನ್ನು ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳು ಕೆಳಜಾತಿ ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೧.೩. ಕೆಳಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಮಹಿಳಾ ಪಾತ್ರಗಳನ್ನು ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೧.೪. ಕೆಳಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಪುರುಷ ಪಾತ್ರಗಳನ್ನು ಮತ್ತು ಮೇಲ್ಜಾತಿ ಪುರುಷ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ.

೩.೧.೨. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೨.೧. ಪುರುಷ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೨.೨. ಮಹಿಳಾ ಪಾತ್ರಗಳು ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೨.೩. ಪುರುಷ ಪಾತ್ರ ಮಹಿಳಾ ಪಾತ್ರವನ್ನು ಮಹಿಳಾ ಪಾತ್ರ ಪುರುಷ ಪಾತ್ರವನ್ನು ಸಂಬೋಧಿಸುವ ಕ್ರಮ

೩.೧.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೩.೧. ಪುರುಷ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೩.೨ ಮಹಿಳಾ ಪಾತ್ರಗಳು ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೩.೩ ಪುರುಷ ಪಾತ್ರಗಳು ಮಹಿಳಾ ಪಾತ್ರಗಳನ್ನು ಮತ್ತು ಮಹಿಳಾ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೪ ಹಿರಿಯ ಪಾತ್ರಗಳ ಕಿರಿಯ ಪಾತ್ರಗಳನ್ನು ಮತ್ತು ಕಿರಿಯ ಪಾತ್ರಗಳು ಹಿರಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೪.೧. ಕೆಳಜಾತಿಯ ಹಿರಿಯ ಪಾತ್ರಗಳು ಮೇಲ್ಜಾತಿಯ ಕಿರಿಯ ಪಾತ್ರಗಳನ್ನು ಮತ್ತು ಮೇಲ್ಜಾತಿ ಕಿರಿಯ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೪.೨. ಮೇಲ್ಜಾತಿ ಹಿರಿಯ ಪಾತ್ರಗಳು ಕೆಳಜಾತಿ ಕಿರಿಯ ಪಾತ್ರಗಳನ್ನು ಮತ್ತು ಕೆಳಜಾತಿ ಕಿರಿಯ ಪಾತ್ರಗಳು ಮೇಲ್ಜಾತಿ ಹಿರಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

೩.೧.೫. ಶಿಕ್ಷಣ ಪಡೆದ ಪಾತ್ರಗಳು ಸಂಬೋಧಿಸುವ ಕ್ರಮ

೩.೧.೫.೧ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಂಬೋಧಿಸು ಕ್ರಮ

೩.೧.೫.೨. ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳು ಸಂಬೋಧಿಸುವ ಕ್ರಮ

೩.೨. ಉಲ್ಲೇಖ: ಬಳಕೆಯ ನೆಲೆಗಳು

೩.೨.೧. ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

೩.೨.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

೩.೨.೩. ಕೆಳಜಾತಿ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

೩.೨.೪. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

೩.೨.೫. ನಿರೂಪಣೆಯಲ್ಲಿ ಉಲ್ಲೇಖದ ಬಳಕೆಯ

ಅಧ್ಯಾಯ: ಮೂರು

ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸ: ಸಂಬೋಧನೆ, ಉಲ್ಲೇಖ

ಭಾಷೆಯಲ್ಲಿ/ಅಭಿವ್ಯಕ್ತಿಯಲ್ಲಿ ವ್ಯಕ್ತಿಗಳ ಸಮುದಾಯಗಳ ಸಂಬಂಧದ ನಡುವಿನ ಅಂತರ, ಸಾಮಿಪ್ಯವನ್ನು ಗುರುತಿಸಲು ಮತ್ತು ಪರಸ್ಪರ ಪ್ರಕಟಪಡಿಸಲು ಇರುವ ಮುಖ್ಯ ಭಾಷಾ ಸಾಮಗ್ರಿ ಎಂದರೆ ಸಂಬೋಧನಾ ರೂಪಗಳು. ವ್ಯಕ್ತಿಗಳ ಗೈರು ಹಾಜರಿಯಲ್ಲಿ ಮತ್ತು ಪರೋಕ್ಷ ನೆಲೆಗಳಲ್ಲಿ ಅವರನ್ನು ಉಲ್ಲೇಖಿಸಲು ಬಳಕೆಯಾಗುವ ಭಾಷಾ ಸಾಮಗ್ರಿಯೂ ವ್ಯಕ್ತಿಗಳ ಸಮುದಾಯಗಳ ನಡುವಿನ ನಂಟಿನ ಸ್ವರೂಪ, ಸಂಬಂಧದ ತೀವ್ರತೆ, ಗಾಢತೆ ಮತ್ತು ಅಂತರಗಳ ಗುರುತಾಗಿಯೂ ಇರುತ್ತವೆ. ಭಾಷೆಯಲ್ಲಿ ಸ್ಥಿರವಾಗಿರುವ ಸಂಬೋಧನಾ ರೂಪಗಳಷ್ಟೇ ಅಲ್ಲದೆ ಸಂಬೋಧನಾ ಕ್ರಮ, ಸಂಬೋಧನೆ ರೀತಿ, ಸಂಬೋಧನೆಯ ಧ್ವನಿ, ಆ ಸಂದರ್ಭದ ಆಂಗಿಕ ಚಲನೆ, ಅಶಾಬ್ದಿಕ ವರ್ತನೆಗಳು ಬಳಸುವವರ ಮತ್ತು ಪ್ರಯೋಗಿಸಲ್ಪಡುವವರ ಸಾಮಾಜಿಕ ನೆಲೆಗಳಿಂದಲೇ ನಿರ್ದೇಶಿತವಾಗುತ್ತಿರುತ್ತವೆ/ನಿಯಂತ್ರಿತವಾಗುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಇದನ್ನು ಕ್ರಮವಾಗಿ ಗುರುತಿಸಲು ಪ್ರಯತ್ನಿಸಲಾಗಿದೆ. ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯು ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾ ಸಮುದಾಯದಲ್ಲಿ ಭಾಷಿಕರು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿರುತ್ತಾರೆ. ಭಾಷೆ ಮತ್ತು ಭಾಷೆಯ ಘಟಕಗಳನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಿ, ಅವುಗಳ ಬಳಕೆಯ ನೆಲೆಗಳನ್ನು ಅಧ್ಯಯನ ನಡೆಸಿದರೆ ಸಮಾಜೋ ಭಾಷಿಕ ಅನನ್ಯತೆಯನ್ನು ಗುರುತಿಸಿದಂತಾಗುತ್ತದೆ.

ಸಂಬೋಧನೆ ಮತ್ತು ಉಲ್ಲೇಖಗಳು ಭಾಷೆಯ ಘಟಕಗಳಾಗಿವೆ. ಈ ಘಟಕಗಳಲ್ಲಿ ಸಾಮಾಜಿಕ ಭಿನ್ನಾಂಶಗಳಾದ ವರ್ಗ, ಜಾತಿ, ಅಂತಸ್ತು, ಲಿಂಗ, ವಯಸ್ಸು, ಶಿಕ್ಷಣ ಮುಂತಾದ ಅಂಶಗಳ ಮೂಲಕ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದಾಗಿದೆ. ಇಂತಹ ಜೈವಿಕ ಅಂಶಗಳು ಭಾಷಾ ಬಳಕೆಯಲ್ಲಿ ಪರಿಣಾಮ ಬೀರುತ್ತವೆ. ಇದರ ಪರಿಣಾಮವಾಗಿ ಭಾಷಾ

ಬಳಕೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಈ ಏಣಿಶ್ರೇಣಿ ಪ್ರಕ್ರಿಯೆಗೆ ಸ್ತರವಿನ್ಯಾಸವೆಂದು ಕರೆಯಲಾಗಿದೆ.

ಸಾಮಾನ್ಯವಾಗಿ ಮೇಲ್ಜಾತಿ ವ್ಯಕ್ತಿಗಳು – ಮೇಲ್ಜಾತಿ ವ್ಯಕ್ತಿಗಳ ಜೊತೆ, ಕೆಳಜಾತಿ ವ್ಯಕ್ತಿಗಳು–ಕೆಳಜಾತಿ ವ್ಯಕ್ತಿಗಳ ನಡುವೆ ಹೆಚ್ಚಾಗಿ ಸಂಬಂಧವನ್ನು ಬೆಳೆಸುವುದುಂಟು. ಪರಸ್ಪರ ಸಮಾನ ಜಾತಿಗಳ ನಡುವೆ ಸಮಾನ ಗೌರವ ಸ್ಥಾನಮಾನಗಳು ಇರುತ್ತವೆ. ಸಂಬೋಧನೆಯಲ್ಲಾಗಿರಬಹುದು, ಉಲ್ಲೇಖದಲ್ಲಾಗಿರಬಹುದು ಮೇಲ್ಜಾತಿಗಳು – ಮೇಲ್ಜಾತಿಗಳ ಜೊತೆ, ಕೆಳಜಾತಿಗಳು–ಕೆಳಜಾತಿಗಳ ನಡುವೆ ಸಮಾನ ಗೌರವ, ಸ್ಥಾನಮಾನಗಳು ಇರುತ್ತವೆ. ಮೇಲ್ಜಾತಿ–ಕೆಳಜಾತಿ ವ್ಯಕ್ತಿಗಳ ನಡುವೆ, ಸಂಬೋಧನೆ, ಉಲ್ಲೇಖಗಳಲ್ಲಿ ಕಂಡುಬರುವಂತಹ ಭಿನ್ನತೆ ಮತ್ತು ಸ್ತರವಿನ್ಯಾಸವನ್ನು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದೊರೆತಿರುವ ಮಾಹಿತಿಗಳ್ನು ಆಧರಿಸಿ ಗುರುತಿಸಲಾಗಿದೆ.

ಸಂಬೋಧನೆ ಮತ್ತು ಉಲ್ಲೇಖಗಳಲ್ಲಿ ಮುಖ್ಯವಾಗಿ ಮೇಲ್ಜಾತಿ ಪಾತ್ರಗಳು ಮತ್ತು ಕೆಳಜಾತಿ ಪಾತ್ರಗಳಲ್ಲಿ ಕಂಡುಬರುವ ಬಳಕೆಯ ನೆಲೆಗಳನ್ನು ನೋಡಲಾಗುತ್ತದೆ.

೩.೧. ಸಂಬೋಧನೆ : ಬಳಕೆಯ ನೆಲೆಗಳು

ಭಾಷಾ ಘಟಕಗಳಲ್ಲಿ ಸಂಬೋಧನೆಯೂ ಒಂದು. ಈ ಸಂಬೋಧನೆಯಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ನಡುವೆ ಕಂಡುಬರುವಂತಹ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ಸಮಾನ ಜಾತಿಗಳ ನಡುವೆ ಗೌರವ ಸ್ಥಾನಮಾನಗಳು ಇರುತ್ತವೆ. ಸಂಬೋಧನೆಯಲ್ಲಿಯೂ ಪರಸ್ಪರ ಗೌರವಕೊಟ್ಟು ಕರೆಯುತ್ತಾರೆ. ಮೇಲ್ಜಾತಿ–ಮೇಲ್ಜಾತಿ ವ್ಯಕ್ತಿಗಳು ಏಕವಚನದಿಂದ ಸಂಬೋಧಿಸುವುದು ತೀರಾ ಕಡಿಮೆಯೆಂದೆ ಹೇಳಬಹುದು. ಸಾಮಾನ್ಯವಾಗಿ ಹೆಸರಿಡಿದು ಸಂಬೋಧಿಸುವಾಗ, ಹೆಸರಿನ ಅಂತ್ಯದಲ್ಲಿ ಗೌರವಸೂಚಕ ಪದವನ್ನು ಸೇರಿಸಿ ಕರೆಯುತ್ತಾರೆ. ಉದಾಹರಣೆಗೆ. ಅನಂತಯ್ಯನವರೇ, ಪ್ರಾಣೇಶಾಚಾರ್ಯರೇ, ಕೃಷ್ಣಶಾಸ್ತ್ರೀಗಳೇ, ಯಾಡೇಗೌಡರೇ, ಮಲ್ಲಪ್ಪನವರೇ, ಶ್ರೀಪತಿರಾಯರೇ, ಸೀತಮ್ಮರೆ, ಸಾವಿತ್ರಮ್ಮರೆ, ಹಂಪಮ್ಮರೆ, ಶ್ರೀನಿವಾಸ ಅಯ್ಯಂಗಾರರೇ, ದಾಮೋದರಭಟ್ಟರೇ ಇತ್ಯಾದಿ. ಇಲ್ಲಿ ಪ್ರತಿ ಹೆಸರಿನ ಕೊನೆಗೆ 'ರೆ' ಎಂಬ ಗೌರವಸೂಚಕ ಪ್ರತ್ಯಯ ಬಳಕೆಯಾಗುತ್ತದೆ. ('ರೆ' ಎಂಬುದು 'ಅವರು' ಎಂಬುದರ ಸವಕಳಿ ರೂಪ) ಕೆಲವು ಸಂದರ್ಭಗಳಲ್ಲಿ ಹೆಸರನ್ನು ಕರೆಯದೆ, ಬರೀ ವೃತ್ತಿ/ ಜಾತಿ ಸೂಚಕಪದಗಳಿಂದ ಸಂಬೋಧಿಸುವುದುಂಟು. ಉದಾಹರಣೆಗೆ ಗೌಡರೇ, ಶಾಸ್ತ್ರೀಗಳೇ, ಶೆಟ್ಟರೇ, ಅಯ್ಯಂಗಾರರೇ, ಭಟ್ಟರೇ, ಹೆಗ್ಗಡರೇ, ರಾಯರೇ, ಆಚಾರ್ಯರೇ, ಜೋಯಿಸರೆ ಇತ್ಯಾದಿಯಾಗಿ ಕರೆಯುತ್ತಾರೆ.

ಕೆಳಜಾತಿ ವ್ಯಕ್ತಿಗಳನ್ನು ಹೆಸರಿಡಿದು ಅಥವಾ ಹೆಸರಿನ ಜೊತೆಗೆ ಅಯ್ಯ, ಅಮ್ಮ, ಅಪ್ಪ, ಅಣ್ಣ ಎಂಬ ಸಂಬೋಧನಾ ಸೂಚಕಗಳನ್ನು ಸೇರಿಸಿ ಸಂಬೋಧನೆ ಮಾಡುತ್ತಾರೆ. ಹೆಸರನ್ನು ಬಳಸುವಾಗ ಗೌರವ ಸೂಚಕ ಅಥವಾ ಯಾವುದೇ ವೃತ್ತಿ/ಜಾತಿ ಸೂಚಕ ಪದಗಳು ಬಳಕೆಯಾಗುವುದಿಲ್ಲ. ಗುತ್ತಿ, ಲಕ್ಕ, ಚೆನ್ನ, ಮಾದ, ಬೆಟ್ಟಯ್ಯ, ಸುಂಕಪ್ಪ, ಕೆಂಚಮ್ಮ, ಚೆನ್ನಿ, ಬೆಳ್ಳಿ, ಮುನಿಯ, ಕಲ್ಯಾ, ದೇಯ್ಯಿ, ಗಾಲೂರಯ್ಯ, ಗುಂಜಾರಯ್ಯ, ಸುಂಡಣ್ಣ, ಗಿಡ್ಡಿ, ಮಲ್ಯಾ, ಮೊಂಡ, ಬರಮ ಮುಂತಾದ ಕೆಳಜಾತಿ ಹೆಸರುಗಳನ್ನು ಈ ರಿತಿಯಾಗಿ ಸಂಬೋಧಿಸುವುದುಂಟು. ಕೆಲವು ಹೆಸರುಗಳು ಸಂಕ್ಷಿಪ್ತಗೊಂಡು ಬಳಕೆಯಾಗಿವೆ. ಇನ್ನೂ ಕೆಲವು ಹೆಸರುಗಳು ಪೂರ್ಣರೂಪದಲ್ಲಿ ಬಳಕೆಯಾಗಿವೆ. ಅವ್ವ, ಅಮ್ಮ, ಅಪ್ಪ, ಅಣ್ಣ ಎಂಬ ವಾರ್ಗಿಕಗಳು ಕೂಡ ಸಂಬೋಧನಾ ರೂಪಗಳಾಗಿ ಬಳಕೆಯಾಗುತ್ತವೆ. ಕೆಳಜಾತಿ ವ್ಯಕ್ತಿಗಳಲ್ಲಿ 'ಅಯ್ಯ' ಎಂಬ ಒಂದು ವಾರ್ಗಿಕ ಮಾತ್ರ ಗೌರಸೂಚಕವಾಗಿ ಬಳಕೆಯಾಗುತ್ತಿದೆ ಎಂದು ಹೇಳುವುದಕ್ಕಿಂತ ಹೆಸರಿನ ಜೊತೆ ಇರುವುದರಿಂದ ಅದು ಹಾಗೆಯೇ ಬಳಕೆಯಾಗುತ್ತಿದೆ.

ಮೇಲ್ಜಾತಿಯವರು ಕೆಳಜಾತಿಯವರನ್ನು ಕರೆಯುವಾಗ ಏಕವಚನದಿಂದ ಕರೆದರೆ, ಕೆಳಜಾತಿಯವರು ಮೇಲ್ಜಾತಿ ವ್ಯಕ್ತಿಗಳನ್ನು ಗೌರವದಿಂದ ಕರೆಯುತ್ತಾರೆ. ಮೇಲ್ಜಾತಿಯ ಕಿರಿಯ ವಯಸ್ಸಿನವರು ಕೆಳಜಾತಿಯ ಹಿರಿಯ ವಯಸ್ಸಿನವರನ್ನು ಏಕವಚನದಿಂದ ಸಂಬೋಧಿಸುತ್ತಾರೆ. ಆದರೆ ಕೆಳಜಾತಿಯ ಹಿರಿಯ ವಯಸ್ಸಿನವರು ಮೇಲ್ಜಾತಿಯ ಕಿರಿಯ ವಯಸ್ಸಿನವರನ್ನು ಏಕವಚನದಿಂದ ಕರೆಯದೆ ಗೌರವದಿಂದಲೇ ಸಂಬೋಧಿಸುತ್ತಾರೆ. ಮೇಲ್ಜಾತಿಯ ಹಿರಿಯ ಮತ್ತು ಕಿರಿಯ ವಯಸ್ಸಿನವರಿಗೆ, ಕೆಳಜಾತಿಯ ಹಿರಿಯ ವಯಸ್ಸಿನವರು ಗೌರವ ಸೂಚಕಗಳನ್ನು ಬಳಸಿ ಸಂಬೋಧಿಸುತ್ತಿರುವು ಕಂಡುಬರುತ್ತದೆ.

ಕೆಳಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸುವಾಗ ಒಡೆಯರೇ, ಒಡತಿ, ಗೌಡರೇ, ಗೌಡ್ತಿ, ಧಣಿಯರೆ, ಅಯ್ಯಾರೆ, ಅಮ್ಮಾರೆ, ಬುದ್ಧಿ, ತಂದೆ, ದೇವ್ರೆ, ಸಾಹುಕಾರ್ರೆ, ಬಾಣಾರೆ, ದತ್ತೀ, ಸ್ವಾಮಿ ಎಂದು ಕರೆಯುತ್ತಾರೆ. ಇವರ ತಮ್ಮ, ತಂಗಿ ಅಥವಾ ಮಕ್ಕಳಿಗೆ ಚಿಕ್ಕಗೌಡ್ರು, ಚಿಕ್ಕಒಡತಿ, ಚಿಕ್ಕಧಣಿ, ಸಣ್ಣಯ್ಯ, ಚಿಕ್ಕಮ್ಮಾರು ಎಂದು ಕರೆಯುತ್ತಾರೆ. ಈ ರೀತಿಯಾಗಿ ಕೆಳಜಾತಿಯವರು ಮೇಲ್ಜಾತಿಯವರನ್ನು ಗೌರವ ಸಂಬೋಧನೆ ಮಾಡಿದರೆ, ಮೇಲ್ಜಾತಿಯವರು ಕೆಳಜಾತಿಯವರನ್ನು ಹೆಸರಿಡಿದು ಮತ್ತು ಏಕವಚನದಿಂದ ಸಂಬೋಧಿಸುವುದನ್ನು ಕಾಣಬಹುದು.

ಭಾರತದಂತ ಸಾಮಾಜಿಕ ವ್ಯವಸ್ಥೆಯಲ್ಲಿ ಹಿರಿಯರು ಕಿರಿಯರನ್ನು ಏಕವಚನದಿಂದ ಅಥವಾ ಹೆಸರಿಡಿದು ಕರೆದರೆ, ಕಿರಿಯರು ಹಿರಿಯರನ್ನು ಗೌರವದಿಂದ ಕರೆಯುತ್ತಾರೆ. ಈ ನಿಯಮಕ್ಕೆ ಭಾರತೀಯ ಸಮಾಜದಲ್ಲಿ ವೈರುಧ್ಯಗಳೂ ಇವೆ ಎಂಬುದು ಗಮನಾರ್ಹವಾದ

ಸಂಗತಿ. ಮೇಲ್ಜಾತಿಯವರು ಕೆಳಜಾತಿಯವರನ್ನು, ಕೆಳಜಾತಿಯವರು ಮೇಲ್ಜಾತಿಯವರನ್ನು ಯಾವ ರೀತಿ ಸಂಬೋಧಿಸುತ್ತಾರೆ ಎಂಬುದನ್ನು ಕೆಲವು ಹೆಸರುಗಳ ಮೂಲಕ ಚರ್ಚಿಸಬಹುದು.

ಕೆಳಜಾತಿಯವರ ಹೆಸರನ್ನು ಮೇಲ್ಜಾತಿಯವರು ಸಂಬೋಧಿಸುವ ಕ್ರಮ :

ಮೂಲ ಹೆಸರು	ಹಿರಿಯರು/ಕಿರಿಯರು
ಐತ	ಐತ
ಬುಳ್ಳಪ್ಪ	ಬುಳ್ಳ
ಬೆಟ್ಟಯ್ಯ	ಬೆಟ್ಟ
ಗಿಡ್ಡಮ್ಮ	ಗಿಡ್ಡಿ
ಕಾಳಣ್ಣ	ಕಾಳ
ಸುಂದ್ರಕ್ಕ	ಸುಂದ್ರಿ
ರಾಮಕ್ಕ	ರಾಮೀ
ದುರ್ಗಪ್ಪ	ದುರ್ಗ್ಯಾ
ಗಾಲೂರಯ್ಯ	ಗಾಲೂರ
ರುದ್ರ	ರುದ್ರ್ಯಾ
ನವಲಾ	ನವಲ್ಯಾ

ಈ ಮೇಲಿನ ಪಟ್ಟಿಯಲ್ಲಿರುವ ಹೆಸರುಗಳನ್ನು ಗಮನಿಸಿದಾಗ ಕೆಲವು ಸೂಕ್ಷ್ಮ ಸಂಗತಿಗಳು ತಿಳಿಯುತ್ತವೆ. ಮೇಲ್ಜಾತಿಯವರು ಕೆಳಜಾತಿಯವರ ಹೆಸರುಗಳನ್ನು ಸಂಬೋಧಿಸುವಾಗ ಪೂರ್ಣ ಹೆಸರನ್ನು ಸಂಬೋಧಿಸದೇ, ಹೆಸರನ್ನು ಸಂಕ್ಷಿಪ್ತಗೊಳಿಸಿ ಮತ್ತು ಹೆಸರನ್ನು ವಿರೂಪಗೊಳಿಸಿ ಸಂಬೋಧಿಸುತ್ತಾರೆ. ಮೇಲ್ಜಾತಿಯವರು ಕೆಳಜಾತಿಯವರ ಹೆಸರುಗಳನ್ನು ಸಂಬೋಧಿಸುವಾಗ, ಹೆಸರಿನ ಅಂತ್ಯದಲ್ಲಿರುವ ಗೌರವಸೂಚಕ ವಾರ್ಗಿಕಗಳಾದ ಅಪ್ಪ, ಅಯ್ಯ, ಅಮ್ಮ, ಅಣ್ಣ, ಅಕ್ಕ, ಅವ್ವ ಈ ವಾರ್ಗಿಕಗಳನ್ನು ಬಳಸಿ ಕರೆಯುವುದಿಲ್ಲ. ಗೌರವ ಸೂಚಕಗಳನ್ನು ಸೇರಿಸಿ ಕೆಳಜಾತಿಯವರನ್ನು ಪೂರ್ಣರೂಪದ ಹೆಸರಿನಿಂದ ಸಂಬೋಧಿಸುವುದು ನಿಷೇಧಿಸಲ್ಪಟ್ಟಿದೆ. ಏಕೆಂದರೆ ಕೆಳವರ್ಗಕ್ಕೆ ಅಥವಾ ಕೆಳಜಾತಿಗೆ ಸೇರಿದ ವ್ಯಕ್ತಿಗಳ ಹೆಸರನ್ನು ಪೂರ್ಣ ಹೆಸರಿನಿಂದ ಕರೆದರೆ ಗೌರವದಿಂದ ಸಂಬೋಧನೆ ಮಾಡಿದಂತಾಗುತ್ತದೆ. ಅವರು ಗೌರವ ಸಂಬೋಧನೆಗೆ ಅರ್ಹರಲ್ಲ ಎಂಬುದು ಹೇಳಬಹುದು. ಕೆಳಜಾತಿ ವ್ಯಕ್ತಿಗಳಲ್ಲಿ ವಾರ್ಗಿಕಗಳಿಲ್ಲದ ಹೆಸರುಗಳೆ

ಹೆಚ್ಚಾಗಿ ಕಂಡುಬರುತ್ತವೆ. ಕೆಳವರ್ಗದವರು ಅಥವಾ ಕೆಳಜಾತಿಯವರು ಸಮಾಜದಲ್ಲಿ ಮೇಲ್ಜಾತಿಯವರಿಂದ ಗೌರವ ಪಡೆದುಕೊಳ್ಳವುದಕ್ಕೆ ಅನರ್ಹರು ಎಂಬುದು ಮೇಲ್ಜಾತಿಯಲ್ಲಿರುವ ಒಂದು ನಂಬಿಕೆ. ಅಧ್ಯಯನಕ್ಕೆ ಆಯ್ದುಕೊಂಡ ಕೆಲವು ಪ್ರಾತಿನಿಧಿಕ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳಲ್ಲಿ ಬರುವ ದಲಿತ ಪಾತ್ರಗಳನ್ನು ಮೇಲ್ಜಾತಿಯವರು ಗೌರವದಿಂದ ಸಂಬೋಧಿಸುವುದಿಲ್ಲ. ಕೆಲವು ಪಾತ್ರಗಳನ್ನು ಅಕ್ಕ, ಅಣ್ಣ, ಅಯ್ಯ ಎಂದು ಸಂಬೋಧಿಸಿದರೂ ಅವರು ಶಿಕ್ಷಣ ಪಡೆದ ಅಥವಾ ನಗರ ಪ್ರದೇಶದ ಮೇಲ್ಜಾತಿಯ ಪಾತ್ರಗಳಿವೆ. ಹಳ್ಳಿಯ ಅನಕ್ಷರಸ್ಥ ಮೇಲ್ಜಾತಿಯ ಪಾತ್ರಗಳು ಕೆಲವೊಂದು ಬಾರಿ ಗೌರವಸೂಚಕಗಳನ್ನು ದಲಿತ ಪಾತ್ರಗಳಿಗೆ ಸಂಬೋಧಿಸುತ್ತಾರೆ. ಆದರೆ ಗೌರವ ಕೊಡಬೇಕೆಂಬ ಉದ್ದೇಶದಿಂದಲ್ಲ. ಮೇಲ್ಜಾತಿಯವರ ಕೆಲಸಗಳನ್ನು ಸಾಧಿಸಿಕೊಳ್ಳುವುದಕ್ಕಾಗಿ ಕೆಲವು ಸಂದರ್ಭದಲ್ಲಿ ದಲಿತ ಪಾತ್ರಗಳಿಗೆ ಗೌರವಸೂಚಕಗಳನ್ನು ಬಳಸಿದ್ದಾರೆ. ಉದಾಹರಣೆಗೆ ಪಡುವಾರಳ್ಳಿ ಪಾಂಡವರು ಚಲನಚಿತ್ರದಲ್ಲಿ 'ಸುಂದ್ರಿ' ಎಂಬ ದಲಿತ ಪಾತ್ರವನ್ನು ರಾಮಣ್ಣ ಮತ್ತು ಶಂಕರ ಎಂಬ ಮೇಲ್ಜಾತಿ ಪಾತ್ರಗಳು 'ಸುಂದ್ರಕ್ಕ' ಎಂದು ಗೌರವಸೂಚಕವಾಗಿ ಬಳಸುತ್ತಾರೆ. ರಾಮಣ್ಣ ಮತ್ತು ಶಂಕರ ಎಂಬ ಮೇಲ್ಜಾತಿ ಪಾತ್ರಗಳು ಶಿಕ್ಷಣ ಪಡೆದ ಪಾತ್ರಗಳಾಗಿವೆ. ಶಿಕ್ಷಣ ಪಡೆದ ಕಾರಣಕ್ಕಾಗಿ ಈ ರೀತಿ ಕೆಳಜಾತಿ ವ್ಯಕ್ತಿಗಳನ್ನು ಗೌರವದಿಂದ ಸಂಬೋಧಿಸುವುದಕ್ಕೆ ಸಾಧ್ಯವಾಗಿದೆ.

ಶಾಂತರಸ ಅವರ 'ಗೋದಾನ' ಕಥೆಯಲ್ಲಿ ಶಾಸ್ತ್ರೀ ಎಂಬ ಮೇಲ್ಜಾತಿ ಪಾತ್ರ ಕೆಳಜಾತಿ ಗಂಗಣ್ಣನನ್ನು 'ಗಂಗ್ಯಾ' ಎಂದು ಸಂಬೋಧಿಸುತ್ತಿರುತ್ತಾನೆ. ಆದರೆ ಹಸುವನ್ನು ದಾನ ಪಡೆಯುವ ಸಂಚನ್ನು ರೂಪಿಸಿದಾಗ "ನೋಡಪ್ಪಾ ಗಂಗಣ್ಣ ನಿನಗೆ ವ್ಯಾಳೆ ಬೇಸಿಲ್ಲ" (ನಾಯಕ ಡಿ.ಬಿ, ಕಥಾಸಂಗಮ, ಪುಟ-೧೯) ಎಂದು ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸುತ್ತಾನೆ. ಕೆಳಜಾತಿಯ ಗಂಗಣ್ಣನಿಗೆ ಗೌರವ ಕೊಡುವ ಉದ್ದೇಶದಿಂದ ಹಾಗೆ ಸಂಬೋಧಿಸುವುದಿಲ್ಲ. ತನ್ನ ಕೆಲಸ ಸಾಧಿಸಿಕೊಳ್ಳಲು ಆ ರೀತಿಯಾಗಿ ಸಂಬೋಧಿಸುತ್ತಾನೆ. ಕೆಳಜಾತಿ ವ್ಯಕ್ತಿಗಳಿಗೆ ಗೌರವ ಕೊಡಬಾರದೆಂಬ ಉದ್ದೇಶವೂ ಮೇಲ್ಜಾತಿಯವರ ಮನೋಧೋರಣೆಯಾಗಿರುತ್ತದೆ. ಈ ಕಾರಣಕ್ಕಾಗಿ ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಗೌರವಸೂಚಕ ಪದಗಳನ್ನು ಬಳಸಲು ನಿಷೇಧಿಸಲ್ಪಟ್ಟಿದೆ ಎಂದು ಹೇಳಬಹುದು. ಕೆಳಜಾತಿ ಪಾತ್ರಗಳಲ್ಲಿ ವಾರ್ಗಿಕಗಳಿಲ್ಲದ ಹೆಸರುಗಳೇ ಹೆಚ್ಚಾಗಿ ಕಂಡುಬರುತ್ತವೆ. ಉದಾಹರಣೆಗೆ ಸೇಸಿ, ಸಿದ್ದಿ, ಗಿಡ್ಡಿ, ರಂಗಿ, ಕಾಳಿ, ಮಲ್ಲಿ, ಸಾಕಿ, ಬೆಳ್ಳಿ, ಮಾರಿ, ಚೆನ್ನಿ, ಚಂದ್ರಿ, ನಂಜಿ, ದೇಯಿ, ತುಕ್ರಿ, ಬೂದಿ, ಕುಲ್ಡಿ, ಪಾರಿ ಇವು ಸ್ತ್ರೀ ವ್ಯಕ್ತಿನಾಮಗಳು. ಮೇಲ್ಜಾತಿ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವಾಗ 'ಇ' ಕಾರಂತ್ಯ ಮಾಡಿ ಏಕವಚನದಿಂದ ಸಂಬೋಧಿಸುತ್ತಾರೆ. ಕೆಳಜಾತಿಯ ಪುರುಷ ಪಾತ್ರಗಳ ಹೆಸರುಗಳು ಗಮನಿಸಿವುದಾದರೆ, ಉದಾಹರಣೆಗೆ ಐತ, ಪಿಜಿಣ, ಕುದುಕ, ಪಿಳ್ಳ, ಚೋಮ, ಬುಂಡ, ಹಲಗ, ಮಾದ, ಕರಿಯ, ಮುದ್ದ, ಜುಟ್ಟುಗ,

ಸತ್ತಿಗ, ಕೆರಗ, ಪೆತ್ರು, ಸಿಳ್ಳ, ತೌಡ, ಕೆಂಪ, ಅತಾರಿ, ದೊಳ್ಳ, ದೊಂಬ, ದುಗ್ಗ, ಸೈದ, ಬಸ್ಯಾ, ದುರ್ಗ್ಯಾ, ಕಲ್ಯಾ, ಚಂದ್ಯಾ ಇನ್ನೂ ಮುಂತಾದ ಕೆಳಜಾತಿಯ ಪುರುಷ ಪಾತ್ರಗಳ ವ್ಯಕ್ತಿನಾಮಗಳನ್ನು ಅಂತ್ಯ-ಅ,ಉ,ಯ, (ಬಸ್ಯಾ, ಕಲ್ಯಾ) ಕಾರಾಂತ್ಯಗೊಳಿಸಿ ಏಕವಚನದಲ್ಲಿ ಸಂಬೋಧಿಸುತ್ತಾರೆ. ಸಂಬೋಧನೆ ಮಾಡುವಾಗ ಸ್ತ್ರೀ ಪಾತ್ರಗಳ ಹೆಸರಿನ ಆದಿ ಅಂತ್ಯದಲ್ಲಿ ಲೇ, ಲೋ, ಏನೇ, ಬಾರೆ- ಮುಂತಾದ ಪದಗಳನ್ನು ಸೇರಿಸಿ ಕರೆಯುತ್ತಾರೆ. ಉದಾಹರಣೆಗೆ ಲೇ ಸೇಸಿ, ಏನೇ ಗಿಡ್ಡಿ, ಬೆಳ್ಳಿ ಬಾರೆ ಈ ರೀತಿಯಾಗಿ ಪದಗಳನ್ನು ಸೇರಿಸಿ ಸಂಬೋಧಿಸುತ್ತಾರೆ. ಪುರುಷ ಪಾತ್ರಗಳ ವ್ಯಕ್ತಿನಾಮಗಳಲ್ಲೂ ಲೇ, ಲೋ, ಏನೋ, ಬಾರಲೋ, ಬಾರಲೇ ಎಂಬ ಪದಗಳನ್ನು ಸೇರಿಸಿ ಸಂಬೋಧಿಸುತ್ತಾರೆ. ಉದಾಹರಣೆಗೆ ಲೇ ಐತ, ಲೋ ಪಿಜಿಣ, ಏನೋ ಕುದುಕ, ಪಿಳ್ಳ ಬಾರಲೇ, ಖುಂಡ ಬಾರಲೋ ಎಂದು ಕರೆಯುತ್ತಾರೆ.

ಈ ಪದಗಳು ವ್ಯಕ್ತಿಯನ್ನು ಗಮನ ಸೆಳೆಯಲು ಬಳಸುವಂತ ಪದಗಳು ಆದರೂ ಅಗೌರವಸೂಚಕ ಏಕವಚನ ಪದಗಳಾಗಿ ಕೆಲಸ ಮಾಡುತ್ತಿವೆ. ಕೆಳಜಾತಿ ಪಾತ್ರಗಳನ್ನು ಮೇಲ್ಜಾತಿ ಪಾತ್ರಗಳು ಈ ರೀತಿ ಕರೆದಂತೆ, ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಈ ಪದಗಳನ್ನು ಬಳಸಿ ಸಂಬೋಧಿಸಲು ಸಾಧ್ಯವಾಗುವುದಿಲ್ಲ. ಈ ಸಂದರ್ಭಕ್ಕೆ ಚಂದ್ರಶೇಖರ ಕಂಬಾರ ಅವರ 'ಭಾರತಾಂಬೆ' ನಾಟಕದಲ್ಲಿ ಕೆಳಜಾತಿಯ ರಾಮಕ್ಕನ ಸ್ವಗತದಲ್ಲಿ ಸಂಬೋಧನೆಗೆ ಸಂಬಂಧಪಟ್ಟ ಉದಾಹರಣೆಯನ್ನು ನೋಡಬಹುದು. 'ಅವರು' ಲೇ ಅನ್ನಬೇಕು. ನಾವು 'ಧಣೇರ' ಅನ್ನಬೇಕು. ಅವರು ಕಾಲಿಂದ ತೋರಿಸಿದ್ದನ್ನು ತಲ್ಯಾಗ ಹೊತ್ತ ಮಾಡಬೇಕು. ಹೆಚ್ಚು ಕಮ್ಮಿ ಆದರ ಕೂಲಿ ತಪ್ಪಸ್ತಾರ, ಊರ ಬಿಡಸ್ತಾರ ಅದಕ್ಕ ಅವರ ನಾಯೀ ಹಾಂಗ ಇರಬೇಕು. ಯಾಕಂದರ ನಾವು ಕಡಿಮಿಯವರು ನೋಡು"(ಚಂದ್ರಶೇಖರ ಕಂಬಾರ, ನೆಲಸಂಪಿಗೆ, ಪುಟ-೪೧೪) ಇದು ಕೆಳಜಾತಿಯವರನ್ನು ಮೇಲ್ಜಾತಿಯವರು ಹೇಗೆ ಸಂಬೋಧಿಸುತ್ತಾರೆ. ಮೇಲ್ಜಾತಿಯವರನ್ನು ಕೆಳಜಾತಿಯವರು ಹೇಗೆ ಸಂಬೋಧಿಸಬೇಕು ಎಂಬುದನ್ನು ಸೂಚಿಸುತ್ತದೆ. ಈ ನಾಟಕದಲ್ಲಿ ಬರುವ ಕೆಳಜಾತಿ ಮಹಿಳೆ ರಾಮಕ್ಕನನ್ನು ಮೇಲ್ಜಾತಿ ಶಾಸ್ತ್ರೀ 'ರಾಮೀ' ಎಂದೇ ಏಕವಚನದಲ್ಲಿ ಸಂಬೋಧಿಸುತ್ತಾನೆ. ರಾಮಕ್ಕಳಿಗಿಂತ ಚಿಕ್ಕವನಾಗಿದ್ದರೂ ಏಕವಚನದಲ್ಲಿ ಕರೆಯುತ್ತಾನೆ. ಆದರೆ ರಾಮಕ್ಕ ಮೇಲ್ಜಾತಿಯವರನ್ನು ಏಕವಚನದಲ್ಲಿ ಸಂಬೋಧಿಸುವಂತಿಲ್ಲ. ಈ ಉದಾಹರಣೆಯಿಂದ ಸಾಮಾಜಿಕ ಸ್ತರವಿನ್ಯಾಸ ಸಮಾಜದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಗಮನಿಸಬಹುದು.

ಹನೂರು ಚನ್ನಪ್ಪ ಅವರ 'ಬೆಲ್ಲದ ದೋಣಿ' ನಾಟಕದಲ್ಲಿ ಬರುವ ಕೆಳಜಾತಿ ವ್ಯಕ್ತಿ ಗಾಲೂರಯ್ಯನ ಪಾತ್ರದ ಮೂಲಕ ಸಂಬೋಧನೆಗೆ ಸಂಬಂಧಪಟ್ಟ ಹಾಗೆ ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು. ಕೆಳಜಾತಿ ವ್ಯಕ್ತಿಯಾದ ಗಾಲೂರಯ್ಯ ಮೇಲ್ಜಾತಿಯವರಿಂದ ನಾನು ಎರಡು ದಿನ ಆದ್ರು ಗೌರವದಿಂದ ಕರೆಸಿಕೊಳ್ಳಬೇಕು ಎಂಬ ಮಹಾದಾಸೆಯನ್ನು ಹೊತ್ತುಕೊಂಡಿರುತ್ತಾನೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಗೌರವದಿಂದ ಸಂಬೋಧಿಸುವುದೇ

ಇಲ್ಲ. ಏನು ಮಾಡಬೇಕು ಎಂದು ಯೋಚನೆ ಮಾಡಿ; ಕೊನೆಗೆ ಅಯ್ಯಪ್ಪ ಸ್ವಾಮಿ ಮಾಲೆಯನ್ನು ಹಾಕಿಕೊಂಡರೆ ಯಾರೇ ಆಗಲಿ 'ಸ್ವಾಮಿ' ಎಂದೇ ಸಂಬೋಧನೆ ಮಾಡಬೇಕು ಎಂದು ಯೋಚಿಸಿ ೫೦೦ ರೂಪಾಯಿ ಸಾಲ ಮಾಡಿ ಅಯ್ಯಪ್ಪ ಸ್ವಾಮಿಯ ಮಾಲೆಯನ್ನು ಹಾಕಿಕೊಂಡು ಬರುತ್ತಾನೆ. ಮುಂದಿನ ಪ್ರಸಂಗವನ್ನು ಈ ಕೆಳಗಿನಂತೆ ನೋಡಬಹುದು.

ಕೆಳಜಾತಿ ಪಾತ್ರಗಳಲ್ಲಿ ಗಂಡ – ಹೆಂಡತಿ ಮಾತನಾಡುವ ಸನ್ನಿವೇಶ :

ಗಾಲೂರಯ್ಯ : ಅವ್ರು ಹಿಂದ ಯಾನಂದಿದ್ರು ಅನ್ನೊದಲ್ಲ ಮುಖ್ಯ!

ಅಂಕಿ : ಅವ್ರು ಮುಂದ ಯಾನನ್ಬೇಕು ಅನ್ನೋದೆ ಮುಖ್ಯ ಮುಂದ ಯಾನನ್ಯೆಕ್ರು ಸ್ವಾಮಿ!

ಗಾಲೂರಯ್ಯ : (ಮೇಲ್ಜಾತಿಯ ಪಣಗಾರರನ್ನು ಕುರಿತು)

ಅವ್ರುವೇ ನನ್ನುನ್ನ 'ಸ್ವಾಮಿ' ಅನ್ಬೇಕು!

(ಏದುಸಿರಲಿ) ಅವ್ರುವೇ ನನ್ನುನ್ನ 'ಸ್ವಾಮಿ' ಅನ್ಬೇಕು

ನೀಮು ಯಾಗೇ ನನ್ಗ 'ಸ್ವಾಮಿ' ಅಂತ ಮರ್ಯಾದೆ ಮಾಡ್ತಿರೋ

ಹಾಗಿಯೇ ಮರ್ಯಾದೆ ಮಾಡಿ 'ಸ್ವಾಮಿ' ಅನ್ಬೇಕು!

(ಅಳುವೇ ಮಾತಾಗುತ್ತದೆ, ಮಾತು ಅಳುವಾಗುತ್ತದೆ ಹಾಗೆ ಹೇಳುವಾಗ ಗಾಲೂರಯ್ಯನವರ ಕೈಕಾಲು ಮಾತುಗಳು ನಡಗಾಡುತ್ತವೆ)

ಅವ್ರು ನಮ್ಮ ಪಣಗಾರ್ರು.....

ಕೂಗಾಗ ಕರಿಯಾಗ 'ಸ್ವಾಮಿ' ಅಂತನೇ ಕರಿಬೇಕು.

ಅದು ಇದು ಯೋಳಗ ಸ್ವಾಮಿ ಅಂತನೇ ಕರಿಬೇಕು

ಬನ್ನಿಸ್ವಾಮಿ.....ಕೊನ್ನಿ ಸ್ವಾಮಿ.....,

ನೆಡಿರಿ ಸ್ವಾಮಿ...., ಬುಡ್ರಿಸ್ವಾಮಿ.... ಅನ್ನದ ಕೇಳ್ಬೇಕು

ಮಾತ್ಮಾತ್ಗೂ 'ಸ್ವಾಮಿ, ಸ್ವಾಮಿ', ಅನ್ಬೇಕು

ಏಡೂ ದಿನವಾದ್ರೂ ಕೇಳಿ ಮನ್ಸು ಹಗ್ರ ಆಗ್ಬೇಕು

ಪಣಗಾರಿಂದ್ಲೆ 'ಸ್ವಾಮಿ' ಅನ್ನುಸ್ಕ ಸೂಲು ಬುಡ್ಬೇಕು!

(ಸಾವರಿಸಿಕೊಂಡು) ನಾನಾಗ್ಲೆಯಿಂದ ಯೋಳ್ತಿದ್ದಿ

ನಂದು ಬಯಕ, ಬಯಕ ಅಂತ,

ಅದು ಸ್ವಾಮಿಗ ವೋಗ ಬಯಕ

ಸ್ವಾಮಿ ಆಗೋ ಬಯಕ!

ಸ್ವಾಮಿ ಅನಿಸ್ಕೊಳ್ಳೊ ಬಯಕ

ತಪ್ಪೋ ಒಪ್ಪೋ.... ಸಾಲ ಮಾಡಿನಿ,

ಅಯ್ಯಪ್ಪ ಸ್ವಾಮಿ ಮಾಲಾ ಹಾಕುಸ್ಕಂದಿನಿ

ಸಾಲನ ನಾನೇ ತೀರುಸ್ತೀನಿ ಯಾನು ಅನ್ನಬ್ಯಾಡಿ

ಸ್ವಾಮಿ ಅನ್ನುಸ್ಕ ಬುಡ್ತೀನಿ,

ಜೀತ ಮುಗಿತಾನೆ ಇನ್ನೊಂದೊಸನೂ ಜೀತಕ್ಕಿದ್ದು ಸಾಲ ತೀರುಸ್ತೀನಿ" (ಹನೂರು ಚನ್ನಪ್ಪ, ಬೆಲ್ಲದ ದೋಣಿ, ಪುಟ-೩೯,೪೦). ಗಾಲೂರಯ್ಯನ ಬಯಕೆ ಏನೆಂದರೆ ಮೇಲ್ಜಾತಿಯವರಾದ ಪಣಗಾರರಿಂದ 'ಸ್ವಾಮಿ' ಅಂತ ಕರೆಸಿಕೊಳ್ಳಬೇಕು. ಏಕೆ ಗಾಲೂರಯ್ಯನಿಗೆ ಇಂತ ಬಯಕೆ ಹುಟ್ಟಿದೆ ಎಂದು ಸ್ವಲ್ಪ ಯೋಚನೆ ಮಾಡಿದರೆ ನಮ್ಮ ಸಮಾಜದಲ್ಲಿ ಮೇಲ್ಜಾತಿಯವರನ್ನು ಕೆಳಜಾತಿಯವರನ್ನು ದೊಡ್ಡದಾಗಲಿ, ಅವರಿಗಿಂತ ಚಿಕ್ಕವರಾಗಲಿ ಅವರು ಕೆಳಜಾತಿಯವರನ್ನು ಪೂರ್ತಿ ಹೆಸರಿಡಿದು ಅಥವಾ ಗೌರವ ಸೂಚಕಗಳನ್ನು ಬಳಸದೆ ಏಕವಚನದಲ್ಲಿ ಅವರ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಕರೆಯುವುದು ಸಾಮಾಜಿಕ ರೂಢಿ. ಇಲ್ಲಿ ಗಾಲೂರಯ್ಯನಿಗೆ ಎರಡು ದಿನವಾದರೂ ಮೇಲ್ಜಾತಿಯವರು ನನ್ನನ್ನು 'ಸ್ವಾಮಿ' ಅಂತ ಸಂಬೋಧಿಸಬೇಕು. ಅದಕ್ಕಾಗಿ ಸಾಲಮಾಡಿ ಅಯ್ಯಪ್ಪಸ್ವಾಮಿ ಮಾಲೆ ಹಾಕಿಸಿಕೊಳ್ಳುತ್ತಾನೆ. ಅಯ್ಯಪ್ಪಸ್ವಾಮಿ ಮಾಲೆ ಯಾರೇ ಹಾಕಿದರೂ ಅವರನ್ನು ಎಲ್ಲರೂ 'ಸ್ವಾಮಿ' ಎಂದೇ ಸಂಬೋಧಿಸಬೇಕು ಎಂಬುದು ಧಾರ್ಮಿಕ ನಂಬಿಕೆ. ಹಾಗಾಗಿ ಗಾಲೂರಯ್ಯ ಅಯ್ಯಪ್ಪಸ್ವಾಮಿ ಮಾಲೆ ಹಾಕಿಸಿಕೊಂಡು ಬರುತ್ತಾನೆ. ಅವನಿಗೆ ಒಂದೇ ಬಯಕೆ ನನ್ನನ್ನು ಮೇಲ್ಜಾತಿಯವರು ಗೌರವದಿಂದ ಸಂಬೋಧಿಸಬೇಕು. ಅದಕ್ಕಾಗಿ ಇನ್ನೊಂದು ವರ್ಷ ಜೀತ ಮಾಡಿದರೂ ಸರಿಯೇ ಎರಡು ದಿನವಾದರೂ ನಾನು 'ಸ್ವಾಮಿ' ಅನಿಸಿಕೊಳ್ಳಬೇಕು ಎಂಬ ದೊಡ್ಡ ಬಯಕೆ ಗಾಲೂರಯ್ಯನದು. ನಾಟಕಕಾರರು ಸಮಾಜದ ವಾಸ್ತವವನ್ನು ಸೂಕ್ಷ್ಮವಾಗಿ ಈ ನಾಟಕದಲ್ಲಿ ಚಿತ್ರಿಸಿದ್ದಾರೆ. ಚರಿತ್ರೆಯುದ್ದಕ್ಕೂ ಕೆಳಜಾತಿಯವರನ್ನು ಮೇಲ್ಜಾತಿಯವರು ಏಕವಚನದಿಂದ ಸಂಬೋಧಿಸುತ್ತಲೇ ಬಂದಿದ್ದಾರೆ. ಆದುದರಿಂದ ಇದು ಗಾಲುರಯ್ಯನ ಸ್ಥಿತಿ ಮಾತ್ರವಲ್ಲ ಕೆಳಜಾತಿ ವ್ಯಕ್ತಿಗಳ ವಾಸ್ತವ ಸ್ಥಿತಿ. ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸಕ್ಕೆ ಇದು ಉತ್ತಮ ಉದಾಹರಣೆ ಎಂದೇ ಹೇಳಬಹುದು.

ಇದೇ ಲೇಖಕರ 'ಅನ್ನ' ಕಥೆಯಲ್ಲಿ ಕೆಳಜಾತಿ ವ್ಯಕ್ತಿ 'ಚಿಕ್ಣಿಂಗ' ತನ್ನ ಕುಟುಂಬ ಸಮೇತರಾಗಿ ಜಾತ್ರೆಗೆ ಹೋದಾಗ ಅಲ್ಲಿನ ವ್ಯಾಪಾರಸ್ಥರು ಚಿಕ್ಣಿಂಗನಿಗೆ ಬನ್ನಿ, ಬನ್ನಿ 'ಗೌಡ್ರೆ' ಎಂಬ ಗೌರವ ಸೂಚಕಗಳನ್ನು ಬಳಸಿ ಸಂಬೋಧಿಸಿದ್ದಕ್ಕೆ ಚಿಕ್ಣಿಂಗನ ಮಗ ಮತ್ತು ಹೆಂಡತಿಗೆ ಆಶ್ಚರ್ಯ ಮತ್ತು ಸಂತೋಷ ಆಗುತ್ತದೆ. ಇಲ್ಲಿನ ಸನ್ನಿವೇಶವನ್ನು ಉದಾಹರಣೆಯಾಗಿ ನೋಡಬಹುದು.

"ವರುಷದಿಂದ ವರುಷಕ್ಕೆ ಜನ ಜಾಸ್ತಿಯಾಗುತ್ತಿರುವುದೆಲ್ಲಾ ಮಾದೇಶ್ವರನ ಮಾಯೆ ಎಂದುಕೊಂಡ ಚಿಕ್ಕಿಂಗ, ಶಿವರಾತ್ರಿ ಜಾತ್ರೆಯ ಜನಜಂಗುಳಿ ನಡುವೆ ಹೆಂಡ್ತಿ ಮಗನನ್ನು ಕರೆತರುತ್ತಿದ್ದಾಗ ಅಂಗಡಿ ಮೂಂದಿದ್ದವನೊಬ್ಬ ಬನ್ನಿ ಸಾರ್..... ಏನ್ಬೇಕು ಸಾರ್? ಎಂದು ಬೆರಗು ಹುಟ್ಟಿಸಿದನು. ಆಗ ಹೊಯ್ತಾ ಇದ್ದ ಚಿಕ್ಕಿಂಗನಾದರೂ ಒಂದು ಕ್ಷಣ ಅಲ್ಲಿಯೇ ನಿಂತು, ತಲಾ ಅಲ್ಲಾಡಿಸಿ ಪುನ ಮುಂದುಕ್ಕ ಸಾಗಿದರೆ, ಅಪ್ಪನ ಕೈ ಹಿಡಿದು ಬರುತ್ತಿದ್ದ ಮಾದೇವ ಅಕುಡಾ..... ನಮ್ಮಪ್ಪನ ಇಲ್ಲಿ ಸಾರ್ ಅನ್ಕಂದೆ ಮಾತಾಡುಸ್ತಾರ.... ಎಂದು ಖುಷಿಪಟ್ಟನು. ಸಿವಿಯಾದರೂ ತನ್ನ ಗಂಡನ್ಗ ಇಷ್ಟು ಮರ್ಯಾದೆ ಕೊಟ್ಟು ಮಾತಾಡಿಸ್ದವನ ಅಂಗ್ಡೀಲಿ ಏನಾದ್ರೂ ಸಾಮಾನು ತಕಳ್ದೆ ಬುಡಕಾದದ? ಎಂದು ಪಣತೊಟ್ಟಂತೆ ಕಂಡಳು. ಆದರೆ ಅಷ್ಟೇಲ್ಲಾ ಅಂಗಡಿಗಳಿದ್ದ ಆ ಹಾದಿಯಲ್ಲಿ ಮುಂದು ಮುಂದುಕ್ಕೆ ಹೊಯ್ತಾ ಹೊಯ್ತಾ ಅಚ್ಚರಿಚ್ಚರಿಗೆ ಒಂದು ಒಂದು ಸಲ ತಿರುಗಿ ನೋಡಿದ್ರೂ ಸಾಕು ಸಾರ್ ಬನ್ನಿ ಸಾರ್.... ಏನ್ಬೇಕು ಸಾರ್...ಎಂತಲೂ, ಬನ್ನಿ 'ಗೌಡ್ರೆ'... ಏನ್ಬೇಕು ಗೌಡ್ರೆ... ಏನ್ಬೇಕು ತಾಯಿ.. ಯಾವುದ್ ತಕ್ಕಂದ್ರೂ ಬರಿ ಹತ್ತೇ ರೂಪಾಯಿ ಎಂದೆಲ್ಲಾ ಕೂಗಿ ಕರೆಯುತ್ತ ಹೋಗು ಬರುವವರನ್ನು ಏನಾದರೂ ತೆಗೆದುಕೊಳ್ಳಲೆಂದು ನೈಸು ಮಾಡುತ್ತಿದ್ದರು. (ಫಕೀರ್ ಮಹಮದ್ ಕಟ್ಪಾಡಿ, ಕೃಷ್ಣಮೂರ್ತಿ ಹನೂರು(ಸಂ), ಕನ್ನಡದ ಮೂವತ್ತು ಕಥೆಗಳು, ಪುಟ–೨೪೬)

ಈ ಮೇಲಿನ ಉದಾಹರಣೆಯಲ್ಲಿ ಮುಖ್ಯವಾಗಿ ಸಾರ್, ಗೌಡ್ರೆ, ತಾಯಿ ಎಂಬ ಗೌರವ ಸೂಚಕಗಳನ್ನು ಕೆಳಜಾತಿ ವ್ಯಕ್ತಿಗಳಿಗೆ ಬಳಸಿದ್ದಾರೆ. ಆದರೆ ಅಲ್ಲಿನ ವ್ಯಾಪಾರಸ್ಥರಿಗೆ ಇವರ ಜಾತಿ ಯಾವುದು ಎಂದು ತಿಳಿದಿಲ್ಲ. ಆ ಸ್ಥಳದಲ್ಲಿ ಅವರಿಗೆ ಜಾತಿ ಮುಖ್ಯವಲ್ಲ. ವ್ಯಾಪಾರ ಅಷ್ಟೇ ಮುಖ್ಯವಾದದ್ದು. ತಮ್ಮ ಊರಿನ ಮನೆಯ ಪರಿಸರದಲ್ಲಾಗಿದ್ದರೆ ಇವರು ಕೆಳಜಾತಿಯವರೆಂದು ತಿಳಿದಿದ್ದ ಪಕ್ಷದಲ್ಲಿ ಸೂತಕ. ಈ ರೀತಿ ಗೌರವ ಸಂಬೋಧನೆ ಬಳಸಲು ಖಂಡಿತ ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಬಹುದು. ಈ ಉದಾಹರಣೆಯನ್ನು ಆರ್ಥಿಕ ಮತ್ತು ಸಾಮಾಜಿಕ ಎರಡು ದೃಷ್ಟಿಕೋನಗಳಿಂದ ನೋಡುವ ಅವಶ್ಯಕತೆಯಿದೆ. ಚಿಕ್ಕಿಂಗನಾಗಲಿ, ಹೆಂಡತಿ ಸಿವಿಯಾಗಲಿ ಮತ್ತು ಮಗ ಮಾದೇವನಾಗಲಿ ಯಾವತ್ತು ಅವರ ಪರಿಸರದಲ್ಲಿ ಗೌರವ ಸಂಬೋಧನೆಗೆ ಒಳಪಟ್ಟವರಲ್ಲ. ಊರಲ್ಲಿ ಅವರ ಸಮುದಾಯದವರನ್ನು ಹೊರತುಪಡಿಸಿ ಬೇರೆ ಯಾರು ಗೌರವ ಸಂಬೋಧನೆಗಳನ್ನು ಇವರಿಗೆ ಬಳಸಿಲ್ಲ. ಆದರೆ ಜಾತ್ರೆಯಲ್ಲಿ ಸಾರ್, ಗೌಡ್ರೆ, ತಾಯಿ ಎಂದು ಸಂಬೋಧಿಸಿದ್ದು ಅವರಿಗೆ ಆಶ್ಚರ್ಯ ಮತ್ತು ಸಂತೋಷವನ್ನುಂಟು ಮಾಡುತ್ತದೆ. ಏಕೆ ಕೆಳಜಾತಿಯವರಿಗೆ ಆಶ್ಚರ್ಯ ಮತ್ತು ಸಂತೋಷ ಉಂಟಾಗುತ್ತದೆ ಎಂದರೆ ಸಮಾಜದಲ್ಲಿ ಕೆಳಜಾತಿಯವರನ್ನು ಬೇರೆ ಯಾವ ಸಮುದಾಯದವರು ಗೌರವದಿಂದ ಸಂಬೋಧಿಸುವ ಸಂದರ್ಭಗಳು ತುಂಬಾ ವಿರಳ. ಇದು ಅವರಿಗೆ ಒಂದು ರೀತಿ ಹೊಸದಾಗಿ ಕಂಡಿತು. ನಮ್ಮನು ಕೂಡ ಗೌರವದಿಂದ ಮಾತನಾಡಿಸುತ್ತಾರಲ್ಲ ಎಂದು ಖುಷಿಪಡುತ್ತಾರೆ.

ಇದು ಸಾಮಾಜಿಕ ದೃಷ್ಟಿಕೋನ. ನೋಡುವುದಾದರೆ ಆರ್ಥಿಕ ದೃಷ್ಟಿಕೋನದಿಂದ ಜಾತ್ರೆಯಲ್ಲಿ ವ್ಯಾಪಾರದ ಭಾಷೆಯಾಗಿದೆ. ವ್ಯಾಪಾರದ ದೃಷ್ಟಿಕೋನದಿಂದ ಅವರು ಎಲ್ಲರನ್ನೂ ಗೌರವದಿಂದಲೇ ಮಾತನಾಡಿಸುತ್ತಾರೆ. ಈ ಸಂದರ್ಭವನ್ನು ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನದಿಂದ ನೋಡಬಹುದು. ಈ ಎರಡು ನೆಲೆಯಿಂದಲೂ ಈ ಪ್ರಸಂಗವನ್ನು ನೋಡಲು ಸಾಧ್ಯವಿದೆ.

ಶಿಕ್ಷಣ ಪಡೆದ ಪ್ರಜ್ಞಾವಂತರಲ್ಲಿ ಸಂಬೋಧನೆಗೆ ಸಂಬಂಧಪಟ್ಟ ಗ್ರಹಿಕೆ ಏನಾಗಿದೆ ಎಂಬುದನ್ನು ದೇವಕಿ ಎಂ. ಶೆಟ್ಟಿ ಅವರ 'ಜಾತಿಭೂತಕ್ಕೆ ಬಲಿ' ಎಂಬ ಕಥೆಯೊಳಗೆ ಬರುವ ಸನ್ನಿವೇಶವನ್ನು ನೋಡಬಹುದು. ಮೇಲ್ಜಾತಿ ಸಖೂ ಎಂಬ ಮಹಿಳೆ ಶಿಕ್ಷಣ ಪಡೆದ ಪ್ರಜ್ಞಾವಂತೆ. ಕೆಳಜಾತಿಯ ಹಿರಿಯರಾದ ದೂಮ, ಚೆನ್ನಿ ಅವರ ಸ್ನೇಹಿತೆಯಾಗಿರುತ್ತಾಳೆ. ದೂಮ ಮತ್ತು ಸಖೂ ಅವರ ನಡುವೆ ನಡೆಯುವಂತ ಸನ್ನಿವೇಶ ಈ ಕೆಳಗಿನಂತಿದೆ.

> "ದೂಮ ನನಗೊಂದು ಮಾತು ಕೊಡುವೆಯಾ? ಬೇಡಿದಳು ಸಖೂ
>
> ಏನು ತಾಯೀ ಹೇಳಿ ನಿಮ್ಮ ಮಾತಿಗೆ ಪ್ರತಿಯಿಲ್ಲ. ಇದು ಸತ್ಯ"
>
> "ಹಾಗಾದರೆ ನನ್ನನ್ನು ಇನ್ನು ಮುಂದೆ 'ಸಖೂ' ಎಂದು ಏಕವಚನದಲ್ಲಿಯೇ
>
> ಸಂಬೋಧಿಸುವೆಯಾ? ಅದೇ ನನಗೆ ಶ್ರೇಯಸ್ಸು ದೂಮ ನೀನು ನನ್ನ
>
> ತಂದೆಯವರ ಪ್ರಾಯದವ; ಹಿರಿಯ.
>
> (ಮನಸ್ಸು ಒಪ್ಪದು. ಚೆನ್ನಿಗೆ ಎಷ್ಟಕ್ಕೂ ಮನಸ್ಸು ಒಡಂಬಡದು) ಇದೇನು

ತಾಯೀ ಇದು ಸಾಧ್ಯವಿಲ್ಲದ ಮಾತು. ಹಾಗಾದರೆ ಕೊಟ್ಟ ಮಾತನ್ನು ಹಿಂದೆಗೆಯುವೆಯಾ?

> ಈಗಲೇ ಹೇಳಿ. ಸಖೂ, ಮಗಳೇ ಎಂದು.
>
> ಆಯಿತು ಸಖೂ, ಮಗಳೇ. ನಿನ್ನ ಇಷ್ಟ ಅದಕ್ಕೆ
>
> ಪ್ರತಿ ಹೇಳಲು ನಾನ್ಯಾರು ತಾಯೀ ಎಂದ ದೂಮ"(ಉಷಾ ಪಿ ರೈ ಕೆ,

(ಪ್ರ.ಸಂ), ಲೇಖಕಿಯರ ಸಣ್ಣ ಕಥೆಗಳು ಭಾಗ-೨, ಪುಟ-೧೯೦).

ಈ ಮೇಲಿನ ಉದಾಹರಣೆಯನ್ನು ನೋಡಿದಾಗ ಸಖೂ ಸಮಾಜದಲ್ಲಿರುವ ಜಾತಿಯ ಏಣಿಶ್ರೇಣಿ ವ್ಯವಸ್ಥೆಯನ್ನು ಮೀರುತ್ತಾಳೆ, ಜಾತಿಯತೆಯನ್ನು ನಂಬದೆ ಮೌಢ್ಯತೆಯನ್ನು ತಿರಸ್ಕರಿಸುತ್ತಾಳೆ. ಜಾತಿಯತೆಯನ್ನು ಮತ್ತು ಅಸ್ಪೃಶ್ಯತೆಯನ್ನು ಆಚರಣೆ ಮಾಡುವುದಿಲ್ಲ. ಎಲ್ಲರೂ ಸಮಾನರೂ ಎಂಬ ಆಶಯವನ್ನು ಹೊಂದಿದವಳು. ಹಾಗೆಯೇ ದಲಿತರನ್ನು ಮತ್ತು ಹಿರಿಯರನ್ನು ಗೌರವದಿಂದ ಕಾಣುತ್ತಾಳೆ. ಅವಳು ಮೇಲ್ಜಾತಿಯವಳಾದ ಕಾರಣಕ್ಕೆ ಅವರಿಗಿಂತ ಸಖೂ ಚಿಕ್ಕವಳಾಗಿದ್ದರೂ ಅವಳನ್ನು ಕೆಳಜಾತಿಯ ದಲಿತರಾದ ದೂಮ ಮತ್ತು ಚೆನ್ನಿ ಇಬ್ಬರೂ ಸಖೂಗೆ ದತ್ತೀ, ಅಮ್ಮ, ತಾಯಿ ಎಂದು ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ.

'ನೀವು' ಎಂಬ ಬಹುವಚನದಿಂದ ಮಾತನಾಡಿಸುತ್ತಾರೆ. ಅವರಿಗಿಂತ ಚಿಕ್ಕವಳಾಗಿದ್ದರೂ ಅವಳ ಹೆಸರಿಡಿದು ಮಾತನಾಡಿಸುವುದಿಲ್ಲ. ಇದು ಸಖೂಗೆ ಇರಿಸು ಮುರಿಸು ಆಗುತ್ತದೆ. ಅದಕ್ಕೆ ಅವಳು ನನ್ನನ್ನು ಏಕವಚನದಿಂದ ಮತ್ತು ಹೆಸರಿಡಿದು ಮಾತನಾಡಿಸಿ ತಮ್ಮ ಮಗಳಂತೆ ಎಂದು ಹೇಳುತ್ತಾಳೆ. ಅದರೂ ಇದನ್ನು ಒಪ್ಪುವ ಮನಸ್ಥಿತಿ ದೂಮ ಮತ್ತು ಚೆನ್ನಿಗೆ ಇಲ್ಲ. ಮೇಲ್ಜಾತಿಯುವರನ್ನು ಏಕವಚನದಿಂದ ಸಂಬೋಧಿಸುವುದು ಅಪರಾಧ ಎಂಬಂತೆ ಕೆಳಜಾತಿಯವರನ್ನು ನಂಬಿಸಲಾಗಿದೆ. ಈ ರೀತಿ ಸಖೂ ಚಿಂತನೆಯಲ್ಲಿ ಬದಲಾಗುವುದಕ್ಕೆ ಕಾರಣ ಅವಳು ಪಡೆದ ಶಿಕ್ಷಣದ ಪ್ರಭಾವ ಎಂದು ಹೇಳಬಹುದು.

ಆದರೆ ಇನ್ನೊಂದು ನೆಲೆಯಲ್ಲಿ ನೋಡುವುದಾದರೆ ದೂಮನಿಗೆ ನೀನು ನನ್ನ ಏಕವಚನದಿಂದ ಮಾತನಾಡಿಸು, ನೀನು ನನ್ನ ತಂದೆಯ ಸಮಾನ ಎಂದು ಹೇಳುತ್ತಾಳೆ. ಆದರೆ ಅವಳು ಮಾತ್ರ ದೂಮ ಮತ್ತು ಚೆನ್ನಿಯನ್ನು ಹೆಸರಿಡಿದು ಏಕವಚನದಲ್ಲಿಯೇ ಮಾತನಾಡಿಸುತ್ತಾಳೆ. ಮೇಲ್ಜಾತಿಯ ಕಿರಿಯಳಾದ ಸಖೂ ಎಂಬ ಹುಡುಗಿಯನ್ನು ಹೆಸರಿಡಿದು ಏಕವಚನದಲ್ಲಿ ಮಾತನಾಡಿಸುತ್ತಿದ್ದು, ಮೇಲ್ಜಾತಿಯವರು ಸೃಷ್ಟಿಸಿದ ನಿಷೇಧದ ಮಾದರಿಯನ್ನು ಈ ಕಥೆಯಲ್ಲಿ ಮುರಿದಿರುವುದು ಸಮಾಜದ ಉತ್ತಮ ಬೆಳವಣಿಗೆ ಎಂದೇ ಹೇಳಬಹುದು. ಆದರೆ ಮೇಲ್ಜಾತಿಯ ಕಿರಿಯ ಮಹಿಳೆ ಕೆಳಜಾತಿಯ ಮಾತನಾಡಿಸಿದ್ದರೆ ಸಾಮಾಜಿಕ ಸ್ತರವಿನ್ಯಾಸ ಬೇರೆಯೇ ಆಗುತಿತ್ತು. ಕೆಳಜಾತಿಯ ಹಿರಿಯರು ಒಂದು ನಿಯಮವನ್ನು ಮೀರಿದಂತೆ ಆಗುತಿತ್ತು. ಅಂದರೆ ಇಲ್ಲಿ ಕೆಳಜಾತಿಯ ಹಿರಿಯರು ಮೇಲ್ಜಾತಿ ಕಿರಿಯರನ್ನು ಬಹುವಚನದಲ್ಲಿ ಮಾತನಾಡಿಸುತ್ತಾರೆ ಎಂಬ ನಿಯಮವನ್ನು ಮೀರಲಾಗಿದೆ. ಆದರೆ ಮೇಲ್ಜಾತಿ ಕಿರಿಯರು ಕೆಳಜಾತಿ ಹಿರಿಯರನ್ನು ಹೆಸರಿಡಿದು ಏಕವಚನದಲ್ಲಿ ಮಾತನಾಡಿಸುತ್ತಾರೆ ಎಂಬ ನಿಯಮವನ್ನು ಇಲ್ಲಿ ಮೀರಲು ಸಾಧ್ಯವಾಗಿಲ್ಲ. ಈ ಸಾಮಾಜಿಕ ನೆಲೆ ಹಾಗೆಯೇ ಉಳಿದಿರುವುದು ಕಾಣುತ್ತದೆ.

ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಗೌರವ ಸೂಚಕ ಪದಗಳನ್ನು ಬಳಸಿ ಸಂಬೋಧಿಸಿರುವ ಸಂದರ್ಭಗಳಿವೆ. ಪಡುವಾರಳ್ಳಿ ಪಾಂಡವರು ಚಲನಚಿತ್ರದಲ್ಲಿ ಶಿಕ್ಷಣ ಪಡೆದ ರಾಮಣ್ಣ ಮತ್ತು ಶಂಕರ ಮೇಲ್ಜಾತಿ ಪಾತ್ರಗಳು ; ಸುಂದ್ರಿ ಎಂಬ ಕೆಳಜಾತಿಯ ಪಾತ್ರವನ್ನು ಸುಂದ್ರಕ್ಕ ಎಂದು ಗೌರವದಿಂದ ಸಂಬೋಧಿಸುತ್ತಾರೆ. ಹಾಗೆಯೇ ಎಸ್.ಎಲ್. ಭೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಶಿಕ್ಷಣ ಪಡೆದ ಸತ್ಯಭಾಮ ಮೇಲ್ಜಾತಿ ಪಾತ್ರ, ಬೆಟ್ಟಯ್ಯ ಎಂಬ ಕೆಳಜಾತಿ ಪಾತ್ರವನ್ನು ಬೆಟ್ಟಯ್ಯನವರೇ ಎಂದು ಗೌರವಸೂಚಕ ಬಳಸಿ ಸಂಬೋಧಿಸುತ್ತಾಳೆ. ಇನ್ನೂ ಶಿಕ್ಷಣ ಪಡೆಯದ ಮೇಲ್ಜಾತಿ ಪಾತ್ರಗಳು ಸಹ ಕೆಲವೊಮ್ಮೆ ಕೆಳಜಾತಿ ಪಾತ್ರಗಳನ್ನು ಗೌರವಸೂಚಕಗಳನ್ನು ಬಳಸಿ ಸಂಬೋಧಿಸಿರುವ ಸಂದರ್ಭಗಳಿವೆ. ಉದಾಹರಣೆಗೆ ಮುನಿಯನ ಮಾದರಿ ಚಲನಚಿತ್ರದಲ್ಲಿ ಮೇಲ್ಜಾತಿ ಪಾತ್ರವಾದ ದೊಡ್ಡೇಗೌಡ್ರು,

ಕೆಳಜಾತಿ ಪಾತ್ರವಾದ ಕೆಂಚವ್ವನನ್ನು 'ಕೆಂಚಕ್ಕ' ಎಂದು ಸಂಬೋಧಿಸುತ್ತಾರೆ. ಇದೇ ರೀತಿಯ ಇನ್ನೊಂದು ಉದಾಹರಣೆ ಶಾಂತರಸರ ಗೋದಾನ ಕಥೆಯಲ್ಲಿ ಮೇಲ್ಜಾತಿಯ ಶಾಸ್ತ್ರೀ ಕೆಳಜಾತಿಯ 'ಗಂಗ್ಯಾ'ನನ್ನು ಗಂಗಣ್ಣ ಎಂದು ಒಂದು ಸಂದರ್ಭದಲ್ಲಿ ಮಾತನಾಡಿಸುತ್ತಾನೆ. ಈ ಉದಾಹರಣೆಗಳಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ ಕೆಳಜಾತಿ ಪಾತ್ರಗಳಿಗೆ ಗೌರವ ಕೊಡಬೇಕು ಎಂಬ ಉದ್ದೇಶದಿಂದ ಗೌರವಸೂಚಕ ಪದಗಳನ್ನು ಬಳಸುವುದಿಲ್ಲ. ತಾವು ಅಂದುಕೊಂಡ ಕೆಲಸ ಮತ್ತು ಅವರಿಂದ ಪಡೆಯಬೇಕಾದ ಕೆಲಸ ಕೈ ತಪ್ಪಿ ಹೋಗಬಾರದು ಎಂಬ ಉದ್ದೇಶದಿಂದ 'ಅಕ್ಕ', 'ಅಣ್ಣ' ಎಂಬ ಗೌರವ ಸೂಚಕಗಳನ್ನು ಕೆಳಜಾತಿ ಪಾತ್ರಗಳಿಗೆ ಬಳಸಿರುವುದಾಗಿದೆ.

ಈ ರೀತಿಯಾಗಿ ಕೆಳಜಾತಿ ಪಾತ್ರಗಳಿಗೆ ಮೇಲ್ಜಾತಿ ಪಾತ್ರಗಳು ಗೌರವ ಸಂಬೋಧನೆಗಳನ್ನು ಬಳಸಿರುವುದನ್ನು ಕಾಣಬಹುದು. ಸಂಬೋಧನೆಯಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಗೌರವಸೂಚಕ ಬಹುವಚನದಲ್ಲಿ ಸಂಬೋಧಿಸಿರುವುದು ಮತ್ತು ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಹೆಸರಿಡಿದು ಏಕವಚನದಲ್ಲಿ ಮಾತನಾಡಿಸಿರುವುದು, ಹಾಗೂ ಶಿಕ್ಷಣ ಪಡೆದ ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ಪಾತ್ರಗಳನ್ನು ಬಹುವಚನದಲ್ಲಿ ಸಂಬೋಧಿಸಿರುವ. ಹಿನ್ನೆಲೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗಿದೆ.

ಕೆಲವು ಪ್ರಾತಿನಿಧಿಕ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳಲ್ಲಿ ದೊರೆತ ಉದಾಹರಣೆಗಳ ಮೂಲಕ ಮುಂದೆ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸಂಬೋಧನೆ, ಕೆಳಜಾತಿಯವರು ಕೆಳಜಾತಿಯವರನ್ನು, ಮೇಲ್ಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸಿರುವ ನೆಲೆಗಳನ್ನು ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಲಿಂಗ, ವಯಸ್ಸು, ಶಿಕ್ಷಣ ಈ ಮೂಲಕ ಚರ್ಚಿಸಲಾಗಿದೆ.

೩.೧.೧. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಸಂಬೋಧಿಸುವ ಕ್ರಮ

ಸಮಾಜದಲ್ಲಿ ಸಾಮಾನ್ಯವಾಗಿ ಕೆಳಜಾತಿಯವರು ಹಿರಿಯರಾಗಲಿ, ಕಿರಿಯರಾಗಲಿ, ಮಹಿಳೆಯರಾಗಲಿ, ಪುರುಷರಾಗಲಿ ಮೇಲ್ಜಾತಿಯವರಿಗೆ ಗೌರವಸೂಚಕ ಪದಗಳನ್ನು ಬಳಸಿ ಬಹುವಚನದಿಂದಲೇ ಸಂಬೋಧಿಸುತ್ತಾರೆ. ಉದಾಹರಣೆಗೆ ಒಡೆಯ, ಒಡತಿ, ಗೌಡರೇ, ಗೌಡ್ತಿ, ಧಣಿಯರೇ, ಅಯ್ಯಾರೇ, ಅಮ್ಮಾರೇ, ಬುದ್ಧಿ ತಂದೆ, ಸಾಹುಕಾರ್ರೆ, ಸ್ವಾಮಿ, ದತ್ತೀ, ಬಾಣಾರೆ ಮುಂತಾದ ಪದಗಳನ್ನು ಬಳಸಿ ಸಂಬೋಧಿಸುತ್ತಾರೆ. ಇಲ್ಲಿ ಸಾಮಾಜಿಕ ಭಿನ್ನಾಂಶಗಳಾದ ಜಾತಿ ಮತ್ತು ಲಿಂಗವನ್ನು ಮುಖ್ಯವಾಗಿಟ್ಟುಕೊಂಡ ಚರ್ಚಿಸಲಾಗಿದೆ. ಕೆಳಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸುವ ಕ್ರಮ, ಮೇಲ್ಜಾತಿಯವರು ಕೆಳಜಾತಿಯವರನ್ನು, ಕೆಳಜಾತಿಯವರು ಕೆಳಜಾತಿಯವರನ್ನು, ಮೇಲ್ಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸುವ

ಕ್ರಮಗಳನ್ನು ಕೆಲವು ಪ್ರಾತಿನಿಧಿಕ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳಲ್ಲಿ ದೊರೆತಿರುವ ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ. ಇವುಗಳ ಮೂಲಕ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗುತ್ತದೆ.

೩.೧.೧.೧. ಕೆಳಜಾತಿ ಪುರುಷ ಪಾತ್ರಗಳು ಮೇಲ್ಜಾತಿ ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕೆಳಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸುವಾಗ ಗೌರವಸೂಚಕ ಪದಗಳನ್ನು ಬಳಸಿ ಬಹುವಚನದಿಂದಲೇ ಸಂಬೋಧಿಸುತ್ತಾರೆ. ಕೆಳಜಾತಿ ಪುರುಷ ಮೇಲ್ಜಾತಿ ಪುರುಷನನ್ನು ಸಂಬೋಧಿಸುವಾಗ ಒಡೆಯ, ಒಡತಿ, ಗೌಡ್ರೇ, ಗೌಡ್ತಿ, ಧಣಿ, ಸ್ವಾಮಿ, ಅಯ್ಯ, ಅಪ್ಪ ಬುದ್ಧಿ ತಂದೆ, ಸಾಹುಕಾರ್ರೆ ಎಂದು ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಅವರ ತಮ್ಮ ಅಥವಾ ಮಕ್ಕಳಿದ್ದರೆ ಚಿಕ್ಕಧಣಿ, ಚಿಕ್ಕಗೌಡ್ರೆ ಎಂದು ಕೆಳಜಾತಿಯವರು ಮೇಲ್ಜಾತಿ ಪುರುಷನನ್ನು ಸಂಬೋಧಿಸುತ್ತಾರೆ. ಈ ಸಂಬೋಧನೆಯ ಅಭಿವ್ಯಕ್ತಿಯ ಕ್ರಮ ಕೆಲವು ಪ್ರಾತಿನಿಧಿಕ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳ ಮೂಲಕ ಹೇಗೆ ಅಭಿವ್ಯಕ್ತಿಗೊಂಡಿದೆ ಎಂಬುದನ್ನು ಉದಾಹರಣೆಗಳ ಮೂಲಕ ನೋಡಬಹುದು.

ಕುವೆಂಪು ಅವರ **'ಮಲೆಗಳಲ್ಲಿ ಮದುಮಗಳು'** ಕಾದಂಬರಿಯಲ್ಲಿ ಬರುವ ಕೆಳಜಾತಿ ಪಾತ್ರವಾದ ಗುತ್ತಿ ಮತ್ತು ಮೇಲ್ಜಾತಿ ಪಾತ್ರವಾದ ಮುಕುಂದಯ್ಯ ಇಬ್ಬರ ನಡುವೆ ನಡೆಯುವ ಸಂಬೋಧನೆಯ ಸನ್ನಿವೇಶ ಈ ಕೆಳಗಿನಂತಿದೆ.

"ಏನ್ರಯ್ಯ ಚಿಟ್ಬಿಲ್ಲು ಹಿಡ್ಕಂಡು ಷಿಕಾರಿಗೆ ಹೊಲ್ಟ್‌ಬಿಟ್ಟೀರಲ್ಲಾ?
ಕೋವಿನಾದ್ರೂ ತರಬೈದಿತ್ತಲ್ಲಾ!"

"ಏನು? ಎತ್ತಮುಖ ಹೊರಡ್ತು ಗುತ್ತಿ ಸವಾರಿ?"

"ಈಲ್ಲೇ ಹಳೇಮನೀಗೆ ಹೋಗ್ತೀನಿ....."

"ಸಿಂಬಾವಿಯಿಂದ ಬಂದೆಯೇನೋ" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೩೦) ಎಂದು ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿಗಳ ನಡುವೆ ಸಂಭಾಷಣೆ ನಡೆಯುತ್ತದೆ. ಇಲ್ಲಿ ಕೆಳಜಾತಿ ವ್ಯಕ್ತಿ ಗುತ್ತಿ ಮತ್ತು ಮೇಲ್ಜಾತಿ ಮುಕುಂದಯ್ಯನನ್ನು 'ಏನ್ರಯ್ಯ' ಎಂದು 'ಅಯ್ಯ' ಎಂಬ ಗೌರವ ಸೂಚಕ ಪದ ಬಳಸಿ ಸಂಬೋಧಿಸುತ್ತಾನೆ. ಮೇಲ್ಜಾತಿ ಮುಕುಂದಯ್ಯ ಗುತ್ತಿಯನ್ನು 'ಗುತ್ತಿ' ಎಂದು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಹೀಗೆ ಕೆಳಜಾತಿ ಪುರುಷರು ಮೇಲ್ಜಾತಿ ಪುರುಷರನ್ನು ಗೌರವ ಸೂಚಕ ವಾರ್ಗಿಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಈ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿ ಗುತ್ತಿಯ ಸಾಮಾಜಿಕ ನೆಲೆ ಯಾವುದು?

ಮುಕುಂದಯ್ಯನ ಸಾಮಾಜಿಕ ನೆಲೆ ಯಾವುದು? ಎಂದು ತಿಳಿಯುತ್ತದೆ. ಜಾತಿಯ ಕಾರಣದಿಂದ ಸಾಮಾಜಿಕ ಸ್ತರವಿನ್ಯಾಸ ಕಂಡುಬರುತ್ತದೆ.

ಅನಂತಮೂರ್ತಿ. ಯು.ಆರ್, ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಬರುವ ಕೆಳಜಾತಿ ಪಾತ್ರವಾದ ಪುಟ್ಟ ಮತ್ತು ಮೇಲ್ಜಾತಿ ಪಾತ್ರವಾದ ಪ್ರಾಣೇಶಾಚಾರ್ಯನ ನಡುವೆ ನಡೆಯುವ ಸಂಭಾಷಣೆಯಲ್ಲಿ ಕೆಳಜಾತಿಯವರು ಮೇಲ್ಜಾತಿಯವರನ್ನು ಸಂಬೋಧಿಸುವ ಕ್ರಮವನ್ನು ಉದಾಹರಣೆಗಳ ಮೂಲಕ ಗಮನಿಸಬಹುದು.

> "ನಾವು ಈಗ ಎಲ್ಲಿಗೆ ಹೋಗುತ್ತಿದ್ದೇವೆ ಗೊತ್ತೋ?' ಪುಟ್ಟ ಬೀಡಿ ಹತ್ತಿಸಿ ತುಂಟ ನಗು ಬೀರಿ ನಗುತ್ತ ಕೇಳಿದ.
>
> ಪ್ರಾಣೇಶಾಚಾರ್ಯರು ಗೊತ್ತಿಲ್ಲವೆಂದು ತಲೆಯಾಡಿಸಿದರು.
>
> ನಿಮ್ಮ ಮರ್ಜೀನ್ನ ಬೇಕಾದರೆ ಒಪ್ಪಿದೆ, ಮಾರಾಯರೆ. ಎಲ್ಲಿಗೆ ಯಾಕೆ ಕೇಳದೆ ನಡಿ ಎಂದರೆ ನಡೆದುಬಿಡುತ್ತೀರಿ. ನಾನೂ ಸ್ವಲ್ಪ ಹಾಗೆಯೇ, ಮಾರಾಯರೆ. ಒಂದು ಸಾರಿ ನನ್ನ ಮಿತ್ರನೊಬ್ಬನ ಸಂಗಡ ಹೀಗೆ ಶಿವಮೊಗ್ಗಕ್ಕೂ ಹೋಗಿಬಿಟ್ಟೆ. ಪುಟ್ಟ ಹೋದರೆ ಹೋದಲ್ಲೆ ಅಂತ ನಮ್ಮ ಮಾವಂದಿರಿಗೆ ಅಷ್ಟು ಅಸಮಾಧಾನ. 'ಪುಟ್ಟನೋ? ನಮ್ಮ ಪುಟ್ಟ ಬಿಟ್ಟರೆ ಸಿಗ; ಸಿಕ್ಕರೆ ಬಿಡ' ಎನ್ನುತ್ತಾರೆ.
>
> 'ಯಾರೊ ನಿಮ್ಮ ಪೈಕಿಯವರ ಮನೆಗೆ ಎಂದಿರಿ ಅಲ್ಲವೆ?'
>
> 'ಆಚಾರ್‍ರೆ, ನನ್ನನ್ನು ಏಕವಚನದಲ್ಲೆ ಕರೀರಿ ನೀವು ನನ್ನ ಬಹುವಚನದಲ್ಲಿ ಕರೆಯೋದು ನನ್ನ ಆಯಸ್ಸಿಗೆ ಒಳ್ಳೆದಲ್ಲ' (ಅನಂತಮೂರ್ತಿ. ಯು.ಆರ್, ಸಂಸ್ಕಾರ, ಪುಟ– ೧೦೧,೧೦೨)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿಯು ಪುಟ್ಟ, ಮೇಲ್ಜಾತಿಯು ಪ್ರಾಣೇಶಾಚಾರ್ಯನನ್ನು ಮಾರಾಯರೆ, ನೀವು, ನಿಮ್ಮ ಎಂದು ಗೌರವ ಸಂಬೋಧನೆ ಮತ್ತು ಬಹುವಚನದಲ್ಲಿ ಮಾತನಾಡಿಸುತ್ತಾನೆ. ಪ್ರಾಣೇಶಾಚಾರ್ಯ ಪುಟ್ಟನನ್ನು 'ನಿಮ್ಮ' ಎಂಬ ಬಹುವಚನವನ್ನು ಬಳಸಿದ್ದರಿಂದ ಆಚಾರ್‍ರೆ, ನನ್ನನ್ನು ಏಕವಚನದಲ್ಲಿ ಕರೀರಿ. ನೀವು ನನ್ನ ಬಹುವಚನದಲ್ಲಿ ಕರಿಯೋದು ನನ್ನ ಆಯಸ್ಸಿಗೆ ಒಳ್ಳೆದಲ್ಲ ಎಂದು ಹೇಳುತ್ತಾನೆ. ಕೆಳಜಾತಿಯವರಲ್ಲಿ ಈ ರೀತಿಯ ನಂಬಿಕೆಯನ್ನು ಸಮಾಜ ಸೃಷ್ಟಿಸಿದೆ. ಇದು ಮೇಲ್ಜಾತಿಯುವರ ಮನೋಧೋರಣೆಯನ್ನು ಸೂಚಿಸುತ್ತದೆ.

ರಾವ ಬಹಾದ್ದೂರ ಅವರ 'ಗ್ರಾಮಾಯಣ' ಕಾದಂಬರಿಯಲ್ಲಿ ಕೆಳಜಾತಿ ಪಾತ್ರವಾದ ಚೆನ್ನ ಮತ್ತು ಮೇಲ್ಜಾತಿ ಪಡದಯ್ಯ ಅವರ ಸಂಭಾಷಣೆಯಲ್ಲಿ ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

"ಯಪ್ಪಾ ಮನೀ ಮಂದೀ ಗುಳೇ ಹೋಗತಾರಂತರೀ ಈ ಜ್ವಾಳಾ ನಿಮ್ಮದು ನಿಮಗ ಮುಟ್ಟಲಿ ಅಂತ ತಂದತಿ" ಎಂದು ಹೇಳಿ ಧೋತರವನ್ನು ಜಾಡಿಸಿಕೊಂಡು ಹೊರಗೆ ನಡೆಯುವದರಲ್ಲಿದ್ದ.

ಪಡದಯ್ಯನವರಿಗೆ ಬ್ರಹ್ಮಾಂಡ ಸಿಟ್ಟು ಬಂತು. "ಯಾಕಲೇ ಚೆನ್ನಾ' ಗುಳೇ ಹೋಗಬಾರದಂತ ಕಾಳು ಕೊಟ್ಟಿತ್ತು. ಅಂತಾದ್ದೇನು ದೌಲತ್ತ ಸಿಗತೈತಿಪಾ ಮಗನ ಗುಳೆ ಹ್ವಾದರ? ಕರೆ ಹೇಳು, ವಾಡೇದ ಜ್ವಾಳಾ ತಿರುಗಿಕೊಟ್ಟರೆ, ಗೌಡರು ಜ್ವಾಳಾ ಕೊಡಿತೀವಂತ ಹೇಳ್ಯಾರಿಲ್ಲಲ್ಲೇ?"(ರಾವ ಬಹಾದ್ದೂರ, ಗ್ರಾಮಾಯಣ, ಪುಟ-೯೬)

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಕೆಳಜಾತಿಯ ಚನ್ನಾ 'ಯಪ್ಪಾ' ಎಂದು ಮೇಲ್ಜಾತಿಯ ಪಾತ್ರವನ್ನು ಸಂಬೋಧಿಸುತ್ತಾನೆ ಮತ್ತು 'ರೀ' ಎಂದು ಬಹುವಚನವನ್ನು ಬಳಸುತ್ತಾನೆ. ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರವನ್ನು ಸಂಬೋಧಿಸುವಾಗ 'ಲೇ' ಎಂಬ ಏಕವಚನವನ್ನು ಬಳಸಿ ಹೆಸರಿಡಿದು ಸಂಬೋಧಿಸುತ್ತಾನೆ. ಇಲ್ಲಿ ಅಧಿಕಾರ ಮತ್ತು ಜಾತಿ ಸಾಮಾಜಿಕ ನೆಲೆಯ ಮೂಲಕ ಸ್ತರವಿನ್ಯಾಸವನ್ನು ಗುರುತಿಸಬಹುದು..

ಅನಂತಮೂರ್ತಿ. ಯು.ಆರ್, ಅವರ 'ಭಾರತೀಪುರ' ಕಾದಂಬರಿಯಲ್ಲಿ ಕೆಳಜಾತಿಯ ಪಿಳ್ಳ ಮೇಲ್ಜಾತಿಯ ಜಗನ್ನಾಥನನ್ನು ಸಂಬೋಧಿಸುವ ಉದಾಹರಣೆಯನ್ನು ಈ ಕೆಳಗಿನಂತೆ ನೋಡಬಹುದು.

"ಇಲ್ಲೆ ಮಲಗ್ತೀಯೊ? ಗುಡಿಸ್ಲಿಗೆ ಹೋಗ್ತಿಯೊ?'

'ಹೋಗೀನಿ ಒಡೇರೆ; ಪಿಳ್ಳ ಕಷ್ಟಪಟ್ಟು ಎದ್ದು ನಿಂತ

'ಅಷ್ಟುದೂರ ನಾನು ನಿನ್ನ ಜೊತೆ ಬರ್ತೀನಿ!' ಎಂದು ಟಾರ್ಚ್ ಹಿಡಿದು

ಜಗನ್ನಾಥ ಹೊರಟ. ಕಷ್ಟಪಟ್ಟು ನಡೆಯುತಿದ್ದ ಪಿಳ್ಳನ ಕೈ ಹಿಡಕೊಂಡ.

'ಮುಟ್ಟಬೇಡಿ ಒಡೇರೆ!" (ಅನಂತಮೂರ್ತಿ. ಯು.ಆರ್, ಭಾರತೀಪುರ, ಪುಟ-೧೪೧) ಎಂದು ಪಿಳ್ಳ ಮೇಲ್ಜಾತಿ ಜಗನ್ನಾಥನನ್ನು 'ಒಡೇರೆ' ಎಂದು ಗೌರವಸೂಚಕ ಮತ್ತು ಬಹುವಚನದಿಂದ ಮಾತನಾಡಿಸುತ್ತಾನೆ. ಆದರೆ ಮೇಲ್ಜಾತಿ ಜಗನ್ನಾಥ ಕೆಳಜಾತಿ ಪಿಳ್ಳನನ್ನು ಮಾತನಾಡಿಸುವಾಗ ಯಾವುದೇ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಮಾತನಾಡುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು.

ಚದುರಂಗರ 'ವೈಶಾಖ' ಕಾದಂಬರಿಯಲ್ಲಿ 'ಲಕ್ಕ' ಎಂಬ ಕೆಳಜಾತಿ ಪುರುಷ 'ಮೇಲ್ಜಾತಿ' ಕೇಶವಯ್ಯನನ್ನು ಸಂಬೋಧಿಸಿರುವುದನ್ನು ಈ ಕೆಳಗಿನಂತೆ ನೋಡಬಹುದು.

"ಏನೋ ಲಕ್ಕ, ನೀ ಬಲು ಠಕ್ಕ" ನಾಟಕದಲ್ಲಿ ಅನ್ನೋತರ ಅಂದ.

"ಅದ್ಯಾಕೆ ಸೋಮಿ ಅಂಗಂದೀರಿ? ನಾಯೇನು ಮಾಡ್ದೆ? ಕೆಳ್ದ ಲಕ್ಕ (ಚದುರಂಗ, ವೈಶಾಖ, ಪುಟ-೨೪). ಇಲ್ಲಿ ಕೆಳಜಾತಿಯ ಲಕ್ಕ 'ಸ್ವಾಮಿ' ಎಂಬ ಗೌರವಸೂಚಕವನ್ನು ಮೇಲ್ಜಾತಿ ಕೇಶವಯ್ಯನಿಗೆ ಸಂಬೋಧಿಸುತ್ತಾನೆ. ಇದು ಅವನು ಆಡು ಭಾಷೆಯಲ್ಲಿ 'ಸೋಮಿ' ಆಗಿದೆ. ಈ ಲಕ್ಕ ಮೇಲ್ಜಾತಿಯ ಕೇಶವಯ್ಯನನ್ನು ಗೌರವಸೂಚಕವಾಗಿಯೇ ಸಂಬೋಧಿಸಬೇಕಾಗಿದೆ. ಏಕವಚನದಿಂದ ಮಾತನಾಡಿಸಲು ಸಾಧ್ಯವಿಲ್ಲ. ಆದರೆ ಮೇಲ್ಜಾತಿ ಕೇಶವಯ್ಯ ಕೆಳಜಾತಿ ಲಕ್ಕನನ್ನು 'ಲಕ್ಕ' ಎಂದು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಕೆಳಜಾತಿ ಪುರುಷ ಲಕ್ಕನನ್ನು ಬಹುವಚನದಿಂದ ಮತ್ತು ಗೌರವಸೂಚಕಗಳನ್ನು ಬಳಸಿ ಸಂಬೋಧಿಸುವುದು ಮೇಲ್ಜಾತಿಯವರ ಸಾಮಾಜಿಕ ನೆಲೆಗೆ ಸಾಧ್ಯವಾಗದ ಸಂಗತಿ ಎನ್ನಬಹುದು.

ಚಲನಚಿತ್ರಗಳಲ್ಲಿ ಕೆಳಜಾತಿ ಪುರುಷ ಮೇಲ್ಜಾತಿ ಪುರುಷನನ್ನು ಸಂಬೋಧಿಸುವ ಪ್ರಕ್ರಿಯೆ ಹೇಗೆ ನಡೆದಿದೆ ಎಂಬುದನ್ನು ಕೆಲವು ಆಯ್ದ ಚಲನಚಿತ್ರಗಳ ಮೂಲಕ ಗಮನಿಸಬಹುದು.

ಶಿವರಾಮ ಕಾರಂತ ಅವರ ಕಾದಂಬರಿ ಆಧಾರಿತ, ಬಿ.ವಿ. ಕಾರಂತ ಅವರು ನಿರ್ದೇಶಿಸಿದ ಚೋಮನದುಡಿ ಚಲನಚಿತ್ರದಲ್ಲಿ ಕೆಳಜಾತಿಯ ಪುರುಷ ಚೋಮ ಮೇಲ್ಜಾತಿಯ ಪುರುಷ ಸಂಗಪ್ಪಯ್ಯನನ್ನು ಸಂಬೋಧಿಸುವ ಪ್ರಕ್ರಿಯೆ ಈ ಕೆಳಗಿನಂತಿದೆ.

ಚೋಮ : ಒಡೆಯ ನನ್ನೊಂದು ಭ್ರಮೆ, ಕಳ್ದುವರ್ಸವು ಬೇಡ್ಕೊಂಡಿದ್ದೆ ಈ ವರ್ಸವು ಬೇಡ್ಕೋಳ್ಳುತ್ತಿದ್ದೀನಿ ಧಣಿಗಳು ನಡ್ಸಿಕೊಟ್ರೆ....

ಸಂಕಪ್ಪಯ್ಯ : ಹೇಳು' ದಾಕ್ಷಿಣ್ಯ ಬೇಡ

ಚೋಮ : ಮತ್ತೇನಿಲ್ಲ, ಧಣಿಗಳಿಗೆ ಇಷ್ಟೆಲ್ಲ ಒಕ್ಲು ಮಕ್ಕಳಿದ್ದಾರೆ, ಈ ಚೋಮನಿಗೂ ಯಾವುದಾದರೂ ಒಂದು ಆಳುಕೊಂಪೆ ಗೇಣಿಕೊಟ್ಟಿದ್ರೆ ನಿಮ್ ಹೆಸ್ರೇಳಿ ಬದುಕುತ್ತಿದ್ದ.

ಸಂಕಪ್ಪಯ್ಯ : ಅಲ್ಲ ಚೋಮ ನಿನಗ್ಯಾಕೆ ಗೇಣಿಗದ್ದೆ ಆಸೆ, ಸುಮ್ಮನೆ ಬಿರುಮನ ಅಂಗಡಿಗೆ ಹೋಗಿ ನಾಲ್ಕು ಗ್ಲಾಸು ಕುಡುಕೊಂಡು ಬಿದ್ದಿರೋದು ಬಿಟ್ಟು ಈ ಬೇಸಾಯ ಗೀಸಾಯ ಅಂತ.....

ಚೋಮ : ಹೊಲತಿ ಇದ್ದಾಗಿಂದ್ಲೂ ಅದೊಂದು ಆಸೆ ಒಡೆಯ. ಈಗ ಹ್ಯಾಗೂ ಎತ್ತಿನ ಜೋಡಿ ಇದೆ ಉಳೋದಕ್ಕೆ. ಸಾಯೋದ್ರೊಳಗೆ ನನ್ದೆ ಒಂದು ಗೇಣಿ ನೆಲೆ ಉತ್ತುಬಿತ್ತಿದ್ರೆ ಬದುಕಿದ್ದಕ್ಕೂ ಒಂದು ಲೆಕ್ಕ"(ಚಲನಚಿತ್ರ, ಚೋಮನದುಡಿ)

ಕೆಳಜಾತಿಯ ಪುರುಷ ಚೋಮ ಇಲ್ಲಿ 'ಒಡೆಯ' ಮತು 'ಧಣಿ' ಎಂಬ ಎರಡು ಗೌರವಸೂಚಕಗಳನ್ನು ಬಳಸುತ್ತಾನೆ. ಜಮಿನ್ದಾರರನ್ನು ಜೀತದಾಳುಗಳು ಹೆಚ್ಚಾಗಿ ಒಡೆಯ, ಧಣಿ ಎಂಬ ಪದಗಳಿಂದಲೇ ಸಂಬೋಧಿಸುತ್ತಾರೆ. ಜೊತೆಗೆ 'ಒಡೆಯರೆ', 'ಧಣಿಗಳೆ' ಎಂದು ಬಹುವಚನವನ್ನು ಬಳಸಿ ಸಂಬೋಧಿಸುತ್ತಾನೆ. ಮೇಲ್ಜಾತಿ ಪುರುಷ ಸಂಕಪ್ಪಯ್ಯನನ್ನು ಕೆಳಜಾತಿಯ ಚೋಮ ಈ ರೀತಿಯಾಗಿ ಸಂಬೋಧಿಸುತ್ತಾನೆ. ಮೇಲ್ಜಾತಿಯ ಪುರುಷ ಸಂಕಪ್ಪಯ್ಯ ಕೆಳಜಾತಿಯ ಚೋಮನನ್ನು 'ಚೋಮ' ಎಂದು ಹೆಸರಿಡಿದು ಯಾವುದೇ ಗೌರವ ಸೂಚಕಗಳನ್ನು ಬಳಸದೇ ಏಕವಚನದಲ್ಲಿಯೇ ಸಂಬೋಧಿಸುತ್ತಾನೆ. ಇಲ್ಲಿ ಜಾತಿ ಮತ್ತು ಆರ್ಥಿಕ ನೆಲೆಯಿಂದ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದು.

ಸಿದ್ದಲಿಂಗಯ್ಯ ಅವರ ನಿರ್ದೇಶನದ ಹೇಮಾವತಿ ಚಲನಚಿತ್ರ ೧೯೭೭ರಲ್ಲಿ ತೆರೆಕಂಡಿತು. ಈ ಚಲನಚಿತ್ರದಲ್ಲಿ ಕೆಳಜಾತಿಯ ಪುರುಷ ಕಾಳಣ್ಣ ಮೇಲ್ಜಾತಿಯ ಪುರುಷನನ್ನು ಮಾತನಾಡಿಸುವ ಅಥವಾ ಸಂಬೋಧಿಸುವ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು.

"ಆನಂದ : ಏನ್ ಕಾಳಣ್ಣ ಚನ್ನಾಗಿದಿಯೋ....

ಕಾಳಣ್ಣ : ಚಂದಾಗಿವ್ನಿ ಬುದ್ಧಿ...... ಯಾವಾಗ ಬಂದೆ ಬುದ್ದಿ

ಚಂದಾಕಿದೀರಾ..

ಆನಂದ : ಚನ್ನಾಗಿದೀನಿ...."(ಚಲನಚಿತ್ರ, ಹೇಮಾವತಿ)

ಈ ಚಲನಚಿತ್ರದಲ್ಲಿ ಕೆಳಜಾತಿಯ ಕಾಳಣ್ಣ ಮೇಲ್ಜಾತಿಯ ಆನಂದನನ್ನು 'ಬುದ್ದಿ' ಎಂಬ ಗೌರವ ಸೂಚಕವನ್ನು ಬಳಸಿ ಮತ್ತು ಬಹುವಚನವನ್ನು ಬಳಸಿ ಸಂಬೋಧಿಸುತ್ತಾನೆ. ಕಾಳಣ್ಣನಿಗಿಂತ ಆನಂದ ಚಿಕ್ಕವನಾಗಿದ್ದರೂ ಜಾತಿಯ ಕಾರಣಕ್ಕಾಗಿ ಕಾಳಣ್ಣ, 'ಬುದ್ದಿ' ಎಂದು ಸಂಬೋಧಿಸುತ್ತಾನೆ. ಕೆಳಜಾತಿ ಕಾಳಣ್ಣನನ್ನು 'ಕಾಳ್ಯಾ' ಎಂದೇ ಸಂಬೋಧಿಸುತ್ತಾನೆ. ಮೇಲ್ಜಾತಿಯರೆಲ್ಲರೂ ಕಾಳಣ್ಣನನ್ನು ಗೌರವ ಸಂಬೋಧನೆಯಿಂದ ಸಂಬೋಧಿಸದೆ ಹೆಸರನ್ನು ಸಂಕ್ಷಿಪ್ತಗೊಳಿಸಿ 'ಕಾಳ' ಎಂದೇ ಸಂಬೋಧಿಸುತ್ತಾರೆ. ಆದರೆ ಆನಂದ 'ಅಣ್ಣ' ಎಂಬ ವಾರ್ಗಿಕ ಸೇರಿಸಿ 'ಕಾಳಣ್ಣ' ಎಂದು ಗೌರವಸಂಬೋಧನೆ ಮಾಡುತ್ತಾನೆ. ಏಕೆಂದರೆ ಈ ಮೇಲ್ಜಾತಿಯ ಆನಂದ ಎಂಬ ವ್ಯಕ್ತಿ ಆಧುನಿಕ ಶಿಕ್ಷಣ ಪಡೆದ ಪ್ರಜ್ಞಾವಂತ. ಆದ್ದರಿಂದ ಕೆಳಜಾತಿಯ ವ್ಯಕ್ತಿಯನ್ನು ಕೂಡ ಗೌರವದಿಂದ ಸಂಬೋಧಿಸುತ್ತಾನೆ. ಆದರೂ ಕೆಳಜಾತಿಯ ಕಾಳಣ್ಣ, ಆನಂದನನ್ನು ಹೆಸರಿಡಿದು ಸಂಬೋಧಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸಮಾಜದಲ್ಲಿ ಜಾತಿಯ ಶ್ರೇಣೀಕರಣ ವ್ಯವಸ್ಥೆ ಸಾಮಾಜಿಕವಾಗಿ ನಿರ್ಭಂದಿಸಿದೆ.

ಅಶ್ವಿನಿಯವರ 'ಮೃಗತೃಷ್ಣ' ಕಾದಂಬರಿ ಆಧಾರಿತ, ಚಿ. ಧತ್ತರಾಜ್ ನಿರ್ದೇಶನದ 'ಕಾಮನಬಿಲ್ಲು' ಚಲನಚಿತ್ರದಲ್ಲಿ ಕೆಳಜಾತಿಯ ಮಾದ, ಮೇಲ್ಜಾತಿಯ ಕಿರಿಗೌಡನನ್ನು ಸಂಬೋಧಿಸುವ

ಆಯಾಮವನ್ನು ಈ ಚಲನಚಿತ್ರದಲ್ಲಿ ಬರುವ ಸಂಭಾಷಣೆ ಮೂಲಕ ನೋಡಿ, ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

"ಮಾದ : ಗೌಡ್ರೆ, ಗೌಡ್ರೆ, ನಿಮ್ಮ ಮಗ ನಿಮ್ಮಮಗ......

ಕಿರಿಗೌಡ : ನನ್ ಮಗ

ಮಾದ : ನಿಮ್ಮ ಮಗ ನನ್ ಮಗಳು ಗಂಗಿನ ಕೆಡ್ಸಿಬಿಟ್ಟವ್ನೆ. ಈಗ ಅವಳಿಗೆ ಮೂರು ತಿಂಗಳು.

ಕಿರಿಗೌಡ : ಏನ್ ಲೇ.... ನನ್ ಮಗ ನಿನ್ ಮಗ್ಳುನ ಕೆಡ್ಸವ್ನಾ? ನಿನಗೇನು ಗ್ಯಾನ–ಗಿನ ನೆಟ್ಟಗೈತೋ ಇಲ್ವೊ?.."

ಈ ಮೇಲೆ ನೀಡಿದ ಉದಾಹರಣೆಯಲ್ಲಿ ಮಾದ ಎಂಬ ಕೆಳಜಾತಿ ಪುರುಷ ಮೇಲ್ಜಾತಿ ಪುರುಷ ಕಿರಿಗೌಡನನ್ನು 'ಗೌಡ' ಎಂಬ ಗೌರವಸೂಚಕ ಪದವನ್ನು ಬಳಸಿ ಸಂಬೋಧನೆ ಮಾಡುವುದು ಕಂಡುಬರುತ್ತದೆ. ಮಾದ ಕಿರಿಗೌಡನ ಮನೆಯ ಆಳು ಕಿರಿಗೌಡ ಊರಿನ ಹಿರಿಗೌಡನ ತಮ್ಮ. ಮಾದ ಅವ್ನ ಮನೆಯ ಆಳಾಗಿರುವುದರಿಂದ ಗೌಡ್ರೆ ಎಂದು ಸಂಬೋಧನೆ ಮಾಡುತ್ತಾನೆ. ಊರಿನ ಎಲ್ಲಾ ಕೆಳಜಾತಿ ವ್ಯಕ್ತಿಗಳು ಸಹ ಅವನನ್ನು ಗೌಡ ಎಂದೆ ಸಂಬೋಧನೆ ಮಾಡುತ್ತಾರೆ. 'ಗೌಡ' ಎಂಬುದು ಜಾತಿ ಮತ್ತು ವೃತ್ತಿ ಸೂಚಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೇಲ್ಜಾತಿಯ ಪುರುಷ ಕಿರಿಗೌಡ ಕೆಳಜಾತಿ ಮಾದನನ್ನು 'ಲೇ' ಎಂದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಗೌರವಸೂಚಕ ಮತ್ತು ಬಹುವಚನದಿಂದ ಸಂಬೋಧಿಸುವುದು ತುಂಬಾ ವಿರಳ. ಕೆಳಜಾತಿ ವ್ಯಕ್ತಿಗಳಿಗೆ 'ಗೌಡ', 'ಶಾಸ್ತ್ರೀ', 'ಅಯ್ಯಂಗಾರ್' ಮುಂತಾದ ಯಾವುದೇ ವೃತ್ತಿ/ಜಾತಿಸೂಚಕಗಳು ಕಂಡುಬರುವುದಿಲ್ಲ. ಮೇಲ್ಜಾತಿ ವ್ಯಕ್ತಿಗಳಿಗೆ ಮಾತ್ರ ಈ ರೀತಿಯ ಗೌರವಸೂಚಕಗಳು ಸಂಬೋಧನೆಯಲ್ಲಿ ಬಳಸಲಾಗುತ್ತಿದೆ. ಈ ಸಂಭಾಷಣೆ ಮೂಲಕ ಸಂಬೋಧನೆ ನೆಲೆಯ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದಾಗಿದೆ.

ಅಶ್ವತ್ಥ ಅವರ ಕಾದಂಬರಿ ಆಧಾರಿತ, ದೊರೆ–ಭಗವಾನ್ ಅವರ ನಿರ್ದೇಶನದ 'ಮುನಿಯನ ಮಾದರಿ' ಚಲನಚಿತ್ರದಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪುರುಷರ ಸಂಬೋಧನೆಯನ್ನು ಮುಂದಿನ ಸಂಭಾಷಣೆಯಲ್ಲಿ ನೋಡಬಹುದು. ಮುನಿಯ ಎಂಬ ಕೆಳಜಾತಿಯ ಪುರುಷ ಆ ಊರಿನ ದೊಡ್ಡೇಗೌಡನ ಮನೆಯಲ್ಲಿ ಜೀತಕ್ಕಿರುತ್ತಾನೆ. ಕೆಳಜಾತಿ ಪುರುಷ ಮೇಲ್ಜಾತಿ ಪುರುಷನನ್ನು ಸಂಬೋಧಿಸುವ ಕ್ರಮವನ್ನು ಈ ಕೆಳಗೆ ನೀಡಿದ ಉದಾಹರಣೆಯ ಮೂಲಕ ನೋಡಬಹುದು.

"ದೊಡ್ಡೇಗೌಡ : ಏನೋ ಆಗ್ಲೆ ಹಿಟ್ಟುನುಂಗೊಕೆ ಬಂದಬಿಟ್ಯಾ, ಸೌದೆಯಲ್ಲ ಹೊಡ್ದಾಯ್ತ.

ಮುನಿಯ : ಇಲ್ಲ ಧಣಿ, ಇನ್ನೂ ಎರ್ಡು ಕೊಂಟು ಬಾಕಿ ಐತೆ, ಹೊಟ್ಟೆ ಹಸಿತಾ ಇತ್ತು ಅದ್ಕೆ ಊಟ ಮಾಡ್ಕೊಂಡು ಹೊಡಿಯಣ ಅಂತ ಬಂದೆ.

ದೊಡ್ಡೇಗೌಡ : ಕೊಂಟು ಹೊಡಿಯೋಕು ಮುಂಚೆ ಹಿಟ್ಟು ನುಂಗೋಕೆ ಬಂದು ಬಿಟ್ಯಾ ಹೋಗು ಕೆಲ್ಸ ಮುಗ್ಸಿ ಆ ಮೇಲೆ ತಿನ್ನು ಹೋಗೋ ಹೋಗೋ"(ಚಲನಚಿತ್ರ, ಮುನಿಯನ ಮಾದರಿ).

ಈ ಚಲನಚಿತ್ರದಲ್ಲಿ ಮುನಿಯ ದೊಡ್ಡೇಗೌಡರ ಮನೆಯ ಜೀತದಾಳು. ಅವರು ಹೇಳಿದ ಕೆಲಸವನ್ನು ಮಾಡಿಕೊಂಡು ಇರುವಂತ ವ್ಯಕ್ತಿ. ತನ್ನ ಯಜಮಾನನನ್ನು 'ಧಣಿ' ಎಂದು ಸಂಬೋಧಿಸುತ್ತಾನೆ. ಈ ರೀತಿ ಸಂಬೋಧಿಸುವುದು ಸಾಮಾಜಿಕ ವಾಸ್ತವದಲ್ಲಿರುವ ಸತ್ಯವೂ ಆಗಿದೆ. ತನ್ನ ಯಜಮಾನನನ್ನು ಸಾಮಾನ್ಯ ಸಂದರ್ಭಗಳಲ್ಲಿ ಏಕವಚನದಿಂದ ಸಂಬೋಧಿಸುವುದು ಸಾಧ್ಯವಿಲ್ಲ. ಬಹುವಚನದಿಂದಲೇ ಸಂಬೋಧಿಸುತ್ತಾನೆ. ಮೇಲ್ಜಾತಿ ಪುರುಷ ಕೆಳಜಾತಿಯ ಪುರುಷನನ್ನು 'ಲೇ', 'ಏನೋ', 'ಹೋಗೋ' ಎಂದು ಏಕವಚನದಿಂದಲೇ ಸಂಬೋಧಿಸುತ್ತಾನೆ. ಕೆಳಜಾತಿಯ ಪುರುಷನನ್ನು ಬಹುವಚನದಿಂದ ಸಂಬೋಧಿಸುವುದಿಲ್ಲ. ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯದಲ್ಲಿ ಮಾತ್ರ ಈ ರೀತಿಯ ಸಂಬೋಧನಾ ಕ್ರಮಗಳಿಲ್ಲ. ಸಮಾಜದ ವಾಸ್ತವವೇ ಬರವಣಿಗೆ ಮತ್ತು ದೃಶ್ಯಮಾಧ್ಯದಲ್ಲೆ ಪ್ರತಿಫಲನಗೊಂಡಿದೆ.

ರೆಡ್ಡಿ. ಹೆಚ್.ಎನ್, ಅವರ ನಿರ್ದೇಶನದ 'ಕಾವೇರಿ' ಚಲನಚಿತ್ರದಲ್ಲಿ ಕೆಳಜಾತಿಯ ದೊಡ್ಡನರಸಯ್ಯ, ಮೇಲ್ಜಾತಿಯ ವೇದಾಂತಚಾರ್ ಅವರನ್ನು ಸಂಬೋಧಿಸುವ ಸ್ವರೂಪವನ್ನು ಈ ಕೆಳಗಿನ ಉದಾಹರಣೆಯಲ್ಲಿ ಗಮನಿಸಬಹುದು.

"ವೇದಾಂತಚಾರ್ : ನರಸ ಇದುವರೆಗೂ ನೀನು ಮಾಡಿದ ದ್ರೋಹವೆಲ್ಲ ಸಹಿಸಿದ್ದು ಆಯ್ತು, ಇನ್ನು ಮುಂದುಕ್ಕೆ ಸಹಿಸೋದಕ್ಕೆ ಆಗೋದಿಲ್ಲ.

ದೊಡ್ಡನರಸಯ್ಯ : ದ್ರೋಹ ಅಯ್ಯಯ್ಯೋ ನಾನೇನು ದ್ರೋಹ ಮಾಡ್ದೆ ಬುದ್ಧಿ

ವೇದಾಂತಚಾರ್ : ನೀನಲ್ಲ, ನೀನ್ ಮಗ್ಳು.

ದೊಡ್ಡನರಸಯ್ಯ : ನನ್ ಮಗ್ಳು, ತಾವೇಳೋದು ಒಂದು ಗೊತ್ತಾಗ್ತಾಯಿಲ್ಲ.

ವೇದಾಂತಚಾರ್ : ಊರೆ ಕೂಗ್ತಾ ಇರುವಾಗ ನಿನ್ಗೆ ಗೊತ್ತಾಗ್ಲಿಲ್ವೆ?.

ದೊಡ್ಡನರಸಯ್ಯ : ಗೊತ್ತಿದ್ರು ನಾನು ಏನ್ ತಾನೆ ಮಾಡಂಗದೆ ಬುದ್ದಿ" (ಚಲನಚಿತ್ರ, ಕಾವೇರಿ)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿಯ ದೊಡ್ಡನರಸಯ್ಯ ಮೇಲ್ಜಾತಿಯ ಪುರುಷ ವೇದಾಂತಚಾರ್‌ನನ್ನು 'ಬುದ್ಧಿ' ಎಂದು ಗೌರವಸೂಚಕ ಪದ ಬಳಸಿ ಮತ್ತು ಬಹುವಚನಗಳಿಂದಲೇ

ಸಂಬೋಧಿಸುತ್ತಾನೆ. ಕೆಳಜಾತಿಯವರು ಮೇಲ್ಜಾತಿಯವರನ್ನು ಗೌರವಸೂಚಕ ಪದ ಬಳಸಿಯೇ ಸಂಬೋಧಿಸಬೇಕಾದ ಸಾಮಾಜಿಕ ಸಂದರ್ಭ. ಮೇಲ್ಜಾತಿಯ ಪುರುಷ ವೇದಾಂತಚಾರ್ ಕೆಳಜಾತಿಯ ದೊಡ್ಡನರಸಯ್ಯನನ್ನು 'ನರಸ' ಎಂದು ಹೆಸರನ್ನು ಸಂಕ್ಷಿಪ್ತಗೊಳಿಸಿ ಯಾವುದೇ ವಾರ್ಗಿಕಗಳನ್ನು ಬಳಸದೆ ಏಕವಚನದಲ್ಲಿ ಸಂಬೋಧಿಸುತ್ತಾನೆ. ಇಲ್ಲಿ ಮೇಲ್ಜಾತಿಯ ಮನೋಧೋರಣೆ ಮತ್ತು ಸಾಮಾಜಿಕ ಸ್ತರವಿನ್ಯಾಸ ಅವರ ಸಾಮಾಜಿಕ ನೆಲೆಯಿಂದ ಕಂಡುಬರುತ್ತದೆ.

ಸೃಜನಶೀಲತೆಯ ಬರವಣಿಗೆ ಮತ್ತು ಸಾಮಾಜಿಕ ವಾಸ್ತವದಂತೆ ದೃಶ್ಯಮಾಧ್ಯಮದಲ್ಲೂ ಸಹ ಸಂಬೋಧನಾ ಕ್ರಮಗಳೂ ಯಾವುದೇ ಬದಲಾವಣೆಯಿಲ್ಲದೆ ಬಳಕೆಯಾಗಿದೆ. ಕೆಳಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳನ್ನು ಗೌರವ ಸೂಚಕವಾಗಿ ಮತ್ತು ಬಹುವಚನಗಳ ಸಂಬೋಧಿಸಿದ ಮಾದರಿಗಳನ್ನು ಕಂಡುಕೊಳ್ಳಲಾಯಿತು. ಈ ಕಥೆಗಳಲ್ಲಿ ಬರುವ ಮೇಲ್ಜಾತಿ ಪಾತ್ರ ವ್ಯಕ್ತಿ ಹಾಗೂ ಕೆಳಜಾತಿ ಪಾತ್ರಗಳ ಸಂಭಾಷಣೆಯ ಮೂಲಕ ಸಂಬೋಧನಾ ನೆಲೆಯ ಆಯಾಮಗಳ ಕಂಡುಕೊಳ್ಳಬಹುದಾಗಿದೆ.

ದೇವನೂರು ಮಹದೇವ ಅವರ **'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ'** ಎಂಬ ಕಥೆಯಲ್ಲಿ ಕೆಳಜಾತಿ ಪಾತ್ರವಾದ ರಂಗಯ್ಯ ಮೇಲ್ಜಾತಿ ಪಾತ್ರವಾದ ಶಾಸ್ತ್ರೀಗಳನ್ನು ಹೇಗೆ ಸಂಬೋಧಿಸುತ್ತಾನೆ ಎಂಬುದನ್ನು ಉದಾಹರಣೆಯ ಮೂಲಕ ನೋಡಬಹುದು.

"ಏನಯ್ಯ ರಂಗಯ್ಯ ಹೇಗಿದ್ದಿ, ಎಂದು ಶಾಸ್ತ್ರೀಮೇಸ್ತ್ರು ಮಾತನಾಡಿದರು.

ಹಿಂಗಿವ್ನಿ ಬುದ್ಧಿ, ವಸಿ ಕುಡಿಯಾಕ ನೀರು ಬೇಕಿತ್ತು ಅಳಿ ಅಂದ"(ಫಕೀರ್ ಮಹಮದ್ ಕಟ್ಪಾಡಿ, ಕೃಷ್ಣಮೂರ್ತಿ ಹನೂರು, (ಸಂ) ಕನ್ನಡದ ಮೂವತ್ತು ಕಥೆಗಳು, ಪುಟ-೧೧೫)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿ ವ್ಯಕ್ತಿ ರಂಗಪ್ಪ ಮೇಲ್ಜಾತಿಯ ಶಾಸ್ತ್ರೀಯನ್ನು 'ಬುದ್ಧಿ' ಎಂಬ ಗೌರವಸೂಚಕ ಪದವನ್ನು ಬಳಸಿ ಸಂಬೋಧಿಸುತ್ತಾನೆ. ಬಹುವಚನ ಗೌರವ ಸೂಚಕವಾದ, ಅಲ್ಲಿನ ಪ್ರಾದೇಶಿಕ ಸಂಬೋಧನಾ ರೂಪವಾದ 'ಅಳಿ' ಎಂಬುದನ್ನು ಬಳಸಿ ಸಂಬೋಧಿಸುತ್ತಾನೆ. ಮೈಸೂರು ಭಾಗದ ಕೆಲವು ಪ್ರದೇಶಗಳಲ್ಲಿ ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿಯೂ 'ಅಯ್ಯ' ಎಂಬ ವಾರ್ಗಿಕ ಸೇರಿಕೊಂಡಿರುತ್ತದೆ. ಉದಾಹರಣೆಗೆ ರಂಗಯ್ಯ, ನರಸಯ್ಯ, ಗಾಲುರಯ್ಯ, ಗುಂಜಾರಯ್ಯ ಈ ವ್ಯಕ್ತಿನಾಮಗಳು ಮೈಸೂರು ಭಾಗದ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತವೆ. ಹಾಗೆಯೇ ದೇವನೂರು ಮಹದೇವ ಅವರ ಈ ಕಥೆಯೂ ಸಹ ಆ ಪ್ರದೇಶದ ಕಥೆಯಾಗಿರುವುದರಿಂದ ರಂಗಯ್ಯ ಎಂಬ ದಲಿತ ಪಾತ್ರ ಇರುವುದು ಸಾಮಾಜಿಕ ವಾಸ್ತವ ನೆಲೆಯ ಪ್ರತಿಫಲನ. ಅಯ್ಯ, ಅಪ್ಪ, ಅಣ್ಣ, ಅಮ್ಮ ಮುಂತಾದ ಸಂಬೋಧನಾ ರೂಪಗಳು ಬಳಕೆ ನೆಲೆಯ ಸಂದರ್ಭಕ್ಕೆ ಅನುಗುಣವಾಗಿ ಅವುಗಳ ಸಾಮಾಜಿಕ

ಸ್ಥಾನಮಾನಗಳನ್ನು ನಿರ್ಧರಿಸುತ್ತಿರುತ್ತವೆ. ಸಾಮಾನ್ಯವಾಗಿ ಏನಯ್ಯ, ಏನಪ್ಪ, ಬಾರಮ್ಮ ಎಂದು ಬಳಸುವ ಸಂದರ್ಭಕ್ಕೂ ಗೌರವ ಸೂಚಿಸುವ ಸಲುವಾಗಿ ಬಳಸುವ ಸಂದರ್ಭಕ್ಕೂ ವ್ಯತ್ಯಾಸವಿದೆ. ಈ ಕಥೆಯಲ್ಲಿ ಶಾಸ್ತ್ರೀ 'ರಂಗಯ್ಯ' ಎಂಬ ದಲಿತ ವ್ಯಕ್ತಿಯನ್ನು ಮೇಲ್ಜಾತಿಯವರು ದಲಿತ ವ್ಯಕ್ತಿಗಳ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಕರೆಯುವಂತೆ ಕರೆಯದೆ ಪೂರ್ಣ ಹೆಸರಿನಿಂದ ಸಂಬೋಧಿಸುತ್ತಾನೆ. ರಂಗಯ್ಯನಿಗೆ ಗೌರವಕೊಡಬೇಕು ಎಂಬ ಉದ್ದೇಸದಿಂದಲ್ಲ ಸಾಮಾನ್ಯವಾಗಿ ಎಲ್ಲರನ್ನು ಸಂಬೋಧಿಸಿರುವಂತೆ ಬಳಕೆ ಮಾಡಿರುವುದನ್ನು ಕಾಣಬಹುದು. 'ಬುದ್ಧಿ', ಮತ್ತು 'ಅಳಿ' ಎಂಬ ಪದಗಳು ಸಾಮಾನ್ಯವಾಗಿ ಮೇಲ್ಜಾತಿಯವರಿಗೆ ಬಳಸುವ ಸಂಬೋಧನಾ ರೂಪಗಳಾಗಿವೆ.

ಲಲಿತಾ ನಾಯಕ ಬಿ.ಟಿ, ಅವರ 'ಹಬ್ಬ ಮತ್ತು ಬಲಿ' ಎಂಬ ಕಥೆಯಲ್ಲಿ ಕೆಳಜಾತಿ ಪುರುಷ ಸಣ್ಣು, ಮೇಲ್ಜಾತಿ ಪುರುಷ ಮಲ್ಲೇಶಪ್ಪನನ್ನು ಸಂಬೋಧಿಸುವ ಸ್ವರೂಪವನ್ನು ಒಂದು ಉದಾಹರಣೆಯ ಮೂಲಕ ನೋಡಬಹುದು.

"ಅಡ್ಡಬಿದ್ದೆ ಧಣಿ!

ಏನ್ಲಾ ಬಂದಿದ್ದು?

ಹಬ್ಬ ಬಂದೈತಲ್ಲಾ ಧಣಿ.... ಅದ್ಕೆ ಒಂದೆಲ್ಡು ನೂರು ರೂಪಾಯಿ ಕೈಗಡ ಕೇಳಾನಂತ ಬಂದೆ?

ಹೂಂ! ಹೂಂ! ಇನ್ನೂರು ರೂಪಾಯಿ ಕೈಗಡ ಹಿಂದಕ್ಕೆ ಯಾವಾಗ ಕೊಡೋನು?

ಮುಂದೆ ಸುಗ್ಗಿ ಹೊತ್ತಿಗ್ ಕೊಟ್ಬಿಡ್ತೀನಿ ಧಣಿ"(ಫಕೀರ್ ಮಹಮದ್ ಕಟ್ಪಾಡಿ, ಕೃಷ್ಣಮೂರ್ತಿ ಹನೂರು, (ಸಂ) ಕನ್ನಡದ ಮೂವತ್ತು ಕಥೆಗಳು, ಪುಟ-೧೨೯)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿಯ ಪುರುಷ ಸಣ್ಣು ಮೇಲ್ಜಾತಿ ಪುರುಷ ಮಲ್ಲೇಶಪ್ಪನನ್ನು ಗೌರವಸೂಚಕ ಬಳಸಿ ಸಂಬೋಧಿಸಿದರೆ ಕೆಳಜಾತಿಯ ಸಣ್ಣನನ್ನು ಮೇಲ್ಜಾತಿ ಪುರುಷ 'ಏನ್ಲಾ' ಎಂದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಮಲ್ಲೇಶಪ್ಪ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಾಬಲ್ಯವನ್ನು ಹೊಂದಿದ ವ್ಯಕ್ತಿ. ಸಮಾಜದ ವಾಸವ ಸಂಬೋಧನಾ ಇಲ್ಲಿಯು ಕಂಡುಬಂದಿದೆ. ಜಾತಿ ಮತ್ತು ಆರ್ಥಿಕ ಕಾರಣದಿಂದ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಅಮರೇಶ ನುಗಡೋಣಿ ಅವರ 'ತಮಂಧದ ಕೇಡು' ಕಥೆಯಲ್ಲಿ ಕೆಳಜಾತಿಯ ದುರುಗಾ ಮೇಲ್ಜಾತಿಯ ಶಾಂತಗೌಡನನ್ನು ಸಂಬೋಧಿಸುವ ಕ್ರಮ ಮತ್ತು ಮೇಲ್ಜಾತಿ ಶಾಂತಗೌಡ ಕೆಳಜಾತಿಯ ಪುರುಷ ದುರುಗಾನನ್ನು ಸಂಬೋಧಿಸುವ ಕ್ರಮ ಯಾವುದು ಎಂಬುದನ್ನು ಉದಾಹರಣೆಯ ಮೂಲಕ ಕಂಡುಕೊಳ್ಳಬಹುದು.

"ದುರುಗಾ ನಿನ್ನ ಮಗ ಚನ್ನಾ... ಅವುನು ನನ್ಗೂ ಮಗ'

ಅಂದ್ರ ಊರಿನ ಮಗ ಅನ್ನು, ಶಾಂತಪ್ಪ ಅಂತ ಬಗಲಾಗಿದ್ದ

ಸೂಗಪ್ಪ ಮಾಸ್ತರ ಸೇರಿಸಿದ್ದ ನಾನು ಅವುನಿಗೆ ಬೇಕಾದುದು ಸಹಾಯ
ಮಾಡೀನಿ 'ಯಪ್ಪ' ಈಗ ಇಲ್ಲಂತ ಯಾರಂದರ'

ನೀನಿದ್ದಂಗ ನಿನ್ನ ಮಗ ಇಲ್ಲ, ದುರುಗಾ.. ಅವುನು

ಉಂಡ ಗಂಗಾಳದಾಗ ಉಚ್ಚೆ ವಯ್ಯಾಕ ನಿಂತಾನ! ನಮ್ಮ

ಮನೆತನಕ ಮಸಿ ಬಳ್ಯಾಕ ನಿಂತಾನ! ದುರುಗಾ.. ನೀನು

ಅವುನಿಗೆ ಹೇಳು, ನಿನ್ನ ಮಾರೆ ನೋಡಿ ಸುಮಿದಿನಿ!

ಇಲ್ಲಂದ್ರ, ಅಂತ ಉರಿದೆದ್ದು ಮಾತನಾಡಿದ"(ಅಮರೇಶ ನುಗಡೋಣಿ, ತಮಂಧದ ಕೇಡು, ಪುಟ-೮-೯)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿಯ ದುರುಗ ಮೇಲ್ಜಾತಿಯ ಪುರುಷನನ್ನು 'ಯಪ್ಪಾ' ಎಂಬ ಸಂಬೋಧನಾ ರೂಪವನ್ನು ಗೌರವಸೂಚಕವಾಗಿ ಬಳಸುತ್ತಾನೆ. ಅದೇ ಮೇಲ್ಜಾತಿಯ ಪುರುಷ ಕೆಳಜಾತಿ ದುರುಗನನ್ನು ಏಕವಚನದಲ್ಲಿ ಅವನ ಹೆಸರನ್ನು ಹಿಡಿದು ಸಂಬೋಧಿಸುತ್ತಾನೆ. ಇಬ್ಬರು ಸಮವಯಸ್ಕರಾದರೂ ಜಾತಿ ಮತ್ತು ಅಂತಸ್ತಿನ ಕಾರಣಕ್ಕಾಗಿ ಸಂಬೋಧನಾ ನೆಲೆಯಲ್ಲಿ ಸಾಮಾಜಿಕ ಭಿನ್ನತೆಗಳು ಸೃಜನಶೀಲ ಬರವಣಿಗೆಯಲ್ಲಿ ಕಂಡುಬರುತ್ತಿವೆ.

ಸದಾಶಿವ. ಕೆ, ಅವರ 'ಗಿಡ್ಡಿ' ಕಥೆಯಲ್ಲಿ ಕೆಳಜಾತಿಯ ಮತ್ತು ಮೇಲ್ಜಾತಿಯ ಪಾತ್ರಗಳು ಪರಸ್ಪರವಾಗಿ ಸಂಬೋಧಿಸುವ ನೆಲೆಯಲ್ಲಿ ಇರುವ ಸಾಮಾಜಿಕ ಭಿನ್ನತೆಗಳನ್ನು ಉದಾಹರಣೆ ಮೂಲಕ ನೋಡಬಹುದು.

"ಹೌದೋ ಬರುಮ-ಈ ಸಾರಿಯಾದರೂ ನಿನ್ನ ಲೆಕ್ಕ

ಮಾಡುವವನೋ ಹೇಗೆ

ಆದೀತು ಒಡೆಯರೇ

ಹಾಗೆ ಹೇಳುವುದು ಮಾತ್ರ"(ಸದಾಶಿವ. ಕೆ, ಸಮಗ್ರ ಕಥೆಗಳು, ಪುಟ-೭೬)

ಈ ಸಂಭಾಷಣೆಯಲ್ಲಿ ಬರುಮ ಎಂಬ ಕೆಳಜಾತಿ ವ್ಯಕ್ತಿ, ಮೇಲ್ಜಾತಿ ತಿಮ್ಮಪ್ಪಯ್ಯನನ್ನು 'ಒಡೆಯರೇ' ಎಂದು ಗೌರವಸೂಚಕ ಪದ ಬಳಸಿ ಸಂಬೋಧಿಸುವುದು ಕಂಡುಬರುತ್ತದೆ. ಮಾಡುತ್ತಾನೆ. ಜೊತೆಗೆ 'ರೆ' ಎಂಬ ಬಹುವಚನ ಸೂಚಕವನ್ನು ಸಂಬೋಧನೆಯಲ್ಲಿ ಬಳಕೆ ಮಾಡುತ್ತಾನೆ. ಮೇಲ್ಜಾತಿ ತಿಮ್ಮಪ್ಪಯ್ಯ ಕೆಳಜಾತಿ ಪುರುಷ ಬರುಮನನ್ನು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಇಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸ್ತರವಿನ್ಯಾಸವನ್ನು ಗಮನಿಸಬಹುದು.

ವೀರಭದ್ರಪ್ಪ ಕುಂ, ಅವರ 'ದೇವರ ಹೆಣ' ಎಂಬ ಕಥೆಯಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಬರುತ್ತವೆ. ಅದರಲ್ಲಿ ಗೌಡ ಮತ್ತು ಅವನ ಮನೆಯ ಆಳು ಹೊಣ್ಣಿಯ ಸಂಭಾಷಣೆಯ ಮೂಲಕ ಸಂಬೋಧನೆ ರೂಪದ ಬಳಕೆಯ ನೆಲೆಗಳನ್ನು ಗಮನಿಸಬಹುದು.

"ದೇವ್ರ ಆರೋಗ್ಯ ಎಂಗೈತಿ, ಧಣಿ!
ಇನ್ನೆಲ್ಲೈತಿ ಸಿವ್ನ ಪಾದ ಸೇರಿಬುಟ್ತು ನಿನ್ ದೆವ್ರು
ಗೋಡ್ರೆ, ದೆವ್ರ ಎಣಾ, ತುಂಬಿದ ಮನ್ಯಾಗ ಬಾಳ
ಒತ್ತಿರೋದು ನಂಗ್ಯಾಕೊ ಬೇಷಿ ಕಾಣವಲ್ದು
ತಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆ ಕೊಡ್ರಿ
ಧಣಿ......... ಒಯ್ದು ಬುಡ್ತಿನಿ.

ನಿಂಗೆ ನೋಡೊಕೆ ಸತ್ತಿರೊದು ಅಗಸ್ರ ಕತ್ತಿ ಅಲ್ಲಲ್ಲೇ! ಮನೆಯ ಎತ್ತು, ಅದ್ನ ನಿನ್ ಕೈಗೊಪ್ಸಿ ನಾನ್ಯಾವ ಕರ್ಮಕ್ಕೋಗ್ಲಿ. ನಿಮ್ಮಂಥೊರೆ ಇಂಥ ಮಾತಂದ್ರೆ ಎಂಗ್ರಿ ಧಣಿ.... ನಾವು ಎಣಾ ತಿಂದು ಬದುಕೋ ಮಂದಿ. ದ್ಯಾವ್ರ ಎಣಾ ಕೊಡಿ ಕ್ವಯ್ದು ತಿಂದು ಬದಿಕಂತೀವಿ. ಓಗು ಓಗಲೇ. ತಿಳ್ದೊರೆ ಇಂಗಂದ್ರೆ ಮನಿಮಾದಿಗ್ರು...... ನಾವೇತ್ಲಾಗೆ ಓಗ್ಬೇಕು ಧಣಿ. ನಿಮ್ಮೆಂಜ್ಲು ತಿನ್ನೊ ಅಕ್ಕೈತಿ ಕೇಳ್ತೀವಿ. ಓಗ್ಲಿ ನಿಂ ಪಾದಕ್ಕೆ ಒಂದ್ಜೆತಿ ಜಮ್ದಾ ಮಾಡ್ಕೊಡ್ತೀನಿ. ದೇವ್ರು ಎಣ ಕ್ವಡ್ರಿ"(ನಾಯಕ ಡಿ.ಬಿ (ಪ್ರ.ಸಂ) ಕಥಾಸಂಗಮ, ಪುಟ-೭೨,೭೩)

ದೇವರ ಹೆಣ ಕಥೆಯಲ್ಲಿ ಬರುವ ಈ ಸಂಭಾಷಣೆ ಕೆಳಜಾತಿ ವ್ಯಕ್ತಿ ಹೊಣ್ಣಿ ಮೇಲ್ಜಾತಿ ವ್ಯಕ್ತಿ ಗೌಡನನ್ನು 'ಧಣಿ' ಎಂಬ ಗೌರವ ಸೂಚಕ ಬಳಸಿ ಸಂಬೋಧಿಸುತ್ತಾನೆ. ವೃತ್ತಿ/ಜಾತಿವಾಚಕ ಪದವಾದ 'ಗೌಡ' ಎಂಬ ಪದವನ್ನು ಕೂಡ ಗೌರವಸೂಚಕವಾಗಿ 'ಗೋಡ್ರೆ' ಎಂದು ಆಡುಭಾಷೆಯಲ್ಲಿ ಸಂಬೋಧಿಸುವುದರ ಜೊತೆಗೆ 'ರೇ' 'ರೀ' ಎಂದು ಬಹುವಚನದಲ್ಲಿ ಸಂಬೋಧಿಸುತ್ತಾನೆ. ಸಾಮಾನ್ಯವಾಗಿ ವ್ಯಕ್ತಿಗಳ ಮುಂದೆ ಬರುವ ಬಹುವಚನ ಸೂಚಕಗಳು ವೃತ್ತಿ/ಜಾತಿವಾಚಕಗಳಲ್ಲಿ ಸೇರ್ಪಡೆಗೊಂಡು ಬಳಕೆಯಾಗುತ್ತಿದೆ. ಮೇಲ್ಜಾತಿ ಪುರುಷ ಗೌಡ ಕೆಳಜಾತಿ ಪುರುಷ ಹೊಣ್ಣಿಯನ್ನು 'ಲೇ' ಎಂದು ಏಕವಚನದಿಂದ ಸಂಬೋಧಿಸುತ್ತಾನೆ. ಕೆಳಜಾತಿ ವ್ಯಕ್ತಿಯನ್ನು ಮೇಲ್ಜಾತಿಯವರು ಬಹುವಚನದಿಂದ ಗೌರವ ಸೂಚಕ ಬಳಸಿ ಸಂಬೋಧಿಸುವುದಿಲ್ಲ. ಈ ರೀತಿಯಾಗಿ ಸಂಬೋಧನೆಯ ಸಾಮಾಜಿಕ ನೆಲೆಗಳು ಕಂಡುಬರುತ್ತವೆ.

ಕಥೆಗಳಲ್ಲಿಯೂ ಸಹ ಕೆಳಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳನ್ನು ಧಣಿಗಳೇ, ಗೌಡ್ರೆ, ಬುದ್ಧಿ, ಸ್ವಾಮಿ, ಮುಂತಾದ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಸಂಬೋಧಿಸಿರುವುದು ಕಂಡುಬರುತ್ತದೆ. ಮೇಲ್ಜಾತಿಯವರು ಕೆಳಜಾತಿಯವರಿಗೆ ಗೌರವಸೂಚಕ

ಮತ್ತು ಬಹುವಚನಗಳನ್ನು ಬಳಸಿ ಸಂಬೋಧಿಸುವುದಿಲ್ಲ. ಏಕೆಂದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಾಬಲ್ಯದಲ್ಲಿನ ಕೆಳಜಾತಿ ವ್ಯಕ್ತಿಗಳು ಗೌರವ ಸಂಬೋಧನೆಗೆ ಅರ್ಹರಲ್ಲ. ಒಂದು ವೇಳೆ ಮೇಲ್ಜಾತಿಯವರಿಂದ ಗೌರವ ಸಂಬೋಧನೆಗಳಾದರೆ ಕೆಳಜಾತಿಯವರಿಗೆ ಕೆಳಜಾತಿಯವರಿಗೆ ಎಂದು ಕೇಡುಂಟಾಗುತ್ತದೆ ಎಂದು ನಂಬಿಸಲಾಗಿದೆ. ಸಮಾಜದ ವಾಸ್ತವದ ನೆಲೆಗಳಲ್ಲಿರುವಂತೆ ಕಥೆಗಳಲ್ಲೂ ಸಂಬೋಧನೆಯ ನೆಲೆಗಳು ಕಂಡುಬಂದಿವೆ. ಸಮಾಜದಲ್ಲಿ ವ್ಯಕ್ತಿ ಅಥವಾ ಸಮುದಾಯಗಳ ನಡುವಿನ ಅಂತರ, ಭಿನ್ನತೆ, ಸಾಮಾಜಿಕತೆ ಸಂಬೋಧನಾ ರೂಪಗಳ ಬಳಕೆಯಲ್ಲಿಯೂ ಕಂಡುಬಂದಿದೆ.

ನಾಟಕಗಳಲ್ಲಿ ಕೆಳಜಾತಿಯ ಪುರುಷ ಮೇಲ್ಜಾತಿ ಪುರುಷರನ್ನು ಸಂಬೋಧಿಸುವ ನೆಲೆಗಳನ್ನು ಕನ್ನಡ ನಾಟಕಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಸಂಬೋಧನಾ ನೆಲೆಗಳ ಬಳಕೆಯ ವಿನ್ಯಾಸವನ್ನು ಗುರುತಿಸಬಹುದು.

ಹನೂರು ಚನ್ನಪ್ಪ ಅವರ 'ಬೆಲ್ಲದ ದೋಣಿ' ಎಂಬ ನಾಟಕದಲ್ಲಿ 'ಗಾಲೂರಯ್ಯ' ಎಂಬ ಕೆಳಜಾತಿ ಪಾತ್ರ ಮೇಲ್ಜಾತಿಯ ಪಾತ್ರವನ್ನು ಹೇಗೆ ಸಂಬೋಧಿಸುತ್ತಾನೆ. ಮೇಲ್ಜಾತಿಯ ಪಣಗಾರ ಕೆಳಜಾತಿಯ ಗಾಲೂರಯ್ಯನನ್ನು ಹೇಗೆ ಸಂಬೋಧಿಸುತ್ತಾನೆ ಎಂಬುದನ್ನು ಉದಾಹರಣೆಯ ಮೂಲಕ ನೋಡಬಹುದು.

"ಗಾಲೂರಯ್ಯ :

ಸ್ವಾಮೇ.....ನಿಮ್ಮ ಕೈ ಮುಗಿತೀನಿ
ನಾನ್ಯಾಕ ಉಳ್ಕಂದಿದ್ದಿ ಅನ್ನದು
ನಿಮುಗ ಗೊತ್ತಿಲ್ದೆ ಇರದಾ?
ನಾನು ಸ್ವಾಮಿ...... ನಾನು....
ಮಾಲಾ ಹಾಕುಸ್ಕಂದಿರೋ..
ಅಯ್ಯಪ್ಪಸ್ವಾಮಿ ಮಾಲಾ ಹಾಕುಸ್ಕಂದಿರೋ..
ನಾನು ಸ್ವಾಮಿ ನಾನು

ಪಣಗಾರ :

ನೀನೇ ತಾನಾ..! ಇಲ್ಲ ಅಂದವ್ರು ಯಾರಾ?
ಹೇಳ್ದೆ ಕೇಳ್ದೆ ಮಾಲಾ ಹಾಕುಸ್ಕೊ ಅಂದವ್ರು ಯಾರಾ?
ಹಾಕುಸ್ಕಂದು ಮನಲೆ ಉಳ್ಕೊ ಅಂದವ್ರು ಯಾರಾ?

ಎಲ್ಲಾ ಮುಗಿಸ್ಕ ಬರದು ಎಂಟತ್ತು ದಿನವಾಯ್ತಲ್ಲ
ಆಗೇನಾ ನಿಮ್ಮಪ್ಪ ಬಂದು ಕೆಲ್ಸ ಮಾಡ್ದಾನಾ?
ನಿಮಿಚ್ಚ ನಿಮ್ನೇಡ ಅಂತ ಆಂದ್ಮೇಲಾ
ಹೇಳುವ್ರು ಕೇಳವ್ರು ಯಾರು ಇಲ್ಲಾ ಅಂದ್ಮೇಲಾ
ಹೊಟ್ಟೆ ತುಂಬ ಹಿಟ್ಟ್ಯಾಕ?
ನಾ ಕೊಡ ಸಂಬ್ಳ ಯಾಕ?
ಕಾಲಿ ಬಡ್ಡೆತವೆ.....!

ಗಾಲೂರಯ್ಯ : ಸ್ವಾಮೇ.......

ನೀಮು ಅಂತಿರದು ನನ್ನುನ್ಯಾ....?
ನೀಮು ಆಡ್ತಿರದು ನನ್ನುನ್ಯಾ....?
ದುಡ್ಕಿ..... ಯೇನೇನೋ ಅನ್ಬೇಡಿ
ಅನ್ನಾಗ...ಆಡಾಗ, ವಸಿ ಯೋಚ್ನ ಮಾಡಿ!
ಮೊದ್ಲಾಗೆಲ್ಲಾ.......ಬದ್ಲಾಗಿವ್ನಿ
ನಾನು ಸ್ವಾಮಿ........ ನಾನು
ಮಾಲಾ ಹಾಕುಸ್ಕಂಡಿರೋ
ನಾನು ಸ್ವಾಮಿ...... ನಾನು....!

ಪಣಗಾರ : ಲೇ..... ಗಾಲೂರಾ..

ಗೊತ್ತು ಕಲೆ..... ನನಗೊತ್ತು ಕಲೆ.... ನೀನೆ ಅಂತ
ಮಾಲಾನಾ ಹಾಕುಸ್ಕಂದನಾ ಅಂತ
ಹಾಗಂತ ಕತ್ತನಾ ಕುದರ ಅನ್ನಕಾದ?
ದೆವ್ವನ ದೇವ್ರು ಅನ್ನಕಾದ!
ಆಳ್ನ ಅರಸ ಅನ್ನಕಾದದ?

ಈ ಮೇಲೆ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಮಾತನಾಡಿರುವ ಸಂಭಾಷಣೆಯಲ್ಲಿ ಕೆಳಜಾತಿ ಗಾಲೂರಯ್ಯ ಅಯ್ಯಪ್ಪಸ್ವಾಮಿಯ ಮಾಲೆಯನ್ನು ಹಾಕಿಕೊಂಡಿರುತ್ತಾನೆ. ಯಾಕೆಂದರೆ

ಮೇಲ್ಜಾತಿಯವರು ನನ್ನನ್ನು ಗೌರವದಿಂದ ಸಂಬೋಧಿಸಬೇಕು ಎಂಬ ಕಾರಣಕ್ಕೆ ಅಯ್ಯಪ್ಪಸ್ವಾಮಿಯ ಮಾಲೆ ಹಾಕಿಕೊಂಡಿರುತ್ತಾನೆ. ಗಾಲೂರಯ್ಯ ಮೇಲ್ಜಾತಿಯ ಪಣಗಾರರನ್ನು 'ಸ್ವಾಮಿ' ಎಂಬ ಗೌರವಸೂಚಕ ಪದವನ್ನು ಬಳಸಿ ಸಂಬೋಧಿಸುತ್ತಾನೆ. ಯಾಕೆಂದರೆ ಅಯ್ಯಪ್ಪಸ್ವಾಮಿಯ ಮಾಲೆಯನ್ನು ಧರಿಸಿರುವುದರಿಂದ ಸ್ವಾಮಿ ಎಂದು ಸಂಬೋಧಿಸುತ್ತಿದ್ದಾನೆ. ಇಲ್ಲದಿದ್ದರೆ ಧಣಿ, ಒಡೆಯ, ಸಾಹುಕಾರ್ರೆ, ಪಣಗಾರ್ರೆ ಎಂದು ಸಂಬೋಧಿಸುತ್ತಿದ್ದ ಎಂದೆನಿಸುತ್ತದೆ.

ಪಣಗಾರರನ್ನು ಗಾಲೂರಯ್ಯ ಗೌರವಸೂಚಕದ ಜೊತೆಗೆ ಬಹುವಚನವನ್ನು ಬಳಸಿ ಸಂಬೋಧಿಸುತ್ತಾನೆ. ಆದರೆ ಮೇಲ್ಜಾತಿಯವರು ಕೆಳಜಾತಿಯವರಾದ ನಮ್ಮನ್ನು ಗೌರವಸೂಚಕ ಪದಗಳನ್ನು ಬಳಸಿ ಬಹುವಚನದಿಂದ ಸಂಬೋಧಿಸುವುದಿಲ್ಲ. ಎರಡು ದಿನವಾದರೂ ಮೇಲ್ಜಾತಿಯವರಿಂದ 'ಸ್ವಾಮಿ' ಎನಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಮಾಲೆಯನ್ನು ಹಾಕಿಕೊಂಡು ಬರುತ್ತಾನೆ. ಯಾಕೆಂದರೆ ಅಯ್ಯಪ್ಪಸ್ವಾಮಿ ಮಾಲೆಯನ್ನು ಹಾಕಿಕೊಂಡವರು ಎಲ್ಲವರನ್ನು ಸ್ವಾಮಿ ಎನ್ನಬೇಕು ಮತ್ತು ಮಾಲೆಯನ್ನು ಹಾಕಿಕೊಂಡವರನ್ನು ಯಾವುದೇ ಜಾತಿ ಬೇಧವಿಲ್ಲದೆ ಎಲ್ಲರೂ ಸ್ವಾಮಿ ಎನ್ನಬೇಕು ಎಂಬುದು ಧಾರ್ಮಿಕ ನಂಬಿಕೆ. ಆದ್ದರಿಂದ ಮೇಲ್ಜಾತಿಯವರು ನನ್ನನ್ನು 'ಸ್ವಾಮಿ' ಎನ್ನುತ್ತಾರೆ ಎಂಬ ಆಸೆಯಿಂದ ಗಾಲೂರಯ್ಯ ಬರುತ್ತಾನೆ. ಆದರೆ ಮೇಲ್ಜಾತಿಯ ಪಣಗಾರರು 'ಲೇ' ಗಾಲೂರಾ ಎಂದೆ ಸಾಮಾನ್ಯವಾಗಿ ಎಂದಿನಂತೆ ಏಕವಚನದಿಂದ ಹೆಸರಿಡಿದು ಸಂಬೋಧಿಸುತ್ತಾನೆ. ಸ್ವಾಮಿ ನಾನು ಅಯ್ಯಪ್ಪಸ್ವಾಮಿಯ ಮಾಲೆಯನ್ನು ಹಾಕಿಕೊಂಡಿದ್ದೇನೆ. ನೋಡಿ ಮಾತನಾಡಿ ಎಂದು ಗಾಲೂರಯ್ಯ ಹೇಳಿದರೂ 'ಲೇ' ಗಾಲೂರಾ ಹಾಗಂತ ಕತ್ತೆನಾ ಕುದುರೆ ಅನ್ನುವುದಕ್ಕೆ ಆಗುತ್ತ ದೆವ್ವನ ದೇವ್ರು ಅನ್ನುವುದಕ್ಕೆ ಸಾಧ್ಯನಾ, ಆಳನ್ನು ಅರಸ ಎನ್ನುವುದಕ್ಕೆ ಸಾಧ್ಯವೇ? ಎಂದು ಪಣಗಾರ ಹೇಳುತ್ತಾನೆ. ಅಂದರೆ ಕೆಳಜಾತಿಯವರು ಗೌರವ ಸಂಬೋಧನೆಗೆ ಅರ್ಹರಲ್ಲ. ಅದು ನಿಷಿದ್ಧ. ಮೇಲ್ಜಾತಿಯವರಾದ ನಾವುಗಳು ಕೆಳಜಾತಿಯವರನ್ನು ಗೌರವ ಸಂಬೋಧನೆಯಿಂದ ಕರೆಯಬಾರದು ಅದಕ್ಕೆ ಕೆಳಜಾತಿಯವರು ಅರ್ಹರಲ್ಲ ಎಂಬ ಮೇಲ್ಜಾತಿಯವರು ರೂಪಿಸಿರುವ ನಿಯಮವನ್ನು ಇದು ಸ್ಪಷ್ಟಪಡಿಸುತ್ತದೆ.

ಅನಂತಮೂರ್ತಿ. ಯು. ಆರ್, ಅವರ ಸಂಸ್ಕಾರ ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರು ಕೆಳಜಾತಿಯ ಪುಟ್ಟನನ್ನು ಬಹುವಚನದಿಂದ ಸಂಬೋಧಿಸುವುದಕ್ಕೆ 'ಆಚಾರ್ರೆ' ನನ್ನನ್ನು ಏಕವಚನದಲ್ಲೇ ಕರೀರಿ. ನೀವು ನನ್ನ ಬಹುವಚನದಲ್ಲಿ ಕರೆಯೊದು ನನ್ನ ಆಯುಸ್ಸಿಗೆ ಒಳ್ಳೆಯ ದಲ್ಲ'(ಅನಂತಮೂರ್ತಿ. ಯು. ಆರ್, ಸಂಸ್ಕಾರ, ಪುಟ-೧೦೨) ಈ ರೀತಿಯಾಗಿ ಕೆಳಜಾತಿಯವರು ಹೇಳುವುದಕ್ಕೆ ಕಾರಣ ಮೇಲ್ಜಾತಿಯವರು ಧಾರ್ಮಿಕತೆಯ ಹೆಸರಿನಲ್ಲಿ ಕೆಳಜಾತಿಯವರನ್ನು ನಂಬಿಸಿದ್ದಾರೆ. ಮೇಲ್ಜಾತಿಯವರು ಏನಾದ್ರು ಕೆಳಜಾತಿಯವರನ್ನು ಗೌರವಸೂಚಕ ಪದಗಳಿಂದ ಸಂಬೋಧಿಸಿದರೆ ಕೆಳಜಾತಿಯವರಿಗೆ ಒಳ್ಳೆಯದಾಗುವುದಿಲ್ಲ ಎಂಬುವಂತಹ ನಂಬಿಕೆಗಳನ್ನು

ಸೃಷ್ಟಿಸಿದ್ದಾರೆ. ಈ ರೀತಿಯಾಗಿ ಸಮಾಜದಲ್ಲಿ ದಲಿತರಿಗೆ ಅಥವಾ ಕೆಳಜಾತಿಯವರಿಗೆ ಕೆಲವು ಸಂಗತಿಗಳಲ್ಲಿ ನಿಷೇಧ, ನಿರ್ಭಂದಗಳನ್ನು ಹೇರಿದ್ದಾರೆ. ಅದು ಭಾಷೆಯಿಂದಲೂ ಸಹ ಹೊರತಾದುದಲ್ಲ. ಅದನ್ನು ಸಂಬೋಧನಾ ನೆಲೆಯಲ್ಲಿ ಕಂಡುಕೊಳ್ಳಲಾಗಿದೆ.

ಭೈರಪ್ಪ. ಎಸ್.ಎಲ್, ಅವರ 'ದಾಟು' ಕಾದಂಬರಿಯಲ್ಲಿ ಸಹ ಈ ರೀತಿಯ ಒಂದು ಸನ್ನಿವೇಶ ಬರುತ್ತದೆ. ಮೇಲ್ಜಾತಿಯ ಸತ್ಯಭಾಮ ಕೆಳಜಾತಿಯ ಮೀರಾ ಶಿಕ್ಷಣ ಪಡೆದ ಪಾತ್ರಗಳೇ. ಇಬ್ಬರ ಅವರ ನಡುವಿನ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು.

"ಮಧ್ಯಾಹ್ನ ಊಟಕ್ಕೆ ಏನು ಮಾಡ್ತಿರಿ?

ಮನೆಯಿಂದ ತಗೊಂಡು ಹೋಗತಿನಿ, ನೀವು ನನ್ನ ಬಹುವಚನದಾಗೆ ಮಾತನಾಡಿಸಬಾರದು" (ಭೈರಪ್ಪ. ಎಸ್.ಎಲ್, ದಾಟು, ಪುಟ-೨೩೦)

ಈ ಮೇಲಿನ ಸಂಭಾಷಣೆಯ ಮೂಲಕ ನಮಗೆ ತಿಳಿಯುವುದೆನೆಂದರೆ ಕೆಳಜಾತಿಯವರು ಗೌರವ ಸಂಬೋಧನೆ ಅರ್ಹರಲ್ಲ ಎಂಬ ಮೌಢ್ಯವನ್ನು ತುಂಬಲಾಗಿದೆ. ಶಿಕ್ಷಣ ಪಡೆದ ಕೆಳಜಾತಿ ಮೀರಾ ಕೂಡ ಆ ರೀತಿಯ ಮೌಢ್ಯಕ್ಕೆ ಒಳಗಾಗಿದ್ದಾಳೆ. ಮೇಲ್ಜಾತಿಯ ಶಿಕ್ಷಣ ಪಡೆದ ಸತ್ಯಭಾಮ ಅದನ್ನು ಮೀರಲು ಯತ್ನಿಸುತ್ತಾಳೆ. ಈ ರೀತಿಯಾಗಿ ಸಂಬೋಧನೆಯ ಬಳಕೆ ನೆಲೆಗಳಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಕೊಳ್ಳಲಾಗಿದೆ.

ಭಾಸ್ಕರ. ಟಿ.ಎಂ, ಅವರ 'ಭೂಮಿ' ಎಂಬ ನಾಟಕದಲ್ಲಿ ಮೇಲ್ಜಾತಿಯ ಗೌಡ ಮತ್ತು ಕೆಳಜಾತಿಯ ಮಲ್ಯಾ ಮತ್ತು ಭಿಮ್ಯಾ ಪಾತ್ರಗಳು ಸಂಭಾಷಣೆಯಲ್ಲಿ ಬಳಕೆ ಮಾಡುವ ಸಂಬೋಧನೆಯ ಬಳಕೆಯ ನೆಲೆಗಳನ್ನು ಗುರುತಿಸಬಹುದು.

"ಗೌಡ : ಅದ್ಯಾವ ಜಾತ್ರಿಯೋ ಈ ನನ್ನ ಮಕ್ಕಳದು

ಮಲ್ಯಾ : ಜಾತಿ ಅಲ್ರಿ ಯಪ್ಪ ಗೌಡ್ರ; ಜಾಥಾ ಹೊಂಟಾದ

ಗೌಡ : ಅದೇ ಅಂದೆ ಭೀಮ್ಯಾ, ಈ ಜಾತಿ ಇ ಕಡೆಯಾಕ ಹೊಂಟಾದ ಅಂತ? ಭೀಮ್ಯಾ ಈ ಕಡಿ ಹೊಂಟಿಲ್ರಿ ಎಪ್ಪ; ಅವು ಅವು ಆ ಕಡೆ ನಡದಾವು"(ಭಾಸ್ಕರ, ಟಿ.ಎಂ., ಭೂಮಿ, ಪುಟ-೨೧)

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಮಲ್ಯಾ ಮತ್ತು ಭೀಮ್ಯಾ ಎಂಬ ವ್ಯಕ್ತಿಗಳು ಊರಿನ ಮೇಲ್ಜಾತಿ ಗೌಡನನ್ನು 'ಅಪ್ಪ' ಎಂಬ ಸಂಬೋಧನಾ ರೂಪವನ್ನು ಮತ್ತು 'ಗೌಡ' ಎಂಬ ವೃತ್ತಿ ಅಥವಾ ಜಾತಿಸೂಚಕ ಎರಡನ್ನು ಸೇರಿಸಿ ಸಂಬೋಧಿಸುತ್ತಾರೆ. 'ರೀ' ಎಂಬ ಬಹುವಚನವನ್ನು ಸಂಬೋಧನೆಯಲ್ಲಿ ಬಳಸಿದ್ದಾರೆ. ಮೇಲ್ಜಾತಿಯ ಗೌಡ ಕೆಳಜಾತಿಯ ವ್ಯಕ್ತಿಗಳನ್ನು ಏಕವಚನದಲ್ಲಿ ಅವರ ಹೆಸರಿಡಿದು ಮತ್ತು ಆ ಹೆಸರನ್ನು ಮಲ್ಯಾ, ಭೀಮ್ಯಾ ಎಂದು ಸಂಬೋಧಿಸುತ್ತಾನೆ. ಇದು ಸಾಮಾಜಿಕ ವಾಸ್ತವವನ್ನು ತೋರಿಸುತ್ತದೆ.

ಹೀಗೆ ಕೆಳಜಾತಿಯ ಪುರುಷರು ಮೇಲ್ಜಾತಿ ಪುರುಷರನ್ನು ಬುದ್ದಿ, ಒಡೆಯ, ಸ್ವಾಮಿ, ಗೌಡ್ರೆ, ಧಣಿ, ಮುಂತಾದ ಗೌರವ ಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ.

ಮೇಲ್ಜಾತಿಯ ಪುರುಷರು ಕೆಳಜಾತಿ ಪುರುಷರನ್ನು ಲೇ, ಲೋ, ಡಾ. ಏನೋ, ಬಾರೋ, ಹೋಗೋ ಎಂಬಬಂತಹ ಏಕವಚನ ಸೂಚಕಗಳನ್ನು ಮತ್ತು ಹೆಸರಿಡಿದು ಸಂಬೋಧಿಸುತ್ತಾರೆ.

೩.೧.೧.೨. ಕೆಳಜಾತಿ ಪುರುಷರು ಮೇಲ್ಜಾತಿ ಮಹಿಳೆಯರನ್ನು ಮತ್ತು ಮೇಲ್ಜಾತಿ ಮಹಿಳೆಯರು ಕೆಳಜಾತಿ ಪುರುಷರನ್ನು ಸಂಬೋಧಿಸುವ ಕ್ರಮ

ಕೆಳಜಾತಿ ಪುರುಷರು ಮೇಲ್ಜಾತಿ ಮಹಿಳೆಯರನ್ನು ಗೌಡ್ತೆಮ್ಮ, ಅಮ್ಮಾರೇ, ಒಡತಿ, ಅವ್ವ, ಸಾಹುಕಾರ್ತಿ ದೇತ್ತೀ, ತಾಯಿ ಎಂದು ಕರೆಯುತ್ತಾರೆ. ಇವರ ತಂಗಿ ಅಥವಾ ಮಕ್ಕಳಿಗೆ ಚಿಕ್ಕಗೌಡ್ತಿ, ಚಿಕ್ಕಮ್ಮವ್ರು, ಚಿಕ್ಕೊಡತಿ, ಚಿಕ್ಕದೇತ್ತಿ ಎಂದು ಕರೆಯುತ್ತಾರೆ. ಈ ರೀತಿಯಾಗಿ ಕೆಳಜಾತಿ ಪುರುಷರು ಮೇಲ್ಜಾತಿ ಮಹಿಳೆಯರನ್ನು ಗೌರವ ಸಂಬೋಧನೆ ಮಾಡಿದರೆ, ಮೇಲ್ಜಾತಿ ಮಹಿಳೆಯರು ಕೆಳಜಾತಿಯ ಪುರುಷರನ್ನು ಏಕವಚನದಿಂದ ಹೆಸರಿಡಿದು ಕರೆಯುತ್ತಾರೆ. ಕೆಳಜಾತಿ ಪುರುಷರ ಪೂರ್ಣ ಹೆಸರನ್ನು ಸಂಬೋಧಿಸದೇ ಹೆಸರನ್ನು ಸಂಕ್ಷಿಪ್ತಗೊಳಿಸಿ ಸಂಬೋಧಿಸುತ್ತಾರೆ.

ಮೇಲ್ಜಾತಿಯ ಮಹಿಳೆಯರು ಕೆಳಜಾತಿ ಪುರುಷರನ್ನು ಅಪ್ಪ, ಅಣ್ಣ, ಅಯ್ಯ, ಮುಂತಾದ ವಾರ್ಗಿಕಗಳನ್ನು ಬಳಸಿ ಸಂಬೋಧಿಸುವುದಿಲ್ಲ. ಕೆಳಜಾತಿಯ ಪುರುಷರ ಹೆಸರಿನ ವಾರ್ಗಿಕ ಭಾಗದಲ್ಲಿ ಗೌರವಸೂಚಕಗಳಾದ ಗೌಡ, ರಾಯ, ಶಾಸ್ತ್ರೀ, ಮುಂತಾದ ಗೌರವಸೂಚಕಗಳು ಬರುವುದಿಲ್ಲ. ಮತ್ತು ಸಂಬೋಧಿಸುವುದಿಲ್ಲ. ಕೆಳಜಾತಿ ಪುರುಷರ ಹೆಸರುಗಳಲ್ಲಿ ವಾರ್ಗಿಕಗಳಿಲ್ಲದ ಹೆಸರುಗಳೆ ಹೆಚ್ಚಾಗಿವೆ. ಈ ಸಂಬೋಧನೆಯ ಆಯಾಮವನ್ನು ಗುರುತಿಸುವುದಕ್ಕೆ ಅಧ್ಯಯನಕ್ಕೆ ಆಯ್ದುಕೊಂಡ ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದೊರೆತಿರುವ ಮಾಹಿತಿಗಳ ಆಧಾರದ ಮೇಲೆ ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗಿದೆ.

ಚದುರಂಗರ 'ವೈಶಾಖ' ಕಾದಂಬರಿಯಲ್ಲಿ ಕೆಳಜಾತಿ ಪುರುಷ ಲಕ್ಕ, ಮೇಲ್ಜಾತಿಯ ಮಹಿಳೆ ರುಕ್ಮಿಣಿ ಇಬ್ಬರ ಸಂಭಾಷಣೆಯಲ್ಲಿ ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದು.

> "ತಾಳು, ತಾಳು ನನಗೂ ನಿನ್ನ ಬೊಡ್ಡ ಮರೆತೇಹೋಯ್ತು. ಇನ್ನೊಂದು ಮುರುಕಲ ರೊಟ್ಟಿ ತರ್ತೀನಿ" ಎಂದು–ಲಕ್ಕ "ಬ್ಯಾಡಿ ಬ್ಯಾಡಿ, ಅಮ್ಮಾರೆ ಇಲ್ಲಿರೂ ವೋಟೆ ಸಾಕು"(ಚದುರಂಗ, ವೈಶಾಖ, ಪುಟ–೫)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿಯ ಪುರುಷ ಲಕ್ಕ ಮೇಲ್ಜಾತಿಯ ಮಹಿಳೆ ರುಕ್ಮಿಣಿಯನ್ನು 'ಅಮ್ಮಾರೆ' ಎಂದು ಸಂಬೋಧಿಸುತ್ತಾನೆ. 'ಅಮ್ಮ' ಎಂಬ ಪದ ಮತ್ತು 'ಅವರು' ಎಂಬ ಬಹುವಚನ ಸೂಚಕ ಪದವನ್ನು ಸೇರಿಸಿ ಸಂಬೋಧನೆ ಮಾಡಿದ್ದಾನೆ. ಅವರು ಎಂಬ ಪದದ ಸವಕಳಿ ರೂಪವೇ 'ರೆ' ಆಗಿದೆ.

ಮೇಲ್ಜಾತಿ ಮಹಿಳೆ ಕೆಳಜಾತಿಯ ಪುರುಷ ಲಕ್ಕನನ್ನು ಯಾವುದೇ ಗೌರವಸೂಚಕಗಳನ್ನು ಬಳಸಿ ಸಂಬೋಧಿಸಿಲ್ಲ ಎಂದು ಹೇಳಬಹುದು.

ಸಿದ್ದಲಿಂಗಯ್ಯ ಅವರ ನಿರ್ದೇಶನದ 'ಹೇಮಾವತಿ' ಚಲನಚಿತ್ರದಲ್ಲಿ ಕಾಳಣ್ಣ ಎಂಬ ಕೆಳಜಾತಿ ಪುರುಷ, ಹೇಮಾವತಿ ಎಂಬ ಮೇಲ್ಜಾತಿ ಮಹಿಳೆಯನ್ನು ಸಂಬೋಧಿಸುವ ಕ್ರಮವನ್ನು ಹಾಗೂ ಮೇಲ್ಜಾತಿ ಮಹಿಳೆ ಕೆಳಜಾತಿ ಪುರುಷನನ್ನು ಸಂಬೋಧಿಸಿರುವ ಸ್ವರೂಪವನ್ನು ಉದಾಹರಣೆಯ ಮೂಲಕ ನೋಡಬಹುದು.

"ಕಾಳಣ್ಣ : ಅವ್ವ ಹೇಮವ್ವ...ತಕ್ಕವ್ವ, ಯಾಕವ್ವ, ನೂರಾರು ಜನಕ್ಕೆ ಅನ್ನ ಇಕ್ಕಿದ ಕೈನಾಗೆ ಇದನೆಂಗ್ ತಗಣಾದು ಅಂತ ಕಣ್ಣೀರು ಹಾಕ್ತಿದೀಯಾ ಅವ್ವ.

ಹೇಮಾವತಿ : ಕಾಳಣ್ಣ ನಿಮ್ಮ ಜೀವನಕ್ಕೆ ಕಷ್ಟ ಆಗಿರುವಾಗ ನನಗೆ ಬೇರೆ....

ಕಾಳಣ್ಣ : ಅಂಗೆಲ್ಲ ಅನ್ಬೇಡವ್ವ ತಕವ್ವ, ವಲ್ಲೆ ಅನ್ಬೇಡವ್ವ ಆ ರಾಮ್ ದೇವ್ರು ಮ್ಯಾಲೆ ಆಣೆ, ತಗವ್ವ

ಹೇಮಾವತಿ : ಇವತ್ತು ತಗೋತಿನಿ ನಾಳೆ ತರಬೇಡ, ದೇವ್ರು ಶಕ್ತಿ ಕೊಟ್ಟಿರುವಾಗ ದುಡಿದು ತಿನ್ನಬೇಕು. (ಚಲನಚಿತ್ರ, ಹೇಮಾವತಿ).

ಈ ಮೇಲಿನ ಉದಾಹರಣೆಯಲ್ಲಿನ ಸಂಬೋಧನೆಯನ್ನು ಗಮನಿಸಿದಾಗ ಕೆಳಜಾತಿಯ ಕಾಳಣ್ಣ ವಯಸ್ಸಿನಲ್ಲಿ ಹಿರಿಯವ. ಮೇಲ್ಜಾತಿಯ ಹೇಮಾವತಿ ವಯಸ್ಸಿನಲ್ಲಿ ಕಾಳಣ್ಣನಿಗಿಂತ ಕಿರಿಯವಳು ಆದರೂ ಕಾಳಣ್ಣ 'ಅವ್ವ, ಹೇಮವ್ವ' ಎಂದು ಸಂಬೋಧಿಸುತ್ತಾನೆ. 'ಅವ್ವ' ಎಂಬ ವಾರ್ಗಿಕ ಪದವನ್ನು ಸಂಬೋಧನೆ ರೂಪವಾಗಿ ಬಳಸಿ ಸಂಬೋಧಿಸುತ್ತಾನೆ. ಹೆಸರಿನ ಜೊತೆಗೂ ಸಹ 'ಅವ್ವ' ಎಂಬ ವಾರ್ಗಿಕವನ್ನು ಬಳಸಿ ಸಂಬೋಧಿಸುತ್ತಾನೆ. ಇದು ಹೇಮವ್ವ ಎಂದು ಬಳಸಲು ಕಾರಣ ಕಾಳಣ್ಣ ಮತ್ತು ಮೇಲ್ಜಾತಿಯ ಹೇಮಾವತಿಯ ನಡುವೆ ಆತ್ಮೀಯತೆ ಇದ್ದ ಕಾರಣ ಹೇಮವ್ವ ಎಂದು ಹೆಸರಿಡಿದು ಮಾತನಾಡಿಸುತ್ತಾನೆ. ಆತ್ಮೀಯತೆ ಇಲ್ಲದೆ ಇದ್ದಿದ್ದರೆ ಹೆಸರನ್ನು ಬಳಸಲು ಸಾಧ್ಯವಾಗುತ್ತಿರಲಿಲ್ಲ. ಅವ್ವರೆ, ಅಮ್ಮಾರೆ ಎಂದು ಬಳಸುತ್ತಿದ್ದಾ ಎಂದೆನಿಸುತ್ತದೆ. ಈ ಚಲನಚಿತ್ರದಲ್ಲಿ ಈ ರೀತಿ ಸಂಬೋಧನೆಯ ಬಳಕೆಯ ನೆಲೆಯನ್ನು ಕಾಣಬಹುದು.

ದೊರೆ-ಭಗವಾನ್ ಅವರ ನಿರ್ದೇಶನದ 'ಮುನಿಯನ ಮಾದರಿ' ಚಲನಚಿತ್ರದಲ್ಲಿ ಕೆಳಜಾತಿಯ ಪುರುಷ ಮುನಿಯ ಮೇಲ್ಜಾತಿಯ ಮಹಿಳೆ ನಡುವೆ ನಡೆಯುವ ಸಂಭಾಷಣೆಯಲ್ಲಿ ಸಂಬೋಧನೆಯ ಬಳಕೆಯ ಆಯಾಮಗಳನ್ನು ಕಾಣಬಹುದು. ಉದಾಹರಣೆಗೆ,

"ಮುನಿಯ : ಅವ್ವ ಹಿಟ್ಟಾಕ್ರವ್ವ

ಮೇಲ್ಜಾತಿ ಮಹಿಳೆ : ಬಂದೆ ಮುನಿಯ, ಇರು ಎಸರು ತರ್ತೀತಿನಿ"(ಚಲನಚಿತ್ರ, ಮುನಿಯನ ಮಾದರಿ).

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿ ಪುರುಷ ಮೇಲ್ಜಾತಿ ಮಹಿಳೆಯನ್ನು 'ಅವ್ವ' ಎಂದು ಸಂಬೋಧಿಸುತ್ತಾನೆ. ಅವ್ವ ಎಂಬ ಸಂಬಂಧ ಸೂಚಕ ಪದಮಾತ್ರ ಸಂಬಂಧಸೂಚಕವಾಗಿ ಉಳಿದಿಲ್ಲ ಸಂಬೋಧನಾ ರೂಪ ಬದಲಾಗಿ ಬಳಕೆಯಾಗುತ್ತಿದೆ. ಮೇಲ್ಜಾತಿ ಮಹಿಳೆ ಕೆಳಜಾತಿ ಪುರುಷನನ್ನು ಗೌರವಸೂಚಕ ವಾರ್ಗಿಕಗಳನ್ನು ಬಳಸದೆ ಮುನಿಯ ಎಂದು ಹೆಸರಿಡಿದು ಸಂಬೋಧಿಸುತ್ತಾಳೆ. ಇಲ್ಲಿ ಜಾತಿಯ ಕಾರಣಕ್ಕಾಗಿ ಈ ರೀತಿಯ ಸಂಬೋಧನೆ ರೂಪಗಳನ್ನು ಬಳಸಲಾಗುತ್ತದೆ. ಅದೆ ಮುನಿಯ ಮುನಿರಾಜನಾಗಿ ಮೇಲ್ಜಾತಿಯ ಪುರುಷನಾಗಿದ್ದರೆ ಸಂಬೋಧನೆ ಬಳಕೆ ಏಕವಚನದಲ್ಲಿರುತ್ತಿರಲಿಲ್ಲ. ಹಾಗಾಗಿ ಜಾತಿಯ ಕಾರಣಕ್ಕಾಗಿ ಸಂಬೋಧನೆಯ ಬಳಕೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಅಮರೇಶ ನುಗಡೋಣಿ ಅವರ 'ತಮಂಧದ ಕೇಡು' ಕಥೆಯಲ್ಲಿ ಕೆಳಜಾತಿಯ ದುರುಗಪ್ಪ ಮೇಲ್ಜಾತಿ ಮಹಿಳೆ ಸೂಗವ್ವನನ್ನು ಸಂಬೋಧಿಸುವ ಕ್ರಮ. ಮೇಲ್ಜಾತಿ ಮಹಿಳೆ ಕೆಳಜಾತಿಯ ಪುರುಷನನ್ನು ಸಂಬೋಧಿಸುವ ನೆಲೆಯನ್ನು ಒಂದು ಉದಾಹರಣೆ ಮೂಲಕ ಗಮನಿಸಬಹುದು.

"ದುರುಗಪ್ಪ.......

ಯವ್ವ.. ಅಂದು ಎದ್ದು ನಿಂತ.

ಬಿಸೆರೆಟ್ಟಿ ತಿನ್ನು ಬಾ....

ಯಾಕ ಬುಡವ್ವ! ಅರೆ ಹೊತ್ತಿಗೆ ತಿಂದು ಮಾಡದೇನಾದ!

ದಗದಿಲ್ಲ ಬಗಸಿಲ್ಲ"(ಅಮರೇಶ ನುಗಡೋಣಿ, ತಮಂಧದ ಕೇಡು, ಪುಟ–೧೯).

ಈ ಮೇಲೆ ಉಲ್ಲೇಖಿಸಿದ ಸಂಭಾಷಣೆಯಲ್ಲಿ ಕೆಳಜಾತಿಯ ದುರುಗಪ್ಪ ಮೇಲ್ಜಾತಿಯ ಸೂಗವ್ವನನ್ನು 'ಅವ್ವ' ಎಂಬ ಸಂಬೋಧನಾ ರೂಪವನ್ನು ಗೌರವಸೂಚಕವಾಗಿ ಬಳಸುತ್ತಾನೆ. ದುರುಗಪ್ಪ ಶಾಂತಗೌಡನ ಮನೆಯ ಜೀತದಾಳು. ಸೂಗಮ್ಮನು ಕೂಡ ಶಾಂತಗೌಡನ ಮನೆಯ ಅಡುಗೆ ಕೆಲಸದವಳು. ಸೂಗಮ್ಮ ಕೆಳಜಾತಿ ಮಹಿಳೆಯಲ್ಲ. ಆದರೆ ದುರ್ಗಪ್ಪ ಕೆಳಜಾತಿಯ ಪುರುಷನಾಗಿದ್ದಾನೆ. ದುರುಗಪ್ಪನನ್ನು ಪೂರ್ಣ ಹೆಸರಿನಿಂದಲೇ ಸಂಬೋಧಿಸುತ್ತಾಳೆ. ಆದರೆ ದುರುಗಪ್ಪನ ಸಾಮಾಜಿಕತೆ ನೆಲೆಯಲ್ಲಿ ಸಾಮಾಜಿಕ ಸ್ಥಾನಮಾನ ಯಾವುದೇ ಆಯಾಮದಿಂದ ಬದಲಾಗುವುದಿಲ್ಲ.

ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ಎಂಬ ನಾಟಕದಲ್ಲಿ ಕೆಳಜಾತಿಯ ಪುರುಷರಾದ ನಿಂಗ್ಯಾ, ಕಲ್ಯಾ ಮೇಲ್ಜಾತಿಯ ಗುಂಡಮ್ಮ ಗೌಡ್ತಿಯನ್ನು ಸಂಬೋಧಿಸುವುದು ಮತ್ತು ಮೇಲ್ಜಾತಿಯ ಗುಂಡಮ್ಮ ಗೌಡ್ತಿ ಸಂಬೋಧಿಸುವ ಕ್ರಮವನ್ನು ಉದಾಹರಣೆ ಮೂಲಕ ನೋಡಬಹುದು.

"ಗುಂಡಮ್ಮ ಗೌಡ್ತಿ : ನನ್ಮಕ್ಳು ನಿಂಗೂ, ಕಲ್ಲೂ ನೀವೇ ಹೌದಲ್ಲೊ?

ನಿಂಗ್ಯಾ ಮತ್ತು ಕಲ್ಯಾ : ಹೌದ್ರಿ ಎವ್ವಾ

ಗುಂಡಮ್ಮ ಗೌಡ್ತಿ : ತಾಯೀಗ್ಕಷ್ಟ ಬಂದ್ರ ಮಕ್ಳೀಗ್ಯ ಬಂದಂಗ್ ಹೌದೊ ಅಲ್ಲೊ?

ನಿಂಗ್ಯಾ ಮತ್ತು ಕಲ್ಯಾ : ಹೌದ್ರಿ ಎವ್ವಾ

ಗುಂಡಮ್ಮ ಗೌಡ್ತಿ : ಹಂಗ್ರಾದ ಕೇಳ್ರಿ ಮಕ್ಳ್ಯಾ. ಆ ಹೊಲೆರ ಪ್ಯಾನ್ ಮಗಾ ಮನ್ಮನ್ನಿ ಡಾಗದಾರಾಗ್ಯಾನ್ನೋಡ್"(ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ-೭೧).

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿಯ ಪುರುಷರು ಮೇಲ್ಜಾತಿಯ ಮಹಿಳೆ ಗುಂಡಮ್ಮ ಗೌಡ್ತಿಯನ್ನು 'ಎವ್ವಾ' ಎಂದು ಸಂಬೋಧಿಸುತ್ತಾರೆ ಸಾಮಾನ್ಯವಾಗಿ ಸಮಾಜದಲ್ಲಿ ಕೆಳಜಾತಿಯವರು ಮೇಲ್ಜಾತಿ ಮಹಿಳೆಯನ್ನು 'ಅವ್ವ', 'ಅಮ್ಮಾರೆ', 'ಒಡತಿ' ಇತ್ಯಾದಿಯಾಗಿ ಸಂಬೋಧಿಸುತ್ತಾರೆ. ಇಲ್ಲಿಯೂ ಸಹ 'ಎವ್ವಾ' ಎಂದು ತಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ಬಳಸಲಾಗಿದೆ. ಮೇಲ್ಜಾತಿ ಮಹಿಳೆ ಕೆಳಜಾತಿಯ ನಿಂಗ್ಯಾ ಮತ್ತು ಕಲ್ಯಾನನ್ನು 'ಮಕ್ಳೇ ಎಂದು ಸಂಬೋಧಿಸುತ್ತಾಳೆ. ಯಾಕೆಂದರೆ ಅವರಿಂದ ಒಂದು ಕೊಲೆಯನ್ನು ಮಾಡಿಸುವ ಸಂಚು ರೂಪಿಸಿರುತ್ತಾಳೆ. ಆದ್ದರಿಂದ ಅವರ ಮನವೊಲಿಸುವ ಸಲುವಾಗಿ ಮಕ್ಳೇ ಎಂದು ಸಂಬೋಧಿಸುತ್ತಾಳೆ. ಈ ರೀತಿಯಾಗಿ ಸಂಬೋಧಿಸುವುದು ಕಂಡುಬರುವುದಿಲ್ಲ.

ಈ ಮೇಲಿನ ಎಲ್ಲಾ ಉದಾಹರಣೆಗಳಲ್ಲೂ ಕೆಳಜಾತಿಯ ಪುರುಷರು ಮೇಲ್ಜಾತಿಯ ಮಹಿಳೆಯನ್ನು ಅವ್ವ, ಅಮ್ಮಾರೆ, ಯವ್ವಾ ಎಂಬ ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಎಲ್ಲಿಯೂ ಸಹ ಅವರ ಹೆಸರಿಡಿದು. ಏಕವಚನದಲ್ಲಿ ಸಂಬೋಧಿಸಿರುವ ಉದಾಹರಣೆಗಳು ದೊರೆಯುವುದಿಲ್ಲ. ಅದು ವಾಸ್ತವದಲ್ಲಿಯೂ ಸಹ ಆ ರೀತಿಯಾಗಿ ಇರುವುದಿಲ್ಲ. ಸೃಜನಶೀಲ ಕೃತಿಗಳಲ್ಲಿಯು ಆ ರೀತಿಯ ಉದಾಹರಣೆಗಳು ದೊರೆತಿಲ್ಲ. ಗೌರವಸೂಚಕ ಬಹುವಚನಗಳನ್ನು ಬಳಸಿಯೇ ಕೆಳಜಾತಿ ಪುರುಷರು ಮೇಲ್ಜಾತಿ ಮಹಿಳೆಯರನ್ನು ಸಂಬೋಧಿಸಿದ್ದಾರೆ.

ಮೇಲ್ಜಾತಿಯ ಮಹಿಳೆಯರು ಕೆಳಜಾತಿಯ ಪುರುಷರನ್ನು ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸಿರುವುದು ಕಂಡುಬರುವುದಿಲ್ಲ. ಏಕವಚನದಿಂದ ಮತ್ತು ಹೆಸರಿಡಿದು ಸಂಬೋಧಿಸಿರುವುದೇ ಹೆಚ್ಚಾಗಿ ಕಂಡುಬರುತ್ತವೆ. ಇದು ಸಾಮಾಜಿಕ /ವಾಸ್ತವವೂ ಹೌದು.

ಈ ರೀತಿಯಾಗಿ ಕೆಳಜಾತಿ ಪುರುಷರು ಮತ್ತು ಮೇಲ್ಜಾತಿ ಮಹಿಳೆಯರ ನಡುವೆ ನಡೆಯುವ ಸಂಬೋಧನಾ ನೆಲೆಗಳನ್ನು ಗುರುತಿಸಬಹುದು.

೩.೧.೧.೩. ಕೆಳಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಮಹಿಳಾ ಪಾತ್ರಗಳನ್ನು ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕೆಳಜಾತಿ ಮಹಿಳೆಯರು ಮೇಲ್ಜಾತಿ ಮಹಿಳೆಯರನ್ನು ಗೌರವ ಸಂಬೋಧನೆ ಹಾಗೂ ಬಹುವಚನ ನೆಲೆಯಿಂದಲೇ ಸಂಬೋಧಿಸುತ್ತಾರೆ. ಸಮವಯಸ್ಕರಾಗಲಿ, ಚಿಕ್ಕವರಾಗಲಿ ಅಥವಾ ಅವರಿಗಿಂತ ದೊಡ್ಡವರಾಗಲಿ ಗೌರವಸೂಚಕ ಬಹುವಚನದಿಂದಲೇ ಸಂಬೋಧಿಸುತ್ತಾರೆ. ಒಡತಿ, ಅಮ್ಮಾರೆ, ದೆತ್ತೀ, ಅಕ್ಕಾರೆ, ಗೌಡ್ತೆಮ್ಮ ಎಂದು ಕರೆಯುತ್ತಾರೆ. ಇವರ ತಂಗಿ ಅಥವಾ ಮಕ್ಕಳಿದ್ದರೆ ಅವರನ್ನು ಚಿಕ್ಕಮ್ಮಾರೆ, ಚಿಕ್ಕೊಡತಿ, ಚಿಕ್ಕದೆತ್ತೀ ಎಂದು ಕೆಳಜಾತಿ ಮಹಿಳೆಯರು ಮೇಲ್ಜಾತಿ ಮಹಿಳೆಯರನ್ನು ಸಂಬೋಧಿಸುತ್ತಾರೆ. 'ರೆ' ಎಂಬ ಬಹುವಚನ ಸೂಚಕವನ್ನು ಬಳಸುತ್ತಾರೆ. ಮೇಲ್ಜಾತಿ ಮಹಿಳೆಯರು ಕೆಳಜಾತಿ ಮಹಿಳೆಯರನ್ನು ಯಾವುದೇ ಸಂಬಂಧಸೂಚಕ ಮತ್ತು ಗೌರವಸೂಚಕಗಳನ್ನು ಬಳಸದೇ ಸಂಬೋಧಿಸುತ್ತಾರೆ. ಲೇ, ಏನೇ, ಬಾರೆ, ಹೋಗೆ ಎಂದು ಏಕವಚನದಲ್ಲಿ ಮಾತನಾಡಿಸುತ್ತಾರೆ. ಕೆಳಜಾತಿ ಮತ್ತು ಮೇಲ್ಜಾತಿ ಮಹಿಳೆಯರ ಸಂಭಾಷಣೆಯಲ್ಲಿ ಸಂಬೋಧಿಸಿರುವ ನೆಲೆಗಳನ್ನು ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ದೊರೆತ ಕೆಲವು ಉದಾಹರಣೆಗಳ ಮೂಲಕ ಜಾತಿಯ ಲಿಂಗ ಸಂಬಂಧಿ ನೆಲೆಯನ್ನು ಗುರುತಿಸಬಹುದು. .

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಕೆಳಜಾತಿ ಮೇಲ್ಜಾತಿ ಮಹಿಳೆಯರ ಸಂಭಾಷಣೆಯಲ್ಲಿ ಸಂಬೋಧನೆಯ ಬಳಕೆಯ ನೆಲೆಗಳನ್ನು ಉದಾಹರಣೆ ಮೂಲಕ ನೋಡಬಹುದು.

"ನಿಂಗೊಂದು ಸೀರೆ ತಂದುಕೊಡ್ತೀನೆ. ಇಲ್ಲೇ ಕತ್ತಲೆ ಮರೇಲಿ ಉಟ್ಟುಕೊ. ಆಮ್ಯಾಲೆ ಅವುಂತ್ಲ ಉಂಡುಕೊಂಡು ಹೋಗಬೌದಂತೆ..."

"ಇಲ್ಲ ಚಿನ್ನಕ್ಕಾ" ಗಂಭೀರವಾಣಿಯಿಂದ ಹೇಳುತ್ತಿದ್ದಳು ಪೀಂಚಲು "ನಾ ಈಗಲೆ ಹೋಗಬೇಕು; ಅವರು ಅವರು ಬೆಟ್ಟಳ್ಳಿಯಿಂದ ಬರಾದರೊಳಗೇ ನಾ ಬಿಡಾರದಾಗಿರಬೇಕು"

"ಯಾಕೆ? ಏನವಸರಾನೆ ನಿನಗೆ? ಗಂಡನಂತೆ ಹೆಂಡತಿ ಆಗಿ ಬಿಟ್ಟಿದ್ದೀಯಲ್ಲಾ"

"ನಾ ಅವರಿಗೆ ಹೇಳಿಬಂದಿಲ್ಲ"

"ಕದ್ದು ಬಂದೀಯೇನೆ?..."

ಹ್ಞೂ! ಕದ್ದೇ ಬಂದಿನಿ!(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೯೧-೯೨).

ಈ ಮೇಲಿನ ಸಂಭಾಷಣೆಯಲ್ಲಿ ಸಂಬೋಧನಾ ನೆಲೆಯ ಬಳಕೆಯನ್ನು ನೋಡುವುದಾದರೆ' ಕೆಳಜಾತಿಯ ಪೀಂಚಲು ಮತ್ತು ಮೇಲ್ಜಾತಿ ಚಿನ್ನಮ್ಮ ಇಬ್ಬರು ಜಾತಿಯಲ್ಲಿ ಬೇರೆಯಾದರೂ ವಯಸ್ಸಿನಲ್ಲಿ ಸಮವಯಸ್ಕರು. ಆದರೂ ಸಂಬೋಧನೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಕೆಳಜಾತಿಯ ಪೀಂಚಲು, ಮೇಲ್ಜಾತಿಯ ಚಿನ್ನಮ್ಮನನ್ನು 'ಅಕ್ಕ' ಎಂಬ ಸಂಬೋಧನಾ ರೂಪವನ್ನು ಹೆಸರಿನ ಜೊತೆಗೆ ಸೇರಿಸಿ ಸಂಬೋಧಿಸುತ್ತಾಳೆ. ಜಾತಿಯ ಕಾರಣಕ್ಕಾಗಿ ಸಂಬೋಧನೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಗೌರವಸೂಚಕಗಳನ್ನು ಮತ್ತು ಬಹುವಚನ ಸೂಚಕಗಳನ್ನು ಬಳಸಿಯೇ ಸಂಬೋಧಿಸುತ್ತಾಳೆ. ಆದರೆ ಮೇಲ್ಜಾತಿಯ ಚಿನ್ನಮ್ಮ ಕೆಳಜಾತಿಯ ಪೀಂಚಲುವನ್ನು ಏಕವಚನದಲ್ಲಿ ಸಂಬೋಧಿಸುತ್ತಾಳೆ. 'ಏನೆ' ಎಂಬ ಏಕವಚನ ಸೂಚಕವನ್ನು ಬಳಸುತ್ತಾಳೆ. ಕಾದಂಬರಿಯಲ್ಲಿ ಎಲ್ಲಿಯೂ ಸಹ ಮೇಲ್ಜಾತಿ ಮಹಿಳಾ ಪಾತ್ರ ಕೆಳಜಾತಿಯ ಮಹಿಳಾ ಪಾತ್ರಗಳ ಗೌರವಸೂಚಕವಾಗಿ ಸಂಬೋಧಿಸುವುದು ಕಂಡುಬರುವುದಿಲ್ಲ. ಇದು ಸಮಾಜದ ವಾಸ್ತವವನ್ನು ಪ್ರತಿಬಿಂಬಿಸುತ್ತದೆ.

ಭೈರಪ್ಪ. ಎಸ್.ಎಲ್., ಅವರ 'ದಾಟು' ಕಾದಂಬರಿಯಲ್ಲಿ ಬರುವ ಕೆಳಜಾತಿ ಮಹಿಳೆ ಮಾತಂಗಿಯ ಪಾತ್ರವು ಮೇಲ್ಜಾತಿ ಮಹಿಳೆ ಸತ್ಯಭಾಮೆ ಎಂಬ ಪಾತ್ರವನ್ನು ಸಂಬೋಧಿಸುವ ಕ್ರಮ ಮತ್ತು ಮೇಲ್ಜಾತಿ ಮಹಿಳಾ ಪಾತ್ರ ಕೆಳಜಾತಿ ಮಹಿಳಾ ಪಾತ್ರವನ್ನು ಯಾವ ರೀತಿಯಲ್ಲಿ ಸಂಬೋಧಿಸಲಾಗಿದೆ ಎಂಬುದನ್ನು ಉದಾಹರಣೆಯ ಮೂಲಕ ನೋಡಬಹುದು.

> "ಬೆಂಗ್ಳೂರಿಗೆ ಕರ್ಕಂಡ್ ಹೋಗ್ತೀವಿ. ಅಲ್ಲಿ ಡಾಕ್ಟರು ನೀನೂ ಬರಬೇಕು
> ಅಂದ್ರೆ ಬತ್ತೀಯ?
>
> ನಂಗೆ ಭೀತಿಯಾಗುತ್ತದೆ ಕಣ್ರವ್ವ
>
> ಭೀತಿಯಾಗುವುದಕ್ಕೆ ನಿಂಗೇನೂ ಮಾಡಲ್ಲ. ಇದಕ್ಕೂ ನಿನ್ನ ಕರೀತಾರೆ
> ಅಂತ ಗ್ಯಾರಂಟಿ ಇಲ್ಲ. ಇನ್ಯಾತರ ಭಯ?
>
> ನನ್ ಮಗ ಸುಮ್ನೆ ಬುಡ್ತಾನಾ?
>
> ಅವುಂದೇನು ಹೆದರಿಕೆ?
>
> ಯವ್ವೇ, ನಾಕ್ಯಟ್ಟೆ ಹಾರುವರು ಅಂದ್ರೆ ಕ್ಯಂಡ ಕಾರ್ತಾನೆ"(ಭೈರಪ್ಪ. ಎಸ್.ಎಲ್.,
> ದಾಟು, ಪುಟ-೨೦೧).

ಈ ಮೇಲೆ ಉಲ್ಲೇಖಿಸಿದ ಸಂಭಾಷಣೆಯಲ್ಲಿ ಕೆಳಜಾತಿ ಮಹಿಳಾ ಪಾತ್ರ ಮೇಲ್ಜಾತಿ ಮಹಿಳಾ ಪಾತ್ರಕ್ಕಿಂತ ವಯಸ್ಸಿನಲ್ಲಿ ತುಂಬ ದೊಡ್ಡವರು 'ಅವ್ವ', 'ಯವ್ವ' ಎಂಬ ಗೌರವಸೂಚಕಗಳನ್ನು ಬಳಸಿ ಸಂಬೋಧಿಸಲಾಗಿದೆ. ಈ ಎರಡು ಪಾತ್ರಗಳ ಸಂಬೋಧನೆಯಲ್ಲಿ

ಭಿನ್ನತೆಗಳಿವೆ. ಕೆಳಜಾತಿ ಮಹಿಳೆ ಮೇಲ್ಜಾತಿಯ ಮಹಿಳೆಯನ್ನು ಗೌರವಸೂಚಕ ಮತ್ತು ಬಹುವಚನಗಳನ್ನು ಸೇರಿಸಿ ಸಂಬೋಧನೆಯಲ್ಲಿ ಬಳಸಿದ್ದಾಳೆ. ಆದರೆ ಮೇಲ್ಜಾತಿಯ ಮಹಿಳಾ ಪಾತ್ರ ಕೆಳಜಾತಿ ಮಹಿಳಾ ಪಾತ್ರವನ್ನು ಯಾವುದೇ ಗೌರವಸೂಚಕಗಳನ್ನು ಬಳಸದೇ ಏಕವಚನದಲ್ಲಿ ಸಂಬೋಧಿಸಿರುವುದು ಕಂಡುಬರುತ್ತದೆ. ಮೇಲ್ಜಾತಿ ಪಾತ್ರ ಕೆಳಜಾತಿ ಮಹಿಳಾ ಪಾತ್ರಕ್ಕಿಂತ ವಯಸ್ಸಿನಲ್ಲಿ ಚಿಕ್ಕದು. ಆದರೂ ಏಕವಚನದಲ್ಲಿ ಸಂಬೋಧಿಸಲಾಗಿದೆ. ಈ ಮೇಲೆ ಉಲ್ಲೇಖಿಸಿದ ಉದಾಹರಣೆಯಲ್ಲಿ ಸಂಬೋಧನೆಯ ಬಳಕೆಯ ನೆಲೆಗಳ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದಾಗಿದೆ.

ಗಿರೀಶ ಕಾರ್ನಾಡ ನಿರ್ದೇಶನದ ಶ್ರೀಕೃಷ್ಣ ಆಲನಹಳ್ಳಿ ಕಥೆ ಆಧಾರಿತ 'ಕಾಡು' ಸಿನಿಮಾದಲ್ಲಿಯೂ ಕೆಳಜಾತಿ ಮಹಿಳಾ ಪಾತ್ರ ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳು ಸಂಬೋಧಿಸುವ ಕ್ರಮವನ್ನು ಉದಾಹರಣೆ ಮೂಲಕ ನೋಡಬಹುದು.

ಬೋಗಿ : ಏನ್ರವ್ವ ಹೋದ ರಾತ್ರಿ ಗೌಡ್ರು ಹಟ್ಟಿಲೆ ಇದ್ದಂತ್ರೆ; ನಾ ಹೇಳ್ತಿನಲ್ಲವ್ವ ಇನ್ನೇನು ಯೋಚ್ನೆ ಮಾಡಬ್ಯಾಡಿ, ಗೌಡ್ರು ಇನ್ನು ಬಸಕ್ಕನ ಕಡೆಗೆ ಮೊಕನು ಆಕಂಗಿಲ್ಲ.....

ಕಮಲಿ : ನಿನ್ನ ಬಾಯಾರ ಹಂಗಾದ್ರೆ ಸಾಕು ಬೋಗಿ"(ಚಲನಚಿತ್ರ, ಕಾಡು).

ಈ ಮೇಲಿನ ಸಂಭಾಷಣೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ಕೆಳಜಾತಿಯ ಮಹಿಳೆ ಬೋಗಿ ಮೇಲ್ಜಾತಿಯ ಮಹಿಳೆಯನ್ನು 'ಅವ್ವ' ಎಂಬ ಸಂಬೋಧನಾ ರೂಪವನ್ನು ಗೌರವಸೂಚಕವಾಗಿ ಬಳಸಿ ಬಹುವಚನದಿಂದಲೆ ಸಂಬೋಧಿಸುತ್ತಾಳೆ. ಸಾಮಾಜಿಕ ವಾಸ್ತವದಲ್ಲೂ ಮೇಲ್ಜಾತಿಯವರನ್ನು ಕೆಳಜಾತಿಯವರು ಗೌರವಸೂಚಕ ಬಹುವಚನದಿಂದಲೆ ಸಂಬೋಧಿಸುತ್ತಾರೆ. ಚಲನಚಿತ್ರದಲ್ಲಿಯೂ ವಾಸ್ತವದಲ್ಲಿರುವಂತೆಯೇ ಸಂಬೋಧನಾ ಬಳಕೆಯ ನೆಲೆಗಳು ಮೂಡಿಬಂದಿವೆ. ಮೇಲ್ಜಾತಿ ಮಹಿಳೆ ಕೆಳಜಾತಿ ಮಹಿಳೆಯನ್ನು ಹೆಸರಿಡಿದು ಏಕವಚನದಿಂದ ಸಂಬೋಧಿಸುವುದನ್ನು ಇಲ್ಲಿ ಕಾಣಬಹುದು. ಕೆಳಜಾತಿ ಮಹಿಳೆ ಹೆಸರಿಗೆ ಯಾವುದೇ ಗೌರವಸೂಚಕ ಮತ್ತು ಸಂಬಂಧ ಸೂಚಕ ವಾರ್ಗಿಕಗಳನ್ನು ಬಳಸಿ ಸಂಬೋಧಿಸಲಾಗಿಲ್ಲ. 'ಕಾಡು' ಚಲನಚಿತ್ರದಲ್ಲಿ ಮೂಡಿಬಂದಿರುವ ಈ ಒಂದು ಉದಾಹರಣೆಯ ಮೂಲಕ ಸಂಬೋಧನಾ ಬಳಕೆಯ ನೆಲೆಯ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗಿದೆ.

ರೆಡ್ಡಿ. ಹೆಚ್.ಎನ್., ಅವರು ನಿರ್ದೇಶಿಸಿದ 'ಕಾವೇರಿ' ಚಲನಚಿತ್ರದಲ್ಲಿಯೂ ಮೇಲ್ಜಾತಿ ಮಹಿಳೆಯರು ಕೆಳಜಾತಿ ಮಹಿಳಾ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸುವಂತಹ ಒಂದು ಉದಾಹರಣೆಯನ್ನು ನೋಡಬಹುದು.

"ಮೇಲ್ಜಾತಿ ಮಹಿಳೆ ೧ : ಏನೆಲೇ ಕಾವೇರಿ ಹ್ಯಾಗಿದೆ ನಿನ್ ಮೈಗೆ. ನಾವು ಇಲ್ಲಿ ನೀರು ತುಂಬ್ತಾ ಇದ್ರೆ ಎಂಜಲು ಮಾಡ್ತಿಯಾ ಎಂಜಲು.

ಮೇಲ್ಜಾತಿ ಮಹಿಳೆ ೨ : ಎಷ್ಟೇ ಕೊಬ್ಬು ನಿನ್ಗೆ ಎಲ್ಲಿರಬೇಕೋ ಅಲ್ಲಿರದುಬಿಟ್ಟು ಅದೇನೋ ನಡುಮನೆಗೆ ಬಂದಂತಾಯ್ತು.

ಮೇಲ್ಜಾತಿ ಮಹಿಳೆ ೨ : ಅಂಬುಜಮ್ಮನವರೆ ಇವರನ್ನೆಲ್ಲ ಊರಲ್ಲಲ್ಲ ಕಾಡ್ನಲ್ಲಿಟ್ರು ಪಾಪ ಬರಲ್ಲ.

ಕಾವೇರಿ : ಏನವ್ವ ಬಾಯಿಗೆ ಬಂದಂಗೆ ಮಾತಾಡಕ್ಕೆ ನಂಗು ಬತ್ತದೆ. ಈಗ ಏನಾಯ್ತು ಅಂತ ಈ ಪಾಟಿ ಹಾರಾಡ್ತಿರಿ. ಒಳ್ಳೆ ಸವಾಸ ಆಯ್ತಲ್ಲ ನಿಮ್ದು. ನಾನಿರೋದು ಈ ಕಡೆ, ನೀವು ಇರೋದು ಆ ಕಡೆ. ನನ್ನ ಎಂಜಲು ನೀರು ನಿಮ್ಮ ಕಡೆ ಬತ್ತೈತೋ, ನಿಮ್ಮ ಎಂಜಲು ನೀರು ನನ್ನ ಕಡೆ ಬತ್ತೈತೋ ನೋಡಿ ವಸಿ ಕಣ್ಬಿಟ್ಟು, ನೋಡುದ್ರ ಅದ್ಕೆ ಮಾತನಾಡುವಾಗ ನಾಲಿಗೆ ಮ್ಯಾಗೆ ವಸಿ ನಿಗಾ ಇರ್ಬೇಕು.

ಮೇಲ್ಜಾತಿ ಮಹಿಳೆ ೧ : ನೋಡಿ ಅವ್ಳುನ್ನ ನಾವು ಬ್ರಾಹ್ಮಣರು ದೇವ್ರು ಸಮಾನ ಅನ್ನೊದು ಬಿಟ್ಬಿಟ್ಟು ಬಾಯಿಗೆ ಬಂದಂಗೆ ಮಾತಾಡ್ತಿದಳೆ"(ಚಲನಚಿತ್ರ, ಕಾವೇರಿ).

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಮಹಿಳೆಯರು ಮತ್ತು ಕೆಳಜಾತಿ ಮಹಿಳಾ ಪಾತ್ರದ ನಡುವೆ ಸಂಭಾಷಣೆ ನಡೆಯುತ್ತದೆ. ಕಾವೇರಿ ಮೇಲ್ಜಾತಿ ಮಹಿಳಾ ಪಾತ್ರಗಳನ್ನು 'ಏನವ್ವ' ಎಂದು ಗೌರವಸೂಚಕ ಪದವನ್ನು ಬಳಸಿ ಸಂಬೋಧಿಸುತ್ತಾಳೆ. ಮೇಲ್ಜಾತಿ ಪಾತ್ರಗಳಿಗೆ ಬಹುವಚನವನ್ನು ಕೂಡ ಸಂಬೋಧನೆಯಲ್ಲಿ ಬಳಸಲಾಗಿದೆ. ಆದರೆ ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಕಾವೇರಿಯನ್ನು ಸಂಬೋಧಿಸುವಾಗ ಏನೇ, ಲೇ ಎಂಬ ಏಕವಚನ ಸೂಚಕಗಳನ್ನು ಬಳಸಿ ಸಂಬೋಧಿಸಲಾಗುತ್ತಿದೆ. ಇಲ್ಲಿ ಪ್ರಜ್ಞಾಪೂರ್ವಕವಾಗಿಯೇ ಏಕವಚನದಲ್ಲಿ ಕೆಳಜಾತಿ ಪಾತ್ರವನ್ನು ಸಂಬೋಧಿಸಲಾಗಿದೆ. ಸಾಮಾಜಿಕರು ರೂಪಿಸುವಂತೆ ಬ್ರಾಹ್ಮಣ ಮಹಿಳೆಯರು ಮೇಲ್ಜಾತಿಯವರು ಎಂದು ಸೃಷ್ಟಿಸಿಕೊಂಡಿರುವ ಕಾರಣಕ್ಕೆ ಕೆಳಜಾತಿ ಮಹಿಳೆಯರನ್ನು ಗೌರವ ಸಂಬೋಧನೆಯಲ್ಲಿ ಮಾತನಾಡಿಸುವುದಿಲ್ಲ. ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ಮಾತ್ರ ಚಲನಚಿತ್ರ, ಕಾದಂಬರಿಯಲ್ಲಿ ಮಾತ್ರ ಅಲ್ಲ ವಾಸ್ತವವಾಗಿಯೂ ಇದೇ ರೀತಿ ಸಂಬೋಧನೆ ಬಳಕೆಯ ನೆಲೆಯಲ್ಲಿ ಇರುವುದರಿಂದ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಸಂಬೋಧನಾ ಬಳಕೆಯ ನೆಲೆಗಳನ್ನು ಕಥೆಗಳಲ್ಲಿ ನೋಡುವುದಾದರೆ, ದೇವಕಿ ಎಂ. ಶೆಟ್ಟಿ ಅವರ 'ಜಾತಿಭೂತಕ್ಕೆ ಬಲಿ' ಎಂಬ ಕಥೆಯಲ್ಲಿ ಬರುವ ಕೆಳಜಾತಿ ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳ ಸಂಭಾಷಣೆಯನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು.

"ಇದೇನು ಮಾಡಿದಿರ ದೆತ್ತೀ

ಏನು ಮಾಡಿದೆ ಚೆನ್ನಿ. ಬಂದು ಕುಳಿತೆನಲ್ಲ. ನಾನು ಬಂದದ್ದು

ಆಗಲಿಲ್ಲವೇನು ನಿನ್ನ ಗಂಡ ಎಲ್ಲಿ ಹೋದನೇ?

ನನ್ನ ಮಾದಿಗ ಇನ್ನೂ ಬಂದಿಲ್ಲ. ಈಗ ಬಂದಾನು ತಾಯೀ. ನೀವೊಮ್ಮೆ ಹೊರ ಹೋಗಿ. ನೀವು ಹೀಗೆ ನಮ್ಮ ಮನೆಯೊಳಗೆ ಪ್ರವೇಶಿಸುವುದು ನಮ್ಮ ಕಲ್ಲೂರ್ಟಿಗಾಗುವುದಿಲ್ಲ. ಆತ ಮುನಿದಾನು, ಹೋಗಿ ತಲೆಗೆ ಸ್ನಾನ ಮಾಡಿ, ಏನಾದರೂ ಹರಕೆ ಹೇಳಿಕೊಂಡು ಬಿಡಿ ತಾಯಿ. ವಿಪತ್ತು ಬಾರದಿರದು ತಾಯೀ. ನಮಗೇ ಏನೇ ಆಗಲಿ. ಬಾಳಿ ಬಿಡಲಿರುವ ನೀವು ದೆತ್ತೀ! ಹೀಗೆ ಮಾಡಬೇಡಿ.

ಏನಾಯಿತು ಚೆನ್ನಿ, ನಾನೇನು ಸಾಯಲು ಬಂದಿರುವೇನೆ? ನೀನು ಮಾತನಾಡುವ ರೀತಿ ನೋಡಿದರೆ ನನ್ನ ಪ್ರಾಣವೆಳೆಯುತ್ತಿದೆ ಎಂದೇ ನೆನಸಬೇಕು"(ಉಷಾ ಪಿ ರೈ. ಕೆ(ಪ್ರ.ಸಂ) ಲೇಖಕಿಯರ ಸಣ್ಣ ಕಥೆಗಳು ಭಾಗ-೨, ಪುಟ-೧೭೯).

ಜಾತಿಭೂತಕ್ಕೆ ಬಲಿ ಎಂಬ ಕಥೆಯಲ್ಲಿ ಬರುವ ಕೆಳಜಾತಿ ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳ ಸಂಭಾಷಣೆಯನ್ನು ಗಮನಿಸಿದಾಗ ಸಂಬೋಧನೆಯಲ್ಲಿರುವ ಭಿನ್ನತೆಗಳು ಕಾಣುತ್ತವೆ. ಕೆಳಜಾತಿ ಪಾತ್ರವಾದ ಚೆನ್ನಿ, ಮೇಲ್ಜಾತಿ ಪಾತ್ರವಾದ ಸಖೂನನ್ನು 'ದೆತ್ತೀ', 'ತಾಯಿ' ಎಂಬ ಗೌರವ ಸಂಬೋಧನೆಗಳನ್ನು ಬಳಸಿ ಪ್ರತಿನಿಧಿಸುತ್ತಾಳೆ. ಗೌರವ ಸಂಬೋಧನೆಯ ಜೊತೆಗೆ ನೀವು, ನಿಮ್ಮ ಎಂಬಂತಹ ಬಹುವಚನಗಳನ್ನು ಸಹ ಬಳಸಲಾಗುತ್ತಿದೆ. ಮೇಲ್ಜಾತಿಯವರನ್ನು ಕೆಳಜಾತಿಯವರು ಗೌರವಸೂಚಕ ಮತ್ತು ಬಹುವಚನಗಳಿಲ್ಲದೆ ಸಂಬೋಧಿಸುವುದಿಲ್ಲ. ಸೃಜನಶೀಲ ಕಥೆ, ಕಾದಂಬರಿ, ಚಲನಚಿತ್ರ ಮತ್ತು ನಾಟಕಗಳಲ್ಲಾಗಿರಬಹುದು ಅಥವಾ ಸಮಾಜದ ವಾಸ್ತವದಲ್ಲಾಗಿರಬಹುದು ಮೇಲ್ಜಾತಿಯವರನ್ನು ಗೌರವಸೂಚಕ ಮತ್ತು ಬಹುವಚನ ಸೂಚಕಗಳಿಲ್ಲದೆ ಕೆಳಜಾತಿಯವರು ಸಂಬೋಧಿಸುವುದಿಲ್ಲ. ಈ ಕಥೆಯ ಮೂಲಕವು ಈ ನಿಯಮವನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ಮೇಲ್ಜಾತಿ ಪಾತ್ರವಾದ ಸಖೂ ಕೆಳಜಾತಿ ಪಾತ್ರವಾದ ಚೆನ್ನಿಯನ್ನು ಸಂಬೋಧಿಸುವ ಕ್ರಮ ಯಾವುದೆಂದರೆ ಗೌರವಸೂಚಕ ಮತ್ತು ಬಹುವಚನ ಸೂಚಕಗಳನ್ನು ಬಳಸದೆ ಸಂಬೋಧಿಸುವುದು ಮತ್ತು ಹೆಸರಿಡಿದು ಸಂಬೋಧಿಸುತ್ತಿರುವ ಕ್ರಮವಾಗಿದೆ. ಈ ಕಥೆಯಲ್ಲಿ ಮೇಲ್ಜಾತಿ ಮಹಿಳಾ ಪಾತ್ರಕ್ಕಿಂತ ಕೆಳಜಾತಿಯ ಮಹಿಳಾ ಪಾತ್ರ ವಯಸ್ಸಿನಲ್ಲಿ ಹಿರಿಯದಾದರೂ ಹೆಸರಿಡಿದು, ಏಕವಚನದಲ್ಲಿ ಸಂಬೋಧಿಸಲಾಗುತ್ತಿದೆ. ಈ ಮೇಲಿನ ಉದಾಹರಣೆಗಳು ಸಾಮಾಜಿಕ ವಾಸ್ತವವನ್ನು ಪ್ರತಿಬಿಂಬಿಸುತ್ತಿವೆ. ಸಂಬೋಧನೆಯಲ್ಲಿ ಈ ರೀತಿಯಾಗಿ ಭಿನ್ನತೆಗಳು ಕಂಡುಬರುವುದಕ್ಕೆ ಸಾಮಾಜಿಕ ಕಾರಣ ಒಂದೇ ಆಗಿರುವುದಿಲ್ಲ. ಆರ್ಥಿಕ ಕಾರಣವು ಮುಖ್ಯ ಎನಿಸುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳ ಮೂಲಕ ಸಂಬೋಧನೆ ಬಳಕೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಮೇಲ್ಜಾತಿ ಮಹಿಳೆಯರು ಮತ್ತು ಕೆಳಜಾತಿ ಮಹಿಳೆಯರು ಇಬ್ಬರು ಮಹಿಳೆಯಗಿದ್ದರೂ ಸಾಮಾಜಿಕವಾಗಿ ಬೇರೆ ಬೇರೆಯಾಗಿರುತ್ತಾರೆ. ಏಕೆಂದರೆ ಸಮಾಜದಲ್ಲಿ ಗುರುತಿಸಿರುವಂತೆ ಮೇಲ್ಜಾತಿ ಮತ್ತು ಕೆಳಜಾತಿ ಎಂಬ ಜಾತಿ ವ್ಯವಸ್ಥೆಯ ಏಣಿಶ್ರೇಣಿಯಲ್ಲಿ ಬೇರೆ ಬೇರೆಯಾಗಿ ನಿಲ್ಲುತ್ತಾರೆ. ಮೇಲ್ಜಾತಿ ಮಹಿಳೆಯರು ಮತ್ತು ಕೆಳಜಾತಿ ಮಹಿಳೆಯರು ಸಮವಯಸ್ಕರಾಗಿದ್ದರೂ, ಮೇಲ್ಜಾತಿ ಮಹಿಳೆಯರನ್ನು ಗೌರವದಿಂದಲೇ ಸಂಬೋಧಿಸಬೇಕು. ಏಕವಚನದಿಂದ ಸಂಬೋಧಿಸುವಂತಿಲ್ಲ. ಕೆಳಜಾತಿ ಮಹಿಳೆಯರು ಗೌರವ ಸಂಬೋಧನೆಗೆ ಅರ್ಹರಲ್ಲ. ಇದು ಸಾಮಾಜಿಕ ನಿಷೇಧವಾಗಿದೆ ಎಂದು ಕೆಳಜಾತಿಯವರಲ್ಲಿ ನಂಬಿಸಲಾಗಿದೆ. ಇದೇ ರೀತಿಯ ಸಂಬೋಧನೆಯ ಬಳಕೆ ನೆಲೆಗಳು ಕಾದಂಬರಿ, ಕಥೆ, ಚಲನಚಿತ್ರಗಳಲ್ಲಿ ಲಿಂಗ ಸಾಮ್ಯತೆಯಲ್ಲಿ ಸಾಮಾಜಿಕ ಭಿನ್ನತೆಯನ್ನು ಸಂಬೋಧನೆ ನೆಲೆಯಲ್ಲಿ ಗುರುತಿಸಲಾಗಿದೆ.

೩.೧.೧.೪. ಕೆಳಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಪುರುಷ ಪಾತ್ರಗಳನ್ನು ಮತ್ತು ಮೇಲ್ಜಾತಿ ಪುರುಷ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ.

ಸಾಮಾಜಿಕ ಸ್ತರವಿನ್ಯಾಸಗಳು ಭಾರತದಂತಹ ಜಾತಿಯ ಏಣಿ ಸಮಾಜದಲ್ಲಿ ಕಂಡುಬರುತ್ತವೆ. ಜಾತಿಯೊಂದೆ ಮುಖ್ಯವಲ್ಲ. ಆರ್ಥಿಕ ಅಸಮಾನತೆ, ಲಿಂಗ ಅಸಮಾನತೆಗಳು ಸಹ ಮುಖ್ಯವಾಗುತ್ತವೆ. ಈ ಅಸಮಾನತೆಗಳು ಸಂಬೋಧನಾ ಬಳಕೆಯ ನೆಲೆಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಕನ್ನಡ ಅಭಿವ್ಯಕ್ತಿಯಲ್ಲಿ ಅಂದರೆ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳಲ್ಲಿ ಬರುವ ಕೆಳಜಾತಿ ಮಹಿಳಾ ಪಾತ್ರಗಳು ಮತ್ತು ಮೇಲ್ಜಾತಿ ಪುರುಷಾ ಪಾತ್ರಗಳ ಸಂಭಾಷಣೆಗಳ ಮೂಲಕ ನೋಡಬಹುದು.

ಕೆಳಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಪುರುಷ ಪಾತ್ರಗಳನ್ನು ಗೌರವ ಸೂಚಕಗಳಾದ ಧಣಿ, ಒಡೆಯ, ಬುದ್ಧಿ, ಸ್ವಾಮಿ, ಅಯ್ಯ ಮುಂತಾದ ಪದಗಳನ್ನು ಬಳಸಿ ಸಂಬೋಧಿಸುತ್ತವೆ. ಹಾಗೆಯೇ 'ಅವರು', 'ನೀವು', 'ನಿಮ್ಮ', ತಾವು ಎಂಬಂತಹ ಬಹುವಚನ ಪದಗಳನ್ನು ಕೂಡ ಬಳಸಿ ಸಂಬೋಧಿಸುತ್ತವೆ. ಕೆಳಜಾತಿ ಮಹಿಳಾ ಪಾತ್ರಗಳನ್ನು ಮೇಲ್ಜಾತಿ ಪುರುಷ ಪಾತ್ರಗಳು ಹೆಸರಿಡಿದು, ಏಕವಚನದಲ್ಲಿ ಸಂಬೋಧಿಸುತ್ತವೆ. ಹಾಗೂ ಯಾವುದೇ ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸುವುದಿಲ್ಲ. ಈ ಸಂಬೋಧನಾ ಬಳಕೆಯ ನೆಲೆಗಳನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಬಹುದು. ಉದಾಹರಣೆಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಕೆಳಜಾತಿಯ ಮಹಿಳಾ ಪಾತ್ರವಾದ ಪೀಂಚಲು ಮೇಲ್ಜಾತಿ ಪುರುಷ ಪಾತ್ರವಾದ ಮುಕುಂದಯ್ಯನನ್ನು ಸಂಬೋಧಿಸುವ ಕ್ರಮಕ್ಕೂ, ಮೇಲ್ಜಾತಿ ಪುರುಷ ಕೆಳಜಾತಿ ಮಹಿಳಾ ಪಾತ್ರವನ್ನು ಸಂಬೋಧಿಸುವ ಕ್ರಮಕ್ಕೂ ತುಂಬಾ ವ್ಯತ್ಯಾಸವಿದೆ. ಈ ಇಬ್ಬರು ಸಮವಯಸ್ಕರಾಗಿದ್ದರೂ ಸಹ ಸಂಬೋಧನಾ ಕ್ರಮಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ

ಸಂಬೊಧನಾ ಕ್ರಮಗಳ ವ್ಯತ್ಯಾಸಗಳು ಹೇಗೆ ಕಂಡುಬರುತ್ತವೆ ಎಂಬುದನ್ನು ಉದಾಹರಣೆಯ ಮೂಲಕ ನೋಡಬಹುದು. ಉದಾಹರಣೆ ಈ ಕೆಳಗಿನಂತಿದೆ.

" ಪೀಂಚ್ಲು, ನನಗೊಂದು ಉಪಕಾರ ಆಗಬೇಕಾಗಿದೆಯಲ್ಲಾ! ಮಾಡ್ತೀಯಾ?"

"ಕೇಳ್ತಿರಲ್ಲ ನನ್ನ?.... ಏನು? ಹೇಳಿರಿ, ಅಯ್ಯಾ"

"ಮಾಡ್ತೀನಿ ಅಂತ ಭಾಷೆ ಕೊಟ್ಟರೆ....."

"ನಿಮ್ಮ ಪಾದದಾಣೆ, ಆಳಾಗಿ ಮಾಡ್ತೀನಿ, ಹೇಳಿ!"

"ಯಾರಿಗೂ ಗೋತ್ತಾಗಬಾರದು"

"ಇಲ್ಲಿ ಯಾರಿಗೂ ಹೇಳುವುದಿಲ್ಲ"

ಐತನಿಗೂ ಗೋತ್ತಾಗಬಾರದು" ಹುಡುಗಿ 'ಹ್ಞೂ' ಎನ್ನದೆ ಸ್ವಲ್ಪ ಹಿಂದು ಮುಂದು

ನೋಡುತ್ತಿದ್ದುದನ್ನು ಗಮನಿಸಿ ಮುಕುಂದಯ್ಯ ವಿವರಿಸಿದನು: "ನಿನ್ನ ಗಂಡಗೆ ಹೇಳಬಾರದ್ದೇನಲ್ಲ. ಆದರೆ ಅಂವ ಪೂರಾ ಬಾಯಾಳಿ. ನಿನಗೇ ಗೊತ್ತಿದೆ, ಅವನ ಹತ್ತಿರ ಯಾವ ಗುಟ್ಟೂ ಸಾಧ್ಯ ಇಲ್ಲ...."

"ಆಗಲಿ ಒಡೆಯ!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೪೫,೧೪೬).

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಈ ಪಾತ್ರಗಳ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಮಹಿಳಾ ಪಾತ್ರ ಪೀಂಚಲು ಮೇಲ್ಜಾತಿ ಪುರುಷ ಪಾತ್ರವಾದ ಮುಕುಂದಯ್ಯನನ್ನು 'ಅಯ್ಯ', 'ಒಡೆಯ' ಎಂಬ ಗೌರವಸೂಚಕಗಳನ್ನು ಬಳಸುತ್ತದೆ. ಎರಡು ಪಾತ್ರಗಳು ಸಮವಯಸ್ಕರ ಪಾತ್ರಗಳಾಗಿವೆ. ಆದರೂ ಪೀಂಚಲು ಗೌರವಸೂಚಕಗಳನ್ನು ಬಳಸಿ ಬಹುವಚನದಲ್ಲಿ ಸಂಬೋಧಿಸುತ್ತಿದ್ದಾಳೆ. ಏಕೆಂದರೆ ಇಲ್ಲಿ ಜಾತಿ ಮುಖ್ಯವಾಗಿ ಕೆಲಸ ಮಾಡುತ್ತಿದೆ. ಕೆಳಜಾತಿಯವರು ಮೇಲ್ಜಾತಿಯವರನ್ನು ಏಕವಚನದಿಂದ ಸಂಬೋಧಿಸುವಂತಿಲ್ಲ ಎಂದು ಮೇಲ್ಜಾತಿಯವರು ಸಾಮಾಜಿಕ ನಿಯಮವನ್ನು ರೂಪಿಸಿದ್ದಾರೆ. ಅದರಂತೆಯೇ ಕೆಳಜಾತಿಯವರು ಮೇಲ್ಜಾತಿಯವರನ್ನು ಗೌರವಸೂಚಕಗಳನ್ನು ಬಳಸಿ ಬಹುವಚನಗಳಿಂದ ಸಂಬೋಧಿಸುತ್ತಾರೆ. ಅದರಂತೆ ಈ ಕಾದಂಬರಿಯಲ್ಲಿಯೂ ಬಳಕೆ ಮಾಡಿರುವುದನ್ನು ಕಾಣಬಹುದು. ಮೇಲ್ಜಾತಿಯ ಮಹಿಳಾ ಪಾತ್ರವಾಗಿದ್ದು, ಸಮವಯಸ್ಕ ಪಾತ್ರವಾಗಿದ್ದಾರೆ ಮೇಲ್ಜಾತಿ ಪುರುಷನನ್ನು ಗೌರವ ಸಂಬೋಧನೆ ಮತ್ತು ಬಹುವಚನದಿಂದ ಕರೆಯಬೇಕೆಂಬ ನಿಯಮವಿರುತ್ತಿರಲಿಲ್ಲ. ಸಂಬೋಧನೆಯಲ್ಲಿ ಭಿನ್ನತೆಗಳು ಕಂಡುಬರುತ್ತಿರಲಿಲ್ಲ. ಕೆಳಜಾತಿಯ ಪಾತ್ರವಾದ ಕಾರಣಕ್ಕಾಗಿ ಗೌರವ ಸಂಬೋಧನೆಯನ್ನು ಬಳಸಬೇಕಾಗಿದೆ. ಮೇಲ್ಜಾತಿಯ ಪುರುಷ ಪಾತ್ರ ಕೆಳಜಾತಿಯ ಮಹಿಳಾ ಪಾತ್ರವನ್ನು ಗೌರವ ಸಂಬೋಧನೆಯಲ್ಲಿ

ಸಂಬೋಧಿಸಬೇಕೆಂಬ ಸಾಮಾಜಿಕ ನಿಯಮವೇನಿಲ್ಲ. ಅವರನ್ನು ಬಹುವಚನದಿಂದ ಸಂಬೋಧಿಸಿದರೆ ಕೆಳಜಾತಿಯವರಿಗೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆಯನ್ನು ಕೆಳ ಸಮುದಾಯಗಳಲ್ಲಿ ಸೃಷ್ಟಿಸಲಾಗಿದೆ. ಕೆಳಜಾತಿ ಮಹಿಳಾ ಪಾತ್ರವನ್ನು ಮೇಲ್ಜಾತಿ ಪುರುಷ ಪಾತ್ರ ಈ ಕಾದಂಬರಿಯಲ್ಲಿ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸಲಾಗಿದೆ. 'ಪೀಂಚಲು' ಎಂದು ಇರುವ ಹೆಸರನ್ನು 'ಪೀಂಚ್ಲು' ಎಂದು ಸಂಬೋಧಿಸಲಾಗಿದೆ. ಕೆಳಜಾತಿ ಪಾತ್ರವಾಗಿರುವ ಕಾರಣಕ್ಕೆ ಹೆಸರಿಡಿದು ಏಕವಚನದಲ್ಲೇ ಸಂಬೋಧಿಸಲಾಗುತ್ತಿದೆ. ಈ ರೀತಿಯಾಗಿ ಸಂಬೋಧನೆಯ ಬಳಕೆಯಲ್ಲಿ ಸಂಬೋಧನೆಯ ಸಾಮಾಜಿಕ ಭಿನ್ನತೆ ಇರುರುವುದನ್ನು ಇಲ್ಲಿ ಕಾಣಬಹುದಾಗಿದೆ.

ಚದುರಂಗರ 'ವೈಶಾಖ' ಕಾದಂಬರಿಯಲ್ಲೂ ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸುವಂತಹ ಉದಾಹರಣೆಯನ್ನು ಕೆಳಜಾತಿ ಮಹಿಳಾ ಪಾತ್ರವಾದ ಸಾಕಿ ಮತ್ತು ಮೇಲ್ಜಾತಿ ಪುರುಷ ಪಾತ್ರವಾದ ವೆಂಕಣ್ಣ ಜೋಯಿಸರ ಸಂಭಾಷಣೆಯಲ್ಲಿ ಕಾಣಬಹುದು. ಆ ಸಂಭಾಷಣೆ ಈ ಕೆಳಗಿನಂತಿದೆ.

"ನೋಡೆ ಸಾಕಿ, ನಮ್ಮ ಜೊತೆ ನೀನು ನಾವು ಹೇಳಿದ ಹಾಗೆ ಹೇಳಬೇಕು ಹೇಳ್ತಿಯಾ ಎಂದರು".

"ಆಗ್ಲಿ, ನೋಡಾನ, ಅದೆಂಗೆ ಯೋಳುಕಡಿ. ಪರ್ಯತ್ನ ಮಾಡ್ತೀನಿ" ಎಂದು ಸಾಕಿ ಹೇಳಿದಳು.

"ನೋಡೆ, ಹೀಗೆ ಹೇಳಬೇಕು; ಇನ್ನೂ ಮುಂದೆ ಈ ಪಾಪಿ ರುಕ್ಮಿಣಿಗೂ ನನಗೂ ಉದಕ ಸಂಬಂಧವಿಲ್ಲ....ಇಷ್ಟೇ. ಎಲ್ಲಿ ಹೇಳು ನೋಡೋಣ..."(ಚದುರಂಗ, ವೈಶಾಖ, ಪುಟ-೨೭೨).

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಕೆಳಜಾತಿಯ ಸಾಕಿ, ಮೇಲ್ಜಾತಿಯ ವೆಂಕಣ್ಣ ಜೋಯಿಸರನ್ನು ಯಾವುದೇ ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸುವುದಿಲ್ಲ. ಹಾಗಂತ ಏಕವಚನದಲ್ಲೂ ಸಂಬೋಧಿಸಲು ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ಸೇರಿದ್ದ ಜನರನ್ನು ನೋಡಿ ಸಾಕಿ ಗಾಬರಿಗೊಂಡಿರುತ್ತಾಳೆ. ಅಲ್ಲಿ ಏನು ಮಾಡಬೇಕು ಎಂದೆ ತಿಳಿಯುವುದಿಲ್ಲ. ಆಗ್ಲಿ ಅದೆಂಗೆ ಯೋಳುಕಡಿ ಪರ್ಯತ್ನ ಮಾಡ್ತೀನಿ! ಎಂದು ಮಾತ್ರ ಬಹುವಚನ ಸಂಬೋಧಿಸುತ್ತಾಳೆ. ಅಲ್ಲಿ ಮೇಲ್ಜಾತಿ ಪಾತ್ರವನ್ನು ಧಣಿ, ಒಡೆಯ, ಬುದ್ಧಿ ಎಂದು ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸಿದಿದ್ದರೂ ಮೇಲ್ಜಾತಿ ಪಾತ್ರದ ಸಾಮಾಜಿಕ ಸ್ಥಾನಮಾನವೇನ ಕಡಿಮೆಯಾಗುವುದಿಲ್ಲ. ಹಾಗಂತ ಏಕವಚನದಲ್ಲೂ ಮಾತನಾಡಿಸಲು ಸಾಧ್ಯವಿಲ್ಲ. ಬಹುವಚನದಿಂದ ಸಂಬೋಧಿಸಲಾಗುತ್ತದೆ. ಆದರೆ ಮೇಲ್ಜಾತಿಯ ಪುರುಷ ಪಾತ್ರ ವೆಂಕಣ್ಣ ಜೋಯಿಸರು ಕೆಳಜಾತಿ ಮಹಿಳೆ ಸಾಕಿಯನ್ನು ಏಕವಚನದಿಂದ ಹೆಸರಿಡಿದು ಮಾತನಾಡಿಸುತ್ತಾರೆ. 'ನೋಡೆ ಸಾಕಿ' ಎಂದು ಸಂಬೋಧಿಸುತ್ತಾರೆ. ಕೆಳಜಾತಿಯ ಪಾತ್ರವಾದ ಕಾರಣ ಈ ರೀತಿಯಾಗಿ ಸಂಬೋಧಿಸಲಾಗುತ್ತಿದೆ. ಇದು ಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸುತ್ತದೆ.

ಭೈರಪ್ಪ ಎಸ್.ಎಲ್., ಅವರ 'ದಾಟು' ಕಾದಂಬರಿಯಲ್ಲಿ ಬರುವ ಕೆಳಜಾತಿ ಮಹಿಳೆಯ ಪಾತ್ರ ಮತ್ತು ಮೇಲ್ಜಾತಿ ಪುರುಷ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಬಳಕೆಯಾದ ಸಂಬೋಧನಾ ಆಯಾಮವನ್ನು ನೋಡಬಹುದು. ಕೆಳಜಾತಿ ಮಹಿಳೆ ಮಾತಂಗಿ ಮೇಲ್ಜಾತಿ ಪುರುಷ ವೆಂಕಟರಮಣಯ್ಯ ಅವರ ಸಂಭಾಷಣೆಯನ್ನು ಈ ಕೆಳಗಿನಂತೆ ಗಮನಿಸಬಹುದು.

"ಏನೇ ಅದು

ಇಟ್ ಬೇಸಾಕ್ ಸದ್ಯ ಪುಳ್ಳೆ ಇರ್ನಿಲ್ಲ ಕಣ್ರಯ್ಯಾ ಎಂದು ಹೆದರುತ್ತಾ ನಿಂತಳು.

ತಗ ನಾನೇನ್ ಬ್ಯಾಡ ಅನ್ನಿಲ್ಲ. ರೊಟ್ಟಿಗ್ ಕಾಯಿಗೀಯಿ ಬೇಕಾ?

ಕೊಟ್ರೆ ಬಡಮುಂಡೆ ತಿಂತೀನಿ ಕಣ್ರಯ್ಯಾ

ಅದ್ಯಾಕೆ ಹ್ವಂಟೆ, ಇರು

ಕತ್ಲಾತು ಕಣ್ರಯ್ಯಾ"(ಭೈರಪ್ಪ ಎಸ್. ಎಲ್., ದಾಟು, ಪುಟ-೧೧೨).

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿ ಮಹಿಳೆ ಮೇಲ್ಜಾತಿ ಪುರುಷನನ್ನು 'ಅಯ್ಯ' ಎಂಬ ಗೌರವಸೂಚಕ ಪದ ಬಳಸಿ ಸಂಬೋಧಿಸುತ್ತಿರುವುದನ್ನು ಕಾಣಬಹುದು. ಹಾಗೆಯೇ ಬಹುವಚನವನ್ನು ಸಹ ಕೆಳಜಾತಿ ಮಹಿಳಾ ಪಾತ್ರ ಮೇಲ್ಜಾತಿ ಪುರುಷ ಪಾತ್ರಕ್ಕೆ ಬಳಸಲಾಗಿದೆ. ಆದರೆ ಮೇಲ್ಜಾತಿ ಪುರುಷ ಪಾತ್ರ ಕೆಳಜಾತಿ ಮಹಿಳೆಯನ್ನು 'ಏನೇ' ಎಂದು ಏಕವಚನ ಪದವನ್ನು ಬಳಸಿ ಸಂಬೋಧಿಸುತ್ತಿದೆ. ಈ ಸಂಬೋಧನೆಯ ಬಳಕೆಯಿಂದ ಸಾಮಾಜಿಕ ಸ್ತರವಿನ್ಯಾಸವನ್ನು ಗಮನಿಸಬಹುದು. ಏಕೆಂದರೆ ಕೆಳಜಾತಿಯವರಿಗೆ ಸಾಮಾಜಿಕವಾಗಿ ಗೌರವ ಸಂಬೋಧನೆಯನ್ನು ಬಳಸುವುದಿಲ್ಲ. ಈ ಕಾದಂಬರಿಯಲ್ಲಿಯೂ ಸಹ ಗೌರವ ಸಂಬೋಧನೆ ಮತ್ತು ಬಹುವಚನ ಪದಗಳು ಕೆಳಜಾತಿ ಮಹಿಳೆಗೆ ಬಳಕೆಯಾಗದೇ ಇರುವುದನ್ನು ಈ ಸಂಭಾಷಣೆಯಲ್ಲಿ ಗುರುತಿಸಲಾಗಿದೆ.

ಸದಾಶಿವ ಕೆ., ಅವರ 'ಗಿಡ್ಡಿ' ಕಥೆಯಲ್ಲಿಯೂ ಕೆಳಜಾತಿ ಮಹಿಳಾ ಪಾತ್ರ ಮೇಲ್ಜಾತಿ ಪುರುಷ ಪಾತ್ರವನ್ನು ಹೇಗೆ ಸಂಬೋಧಿಸುತ್ತದೆ. ಮೇಲ್ಜಾತಿ ಪುರುಷ ಪಾತ್ರ ಕೆಳಜಾತಿ ಮಹಿಳಾ ಪಾತ್ರವನ್ನು ಸಂಬೋಧಿಸುವ ನೆಲೆಯಾವುದು ಎಂಬುದನ್ನು ಈ ಕೆಳಗಿನ ಉದಾಹರಣೆ ಮೂಲಕ ನೋಡಬಹುದು.

"ಗಿಡ್ಡಿ ಇಲ್ಲಿ ಬಾ (ಎಂದು ಕೂಗಿದಾಗ ಓಡಿಬಂದು ನಾಲ್ಕು ಮೊಳ ದೂರದಲ್ಲಿ ನಿಂತಳು)

ಏನು? ಹೊತ್ತು ಮುಳುಗಿದರೂ ಮನೆಗೆ ಹೋಗಲಿಕ್ಕೆ ಬರುವುದಿಲ್ಲವೆ?

ಎಲ್ಲಿ ನಿನ್ನ ಅಪ್ಪ ಮೊಂಡ? ಏನು-ಮತ್ತೆ ಮೈಮುರಿ

ಮಲಗಿಕೊಂಡನೋ ಹೇಗೆ?

ನೆನ್ನೆಯಿಂದ ಮೈತಾಪ ಇಳಿದಿಲ್ಲ ಒಡೆಯರೇ-ಬಾಯಿಗೆ ಎಂಥದೂ

ಸೇರುವುದಿಲ್ಲ ಅನ್ನುತ್ತಾನೆ.

ಅದಕ್ಕೆನಂತೆ-ಸವಾರಿ ನಾಲಿಗೆಗೆ ಚಂದ ಆಗುವ ಹಾಗೆ

ಉಪ್ಪಿನಕಾಯಿ ಮಿಡಿಯೋ ಮತ್ತೊಂದೋ ಬೇಕಲ್ಲವೆ.

ಇಲ್ಲ ಒಡೆಯ-ಒಂದು ಪಾವಲಿ ಬೇಕಿತ್ತು"

(ಸದಾಶಿವ ಕೆ, ಸಮಗ್ರ ಕಥೆಗಳು, ಪುಟ-೭೬).

ಗಿಡ್ಡಿ ಕಥೆಯಲ್ಲಿ ಬರುವ ಈ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಮಹಿಳಾ ಪಾತ್ರ ಗಿಡ್ಡಿ, ಮೇಲ್ಜಾತಿ ಪುರುಷ ಪಾತ್ರ ತಿಮ್ಮಪ್ಪಯ್ಯನನ್ನು 'ಒಡೆಯ', 'ಒಡೆಯರೇ' ಎಂದು ಸಂಬೋಧಿಸಲಾಗುತ್ತಿದೆ. ತಿಮ್ಮಪ್ಪಯ್ಯನನ್ನು ತೋಟದ ಕೆಲಸಕ್ಕೆ ಬರುವ ಆಳು ಗಿಡ್ಡಿ ಜಮೀನ್ದಾರನಾದ ತಿಮ್ಮಪ್ಪಯ್ಯನನ್ನು 'ಒಡೆಯ' ಎಂದೇ ಗೌರವಸೂಚಕ ಪದಬಳಸಿ ಬಹುವಚನದಿಂದಲೇ ಸಂಬೋಧಿಸುತ್ತಾಳೆ. ಮೇಲ್ಜಾತಿ ಪುರುಷ ಪಾತ್ರ ತಿಮ್ಮಪ್ಪಯ್ಯ ಕೆಳಜಾತಿ ಗಿಡ್ಡಿ ಪಾತ್ರವನ್ನು 'ಗಿಡ್ಡಿ' ಎಂದು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸಲಾಗುತ್ತಿದೆ. ಕೆಳಜಾತಿ ಪಾತ್ರಗಳನ್ನು ಮೇಲ್ಜಾತಿಯ ಪಾತ್ರಗಳು ಏಕವಚನದಿಂದಲೇ ಸಂಬೋಧಿಸುತ್ತವೆ. ಹೆಣ್ಣು ಮತ್ತು ಗಂಡು ಪಾತ್ರವೆನ್ನದೆ, ಹಿರಿಯರು ಮತ್ತು ಕಿರಿಯರು ಎನ್ನದೆ ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಎಲ್ಲಾ ಪಾತ್ರಗಳನ್ನು ಹೆಸರಿಡಿದು ಏಕವಚನದಿಂದಲೇ ಸಂಬೋಧಿಸುತ್ತವೆ. ಗಿಡ್ಡಿ ಕಥೆಯಲ್ಲೂ ಅದೇ ರೀತಿ ಸಂಬೋಧನೆ ನೆಲೆಯ ಸಾಮಾಜಿಕ ಆಯಾಮ ಕಂಡುಬಂದಿದೆ.

ಚಂದ್ರಶೇಖರ ಕಂಬಾರ ಅವರ 'ಭಾರತಾಂಬೆ' ನಾಟಕದಲ್ಲಿ ಕೆಳಜಾತಿ ಮಹಿಳಾ ಪಾತ್ರ , ಮೇಲ್ಜಾತಿ ಪುರುಷ ಪಾತ್ರವನ್ನು ಮತ್ತು ಮೇಲ್ಜಾತಿ ಪುರುಷ ಪಾತ್ರ, ಕೆಳಜಾತಿ ಮಹಿಳಾ ಪಾತ್ರವನ್ನು ಸಂಬೋಧಿಸುವ ನೆಲೆಯ ಒಂದು ಉದಾಹರಣೆ ಈ ಕೆಳಗಿನಂತೆ ನೋಡಬಹುದು.

"ಶಾಸ್ತ್ರೀ : ಹಾ, ಹೆದರಬೇಡ 'ರಾಮೀ' ನೋಡು ನಿನಗೋಸ್ಕರ ಯಾರ‍್ಯಾರು ಬಂದಾರ! ಎಷ್ಟು ದೂರದಿಂದ ಬಂದಾರ! ಬರ‍್ರಿ ಸಾಹೇಬರ, ಬರ‍್ರಿ ಇಕೀನ ನೋಡ್ರಿ ರಾಮಕ್ಕ, ಈಕಿ ಬಂಗಾರಿ.

ರಾಮಕ್ಕ : ಇವ ಯಾರು?

ಶಾಸ್ತ್ರೀ : 'ಇವ' ಅಲ್ಲವೆ, 'ಇವರು' ಅನ್ನು. ದೊಡ್ಡ ಸಾಹೇಬರು. ಬೆಂಗಳೂರಿನವರು ವರ್ತಮಾನ ಪೇಪರ ಬರತೈತಲ್ಲ,

ಅದರ ಸಂಪಾದಕರು ಇವರ ಪೇಪರಂದರ, ನಿನ್ನೆ ನಿನ್ನ ಮಗಳ

ವಿಷಯ ಬಂತಲ್ಲ, ಅದನ್ನು ಪಿಡಿಸಿದವರು. ಸಣ್ಣಪೇಪರಲ್ಲ ಮತ್ತ.

ರಾಮಕ್ಕ : ಹಾದ್ಯಾಗ ಹೋಗವರೆಲ್ಲಾ ಬಂದು ನೋಡಿ ಹೋಗೋ

ಹಾಂಗಾಯ್ತೆಪ್ಪ ನಮ್ಮ

ಬಾಳ್ವೆ ನೀನೂ ಕಣ್ತುಂಬ ನೋಡಿ ಹೋಗು. ನಮ್ಮ ಮಾನಂದರ

ಮಾರ್ಕೆಟದಾಗಿನ ಪಲ್ಲೆ ಆಗೇತಿ. ನಾವತ್ತರೂ ಸತ್ತರೂ ಯಾರ ಕೇಳತಾರ

ಶಾಸ್ತ್ರೀ : ಹಂಗೆಲ್ಲಾ ಹೇಳಬ್ಯಾಡ ಬೇ; ನಾವಿಲ್ಲೇನು? ಇದನ್ನು

ಇಷ್ಟಕ್ಕ ಬಿಡತೀವಿ ಅಂತ ತಿಳಿಕೋಬ್ಯಾಡ. ಬಂಗಾರಿಮ್ಯಾಲ ಕೈ ಮಾಡೋದೂ

ಒಂದ ಅಂತ ತಿಳಿ"

(ಚಂದ್ರಶೇಖರ ಕಂಬಾರ, ನೆಲಸಂಪಿಗೆ ಭಾಗ-೨ ಪುಟ-೪೧೬).

ಈ ಮೇಲೆ ಉಲ್ಲೇಖಿಸಿರುವ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಮಹಿಳೆ ರಾಮಕ್ಕ ನಗರದ ಪತ್ರಕರ್ತನನ್ನು ಇವ ಯಾರೂ ಎಂದು ಉಲ್ಲೇಖಿಸಿದಾಗ; ಅಲ್ಲೆ ಇದ್ದ ಶಾಸ್ತ್ರೀ 'ಇವ' ಅಲ್ಲಬೆ 'ಇವರು' ಎಂದು ಬಹುವಚನದಿಂದ ಸಂಬೋಧಿಸು, ಇವರು ದೊಡ್ಡ ಸಾಹೇಬರು, ಬೆಂಗಳೂರಿನವರು ಎಂದು ಹೇಳುತ್ತಾನೆ. ಆದರೂ ಕೆಳಜಾತಿಯ ರಾಮ ಪಾತ್ರ ಅವನನ್ನು ಬಹುವಚನದಿಂದ ಸಂಬೋಧಿಸುವುದಿಲ್ಲ. 'ನೀನು ಕಣ್ತುಂಬ ನೋಡಿ ಹೋಗು' ಎಂದು ಏಕವಚನದಲ್ಲೆ ಸಂಬೋಧಿಸುತ್ತಾಳೆ. ಯಾಕೆಂದರೆ ರಾಮಕ್ಕ ವಯಸ್ಸಿನಲ್ಲಿ ದೊಡ್ಡವಳು, ಶಾಸ್ತ್ರೀ ಮತ್ತು ಪತ್ರಕರ್ತ ಇಬ್ಬರು ರಾಮಕ್ಕನಿಗಿಂತ ಚಿಕ್ಕವರು. ಆದರೂ ಶಾಸ್ತ್ರೀ ಕೆಳಜಾತಿಯ ರಾಮಕ್ಕನನ್ನು 'ರಾಮೀ' ಎಂದು ಹೆಸರಿಡಿದು ಸಂಬೋಧಿಸುತ್ತಾನೆ. ನಂತರ 'ಅಬ್ಬೆ' ಎಂಬ ಗೌರವಸೂಚಕವನ್ನು ಬಳಸಲಾಗುತ್ತಿದೆ. ಆದರೆ ಗೌರವಕೊಡಬೇಕು ಎಂಬ ಉದ್ದೇಶದಿಂದಲ್ಲ. ಸಾಮಾನ್ಯವಾಗಿ ಅಬ್ಬೆ ಎಂಬ ಸಂಬೋಧನೆ ರೂಪವನ್ನು ಬಳಸಲಾಗಿದೆ. 'ಇವ ಅಲ್ಲಬೆ' 'ಹಂಗೆಲ್ಲಾ ಹೇಳಬ್ಯಾಡಬೆ; ಎಂದು ಮೇಲ್ಜಾತಿಯ ಪುರುಷ ಪಾತ್ರ ಕೆಳಜಾತಿಯ ಮಹಿಳಾ ಪಾತ್ರವನ್ನು ಸಂಬೋಧಿಸುತ್ತಿದೆ. ಇಲ್ಲಿ ಕೆಳಜಾತಿ ಮಹಿಳೆಗೆ ಗೌರವಸೂಚಕ ಪದವನ್ನು ಬಳಸಲಾಗಿದೆ ಆದರೆ ಪ್ರಜ್ಞಾಪೂರ್ವಕವಾಗಿ ಗೌರವ ನೀಡಬೇಕು ಎಂಬ ಉದ್ದೇಶದಿಂದ ಬಳಸಲಾಗಿಲ್ಲ. 'ಅಬ್ಬೆ' ಎಂದರೆ 'ತಾಯಿ' ಎಂದರ್ಥ ಬರುತ್ತದೆ. 'ಅಬ್ಬೆ' ಎಂಬ ಪದದ ಸವಕಳಿ ರೂಪವೇ 'ಬೆ' ಆಗಿ ಬಳಕೆಯಾಗುತ್ತಿದೆ. ಮೇಲ್ಜಾತಿ ಪಾತ್ರ ಕೆಳಜಾತಿಯ ಮಹಿಳೆಗೆ 'ಬೆ' ಎಂದು ಗೌರವಸೂಚಕ ಸಂಬೋಧನೆ ಮಾಡಿದರೂ ಆ ಪಾತ್ರದ ಮನಸ್ಸಿನಲ್ಲಿ ಕೆಳಜಾತಿಯ ಪಾತ್ರದ ಮೇಲೆ ಯಾವುದೇ ರೀತಿಯ ಗೌರವವಿಲ್ಲ. ಮಾತಿನಲ್ಲಿ ಮಾತ್ರ 'ಬೆ' ಎಂದು ಸಂಬೋಧಿಸುತ್ತಿದೆ.

ಮೇಲ್ಜಾತಿಯವರ ರಾಜಕೀಯಕ್ಕೆ ಕೆಳಜಾತಿಯವರನ್ನು ಇಲ್ಲಿ ಬಲಿಪಶು ಮಾಡಲಾಗುತ್ತಿದೆ. ತನ್ನ ಕೆಲಸವನ್ನು ಸಾಧಿಸಿಕೊಳ್ಳಲು ಮೇಲ್ಜಾತಿ ಪಾತ್ರ ಈ ರೀತಿಯಾಗಿ ಸಂಬೋಧನೆ ಮಾಡುತ್ತಿದೆ.

ಇಲ್ಲಿ ಪ್ರಜ್ಞಾಪೂರ್ವಕವಾಗಿಯೇ ಮೇಲ್ಜಾತಿ ಪಾತ್ರಕ್ಕೆ ಕೆಳಜಾತಿಯ ಮಹಿಳಾ ಪಾತ್ರ ಗೌರವಸಂಬೋಧನೆ ಮತ್ತು ಬಹುವಚನವನ್ನು ಬಳಸಿಲ್ಲ ಎಂದೆನಿಸುತ್ತದೆ. ಏಕೆಂದರೆ ನಾಟಕದ ಆರಂಭದಲ್ಲಿ ಕೆಳಜಾತಿಯ ರಾಮಕ್ಕ ತನ್ನ ಸ್ವಗತದಲ್ಲಿ ಸಂಬೋಧನೆಯ ಆಯಾಮ ಕುರಿತು ಮಾತನಾಡುತ್ತಿರುವುದು ನೋಡಬಹುದು. ಉದಾಹರಣೆಗೆ "ಅವರು 'ಲೇ' ಅನ್ನಬೇಕು. ನಾವು 'ಧಣೇರ' ಅನ್ನಬೇಕು. ಅವರು ಕಾಲಿಂದ ತೋರಿಸಿದನ್ನ ನಾವು ನೆತ್ಯಾಗ ಹೊತ್ತ ಮಾಡಬೇಕು. ಹೆಚ್ಚೂ ಕಮ್ಮಿ ಆದರ ಕೂಲಿ ತಪ್ಪಸ್ತಾರ, ಊರ ಬಿಡಸ್ತಾರ, ಅದಕ್ಕ ಅವರ ನಾಯಿ ಹಂಗ ಇರಬೇಕು. ಯಾಕಂದರ ನಾವು ಕಡಿಮಿಯವರು ನೋಡು"(ಚಂದ್ರಶೇಖರ ಕಂಬಾರ, ನೆಲ ಸಂಪಿಗೆ ಭಾಗ-೨, ಪುಟ-೪೧೪).

ಈ ರೀತಿಯಾಗಿ ಕೆಳಜಾತಿ ಮಹಿಳೆ ತನ್ನ ಸ್ವಗತದಲ್ಲಿ ಸಂಬೋಧನೆ ಕುರಿತು ಮಾತನಾಡಿಕೊಳ್ಳುತ್ತಾಳೆ. ಮೇಲ್ಜಾತಿಯವರು ನಮ್ಮನ್ನು ಏಕವಚನದಲಿ 'ಲೇ' ಎಂದು ಸಂಬೋಧಿಸಬೇಕು. ಕೆಳಜಾತಿಯವರಾದ ನಾವು ಅವರನ್ನು 'ಧಣೇರ' ಎಂದು ಸಂಬೋಧಿಸಬೇಕು. ಯಾಕೆಂದರೆ ನಾವು ಜಾತಿಯಲ್ಲಿ ಕೀಳು ಎಂದು ಭಾವಿಸಿರುವುದರಿಂದ ಈ ರೀತಿ ಸಂಬೋಧಿಸಲಾಗಿದೆ. ಈ ನಾಟಕದಲ್ಲಿ ರಾಮಕ್ಕ ಗೌರವಸಂಬೋಧನೆ ಮತ್ತು ಬಹುವಚನಸೂಚಕ ಬಳಸಿಲ್ಲ ಎಂದೆನಿಸುತ್ತದೆ. ಈ ರೀತಿಯ ಸಾಮಾಜಿಕ ಸ್ತರವಿನ್ಯಾಸದ ಪ್ರಜ್ಞೆ ಈ ನಾಟಕದಲ್ಲಿ ಕೆಳಜಾತಿ ಮಹಿಳಾ ಪಾತ್ರದ ಮೂಲಕ ರಚನಾಕಾರರು ತಿಳಿಸಲು ಪ್ರಯತ್ನಿಸಿದ್ದಾರೆ.

ಈ ಮೇಲೆ ಉಲ್ಲೇಖಿಸಿದ ಎಲ್ಲಾ ಉದಾಹರಣೆಗಳ ಮೂಲಕ ಕಂಡುಕೊಳ್ಳುವುದೇನೆಂದರೆ ಕೆಳಜಾತಿಯ ಮಹಿಳಾ ಪಾತ್ರಗಳು ಮೇಲ್ಜಾತಿಯ ಪುರುಷ ಪಾತ್ರಗಳನ್ನು ಗೌರವಸೂಚಕ ಮತ್ತು ಬಹುವಚನಗಳನ್ನು ಸಂಬೋಧನೆಯಲ್ಲಿ ಬಳಿರುವುದು ಕಂಡುಬಂದಿದೆ. ಒಡೆಯ, ಧಣಿ, ಅಯ್ಯ, ಬುದ್ಧಿ ಮುಂತಾದ ಗೌರವಸೂಚಕಗಳನ್ನು ಬಳಸಿರುವುದು ಕಾಣಬಹುದು. 'ಅವರು', 'ರೆ', 'ನೀವು', ಎಂಬಂತಹ ಬಹುವಚನ ಸೂಚಕಗಳನ್ನು ಮೇಲ್ಜಾತಿ ಪುರುಷ ಪಾತ್ರಗಳಿಗೆ ಕೆಳಜಾತಿಯ ಮಹಿಳಾ ಪಾತ್ರಗಳು ಬಳಸಿರುವುದನ್ನು ಕಾಣಬಹುದು.

ಮೇಲ್ಜಾತಿ ಪುರುಷ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಏಕವಚನ ಮತ್ತು ಹೆಸರಿಡಿದು ಸಂಬೋಧಿಸುವ ಉದಾಹರಣೆಗಳೆ ಹೆಚ್ಚು, ಗಿಡ್ಡಿ, ಪೀಂಚ್ಲು, ಸಾಕಿ ಎಂಬಂತಹ ಕೆಳಜಾತಿ ಮಹಿಳಾ ಪಾತ್ರಗಳ ಹೆಸರುಗಳನ್ನು ಹೆಸರಿಡಿದು ಸಂಬೋಧಿಸುವುದು ಮತ್ತು ಏನೇ, ಲೇ, ಬಾರೆ ಎಂಬಂತಹ ಏಕವಚನ ಸೂಚಕಗಳನ್ನು ಬಳಸಿ ಸಂಬೋಧಿಸಲಾಗಿದೆ. ಇವುಗಳ ಮೂಲಕ ಆಯಾ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು. ಮೇಲ್ಜಾತಿ

ಪ್ರಜ್ಞಾವಂತರು ಮತ್ತು ಶಿಕ್ಷಣ ಪಡೆದ ಪಾತ್ರಗಳು ಮಹಿಳೆಯರನ್ನು 'ಅಮ್ಮಾ', 'ಅವ್ವ' ಎಂಬಂತಹ ಬಹುವಚನ ಗೌರವಸೂಚಕಗಳನ್ನು ಬಳಸಿ ಸಂಬೋಧಿಸಿರುವ ಉದಾಹರಣೆಗಳು ಸಹ ಇವೆ. ಹೇಮಾವತಿ ಚಲನಚಿತ್ರದಲ್ಲಿ ರಾಮಣ್ಣ ಪೆರಮಾಳ್ ಎಂಬ ಬ್ರಾಹ್ಮಣ ವ್ಯಕ್ತಿಯನ್ನು ನೋಡಿದ ಕೊಡಲೇ ಕೆಳಜಾತಿ ಮಹಿಳೆ ಚೆನ್ನಿ ಬುದ್ಧಿ ಎಂದು ಕೈಮುಗಿಯುತ್ತಿದ್ದಾಳೆ. ಆಗ ಬ್ರಾಹ್ಮಣ ಪಾತ್ರ ಚೆನ್ನಿ... ದೇವ್ರು ಒಳ್ಳೆದ್ ಮಾಡ್ಲಮ್ಮ ಎಂದು ಸಂಬೋಧಿಸುವುದನ್ನು ಕೂಡ ಕಾಣಬಹುದು.

ಪಡುವಾರಳ್ಳಿ ಪಾಂಡವರು ಚಲನಚಿತ್ರದಲ್ಲಿ ಕೆಳಜಾತಿ ಸುಂದ್ರಿಯನ್ನು ಮೇಲ್ಜಾತಿಯ ಶಿಕ್ಷಣ ಪಡೆದ ರಾಮಣ್ಣ ಮತ್ತು ಶಂಕರ ಎಂಬ ಪಾತ್ರಗಳು 'ಸುಂದ್ರಕ್ಕ' ಎಂದೆ ಸಂಬೋಧಿಸುತ್ತವೆ. ಈ ರೀತಿಯಾಗಿ ಕೆಳಜಾತಿಯ ಮಹಿಳಾ ಪಾತ್ರಗಳಿಗೆ ಮೇಲ್ಜಾತಿ ಪುರುಷ ಪಾತ್ರಗಳು ಗೌರವ ಸಂಬೋಧನೆ ಮಾಡಿರುವ ಉದಾಹರಣೆಗಳನ್ನು ನೋಡಬಹುದು. ಶಿಕ್ಷಣ ಪಡೆದ ಮತ್ತು ಪ್ರಜ್ಞಾವಂತ ಪಾತ್ರಗಳು ಆ ರೀತಿಯಾಗಿ ಸಂಬೋಧನೆ ಮಾಡಿದರೂ ಕೆಳಜಾತಿ ಪಾತ್ರಗಳಿಗೆ ಸಮಾಜದಲ್ಲಿ ಗೌರವ ಸಿಗುವುದು ವಿರಳವೆ. ಅವರ ಸಾಮಾಜಿಕತೆ ಬದಲಾಗುವುದಿಲ್ಲ. ಈ ರೀತಿ ಬೆಳವಣಿಕೆಯಷ್ಟು ಬದಲಾವಣೆಯ ಉದಾಹರಣೆಗಳನ್ನು ಕಾಣಬಹುದಷ್ಟೆ. ಸಮಾಜದಲ್ಲಿ ಮೇಲ್ಜಾತಿಯವರು ಕೆಳಜಾತಿಯವರಿಗೆ ಗೌರವ ಸಂಬೋಧನೆ ಮತ್ತು ಬಹುವಚನಗಳನ್ನು ಬಳಸಿ ಸಂಬೋಧಿಸುವುದು ಬಹುಪಾಲು ವಿರಳವೇ ಎಂದು ಹೇಳಬಹುದು.

೩.೧.೨. ಕೆಳಜಾತಿ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಸಮಾಜದಲ್ಲಿ ಸಾಮಾನ್ಯವಾಗಿ ಮೇಲ್ಜಾತಿ ಮೇಲ್ಜಾತಿಗಳ ನಡುವೆ, ಕೆಳಜಾತಿ ಕೆಳಜಾತಿಗಳ ನಡುವೆ ಹೆಚ್ಚಾಗಿ ಸಂಬಂಧಗಳನ್ನು ಬೆಳೆಸುವುದುಂಟು. ಪರಸ್ಪರ ಸಮಾನ ಜಾತಿಗಳಿಗೆ ಸಮಾನಗೌರವ ಸ್ಥಾನಮಾನಗಳು ಇರುತ್ತವೆ. ಸಂಬೋಧನೆ ಸಂದರ್ಭದಲ್ಲಿ ಕೆಳಜಾತಿ ವ್ಯಕ್ತಿಗಳ ಸಂಭಾಷಣೆಯಲ್ಲಿ ಯಾವ ರೀತಿ ಸಂಬೋಧನಾ ರೂಪಗಳು ಬಳಕೆಯಾಗಿವೆ ಎಂಬುದನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಬರವಣಿಗೆ ಮತ್ತು ದೃಶ್ಯ ಮಾಧ್ಯಮದಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ನಡುವೆ ಇರುವಂತಹ ಸಂಬೋಧನಾ ನೆಲೆಗಳನ್ನು ಉದಾಹರಣೆಯ ಮೂಲಕ ನೋಡಬಹುದು.

ಕೆಳಜಾತಿ ಪಾತ್ರಗಳಲ್ಲಿ ಪುರುಷ ಪಾತ್ರ ಇನ್ನೊಂದು ಪುರುಷ ಪಾತ್ರವನ್ನು, ಕೆಳಜಾತಿ ಮಹಿಳಾ ಪಾತ್ರ ಇನ್ನೊಂದು ಮಹಿಳಾ ಪಾತ್ರವನ್ನು ಮತ್ತು ಕೆಳಜಾತಿ ಪುರುಷ ಪಾತ್ರಗಳು ಕೆಳಜಾತಿಯ ಮಹಿಳಾ ಪಾತ್ರಗಳನ್ನು ಕೆಳಜಾತಿಯ ಮಹಿಳಾ ಪಾತ್ರಗಳು ಕೆಳಜಾತಿಯ ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ ಕುರಿತು ಕೆಲವು ಪ್ರಾತಿನಿಧಿಕ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಉದಾಹರಣೆಗಳ ಆಧಾರದ ಮೇಲೆ ಚರ್ಚಿಸಲಾಗಿದೆ.

ಸಾಮಾನ್ಯವಾಗಿ ಒಂದೇ ಜಾತಿಯ ವ್ಯಕ್ತಿಗಳ ನಡುವೆ ಹಿರಿಯರಿಗೆ ಕಿರಿಯರು ಗೌರವಸೂಚಕ ಹಾಗೂ ಬಹುವಚನಗಳನ್ನು ಬಳಸುತ್ತಾರೆ. ಕಿರಿಯರಿಗೆ ಹಿರಿಯರು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವುದು ಸಾಮಾನ್ಯ ಲಕ್ಷಣವಾಗಿ ಕಾಣಬಹುದು. ಇದು ಸೃಜನಶೀಲ ಬರವಣಿಗೆ ಮತ್ತು ದೃಶ್ಯ ಮಾಧ್ಯಮದಲ್ಲಿರುವ ಪಾತ್ರಗಳ ಮೂಲಕ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ಕೆಲವು ಉದಾಹರಣೆಗಳ ಸಹಿತ ನೋಡಬಹುದು.

೩.೧.೨.೧. ಪುರುಷ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕೆಳಜಾತಿಯ ಪುರುಷ ಪಾತ್ರಗಳು ಕೆಳಜಾತಿಯ ಪುರುಷ ಪಾತ್ರಗಳನ್ನು ಸಂಬೋಧಿಸಬೇಕಾದರೆ ಹಿರಿಯ ಪಾತ್ರಗಳಾರೆ ಅಪ್ಪ, ಅಮ್ಮ, ಅಣ್ಣ ಎಂಬಂತಹ ಸಂಬೋಧನಾ ರೂಪಗಳನ್ನು ಗೌರವಸೂಚಕಗಳಾಗಿ ಸಂಬೋಧನೆಯಲ್ಲಿ ಬಳಸುತ್ತವೆ. ಕಿರಿಯ ಪಾತ್ರಗಳಾಗಿದ್ದರೆ, ಹಿರಿಯ ಪಾತ್ರಗಳು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತವೆ. ಲೇ, ಲೋ,ನರಸ, ಚನಿಯ ಈ ರೀತಿಯಾಗಿ ಹೆಸರಿಡಿದು ಏಕವಚನದಲ್ಲೇ ಸಂಬೋಧಿಸುವುದನ್ನು ಕಾಣಬಹುದು. ಈ ಸಂಬೋಧನೆಯ ನೆಲೆಗಳನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿರುವಂತಹ ಸನ್ನಿವೇಶಗಳನ್ನು ಉದಾಹರಣೆಯಾಗಿ ನೋಡಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳಜಾತಿ ಪುರುಷ ಪಾತ್ರಗಳ ಸಂಬೋಧನೆಯನ್ನು ಒಂದು ಸಂಭಾಷಣೆಯ ಮೂಲಕ ನೋಡಬಹುದು.

"ಏನ ಬೈರಣ್ಣಾ! ಕಂಡೀಲಿ ಕೋಲು ಹೆಟ್ಟಿ ಮುಸುಡಿಗೆ ಒಂದು ತಿವಿಯೋ"

"ಥೂಥೂಥೂ! ಹೊಟ್ಟೆ ಮೆಟ್ಟಿದ ಹೊಡೆತಕ್ಕೆ ಒಂದು ಮಣ್ಣು ತಟ್ಟೇನೆ ಸುರಿದು ಬಿಡ್ತಲ್ಲೋ..!

"ತಿಮ್ಮಣ್ಣಾ ತಿಮ್ಮಣ್ಣಾ, ಬಂತಲ್ಲೋ ಹೂ ಬಾಲದ ಸಲಗ!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೦೧).

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಪುರುಷರು ಪರಸ್ಪರ ಗೌರವ ಸಂಬೋಧನೆ ಬಳಸಿರುವುದು ತಿಳಿದು ಬರುತ್ತದೆ. 'ಅಣ್ಣ' ಎಂಬ ಸಂಬೋಧನಾ ರೂಪವನ್ನು ಹೆಸರಿನ ಜೊತೆಗೆ ಬಳಸಿ ಸಂಬೋಧಿಸಲಾಗಿದೆ. ಅದೇ ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಈ ಪುರುಷ ಪಾತ್ರಗಳನ್ನು ಭೈರಣ್ಣ, ತಿಮ್ಮಣ್ಣ ಎಂಬ ಹೆಸರನ್ನು ಭೈರ, ತಿಮ್ಮ ಎಂದೆ ಹೆಸರನ್ನು ಸಂಕ್ಷಿಪ್ತಗೊಳಿಸಿ ಸಂಬೋಧಿಸುತ್ತಿದ್ದವು. ಇಲ್ಲಿ ಕೆಳಜಾತಿ ಪುರುಷರು ಪರಸ್ಪರ ಗೌರವ ಸ್ಥಾನಮಾನವನ್ನು ಕೊಟ್ಟು ಸಂಬೋಧಿಸುವುದು ಕಂಡುಬರುತ್ತದೆ.

ಕಾರಂತ. ಬಿ.ವಿ., ನಿರ್ದೇಶನದ, ಶಿವರಾಮ ಕಾರಂತರ ಕಾದಂಬರಿಯಾದರಿತ 'ಚೋಮನದುಡಿ' ಚಲನಚಿತ್ರದಲ್ಲಿ ಕೆಳಜಾತಿ ಪುರುಷ ಪಾತ್ರಗಳ ಸಂಭಾಷಣೆಯಲ್ಲಿ ಸಂಬೋಧನೆಯ

ಬಳಕೆಯ ನೆಲೆಗಳನ್ನು ಒಂದು ಉದಾಹರಣೆಯ ಮೂಲಕ ನೋಡಬಹುದು. ಈ ಚಲನಚಿತ್ರದಲ್ಲಿ 'ಪೊಮ್ಮ' ಮತ್ತು 'ಚಿಂಕ್ರ'ಎಂಬ ಕೆಳಜಾತಿ ಪುರುಷ ಪಾತ್ರಗಳ ಸಂಭಾಷಣೆ ಈ ಕೆಳಗಿನಂತಿದೆ.

"ಚಿಂಕ್ರ : ಏನ್ ಪೊಮ್ಮಣ್ಣ ನಿನ್ ಸಂಗಡ ಮಗಳು ಬ್ಯಾರೆ ಬಂದಿದಾಳೆ ಆಯ್ತು ಸಂಪಾದನೆಗೆ ಒಂದು ದಾರಿ.

ಪೊಮ್ಮ : ಏನ್ ಮಾಡೋದು ಚಿಂಕ್ರಣ್ಣ ಹೊಟ್ಟೆ ಪಾಡೊಂದು ಇದಿಯಲ್ಲ"(ಚಲನಚಿತ್ರ, ಚೋಮನದುಡಿ)

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಹೆಸರನ್ನು ಕೇಳಿದ ಕೂಡಲೇ ಈ ಎರಡು ಪಾತ್ರಗಳು ಕೆಳಜಾತಿಯ ಪಾತ್ರಗಳೆಂದು ಹೇಳಬಹುದು. ಏಕೆಂದರೆ ಮೇಲ್ಜಾತಿ ಪಾತ್ರಗಳಲ್ಲಿ ಈ ರೀತಿಯ ಹೆಸರುಗಳು ಕಂಡುಬರುವುದಿಲ್ಲ. ಈ ಕೆಳಜಾತಿಯ ಪಾತ್ರಗಳು ಪರಸ್ಪರ ಗೌರವ ಸಂಬೋಧನೆಯಲ್ಲಿ ಮಾತನಾಡುತ್ತಿರುವುದನ್ನು ನೋಡಬಹುದು. ಇಲ್ಲಿಯೂ ಸಹ 'ಅಣ್ಣ' ಎಂಬ ಸಂಬೋಧನಾ ರೂಪವನ್ನು ಗೌರವ ಸೂಚಕವಾಗಿ ಬಳಸಿರುವುದನ್ನು ಕಾಣಬಹುದು. ಕೆಳಜಾತಿಯವರನ್ನು ಹೊರತುಪಡಿಸಿ ಇನ್ಯಾವ ವ್ಯಕ್ತಿಗಳು ಇವರನ್ನು ಗೌರವಸೂಚಕ ಪದಗಳಿಂದ ಮತ್ತು ಬಹುವಚನದಿಂದ ಸಂಬೋಧಿಸುವುದಿಲ್ಲ. ಆಯಾ ಸಮುದಾಯದ ವ್ಯಕ್ತಿಗಳಲ್ಲಿ ಸಮಾನ ಗೌರವ ಸ್ಥಾನಮಾನಗಳು ದೊರೆಯುತ್ತವೆ ಎಂಬುದನ್ನು ಈ ಉದಾಹರಣೆ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಮೊಗಳ್ಳಿ ಗಣೇಶ ಅವರ 'ಬುಗುರಿ' ಕಥೆಯಲ್ಲಿ ಸಂಬೋಧನಾ ನೆಲೆಗೆ ಸಂಬಂಧಿಸಿದ ಇನ್ನೊಂದು ಉದಾಹರಣೆಯೊಂದನ್ನು ನೋಡಬಹುದು. ಕೆಳಜಾತಿ 'ಅತಾರಿ' ಮತ್ತು 'ಚಿಕ್ಕಣ್ಣ' ಎಂಬ ಎರಡು ಪಾತ್ರಗಳು ಕೆಳಜಾತಿಯ ಪಾತ್ರಗಳಾಗಿವೆ ಈ ಪಾತ್ರಗಳ ಸಂಭಾಷಣೆಯಲ್ಲಿ ಸಂಬೋಧನೆಯ ಬಳಕೆ ನೆಲೆಗಳನ್ನು ನೋಡಬಹುದು. ಉದಾಹರಣೆಗೆ "ಯಂಗೋ ವತಾರಿಂದ ಒಳ್ಗೆ ಬಿದ್ಕಂಡು ಸಾಯು ಮಟ್ಟಕ್ಕೋಗದೆ, ಈಗ ಉಪಾಯ್ದಲಿ ಅದುರ್ ಕತ್ತ ಚಿಮ್ಕಿ ಸಾಯಸ್‌ಬೋದ್. ಅಂಗ್ಮಾಡುದ್ರೆ ಆದಾದ್ಲಾ ಅತಾರಿ. ಅಂದಿ ಸಕ್ನೆ ವತ್ಕಂಟ ಜೇಮ ಇಡ್ಕಂದಿರ್ತದೆ ಅದ್ಕೆ ಕತ್ತ ಚಿಮ್ಕಿ ಸಾಯ್ಸುಮಾತ ಅತ್ತಾಗ್ ಬಿಸಾಕು.

ನಿನೇಳುದೂ ಸರಿಯೇ ಕನಣ್ಣ ಯೀಗಾ ಇಂಗ್ಮಾಡ್ವೆ ಒಂದ್ ದೊಡ್ ಕಂಬ್ಳಿ ಚೀಲ್ಕೆ ಅದ ಸೇರುಸ್‌ಬುಟ್ಟು, ಆ ಮೇಕೆ ಅಗ್ಗ ಕಟ್ಟಿ ಮ್ಯಾಕೆಳಕಮ. ಸೈ ಕಲಾ ಅತಾರಿ(ಗಣೇಶ ಮೊಗಳ್ಳಿ, ಮೊಗಳ್ಳಿ ಕಥೆಗಳು, ಪುಟ-೨೩೩)

ಈ ಬುಗುರಿ ಕಥೆಯಲ್ಲಿ ಬರುವ ಎರಡು ಪಾತ್ರಗಳ ಸಂಭಾಷಣೆಯನ್ನು ನೋಡಿದಾಗ ಸಂಬೋಧನೆಯ ಬಳಕೆ ಎರಡು ರೀತಿಯಾಗಿರುವುದು ಕಾಣುತ್ತದೆ. ಒಂದು ಪಾತ್ರ ಏಕವಚನವನ್ನು ಬಳಸುತ್ತಿದೆ. ಮತ್ತೊಂದು ಪಾತ್ರ ಗೌರವಸೂಚಕವನ್ನು ಬಳಸುತ್ತಿದೆ. ಎರಡು ಕೆಳಜಾತಿಯ ಪಾತ್ರಗಳಾಗಿದ್ದರೂ ಸಂಬೋಧನೆ ಬಳಕೆಯ ನೆಲೆಯಲ್ಲಿ ಭಿನ್ನತೆ ಕಂಡುಬರುತ್ತಿದೆಯೆಂದರೆ

ಅತಾರಿ ಎಂಬ ಪಾತ್ರ ಚಿಕ್ಕಣ್ಣ ಎಂಬ ಪಾತ್ರಕ್ಕಿಂತ ವಯಸ್ಸಿನಲ್ಲಿ ಕಿರಿಯ ಪಾತ್ರ, ಅದಕ್ಕಾಗಿ ಹಿರಿಯ ಪಾತ್ರ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಿರುವುದನ್ನು ಕಾಣಬಹುದು. ಚಿಕ್ಕಣ್ಣ ಎಂಬ ಪಾತ್ರ ವಯಸ್ಸಿನಲ್ಲಿ ಹಿರಿಯ ಪಾತ್ರವಾಗಿರುವುದರಿಂದ ಅತಾರಿ 'ಅಣ್ಣ' ಎಂಬ ಸಂಬೋಧನಾ ರೂಪವನ್ನು ಗೌರವಸೂಚಕವಾಗಿ ಸಂಬೋಧನೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇಲ್ಲಿ ವಯಸ್ಸಿನ ಆಧಾರದ ಮೇಲೆ ಸಂಬೋಧನೆ ಬಳಕೆಯ ನೆಲೆ ನಿಂತಿದೆ ಎಂದು ಹೇಳಬಹುದು.

ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ಎಂಬ ನಾಟಕದಲ್ಲಿ ಬರುವ ದಲಿತ ಪಾತ್ರಗಳ ಅಂದರೆ ಕೆಳಜಾತಿ ಪಾತ್ರಗಳ ಸಂಭಾಷಣೆಯ ಮೂಲಕ ಕೆಳಜಾತಿ ಪುರುಷ ಪಾತ್ರಗಳು ಮಾತನಾಡಿಕೊಳ್ಳುವಾಗ ಬಳಸುವ ಸಂಬೋಧನಾ ನೆಲೆಗಳನ್ನು ಉದಾಹರಣೆ ಮೂಲಕ ನೋಡಬಹುದು.

ಈ ನಾಟಕದಲ್ಲಿ 'ನಿಂಗ್ಯಾ ಮತ್ತು ಭೀಮಣ್ಣ' ಎಂಬ ದಲಿತ ಪಾತ್ರಗಳು ಮಾತನಾಡುವ ಸಂದರ್ಭ ಈ ಕೆಳಗಿನಂತಿದೆ.

"ನಿಂಗ್ಯಾ : ಏ ಎಪ್ಪೊ ಅಪ್ಪಣ್ಣಪ್ಪೋ ಘಾತಾಯ್ತಪೊ ನಂದ್
ಮರಾದಿ ಹೋಯ್ತುಪೊ ನಂದ್ ಮಂದಿ ಹೋಯ್ತ
ಭೀಮಣ್ಣ : ಏನಾಯ್ತೋ ನಿಂಗಪ್ಪಣ್ಣ ಏ ನಿಂಗಪ್ಪಣ್ಣ ಸ್ವಲ್ಪ್ ಗಟ್ಟಾಗ್ಯ್ ಹೇಳ್ಯ್
ನಿಂಗ್ಯಾ : ಆ ಗೌಡ್ತಿ ಮಗಾ ಸೂಪಣ್‌ಗೌಡಿಲ್ಲೇನಪೊ ಸೂಪಣ್‌ಗೌಡ್
ಭೀಮಣ್ಣ : ಹೌದೌದ್ ಆ ಗುಂಡಮ್‌ಗೌಡ್ತಿ ಮಗಾ ಸೂಪಣ್‌ಗೌಡ ಏನಾಯ್ತು ಹೇಳೋ
ನಿಂಗ್ಯಾ : ಏನಿಲ್ಲಪೊ ನನ್ಮಗಳು, ಮಗಳು ಮೈ ನೆರ್ದಳಲ್ಲಾ ಎಲ್ಲಿ.
ಭೀಮಣ್ಣ : ಹೌದದ್ ಎಲ್ಲಿ?
ನಿಂಗ್ಯಾ : ಇವತ್ಬೆಂಜಿ ಮಾಡಿ ಗೌಡರ ಹೊಲಕ್ ಕಟ್ಗಿ ತರ್ಲಾಕ್ ಹ್ವಾದಾಗ್
ಆ ಸೂಪಣ್‌ಗೌಡ ತನ್ನೈದಾರ್ ದೋಸ್ತೂರ್ ಜೋಡಿ ನಮ್ಮ
ಎಲ್ಲೀಗ್ಯ್ ಹಾಕಿ ಕೆಡ್ಸಿ ಜಿಂವಾ ಹೊಡ್ದಾರಂತಪೋ
ಈಗ್ನಮ್ಮರ್‍ಗ್ಯಾ ಬಂದ್ ಹೇಳ್ದನಪೊ"
(ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ–೧೦೨, ೧೦೪).

ಈ ಮೇಲೆ ಉಲ್ಲೇಖಿಸಿದ ಉದಾಹರಣೆಯನ್ನು ಗಮನಿಸಿದಾಗ ಎರಡು ಕೆಳಜಾತಿ ಪುರುಷ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಪರಸ್ಪರ ಗೌರವ ಸಂಬೋಧನೆಯಲ್ಲಿ ಮಾತನಾಡಿರುವುದು ಕಂಡುಬರುತ್ತದೆ. ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಅವರ ಪೂರ್ವ ಹೆಸರಿನ ಜೊತೆ 'ಅಣ್ಣ' ಮತ್ತು 'ಅಪ್ಪ' ಎಂಬ ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸಲಾಗಿದೆ. 'ನಿಂಗಪ್ಪಣ್ಣ' ಎಂದು ಸಂಬೋಧಿಸಿರುವುದು ಕಾಣಬಹುದು. 'ನಿಂಗ್ಯಾ ಎಂಬ ಕೆಳಜಾತಿಯ ಪಾತ್ರ ಮತ್ತೊಂದು ಕೆಳಜಾತಿಯ ಪಾತ್ರವಾದ ಅಪ್ಪಣ್ಣನನ್ನು 'ಅಪ್ಪಣ್ಣಪ್ಪೋ' ಎಂದು ಸಂಬೋಧಿಸಿರುವುದನ್ನು ಕಾಣಬಹುದು.

ಇಲ್ಲಿ ಕೆಳಜಾತಿ ಪಾತ್ರಗಳು ಪರಸ್ಪರ ಗೌರವ ಸಂಬೋಧನೆಯ ಮೂಲಕ ಸಂಬೋಧನೆ ಮಾಡಿದ್ದಾರೆ. ಕೆಳಜಾತಿ ಪುರುಷರನ್ನು ಮೇಲ್ಜಾತಿಯ ವ್ಯಕ್ತಿಗಳು ನಿಂಗಪ್ಪ ಎಂದು ಹೆಸರಿನಿಂದ ಕರೆಯದೇ ಆ ಹೆಸರನ್ನು 'ನಿಂಗ್ಯಾ' ಎಂದು ಸಂಕ್ಷಿಪ್ತಗೊಳಿಸಿ 'ಅಪ್ಪ' ಎಂಬ ವಾರ್ಗಿಕವನ್ನು ಬಿಟ್ಟು ಏಕವಚನದಲ್ಲಿ ಸಂಬೋಧಿಸಿರುವುದನ್ನು ಈ ನಾಟಕದಲ್ಲಿ ಕಾಣಬಹುದು.

ಆದರೆ ಕೆಳಜಾತಿ ಪುರುಷರ ಪಾತ್ರಗಳು ಕೆಳಜಾತಿ ಪುರುಷ ಪಾತ್ರಗಳನ್ನು ಸಮಾನ ಗೌರವ ಸ್ಥಾನಮಾನಗಳಿಂದ ಸಂಬೋಧನೆ ಮಾಡಿರುವುದನ್ನು ಕಾಣಬಹುದು.

ಈ ಮೇಲೆ ಉಲ್ಲೇಖಿಸಿದ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳ ಉದಾಹರಣೆಯಲ್ಲಿ ಕಂಡುಬಂದಿರುವುದೆನೆಂದರೆ ಕೆಳಜಾತಿ ಪುರುಷ ಪಾತ್ರಗಳು ಕೆಳಜಾತಿ ಪುರುಷ ಪಾತ್ರಗಳನ್ನು ಅಪ್ಪ, ಅಣ್ಣ ಎಂಬ ಸಂಬೋಧನಾ ರೂಪಗಳು ಬಳಸಿ ಮತ್ತು ಪೂರ್ಣ ಹೆಸರಿನಿಂದ ಸಂಬೋಧಿಸಿರುವ ಉದಾಹರಣೆಗಳನ್ನು ನೋಡಬಹುದು. ವಯಸ್ಸಿನ ಆಧಾರದ ಮೇಲೆ ಸಂಬೋಧನೆಯ ನೆಲೆಗಳು ನಿಂತಿವೆ. ಈ ಎಲ್ಲಾ ಉದಾಹರಣೆಗಳ ಮೂಲಕ ಒಂದೇ ಜಾತಿಯ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಸಮಾನ ಗೌರವ ಸ್ಥಾನಮಾನಗಳು ಇರುತ್ತವೆ ಎಂಬುದು ಕಂಡುಕೊಳ್ಳಲಾಗಿದೆ.

೩.೧.೨.೨. ಮಹಿಳಾ ಪಾತ್ರಗಳು ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕೆಳಜಾತಿಯ ಮಹಿಳಾ ಪಾತ್ರಗಳು ಕೆಳಜಾತಿಯ ಮಹಿಳಾ ಪಾತ್ರಗಳನ್ನು ಯಾವ ಸಂಬೋಧನಾ ರೂಪಗಳನ್ನು ಬಳಸಿ ಸಂಬೋಧನೆ ಮಾಡುತ್ತಿವೆ ಮತ್ತು ಬಳಕೆಯ ನೆಲೆಯಲ್ಲಿ ಯಾವ ರೀತಿಯ ಕಂಡುಬರುತ್ತವೆ ಎಂಬುವುದನ್ನು ನೋಡಲಾಗಿದೆ. ಸಾಮಾನ್ಯವಾಗಿ ಒಂದೇ ಜಾತಿಯ ಮಹಿಳೆಯರ ಸಂಬೋಧನೆಯಲ್ಲಿ ಭಿನ್ನತೆಗಳು ಕಂಡುಬರುವುದು ವಿರಳ. ಒಂದು ವೇಳೆ ಕಂಡು ಬಂದರು ಆರ್ಥಿಕ ಅಸಮಾನತೆ, ಅಂತಸ್ತು, ವರ್ಗ ಕಾರಣವಾಗಿರುತ್ತವೆ. ಇಲ್ಲಿ ಮುಖ್ಯವಾಗಿ ಕೆಳಜಾತಿ ಮಹಿಳಾ ಪಾತ್ರ ಇನ್ನೊಂದು ಕೆಳಜಾತಿ ಮಹಿಳಾ ಪಾತ್ರವನ್ನು ಸಂಬೋಧಿಸುವ ನೆಲೆಯನ್ನು ಕುರಿತು ನೋಡಲಾಗಿದೆ. ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಚರ್ಚಿಸಲಾಗಿವೆ.

ಕೆಳಜಾತಿ ಮಹಿಳಾ ಪಾತ್ರಗಳು ಕೆಳಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವಾಗ ಅಮ್ಮ, ಅವ್ವ, ಅಕ್ಕ, ತಾಯಿ, ಇನ್ನು ಮುಂತಾದ ಗೌರವ ಸೂಚಕಗಳನ್ನು ಬಳಸಿ ಸಂಬೋಧನೆ ಮಾಡುತ್ತವೆ. ಸಮವಯಸ್ಕರಾಗಿದ್ದರೆ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವುದು, ವಯಸ್ಸಿನಲ್ಲಿ ಹಿರಿಯರಾಗಿದ್ದರೆ ಗೌರವ ಸಂಬೋಧನೆ ಮತ್ತು ಬಹುವಚನದಲ್ಲಿ ಸಂಬೋಧಿಸುವುದು ಕಂಡುಬರುತ್ತದೆ. ಈ ಸಂಬೋಧನಾ ಆಯಾಮಗಳನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ಚದುರಂಗರ 'ವೈಶಾಖ' ಕಾದಂಬರಿಯಲ್ಲಿ ಕೆಳಜಾತಿಯ ಮಹಿಳಾ ಪಾತ್ರಗಳು ಮಾತನಾಡುವ ಒಂದು ಸಂದರ್ಭವನ್ನು ನೋಡಬಹುದು. ಕುಂಡಿಮಾದಿ ಕಲ್ಯಾಣಿ, ಸಿವುನಿ, ದ್ಯಾವಜ್ಜಮ್ಮ ಈ ನಾಲ್ಕು ಕೆಳಜಾತಿಯ ಮಹಿಳಾ ಪಾತ್ರಗಳು ಮಾತನಾಡುವ ಸನ್ನಿವೇಶವನ್ನು ಉದಾಹರಣೆಯಾಗಿ ನೋಡಬಹುದು.

"ಕಲ್ಯಾಣವ್ವ, ಕಲ್ಯಾಣವ್ವ- ನಾವೆಲ್ಲಾರೂವೆ ದ್ಯಾವಜಮ್ಮನ ಗುಡ್ಲು ಮುಂಚೋರಿ ಸೇರ್ತಾ ಇವಿ- ಚಾಪೆ ಎಣೆಯಾಕೆ, ಜಟ್ನೆ ವೊಂಟು ಬನ್ನಿ. ಬೆಲದಿಂಗ್ಳು ಚಲ್ತಾಡ್ತ ಬಿದ್ದದೆ" ಎಂದು ಒಂದೇ ಉಸುರಿಗೆ ಯೋಳಿ ಇನ್ನೊಂದು ಗುಡ್ಲು ತಾವಿಕೆ ಚಿಗಿದ್ಲು "ಲೇ ಸಿವುನಿ, ನಿಮ್ಮಯ್ಯ ಯಾವತ್ತೂವೆ ನಿನ್ನ ಕೆಯ್ಯಿರುತಿಯ ನಮ್ಮೋರತ್ರ ಆಡ್ತಾನೆ ಇರ್ತವ್ನಂತೆ....ಇವೊತ್ತು ಯಾನ ಮಾಡಿದ್ಯಣೆ ನಂಜಕ್ಕೆ?" "ಬೆಸ್ತವಾರ ಸಂತಿಂದ ನಮ್ಮಯ್ಯ ತಂದಿದ್ದ ಕರ್ಮೀನ್ನಲ್ಲಿ ವಸಿ ತಕ್ಕಂಡು, ಬದನೆಕಾಯಿ ಜ್ವತ್ಗೆ ಕುದ್ಸಿ ಆ ಜಿನವೆ ಮ್ಯಾಲೋಗರ ಮಾಡಿದ್ದಿ. ಇನ್ನುಳುಕೆ ಸೊಸಲ ಬತ್ತಿಸಿ ನಂಜಕ್ಕೆ ಗೊಜ್ಜು ಮಾಡಿದ್ದೆ ಕನತ್ತೆ" "ಕೇಳಿದಿರೇನವ್ವ ಈ ಎಣ್ಣು ಯೋಳಿದ ಮಾತ? ... ಅವತ್ತು ಕರ್ಮೀನೂ ಬದ್ನೆಕಯ್ನೂವೆ ಬೆರುಸಿ, ಮ್ಯಾಲೋಗ್ರ ಮಾಡಿದ್ಲಂತೆ. ಇವತ್ತು ಉಳುಕೆ ಕರ್ಮೀನ ಬತ್ತಿಸಿ ಗೋಜ್ಜು ಮಾಡಿದ್ಲಂತೆ.... ಅದ್ಯಾಕೆ, ನನ್ನೊವೆ ಕರದಿದ್ರೆ ನಾಯೇನ ಎಲ್ಲೆ ಅಂತಿದ್ಯ್ಯಾ? ಕರ್ಮೀನು ನಂಗೇನು ಸೆರಿದೆ ಇತ್ತ?" (ಚದುರಂಗ, ವೈಶಾಖ, ಪುಟ- ೧೧೬)

'ವೈಶಾಖ' ಕಾದಂಬರಿಯಲ್ಲಿ ಬರುವ ಈ ಕೆಳಜಾತಿ ಮಹಿಳಾ ಪಾತ್ರಗಳು ಮಾತನಾಡುವ ಸಂದರ್ಭವನ್ನು ಗಮನಿಸಿದಾಗ ಆ ಪಾತ್ರಗಳು ಬಳಸಿರುವ ಸಂಬೋಧನಾ ರೂಪಗಳನ್ನು ನೋಡಬಹುದು. ಆ ಸಂಭಾಷಣೆಯಲ್ಲಿ 'ಅವ್ವ', 'ಲೇ', 'ಅತ್ತೆ' ಎಂಬ ಸಂಬೋಧನಾ ರೂಪಗಳನ್ನು ಬಳಸಿರುವುದು ಕಾಣಬಹುದು. ಕುಂಡಿಮಾದಿ, ಕಲ್ಯಾಣಿಗಿಂತ ವಯಸ್ಸಿನಲ್ಲಿ ಕಿರಿಯವಳಾದ ಕಾರಣ 'ಅವ್ವ' ಎಂಬ ಗೌರವ ಸೂಚಕ ಪದವನ್ನು ಬಳಸುತ್ತಾಳೆ. ದ್ಯಾವಜಮ್ಮ ಸಿವುನಗಿಂತ ವಯಸ್ಸಿನಲ್ಲಿ ಹಿರಿಯವಳದ ಕಾರಣ ಸಿವುನಿ 'ಲೇ' ಎಂಬ ಏಕವಚನದಿಂದ ಸಂಬೋಧನೆ ಮಾಡುತ್ತಾಳೆ. ಸಾಮಾನ್ಯವಾಗಿ ಎಲ್ಲರನ್ನು ಸಂಬೋಧಿಸುವಾಗ ದ್ಯಾವಜ್ಜಮ್ಮ 'ಅವ್ವ' ಎಂದೇ ಸಂಬೋಧಿಸುತ್ತಿರುವುದನ್ನು ನೋಡಬಹುದು.

ಕೆಳಜಾತಿ ಮಹಿಳೆಯರು ಮಾತನಾಡುವ ಸಂದರ್ಭದಲ್ಲಿ ವಯಸ್ಸಿನ ಆಧಾರದಿಂದ ಮಾತ್ರ ಸಂಬೋಧನೆಗಳಲ್ಲಿ ಭಿನ್ನತೆ ಕಂಡುಬರುತ್ತವೆ. ಸಮ ವಯಸ್ಸಿನ ಪಾತ್ರಗಳಲ್ಲಿ ಸಮಾನ ಗೌರವ ಸ್ಥಾನಮಾನಗಳು ದೊರೆಯುತ್ತವೆ. ಈ ರೀತಿಯಾಗಿ ಸಂಬೋಧನಾ ರೂಪಗಳು ಬಳಕೆಯಾಗಿರುವುದನ್ನು ನೋಡಬಹುದು. ಕೆಳಜಾತಿಯ ಮಹಿಳಾ ಪಾತ್ರಗಳು ಕೆಳಜಾತಿಯ ಮಹಿಳಾ ಪಾತ್ರಗಳನ್ನು ಸಂಬೋಧಿಸುವಾಗ ಯಾವುದೇ ರೀತಿಯ ವ್ಯತ್ಯಾಸಗಳು, ಭಿನ್ನತೆಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ವಯಸ್ಸಿನ ಆಧಾರದ ಮೇಲೆ ಭಿನ್ನತೆಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಹಿರಿಯರ ಪಾತ್ರ ಕಿರಿಯರ ಪಾತ್ರಕ್ಕೆ ಏಕವಚನದಿಂದ ಹೆಸರಿಡಿದು ಸಂಬೋಧಿಸಲಾಗುತ್ತದೆ. ಕೆಳ ಜಾತಿಯ ಕಿರಿಯ ಮಹಿಳಾ ಪಾತ್ರ ಹಿರಿಯ ಪಾತ್ರವನ್ನು ಗೌರವ ಸಂಬೋಧನೆ ಮತ್ತು ಬಹುವಚನದಿಂದ ಸಂಬೋಧಿಸಲಾಗುತ್ತದೆ. ಸಂಬೋಧನೆಯಲ್ಲಿ ಭಿನ್ನತೆಗಳೇನು ಕಂಡುಬರುವುದಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

೩.೧.೨.೩. ಪುರುಷ ಪಾತ್ರ ಮಹಿಳೆ ಪಾತ್ರವನ್ನು ಮಹಿಳಾ ಪಾತ್ರ ಪುರುಷ ಪಾತ್ರವನ್ನು ಸಂಬೋಧಿಸುವ ಕ್ರಮ

ಕೆಳಜಾತಿಯ ಪುರುಷ ಮತ್ತು ಕೆಳಜಾತಿ ಮಹಿಳೆ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಬಳಕೆಯಾಗುವ ಸಂಬೋಧನೆ ಆಯಾಮಗಳನ್ನು ಇಲ್ಲಿ ಗಮನಿಸಲಾಗಿದೆ. ಕೆಳಜಾತಿಯ ಪುರುಷ ಕೆಳಜಾತಿಯ ಮಹಿಳೆಯನ್ನು ಸಂಬೋಧಿಸುವಾಗ ಹಿರಿಯರಾಗಿದ್ದಾರೆ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಲಾಗುತ್ತದೆ. ಕಿರಿಯರಾಗಿದ್ದರೆ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸಲಾಗುತ್ತದೆ. ಕೆಳಜಾತಿಯ ಮಹಿಳೆಯರಿಗೂ ಇದೆ ನಿಯಮ ಅನ್ವಯಿಸುತ್ತದೆ. ಕೆಳಜಾತಿಯ ಮಹಿಳೆಯನ್ನು ಕೆಳಜಾತಿಯ ಪುರುಷ ಸಂಬೋಧಿಸುವಾಗ ಹಿರಿಯರಾಗಿದ್ದರೆ ಗೌರವಸೂಚಕಗಳನ್ನು ಕಿರಿಯರಾಗಿದ್ದಾರೆ ಹೆಸರಿಡಿದು ಏಕವಚನದಲ್ಲಿ ಮಾತನಾಡಿಸುವುದನ್ನು ನೋಡಬಹುದು. ಈ ರೀತಿಯ ಸಂಬೋಧನಾ ಕ್ರಮಗಳು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಹೇಗೆ ಮೂಡಿ ಬಂದಿವೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಕೆಳಜಾತಿ ಪುರುಷ ಮತ್ತು ಕೆಳಜಾತಿ ಮಹಿಳಾ ಪಾತ್ರಗಳು ಮಾತನಾಡುವ ಸನ್ನಿವೇಶವು ಈ ಕೆಳಗಿನಂತಿದೆ. "ಏ ನಾಯಿ ಕೂಗ್ತವೆಯೇ! 'ಮನೆಯಿಂದ' ಯಾರಾದ್ರೂ ಬಂದರುಗಿಂದರೊ? ನೋಡೆ!" ಒಲಗಿನಿಂದಲೇ ನೋಡೇ. ಹೊರಗೆ ತಲೆ ಹಾಕಬ್ಯಾಡೇ. ಕಂಡವರ್ನೇ ಹಿಡುಕೊಂಡು ಬಿಡ್ತಾರೆ! 'ಒಡೇರ ದಿಬ್ಬದ ಮ್ಯಾಲೇ ಹೆಗ್ಗಡೇರು ನಿಂತಾರೆ ಕಣ್ರೋ!" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೯೨) ಈ ಮೇಲಿನ ಸಂಭಾಷಣೆಯಲ್ಲಿ ಬರುವ ಮಂಜ ಮತ್ತು ಸಿದ್ದಿ ಎಂಬ ಕೆಳಜಾತಿ

ಗಂಡ-ಹೆಂಡತಿ ಪಾತ್ರಗಳು ಪರಸ್ಪರ ಸಂಬೋಧಿಸುವ ನೆಲೆಯಲ್ಲಿ ಕೆಳಜಾತಿಯ ಪುರುಷ ಪಾತ್ರ ಕೆಳಜಾತಿ ಮಹಿಳಾ ಪಾತ್ರವನ್ನು ಏಕವಚನದಲ್ಲಿ ಏ 'ನೋಡೇ ಎಂಬ ಪದಗಳನ್ನು ಬಳಸಿ ಸಂಬೋಧಿಸಲಾಗಿದೆ. ಅದೇ ಕೆಳಜಾತಿಯ ಮಹಿಳೆ 'ಕಣ್ರೋ' ಎಂಬ ಬಹುವಚನ ಪದ ಬಳಸಿ ಸಂಬೋಧಿಸಲಾಗಿದೆ. ಇಲ್ಲಿ ಕೆಳಜಾತಿಯ ಪುರುಷ ಮತ್ತು ಕೆಳಜಾತಿಯ ಮಹಿಳೆಯ ಸಂಬೋಧನೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಮಹಿಳೆ ತನ್ನ ಗಂಡನನ್ನು ಗೌರವದಿಂದ ಸಂಬೋಧಿಸುತ್ತಾಳೆ. ಇಲ್ಲಿ ಜಾತಿ ಅಸಮಾನತೆ ಕಂಡುಬರುವುದಿಲ್ಲ. ಲಿಂಗದ ಅಸಮಾನತೆ ಕಂಡುಬರುತ್ತದೆ. ಇಲ್ಲಿ ಮಹಿಳೆ ಮತ್ತು ಪುರುಷನ ನಡುವೆ ಇರುವ ಸಂಬೋಧನೆಯ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ದೇವನೂರು ಮಹಾದೇವರ ಅವರ 'ಕುಸುಮಬಾಲೆ' ಕಾದಂಬರಿಯಲ್ಲಿ ಬರುವ ಕೆಳಜಾತಿ ಪುರುಷ ಪಾತ್ರ ಮತ್ತು ಕೆಳಜಾತಿಯ ಮಹಿಳಾ ಪಾತ್ರವನ್ನು ಸಂಬೋಧಿಸುವ ಕ್ರಮವನ್ನು ಒಂದು ಉದಾಹರಣೆಗೆ ಮೂಲಕ ನೋಡಬಹುದು.

"ಕೊನಗ ನಿಂತಿದ್ದ ಗಂಡನಾದ ಕಿಟ್ಟಯ್ಯನು

ಪಂಚ ಕೊಳ ಆಗದಂತೆ ಅನುಸರಿಸಿ

ಅಲ್ಲೆ ಕುಕ್ಕುರಗಾಲಲ್ಲಿ ಕೂತು-

"ಅಮ್ಮಿ ಬಮ್ಮಿ ಹೆಣ್ಣಾ" ಎಂಬುದ ಇವ,

"ಐಬತ್ತೀನಿ ಕನ ನಡಾ"(ದೇವನೂರು ಮಹಾದೇವ, ಕುಸುಮಬಾಲೆ, ಪುಟ-೪೦)

ಈ ಕಾದಂಬರಿಯಲ್ಲಿ ಬರುವ ಈ ಪಾತ್ರಗಳು ಕೆಳಜಾತಿಯ ಗಂಡ- ಹೆಂಡತಿಯ ಪಾತ್ರಗಳಾಗಿವೆ. ಇಲ್ಲಿ ಅಮ್ಮಿ, ಬಮ್ಮಿ ಎಂಬ ಸಂಬೋಧನಾ ರೂಪಗಳನ್ನು ಕೆಳಜಾತಿ ಪುರುಷ ಪಾತ್ರ ಕೆಳಜಾತಿ ಮಹಿಳಾ ಪಾತ್ರಕ್ಕೆ ಬಳಸಲಾಗಿದೆ. ಕೆಳಜಾತಿ ಮಹಿಳೆಯರಿಗೆ ಮಾತ್ರ ಈ 'ಮ್ಮಿ' ಎನ್ನುವ ಸಂಬೋಧನಾ ರೂಪವನ್ನು ಮೈಸೂರಿನ ಸುತ್ತಮುತ್ತಲಿನ ಭಾಗದಲ್ಲಿ ಬಳಸಲಾಗುತ್ತಿದೆ. ಮೇಲ್ಜಾತಿ ಮಹಿಳೆಯರಿಗೆ ಈ 'ಮ್ಮಿ' ಎನ್ನುವ ಸಂಬೋಧನೆಯನ್ನು ಬಳಸುವುದಿಲ್ಲ. ಕೆಳಜಾತಿಯ ಮಹಿಳೆಯು ಗಂಡನಿಗೆ 'ಬತ್ತೀನಿ ನಡಾ' ಎಂದು ಏಕವಚನದಲ್ಲಿ ಸಂಬೋಧಿಸಲಾಗಿದೆ. ಸಂಬೋಧನೆ ನೆಲೆಯಲ್ಲಿ ಸಾಮಾಜಿಕವಾಗಿ ಭಿನ್ನತೆ ಮತ್ತು ಸಾಮ್ಯತೆ ಕಂಡುಬರುತ್ತದೆ.

ದೇವಕಿ ಎಂ. ಶೆಟ್ಟಿ ಅವರ ಜಾತಿ ಭೂತಕ್ಕೆ ಬಲಿ ಎಂಬ ಕಥೆಯಲ್ಲಿ ಕೆಳಜಾತಿಯ ಪುರುಷ ಮತ್ತು ಕೆಳಜಾತಿಯ ಮಹಿಳೆಯ ಸಂಭಾಷಣೆಯ ಸಂದರ್ಭದಲ್ಲಿ ಬಳಸಿರುವ ಸಂಬೋಧನೆಯನ್ನು ಉದಾಹರಣೆಯ ಮೂಲಕ ನೋಡಬಹುದು. ಕೆಳಜಾತಿಯ ಪಾತ್ರಗಳಾದ ದೂಮ ಮತ್ತು ಚೆನ್ನಿ ಇವರ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು "ಏನಾಯಿತು

ಚೆನ್ನಿ, ಹೀಗೆ ಅಳುತ್ತಿದ್ದರೆ ನನಗೆ ಹೇಗೆ ಗೊತ್ತಾಗಬೇಕು. ಅಲ್ಲಾ ಚಕ್ಕದೆತ್ತೀ ಬಂದಿದ್ದರು ನಾನು.....ಯಾರು ಸಖೂ ಅಮ್ಮನೆ, ದೇವರಂತ ಮಗು ಏನಾಯಿತು ಅವರಿಗೆ ಎನೂ ಇಲ್ಲ ಆದರೆ ಬಹುಶಃ ಇನ್ನೆಂಟು ದಿನ ಮಾತ್ರ ಅವರನ್ನು ನೋಡುವ ಭಾಗ್ಯ ನಮಗೆ!"(ಉಷಾ ಪಿ ರೈ ಕೆ. (ಪ್ರ.ಸಂ) ಲೇಖಕಿಯರ ಸಣ್ಣ ಕಥೆಗಳು ಭಾಗ-೨, ಪುಟ-೧೮೫)

ಈ ಸಂಭಾಷಣೆಯಲ್ಲಿ ಕೆಳಜಾತಿಯ ಪುರುಷನು ತನ್ನ ಹೆಂಡತಿಯನ್ನು 'ಚೆನ್ನಿ' ಎಂದು ಸಂಬೋಧಿಸುತ್ತಾನೆ. ಗಂಡ-ಹೆಂಡತಿ ಆಗಿರುವುದರಿಂದ ಇಬ್ಬರಿಗೂ ಸಮಾನ ಸ್ಥಾನಮಾನಗಳು ಇರುತ್ತವೆ. ಚೆನ್ನಿ ಗಂಡನನ್ನು ಯಾವುದೇ ಗೌರವ ಸೂಚಕ ಮತ್ತು ಬಹುವಚನಗಳನ್ನು ಬಳಸದಿದ್ದರೂ ಗೌರವಕ್ಕೆ ಧಕ್ಕೆ ಬರುವುದಿಲ್ಲ. ಪರಸ್ಪರ ಗೌರವಗಳು ದೊರೆಯುತ್ತವೆ. ಸಂಬೋಧನಾ ನೆಲೆಗಳಲ್ಲಿ ಸಾಮ್ಯತೆ ಇರುವುದನ್ನು ಗುರುತಿಸಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಕೆಳಜಾತಿಯ ಪುರುಷರು ಕೆಳಜಾತಿಯ ಮಹಿಳೆಯರನ್ನು ಹೆಸರಿಡಿದು ಮತ್ತು ಏಕವಚನದಲ್ಲಿ ಸಂಬೋಧಿಸುವುದು ಕಂಡುಬರುತ್ತದೆ. ಗಂಡ-ಹೆಂಡತಿ, ತಂದೆ-ಮಗಳು, ಅಥವಾ ಅಣ್ಣ-ತಂಗಿ ಆಗಿರಬಹುದು. ಒಂದೇ ಸಮುದಾಯದ ವ್ಯಕ್ತಿಗಳಾಗಿರುವುದರಿಂದ ವಯಸ್ಸು ಮತ್ತು ಸಂಬಂಧದ ಆಧಾರದ ಮೇಲೆ ಸಂಬೋಧನಾ ನೆಲೆಗಳು ನಿಂತಿರುತ್ತವೆ. ಗಂಡ ಹೆಂಡತಿಯರ ಸಂಬೋಧನೆಯನ್ನು ಗಮನಿಸಿದಾಗ ಗಂಡ ಹೆಂಡತಿಯನ್ನು ಹೆಸರಿಡಿದು ಅಥವಾ ಏಕವಚನದಲ್ಲಿ ಮಾತನಾಡಿಸಿರುವ ಉದಾಹರಣೆಗಳೆ ಹೆಚ್ಚು, ಹೆಂಡತಿ-ಗಂಡನನ್ನು ಸಂಬೋಧಿಸುವಿಕೆ ಎರಡು ನೆಲೆಯಲ್ಲಿದೆ. ಒಂದು ಬಹುವಚನದಿಂದ ಮಾತನಾಡಿಸುವುದು ಇನ್ನೊಂದು ಏಕವಚನದಲ್ಲಿ ಮಾತನಡಿಸುವುದು. ಈ ಎರಡು ನೆಲೆಯಲ್ಲಿಯೂ ಸಂಬೋಧನಾ ನೆಲೆ ಬಳಕೆಯಾಗಿರುವುದು ಕಂಡುಬರುತ್ತದೆ. ಈ ರೀತಿಯಾಗಿ ಕೆಳಜಾತಿ ಪುರುಷ ಕೆಳಜಾತಿ ಮಹಿಳೆಯರ ನಡುವೆ ಸಂಬೋಧನೆಯ ರೂಪಗಳು ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

೩.೧.೩. ಮೇಲ್ಜಾತಿಯ ಪಾತ್ರಗಳು ಮೇಲ್ಜಾತಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಮೇಲ್ಜಾತಿಯವರು ಸಾಮಾನ್ಯವಾಗಿ ಮೇಲ್ಜಾತಿಯವರನ್ನು ಗೌರವದಿಂದಲೇ ಸಂಬೋಧನೆ ಮಾಡುತ್ತಾರೆ. ಇವರು ಏಕವಚನದಿಂದ ಸಂಬೋಧಿಸುವುದು ತೀರ ಕಡಿಮೆಯೆಂದೇ ಹೇಳಬಹುದು. ಪುರುಷರಾಗಲಿ, ಮಹಿಳೆಯಾಗಲಿ ಇವರು ಪರಸ್ಪರ ಗೌರವಕೊಟ್ಟು ಕರೆಯುತ್ತಾರೆ. ಪುರುಷರಲ್ಲಿ ಸಾಮಾನ್ಯವಾಗಿ ಹೆಸರಿಡಿದು ಕರೆಯುವಾಗ ಹೆಸರಿನ ಅಂತ್ಯದಲ್ಲಿ ಗೌರವ ಸೂಚಕ ಪದವನ್ನು ಸೇರಿಸಿ ಕರೆಯುತ್ತಾರೆ. ಉದಾಹರಣೆಗೆ ಅನಂತಯ್ಯಾನವರೇ, ಸುಬ್ಬಣ್ಣ ಹೆಗ್ಗಡೇರೆ, ಪ್ರಾಣೇಶಚಾರ್ಯರೇ, ಸಂಕಪ್ಪಯ್ಯನವರೇ, ಕೃಷ್ಣಶಾಸ್ತ್ರಿಗಳೇ, ಯಾಡೇಗೌಡರೆ, ಮಲ್ಲಪ್ಪನವರೇ, ಶ್ರೀನಿವಾಸ ಅಯ್ಯಾಂಗಾರರೇ, ರಾಮಣ್ಣ ಪೆರಮಾಳರೇ ಮುಂತಾಗಿ ಪುರುಷರ ಹೆಸರಿನ

ಅಂತ್ಯದಲ್ಲಿ ಈ ರೀತಿಯಾಗಿ ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸುವುದು ಕಂಡುಬಂದರೆ ಮಹಿಳೆಯರ ಹೆಸರಿನಲ್ಲಿ ಸೀತಮ್ಮರೇ, ಲಕ್ಷ್ಮಿದೇವಮ್ಮನವರೇ, ಸಾವಿತ್ರಮ್ಮರೇ, ಹಂಪಮ್ಮರೇ ಎಂದು 'ಂಬೋಧಿಸುವುದು ಕಂಡುಬರುತ್ತದೆ. ಮಹಿಳಾ ಪಾತ್ರಗಳಲ್ಲಿ ಜಾತಿ/ ವೃತ್ತಿಸೂಚಕಗಳು ಹೆಚ್ಚಾಗಿ ಕಂಡು ಬರುವುದಿಲ್ಲ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ 'ಅಂತಕ್ಕಸೆಟ್ಟಿ' ಎಂಬ ಮೇಲ್ಜಾತಿಯ ಮಹಿಳೆಯ ಪಾತ್ರದಲ್ಲಿ ಮಾತ್ರ ಕಂಡುಬರುತ್ತದೆ. ಇನ್ನುಳಿದಂತೆ ಯಾವ ಮಹಿಳಾ ಪಾತ್ರಗಳಲ್ಲೂ ಜಾತಿ/ವೃತ್ತಿ ಸೂಚಕಗಳು ಕಂಡುಬರುವುದಿಲ್ಲ.

ಕೆಲವು ಸಂದರ್ಭಗಳಲ್ಲಿ ಹೆಸರನ್ನು ಕರೆಯದೆ ವ್ಯಕ್ತಿ/ಜಾತಿ/ವೃತ್ತಿ ಸೂಚಕ ಪದಗಳಿಂದ ಸಂಬೋಧಿಸುವುದುಂಟು, ಗೌಡರೇ, ಹೆಗ್ಗಡರೇ, ಶಾಸ್ತ್ರಿಗಳೇ, ರಾಯರೇ, ಜೋಯಿಸರೇ, ಭಟ್ಟರೇ ಎಂದು ಸಂಬೋಧಿಸಲಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿನಾಮಗಳಿಗೆ ಬಹುವಚನ ಸೂಚಕಗಳನ್ನು ಬಳಸಲಾಗುತ್ತದೆ. ಜಾತಿ/ವೃತ್ತಿವಾಚಕಗಳಿಗೂ ಬಹುವಚನ ಸೂಚನಗಳನ್ನು ಸೇರಿಸಿ ಸಂಬೋಧಿಸಿರುವುದು ಕಂಡುಬರುತ್ತದೆ.

ಈ ರೀತಿಯ ಸಂಬೋಧನೆಗಳು ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಸಂಬೋಧಿಸುವಾಗ ಕಂಡುಬರುತ್ತವೆ. ಇದನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಮೇಲ್ಜಾತಿಯ ಪುರುಷ ಪಾತ್ರಗಳು ಮೇಲ್ಜಾತಿಯ ಪುರುಷ ಪಾತ್ರಗಳನ್ನು ಸಂಬೋಧಿಸುವಾಗ ಬಳಕೆಯಾಗುವ ಸಂಬೋಧನ ಕ್ರಮ ಮತ್ತು ಮೇಲ್ಜಾತಿಯ ಮಹಿಳಾ ಪಾತ್ರಗಳು ಪರಸ್ಪರ ಮಾತನಾಡುವಾಗ ಸಂಬೋಧನೆಯ ಬಳಕೆಯ ನೆಲೆ ಮತ್ತು ಮತ್ತು ಮೇಲ್ಜಾತಿಯ ಪುರುಷ ಪಾತ್ರಗಳು ಮಹಿಳಾ ಪಾತ್ರಗಳನ್ನು, ಮೇಲ್ಜಾತಿಯ ಮಹಿಳಾ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ನೆಲೆಯಲ್ಲಿ ಇರುವ ಸ್ವರೂಪವನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ದೊರೆತ ಮಾಹಿತಿಯನ್ನು ಉದಾಹರಣೆಯಾಗಿಟ್ಟುಕೊಂಡು ಚರ್ಚಿಸಲಾಗಿದೆ.

೩.೧.೩.೧. ಪುರುಷ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಮೇಲ್ಜಾತಿಯ ಪುರುಷ ಪಾತ್ರಗಳು ಪರಸ್ಪರ ಮಾತನಾಡುವ ಸಂದರ್ಭದಲ್ಲಿ ಸಂಬೋಧನೆಯ ಬಳಕೆಯ ನೆಲೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ಮೇಲ್ಜಾತಿಯ ಪುರುಷರು ಮೇಲ್ಜಾತಿಯ ಪುರುಷರನ್ನು ಮಾತನಾಡಿಸುವ ಸಂದರ್ಭದಲ್ಲಿ ಗೌರವ ಸೂಚಕಗಳನ್ನು ಬಳಸಿಯೇ ಹೆಚ್ಚಾಗಿ ಸಂಬೋಧನೆ ಮಾಡುತ್ತಾರೆ. ಇವರಲ್ಲಿ ಏಕವಚನ ಸಂಬೋಧನೆ ಕಡಿಮೆಯೆಂದು ಹೇಳಬಹುದು. ಸಮಾನವಯಸ್ಕ ಮಕ್ಕಳ ಪಾತ್ರಗಳು ಮಾತನಾಡುವಾಗ ಏಕವಚನದಿಂದ

ಸಂಬೋಧಿಸುತ್ತಾರೆ. ಮೇಲ್ಜಾತಿಯ ಹಿರಿಯ ಪುರುಷ ಪಾತ್ರಗಳು ಸಂಬೋಧಿಸುವಾಗ ಬಹುವಚನದಿಂದಲೇ ಸಂಬೋಧಿಸುವುದನ್ನು ಕಾಣಬಹುದು. ಸಮವಯಸ್ಕರಾದರೆ ಹೆಸರಿಡಿದು ಏಕವಚನದಿಂದ ಸಂಬೋಧಿಸುವ ಉದಾಹರಣೆಗಳು ಸಹ ಇವೆ.

ಉದಾಹರಣೆಗೆ ಅನಂತಮೂರ್ತಿ. ಯು.ಆರ್, ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಬರುವ ಮೇಲ್ಜಾತಿ ಪುರುಷ ಪಾತ್ರಗಳ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು.

"ಓ ಹೋ ಹೋ ಬರೋಣಾಗಲಿ ಬರೋಣಾಗಲಿ, ಆಚಾರ್ಯರೆ, ಏನು ಇತ್ತ ಕಾಲು ಬೆಳೆಸಿದಿರಲ್ಲ? ಪ್ರಾಣೇಶಾಚಾರ್ಯರೇನಾದರೂ ಒಂದು ನಿರ್ಧಾರಕ್ಕೆ ಬಂದರೆ–ಏನು ಕತೆ? ಪಾಪ, ಅವನ ಶವ ತೆಗೆಯದ ಹೊರ್ತು ನಿಮಗೆ ಯಾರಿಗೂ ಊಟವಿಲ್ಲ, ಅಲ್ಲವೆ? ಕೂರೋಣಾಗಲಿ, ಆಯಾಸ ಪರಿಹಾರ ಮಾಡಿಕೊಳ್ಳೋಣಾಗಲಿ. ಇವಳೇ, ಆಚಾರ್ಯರಿಗೆ ಮಣೆ ಹಾಕೆ ಎಂದು ಮಂಜಯ್ಯ ಉಪಚರಿಸಿದರು.

ತಲೆ ಸುತ್ತುತ್ತಿದೆಯೆ, ಆಚಾರ್ಯರೆ, ಸ್ವಲ್ಪ ಪಾನಕ ಮಾಡಿಸಲೆ? ನಿನ್ನೆ ನಮ್ಮವರು ಇಲ್ಲಿ ಆಡಿದ ರೀತಿ ನನಗಂತೂ ಸರಿಬರಲಿಲ್ಲ ಮಂಜಯ್ಯ

ಛೆಛೆ, ಹಾಗೆನ್ನಬಾರದು ನೀವು' ಹಾಗೆ ನೋಡಿದರೆ ಈ ಕಲಿಯುಗದಲ್ಲಿ ನಿಜವಾದ ಬ್ರಾಹ್ಮಣರು ಎಷ್ಟು ಜನರಿದ್ದಾರೆ ಹೇಳಿ ಮಂಜಯ್ಯ" (ಅನಂತಮೂರ್ತಿ. ಯು.ಆರ್, ಸಂಸ್ಕಾರ, ಪುಟ ೪೯–೫೦)

ಈ ರೀತಿಯಾಗಿ ಮೇಲ್ಜಾತಿಯ ಪುರುಷ ಪಾತ್ರಗಳಾದ ದಾಸಾಚಾರ್ಯ ಮತ್ತು ಮಂಜಯ್ಯ ಮಾತನಾಡುವ ಸಂದರ್ಭವನ್ನು ಗಮನಿಸಬಹುದು. ಇಲ್ಲಿ ಮಂಜಯ್ಯ ಎಂಬ ಪಾತ್ರ ದಾಸಾಚಾರ್ಯನನ್ನು 'ಆಚಾರ್ಯರೆ' ಎಂದು ವೃತ್ತಿ/ಜಾತಿಸೂಚಕ ಪದವನ್ನು ಬಳಸಿ ಬಹುವಚನದಲ್ಲಿ ಸಂಬೋಧಿಸುತ್ತಿರುವುದನ್ನು ಕಾಣಬಹುದು. 'ರೇ' ಎಂಬ ಬಹುವಚನ ಸೂಚಕವನ್ನು ಕೂಡ ಇಲ್ಲಿ ಬಳಸಲಾಗಿದೆ. ಮೇಲ್ಜಾತಿಯ ಇನ್ನೊಂದು ಪುರುಷ ಪಾತ್ರವಾದ ದಾಸಾಚಾರ್ಯ ಮೇಲ್ಜಾತಿ ಪಾತ್ರವಾದ ಮಂಜಯ್ಯನನ್ನು ಹೆಸರಿಡಿದು ಬಹುವಚನದಲ್ಲಿ ಸಂಬೋಧಿಸುತ್ತಿರುವುದನ್ನು ಕಾಣಬಹುದು. ಹೀಗೆ ಪರಸ್ಪರ ಮೇಲ್ಜಾತಿಯ ಪುರುಷ ಪಾತ್ರಗಳು ಗೌರವ ಕೊಟ್ಟುಕೊಂಡು ಸಂಬೋಧಿಸುತ್ತಿರುವುದು ಕಂಡುಬರುತ್ತದೆ.

ದತ್ತರಾಜ್ ಚಿ, ನಿರ್ದೇಶನದ 'ಕಾಮನಬಿಲ್ಲು' ಚಲನಚಿತ್ರದ ಮೇಲ್ಜಾತಿ ಪುರುಷ ಪಾತ್ರಗಳು ಮಾತನಾಡುವ ಸಂದರ್ಭವನ್ನು ನೋಡುವುದಾದರೆ, ಮೇಲ್ಜಾತಿಯ ಕಿರಿಗೌಡ ಮತ್ತು ಮೇಲ್ಜಾತಿಯ ಸೂರ್ಯನಾರಾಯಣರಾವ್ ಎರಡು ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಸಂಬೋಧನಾ ನೆಲೆಯನ್ನು ನೋಡಬಹುದು.

"ಸೂರ್ಯನಾರಾಯಣರಾಯ್ : ಗೌಡ್ರೇ...

ಕಿರಿಗೌಡ : ಏನು

ಸೂರ್ಯನಾರಾಯಣರಾವ್ : ಕೆಂಚನ್ನ ಹೊಡ್ದಂತ್ರಲ್ಲ ನೀವು

ಕಿರಿಗೌಡ : ಹೌದು ಏನೀಗ

ಸೂರ್ಯನಾರಾಯಣ ರಾವ್ : ಏನ್ ಹಳ್ಳಿಗೆ ಪಾಳೆಗಾರ್ರು ಅಂತ ತಿಳ್ಕೊಂಡಿದಿರ

ಕಿರಿಗೌಡ : ಹೌದಯ್ಯ ಪಾಳೆಗಾರನೇ (ಚಲನಚಿತ್ರ ಕಾಮನಬಿಲ್ಲು)

ಈ ಮೇಲಿನ ಸಂಭಾಷಣೆಗಳಲ್ಲಿ ಮೇಲ್ಜಾತಿಯ ಪುರುಷ ಪಾತ್ರಗಳು ಪರಸ್ಪರ ಮಾತನಾಡುವಾಗ ಬಹುವಚನದಲ್ಲಿ ಮತ್ತು ವೃತ್ತಿ/ಜಾತಿಯ ಸೂಚಕ ಪದವನ್ನು ಬಳಸಿರುವುದು ನೋಡಬಹುದು. ಸೂರ್ಯನಾರಾಯಣರಾವ್ ಎಂಬ ಮೇಲ್ಜಾತಿಯ ಪಾತ್ರ 'ಗೌಡ್ರೆ' ಎಂದು ವೃತ್ತಿ/ಜಾತಿ ಸೂಚಕ ಪದವನ್ನು ಬಳಸಿ ಸಂಬೋಧಿಸುತ್ತಿದೆ. ಇನ್ನೊಂದು ಮೇಲ್ಜಾತಿ ಪಾತ್ರ ಕೂಡ ಯಾವುದೇ ಗೌರವಸೂಚಕಗಳನ್ನು ಬಳಸದಿದ್ದರು ಏಕವಚನದಲ್ಲಿ ಸಂಬೋಧಿಸುತ್ತಿಲ್ಲ ಎಂಬುವುದನ್ನು ಗಮನಿಸಬಹುದು. ಈ ರೀತಿಯಾಗಿ ಮೇಲ್ಜಾತಿ ಪುರುಷರ ಸಂಬೋಧನೆ ನೆಲೆಗಳನ್ನು ಕಾಣಬಹುದು. ಹೀಗೆ ಮೇಲ್ಜಾತಿ ಪುರುಷರ ಪಾತ್ರಗಳು ಸಂಬೋಧಿಸುವಾಗ ಹೆಚ್ಚಾಗಿ ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತವೆ. ಸಮಾಜ ವಾಸ್ತವದಲ್ಲಿರುವಂತೆ ಕೆಲವು ಸೃಜನಶೀಲ ಕೃತಿಗಳಲ್ಲಿ ಮತ್ತು ಚಲನಚಿತ್ರಗಳಲ್ಲಿ ಕೂಡ ಹಾಗೆಯೇ ಮೂಡಿ ಬಂದಿರುವುದನ್ನು ಗಮನಿಸಬಹುದು.

೩.೧.೩.೨ ಮಹಿಳಾ ಪಾತ್ರಗಳು ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಮೇಲ್ಜಾತಿಯ ಮಹಿಳಾ ಪಾತ್ರಗಳು ಮೇಲ್ಜಾತಿಯ ಮಹಿಳಾ ಪಾತ್ರಗಳನ್ನು ಸಂಬೋಧಿಸುವಾಗ ಸಾಮಾನ್ಯವಾಗಿ ಗೌರವ ಸೂಚಕ ಮತ್ತು ಬಹುವಚನಗಳನ್ನು ಬಳಸಿಯೇ ಸಂಬೋಧಿಸುವುದು ಕಂಡುಬರುತ್ತದೆ. ಉದಾಹರಣೆಗೆ ಸೀತಮ್ಮನವರೆ, ಲಕ್ಷ್ಮೀದೇವಮ್ಮನವರೇ, ಹಂಪಮ್ಮರೇ ಎಂದು ಸಂಬೋದಿಸುತ್ತಾರೆ. ಹಿರಿಯ ಮಹಿಳಾ ಪಾತ್ರಗಳಾಗಿದ್ದರೆ ಗೌರವ ಸಂಬೋಧನೆ ಬಳಸುವುದು ಸಾಮಾನ್ಯ. ಕಿರಿಯ ಮಹಿಳಾ ಪಾತ್ರಗಳಾಗಿದ್ದರೆ, ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವ ಪ್ರಕ್ರಿಯೆ ನಡೆಯುತ್ತದೆ. ಈ ಪ್ರಕ್ರಿಯೆಯನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿ ಮತ್ತು ಚಲನಚಿತ್ರಗಳಲ್ಲಿ ದೊರೆಯುವ ಮಾಹಿತಿ ಮೂಲಕ ನೋಡಬಹುದು. ಉದಾಹರಣೆಗೆ ಚದುರಂಗರರ 'ವೈಶಾಖ' ಕಾದಂಬರಿಯಲ್ಲಿ ಮೇಲ್ಜಾತಿ ಲಕ್ಷ್ಮಮ್ಮ ಮತ್ತು ಮೇಲ್ಜಾತಿ ಇನ್ನೊಂದು ಪಾತ್ರ 'ರುಕ್ಮಿಣಿ' ಮಾತನಾಡುವ ಸಂದರ್ಭ ಈ ಕೆಳಗಿನಂತಿದೆ. "ಯಾಕೆ ರುಕ್ಕು ಈ ಚಾಳಿ ನಿನಗ್ಯಾಕೆ ಅಂಟಿತು?... ಕೇಳಿಲ್ಲವೇನೆ ಹಿರಿಯರು ಹೇಳುವ ಮಾತು? ಪಗಡೆ ಆಡಿ ಪಾಂಡವರು ಕೆಟ್ಟರು,

ಇಸ್ಪೀಟಾಡಿ ಇದ್ದಬದ್ದವರೆಲ್ಲಾ ಕೆಟ್ಟರು ಅಂದು? ಇದ್ದಬದ್ದವರ ವಿಚಾರ ಯಾಕೆ? ನನ್ನ ತಮ್ಮನ ವಿಷಾಯಾನೆ ತೆಗೆದುಕೋ ಎಡೆತೊರೇಲಿ ಹೋಟಲಿಟ್ಟು ಭರ್ಜರಿ ಸಂಪಾದ್ನೆ ಮಾಡಿದ್ದ. ಏತನ್ಮಧ್ಯ ಯಾವತಲೆಮಾಸಿವನು ಹಿಡಿಸಿದನೋ ಹುಚ್ಚನ್ನ- ಅದೇನೋ ಮಾರಲೆ ಆಟವಂತಲ್ಲಮ್ಮ, ಆ ಚಟಕ್ಕೆ ಬಲಿಯಾಗಿ ಕೊನೆಗೆ ಸಮಸ್ತ ಆಸ್ತಿನೂ ಕಳೆದುಕೊಂಡೂ ಎಕ್ಕುಟೋದ!

"ಆದರೂ ನಾವೇನು ಪಾಂಡವರ ಹಾಗೆ ಪಣ ಇಟ್ಟು ಆಡ್ಲಿಲ್ಲವಲ್ಲ ಲಕ್ಷ್ಮಮ್ಮನೋರ" (ಚದುರಂಗ, ವೈಶಾಖ, ಪುಟ-೧೪೫)

ಈ ಸಂಭಾಷಣೆಯಲ್ಲಿ ರುಕ್ಮಣಿ ಎಂಬ ಪಾತ್ರ ಮೇಲ್ಜಾತಿ ಕಿರಿಯ ಪಾತ್ರವಾಗಿದೆ. ಕಿರಿಯ ಪಾತ್ರವೆಂದರೆ ಇನ್ನೊಂದು ಮೇಲ್ಜಾತಿ ಪಾತ್ರವಾದ ಲಕ್ಷ್ಮಮ್ಮನ್ನ ಪಾತ್ರಕ್ಕಿಂತ ವಯಸ್ಸಿನಲ್ಲಿ ಕಿರಿಯ ಪಾತ್ರವಾಗಿದೆ. ಆದ್ದರಿಂದ ರುಕ್ಮಣಿಯನ್ನು ಲಕ್ಷ್ಮಮ್ಮ 'ರುಕ್ಕು' ಎಂದು ಹೆಸರಿಡಿದು ಸಂಬೋಧಿಸುವುದನ್ನು ನೋಡಬಹುದು. ರುಕ್ಕು ಎಂಬುದು ಮುದ್ದುನಾಮವಾಗಿ ಬಳಕೆಯಾಗುತ್ತಿದೆ. ಮೇಲ್ಜಾತಿಯ ಇನ್ನೊಂದು ಮಹಿಳಾ ಪಾತ್ರವಾದ ಲಕ್ಷ್ಮಮ್ಮನನ್ನು ರುಕ್ಮಣಿ ಲಕ್ಷ್ಮಮ್ಮನೋರೆ ಎಂದು ಬಹುವಚನದಲ್ಲಿ ಸಂಬೋಧಿಸುವುದನ್ನು ಕಾಣಬಹುದು.

ಗಿರೀಶ ಕಾರ್ನಾಡ ಅವರ ನಿರ್ದೇಶನ ಕಾಡು ಚಲನಚಿತ್ರದಲ್ಲಿ ಎರಡು ಮೇಲ್ಜಾತಿಯ ಮಹಿಳಾ ಪಾತ್ರಗಳು ಮಾತನಾಡುವಾಗ ಬಳಸುವ ಸಂಬೋಧನೆ ನೆಲೆಗಳನ್ನು ಉದಾಹರಣೆಯ ಮೂಲಕ ನೋಡಬಹುದು. ಕಮಲಕ್ಕ ಮತ್ತು ಕಲ್ಯಾಣಿ ಎಂಬ ಎರಡು ಮೇಲ್ಜಾತಿ ಮಹಿಳಾ ಪಾತ್ರಗಳ ಸಂಭಾಷಣೆ ಈ ಕೆಳಗಿನಂತಿದೆ.

"ಕಮಲಕ್ಕ : ಏನಾಯ್ತು ಕಲ್ಯಾಣಿ ಏನಾಯ್ತೊ, ಯಾರು ಏನು ಮಾಡಿದ್ರು.

ಕಲ್ಯಾಣಿ : ಯಾರು ಮುಖ ನೋಡಿದ್ನೊ ಏನೋ

ಕಮಲಕ್ಕ : ಏನಾಯ್ತು ಕಲ್ಯಾಣಿ

ಕಲ್ಯಾಣಿ : ನೋಡು ಕಮಲಕ್ಕ ಈ ಜನ್ಮ ಹೊತ್ತುಕೊಂಡು ನಾನಿರಬಾರ್ದು ಕಮಲಕ್ಕ"

ಈ ಮೇಲಿನ ಸಂಭಾಷಣೆಯಲ್ಲಿ ಕಲ್ಯಾಣಿ ಎಂಬ ಪಾತ್ರ ಕಮಲಕ್ಕ ಎಂಬ ಪಾತ್ರಕ್ಕಿಂತ ವಯಸ್ಸಿನಲ್ಲಿ ಕಿರಿಯ ಪಾತ್ರವಾಗಿದೆ. ಅದಕ್ಕಾಗಿ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸಲಾಗುತ್ತಿದೆ. ಕಮಲಕ್ಕ ಎಂಬ ಪಾತ್ರ, ಕಲ್ಯಾಣಿಗಿಂತ ಹಿರಿಯ ಪಾತ್ರವಾಗಿದೆ. ಆದ್ದರಿಂದ 'ಅಕ್ಕ' ಎಂಬ ಸಂಬೋಧನಾ ರೂಪವನ್ನು ಬಳಸಿ ಗೌರವಸೂಚಕವಾಗಿ ಬಳಸುತ್ತಿರುವುದನ್ನು ಕಾಣಬಹುದು. ಈ ರೀತಿಯಾಗಿ ಮೇಲ್ಜಾತಿ ಮಹಿಳಾ ಪಾತ್ರಗಳ ಸಂಬೋಧನಾ ನೆಲೆಯನ್ನು ಕಾಣಬಹುದು.

ಮೇಲ್ಜಾತಿಯ ಮಹಿಳಾ ಪಾತ್ರಗಳು ಸಂಬೋಧನೆ ಮಾಡುವಾಗ ಹಿರಿಯ ಪಾತ್ರಗಳಾಗಿದ್ದರೆ ಅಮ್ಮ, ಅಕ್ಕ, ರೇ ಇನ್ನೂ ಮುಂತಾದ ಸಂಬೋಧನಾ ರೂಪಗಳನ್ನು ಗೌರವಸೂಚಕಗಳಾಗಿ

ಬಳಸಿ ಸಂಬೋಧಿಸಲಾಗುತ್ತಿದೆ. ಕಿರಿಯ ಪಾತ್ರಗಳಿಗೆ ಹೆಸರಿಡಿದು ಏಕವಚನದಲ್ಲಿ ಮಾತನಡಿಸಿರುವುದನ್ನು ಕಾಣಬಹುದು. ಇಲ್ಲಿ ಕೆಳಜಾತಿ ಮಹಿಳೆಯರಿಗೆ ಈ ರೀತಿ ಗೌರವ ಸೂಚಕಗಳನ್ನು ಬಳಸಿ ಸಂಬೋಧಿಸುವುದು ಕಂಡುಬರುಬರುವುದಿಲ್ಲ. ಮೇಲ್ಜಾತಿ ಮತ್ತು ಕೆಳಜಾತಿ ಮಹಿಳಾ ಪಾತ್ರಗಳ ಸಂಬೋಧನೆಯಲ್ಲಿ ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

೩.೧.೩.೩ ಪುರುಷ ಪಾತ್ರಗಳು ಮಹಿಳಾ ಪಾತ್ರಗಳನ್ನು ಮತ್ತು ಮಹಿಳಾ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ .

ಮೇಲ್ಜಾತಿಯ ಪುರುಷ ಪಾತ್ರಗಳು ಮೇಲ್ಜಾತಿಯ ಮಹಿಳಾ ಪಾತ್ರಗಳನ್ನು ಸಂಬೋಧಿಸುವಾಗ ಹೆಂಡತಿಯಾದರೆ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವುದು ಹೆಚ್ಚಾಗಿರುತ್ತದೆ. ತಾಯಿಯಾದರೆ ಗೌರವಸೂಚಕವಾಗಿ ಬಳಕೆಯಾಗುತ್ತ. ತಂಗಿಯಾದರೆ ಹೆಸರಿಡಿದು ಅಥವಾ ಏಕವಚನದಲ್ಲಿ ಸಂಬೋಧಿಸುವ ಕ್ರಮವಿರುತ್ತದೆ. ಇನ್ನುಳಿದಂತೆ ವಯಸ್ಸಿನ ಆಧಾರದ ಮೇಲೆ ಮೇಲ್ಜಾತಿಯ ಪುರುಷ ಪಾತ್ರಗಳು ಮೇಲ್ಜಾತಿ ಮಹಿಳಾ ಪಾತ್ರಗಳನ್ನು ಸಂಬೋಧಿಸುವ ಕ್ರಮ ನಿಂತಿರುತ್ತದೆ.

ಅದೇ ರೀತಿಯಾಗಿ ಮೇಲ್ಜಾತಿ ಮಹಿಳಾ ಪಾತ್ರಗಳು ಪುರುಷ ಪಾತ್ರಗಳನ್ನು ಸಂಬೋಧಿಸುವ ಕ್ರಮ ಯಾವುದೆಂದರೆ, ಮಹಿಳಾ ಪಾತ್ರಗಳು ಹೆಚ್ಚಾಗಿ ಪುರುಷ ಪಾತ್ರಗಳನ್ನು ಗೌರವ ಸೂಚಕವಾಗಿಯೇ ಬಳಸುವುದನ್ನು ಕಾಣುತ್ತೇವೆ. ಮೇಲ್ಜಾತಿಯ ಮಹಿಳಾ ಪಾತ್ರಗಳು ಸಂಬೋಧಿಸುವಾಗ ಗಂಡ ಅಥವಾ ತಂದೆಯಾದರೆ ಗೌರವ ಸೂಚಕಗಳೆ ಬಳಕೆಯಾಗುತ್ತವೆ. ಅನ್ಯ ಪುರುಷರಾದರೆ ವಯಸ್ಸಿನ ಆಧಾರದ ಮೇಲೆ ಅವರ ಸಂಬೋಧನೆ ನೆಲೆ ನಿಂತಿರುತ್ತದೆ. ಈ ರೀತಿಯಾಗಿ ಸಂಬೋಧಿಸುವ ಕ್ರಮವನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿ ಮೂಲಕ ನೋಡಬಹುದು.

ಚದುರಂಗರ 'ವೈಶಾಖ' ಕಾದಂಬರಿಯಲ್ಲಿ ಬರುವ ಮೇಲ್ಜಾತಿ ಪುರುಷ ಪಾತ್ರ ಮೆಲ್ಜಾತಿ ಮಹಿಳಾ ಪಾತ್ರವನ್ನು ಸಂಬೋಧಿಸುವುದನ್ನು ಇಲ್ಲಿ ನೋಡಬಹುದು. "ಇಲ್ನೋಡಿ ಅಂದ್ರೆ, ನೀವು ರುಕ್ಕೂಗೆ ಕಾಯಿ ನಡೆಸಿಕೊಟ್ಟು ಬೇಕಾದ ಹಾಗೆ ಸಹಾಯ ಮಾಡಿ ಬೆಡ ಅನ್ನಲ್ಲ. ಆದ್ರೆ ನಾನು ದಾಳ ಬಿಡುವಾಗಲೆಲ್ಲ ಹೀಗೆ ಏನಾದರೂ ನಾಶಬಾಯಿ ನುಡಿದು ಬೇಸರ ಪಡಿಸಿದರೆ ನಾನು ಸಹಿಸಿ ಸುಮ್ಮನೆ ಕೂರಲ್ಲ.

"ಶಾಂತಂ ಪಾಪಂ, ತಪ್ಪಾಯ್ತು... ಇನ್ನು ಮುಂದೆ ಬಾಯಿಬಿಚ್ಚಲ್ಲ"

"ಇದೇನೆ ಸೀತಾಲಕ್ಷ್ಮಿ, ಎತ್ತಕಡೆ ನೋಡಿಕೊಂಡು ಆಡ್ತಾ ಇದೀಯೇ?....

ಆಟದ ಕಡೆ ಕೊಂಚ ನಿಗಾ ಇರಲಿ" (ಚದುರಂಗ, ವೈಶಾಖ, ಪುಟ-೧೩೯)

ಈ ಮೇಲಿನ ಸಂಭಾಷಣೆಯಲ್ಲಿ ಬರುವ ಎರಡು ಪಾತ್ರಗಳು ಮೇಲ್ಜಾತಿಯ ಗಂಡ-ಹೆಂಡತಿ ಪಾತ್ರಗಳಾಗಿವೆ. ಮೇಜ್ಜಾತಿ ಪುರುಷ ಕೇಶವಯ್ಯ ಮೇಲ್ಜಾತಿ ಮಹಿಳೆ ಸೀತಾಲಕ್ಷ್ಮಿ ಹೆಸರನ್ನು ಗಮನಿಸಿದರೆ ಈ ಎರಡು ಪಾತ್ರಗಳು ಮೇಲ್ಜಾತಿ ಪಾತ್ರಗಳೆಂದು ತಿಳಿಯುತ್ತದೆ. ಮೇಲ್ಜಾತಿ ಪುರುಷ ಪಾತ್ರ, ಮೇಲ್ಜಾತಿ ಮಹಿಳಾ ಪಾತ್ರವನ್ನು ಹೆಸರಿಡಿದು ಏಕವಚನದಲ್ಲಿ ಮಾತನಾಡಿಸುವುದನ್ನು ಕಾಣಬಹುದು. ಮೇಲ್ಜಾತಿ ಪುರುಷ ಪಾತ್ರಗಳು ತನ್ನ ಹೆಂಡತಿಯನ್ನು ಹೆಸರಿಡಿದು ಏಕವಚನದಲ್ಲಿ ಕರೆಯುವ ಪ್ರಕ್ರಿಯೆಯ ಹೆಚ್ಚು ಎಂದು ಹೇಳಬಹುದು. ಮೇಲ್ಜಾತಿ ಮಹಿಳಾ ಪಾತ್ರಗಳು ಪುರುಷ ಪಾತ್ರಗಳನ್ನು ಅಂದರೆ ಗಂಡನ ಪಾತ್ರವನ್ನು ಗೌರವಸೂಚಕವಾಗಿ ಸಂಬೋಧಿಸುವುದು ಹೆಚ್ಚು. ಇಲ್ಲಿ ಸೀತಾಲಕ್ಷ್ಮಿ ಕೇಶವಯ್ಯನನ್ನು 'ಇಲ್ನೋಡಿ ಅಂದ್ರೆ' ಎಂದು ಬಹುವಚನದಿಂದ ಸಂಬೋಧಿಸುವುದನ್ನು ಕಂಡುಬರುತ್ತದೆ.

ದ್ವಾರಕೀಶ ನಿರ್ಮಾಣದ 'ಆನಂದ ಭೈರವಿ' ಚಲನಚಿತ್ರದಲ್ಲಿ ಮೇಲ್ಜಾತಿ ಪುರುಷ ಮತ್ತು ಮೇಲ್ಜಾತಿ ಮಹಿಳೆಯ ಸಂಭಾಷಣೆಯಲ್ಲಿ ಸಂಬೋಧನೆಯ ನೆಲೆಗಳನ್ನು ನೋಡಬಹುದು. ಮೇಲ್ಜಾತಿ ಪುರುಷ ನಾರಾಯಣಶರ್ಮ ಮೇಲ್ಜಾತಿ ಮಹಿಳೆ ಲಕ್ಷ್ಮಿ ಈ ಎರಡು ಪಾತ್ರಗಳು ಮಾತನಾಡುವ ಸಂದರ್ಭವನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು.

"ಲಕ್ಷ್ಮಿ : ಭೈರವಿಯನ್ನು ಕರಟಕನಿಗೆ ಕೋಡಬೇಕು ಅಂತ ನಿರ್ಧರಿಸಿದ್ದರಂತೆ

ನಾರಾಯಣಶರ್ಮ : ಯಾಕೆ ತಪ್ಪೆ?

ಲಕ್ಷ್ಮಿ : ನಿಮ್ಮ ಹೆಂಡ್ತಿಯಾಗಿದ್ರಿಂದ ನೀವು ನನ್ನ ಕುತ್ತಗೆ ಕತ್ರಿಸಿದ್ರು ನನ್ಗೆ ತಪ್ಪಾಗಿ ಕಾಣ್ತಿರಲಿಲ್ಲ. ಈಗ ನಿಮ್ಮ ಮಗನ ತಾಯಿಯಾಗಿ ಹೇಳ್ತಿದೀನಿ, ನೀವು ತುಂಬ ಆತ್ರ ಪಟ್ರಿ...'ಏನೂಂದ್ರೆ' ಆನಂದ ಭೈರವಿಯವರ ಬಾಲ್ಯದ ಸ್ನೇಹ ಅಭಿಮಾನವಾಯ್ತು, ಆ ಅಭಿಮಾನ ಈಗ ಅನುರಾಗವಾಗಿದೆ. ಕುಲದ ಹೆಸರಿನಲ್ಲಿ ಇಷ್ಟು ವರ್ಷದ ಸ್ನೇಹನಾ ಕತ್ತರಿಸಿ ಬೇರ್ಪಡಿಸೋದು ಅನ್ಯಾಯ ಅಂದ್ರೆ.

ನಾರಾಯಣಶರ್ಮ : ಅಂದ್ರೆ ನನ್ನ ಸಾಕು ಮಗಳನ್ನು ಹೆತ್ತಮಗನಿಗೆ ಕೊಡಬೇಕು. ಇದೆ ತಾನೆ ನೀನು ಹೇಳೋದು" (ಚಲನಚಿತ್ರ, ಆನಂದ ಭೈರವಿ)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಪುರುಷ ಮೇಲ್ಜಾತಿ ಮಹಿಳೆಯನ್ನು ಏಕವಚನದಿಂದ ಮಾತನಾಡಿಸುವುದು ಕಾಣುತ್ತದೆ. ಏಕಂದರೆ ತನ್ನ ಹೆಂಡತಿಯಾದ್ದರಿಂದ ಏಕವಚನದಲ್ಲಿ ಸಂಬೋಧಿಸಲಾಗುತ್ತದೆ. ಮೇಲ್ಜಾತಿ ಪುರುಷ ಹೆಂಡತಿಯನ್ನು ಹೆಸರಿಡಿದು ಮತ್ತು ಏಕವಚನದಿಂದಲೇ ಸಂಬೋಧಿಸುವುದು ಹೆಚ್ಚು. ಮೇಲ್ಜಾತಿಯ ಮಹಿಳೆ ಪುರುಷನನ್ನು ಇಲ್ಲಿ 'ಏನೂಂದ್ರೆ' ಎಂಬ ಸಂಬೋಧನಾ ರೂಪವನ್ನು ಬಳಸಿ ಸಂಬೋಧಿಸಿರುವುದು

ಕಂಡುಬರುತ್ತದೆ. 'ಏನೂಂದ್ರೆ' ಎಂಬ ಗೌರವಸೂಚಕವನ್ನು ಮೇಲ್ಜಾತಿ ಮಹಿಳೆಯರು ತನ್ನ ಗಂಡನಿಗೆ ಮಾತ್ರ ಬಳಸುವ ಪದವಾಗಿದೆ. ಇದು ಮೇಲ್ಜಾತಿ ಮಹಿಳಾ ಸಂಬೋಧನೆಯಲ್ಲಿ ಮಾತ್ರ ಈ ರೀತಿಯ ಪದ ಬಳಕೆಯಾಗಿರುವುದು ಕಂಡುಬರುತ್ತದೆ.

ಮೇಲ್ಜಾತಿಯ ಪುರುಷರು ಮೇಲ್ಜಾತಿಯ ಮಹಿಳೆಯರನ್ನು ಸಂಬೋಧನೆ ಮಾಡುವಾಗ ಹೆಸರಿಡಿದು, ಏಕವಚನದಲ್ಲಿ ಸಂಬೋಧನೆ ಮಾಡುತ್ತಾರೆ. ತನ್ನ ಹೆಂಡತಿಯಾಗಿದ್ದರೆ ಅಥವಾ ಅವರಿಗಿಂತ ವಯಸ್ಸಿನಲ್ಲಿ ಕಿರಿಯರಾಗಿದ್ದರೆ ಈ ರೀತಿ ಸಂಬೋಧನೆ ಮಾಡುತ್ತಾರೆ. ಮೇಲ್ಜಾತಿ ಮಹಿಳೆಯರು ತನ್ನ ಗಂಡಂದಿರನ್ನು ಬಹುವಚನದಿಂದಲೇ ಸಂಬೋಧನೆ ಮಾಡುತ್ತಿರುವುದು ಕಂಡುಬರುತ್ತದೆ. ಏಕವಚನದಿಂದ ಸಂಬೋಧನೆ ಮಾಡುವುದು ವಿರಳವೆಂದೇ ಹೇಳಬಹುದು. ಈ ರೀತಿಯಾಗಿ ಸಂಬೋಧನೆಯ ನೆಲೆಯನ್ನು ಕಾಣಬಹುದು.

೩.೧.೪ ಹಿರಿಯ ಪಾತ್ರಗಳನ್ನು ಮತ್ತು ಕಿರಿಯ ಪಾತ್ರಗಳು ಹಿರಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಮೂಲಕ ಹಿರಿಯರ ಮತ್ತು ಕಿರಿಯರ, ಕಿರಿಯರ ಮತ್ತು ಹಿರಿಯರ ಸಂಬೋಧನೆಯ ಬಳಕೆಯ ನೆಲೆಗಳನ್ನು ನೋಡುವುದಾದರೆ. ಕೆಳಜಾತಿಯ ಹಿರಿಯರು ಮೇಲ್ಜಾತಿಯ ಕಿರಿಯರನ್ನು ಗೌರವ ಸೂಚಕ ಸಂಬೋಧನೆ ಮತ್ತು ಬಹುವಚನದಲ್ಲಿ ಸಂಬೋಧಿಸುತ್ತಾರೆ. ಮೇಲ್ಜಾತಿಯ ಕಿರಿಯರು ಕೆಳಜಾತಿಯ ಹಿರಿಯರನ್ನೂ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾರೆ. ಕೆಳಜಾತಿಯ ಹಿರಿಯರು ಮೇಲ್ಜಾತಿಯ ಕಿರಿಯರನ್ನು ಅಯ್ಯಾ, ಚಿಕ್ಕಧಣಿ, ಚಿಕ್ಕಯ್ಯಾ, ಚಿಕ್ಕದೆತ್ತೀ, ಚಿಕ್ಕೊಡೆಯ ಚಿಕ್ಕಗೌಡ್ರ ಇತ್ಯಾದಿಯಾಗಿ ಸಂಬೋಧಿಸುತ್ತಾರೆ. ಮೇಲ್ಜಾತಿಯ ಕಿರಿಯರು ಕೆಳಜಾತಿ ಹಿರಿಯರನ್ನು ಎನೇ, ಬಾರೋ, ಲೇ, ದೂಮ, ಕರಿಯ, ಐತ, ಚೆನ್ನಿ, ಇತ್ಯಾದಿಯಾಗಿ ಸಂಬೋಧಿಸುತ್ತಾರೆ. ಸಾಮಾಜಿಕವಾಗಿ ಜಾತಿ ಮತ್ತು ಆರ್ಥಿಕ ಕಾರಣಕ್ಕಾಗಿ ಈ ರೀತಿ ಸಂಬೋಧನೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಸಮಾಜದಲ್ಲಿ ಕಿರಿಯರು ಹಿರಿಯರನ್ನು ಗೌರವದಿಂದ ಸಂಬೋಧಿಸಬೇಕೆಂಬ ಸಾಮಾಜಿಕ ನಿಯಮ ಮೇಲ್ಜಾತಿಯವರಿಗೆ ಮಾತ್ರ ಅನ್ವಯಿಸುತ್ತದೆ. ಕೆಳಜಾತಿಯವರಲ್ಲಿ ಕೆಳಜಾತಿಯ ಹಿರಿಯರು ಕಿರಿಯರನ್ನು ಸಂಬೋಧಿಸಬೇಕಾದರೆ ಅನ್ವಯಿಸುತ್ತದೆ. ಆದರೆ ಮೇಲ್ಜಾತಿಯರು ಕೆಳಜಾತಿಯವರನ್ನು ಸಂಬೋಧಿಸಬೇಕಾದರೆ ಇದು ಅನ್ವಯಿಸುವುದಿಲ್ಲ. ಕೆಳಜಾತಿಯವರು ಗೌರವ ಸಂಭೋಧನೆಗೆ ಅರ್ಹರಲ್ಲ ಎಂಬುದನ್ನು ಸಾಮಾಜಿಕವಾಗಿ ನಂಬಿಸಲಾಗಿದೆ. ಹಾಗಾಗಿ ಕೆಳಜಾತಿಯ ಹಿರಿಯರನ್ನು ಮೇಲ್ಜಾತಿಯ ಕಿರಿಯರೂ ಸಹ ಗೌರವ ಸಂಬೋಧನೆ ಮಾಡುವುದಿಲ್ಲ. ಮೇಲ್ಜಾತಿಯವರು ಕೆಳಜಾತಿಯವರನ್ನು ಗೌರವ ಸಂಬೋಧನೆ ಮಾಡಿದರೆ ಕೆಳಜಾತಿಯವರಿಗೇ ಒಳ್ಳೆಯದಾಗುವುದಿಲ್ಲ. ಅನಾಹುತವಾಗುತ್ತವೆ. ಎಂಬುದನ್ನು ಸೃಷ್ಟಿಸಲಾಗಿದೆ. ಹಾಗಾಗಿ

ಕೆಳಜಾತಿಯವರು ಗೌರವ ಸಂಬೋಧನೆ ಅರ್ಹರಲ್ಲ. ಎಂಬುದಾಗಿ ಅವರನ್ನು ಗೌರವ ಸಂಬೋಧನೆಯಿಂದ ಕರೆಯುವುದಿಲ್ಲ. ಈ ಪ್ರಕ್ರಿಯೆಗೆ ಸೃಜನಶೀಲ ಬರವಣಿಗೆ ಮತ್ತು ದೃಶ್ಯ ಮಾಧ್ಯಮದಲ್ಲೂ ಪ್ರತಿಫಲನಗೊಂಡಿದೆ. ಸಂಬೋಧನೆಯ ನೆಲೆಯ ಭಿನ್ನತೆಗೆ ಸಾಮಾಜಿಕ, ಆರ್ಥಿಕ, ಕಾರಣಗಳು ಮುಖ್ಯವಾಗಿವೆ ಎಂದು ಹೇಳಬಹುದು.

ಆದರೆ ಕೆಳಜಾತಿಯ ಕಿರಿಯ ಪಾತ್ರಗಳು ಮೇಲ್ಜಾತಿಯ ಹಿರಿಯ ಪಾತ್ರಗಳನ್ನು ಹೆಸರಿಡಿದು, ಏಕವಚನದಲ್ಲಿ ಸಂಬೋಧಿಸುವುದು ಸಾಮಾನ್ಯ ಸಂದರ್ಭಗಳಲ್ಲಿ ಸಾಧ್ಯವೇ ಇಲ್ಲ. ಹೆಸರಿಡಿದು ಸಹ ಸಂಬೋಧಿಸುವಂತಿಲ್ಲ, ಅಯ್ಯ, ಧಣಿ, ಒಡೆಯ, ಸ್ವಾಮಿ, ಎಂದೆ ಸಂಬೋಧಿಸಬೇಕು. ಇಲ್ಲಿ ಕೂಡ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು. ಮೇಲ್ಜಾತಿಯ ಕಿರಿಯರು ಕೆಳಜಾತಿಯ ಹಿರಿಯರನ್ನು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾರೆ. ಆದರೆ ಕೆಳಜಾತಿಯ ಕಿರಿಯರು ಮೇಲ್ಜಾತಿ ಹಿರಿಯರನ್ನು ಆ ರೀತಿಯಾಗಿ ಸಂಬೋಧಿಸುವಂತಿಲ್ಲ. ಈ ಪ್ರಕ್ರಿಯೆ ಮಾತ್ರ ಸಾಮಾಜಿಕ ಅಪರಾಧ ಎಂಬಂತೆ ಕಾಣುತ್ತದೆ. ಹಾಗಾಗಿ ಗೌರವ ಸಾಮಾಜಿಕ ಸ್ಥಾನಮಾನಗಳೆನಿದ್ದರೂ ಮೇಲ್ಜಾತಿಯ ಪಾತ್ರಗಳಿಗೆ ಮಾತ್ರ. ಕೆಳಜಾತಿಯ ಪಾತ್ರಗಳಿಗೆ ಗೌರವ ಸ್ಥಾನಮಾನಗಳ ಸಂಬೋಧನಾ ಬಳಕೆಯ ನೆಲೆಯಲ್ಲಿ ದೊರೆಯುವುದಿಲ್ಲ.

ಕೆಲವು ಸಂದರ್ಭದಲ್ಲಿ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳೇನದರೂ ಬಹುವಚನದಿಂದ ಸಂಬೋಧಿಸಿದರೆ ನೀವು ನಮ್ಮನ್ನು ಬಹುವಚನದಿಂದ ಸಂಬೋಧಿಸಬೇಕು ಎಂದು ಹೇಳಿರುವ ಪ್ರಸಂಗಗಳಿವೆ. ಅನಂತಮೂರ್ತಿ ಅವರ ಸಂಸ್ಕಾರ ಮತ್ತು ಎಸ್.ಎಲ್. ಭೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಈ ರೀತಿಯ ಪ್ರಸಂಗಗಳು ಬರುತ್ತವೆ. ಅಂದರೆ ಮೇಲ್ಜಾತಿಯವರಿಂದ ಗೌರವ ಸಂಬೋಧನೆ ಮಾಡಿಸಿಕೊಂಡರೆ ಒಳ್ಳೆಯದಲ್ಲ ಎಂಬುದನ್ನು ಸಮಾಜದಲ್ಲಿ ಸೃಷ್ಟಿಸಿದ್ದಾರೆ, ಇಲ್ಲಿ ಮೇಲ್ಜಾತಿಯ ಮನೋಧೋರಣೆ ತೋರಿಸುತ್ತದೆ.

ಕೆಳಜಾತಿ ಹಿರಿಯ ಪಾತ್ರಗಳು ಮೇಲ್ಜಾತಿಯ ಕಿರಿಯ ಪಾತ್ರಗಳನ್ನು ಮೇಲ್ಜಾತಿಯ ಕಿರಿಯ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರಗಳನ್ನು, ಸಂಬೋಧಿಸುವ ಕ್ರಮ ಮತ್ತು ಮೇಲ್ಜಾತಿಯ ಹಿರಿಯ ಪಾತ್ರಗಳು ಕೆಳಜಾತಿಯ ಕಿರಿಯ ಪಾತ್ರಗಳನ್ನು, ಕೆಳಜಾತಿಯ ಕಿರಿಯ ಪಾತ್ರಗಳು ಮೇಲ್ಜಾತಿಯ ಹಿರಿಯ ಪಾತ್ರಗಳನ್ನು ಸಂಬೋದಿಸುವ ಕ್ರಮವನ್ನು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ, ಮತ್ತು ನಾಟಕಗಳಲ್ಲಿ ದೊರೆತಿರುವ ಉದಾಹರಣೆಗಳ ಮೂಲಕ ಮುಂದೆ ಚರ್ಚಿಸಲಾಗಿದೆ.

೩.೧.೪.೧. ಕೆಳಜಾತಿಯ ಹಿರಿಯ ಪಾತ್ರಗಳು ಮೆಲ್ಜಾತಿಯ ಕಿರಿಯ ಪಾತ್ರಗಳನ್ನು ಮತ್ತು ಮೇಲ್ಜಾತಿ ಕಿರಿಯ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರಗಳನ್ನು ಸಂಬೋದಿಸುವ ಕ್ರಮ

ಕೆಳಜಾತಿಯ ಹಿರಿಯ ಪಾತ್ರಗಳು ಮೆಲ್ಜಾತಿಯ ಕಿರಿಯ ಪಾತ್ರಗಳನ್ನು ಗೌರವ ಸಂಬೋದನೆ ಮತ್ತು ಬಹುವಚನದಲ್ಲಿ ಸಂಬೋಧಿಸುತ್ತವೆ. ಸಮಾಜದ ವಾಸ್ತವದಲ್ಲಿಯೂ ಕೆಳಜಾತಿಯ ಹಿರಿಯರು ಮೇಲ್ಜಾತಿಯ ಕಿರಿಯರು ಮೇಲ್ಜಾತಿ ಕಿರಿಯರನ್ನು ಗೌರವದಿಂದ

ಸಂಬೋಧಿಸುತ್ತಾರೆ. ಸೃಜನಶೀಲ ಕೃತಿ ಮತ್ತು ಚಲನಚಿತ್ರಗಳಲ್ಲಿಯೂ ಹಾಗೆ ಮೂಡಿ ಬಂದಿದೆ. ಕೆಳಜಾತಿಯ ಹಿರಿಯರು ಮೇಲ್ಜಾತಿಯ ಕಿರಿಯ ಪಾತ್ರಗಳನ್ನು ಅಯ್ಯಾ, ಧಣಿ, ಚಿಕ್ಕಧಣಿ, ದೆತ್ತೀ, ಚಿಕ್ಕದೆತ್ತಿ, ಎಂದು ಗೌರವಸೂಚಕ ಸಂಬೋದನೆಗಳನ್ನು ಬಳಕೆ ಮಾಡಿರುವುದು ಕಂಡುಬರುತ್ತದೆ. ಮೇಲ್ಜಾತಿಯ ಕಿರಿಯರ ಪಾತ್ರಗಳು ಕೆಳಜಾತಿಯ ಹಿರಿಯರನ್ನು ಕರಿಯ, ಐತ, ದೂಮ, ಚೆನ್ನಿ ಎಂದು ಹೆಸರಿಡಿದು ಮತ್ತು ಲೇ, ಲೋ, ಏನೋ ಎಂದು ಏಕವಚನದಲ್ಲಿ ಸಂಭೋದಿಸುತ್ತವೆ. ಈ ಸಂಬೋದನೆ ಪ್ರಕ್ರಿಯೆಯನ್ನು ಉದಾಹರಣೆಯಂದಿಗೆ ನೋಡಬಹುದು.

"ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳಜಾತಿಯ ಐತ ಎಂಬ ಹಿರಿಯ ಪಾತ್ರ, ಮೇಲ್ಜಾತಿಯ 'ಧರ್ಮು' ಎಂಬ ಪಾತ್ರಕ್ಕಿಂತ ವಯಸ್ಸಿನಲ್ಲಿ ಹಿರಿಯ ಪಾತ್ರವಾಗಿದೆ. ಈ ಎರಡು ಪಾತ್ರಗಳ ಸಂಭಾಷಣೆಯಲ್ಲಿ ಸಂಬೋಧನೆ ಕ್ರಮಗಳ ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸವನ್ನು ನೋಡಬಹುದು.

"ಐತಾ, ನಿಂಗೆ ನಮಪ್ಪಯ್ಯ ಗುರುತು ಚನ್ನಾಗಿತ್ತೇನೋ?"

"ಚನ್ನಾಗಿತ್ತಯ್ಯಾ...."

"ಅವರನ್ನ ನೋಡಿದ್ರೆ ಈಗ್ಲೂ ನಿಂಗೆ ಗುರ್ತು ಸಿಗ್ತಾದಾ?

"ಸಿಕ್ಕದೆ ಏನ್ರಯ್ಯಾ? ನಂಗೆ ಚನ್ನಾಗಿ ಬುದ್ಧಿ ಬಂದಮ್ಯಾಲೆ ಅಲ್ಲೇನು ಅವರು ತಿರುಪತಿಗೆ ಹೋಗಿದ್ದು? ಅವರು ಹೋಗಾಕೆ ಮುಂಚೆ ನಂಟರು ಇಷ್ಟರು ಎಲ್ಲರೂ ಕರೆದು ಔಂತ್ಲ ಮಾಡಿಸಿದ್ರು ನಿಮ್ಮ ಮನೇಲಿ, ನಾನು ಗಡದ್ದಾಗಿ ಉಂಡಿದ್ದೆ. ನೀವು ಆಗ ಬಾಳ ಸಣ್ಣೋರು..."

"ನಂಗೂ ಸೊಸೊಲ್ಪ ನೆನಪು ಅದೆಯೊ ಅವರದ್ದು. ಮೀಸೆ ಬಿಟ್ಟಿದ್ರಲ್ಲೇನೋ?

ಬೆಳ್ಳಗಿದ್ರು! ಕುತ್ತಿಗೀಗೆ ಒಂದು ಚಿನ್ನದ ಸರ ಹಾಕಿದ್ರಲ್ಲೇನೋ?..

"ಹೌದು ಕಣ್ರೋ! ನಿಮಗೆ ನೆಪ್ಪು ಇರಾದೆ ಆಚ್ಚರ್ಯ!"

(ಕುವೆಂಪು ಮಲೆಗಳಲ್ಲಿ ಮದುಮಗಳು ಪುಟ ೨೫೪–೨೫೫)

ಈ ಮೇಲಿನ ಉಲ್ಲೇಖಿಸಿರುವ ಉದಾಹರಣೆಯನ್ನು ಗಮನಿಸಿದರೆ 'ಐತ' ಎಂಬ ಪಾತ್ರ 'ಧರ್ಮು' ಎಂಬ ಪಾತ್ರಕ್ಕಿಂತ ಹಿರಿಯ ಪಾತ್ರ ಎಂದು ತಿಳಿಯುತ್ತದೆ. ಕೆಳಜಾತಿಯ ಹಿರಿಯ ಪಾತ್ರವಾದ ಐತ, ಮೇಲ್ಜಾತಿಯ ಕಿರಿಯ ಪಾತ್ರವನ್ನು 'ಅಯ್ಯಾ' ಎಂಬ ಗೌರವಸೂಚಕ ಪದ ಬಳಸಿ ಸಂಬೋದಿಸುತ್ತಿರುವುದು ಕಾಣುತ್ತದೆ. 'ಹೌದಯ್ಯ' 'ಏನ್ರಯ್ಯ' ಮೇಲ್ಜಾತಿಯ ಕಿರಿಯ ಪಾತ್ರವನ್ನು ಕೆಳಜಾತಿಯ ಹಿರಿಯ ಪಾತ್ರ ಸಂಬೋದಿಸುತ್ತಿದೆ. ಬಹುವಚನದಲ್ಲಿಯೂ ಸಹ ಸಂಬೋಧಿಸುವ ಪ್ರಕ್ರಿಯೆ ಇದೆ. ಹಿರಿಯರಾಗಿದ್ದರೂ ಕಿರಿಯರಿಗೆ ಯಾಕೆ ಈ ರೀತಿಯ ಗೌರವ ಸಂಬೋಧನೆ ಮಾಡಲಾಗುತ್ತಿದೆ. ಎಂದರೆ 'ಐತ' ಎಂಬ ಪಾತ್ರ ಜಾತಿಯಲ್ಲಿ 'ಕೀಳು' ಎಂದು ಭಾವಿಸಿರುವ ಕಾರಣಕ್ಕಾಗಿ ಮೇಲ್ಜಾತಿಯ ಕಿರಿಯರನ್ನು ಸಹ ಗೌರವಸೂಚಕ

ಪದಗಳಿಂದಲೇ ಸಂಬೋದಿಸಬೇಕು. ಮೇಲ್ಜಾತಿಯ ಕಿರಿಯ ಪಾತ್ರ ಕೆಳಜಾತಿಯ ಹಿರಿಯ ಪಾತ್ರವನ್ನು 'ಐತ' ಎಂದು ಹೆಸರಿಡಿದು 'ನಿಂಗೆ' ಎಂದು ಏಕವಚನದಲ್ಲಿ ಸಂಬೋಧಿಸುತ್ತಿದೆ. ಯಾಕೆ ಕಿರಿಯ ಪಾತ್ರ ಹಿರಿಯ ಪಾತ್ರವನ್ನು ಹೆಸರಿಡಿದು ಏಕವಚನದಲ್ಲೇ ಸಂಬೋದಿಸಲಾಗುತ್ತಿದೆ. ಎಂದರೆ ಧರ್ಮ ಎಂಬ ಪಾತ್ರದ 'ಜಾತಿ ಮೇಲು' ಎಂಬ ಕಾರಣಕ್ಕಾಗಿ, ಈ ಸಂಬೋಧನೆಯ ನೆಲೆಯಲ್ಲಿ ಸಮಾಜಿಕ ಸ್ತರವಿನ್ಯಾಸ ಕಾಣುತ್ತಿದೆ. ಈ ಕಾದಂಬರಿಯಲ್ಲಿ ಬರುವ ಈ ಸನ್ನಿವೇಶದ ಸಂಭಾಷಣೆ ಅಭಿವ್ಯಕ್ತಿಯ ಸಮಾಜದ ವಾಸ್ತವವನ್ನು ಪ್ರತಿಬಿಂಬಿಸುತ್ತಿದೆ.

ಶ್ರೀ ಕೃಷ್ಣ ಆಲನಹಳ್ಳಿ ಕಾದಂಬರಿ ಆಧಾರಿತ, ಗಿರೀಶಕಾರ್ನಾಡ್ ನಿರ್ದೇಶನದ 'ಕಾಡು' ಚಲನಚಿತ್ರದಲ್ಲಿಯೂ ಈ ರೀತಿಯ ಒಂದು ಉದಾಹರಣೆಯನ್ನು ನೋಡಬಹುದು. ಕೆಳಜಾತಿಯ 'ಕರಿಯ' ಎಂಬ ಹಿರಿಯ ಪಾತ್ರ, ಮೇಲ್ಜಾತಿಯ 'ಕಿಟ್ಟಿ' ಎಂಬ ಕಿರಿಯ ಪಾತ್ರದ ಸಂಭಾಷಣೆಯನ್ನು ಗಮನಿಸಬಹುದು.

"ಕಿಟ್ಟಿ : ಕರಿಯ, ಕರಿಯ

ಕರಿಯ: ಏನು ಚಿಕ್ಕಗೌಡ್ರೆ" (ಚಲನಚಿತ್ರ : ಕಾಡು)

ಈ ಮೇಲಿನ ಉದಾಹರಣೆಯಲ್ಲಿ ಕರಿಯ ಎಂಬ ಪಾತ್ರ ಕೆಳಜಾತಿಯ ಪಾತ್ರವಾಗಿದೆ. ಕಿಟ್ಟಿ ಎಂಬ ಪಾತ್ರ ಮೆಲ್ಜಾತಿಯ ಪಾತ್ರವಾಗಿದೆ. ಕಿಟ್ಟಿಗಿಂತ ವಯಸ್ಸಿನಲ್ಲಿ ಕರಿಯ ಹಿರಿಯ ವ್ಯಕ್ತಿ ಆದರೂ ಕಿಟ್ಟಿಯನ್ನು 'ಚಿಕ್ಕಗೌಡ್ರೆ' ಎಂದು ಸಂಬೋಧಿಸುತ್ತಾನೆ. ಕಿಟ್ಟಿ ವಯಸ್ಸಿನಲ್ಲಿ ಕಿರಿಯನಾಗಿದ್ದರೂ ವಯಸ್ಸಿನಲ್ಲಿ ಹಿರಿಯನಾದ ಕರಿಯನನ್ನು 'ಕರಿಯ' ಎಂದು ಹೆಸರಿಡಿದು ಏಕವಚನದಲ್ಲಿಯೇ ಸಂಬೋಧಿಸುತ್ತಾನೆ. ಈ ಉದಾಹರಣೆಯಿಂದ ಈ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸ ತಿಳಿಯುತ್ತದೆ. ಜಾತಿಯ ಕಾರಣಕ್ಕಾಗಿ ಸಂಬೋಧನೆ ಬಳಕೆ ನೆಲೆಯಲ್ಲಿ ಭಿನ್ನತೆಗಳು ಕಂಡು ಬರುತ್ತವೆ ಎಂದು ಹೇಳಬಹುದು.

ದೇವಕಿ ಎಂ.ಶೆಟ್ಟಿ ಅವರ 'ಜಾತಿ ಭೂತಕ್ಕೆ ಬಲಿ' ಎಂಬ ಕಥೆಯಲ್ಲಿಯೂ ಕೆಳಜಾತಿಯ ಹಿರಿಯ ಪಾತ್ರ ಮೇಲ್ಜಾತಿಯ ಕಿರಿಯ ಪಾತ್ರಕ್ಕೆ ಗೌರವ ಸಂಬೋದನೆ ಮಾಡುವುದು ಮತ್ತು ಮೇಲ್ಜಾತಿಯ ಕಿರಿಯ ಪಾತ್ರ ಮೇಲ್ಜಾತಿಯ ಹಿರಿಯ ಪಾತ್ರವನ್ನು ಹೆಸರಿಡಿದು ಏಕವಚನದಲ್ಲಿ ಸಂಬೋದಿಸಿರುವ ಉದಾಹರಣೆ ಕಂಡುಬರುತ್ತದೆ. ಆ ಉದಾಹರಣೆಯನ್ನು ಇಲ್ಲಿ ನೋಡಬಹುದು. ಕೆಳಜಾತಿಯ ಹಿರಿಯ ಮಹಿಳೆ 'ಚೆನ್ನಿ' ಎಂಬ ಪಾತ್ರ ಮೇಲ್ಜಾತಿಯ ಮಹಿಳೆ 'ಸಖೂ' ಎಂಬ ಕಿರಿಯ ಪಾತ್ರವನ್ನು ಸಂಬೋಧಿಸುವ ಕ್ರಮ ಮತ್ತು ಮೇಲ್ಜಾತಿ ಕಿರಿಯ ಮಹಿಳೆ ಕೆಳಜಾತಿಯ ಹಿರಿಯ ಮಹಿಳೆಯನ್ನು ಸಂಬೋದಿಸುವ ಕ್ರಮವನ್ನು ಇಲ್ಲಿ ಉದಾಹರಣೆಯಾಗಿ ಗಮನಿಸಬಹುದು.

"ಇದೇನು ಮಾಡಿದಿರಿ ದೆತ್ತೀ

ಏನು ಮಾಡಿದೆ ಚೆನ್ನಿ, ಬಂದು ಕುಳಿತೆನಲ್ಲ. ನಾನು ಬಂದದ್ದು ಆಗಲಿಲ್ಲವೇನು? ನಿನ್ನ ಗಂಡ ಎಲ್ಲಿ ಹೋದನೇ? ನನ್ನ 'ಮಾದಿಗ' ಇನ್ನೂ ಬಂದಿಲ್ಲ. ಈಗ ಬಂದಾನು ತಾಯೀ.

ನಿವೊಮ್ಮೆ ಹೊರಹೋಗಿ. ನೀವು ಹೀಗೆ ನಮ್ಮ ಮನೆಯೊಳಗೆ ಪ್ರವೇಶಿಸುವುದು ನಮ್ಮ ಕಲ್ಲೂರ್ಟಿಗಾಗುವುದಿಲ್ಲ. ಅತ ಮುನಿದಾನು ಹೋಗಿ ತಲೆಗೆ ಸ್ನಾನ ಮಾಡಿ ಏನಾದರೂ ಹರಕೆ ಹೇಳಿಕೊಂಡುಬಿಡಿ ತಾಯಿ. ವಿಪತ್ತು ಬಾರದಿರದು ತಾಯೀ ನಮಗೆ ಏನೇ ಆಗಲಿ. ಬಾಳಿ ಫಲಬಿಡಲಿರುವ ನೀವು ದೆತ್ತೀ? ಹೀಗೆ ಮಾಡಬೇಡಿ.

ಏನಯಿತು ಚೆನ್ನಿ, ನಾನೇನು ಸಾಯಲು ಬಂದಿರುವೇನೆ? ನೀನು ಮಾತಾಡುವ ರೀತಿ ನೋಡಿದರೆ ನನ್ನ ಪ್ರಾಣವೆಳೆಯುತ್ತಿದೆ ಎಂದೆ ನೆನಸಬೇಕು'

(ಉಷಾ ಪಿ ರೈ. ಕೆ: (ಪ್ರ.ಸಂ), ಲೇಖಕರ ಸಣ್ಣ ಕಥೆಗಳು, ಭಾಗ-೨, ಸಂಪುಟ ೧-ಪುಟ-೧೭೯-೧೮೦)

ಈ ಮೇಲಿನ ಸಂಭಾಷಣೆಯಲ್ಲಿ 'ಚೆನ್ನಿ' ಕೆಳಜಾತಿಯ ಪಾತ್ರ ಮತ್ತು 'ಸಖೂ' ಮೇಲ್ಜಾತಿಯ ಪಾತ್ರವೆಂದು ತಿಳಿಯುತ್ತದೆ. ಚೆನ್ನಿ, ಸಖೂಗಿಂತ ವಯಸ್ಸಿನಲ್ಲಿ ಹಿರಿಯ ವ್ಯಕ್ತಿ, ಅದರೂ ದೆತ್ತೀ, 'ನೀವು' ಎಂದು ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಸಂಬೋದಿಸುತ್ತಿರುವುದು ಕಂಡುಬರುತ್ತದೆ. ಸಖೂ ಚೆನ್ನಿಗಿಂತ ಕಿರಿಯವಳಾದರೂ 'ಚೆನ್ನಿ' ನೀನು, ನಿನ್ನ, ಎಂದು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಿರುವುದು ಕಂಡುಬರುತ್ತದೆ. ಯಾಕೆ ರೀತಿ ಸಂಬೋಧನೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆಯೆಂದರೆ ಇಲ್ಲಿ ಜಾತಿ ಜಾತಿ ಪ್ರಜ್ಞ ಮತ್ತು ಅಪ್ರಜ್ಞಾಪೂರ್ವಕವಾಗಿ ಕೆಲಸ ಮಾಡುತ್ತಿರುತ್ತದೆ. ಕೆಳಜಾತಿಯರಾದ ಕಾರಣಕ್ಕೆ ಅವರಿಂದ ಚಿಕ್ಕವರಾದರೂ ಮೇಲ್ಜಾತಿಯವರಿಗೆ ಗೌರವ ಸಂಬೋದನೆಯಿಂದ ಸಂಬೋಧಿಸಬೇಕು. ಮೇಲ್ಜಾತಿಯವರು ಕೆಳಜಾತಿಯರನ್ನ ಏಕವಚನದಿಂದ ಹೆಸರಿಡಿದೆ ಸಂಬೋದಿಸುತ್ತಾರೆ. ಅವರಿಗಿಂತ ದೊಡ್ಡವರಿರಲಿ, ಚಿಕ್ಕವರಿರಲಿ ಮತ್ತು ಪುರುಷರಾಗಲಿ, ಮಹಿಳೆಯರಾಗಲಿ ಹೆಸರಿಡಿದು ಏಕವಚನದಿಂದಲೇ ಸಂಬೋಧಿಸುತ್ತಿರುವುದು ಕಂಡುಬರುತ್ತದೆ. ಜಾತಿ ಮತ್ತು ಆರ್ಥಿಕ ಅಸಮಾನತೆಗಳು ಈ ಸಂಬೋಧನಾ ಸಾಮಾಜಿಕ ಸ್ತರವಿನ್ಯಾಸಕ್ಕೆ ಕಾರಣವಾಗಿವೆ ಎಂದು ಹೇಳಬಹುದು.

ಲಂಕೇಶ ಅವರ 'ಸಂಕ್ರಾತಿ' ನಾಟಕದಲ್ಲಿ ಕೆಳಜಾತಿ ಹಿರಿಯ ಪಾತ್ರ, ಮೇಲ್ಜಾತಿ ಕಿರಿಯ ಪಾತ್ರದ ಸಂಭಾಷಣೆಯ ಸಂಬೋದನೆ ಬಳಕೆಯ ಆಯಾಮಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೋಡಬಹುದು.

ಕೆಳಜಾತಿಯ ಉಜ್ಜ ಎಂಬ ಪಾತ್ರ ವಯಸ್ಸಿನಲ್ಲಿ ಹಿರಿಯ ಪಾತ್ರವಾಗಿದೆ. ಮೇಲ್ಜಾತಿಯ ಕಿರಿಯ ಪಾತ್ರಗಳಾದ ಉಮಾ, ರಮಾ, ಸುಮ, ಎಂಬ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರವನ್ನು ಸಂಬೊದಿಸುವ ಕ್ರಮವನ್ನು ಈ ಕೆಳಗಿನಂತೆ ನೋಡಬಹುದು.

"ಉಜ್ಜ, ಏನವ್ವ, ಎನು ಸಮಾಚಾರ? ನೀರು ತರ್ತ, ಅಡುಗೆ ಮಾಡ್ತ, ಜಗಳ ಕಾಯ್ತ ಹೀಗೆ ಇದ್ದು ಬಿಡ್ತಿರೊ. ಏನರ ಮದುವಿ ಗಿದುವಿ?

ಉಮಾ : ಮುದಿಯಾ, ನಿನ್ನ ದಾರಿ ನೀನು ನೋಡಿಕೋ-

ರಮ : ನಮ್ಮ ಮದುವಿ ತಂಟೆ ಯಾಕೆ ಇವನಿಗೆ

ಸುಮ : ಉಷಾ!

ಉಜ್ಜ : ಅದೇನವ್ವ ನಾನಂತಿರೋದು, ಅದೇನೊ ಅಂತಾರಲ್ಲ, ಹೊಲೇರ ಕೈಗೆ ಮೈ ಕೊಡಬ್ಯಾಡ, ಬ್ರಾಂಬ್ರ ಕೈಗೆ ಮನಸ ಕೊಡಬ್ಯಾಡ ಅಂತ

ಉಮ : ಲೇ ಹೊಲೆಯಾ, ನೀನು ನಿನ್ನದಾರಿ ಹಿಡಿದಿಯೋ ಸರಿ, ಇಲ್ಲದಿದ್ರೆ ಬಿಜ್ಜಳರಿಗೆ ಹೇಳಿ ಆ ರುದ್ರನ ಜೊತೀಗೆ ನಿನ್ನ ಚರ್ಮಾನೂ

ಉಜ್ಜ : ಬಿಜ್ಜಳರು ಯಾವಾಗಿಂದ ಚರ್ಮ ಸುಲಿಯಾಕೆ ಹತ್ತಿದವ್ವ?

ಅದು ನನ್ನ ಕೆಲಸ! ಹೊಲೆರ ಕೆಲಸ"

(ಶ್ರೀನಿವಾಸರಾಜು, ಚಿ, ದಾಮೋದರಶೆಟ್ಟಿ ನಾ.(ಸಂ) ಸುವರ್ಣನಾಟಕ ಭಾಗ-೧. ಪುಟ-೨೯೨)

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿಯ ಹಿರಿಯ ಪಾತ್ರ ಮೇಲ್ಜಾತಿಯ ಕಿರಿಯ ಪಾತ್ರಗಳನ್ನು ಗೌರವಸೂಚಕದಿಂದ ಸಂಬೋಧನೆ ಮಾಡುತ್ತಿದೆ. 'ಅವ್ವ' ಎಂಬ ಗೌರವಸೂಚಕವನ್ನು ಬಳಸಿ ಬಹುವಚನದಿಂದ ಸಂಬೋಧಿಸುತ್ತಿದೆ. ಆದರೆ ಮೇಲ್ಜಾತಿಯ ಕಿರಿಯ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರವನ್ನು ಯಾವುದೇ ಗೌರವಸೂಚಕಗಳನ್ನು ಬಳಸದೇ ಏಕವಚನದಿಂದ ಸಂಬೋದಿಸುವುದು ಕಂಡುಬರುತ್ತದೆ. ಮುದಿಯಾ, ನಿನ್ನ, ನೀನು, ಎಂಬಂತಹ ಏಕವಚನ ಸೂಚಕಗಳನ್ನು ಬಳಸಿ ಸಂಬೋಧಿಸುವುದನ್ನು ಕಾಣಬಹುದು. ಜೊತೆಗೆ 'ಲೇ ಹೊಲೆಯಾ' ಎಂದು ಜಾತಿ ಹೆಸರನ್ನು ಬಳಸಿ ಏಕವಚನದಿಂದ ಸಂಬೋಧಿಸುವುದನ್ನು ಕಾಣಬಹುದು. 'ಉಜ್ಜ' ಕೆಳಜಾತಿಯ ವ್ಯಕ್ತಿ ಎಂದು ತಿಳಿದಾಗ, ಅವರು ಗೌರವಸೂಚಕಗಳನ್ನು ಬಳಸದೇ ಏಕವಚನದಿಂದ ಸಂಬೋಧಿಸುತ್ತಾರೆ. ಸಮಾಜದ ಏಣಿಶ್ರೇಣಿ ವ್ಯವಸ್ಥೆಯೇ ಈ ಸಂಶೋಧನೆ ನೆಲೆಗೆ ಮುಖ್ಯಕಾರಣವಾಗಿದೆ. ಜಾತಿ ಅಸಮಾನತೆಯಿಂದಾಗಿ ಅಭಿವ್ಯಕ್ತಿಯ ಸಂಬೋಧನೆ ನೆಲೆಯಲ್ಲಿ ಭಿನ್ನತೆ ಕಂಡುಬರುತ್ತದೆ.

ಈ ಮೇಲಿನ ಎಲ್ಲ ಉದಾಹರಣೆಗಳನ್ನು ಗಮನಿಸಿದಾಗ ಅಂದರೆ ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ಕೆಳಜಾತಿಯ ಹಿರಿಯ ಪಾತ್ರಗಳು ಪುರುಷರಾಗಿರಲಿ ಅಥವಾ ಮಹಿಳೆರಾಗಿರಲಿ ಮೇಲ್ಜಾತಿಯ ಕಿರಿಯ ಪಾತ್ರಗಳಿಗೆ ಪುರುಷರಾಗಿರಬಹುದು ಅಥವಾ ಮಹಿಳೆರಾಗಿರಬಹುದು ಅವರಿಗೆ ಅಯ್ಯಾ, ಗೌಡ್ರೆ, ಚಿಕ್ಕಗೌಡ್ರೆ, ಅವ್ವ, ದೆತ್ತೀ ಎಂಬಂತಹ ಗೌರವ ಸೂಚಕಗಳನ್ನು ಬಳಸಿ ಬಹುವಚನದಿಂದ ಸಂಬೋಧಿಸಿರವುದು ಕಂಡುಬರುತ್ತದೆ.

ಮೇಲಿನ ಕಿರಿಯ ಪಾತ್ರಗಳನ್ನು ಏಕವಚನದಿಂದ ಸಂಬೋಧಿಸಿವುದು ಕಂಡುಬರುವುದಿಲ್ಲ. ಮೇಲ್ಜಾತಿಯ ಕಿರಿಯ ಪಾತ್ರಗಳು ಕೆಳಜಾತಿಯ ಹಿರಿಯ ಪಾತ್ರಗಳನ್ನು ಯಾವುದೇ ಗೌರವಸೂಚಕಗಳನ್ನು ಬಳಸದೇ ಏಕವಚನದಿಂದ ಹೆಸರಿಡಿದು ಸಂಬೋಧಿಸಿರುವುದು ಕಂಡುಬರುತ್ತದೆ. ಐತಾ, ಕರಿಯ, ಚೆನ್ನಿ ಲೆ, ಏನೋ, ಮುದಿಯ, ಹೊಲೆಯ ಎಂಬುದಾಗಿ ಹೆಸರಿಡಿದು ಮತ್ತು ಜಾತಿಯನ್ನು ಸಂಬೋಧನೆಯಾಗಿ ಬಳಸಿ ಏಕವಚನದಿಂದ ಸಂಬೋಧಿಸಿರುವುದು ಕಾಣುತ್ತದೆ. ಮೆಲ್ಜಾತಿ ಕಿರಿಯ ವ್ಯಕ್ತಿಗಳಿಗೆ 'ನೀವು, ನಿಮ್ಮ', ಎಂಬುದಾಗಿ ಬಳಸಿದರೆ, ಕೆಳಜಾತಿ ಹಿರಿಯ ಪಾತ್ರಗಳಿಗೆ ನೀನು, ನಿನಗೆ, ನಿನ್ನ ಎಂದು ಏಕವಚನದಿಂದ ಸಂಬೋಧಿಸಲಾಗಿದೆ. ಈ ಸಂಬೋಧನೆ ಬಳಕೆಯ ನೆಲೆಯಿಂದ ಕೆಳಜಾತಿಯ ಮತ್ತು ಮೇಲ್ಜಾತಿ ಪಾತ್ರಗಳ ಸಾಮಾಜಿಕ ಮತ್ತು ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಕೊಳ್ಳಲಾಗಿದೆ.

೩.೧.೪.೨. ಮೇಲ್ಜಾತಿ ಹಿರಿಯ ಪಾತ್ರಗಳು ಕೆಳಜಾತಿ ಕಿರಿಯ ಪಾತ್ರಗಳನ್ನು ಮತ್ತು ಕೆಳಜಾತಿ ಕಿರಿಯ ಪಾತ್ರಗಳು ಮೇಲ್ಜಾತಿ ಹಿರಿಯ ಪಾತ್ರಗಳನ್ನು ಸಂಬೋಧಿಸುವ ಕ್ರಮ

ಕನ್ನಡ ಅಭಿವ್ಯಕ್ತಿಯಲ್ಲಿ ಮೇಲ್ಜಾತಿಯ ಹಿರಿಯ ಪಾತ್ರಗಳು ಕೆಳಜಾತಿ ಕಿರಿಯ ಪಾತ್ರಗಳನ್ನು ಸಾಮಾನ್ಯವಾಗಿ ಹೆಸರಿಡಿದು ಏಕವಚನದಿಂದಲೇ ಸಂಬೋಧಿಸುತ್ತವೆ. ಕರಿಯ, ನಾಗ, ಲಕ್ಕ, ಚೆನ್ನಿ, ಲೇ, ಲೋ, ಏನೋ, ಬರೋ, ಹೋಗೋ ಎಂಬುದಾಗಿ ಸಂಬೋಧಿಸುತ್ತವೆ. ಆದರೆ ಕೆಳಜಾತಿಯ ಹಿರಿಯ ಪಾತ್ರಗಳು ಮೇಲ್ಜಾತಿ ಕಿರಿಯ ಪಾತ್ರಗಳನ್ನು ಈ ರೀತಿಯಾಗಿ ಸಂಬೋಧಿಸಲು ಸಾಧ್ಯವಿಲ್ಲ. ಕೆಳಜಾತಿಯ ಕಿರಿಯ ಪಾತ್ರಗಳು, ಮೇಲ್ಜಾತಿಯ ಹಿರಿಯ ಪಾತ್ರಗಳನ್ನು ಗೌಡ್ರೆ, ಗೌಡ್ತಿ, ಒಡೆಯ, ಒಡತಿ, ಧಣಿ, ಸಾಹುಕಾರ್ರೆ, ಅಯ್ಯಾ, ಅಮ್ಮ, ಮುಂತಾದ ಗೌರವ ಸೂಚಕಗಳನ್ನು ಬಳಸಿ ಬಹುವಚನದಿಂದ ಸಂಬೋದಿಸುತ್ತಲೇ ಆದರೆ ಮೆಲ್ಜಾತಿ ಕಿರಿಯ ಪಾತ್ರಗಳು ಕೆಳಜಾತಿ ಹಿರಿಯ ಪಾತ್ರಗಳನ್ನು ಗೌರವ ಸೂಚಕ ಮತ್ತು ಬಹುವಚನನಗಳಿಂದ ಸಂಬೋಧಿಸುವುದಿಲ್ಲ. ಕೆಳಜಾತಿಯ ಕಿರಿಯರು ಮೇಲ್ಜಾತಿ ಹಿರಿಯರನ್ನು ಗೌರವ ಸಂಬೋಧನೆಯಲ್ಲಿ ಸಂಬೋಧಿಸುವುದು ಕಂಡುಬರುತ್ತದೆ.

ಈ ರೀತಿಯ ಸಂಬೋಧನಾ ಬಳಕೆಯ ಆಯಾಮಗಳನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತಿರುವ ಆಕರಗಳ ಮೂಲಕ ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳ' ಕಾದಂಬರಿಯಲ್ಲಿ ಬರುವ ಮೇಲ್ಜಾತಿಯ ಸುಬ್ಬಣ್ಣ ಹೆಗ್ಗಡೆ ಕೆಳಜಾತಿಯ ಗುತ್ತಿಯ ನಡುವೆ ನಡೆಯುವ ಸಂಭಾಷಣೆಗೆ ಈ ಕೆಳಗಿನಂತೆ ನೋಡಬಹುದು.

"ಯಾಕೋ? ಮುದುರಿಮುದ್ದೆ ಆಗಿದೆಯಲ್ಲಾ?" ಗುತ್ತಿ ಅವರಿಗೂ ತಮ್ಮಪ್ಪ ಹೆಗ್ಗಡೆಗೆ ಹೇಳಿದ್ದ ಲಕ್ಕುಂದದ ಹಳ್ಳ ಏರಿದ್ದ ಕಥೆಯನ್ನೆ ಮತ್ತೆ ಹೇಳಿದನು.

"ಹಾಂಗಾದ್ರೆ ಒಂದು ಕೆಲಸ ಮಾಡ್ತೀಯಾ, ಗುತ್ತಿ? ನೀನು ಹಾಂಗೇ ಹೋಂಗಾವ ಕೋಣೂರಿನ ಐಗಳು ಅವಂತಯ್ಯನ್ನ, ನಾ ಬರಾಕೆ ಹೇಳ್ದೆ ಅಂತ ಹೇಳ್ತೀಯಾ?" " ನಾ ಬೆಟ್ಟಳ್ಳಿಗೆ ಹೋಗ್ತೀನಿ, ಹೂವಳ್ಳಿ ಮೇಲಾಸಿ' ಎಂದು ಅಂಗಲಾಚುತ್ತಾ ನಿಂತನು. ಹೂವಳ್ಳಿ ಮೇಲಾಸಿ ಹೋದರೇನು? ಕೋಣೂರಿನ ಮೇಲಾಸಿ ಹೋದರೇನು? ಒಂದೇ ದೂರ ಅಲ್ಲೇನೋ?" ಯಾಕೋ ಬೆಟ್ಟಳ್ಳಿಗೆ? ಕಾಗ್ದಗೀಗ್ದ ಕೊಟ್ಟಾರೇನೋ?" "ಇಲ್ಲಾ! ನಂದೇ ಒಂದು ಚೂರು ಕೆಲ್ಸ ಇತ್ತು" (ಕುವೆಂಪು ಮಲೆಗಳಲ್ಲಿ ಮದುಮಗಳು ಪುಟ-೧೯-೧೧೦)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿಯ ಹಿರಿಯ ಪಾತ್ರ, ಕೆಳಜಾತಿಯ ಕಿರಿಯ ಪಾತ್ರವನ್ನು ಹೆಸರಿಡಿದು, ಏಕವಚನದಿಂದ ಸಂಬೋಧಿಸುತ್ತಿದೆ. ಹಿರಿಯರು ಕಿರಿಯರನ್ನು ಹೆಸರಿಡಿದು ಏಕವಚನದಿಂದ ಸಂಬೋಧಿಸುವುದು ಸಾಮಾನ್ಯ ನಿಯಮ. ಆದರೆ ಜಾತಿಯ ಕಾರಣಕ್ಕಾಗಿ, ಮೇಲ್ಜಾತಿ ಹಿರಿಯರು ಕೆಳಜಾತಿ ಕಿರಿಯನನ್ನು ಗೌರವಸೂಚಕ ಮತ್ತು ಬಹುವಚನದಿಂದ ಸಂಬೋಧಿಸದಿರುವುದನ್ನು ಕಾಣುತ್ತೇವೆ. ಕೆಳಜಾತಿ ಕಿರಿಯ ಪಾತ್ರ, ಮೇಲ್ಜಾತಿಯ ಹಿರಿಯ ಪಾತ್ರವನ್ನು ಮೇಲಿನ ಸಂಭಾಷಣೆಯಲ್ಲಿ ಯಾವುದೇ ಗೌರವಸೂಚಕಗಳನ್ನು ಮತ್ತು ಬಹುವಚನ ಸೂಚಕಗಳನ್ನು ಬಳಸದಿದ್ದರೂ ಮೆಲ್ಜಾತಿಯ ಹಿರಿಯ ಪಾತ್ರದ ಸಾಮಾಜಿಕ ಗೌರವಕ್ಕೆ ಯಾವುದೇ ದಕ್ಕೆ ಉಂಟಾಗುವುದಿಲ್ಲ. ಕೆಳಜಾತಿಯ ಕಿರಿಯ ಪಾತ್ರ ಅಶಾಬ್ದಿಕ ಸಂವಹನದ ಮೂಲಕ ಗೌರವನ್ನು ಸೂಚಿಸುತ್ತಿರುತ್ತದೆ. ಈ ರೀತಿಯಾಗಿ ಸಂಬೋಧನೆಯ ಬಳಕೆಯ ನೆಲೆಗಳನ್ನು ಇಲ್ಲಿ ಗಮನಿಸಬಹುದು.

ರೆಡ್ಡಿ ಹೆಚ್.ಎನ್., ನಿರ್ದೇಶನದ 'ಕಾವೇರಿ' ಚಲನಚಿತ್ರದಲ್ಲಿ ಮೇಲ್ಜಾತಿ ಹಿರಿಯ ಮತ್ತು ಕೆಳಜಾತಿ ಕಿರಿಯ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಸಂಬೋಧನೆ ಬಳಕೆಯ ನೆಲೆಯನ್ನು ನೋಡಬಹುದು. ಉದಾಹರಣೆಗೆ

"ಚಿಕ್ಕನರಸ : ಓ ಹೋ ನೀವಾ ಬುದ್ಧಿ...

ರಾಘವೇಂದ್ರರಾವ್ : ಆ

ಚಿಕ್ಕನರಸ : ಅಯ್ಯಯ್ಯೋ ಏನಿದು ಬೆಳಿಗ್ಗೆಯಿಂದ ಹಿಡ್ದಿರೋದು ಒಂದೇ ಮೀನು ನೀವು ಅದನ್ನು ನೀರಿಗೆ ಎಸ್ದುಬಿಟ್ರಿ

ರಾಘವೇಂದ್ರರಾವ್: ಪ್ರಾಣಿ ಹಿಂಸೆ ಮಾಡಬಾರ್ದು ಕಣೋ ಅದ್ಸರಿ ನೀನು ಇರೋದು ಎಲ್ಲಿ? ಯಾರ ಮಗ" (ಚಲನಚಿತ್ರ : ಕಾವೇರಿ)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿಯ ಹಿರಿಯ ಪಾತ್ರ ಕೆಳಜಾತಿಯ ಕಿರಿಯ ಪಾತ್ರವನ್ನು ಏಕವಚನದಿಂದ ಸಂಬೋಧಿಸಿರುವುದು ಕಾಣುತ್ತದೆ. ಕೆಳಜಾತಿಯ ಕಿರಿಯ ಪಾತ್ರ ಬುದ್ಧಿ, ನೀವಾ ಎಂದು ಗೌರವಸೂಚಕ ಮತ್ತು ಬಹುವಚನದಿಂದ ಸಂಬೋಧಿಸುವುದನ್ನು

ನೋಡಬಹುದು. ಆದರೆ ಅದೆ ಜಾತಿಯ ಅಂದರೆ ಮೇಲ್ಜಾತಿಯ ಕಿರಿಯ ಪಾತ್ರ ಮೇಲ್ಜಾತಿಯ ಹಿರಿಯ ಪಾತ್ರವನ್ನು ಬುದ್ಧಿ ಒಡೆಯ, ಎಂದು ಸಂಬೋಧಿಸುತ್ತಿರಲಿಲ್ಲ. ಅಣ್ಣ, ಅಪ್ಪ, ಎಂದು ಸಂಬೋಧನಾ ರೂಪಗಳನ್ನು ಬಳಸಿ ಸಂಬೋಧಿಸಲಾಗುತ್ತಿತ್ತು. ಜಾತಿ ಮತ್ತು ಒಡೆತನದ ಕಾರಣಕ್ಕಾಗಿ ಸಂಬೋಧಿನೆಯಲ್ಲಿ ಸಾಮಾಜಿಕ ಸ್ತರವಿನ್ಯಾಸಗಳು ಕಂಡುಬರುತ್ತವೆ.

ಕುವೆಂಪು ಅವರ 'ಯಾರು ಅರಿಯದ ವೀರ' ಎಂಬ ಕಥೆಯಲ್ಲಿಯೂ ಸಹ ಈ ರೀತಿಯ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಮೇಲ್ಜಾತಿಯ ಹಿರಿಯ ಪಾತ್ರವಾದ ಸುಬ್ಬಣ್ಣಗೌಡ ಕೆಳಜಾತಿಯ ಕಿರಿಯ ಪಾತ್ರವಾದ ನಾಗನನ್ನು ಸಂಬೋಧಿಸುವ ಕ್ರಮವನ್ನು ಇಲ್ಲಿ ನೋಡಬಹುದು.

"ನಾಗಾ! ಎಂದು ಕೂಗಿದರು

ಏನ್ರಯ್ಯಾ? ಎಂದ.

ದನ ಎಲ್ಲಾ ಕಟ್ಟಿದ್ದೀರೇನೋ?

ಹೌದ್ರಯ್ಯಾ, ಎಲ್ಲಾ ಕಟ್ಟಿದ್ದೇನೆ. ತುಂಗೆ ದನ, ಪುಟ್ಟಗುಡ್ಡ, ಯಲ್ಡು ಮಾತ್ರ ಕೊಟ್ಟಿಗೆಗೆ ಬರಲೇ ಇಲ್ಲ. ಹೋಗಲಿ ಬಿಡು" (ಕೃಷ್ಣಮೂರ್ತಿ ಹನೂರು, ಬಾನುಮುಷ್ತಾಕ್(ಸಂ), ಸುವರ್ಣಕಥಾ ಸಂಕಲನ, ಪುಟ-೧೮-೧೯)

ಈ ಕಥೆಯ ಸಂಭಾಷಣೆಯನ್ನು ಗಮನಿಸಿದಾಗ ಮೇಲ್ಜಾತಿ ಹಿರಿಯ ಪಾತ್ರ ಕೆಳಜಾತಿ ಕಿರಿಯ ಪಾತ್ರವನ್ನು ಹೆಸರಿಡಿದು ಏಕವಚನದಿಂದ ಸಂಬೋಧಿಸುತ್ತಿರುವುದು ಕಾಣುತ್ತದೆ. 'ನಾಗ' 'ಏನೋ' ಎಂದು ಹೆಸರಿಡದು ಏಕವಚನದಲ್ಲಿ ಸಂಬೋಧಿಸಲಾಗಿದೆ. ಕೆಳಜಾತಿಯ ಕಿರಿಯ ಪಾತ್ರ ಮೇಲ್ಜಾತಿಯ ಹಿರಿಯ ಪಾತ್ರವನ್ನು 'ಅಯ್ಯಾ' ಎಂಬ ಗೌರವಸೂಚಕವನ್ನು ಬಳಸಿ ಬಹುವಚನದಿಂದ ಸಂಬೋಧಿಸಿರುವುದನ್ನು ಕಂಡುಬರುತ್ತದೆ. ಈ ರೀತಿಯಗಿ ಮೇಲ್ಜಾತಿ ಹಿರಿಯ ಮತ್ತು ಕೆಳಜಾತಿಯ ಕಿರಿಯ ಪಾತ್ರಗಳ ನಡುವೆ ಸಂಬೋಧನೆ ಕ್ರಮ ಬಳಕೆಯಗಿರುವುದನ್ನು ನೊಡಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಮೇಲ್ಜಾತಿಯ ಹಿರಿಯ ಪಾತ್ರಗಳ ಕೆಳಜಾತಿಯ ಕಿರಿಯ ಪಾತ್ರಗಳನ್ನು ಹೆಸರಿಡಿದು, ಏಕವಚನದಲ್ಲಿ ಸಂಬೋಧಿಸಿರುವುದು ಕಾಣುತ್ತದೆ. ಬಹುವಚನದಿಂದ ಸಂಬೋದಿಸಿರುವ ಉದಾಹರಣೆಗಳು ಸಿಗುವುದಿಲ್ಲ. ಕೆಳಜಾತಿ ಹಿರಿಯ ಮತ್ತು ಮೇಲ್ಜಾತಿ ಕಿರಿಯರ ಸಂಬೋದನೆಯ ಕ್ರಮದಲ್ಲಿ ಇದಕ್ಕೆ ವ್ಯತಿರಿಕ್ತವಾಗಿರುತ್ತದೆ. ಮೇಲ್ಜಾತಿಯ ಹಿರಿಯ ಪಾತ್ರಗಳು ಕೆಳಜಾತಿಯ ಕಿರಿಯ ಪಾತ್ರಗಳನ್ನು ನಾಗ, ಗುತ್ತಿ, ಎಂದು ಹೆಸರಿಡಿದು ಏಕವಚನದಿಂದ ಸಂಬೋಧಿಸಿರುವುದು ಕಂಡುಬರುತ್ತದೆ. ಕೆಳಜಾತಿಯ ಕಿರಿಯರು

ಮೇಲ್ಜಾತಿಯ ಹಿರಿಯರನ್ನು ಒಡೆಯ, ಧಣಿ, ಬುದ್ಧಿ, ಅಯ್ಯಾ, ಎಂದು ಬಹುವಚನ ಮತ್ತು ಗೌರವಸೂಚಕಗಳನ್ನು ಬಳಸಿ ಸಂಬೋಧಿಸಿರುವುದನ್ನು ಕಾಣಬಹುದು. ಈ ಸಂಬೋಧನೆಯ ನೆಲೆಗಳಲ್ಲಿ ಸಾಮಾಜಿಕ ಸ್ತರವಿನ್ಯಾಸ ಜಾತಿ ಮತ್ತು ವಯಸ್ಸಿನ ಅಂತರದ ಆಧಾರದ ಮೇಲೆ ಕಂಡುಬರುತ್ತದೆ.

೩.೧.೫. ಶಿಕ್ಷಣ ಪಡೆದ ಪಾತ್ರಗಳು ಸಂಬೋಧಿಸುವ ಕ್ರಮ

ಸಮಾಜದಲ್ಲಿ ಶಿಕ್ಷಣ ಪಡೆದ ಪ್ರಜ್ಞಾವಂತರು ಸಮಾಜದಲ್ಲಿನ ವ್ಯಕ್ತಿಗಳನ್ನು ಸಂಬೋಧಿಸುವಾಗ ಸಾಮಾನ್ಯವಾಗಿ ಜಾತಿಯನ್ನು ಗಮನದಲ್ಲಿಟ್ಟುಕೊಳ್ಳದೆ, ವಯಸ್ಸಿನ ಆಧಾರದ ಮೇಲೆ ಸಂಬೋಧನೆ ಮಾಡುವುದನ್ನು ಕಾಣಬಹುದು. ಶಿಕ್ಷಣ ಪಡೆಯದ ವ್ಯಕ್ತಿಗಳು ಜಾತಿಯನ್ನು ಮುಖ್ಯವಾಗಿಟ್ಟುಕೊಂಡು ಸಂಬೋಧನಾ ರೂಪಗಳನ್ನು ಬಳಕೆ ಮಾಡಿರುವುದು ಕಂಡುಬರುತ್ತದೆ. ಶಿಕ್ಷಣ ಪಡೆದ ಪ್ರಜ್ಞಾವಂತ ವ್ಯಕ್ತಿಗಳು ಜಾತಿಯನ್ನು ಮುಖ್ಯವಾಗಿ ಗಮನಿಸದೇ ಇವರು ಕೆಳಜಾತಿಯವರು ಇವರು ಮೇಲ್ಜಾತಿಯವರು ಎನ್ನದೆ ಎಲ್ಲರಿಗೂ ಸಮಾನ ಗೌರವ ಸ್ಥಾನಮಾನಗಳನ್ನು ನೀಡುವುದು ಕಾಣಬಹುದು. ಅಧ್ಯಯನಕ್ಕೆ ಆಯ್ದುಕೊಂಡ ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಈ ರೀತಿಯ ಶಿಕ್ಷಣ ಪಡೆದ ಪ್ರಜ್ಞಾವಂತ ಪಾತ್ರಗಳು ಕೆಳಜಾತಿಯ ಪಾತ್ರಗಳಿಗೆ ಗೌರವಸೂಚಕಗಳಿಂದ ಸಂಬೋಧಿಸಿರುವ ನೆಲೆಗಳನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು. ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳು ಎಲ್ಲರಂತೆ ಮೇಲ್ಜಾತಿಯವರಿಗೂ ಗೌರವ ಸಂಬೋಧನೆ ಮಾಡುತ್ತಾರೆ. ಒಡೆಯರೆ, ಬುದ್ಧಿ, ಒಡತಿ, ಎಂದು ಸಂಬೋದನೆಯನ್ನು ಮಾಡದಿರುವ ಉದಾಹರಣೆಗಳನ್ನು ಸಹ ನೋಡಬಹುದು. ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿ ಎಲ್ಲರೂ ಸಮಾನರು, ಸಮಾಜದಲ್ಲಿ ಎಲ್ಲರಿಗೂ ಸಮಾನ ಗೌರವಸ್ಥಾನಮಾನಗಳು ದೊರೆಯಬೇಕು ಎಂಬ ಆಶಯವನ್ನು ಉಳ್ಳವರು ಮತ್ತು ಆ ರೀತಿಯ ಪಾತ್ರ ಆಲೋಚನೆ ಕ್ರಮವನ್ನು ಹೊಂದಿದವರಾಗಿದ್ದಾರೆ. ಇದು ಅಧುನಿಕ ಶಿಕ್ಷಣ ಕ್ರಮದಿಂದ ಮೂಡಿದ ಆಲೋಚನಾ ಕ್ರಮವಾಗಿದೆ.

ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಂಬೋಧಿಸುವ ಕ್ರಮ ಮತ್ತು ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಸಂಬೋಧಿಸುವ ಕ್ರಮ ಕೆಲವು ಪ್ರಾತಿನಿಧಿಕ ಸೃಜನಶಿಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಹೇಗೆ ಮೂಡಿಬಂದಿದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

೩.೧.೫.೧ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಂಬೋಧಿಸುಕ್ರಮ

ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಶಿಕ್ಷಣ ಪಡೆಯದ ಮೇಲ್ಜಾತಿ ಪಾತ್ರಗಳಿಗಿಂತ ಭಿನ್ನವಾಗಿರುವುದನ್ನು ನೋಡಬಹುದು. ಶಿಕ್ಷಣ ಪಡೆದ ಪಾತ್ರಗಳು, ಕೆಳಜಾತಿಯವರನ್ನು ಶಿಕ್ಷಣ

ಪಡೆಯದೆ ಇರುವ ಮೇಲ್ಜಾತಿ ವ್ಯಕ್ತಿಗಳಂತೆ ಕಾಣುವುದಿಲ್ಲ, ಶಿಕ್ಷಣ ಪಡೆದ ಪ್ರಜ್ಞಾವಂತ ಪಾತ್ರಗಳಲ್ಲಿ ಜಾತಿ, ಧರ್ಮ ಇವುಗಳ ಬಗ್ಗೆ ತಿರಸ್ಕಾರದ ಮನೋಭಾವ ಇರುವುದನ್ನು ಕಾಣಬಹುದು.

ಸಮಾಜದಲ್ಲಿ ಪ್ರತಿಯೊಬ್ಬರಿಗೂ ಸಮಾನಗೌರವ, ಸ್ಥಾನಮಾನಗಳು ದೊರೆಯಬೇಕು ಎಂಬ ಆಶಯವನ್ನು ಹೊಂದಿದಂತಹ ಪಾತ್ರಗಳಾಗಿವೆ. ಈ ರೀತಿಯ ಆಶಯವನ್ನು ಇಟ್ಟುಕೊಂಡ ಪಾತ್ರಗಳ ಸಂಬೋಧನಾ ಕ್ರಮದಲ್ಲಿ ಬದಲಾವಣೆಯನ್ನು ಕಾಣಬಹುದು. ಕೆಳಜಾತಿಯ ಪಾತ್ರಗಳನ್ನು ಸಂಬೋಧಿಸುವಾಗ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಸಂಬೋಧಿಸುತ್ತಾರೆ. ಉದಾಹರಣೆಗೆ 'ಕಾಳ' ಎಂಬ ದಲಿತ ಪಾತ್ರವನ್ನು ಕಾಳಣ್ಣ ಎಂದು, ಚೆನ್ನಿ ಎಂಬ ಕೆಳಜಾತಿ ದಲಿತ ಪಾತ್ರವನ್ನು 'ಚೆನ್ನಮ್ಮ', ಸುಂದ್ರಿಯನ್ನು ಸುಂದ್ರಕ್ಕ ಎಂದು ಗೌರವಸಂಬೋಧನೆ ಮಾಡಿರುವ ಉದಾಹರಣೆಗಳನ್ನು ನೋಡಬಹುದು. ಎಸ್.ಎಲ್. ಭೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಮೇಲ್ಜಾತಿಯ ಶಿಕ್ಷಣ ಪಡೆದ ಪಾತ್ರ, ಕೆಳಜಾತಿಯ ಪಾತ್ರವನ್ನು ಸಂಬೋಧಿಸುವ ಒಂದು ಉದಾಹರಣೆಯನ್ನು ನೋಡಬಹುದು. ಶಿಕ್ಷಣ ಪಡೆದ ಸತ್ಯಭಾಮೆ ಮತ್ತು ಕೆಳಜಾತಿಯ ಬೆಟ್ಟಯ್ಯ ಪಾತ್ರಗಳ ನಡುವೆ ನಡೆಯುವ ಸಂಭಾಷಣೆಯ ಮೂಲಕ ಸಂಬೋಧನೆಯ ಬಳಕೆಯ ನೆಲೆಯನ್ನು ನೋಡಬಹುದು.

" ಬೆಟ್ಟಯ್ಯನವರೇ ಅಯ್ಯಾರು ಗ್ಯಾನತಪ್ಪಿ ಬಿದ್ದವ್ರೆ.

ನೋಡವ್ವ, ಬ್ಯಾಗ ತಲೆಗೆ ಒಂದೀಟು ನೀರು ತಟ್ಟಿ, ಗಾಳಿಬೀಸಿ ಗಾಳಿಯ ಎಂದು ಬೆಟ್ಟಯ್ಯ ಹೇಳಿದರು" (ಭೈರಪ್ಪ, ಎಸ್.ಎಲ್, 'ದಾಟು' ಪುಟ-೩೪)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿಯ ಸತ್ಯಭಾಮೆ ಕೆಳಜಾತಿಯ ಬೆಟ್ಟಯ್ಯನನ್ನು 'ಅವರೇ' ಎಂಬ ಬಹುವಚನ ಸೂಚಕವನ್ನು ಬಳಸಿ ಗೌರವಸಂಬೋಧನೆ ಮಾಡಿರುವುದು ಕಂಡುಬರುತ್ತದೆ. "ಬೆಟ್ಟಯ್ಯನವರೇ ಅಯ್ಯಾರು ಗ್ಯಾನತಪ್ಪಿ 'ಬಿದ್ದವ್ರೆ' ಎಂದು ಬೆಟ್ಟಯ್ಯನನ್ನು ಸಂಬೋಧಿಸುತ್ತಾಳೆ. ಸಂಬೋಧನಾ ನೆಲೆಯ ಸಾಂಪ್ರದಾಯಿಕ ಮಾದರಿಯನ್ನು ಮೀರಿದೆ ಮೇಲ್ಜಾತಿಯವರು ಕೆಳಜಾತಿಯಯವರಿಗೆ ಗೌರವಸೂಚಕ ಪದಗಳನ್ನು ಬಳಸಿ ಬಹುವಚನದಿಂದ ಸಂಬೋಧಿಸಬಾರದು ಎಂಬ ಸಾಂಪ್ರದಾಯಿಕ ಮಾದರಿಯನ್ನು ಇಲ್ಲಿ ಮೀರಿರುವುದು ಕಂಡುಬರುತ್ತದೆ. ಈ ಬದಲಾವಣೆಗೆ ಆಧುನಿಕ ಶಿಕ್ಷಣ ಮಾದರಿಯೇ ಕಾರಣ ಎಂದು ಹೇಳಬಹುದು. ಶಿಕ್ಷಣ ಪಡೆದ ಪ್ರಜ್ಞಾವಂತ ಪಾತ್ರಗಳಲ್ಲಿ ಮಾತ್ರ ಈ ರೀತಿಯ ಆಲೋಚನಾ ಕ್ರಮ ಹೆಚ್ಚಾಗಿ ಕಂಡುಬರುತ್ತದೆ ಎಂದು ಹೇಳಬಹುದು. ಕೆಳಜಾತಿಯ ಬೆಟ್ಟಯ್ಯ ಸತ್ಯಭಾಮೆಯನ್ನು 'ಅವ್ವ' ಎಂದು ಸಂಬೋಧನಾ ರೂಪವನ್ನು ಬಳಸಿ ಸಂಬೋಧನೆ ಮಾಡಿರುವುದು ಕಂಡುಬರುತ್ತದೆ. ಕೆಳಜಾತಿಯವರ ಗೌರವದಿಂದ ಸಂಬೋಧಿಸಿದ ಇನ್ನೂ ಕೆಲವು

ಉದಾಹರಣೆಗಳನ್ನು ನೋಡಬಹುದು. ಸಿದ್ದಲಿಂಗಯ್ಯ ನಿರ್ದೇಶನದ 'ಹೇಮಾವತಿ' ಚಲನಚಿತ್ರದಲ್ಲಿ ಶಿಕ್ಷಣ ಪಡೆದ ಮೆಲ್ಜಾತಿ ಪಾತ್ರ ಕೆಳಜಾತಿ ಪಾತ್ರವನ್ನು ಸಂಬೋಧಿಸಿರುವ ಕ್ರಮವನ್ನು ಉದಾಹರಣೆಯ ಮೂಲಕ ನೋಡಬಹುದು. ಮೇಲ್ಜಾತಿ ಪಾತ್ರವಾದ ಆನಂದ ಮತ್ತು ಕೆಳಜಾತಿ ಪಾತ್ರವಾದ ಕಾಳಣ್ಣ ಎಂಬ ಪಾತ್ರಗಳ ನಡುವಿನ ಸಂಭಾಷಣೆ ಈ ಕೆಳಗಿನಂತಿದೆ.

"ಆನಂದ : ಏನ್ ಕಾಳಣ್ಣ ಚನ್ನಾಗಿದ್ದಿಯೋ

ಕಾಳಣ್ಣ : ಚನ್ನಾಗಿವ್ನಿ ಬುದ್ಧಿ... ಯಾವಾಗ್ ಬಂದೆ ಬುದ್ಧಿ ಚಂದಾಕಿದಿರಾ

ಆನಂದ : ಚನ್ನಾಗಿದಿನಿ

ಈ ಮೇಲಿನ ಸಂಭಾಷಣೆಯಲ್ಲಿ ಶಿಕ್ಷಣ ಪಡೆದ ಮೇಲ್ಜಾತಿಯ ಪಾತ್ರ ಕೆಳಜಾತಿ ಪಾತ್ರವನ್ನು 'ಅಣ್ಣ' ಎಂಬ ಸಂಬೋಧನಾ ರೂಪವನ್ನು ಅಥವಾ ಪೂರ್ಣ ಹೆಸರನ್ನು ಸಂಬೋಧಿಸಿರುವುದು ಕಂಡುಬರುತ್ತದೆ. ಗೌರವ ಸಂಬೋಧನೆಯಲ್ಲಿ ಸಂಬೋಧಿಸುವುದನ್ನು ಕಾಣಬಹುದು. ಇನ್ನುಳಿದ ಶಿಕ್ಷಣ ಪಡೆಯದ ಮೇಲ್ಜಾತಿ ಪಾತ್ರಗಳು ಈ ಪಾತ್ರವನ್ನು 'ಕಾಳ' ಎಂದೇ ಸಂಬೋಧಿಸುತ್ತವೆ. ಶಿಕ್ಷಣ ಪಡೆದ ಪ್ರಜ್ಞಾವಂತ ಪಾತ್ರವಾದ ಆನಂದ ಮಾತ್ರ ಗೌರವಸೂಚಕವನ್ನು ಬಳಸಿ ಸಂಬೋಧಿಸುತ್ತಾನೆ. ಆದರೆ ಕೆಳಜಾತಿಯ ಕಾಳಣ್ಣ, ಆನಂದನ್ನು 'ಬುದ್ಧಿ' ಎಂದೇ ಸಂಬೋಧನೆ ಮಾಡುತ್ತಾನೆ. ಆಧುನಿಕ ಶಿಕ್ಷಣ ಪಡೆದ ಆನಂದ ಕಾಳಣ್ಣ ನನ್ನನ್ನು 'ಬುದ್ಧಿ' ಎಂದು ಸಂಬೋಧಿಸ ಬೇಡ ಎಂದು ಹೇಳುವುದಿಲ್ಲ. ಕಾಳಣ್ಣ ಆನಂದನಿಗಿಂತ ವಯಸ್ಸಿನಲ್ಲಿ ದೊಡ್ಡವನು. ಅಂದರೆ ಈ ಸಂಭಾಷಣೆಯಿಂದ ಅಭಿವ್ಯಕ್ತಿಯ ನೆಲೆಯ ಸಾಮಾಜಿಕ ಸ್ತರವಿನ್ಯಾಸ ವಾಸ್ತವತೆಯನ್ನು ಪ್ರತಿಬಿಂಬಿಸುತ್ತದೆ. (ಚಲನಚಿತ್ರ; ಹೇಮಾವತಿ)

ದೇವಕಿ ಎಂ.ಶೆಟ್ಟಿ ಅವರ 'ಜಾತಿ ಭೂತಕ್ಕೆ ಬಲಿ' ಎಂಬ ಕಥೆಯಲ್ಲಿ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರ ಕೆಳಜಾತಿಯ ಪಾತ್ರಗಳನ್ನು ಸಂಬೋಧಿಸುವ ನೆಲೆಯನ್ನು ಉದಾಹರಣೆಯಾಗಿ ನೋಡಬಹುದು. ಶಿಕ್ಷಣ ಪಡೆದ ಸಖೂ ಕೇಳಜಾತಿಯ ದೂಮನನ್ನು ಸಂಬೋಧಿಸುವುದು ಸಂಭಾಷಣೆ ಈ ಕೆಳಗಿನಂತಿದೆ.

'ದೂಮ, ನನಗೊಂದು ಮಾತು ಕೊಡುವೆಯಾ? ಬೇಡಿದಳು ಸಖೂ ತಾಯೀ ಹೇಳಿ ನಿಮ್ಮ ಮತಿಗೆ ಪ್ರತಿಯಿಲ್ಲ. ಇದು ಸತ್ಯ ಹಾಗಾದರೆ ನನ್ನನ್ನು ಇನ್ನು ಮುಂದೆ 'ಸಖೂ' ಎಂದು ಏಕವಚನದಲ್ಲಿಯೇ ಸಂಬೋಧಿಸುವೇಯಾ ಅದೇ ನನಗೆ ಶ್ರೇಯಸ್ಸು. ನನ್ನ ಬಹುವಚನ ನನಗೆ ಆ ಶ್ರೇಯಸ್ಸು ದೂಮ. ನೀನು ನನ್ನ ತಂದೆಯವರ ಪ್ರಾಯದವ; ಹಿರಿಯ"(ಮನಸ್ಸು ಒಪ್ಪದು, ಚೆನ್ನಿಗೆ ಎಷ್ಟಕ್ಕೂ ಮನಸ್ಸು ಒಡಂಬಡದು) ಇದೇನು ತಾಯೀ ಇದು ಸಾಧ್ಯವಿಲ್ಲದ ಮಾತು ಹಾಗಾದರೆ ಕೊಟ್ಟ ಮಾತನ್ನು ಹಿಂದೆಗೆಯುವಿಯಾ? ಈಗಲೇ ಹೇಳಿ ಸಖೂ ಮಗಳೇ ಎಂದು ಆಯಿತು. ಸಖೂ, ಮಗಳೆ, ನಿನ್ನ ಇಷ್ಟ ಅದಕ್ಕೆ ಪ್ರತಿ ಹೇಳಲು ನಾವ್ಯಾರು ತಾಯಿ" (ಉಷಾ ಪಿ ರೈ ಕೆ.(ಪ್ರ.ಸಂ) ಲೇಖಕಿಯರ ಸಣ್ಣಕಥೆಗಳು ಭಾಗ-೨, ಸಂಪುಟ-೧ ಪುಟ-೧೯೦)

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಸಖೂ ಎಂಬ ಶಿಕ್ಷಣ ಪಡೆದ ಮೇಲ್ಜಾತಿಯ ಪ್ರಜ್ಞಾವಂತ ಪಾತ್ರವಾಗಿದೆ. ಜಾತಿಯತೆ, ಮೌಢ್ಯತೆ, ಅಸ್ಪೃಶ್ಯತೆ ಆಚರಣೆಯನ್ನು ತಿರಸ್ಕರಿಸುತ್ತ ವೈಚಾರಿಕ ಮನೋಭಾವವನ್ನುಳ್ಳ ಸಖೂ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಆಶಯವನ್ನು ಹೊಂದಿದ ಮೇಲ್ಜಾತಿ ಪಾತ್ರವಾಗಿದೆ. ಹಾಗೆಯೇ ಕೆಳಜಾತಿಯವರನ್ನು ಹಾಗೂ ಹಿರಿಯರನ್ನು ಗೌರವದಿಂದ ಕಾಣುವಂತ ಸ್ವಭಾವ 'ದೂಮ' ಮತ್ತು 'ಚೆನ್ನಿ' ಎಂಬ ದಲಿತ ಪಾತ್ರಗಳು ಗೌರವಸೂಚಕಗಳಾದ ದೆತ್ತೀ, ಅಮ್ಮಾ, ತಾಯಿ ಎಂಬ ಸಂಬೋಧನಾ ರೂಪಗಳನ್ನು ಸಖೂಗೆ ಬಳಸಿ ಸಂಬೋಧಿಸುತ್ತಾರೆ. 'ನೀವೂ' ಎಂಬ ಬಹುವಚನದಿಂದ ಮಾತನಾಡಿಸುತ್ತಾರೆ. ಸಖೂ ಅವರಿಗಿಂತ ಚಿಕ್ಕವಳಾಗಿದ್ದರೂ ಸಹ ಹೆಸರಿಡಿದು ಏಕವಚನದಿಂದ ಸಂಬೋಧಿಸುವುದಿಲ್ಲ. ಈ ದಲಿತ ಪಾತ್ರಗಳು ಇದು ಸಖೂಗೆ ಇರಿಸುಮುರಿಸು ಆಗುತ್ತದೆ. ಆದ್ದರಿಂದ ಅವಳು ನನ್ನನ್ನು ಏಕವಚನದಿಂದ ಮತ್ತು ಹೆಸರಿಡಿದು, ಮಾತನಾಡಿಸಿ ತಮ್ಮ ಮಗಳಂತೆ ಎಂದು ಹೇಳುತ್ತಾಳೆ. ಈ ರೀತಿ ಆಲೋಚನೆ ಮಾಡಲು ಅವಳು ಪಡೆದ ಆಧುನಿಕ ಶಿಕ್ಷಣ ಕಾರಣ ಎಂದು ಹೇಳಬಹುದು. ಇದು ಕೂಡ ಒಂದು ಸಂಬೋಧನೆಯ ಸಿದ್ಧ ಮಾದರಿಯನ್ನು ಮೀರಿದ ನೆಲೆ ಎಂದು ಹೇಳಬಹುದು.

ಇನ್ನೊಂದು ನೆಲೆಯಲ್ಲಿ ನೋಡುವುದಾದರೆ 'ಸಖೂ' ದೂಮನಿಗೆ ನನ್ನನ್ನು ಏಕವಚನದಿಂದ ಸಂಬೋಧಿಸು ಎಂದು ಹೇಳುವುದು ಒಂದು ಮಾದರಿಯಾದರೆ, ಸಖೂಗಿಂತ ಹಿರಿಯರಾದ ದೂಮ–ಚೆನ್ನಿಯನ್ನು ಗೌರವಸಂಬೋಧನೆಯಿಂದ ಮತ್ತು ಬಹುವಚನದಿಂದ ಸಂಬೋಧಿಸುವುದಿಲ್ಲ. ದೂಮ–ಚೆನ್ನಿ ಎಂದೇ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವುದು ಕಂಡುಬರುತ್ತದೆ. ಸಖೂಗೆ ಈ ಸಾಮಾಜಿಕ ನೆಲೆಯನ್ನು ಮೀರಲು ಸಾಧ್ಯವಾಗಿಲ್ಲ ಎಂದು ಹೇಳಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಶಿಕ್ಷಣ ಪಡೆದ ಮೇಜ್ಜಾತಿ ಪಾತ್ರಗಳು ಕೆಳಜಾತಿಯ ಪಾತ್ರಗಳಿಗೆ ಗೌರವಸೂಚಕಗಳನ್ನು ಮತ್ತು ಬಹುವಚನಗಳನ್ನು ಬಳಸಿ ಸಂಬೋಧಿಸಿವೆ. 'ಅಣ್ಣ' 'ಅವರೇ' ಎಂಬಂತಹ ಸಂಬೋಧನಾ ರೂಪಗಳನ್ನು ಬಳಸಿ ಸಂಬೋಧಿಸಲಾಗಿದೆ. ಪಡುವಾರಳ್ಳಿ ಪಾಂಡವರು ಚಲನಚಿತ್ರದಲ್ಲಿ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಸುಂದ್ರಿಯನ್ನು ಸುಂದ್ರಕ್ಕ ಎಂದು ಸಂಬೋದಿಸುತ್ತವೆ. ಹೇಮಾವತಿ ಚಲನಚಿತ್ರದಲ್ಲಿ ಚೆನ್ನಿ–ಚೆನ್ನಮ್ಮ, ಕಾಲ–ಕಾಳಣ್ಣ ಆಗಿ ಕೆಳಜಾತಿ ಪಾತ್ರಗಳು ಸಂಬೋಧನೆಯಲ್ಲಿ ಬಳಕೆಯಾಗಿವೆ. ದಾಟು ಕಾದಂಬರಿಯಲ್ಲಿ ಬೆಟ್ಟಯ್ಯ–ಬೆಟ್ಟಯ್ಯನವರೇ ಎಂದು ಬಳಕೆಯಾಗುವುದನ್ನು ಶಿಕ್ಷಣ ಪಡೆದ ಮೇಲ್ಜಾತಿ ಪ್ರಜ್ಞಾವಂತ ಪಾತ್ರಗಳಲ್ಲಿ ಮಾತ್ರ ಈ ರೀತಿಯ ಆಲೋಚನಾ ಕ್ರಮ ಬಂದಿರುವುದು ಕಂಡುಬರುತ್ತದೆ.

೩.೧.೫.೨. ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳು ಸಂಬೋಧಿಸುವ ಕ್ರಮ

ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳ ಸಂಬೋಧನೆಯಲ್ಲಿಯೂ ಸಂಬೋಧನೆ ಬಳಕೆಯ ನೆಲೆಗಳು ಬದಲಾಗಿರುವುದನ್ನು ಗಮನಿಸಬಹುದು. ಶಿಕ್ಷಣ ಪಡೆಯದ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಅಯ್ಯಾ, ಒಡೆಯರೇ, ಒಡತಿ, ಅಮ್ಮಾರೆ, ಧಣಿಗಳೇ, ಹೆಗ್ಗಡ್ತಮ್ಮೋರೆ ಎಂದು ಸಂಬೋಧಿಸುವಂತೆ ಶಿಕ್ಷಣ ಪಡೆದ ಪಾತ್ರಗಳು ಸಂಬೋಧಿಸದೇ ಸಾಮಾನ್ಯ ಬಹುವಚನ ಸೂಚಕಗಳಾದ ಅವರೇ, ನೀವು, ಎಂಬ ಬಹುವಚನಗಳನ್ನೇ ಗೌರವ ಸೂಚಕಗಳಾಗಿ ಬಳಕೆ ಮಾಡಿರುವುದು ಕಂಡುಬರುತ್ತದೆ. ಒಡೆಯ, ಗೌಡ, ಧಣಿ, ಹೆಗ್ಗಡತಿ, ಒಡತಿ, ಎಂಬ ಗೌರವ ಸೂಚಕಗಳು ದಲಿತರ ಮೇಲೆ ಒಡೆತನವನ್ನು ಸೂಚಿಸುವಂತಹ ಪದಗಳಗಿವೆ. ಆದ್ದರಿಂದ ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳ ಈ ರೀತಿಯ ಪದಗಳನ್ನು ಬಳಸುವುದಿಲ್ಲ. ಸಾಮನ್ಯವಾಗಿ ಎಲ್ಲರಿಗೂ ಬಳಸುವಂತೆ ವಯಸ್ಸಿನ ಆಧಾರದ ಮೇಲೆ ಸಂಬೋಧನೆಯನ್ನು ಬಳಕೆ ಮಾಡುತ್ತಾರೆ.

ಈ ರೀತಿಯಾಗಿ ಸಂಬೋಧನೆ ನೆಲೆಗಳನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿ ಆಧಾರದ ಮೇಲೆ ಉದಾಹರಣೆಯನ್ನು ನೀಡಿ ಚರ್ಚಿಸಲಾಗಿದೆ. ಭೈರಪ್ಪ ಎಸ್.ಎಲ್, ಅವರ 'ದಾಟು' ಕಾದಂಬರಿಯಲ್ಲಿ ಬರುವ ಕೆಳಜಾತಿ ವಿದ್ಯಾವಂತ ಪಾತ್ರ ಮತ್ತು ಮೇಲ್ಜಾತಿ ವಿದ್ಯಾವಂತ ಪಾತ್ರಗಳ ಸಂಭಾಷಣೆಯನ್ನು ನೋಡಬಹುದು ಉದಾಹರಣೆಗೆ

"ರಾಗಿ ಮುದ್ದೆ ತಿನ್ನುಲ್ಲವೇನು ನೀವು?

ಇವತ್ತು ಹುಳಿ ಮಾಡುಕ್ಕೆ ತರಕಾರಿ ಇರಲಿಲ್ಲ.

ಹುಳಿ ಅಂದರೇನು?

ಸಾಂಬರ್

ಓ ಹೋ ಅದು ಬ್ರಾಹ್ಮಣರ ಭಾಷೆ" (ಭೈರಪ್ಪ ಎಸ್.ಎಲ್, ದಾಟು ಪುಟ-೩೩೪)

ಈ ಮೇಲಿನ ಸಂಭಾಷಣೆಯಲ್ಲಿ ಮಾತನಾಡುತ್ತಿರುವುದು ಕೆಳಜಾತಿ ವಿದ್ಯಾವಂತ ಮೋಹನದಾಸ ಮತ್ತು ಮೇಲ್ಜಾತಿ ವಿದ್ಯಾವಂತ ಸತ್ಯಭಾಮೆ. ಈ ಎರಡು ಪಾತ್ರಗಳ ಸಂಭಾಷಣೆಯಲ್ಲಿ ಸಂಬೋಧನೆಯನ್ನು ಗಮನಿಸಿದರೆ ಎರಡು ಪಾತ್ರಗಳು ಪರಸ್ಪರ 'ನೀವು' ಎಂಬ ಬಹುವಚನಗಳನ್ನು ಬಳಸುತ್ತಿವೆ. ಯಾವುದೇ ರೀತಿಯ ಅಮ್ಮಾರೆ, ಒಡತಿ, ಎಂಬಂತಹ ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಿಲ್ಲ. ಇದು ಕೂಡ ಆಧುನಿಕ ಶಿಕ್ಷಣದಿಂದಾದ ಬದಲಾವಣೆ ಎಂದು ಹೇಳಬಹುದು.

ದೇವನೂರು ಮಹಾದೇವರ ಕುಸುಮಬಾಲೆ ಕಾದಂಬರಿಯಲ್ಲಿ ಬರುವ ಶಿಕ್ಷಣ ಪಡೆದ ಕೆಳಜಾತಿ ಪಾತ್ರ ಮತ್ತು ಮೇಲ್ಜಾತಿ ಪಾತ್ರದ ಸಂಭಾಷಣೆಯ ಉದಾಹರಣೆಯನ್ನು ನೋಡಬಹುದು.

ಉದಾಹರಣೆಗೆ ಅದೂ ತಪ್ಪೀಯ, ಅದ್ಕ ನೀವ್ಗಳು ಕಟ್ಟಾಕಂಡು ಹೊಡ್ಡಿರದೂ ತಪ್ಪಿಯ. ಆ ಎಳನೀರನ್ನೂ ಅದ ಕಿತ್ತವರನ್ನೂ ಪೋಲಿಸ್‌ಗೆ ಕೊಡಬೇಕಿತ್ತು.

ಅದು ಬಿಟ್ಟು" ಎಂತಿರಲು

" ಅದ್ಯಾಕಯ್ಯಾ ಮೇಸ್ತ್ರ ಪೋಲಿಸ್‌ಗ? ನಂ ಕಯ್ಲ ಬಳತೊಟ್ಕಂಡಿದ್ದವ ನಾವು? ಆಗಾರ ನಮ್ಮೂರ್ಲಿ ನ್ಯಾಯವಂತರೆ ಇಲ್ವಯ್ಯ? ನಿ ಓದ್ದವ, ನಿ... ಮೇಸ್ತ್ರಗ ನಿನ್ನಂಥವ ನ್ಯಾಯನಿಗೆ ಹೇಳಿದ್ರ ಅದ್ನೀಗ ನಾವು ಕೇಳದ್ರಲ್ಲಿ ತಪ್ಪೇನಯ್ಯ ಇರಾದು? ಈಗಾ.... ನಮ್ದೊ ತಪ್ಪು ಅಂತ ತಾನೀಯಪ್ಪ ನೀ ಅನ್ನದು? ಹಾಗೂ ಬತ್ತೀನಿಕಯ್ಯ... ಮೇಸ್ತ್ರ" (ದೇವನೂರು ಮಹಾದೇವ ಕುಸುಮಬಾಲೆ ಪುಟ -೯೪)

ಈ ಮೇಲಿನ ಸಂಭಾಷಣಯಲ್ಲಿ ನಾಗರಾಜು ಎಂಬ ಕೆಳಜಾತಿ ವಿದ್ಯಾವಂತ ಪಾತ್ರ ಮೇಲ್ಜಾತಿಯ ಪಾತ್ರವನ್ನು ಒಡೆಯ, ಧಣಿ, ಬುದ್ದಿ, ಎಂದು ಸಂಬೋಧಿಸದೇ ಸಾಮಾನ್ಯವಾಗಿ ಎಲ್ಲರನ್ನೂ ಮಾತನಾಡಿಸುವಂತೆ 'ನೀವು' ಎಂಬ ಬಹುವಚನ ಸೂಚಕ ಪದ ಬಳಸಿ ಸಂಬೋಧಿಸಲಾಗುತ್ತಿದೆ. ಮೇಲ್ಜಾತಿಯ ಪಾತ್ರ ಕೆಳಜಾತಿ ಶಿಕ್ಷಣ ಪಡೆದ ಪಾತ್ರವನ್ನು 'ಮೇಷ್ಟ್ರೆ' ಎಂದು ಸಂಬೋಧಿಸುತ್ತರುವುದನ್ನು ಕಾಣಬಹುದು. ಆಧುನಿಕ ಶಿಕ್ಷಣ ಪಡೆದ ಕಾರಣಕ್ಕಾಗಿ ದಬ್ಬಾಳಿಕಯಿಂದ, ಗೌಡಿಕೆಯಿಂದ ಮುಕ್ತರಾಗುವಂತೆ ಸಂಬೋಧನಾ ನೆಲೆಯಲ್ಲಿ ಸಾಮಾಜಿಕ ಗೌರವ ಸ್ಥಾನಮಾನಗಳು ದೊರೆಯುತ್ತವೆ.

ವೈಚಾರಿಕವಾದ ಶಿಕ್ಷಣ ಪಡೆದ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳಲ್ಲಿ ಆಲೋಚನಾ ಕ್ರಮ ಮೂಡಿರುತ್ತದೆ. ಸಮಾಜದಲ್ಲಿರುವ ಮೌಢ್ಯಗಳ ಬಗ್ಗೆ ಮತ್ತು ಶೋಷಕರ ದಬ್ಬಾಳಿಕೆಯ ಬಗ್ಗೆ ಅರಿವಿರುವ. ಶಿಕ್ಷಣದಿಂದ ಎಚ್ಚೆತ್ತುಕೊಳ್ಳುತ್ತಾರೆ. ಕಾರಣ ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಸಮಾನ ಗೌರವ ಸ್ಥಾನಮಾನಗಳು ದೊರೆಯಬೇಕು ಎಂಬ ಆಶಯಗಳನ್ನಿಟ್ಟುಕೊಂಡಿರುತ್ತವೆ. ಮೇಲ್ಜಾತಿ, ಕೆಳಜಾತಿಯೆನ್ನದೆ ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳ ಸಮಾನರು. ಹಾಗೆಯೇ ಸಂಬೋಧನಾ ನೆಲೆಯಲ್ಲಿಯೂ ಕೂಡ ಸಮಾನಗೌರವ ಸ್ಥಾನಮಾನ ದೊರೆಯಬೇಕು ಎಂಬ ಆಶಯಗಳನ್ನಿಟ್ಟುಕೊಂಡು ಪ್ರಜ್ಞಾವಂತ ಪಾತ್ರಗಳು ಸಂಬೋಧನೆಯನ್ನು ಮಾಡುತ್ತವೆ. ಈ ರೀತಿಯಾಗಿ ಅಧುನಿಕ ಶಿಕ್ಷಣದಿಂದ ಸಂಬೋಧನೆ ಬಳಕೆಯ ನೆಲೆಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ.

೩.೨. ಉಲ್ಲೇಖ: ಬಳಕೆಯ ನೆಲೆಗಳು

ಯಾರನ್ನಾದರು ಕುರಿತು ಹೇಳುವಾಗ ಅವರ ಹೆಸರನ್ನು ಕುರಿತು ಉಲ್ಲೇಖಿಸುತ್ತೇವೆ. ಪ್ರತ್ಯೇಕ್ಷ ಉಲ್ಲೇಖ, ಪರೋಕ್ಷ ಉಲ್ಲೇಖ ಎಂದು ಎರಡು ನಲೆಯಲ್ಲಿ ಉಲ್ಲೇಖವನ್ನು ಹೇಳಬಹುದು. ಸಾಮಾನ್ಯವಾಗಿ ಉಲ್ಲೇಖಿಸುವ ವ್ಯಕ್ತಿ ಎದುರಿಗೆ ಇದ್ದರೆ ಗೌರವದಿಂದ ಉಲ್ಲೇಖ ಮಾಡಲಾಗುತ್ತದೆ.

ಇದು ಉಲ್ಲೇಖದಲ್ಲಿ ಕಂಡುಬರುವ ಸಾಮಾನ್ಯ ನಿಯಮ. ವ್ಯಕ್ತಿಯ ಗೈರು ಹಾಜರಿಯಲ್ಲಿ ಹೆಸರಿನ ಬಳಕೆಯನ್ನು ಎರಡು ರೀತಿಯಲ್ಲಿ ನೋಡಬಹುದು. ಒಂದು ಗೌರವಸೂಚಕದಿಂದ, ಇನ್ನೊಂದು ಏಕವಚನದಿಂದ. ವ್ಯಕ್ತಿಯ ಹೆಸರಿನ ನಿರ್ದಿಷ್ಟ ಭಾಗದೊಂದಿಗೆ ಗೌರವಸೂಚಕ ಪದಗಳನ್ನು ಸೇರಿಸಿ ಕರೆಯುವುದು ಗೌರವ ಸಂಭೋಧನೆಯಾದರೆ, ಗೌರವಸೂಚಕ ಪದಗಳನ್ನು ಸೇರಿಸದೆ, ನಿರ್ದಿಷ್ಟ ಭಾಗದಿಂದ ಕರೆಯುವುದು ಅಥವಾ ವ್ಯಕ್ತಿಯ ಹೆಸರನ್ನು ಮೊಟಕುಗೊಳಿಸಿ ಕರೆಯುವುದು ಏಕವಚನ ಸಂಬೋಧನೆಯೆನಿಸುತ್ತದೆ. ವ್ಯಕ್ತಿ ಎದುರಿನಲ್ಲಿದ್ದಾಗ ಹೆಸರಿನಿಂದ ಕರೆಯುವುದು ಹೆಸರಿನ ನೇರ ಸಂಬೋಧನೆಯಾದರೆ, ಆ ವ್ಯಕ್ತಿಯ ಅನುಪಸ್ಥಿತಿಯಲ್ಲಿ ಹೆಸರಿನಿಂದ ಕರೆಯುವುದು ಹೆಸರಿನ ಪರೋಕ್ಷ ಸಂಬೋಧನೆಯಾಗಿದೆ. ಪರೋಕ್ಷ ಸಂಬೋಧನೆಯಲ್ಲಿ ಹೆಸರು ವ್ಯಕ್ತಿಯ ಗೈರು ಹಾಜರಿಯಲ್ಲಿ ಬಳಸಲ್ಪಡುವುದರಿಂದ, ಇದನ್ನು 'ಉಲ್ಲೇಖ' ಎಂದು ಗುರುತಿಸಿಕೊಳ್ಳಲಾಗಿದೆ. ವ್ಯಕ್ತಿಗಳ ಹೆಸರುಗಳನ್ನು ಹಲವು ಸಂದರ್ಭಗಳಲ್ಲಿ ಉಲ್ಲೇಖಿಸುತ್ತೇವೆ. ಹೀಗೆ ಎಲ್ಲ ಸಂದರ್ಭಗಳಲ್ಲಿ ಬಳಸಿದೆಲ್ಲವೂ ಉಲ್ಲೇಖಗಳಾಗುವುದಿಲ್ಲ. ವ್ಯಕ್ತಿಯ ಗೈರು ಹಾಜರಿಯಲ್ಲಿ ಬಳಸಿದಾಗ ಮಾತ್ರ ಉಲ್ಲೇಖವಾಗುತ್ತದೆ.

ವ್ಯಕ್ತಿಗಳ ಹೆಸರುಗಳನ್ನು 'ಉಲ್ಲೇಖ' ಮಾಡುವಾಗ ಕೆಳಜಾತಿಯ ವ್ಯಕ್ತಿಗಳನ್ನು ಉಲ್ಲೇಖ ಮಾಡುವಾಗ ಹೆಸರಿಡಿದು ಏಕವಚನದಲ್ಲಿ ಉಲ್ಲೇಖ ಮಾಡಲಾಗುತ್ತದೆ. ಮೇಲು ಜಾತಿಯವರನ್ನು ಉಲ್ಲೇಖ ಮಾಡುವಾಗ ಬಹುವಚನದಿಂದ ಉಲ್ಲೇಖ ಮಾಡಲಾಗುತ್ತದೆ. ಇಲ್ಲಿ ಮುಖ್ಯವಾಗಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖ ಮಾಡುವಾಗ ಸಾಮಾಜಿಕ ಸ್ತರ ವಿನ್ಯಾಸವನ್ನು ಗುರುತಿಸಿ ಚರ್ಚಿಸಲಾಗುವುದು. ಸಮಾಜದಲ್ಲಿ ವ್ಯಕ್ತಿ ಮತ್ತು ಸಮುದಾಯಗಳ ನಡುವಿನ ಅಂತರ ಭಾಷೆಯಲ್ಲಿಯೂ ಅಭಿವ್ಯಕ್ತಗೊಳ್ಳುತ್ತದೆ. ಇದು ಸಮಾಜದ ವಾಸ್ತವವೂ ಹೌದು. ಈ ವಾಸ್ತವ ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮಗಳಲ್ಲೂ ವ್ಯಕ್ತಿ ಮತ್ತು ಸಮುದಾಯಗಳ ನಡುವಿನ ಭಿನ್ನತೆ, ಸಾಮ್ಯತೆಗಳು ಪ್ರತಿಫಲನಗೊಳ್ಳುತ್ತಿರುತ್ತವೆ. ಈ ಅಂಶಗಳು ಉಲ್ಲೇಖದ ನೆಲೆಯಲ್ಲಿ ಹೇಗೆ ಬಳಕೆಯಾಗಿವೆ ಎಂಬುದನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದಲಿತ ಪಾತ್ರಗಳ ಮತ್ತು ದಲಿತೇತರ ಪಾತ್ರಗಳಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ಚರ್ಚಿಸಲಾಗಿದೆ.

ಇಲ್ಲಿ ಪಾತ್ರಗಳನ್ನು ಉಲ್ಲೇಖಿಸುವಾಗ ಮೇಲ್ಜಾತಿಯವರು ಕೆಳಜಾತಿಯವರನ್ನು, ಕೆಳಜಾತಿಯವರು ಮೇಲ್ಜಾತಿಯವರನ್ನು ಮತ್ತು ಕೆಳಜಾತಿಯವರು ಕೆಳಜಾತಿಯವರನ್ನು, ಮೇಲ್ಜಾತಿಯವರು ಮೇಲ್ಜಾತಿಯವರನ್ನು ಉಲ್ಲೇಖಿಸುವ ಕ್ರಮ ಯಾವುದು ಎಂದು ನೋಡುವುದರ ಮೂಲಕ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗಿದೆ.

ವೃತ್ತಿ/ಜಾತಿ ಸೂಚಕವಾಗಿ ಉಲ್ಲೇಖಿಸುವಾಗ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಹೇಗೆ ಬಳಕೆಯಾಗಿವೆ ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

'ಅ'	'ಬ'
ಗೌಡ	ಗೌಡ್ತಿ
ಹೆಗ್ಗಡೆ	ಹೆಗ್ಗಡತಿ
ಹಾರವ	ಹಾರತಿ/ಹಾರ್ತಿ
ಹೊಲೆಯ	ಹೊಲತಿ
ಮಾದಿಗ	ಮಾದಗಿತ್ತಿ

ಈ ಮೇಲೆ ಕೊಟ್ಟಿರುವ 'ಅ' ಪಟ್ಟಿಯಲ್ಲಿ ಪುರುಷರ ವೃತ್ತಿ/ಜಾತಿ ಸೂಚಕಗಳನ್ನು 'ಬ' ಪಟ್ಟಿಯಲ್ಲಿ ಮಹಿಳೆಯರ ವೃತ್ತಿ/ಜಾತಿ ಸೂಚಕಗಳನ್ನು ನೀಡಲಾಗಿದೆ. ದಾಖಲೆಗಳಲ್ಲಿ ಪುರುಷರಿಗೆ ಜಾತಿ ಸೂಚಕಗಳು ತಮ್ಮ ಹೆಸರಿನೊಂದಿಗೆ ಸೇರ್ಪಡೆಗೊಂಡಿರುತ್ತವೆ. ಅವುಗಳು ಹಾಗೆಯೇ ಮಾತಿನಲ್ಲೂ ಬಳಕೆಯಾಗುತ್ತಿರುತ್ತವೆ. ಆದರೆ ಇದು ಮೇಲ್ಜಾತಿ ಪುರುಷರಿಗೆ ಮಾತ್ರ ಅನ್ವಯವಾಗುತ್ತದೆ. ಯಾಕೆಂದರೆ ಕೆಳಜಾತಿ ಪುರುಷರಿಗೆ ತಮ್ಮ ಹೆಸರಿನೊಂದಿಗೆ ಜಾತಿ ದಾಖಲೆಗಳಿರುವುದಿಲ್ಲ. ಉದಾಹರಣೆಗೆ ಕಲ್ಲಪ್ಪಗೌಡ, ಭರಮಯ್ಯ ಹೆಗ್ಗಡೆ ಎಂದು ದಾಖಲೆ ಮತ್ತು ಮಾತಿನಲ್ಲೂ ಬಳಕೆಯಾಗುತ್ತದೆ. ಕೆಳಜಾತಿ ಪುರುಷರಲ್ಲಿ ಮಾದರಚನ್ನ, ಹೊಲೆಯರ ಗುತ್ತಿ ಎಂದು ಮಾತಿನಲ್ಲಿ ಮಾತ್ರ ಬಳಕೆಯಾಗಿ ದಾಖಲೆಗಳಲ್ಲಿ ಜಾತಿ ಉಲ್ಲೇಖವಿರುವುದಿಲ್ಲ.

ಮಹಿಳೆಯರಿಗೂ ಕೂಡ ದಾಖಲೆಗಳಲ್ಲಿ ಜಾತಿ ಉಲ್ಲೇಖವಿರುವುದಿಲ್ಲ. ಮಾತಿನಲ್ಲಿ ಮಾತ್ರ ಜಾತಿಯನ್ನು ಉಲ್ಲೇಖಿಸಿ ಬಳಸಲಾಗುತ್ತದೆ. ಹೆಸರಿನೊಂದಿಗೆ ಜಾತಿ ದಾಖಲೆಯಲ್ಲಿ ಉಲ್ಲೇಖವಾಗುವುದಿಲ್ಲ ಎಂಬ ವಿಷಯದಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಮಹಿಳೆಯರಲ್ಲಿ ಭಿನ್ನತೆ ಕಂಡುಬರುವುದಿಲ್ಲ. ಆದರೆ ಸಾಮಾಜಿಕ ಸ್ಥಾನಮಾನದಲ್ಲಿ ಭಿನ್ನತೆಗಳು ಕಂಡುಬರುತ್ತವೆ.

ಗೌಡ, ಗೌಡ್ತಿ, ಹೆಗ್ಗಡೆ-ಹೆಗ್ಗಡತಿ, ಹಾರುವ-ಹಾರತಿ/ಹಾರ್ತಿ ಎಂದು ಉಲ್ಲೇಖಿಸುವಾಗ ಇವರ ಸಾಮಾಜಿಕ ಸ್ಥಾನಮಾನಕ್ಕೆ ಯಾವುದೇ ದಕ್ಕೆ ಉಂಟಾಗುವುದಿಲ್ಲ. ಗೌರವಸೂಚಕಗಳಾಗಿ, ಪ್ರತಿಷ್ಠಯಸೂಚಕವಾಗಿ ಬಳಕೆಯಾಗುತ್ತವೆ. ಆದರೆ ಹೊಲೆಯ-ಹೊಲತಿ, ಮಾದಿಗ-ಮಾದಗಿತ್ತಿ ಎಂದು ಉಲ್ಲೇಖ ಮಾಡುವಾಗ ಇವರ ಸಾಮಾಜಿಕತೆ ಇಳಿಮುಖ ಚಲನೆಗೊಂಡಿರುತ್ತದೆ. ಅಗೌರವ ಸೂಚಕಗಳಾಗಿಯೂ ಬಳಕೆಯಾಗುತ್ತವೆ. ಇವು ಉಲ್ಲೇಖಿಸುವವರ ಮತ್ತು ಉಲ್ಲೇಖಿಸಲ್ಪಡುವವರ ಮನೋಧೋರಣೆ ಹಾಗೂ ಬಳಸುವ ಸಂದರ್ಭ ಮುಖ್ಯವಾಗಿರುತ್ತದೆ.

ವೃತ್ತಿ/ಜಾತಿ ಸೂಚಕಗಳ ಜೊತೆಗೆ ಹೆಸರನ್ನು ಸೇರಿಸಿ ಉಲ್ಲೇಖ ಮಾಡುವುದನ್ನು ಗಮನಿಸಬಹುದು.

'ಅ'	'ಬ'
ರಂಗಪ್ಪಗೌಡ	ಗುಂಡುಮ್ಮಗೌಡ್ತಿ
ಸುಬ್ಬಣ್ಣ ಹೆಗ್ಗಡೆ	ದಾನಮ್ಮ ಹೆಗ್ಗಡತಿ
ಹೊಲೆಯರ ಅಮಾಸ	ಹೊಲತಿ ಚೆನ್ನಿ
ಮಾದರ ಚನ್ನ	ಮಾದರ ಮಲ್ಲಿ

ಈ ಮೇಲಿನ ಪಟ್ಟಿಯಲ್ಲಿ 'ಅ' ಪಟ್ಟಿ ಪುರುಷರ ಹೆಸರುಗಳನ್ನು ಸೂಚಿಸಿದರೆ, 'ಬ' ಪಟ್ಟಿ ಮಹಿಳೆಯರನ್ನು ಸೂಚಿಸುವ ಪಟ್ಟಿಯಾಗಿದೆ. ವ್ಯಕ್ತಿಗಳ ಹೆಸರಿನ ಅಂತ್ಯ ಮತ್ತು ಆದಿ ಭಾಗದಲ್ಲಿ ವೃತ್ತಿ/ಜಾತಿ ಇರುವುದನ್ನು ಗಮನಿಸಬಹುದು. ರಂಗಪ್ಪಗೌಡ-ಗುಂಡಮ್ಮ ಗೌಡ್ತಿ, ಸುಬ್ಬಣ್ಣ ಹೆಗ್ಗಡೆ-ದಾನಮ್ಮ ಹೆಗ್ಗಡತಿ ಎಂದು ಉಲೇಖಿಸುವಾಗ ಗೌರವ ಸೂಚಕಗಳಾಗಿ ಬಳಕೆಯಾಗುತ್ತವೆ. ಆದರೆ ಹೊಲೆಯರ ಅಮಾಸ – ಹೊಲತಿ ಚೆನ್ನಿ, ಮಾದರ ಚನ್ನ – ಮಾದರ ಮಲ್ಲಿ ಎಂದಾಗ ಗೌರವ ಸೂಚಕಗಳಾಗಿ ಬಳಕೆಯಾಗುವುದಿಲ್ಲ. ಸಾಮಾಜಿಕವಾಗಿ ಕೆಳಜಾತಿಯವರು ಎಂಬ ಕಾರಣಕ್ಕೆ ಅವರ ಸಾಮಾಜಿಕ ಸ್ಥಾನಮಾನಗಳು ಇಳಿಮುಖಗೊಳ್ಳುತ್ತವೆ. ಆದರೆ ಮೇಲ್ಜಾತಿಯವರನ್ನು ತಮ್ಮ ಜಾತಿಯಿಂದ ಉಲ್ಲೇಖಿಸಿದಾಗ ಅವರ ಸಾಮಾಜಿಕತೆ ಮೇಲ್ಮುಖ ಚಲನೆಗೊಳ್ಳುತ್ತದೆ.

ವೃತ್ತಿ/ಜಾತಿ ವಾಚಕಗಳಿಗೆ ಗೌರವ ಸೂಚಕಗಳು ಬಳಕೆಯೂ ಆಗುವುದನ್ನು ಗಮನಿಸಬಹುದು.

'ಅ'	'ಬ'
ಗೌಡ-ಗೌಡರು	ಗೌಡ್ತಿ-ಗೌಡ್ತಮ್ಮ
ಹೆಗ್ಗಡೆ-ಹೆಗ್ಗಡೇರು	ಹೆಗ್ಗಡತಿ-ಹೆಗ್ಗಡ್ತಮ್ಮ

ಈ ಮೇಲಿನ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಗೆ ಗೌರವಸೂಚಕವಾಗಿ ಬಳಕೆಯಾಗುವಂತಹ ರೂಪಕಗಳು ಗೌಡ ಏಕವಚನವಾದಾಗ ಗೌಡರು/ಗೌಡ್ರು ಎಂಬ ಬಹುವಚನವನ್ನು ಜಾತಿಗೆ ಬಳಸಿರುವುದನ್ನು ಕಾಣಬಹುದು. ಹಾಗೆಯೇ ಗೌಡ್ತಿ-ಗೌಡ್ತಮ್ಮ, ಹೆಗ್ಗಡೆ-ಹೆಗ್ಗಡೇರು, ಹೆಗ್ಗಡತಿ-ಹೆಗ್ಗಡ್ತಮ್ಮ ಎಂದು ಜಾತಿಗೆ ಬಹುವಚನ ಸೇರಿ ಉಲ್ಲೇಖದಲ್ಲಿ ಬಳಕೆಯಾಗುತ್ತದೆ. ಇವು ವೃತ್ತಿ/ಜಾತಿ ವಾಚಕಗಳಾಗಿ ಮೇಲ್ಜಾತಿಯ ಪಾತ್ರಗಳಿಗೆ ಗೌರವವಾಚಕಗಳಾಗಿ ಬಳಕೆಯಾಗುತ್ತವೆ. ಆದರೆ ಕೆಳಜಾತಿಯ ಪಾತ್ರಗಳಿಗೆ ಗೌರವವಾಚಕ ಅಥವಾ ಬಹುವಾಚಕಗಳು ಸೇರಿ ಬಳಕೆಯಾಗುವುದಿಲ್ಲ.

'ಅ'	'ಬ'
ಹೊಲೆಯ-ಹೊಲೆಯಪ್ಪ	ಹೊಲತಿ-ಹೊಲತಮ್ಮ
ಮಾದಿಗ-ಮಾದಿಗಪ್ಪ	ಮಾದಿಗಿತ್ತಿ-ಮಾದಿಗಮ್ಮ

ಮೇಲಿನ ಪಟ್ಟಿಯಲ್ಲಿವ ಜಾತಿ ಸೂಚಕಗಳನ್ನು ಗಮನಿಸಿದರೆ ಉಲ್ಲೇಖದಲ್ಲಾಗಿರಬಹುದು ಅಥವಾ ಹೆಸರಿನ ವಾರ್ಗಿಕದಲ್ಲಾಗಿರಬಹುದು ಜಾತಿ ಸೂಚಕಗಳಿಗೆ 'ಅಪ್ಪ' 'ಅಮ್ಮ' ಎಂಬ ವಾರ್ಗಿಕಗಳು ಬಳಕೆಯಾಗುವುದಿಲ್ಲ. ಶಾಸ್ತ್ರೀಯವರು ಹೆಗ್ಗಡೆಯವರು, ಹೆಗ್ಗಡತಮ್ಮನೋರು, ಗೌಡ್ತಮ್ಮನವರು ಎಂದು ಜಾತಿಗೆ ಬಳಕೆಯಾದಂತೆ ಹೊಲೆಯಪ್ಪನವರು, ಹೊಲತಿಯವರು, ಮಾದಿಗಪ್ಪನವರು, ಮಾದಿಗಮ್ಮನವರು ಎಂದು ಉಲ್ಲೇಖದಲ್ಲಾಗಲೀ, ಸಂಬೋಧನೆಯಲ್ಲಾಗಲೀ ಬಳಕೆಯಾಗುವುದಿಲ್ಲ. ವೃತ್ತಿ/ಜಾತಿಸೂಚಕವಾಗಿ ಉಲ್ಲೇಖ ಮಾಡಿದರು ಮೇಲ್ಜಾತಿಯವರಿಗೆ ಬಹುವಚನ ಸೂಚಕ ಮತ್ತು ಗೌರವಸೂಚಕಗಳನ್ನು ಬಳಸಲಾಗುತ್ತದೆ. ಆದರೆ ಕೆಳಜಾತಿಯವರಿಗೆ ಗೌರವ ಸೂಚಕ ಮತ್ತು ಬಹುವಚನ ಸೂಚಕಗಳು ಬಳಕೆಯಾಗುವುದಿಲ್ಲ. ಕೆಳಜಾತಿಯವರ ಸಮುದಾಯದ ಹೆಸರುಗಳು ಅಗೌರವ ಸೂಚಕಗಳಾಗಿಯೇ ಬಳಕೆಯಾಗುತ್ತವೆ. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಬರುತ್ತದೆ.

ಇಲ್ಲಿ ಮುಖ್ಯವಾಗಿ ಮೇಲ್ಜಾತಿಯವರು ಕೆಳಜಾತಿಯವರನ್ನು ಕೆಳಜಾತಿಯವರು ಮೇಲ್ಜಾತಿಯವರನ್ನು ಮತ್ತು ಮೇಲ್ಜಾತಿಯವರು ಮೇಲ್ಜಾತಿಯವರನ್ನು ಹಾಗೂ ಕೆಳಜಾತಿಯವರು ಕೆಳಜಾತಿಯವರನ್ನು ಉಲ್ಲೇಖ ಮಾಡುವ ಸಂದರ್ಭದಲ್ಲಿ ಸಾಮಾಜಿಕ ಸ್ಥಾನಮಾನಗಳು ವ್ಯಕ್ತಿ ಮತ್ತು ಸಮುದಾಯಗಳ ನಡುವೆ ಸಾಮ್ಯತೆ ಮತ್ತು ಭಿನ್ನತೆಗಳಿಂದ ಕೂಡಿರುತ್ತದೆ. ಈ ಅಂಶಗಳನ್ನು ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿನ ದಲಿತ ಮತ್ತು ದಲಿತೇತರ ಪಾತ್ರಗಳ ಮೂಲಕ ಉಲ್ಲೇಖದ ಬಳಕೆಯ ನೆಲೆಗಳ ಸಾಮಾಜಿಕ ಸ್ತರವಿನ್ಯಾಸವನ್ನು ಕುರಿತು ಚರ್ಚಿಸಲಾಗಿದೆ.

೩.೨.೧. ಮೇಲ್ಜಾತಿಯ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

ಮೇಲ್ಜಾತಿಯವರು ಕೆಳಜಾತಿಯವರನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಪ್ರತ್ಯಕ್ಷ ಉಲ್ಲೇಖದಲ್ಲಾಗಲಿ, ಪರೋಕ್ಷ ಉಲ್ಲೇಖದಲ್ಲಾಗಲಿ ಗೌರವ ಸೂಚಕಗಳನ್ನು ಬಳಸಿ ಉಲ್ಲೇಖಿಸುವುದಿಲ್ಲ. ಕೆಳಜಾತಿಯ ಪಾತ್ರಗಳ ಹೆಸರಿಡಿದು ಇಲ್ಲವೆ ಆ ಪಾತ್ರದ ಜಾತಿಯನ್ನು ಜೊತೆಗೆ ಸೇರಿ ಉಲ್ಲೇಖಿಸುವ ಸಂದರ್ಭಗಳಿವೆ. ಉದಾಹರಣೆ ಐತ ಬಂದನಾ, ಹೊಲೆಯರ ನಾಯಿಗುತ್ತಿ ಅಲ್ಲವೆ? ಹೊಲಾರ ಚೆನ್ನಿ, ಮಾದರ ಮಲ್ಲಿ, ಎಂಬುದಾಗಿ ಹೆಸರಿಡಿದು, ಜೊತೆಗೆ ಜಾತಿಯ ಹೆಸರನ್ನು ಸೇರಿಸಿ ಉಲ್ಲೇಖಿಸುವುದನ್ನು ಕಾಣಬಹುದು. ಮೇಲ್ಜಾತಿಯ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭವನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಗಳು' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿಯ ಪಾತ್ರವನ್ನು ಉಲ್ಲೇಖ ಮಾಡಿರುವ ಸಂದರ್ಭವನ್ನು ನೋಡಬಹುದು. ಉದಾಹರಣೆಗೆ ಮೇಲ್ಜಾತಿಯ

ಸುಬ್ಬಣ್ಣ ಹೆಗ್ಗಡೆ ಮತ್ತು ಮಗಳು ಮಂಜಮ್ಮ ಮಾತನಾಡುವ ಸಂದರ್ಭದಲ್ಲಿ ಕೆಳಜಾತಿಯ ಗುತ್ತಿಯನ್ನು ಉಲ್ಲೇಖ ಮಾಡಿರುವ ಕ್ರಮ ಈ ರೀತಿಯಾಗಿದೆ.

'ಆ ದಡ್ಡೆ ಮರಿ ನನಗಿರಲಪ್ಪಯ್ಯಾ ಸರಿಪಾಲಿಗೆ ಸಾಕಾಕೆ ಕೊಡ್ತೀನಿ.

"ಹೊಲೇರ ಗುತ್ತಿ ಸಾಕ್ತಿನಿ ಅಂದಾನೆ"

"ಯಾವ ಗುತ್ತೀನೆ?"

"ಆ ಜಟ್ಟಕ್ಕನ ಜತಿ ಬಂದಿದ್ದನಲ್ಲಾ .."

"ಸಿಂಬಾವಿಯವನೇನೇ?"

"ಯಾರು ಆ ನಾಯಿ ಗುತ್ತೀನೇನೆ?"

(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–೪೩)

ಈ ಮೇಲಿನ ಉದಾಹರಣೆಯಲ್ಲಿ ಎರಡು ಮೇಲ್ಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಗುತ್ತಿಯ ಹೆಸರನ್ನು ಉಲ್ಲೇಖಿಸುತ್ತಾರೆ. ಇದು ಪರೋಕ್ಷ ಉಲ್ಲೇಖವಾಗಿದೆ. ಉಲ್ಲೇಖಿಸಿದ ಹೆಸರಿನ ಪಾತ್ರ ಗೈರು ಹಾಜರಿಯಲ್ಲಿ. ಬಹುತೇಕವಾಗಿ ಆ ವ್ಯಕ್ತಿಯ ಗೈರು ಹಾಜರಿಯಲ್ಲಿ ಉಲ್ಲೇಖಿಸುವಾಗ ಏಕವಚನವೇ ಬಳಕೆಯಾಗುತ್ತದೆ. 'ಹೊಲೇರ ಗುತ್ತಿ'ಎಂದು ಆ ಪಾತ್ರದ ಹೆಸರನ್ನು ಉಲ್ಲೇಖಿಸುವಾಗ ಹೆಸರಿನ ಜೊತೆಗೆ ಜಾತಿಯನ್ನು ಉಲ್ಲೇಖ ಮಾಡಿದ್ದಾರೆ. ಇಲ್ಲಿ ಯಾವುದೇ ಗೌರವಸೂಚಕಗಳು ಮತ್ತು ಬಹುವಚನಗಳನ್ನು ಉಲ್ಲೇಖ ಮಾಡಿಲ್ಲ. ಗುತ್ತಿಯ ಜೊತೆಗೆ ಯಾವಾಗ್ಲೂ ನಾಯಿ ಇರುತ್ತಿದ್ದರಿಂದ ನಾಯಿಗುತ್ತಿ ಎಂದು ಹೆಚ್ಚಾಗಿ ಉಲ್ಲೇಖ ಮಾಡುತ್ತಾರೆ. ಗುತ್ತಿಯ ಹೆಸರಿಗೂ ಕೂಡ ಯಾವುದೇ ಗೌರವಸೂಚಕ ವಾರ್ಗಿಕಗಳು ಬಳಕೆಯಾಗಿಲ್ಲ. ಕೆಳಜಾತಿಯವನಾದ ಕಾರಣಕ್ಕೆ ಏಕವಚನದಲ್ಲಿ ಉಲ್ಲೇಖಿಸುವುದನ್ನು ಕಾಣಬಹುದು. ಉಲ್ಲೇಖದ ಬಳಕೆಯ ನೆಲೆಯಲ್ಲಿ ಕೂಡ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಅನಂತಮೂರ್ತಿ ಯು.ಆರ್, ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಮೇಲ್ಜಾತಿಯ ಪುರುಷ ಪಾತ್ರ ಕೆಳಜಾತಿಯ ಮಹಿಳೆಯನ್ನು ಉಲ್ಲೇಕಿಸುವ ಸನ್ನಿವೇಶವನ್ನು ನೋಡಬಹುದು. ಮೇಲ್ಜಾತಿಯ ಶ್ರೀಪತಿ ಕೆಳಜಾತಿ ಮಹಿಳೆಯನ್ನು ಉಲ್ಲೇಖಿಸುವುದು ಈ ಕೆಳಗಿನಂತಿದೆ.

"ಯಾರು ಏನೇ ಅನ್ನಲಿ, ಯಾವ ಬ್ರಾಹ್ಮಣ ಏನೇ ಬೊಗಳಲಿ– ಗೊತ್ತಾಯ್ತ–ಆಣೆ ಹಾಕಿ ಹೇಳ್ತಿನಿ–ಏನೂಂತೀರ?–ಚಂದ್ರಿಯಂಥ ಚಲುವೆ, ಗಟ್ಟಿಗೆ, ಒಳ್ಳೆಯ ಹೆಂಗಸು ಈ ನೂರು ಮೈಲಿಯಲ್ಲಿ ಇದ್ದಾಳಾ ಎಣಿಸಿಬಿಡಿ. ಇದ್ದರೆ ಜಾತಿ ಬಿಟ್ಟುಬಿಡುವೆ. ಸೂಳೆಯಾದರೆ ಏನಯ್ಯ? ನಾರಣಪ್ಪನಿಗೆ ಅವಳು ಹೆಂಡತಿಗಿಂತ ಹೆಚ್ಚಾಗಿ ನೋಡಿಕೊಂಡಳೋ ಇಲ್ಲವೋ ಹೇಳಿ ನೋಡುವ" (ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ–೬೩)

ಈ ಮೇಲೆ ಉಲ್ಲೇಖಿಸಿರುವ ಉದಾಹರಣೆಯನ್ನು ಗಮನಿಸಿದಾಗ ಮೇಲ್ಜಾತಿಯ ಪಾತ್ರ ಕೆಳಜಾತಿಯ ಮಹಿಳಾ ಪಾತ್ರವನ್ನು 'ಚಂದ್ರಿ' ಎಂದು ಹೆಸರಿಡಿದು ಏಕವಚನದಲ್ಲಿ ಉಲ್ಲೇಖಿಸಿರುವುದು ಕಾಣಬಹುದು. ಕೆಳಜಾತಿಯ ಮಹಿಳೆ ಆದ ಕಾರಣಕ್ಕೆ ಚಂದ್ರಿ ಎಂದು ಮೇಲ್ಜಾತಿ ಪಾತ್ರ ಉಲೇಖಿಸುತ್ತಿದೆ. ಅದೇ ಮೇಲ್ಜಾತಿ ಮಹಿಳೆಯಾಗಿದ್ದರೆ ಚಂದ್ರಿ ಎಂದು ಉಲ್ಲೇಖ ಮಾಡುತ್ತಿರಲಿಲ್ಲ. ಉದಾಹರಣೆಗೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯಲ್ಲಿ ಬರುವ ಸುಬ್ಬಮ್ಮನ ಪಾತ್ರವನ್ನು 'ಸುಬ್ಬಿ' ಎಂದು ಉಲ್ಲೇಖಿಸಿರುವ ಅಥವಾ ಸಂಬೋಧಿಸಿರುವ ಉದಾಹರಣೆಗಳಲ್ಲಿ ಸುಬ್ಬಮ್ಮನ ಪಾತ್ರವನ್ನು ಯಾಕೆ 'ಸುಬ್ಬಿ' ಎಂದು ಉಲ್ಲೇಖಿಸಲು ಸಾಧ್ಯವಿಲ್ಲ. ಲೇಖಕರ ನಿರೂಪಣೆಯಲ್ಲೂ ಸಹ 'ಸುಬ್ಬಿ' ಎಂದು ಉಲ್ಲೇಖ ಮಾಡಿಲ್ಲ. 'ಕಾನೂರು ಸುಬ್ಬಮ್ಮ ಹೆಗ್ಗಡತಿ' 'ಸುಬ್ಬಮ್ಮ ಹೆಗ್ಗಡತಿ' ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಇಲ್ಲಿ ಉಲ್ಲೇಖದ ಬಳಕೆಯ ನೆಲೆ ಏನನ್ನು ಸೂಚಿಸುತ್ತಿದೆ?. ಚಂದ್ರಿ ಕೆಳಜಾತಿಯ ಮಹಿಳೆ ಆದ ಕಾರಣ ಉಲ್ಲೇಖದಲ್ಲಿ ಮತ್ತು ಸಂಬೋಧೆಯಲ್ಲಿ ಗೌರವ ಸೂಚಕಗಳನ್ನು ಮತ್ತು ಬಹುವಚನಗಳನ್ನು ಬಳಸದಿರುವುದನ್ನು ಕಾಣಬಹುದು. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಗಳಲ್ಲಿ ನಿಷೇಧ, ನಿರ್ಬಂಧಗಳು ಹಾಗೂ ಸಾಮಾಜಿಕ ಸ್ತರವಿನ್ಯಾಸ ಕಂಡುಬರುತ್ತವೆ.

ಸಿದ್ದಲಿಂಗಯ್ಯ ಅವರ ನಿರ್ದೇಶನದ 'ಹೇಮಾವತಿ' ಚಲನಚಿತ್ರದಲ್ಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರವನ್ನು ಉಲ್ಲೇಖಿಸಿರುವ ಕ್ರಮವನ್ನು ನೋಡಬಹುದು.

'ಆನಂದ: ಯಾಕ್ರಮ್ಮ ಎದ್ದು ಬಿಟ್ರಿ ಸಂಗೀತ ಪಾಠ ಬೇಡ್ವ?

ಮೇಲ್ಜಾತಿ ಮಹಿಳೆಯರು: "ಮೊದ್ಲು ಆ ಹೊಲತಿನ ಆಚೆ ಕಳ್ಸಿ"

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿಯ ಮಹಿಳೆಯರು ಕೆಳಜಾತಿ ಮಹಿಳೆಯನ್ನು ಉಲ್ಲೇಖಿಸಿರುವ ಸಂದರ್ಭ. ಇದು ಪ್ರತ್ಯಕ್ಷ ಉಲ್ಲೇಖವಾಗಿದೆ. ಮೇಲ್ಜಾತಿಯ ಮಹಿಳೆಯರು ಸಂಗೀತ ಅಭ್ಯಾಸ ಮಾಡುವ ಸಂದರ್ಭದಲ್ಲಿ ಸಂಗೀತ ಕಲಿಯಲು ಕೆಳಜಾತಿಯ ಪಾತ್ರ 'ಚೆನ್ನಿ' ಕೂಡ ಆ ಸ್ಥಳಕ್ಕೆ ಬರುತ್ತಾಳೆ. ಆಗ ಮೇಲ್ಜಾತಿಯ ಮಹಿಳಾ ಪಾತ್ರಗಳು ಗುರುಗಳಿಗೆ ಮೊದ್ಲು ಆ 'ಹೊಲತಿ'ನ ಆಚೆ ಕಳ್ಸಿ ಎಂದು ಉಲ್ಲೇಖಿಸುವುದು ಕಾಣುತ್ತದೆ. ಕೆಳಜಾತಿಗೆ ಮಹಿಳೆ ಆದ ಕಾರಣ 'ಚೆನ್ನಿ' ಎಂದು ಉಲ್ಲೇಖಿಸದೆ ಹೊಲತಿ ಎಂದು ಜಾತಿಯನ್ನು ಹೆಸರಿನ ಹಿಂದೆ ಸೇರಿಸಿ ಉಲ್ಲೇಖಿಸಲಾಗುತ್ತದೆ. ಚೆನ್ನಿಯನ್ನು ಆಚೆ ಕಳ್ಸಿ ಎಂದು ಹೇಳಬಹುದು ಆದರೂ ಹೊಲತಿ ಎಂದು ಉಲ್ಲೇಖಿಸುತ್ತಿರುವುದರಿಂದ ಆ ಉಲ್ಲೇಖ ಆ ಪಾತ್ರದ ಸಾಮಾಜಿಕತೆಯನ್ನು ಸೂಚಿಸುತ್ತದೆ. ವ್ಯಕ್ತಿಯ ಹೆಸರನ್ನು ಉಲ್ಲೇಖಿಸದೆ ಜಾತಿಯ ಹೆಸರಿನಿಂದ ಅವಳನ್ನು ಉಲ್ಲೇಖಿಸಲಾಗುತ್ತಿದೆ. ಪ್ರತ್ಯಕ್ಷ ಉಲ್ಲೇಖ ಸಾಮಾನ್ಯವಾಗಿ ಗೌರವ ಸೂಚಕದಿಂದ ಕೂಡಿರುತ್ತದೆ. ಆದರೆ ಇಲ್ಲಿ ಅಗೌರವ ಸೂಚಕವಾಗಿ ಪ್ರತ್ಯಕ್ಷ ಉಲ್ಲೇಖ ಬಳಕೆಯಾಗಿ ಕಾಣಬಹುದು.

ಬಳಕೆಯಾಗಿರುವುದನ್ನು ಗೌರವಸೂಚಕವಾಗಿ ಉಲ್ಲೇಖದಲ್ಲಿ ಬಳಕೆ ಮಾಡಲಾಗುತ್ತಿತ್ತು. ಮೇಲ್ಜಾತಿಯ ಪಾತ್ರವಾಗಿದ್ದರೆ ಈ ರೀತಿಯಾಗಿ ಅಗೌರವ ಸೂಚಕವಾಗಿ ಉಲ್ಲೇಖಿಸುತ್ತಿರಲಿಲ್ಲ. ಜಾತಿಯ ಕಾರಣಕ್ಕಾಗಿ ಇಲ್ಲಿ ಈ ರೀತಿ ಉಲ್ಲೇಖ ಮಾಡಿರುವುದನ್ನು ಕಾಣಬಹುದು. ಈ ಉದಾಹರಣೆಯೂ ಸಹ ಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸುತ್ತದೆ.

ಕೃಷ್ಣಮೂರ್ತಿ ಪುರಾಣಿಕ ಅವರ ಕಥೆಯಾಧಾರಿತ ವಿಜಯ್ ನಿರ್ದೇಶನದ 'ಸನಾದಿ ಅಪ್ಪಣ್ಣ' ಚಲನಚಿತ್ರದಲ್ಲಿ ಮೇಲ್ಜಾತಿಯ ಪಾತ್ರ ಕೆಳಜಾತಿಯ ಪಾತ್ರವನ್ನು ಜಾತಿಯ ಹೆಸರಿಡಿದು ಉಲ್ಲೇಖಿಸಿರುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು. ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಪಾತ್ರವನ್ನು ಕುರಿತು ಉಲ್ಲೇಖಿಸುವ ಸಂದರ್ಭ ಈ ಕೆಳಗಿನಂತಿದೆ.

"ಅಕಮ್ಮ: ಬನ್ನಿ ಬನ್ನಿ ಕೂತ್ಕೊಳ್ಳಿ. ಅದ್ಯಾರೋ ಅಪ್ಪಣ್ಣ ಅಂತ ತುತ್ತೂರಿ ಬಾರುಸ್ತನಂತಲ್ಲ.

ಶಿವರಾಯ: ತುತ್ತೂರಿ ಅಲ್ಲ ಅಕ್ಕಮ್ಮ ಶಹನಾಯಿ, ಅವ್ನೆ ಅಪ್ಪಣ್ಣ ಕೊರವ್ರನು ಅವ್ನೇನೇಗ

ಅಕ್ಕಮ್ಮ: ಏನಿಲ್ಲ ಅವ್ನು ಊದೋದನ್ನ ನಮ್ಮ ಬಸಂತಿ ಕೇಳ್ಬೇಕು ಅಂತ ಅಂದ್ಲು. ನಾನು ಶಿವರಾಯಪ್ಪರಿಗೆ ಹೇಳಿದ್ರಾಯ್ತು, ಅವ್ರಿಗೆ ಇದ್ಯಾವ ಮಹಾದೊಡ್ಡು ವಿಷ್ಯ ಅಂತ ಹೇಳ್ದೆ.

ಶಿವರಾಯ: ನೋಡಿದ್ಯಾ ನೀನ್ ಈಗ ನನ್ನ ಸರಿಯಾಗ್ ಅರ್ಥ ಮಾಡ್ಕೊಂಡಿದ್ದಿ ಬಸಂತಿ ಆಸೆ ಪಡೋದು ಹೆಚ್ಚೊ ಆ 'ಕೊರವ' ಬಂದು ನುಡ್ಸೋದು ಹೆಚ್ಚೋ" (ಚಲನಚಿತ್ರ: ಸನಾದಿ ಅಪ್ಪಣ್ಣ)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಕೆಳಜಾತಿಯ ಪಾತ್ರವನ್ನು ಉಲ್ಲೇಖಿಸುತ್ತವೆ. ಇದು ಪರೋಕ್ಷ ಉಲ್ಲೇಖವಾಗಿದೆ. ಮೇಲ್ಜಾತಿಯ ಪಾತ್ರ ಕೆಳಜಾತಿಯ ಪಾತ್ರವನ್ನು ಎರಡು ರೀತಿಯಾಗಿ ಉಲ್ಲೇಖಿಸಿವೆ. ಒಂದು ಆ ಪಾತ್ರದ ಹೆಸರಿಡಿದು ಇನ್ನೊಂದು ಆ ಪಾತ್ರದ ಸಮುದಾಯವನ್ನು ಹೆಸರಿಸಿ ಉಲ್ಲೇಖಿಸಲಾಗಿದೆ. ಆ ಕೆಳಜಾತಿಯ ಪಾತ್ರದ ಹೆಸರು 'ಅಪ್ಪಣ್ಣ' ಎಂದು. ಹೆಸರಿಡಿದು ಉಲ್ಲೇಖಿಸಿದಾಗ ಒಂದು ಹಂತದ ಗೌರವ ಆ ಪಾತ್ರಕ್ಕೆ ಸಿಗುತ್ತದೆ. 'ಕೊರವ' ಎಂದು ಉಲ್ಲೇಖಿಸಿದಾಗ ಆ ಪಾತ್ರದ ಸಾಮಾಜಿಕ ಸ್ಥಾನಮಾನ ಕಡಿಮೆಯಾಗುತ್ತದೆ. ಪ್ರಜ್ಞಾಪೂರ್ವಕವಾಗಿಯೇ ಮೇಲ್ಜಾತಿ ಪಾತ್ರ ಆ ರೀತಿ 'ಜಾತಿ' ಹೆಸರಿಡಿದು ಉಲ್ಲೇಖಿಸುತ್ತದೆ. ಕೆಳಜಾತಿ ಪಾತ್ರದ ಜಾತಿಯಾವುದು, ಆ ಪಾತ್ರದ ಸಾಮಾಜಿಕ ಸ್ಥಾನಮಾನವೇನೆಂಬುದನ್ನು ಉಳಿದ ಪಾತ್ರಗಳಿಗೆ ಗೊತ್ತಾಗಲಿ ಎಂದೇ ಉದ್ದೇಶಪೂರ್ವಕವಾಗಿ ಜಾತಿ ಹೆಸರಿಡಿದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಈ ಉದಾಹರಣೆಯಿಂದ ಮೇಲ್ಜಾತಿ ಪಾತ್ರದ ಮನೋಧೋರಣೆ ಏನೆಂಬುದು ತಿಳಿಯುತ್ತದೆ.

ಸದಾಶಿವ. ಕೆ, ಅವರ 'ಗಿಡ್ಡಿ' ಕಥೆಯಲ್ಲಿ ಮೇಲ್ಜಾತಿ ಪಾತ್ರ ತಿಮ್ಮಪ್ಪಯ್ಯ ಮತ್ತು ಕೆಳಜಾತಿ ಮಹಿಳಾ ಪಾತ್ರ ಗಿಡ್ಡಿ ಮಾತನಾಡುವ ಸಂದರ್ಭದಲ್ಲಿ ಕೆಳಜಾತಿ ವ್ಯಕ್ತಿಯನ್ನು ಉಲ್ಲೇಖ ಮಾಡುವ ಉದಾಹರಣೆಯನ್ನು ನೋಡಬಹುದು.

"ಇಲ್ಲ ಒಡೆಯ-ಒಂದು ಪಾವಲಿ ಬೇಕಿತ್ತು

'ಏಕೆ-ರಾಯರಿಗೆ ಬ್ಯಾರಿಯ ಔಷಧಿ ಬೇಕಂತ ಕಾಣುತ್ತದೆ. ಹೀಗೆಲ್ಲ ಜ್ವರ ಜಾಪತ್ತು ಎಂದು ಕೈ ಉದ್ದ ಮಾಡಿದರೆ ನನ್ನ ಗತಿಯೇನು? ತಾವು ಠಿಕಾಣಿ ಬಿಟ್ಟು ಸನ್ಯಾಸಿಯಾಗಬೇಕೆಂದೇ? ...ಹಾಳಾಗಲಿ ನೋಡುವ ಎಂದರು. ಸೊಂಟದಿಂದ ಚೀಲ ತೆಗೆದು ಎರಡಾಣೆಯನ್ನು ಅವಳತ್ತ ಹಾರಿಸಿ 'ಸಾಕು ಹೋಗು ನೋಡುವ ಎಂದರು. ಹೌದೆ ಗಿಡ್ಡಿ ಏನು ನಿನ್ನ ಅಪ್ಪ ನಿನಗೊಂದು ಮದುವೆ ಹುಡಿ ಹಾರಿಸುತ್ತಾನಂತಲ್ಲ ಏನಾಯಿತು? ಯಾರ ಹೊಲತಿಯಾಗುವವಳು ನೀನು? ಭರಮನೋ ಅಥವಾ ಕಾಳನೋ" (ಕೆ.ಸದಾಶಿವ, ಸಮಗ್ರ ಕಥೆಗಳು, ಪುಟ-೭೬)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿಯ ವ್ಯಕ್ತಿ ಕೆಳಜಾತಿ ಪುರುಷರ ಹೆಸರನ್ನು ಉಲ್ಲೇಖಿಸುವುದನ್ನು ಕಾಣುತ್ತೇವೆ. ಇದು ಪರೋಕ್ಷ ಉಲ್ಲೇಖವಾಗಿದೆ. ಕೆಳಜಾತಿಯ ಪಾತ್ರದ ಹೆಸರುಗಳಿಗೆ ಯಾವುದೇ ವಾರ್ಗಿಕಗಳು ಮತ್ತು ಬಹುವಚನಗಳು ಬಳಕೆಯಾಗಿಲ್ಲ. ಪರೋಕ್ಷ ಉಲ್ಲೇಖ ಸಾಮಾನ್ಯವಾಗಿ ಏಕವಚನದಲ್ಲಿಯೇ ಇರುತ್ತದೆ. ಗಿಡ್ಡಿಯ ತಂದೆಗೆ 'ರಾಯರು' ಎಂಬ ಗೌರವ ಸೂಚಕ ವಾರ್ಗಿಕವನ್ನು ವ್ಯಂಗ್ಯವಾಗಿ ಬಳಕೆ ಮಾಡಲಾಗಿದೆ. ಕೆಳಜಾತಿ ಪಾತ್ರಗಳಾದ ಕಾರಣಕ್ಕೆ 'ಭರಮನೋ-ಕಾಳನೋ' ಎಂದು ವ್ಯಕ್ತಿಗಳ ಹೆಸರಿಡಿದು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಚೆನ್ನಣ್ಣ ವಾಲೀಕಾರ ಅವರ 'ಇಪ್ಪತ್ತಂಶಗಳು' ಎಂಬ ನಾಟಕದಲ್ಲಿ ಮೇಲ್ಜಾತಿಯ ಮಹಿಳೆ ಮತ್ತು ಕೆಳಜಾತಿಯ ಹುಡುಗ ಮಾತನಾಡುವ ಸಂದರ್ಭದಲ್ಲಿ ಕೆಳಜಾತಿಯ ವ್ಯಕ್ತಿಯನ್ನು ಉಲ್ಲೇಖಿಸುವ ಸಂದರ್ಭವನ್ನು ಉದಾಹರಣೆಗಾಗಿ ನೋಡಬಹುದು.

ಗೌಡ್ತಿ: ಯಾರ್ಲೊ ನೀ? ಬಾ ಇಲ್ಯ

ರುದ್ರ್ಯಾ: ಯಾಕ್ರಿ ಎವ್ವಾ

ಗೌಡ್ತಿ: ಯಾಕ್ರಿ ಎವ್ವಾಂದ್ರ?

ರುದ್ರ್ಯಾ: ನಾ ಹರಿಜನ ಅಪ್ಪಣ್ಣ ಮಗ ರುದ್ರರೀಎವ್ವಾ

ಗೌಡ್ತಿ: ಹಾರೆ ಮಗ್ಯಾ! ಹರಿಜನ ಅಪ್ಪಣ್ಣ ಮಗಾಂತ, ರುದ್ರಂತ. 'ಹೊಲೇರ ಅಪ್ಪಣ್ಣ ಮಗಾ 'ರುದ್ರ್ಯಾ' ಅಲ್ಲಾಕ್ ಯಾರ್ ಬ್ಯಾಡಂದ್ರಲೇ?

ಹರಿಜನ ಅಂದ್ರು ಹೊಲೇರೆ. ಹೊಲೇರಂದ್ರು ಹೊಲೇರೆ" (ಚನ್ನಣ್ಣ ವಾಲೀಕಾರ, ಸಮಗ್ರ ನಾಟಕ ಸಂಪುಟ, ಪುಟ-೬೦)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿಯ ಮಹಿಳಾ ಪಾತ್ರ ಮತ್ತು ಕೆಳಜಾತಿ ಪಾತ್ರಗಳು ಮಾತನಾಡುತ್ತಿರುವಾಗ ಕೆಳಜಾತಿಯ ವ್ಯಕ್ತಿಯನ್ನು ಕೆಳಜಾತಿ ವ್ಯಕ್ತಿಯನ್ನು ಉಲ್ಲೇಖಿಸುವ

ಸಂದರ್ಭದಲ್ಲಿ ಹರಿಜನ ಅಪ್ಪಣ್ಣ ಎಂದು ತನ್ನ ತಂದೆಯನ್ನು ಉಲ್ಲೆಖಿಸಿದ್ದಕ್ಕೆ ಮೇಲ್ಜಾತಿಯ ಪಾತ್ರ 'ಹೊಲೇರ ಅಪ್ಪಣ್ಣ' ಎಂದು ಹೇಳುವುದಕ್ಕೆ ಯಾರು ಬೇಡ ಅಂದಿದ್ದಾರೆ. 'ಹರಿಜನ' ಎಂದು ಉಲ್ಲೇಖಿಸಬೇಡ ಹೊಲೇರು ಹೇಳು ಎಂದು ಮೇಲ್ಜಾತಿ ಪಾತ್ರ ಹೇಳುತ್ತಿರುವುದು ಕಾಣಬಹುದು. ತಮ್ಮ ಹೆಸರು ಮತ್ತು ಜಾತಿಯ ಉಲ್ಲೇಖ ಮಾಡುವುದಕ್ಕೂ ಇಲ್ಲಿ ನಿರ್ಬಂಧವಿದೆ. ಅಂದರೆ ಕೆಳಜಾತಿಯವರ ಹೆಸರಾಗಲಿ ಅಥವಾ ಜಾತಿಯಾಗಲಿ ಉಲ್ಲೇಖ ಮಾಡುವಾಗ ಗೌರವಸೂಚಕದಿಂದ ಉಲ್ಲೇಖ ಮಾಡಬಾರದು ಎಂಬುದು ಮೇಲ್ಜಾತಿಯವರುಹಾಕಿದ ನಿರ್ಬಂಧವಾಗಿದೆ. 'ಹರಿಜನ' ಎಂದರೆ ಕೆಳಜಾತಿಯವರಿಗೆ ಗೌರವ ಕೊಟ್ಟಂತೆ ಆಗುತ್ತದೆ. ಅದಕ್ಕಾಗಿ 'ಹೊಲೇರು' ಎಂದರೆ ಅವರ ಸಾಮಾಜಿಕ ಸ್ಥಾನಮಾನ ಕಡಿಮೆಯಾಗುತ್ತದೆ. ಹೊಲೇರು ಎಂದರೆ ಸಾಮಾಜಿಕವಾಗಿ ಕೆಳಗಿನವರು,. ಅವರನ್ನು ಹಾಗೆ ಉಲ್ಲೇಖಿಸಬೇಕು ಎಂಬ ಆಶಯ ಪಾತ್ರಕ್ಕೆ ಇರುವುದನ್ನು ಗಮನಿಸಬಹುದು. ಹರಿಜನ-ಹೊಲೇರು ಈ ಎರಡು ಪದಗಳ ಉಲ್ಲೇಖದಲ್ಲಿ ಆ ಜಾತಿಯ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನ ನಿಂತಿರುತ್ತದೆ. ಈ ಸಂಭಾಷಣೆಯಿಂದ ಮೇಲ್ಜಾತಿ ವ್ಯಕ್ತಿಗಳ ಮನೋಧೋರಣೆ ಏನೆಂಬುದು ತಿಳಿಯುತ್ತದೆ. ಉಲ್ಲೇಖದ ಬಳಕೆಯ ನೆಲೆಗಳು ಈ ರೀತಿಯಾಗಿಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸುತ್ತಿರುತ್ತದೆ

ಉಲ್ಲೇಖದಲ್ಲಿ ಕೆಳಜಾತಿ ಪಾತ್ರಗಳು ಉಲ್ಲೇಖಿಸುವ ಸಂದರ್ಭವನ್ನು ಗಮನಿಸಿದಾಗ ಕೆಳಜಾತಿ ಪಾತ್ರಗಳನ್ನು ಯಾವುದೇ ಗೌರವಸೂಚಕಗಳನ್ನು ಬಳಸದೇ ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುವುದು ಕಂಡುಬರುತ್ತದೆ. ಯಾಕೆ ಕೆಳಜಾತಿಯ ಪಾತ್ರಗಳಿಗೆ ಗೌರವಸೂಚಕಗಳನ್ನು ಬಳಸುತ್ತಿಲ್ಲ ಎಂದರೆ ಕೆಳಜಾತಿಯರಾದ ಕಾರಣಕ್ಕೆ ಅವರಿಗೆ ಗೌರಸೂಚಕವಾಗಿ ಸಂಬೋಧಿಸಲಾಗದು ಎಂಬುದು ಮೇಲ್ಜಾತಿಯವರ ನಂಬಿಕೆ. ಉಲ್ಲೇಖಿಸುವಾಗ ಪ್ರತ್ಯಕ್ಷ ಉಲ್ಲೇಖ ಮತ್ತು ಪರೋಕ್ಷ ಉಲ್ಲೇಖ ಎರಡು ನೆಲೆಗಳಲ್ಲಿ ಉಲ್ಲೇಖಿಸಲಾಗುತ್ತಿದೆ. ಪ್ರತ್ಯಕ್ಷ ನೆಲೆಯಲ್ಲಿ ಸಾಮಾನ್ಯವಾಗಿ ಉಲ್ಲೇಖಿಸುವಾಗ ಗೌರವಸೂಚಕ ಬಳಸಿ ಉಲ್ಲೇಖಿಸುವುದು ನಿಯಮ. ಕೆಳಜಾತಿ ವ್ಯಕ್ತಿಗಳನ್ನು ಉಲ್ಲೇಖಿಸುವಾಗ ಯಾವುದೇ ಗೌರವಸೂಚಕಗಳನ್ನು ಬಳಸದೇ ಉಲ್ಲೇಖಿಸುತ್ತಾರೆ. ಪ್ರತ್ಯಕ್ಷ ಉಲ್ಲೇಖದಲ್ಲಿ ಮೇಲ್ಜಾತಿಗಳನ್ನು ಗೌರವಸೂಚಕವಾಗಿಯೇ ಉಲ್ಲೇಖಿಸುತ್ತಾರೆ. ಕೆಳಜಾತಿ ವ್ಯಕ್ತಿಗಳನ್ನು ಉಲ್ಲೆಖಿಸುವಾಗ ಹೆಸರಿಡಿದು, ಜಾತಿಯನ್ನು ಸೂಚಿಸಿ ಉಲ್ಲೇಖಿಸುತ್ತಾರೆ. ಕೊರವರ ಗುತ್ತಿ, ಚಂದ್ರಿ, ಹೊಲತಿ, ಕೊರವ, ಬರಮ, ಕಾಳ, ಹೊಲೇರ ಅಪ್ಪಣ್ಣ ಎಂದು ಉಲ್ಲೇಖಿಸುವುದನ್ನು ಕಾಣಬಹುದು. ಸಾಮಾಜಿಕವಾಗಿ ಗೌರವ ಸ್ಥಾನಮಾನಗಳು ಕೆಳಜಾತಿಯವರಿಗೆ ದೊರೆಯುವುದಿಲ್ಲ. ಗೌಡ, ಶಾಸ್ತ್ರಿ, ಹೆಗ್ಗಡೆ ಎಂದು ಉಲ್ಲೇಖಿಸಿದಾಗ ಆ ಪಾತ್ರಗಳಿಗೆ ಸಿಗುವ ಗೌರವ ಸ್ಥಾನಮಾನಗಳು, ಹೊಲೆಯ, ಮಾದಿಗ ಎಂದು ಉಲ್ಲೇಖಿಸಿದಾಗ ಸಿಗುವುದಿಲ್ಲ. ಈ ರೀತಿಯಾಗಿ ಉಲ್ಲೇಖದಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳಿಗೆ ಭಿನ್ನತೆಯಿರುವಂತೆ ಸಮಾಜದಲ್ಲಿಯು ಇದೇ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಗಳಿರುವುದನ್ನು ಕಾಣಬಹುದು. ಉಲ್ಲೇಖದ ಮೂಲಕವೂ ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಬರುತ್ತದೆ.

೩.೨.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

ಕನ್ನಡ ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಬರುವಂತ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಹೆಚ್ಚಾಗಿ ಬಹುವಚನ ಅಥವಾ ಗೌರವಸೂಚಕಗಳನ್ನು ಬಳಸಿ ಉಲ್ಲೇಖಿಸಿರುವುದನ್ನು ಕಾಣಬಹುದು. ಪ್ರತ್ಯಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಬಹುವಚನದಿಂದಲೇ ಉಲ್ಲೇಖಿಸುವುದು ಸಾಮಾನ್ಯ ನಿಯಮ. ಪರೋಕ್ಷ ಉಲ್ಲೇಖದಲ್ಲಿ ಹೆಚ್ಚಾಗಿ ಏಕವಚನದಲ್ಲಿಯೇ ಉಲ್ಲೇಖಿಸುವುದು ಕೂಡ ಸಾಮಾನ್ಯ ನಿಯಮ. ಏಕವಚನದಲ್ಲಿ ಉಲ್ಲೇಖಿಸಿದ ಉದಾಹರಣೆಗಳೂ ಇವೆ. ಆದರೆ ಹೆಚ್ಚಾಗಿ ಗೌರವಸೂಚಕಗಳನ್ನು ಮತ್ತು ಬಹುವಚನ ಸೂಚಕಗಳನ್ನು ಬಳಸಿ ಉಲ್ಲೇಖಿಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಕೆಳಜಾತಿ ಪಾತ್ರಗಳನ್ನು ಮೇಲ್ಜಾತಿ ಪಾತ್ರಗಳು ಪ್ರತ್ಯಕ್ಷ ಉಲ್ಲೇಖವಾಗಲಿ, ಪರೋಕ್ಷ ಉಲ್ಲೇಖದಲ್ಲಾಗಲಿ ಏಕವಚನದಿಂದಲೇ ಉಲ್ಲೇಖಿಸಿರುವುದು ಕಂಡುಬರುತ್ತದೆ. ಬಹುವಚನದಿಂದ ಮತ್ತು ಗೌರವಸೂಚಕವನ್ನು ಬಳಸಿ ಉಲ್ಲೇಖಿಸಿದ ಉದಾಹರಣೆಗಳು ದೊರೆತಿಲ್ಲ. ಆದರೆ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಪರೋಕ್ಷ ಉಲ್ಲೇಖದಲ್ಲೂ ಸಹ ಹೆಚ್ಚಾಗಿ ಗೌರವಸೂಚಕ ಮತ್ತು ಬಹುವಚನ ಸೂಚಕಗಳನ್ನು ಬಳಸಿ ಉಲ್ಲೇಖಿಸಿರುವುದು ಕಾಣಬಹುದು.

ಕೆಲವು ಉದಾಹರಣೆಗಳ ಮೂಲಕ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸಿರುವ ಸಂದರ್ಭವನ್ನು ನೋಡಬಹುದು. ಉದಾಹರಣೆಗೆ ಕುವೆಂಪು ಅವರ 'ಮಲೆಗಳಲಿ ಮದುಮಗಳು' ಕಾದಂಬರಿಯಲ್ಲಿ 'ಗಿಡ್ಡಿ' ಮತ್ತು 'ತಿಮ್ಮ' ಎಂಬ (ಗಂಡ–ಹೆಂಡತಿ) ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಮೇಲ್ಜಾತಿಯ ಪುರುಷನನ್ನು ಉಲ್ಲೇಖಿಸಿರುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು.

"ಒಡೇರ ದಿಬ್ಬದ ಮ್ಯಾಲೆ ಹೆಗ್ಗಡೇರು ನಿಂತಾರೆ

ಯಾರನ್ನೋ ಕೂಗ್ತಿದಾರೆ"

"ಯಾವ ಹೆಗ್ಗಡೇರೆ?"

"ಸಣ್ಣ ಹೆಗ್ಗಡೇರು"

"ಅಂದರೇ? ಹೆಂಚಿನ ಮನೇರೋ? ಸೊಂಗೆ ಮನೇರೋ?"

"ನಾನು ಹೆಸರು ಹೇಳಬಾರದ ಹೆಗ್ಗಡೇರು ಅಂತಿನೀ!" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–೯೩)

ಈ ಮೇಲಿನ ಸಂಭಾಷಣೆಯಲ್ಲಿ ದಲಿತ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ತಿಮ್ಮಪ್ಪ ಹೆಗ್ಗಡೆಯನ್ನು ಕುರಿತು ಮಾತನಾಡುತ್ತಿವೆ. ಅಲ್ಲಿ ತಿಮ್ಮಪ್ಪ ಹೆಗ್ಗಡೆ ಗೈರು ಹಾಜರಿಯಲ್ಲಿದ್ದಾನೆ.

ಇದು ಪರೋಕ್ಷ ಉಲ್ಲೇಖವಾಗಿದೆ. ಪರೋಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಏಕವಚನದಿಂದ ಉಲ್ಲೇಖ ಮಾಡುವುದೇ ಹೆಚ್ಚು. ಆದರೆ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖ ಮಾಡುವಾಗ ಹೆಸರಿಡಿದು ಉಲ್ಲೇಖಿಸುವುದು ಸಹ ನಿರ್ಬಂಧವಾಗಿದೆ. 'ಹೆಗ್ಗಡೆ' ಎಂಬ ಜಾತಿಸೂಚಕವನ್ನು ಏಕವಚನದಲ್ಲಿ ಉಲ್ಲೇಖವಿದೆ. ಅವರು ಎಂಬ ಬಹುವಚನಸೂಚಕ ಬಳಸಿ ಸಹ ಉಲ್ಲೇಖಿಸುವುದಿಲ್ಲ. 'ಹೆಗ್ಗಡೆರು' ಎಂದು ಕೆಳಜಾತಿ ಪಾತ್ರಗಳ ಉಲ್ಲೇಖಿಸುತ್ತವೆ. 'ತಿಮ್ಮಪ್ಪ ಹೆಗ್ಗಡೆ' ಎಸಂಬ ಹೆಸರನ್ನು ಸಾಮಾನ್ಯವಾಗಿ ಮೇಲ್ಜಾತಿಯವರು ಪರೋಕ್ಷ ಉಲ್ಲೇಖದಲ್ಲಿ ತಿಮ್ಮಪ್ಪ, ಹೆಗ್ಗಡೆ ಎಂದು ಉಲ್ಲೇಖಿಸುತ್ತಾರೆ. ಆದರೆ ಇಲ್ಲಿ ಕೆಳಜಾತಿ ಪಾತ್ರಗಳು ಗೈರುಹಾಜರಿಯಲ್ಲೂ ಸಹ 'ಅವರು' ಎಂಬ ಗೌರವ ಸೂಚಕವನ್ನು ಬಳಸಿ ಉಲ್ಲೇಖಿಸಿರುವುದನ್ನು ಕಾಣಬಹುದು. ಮೇಲ್ಜಾತಿ ಪಾತ್ರಗಳಿಗೆ ಗೈರು ಹಾಜರಿಯಲ್ಲೂ ಗೌರವ ಸೂಚಿಸುತ್ತಿದ್ದಾರೆ. ತಿಮ್ಮಪ್ಪ ಹೆಗ್ಗಡೆಯ ಮೇಲೆ ಈ ಕೆಳಜಾತಿ ಪಾತ್ರಗಳಿಗೆ ಅಷ್ಟಾಗಿ ಗೌರವವಿಲ್ಲದಿದ್ದರೂ 'ಮೇಲ್ಜಾತಿ'ಯವರು 'ಒಡೆಯರು' ಎಂಬ ಕಾರಣಕ್ಕೆ ಉಲ್ಲೇಖದಲ್ಲಿ ಗೌರವಸೂಚಕವನ್ನು ಬಳಸಿದ್ದಾರೆ. ಇಲ್ಲಿ 'ಒಡೇರು' 'ಹೆಗ್ಗಡೇರು' ಎಂಬ ಎರಡು ಗೌರವ ಸೂಚಕಗಳನ್ನು ಉಲ್ಲೇಖ ಮಾಡಿರುವುದು ಕಂಡುಬರುತ್ತದೆ. ಜಾತಿಗಳ ಅಸಮಾನತೆಯಲ್ಲಿ ಉಲ್ಲೇಖದ ಬಳಕೆಯ ನೆಲೆಗಳು ಈ ರೀತಿಯಾಗಿ ಕಾರ್ಯನಿರ್ವಹಿಸುತ್ತವೆ.

ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿ ಆಧಾರಿತ, ಗಿರೀಶ್ ಕಾರ್ನಾಡ ಅವರ ನಿರ್ದೇಶನದ 'ಕಾಡು' ಚಲನಚಿತ್ರದಲ್ಲಿ ಕೆಳಜಾತಿಯ 'ಕರಿಯ' ಎಂಬ ಪಾತ್ರ, ಮೇಲ್ಜಾತಿಯ 'ಕಿಟ್ಟಿ' ಎಂಬ ಕಿರಿಯ ಪಾತ್ರವನ್ನು ಮೇಲ್ಜಾತಿಯ ಪಾತ್ರದ ಹತ್ತಿರ ಉಲ್ಲೇಖಿಸಿರುವುದನ್ನು ಕಾಣಬಹುದು.

ಉದಾಹರಣೆಗೆ

ಚಂದ್ರೇಗೌಡ: ಏನ್ಲ, ಏನೋ ಅದು ಕರಿಯ

ಕರಿಯ: ಅದೇ ಕಿಟ್ಟಪ್ಪೋರು ಯೋಳಿದ್ರು ಇಸ್ಕೂಲಿಂದ ಬರುವಾಗ ಹನುಮಂತರಾಯನ ಗುಡಿತಾವ ಅದೇ ಆ ಸಂದಿಯಲಿ ನೋಡಿದ್ರಂತೆ.

ಚಂದ್ರೇಗೌಡ: ಏನು ನೋಡಿದ್ನವನಂತೆ

ಕರಿಯ: ಅದೇ ಆ ಹೊಸೂರು ಹನುಮನುವೆ ಇನ್ಯಾರೋ ಹೆಂಗಸುವೆ ಮನಿಕೊಂಡಿದ್ರಂತೆ. (ಚಲನಚಿತ್ರ: ಕಾಡು)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿಯ ಹಿರಿಯ ಪಾತ್ರ ಮೇಲ್ಜಾತಿ ಕಿರಿಯ ಪಾತ್ರವನ್ನು ಬಹುವಚನದಿಂದ ಉಲ್ಲೇಖಿಸಿರುವುದು ಕಂಡುಬರುತ್ತದೆ. ಇದು ಪ್ರತ್ಯಕ್ಷ ಉಲ್ಲೇಖವಾಗಿದೆ. ಪ್ರತ್ಯಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಗೌರವಸೂಚಕಗಳನ್ನು ಬಳಸುತ್ತಾರೆ. ಇಲ್ಲಿಯೂ ಸಹ ಗೌರವಸೂಚಕ ಬಳಸಲಾಗಿದೆ. ಆದರೆ ತನಗಿಂತ ಕಿರಿಯ ವ್ಯಕ್ತಿಯನ್ನು ಸಹ ಇಲ್ಲಿ ಗೌರವಸೂಚಕವಾಗಿ ಉಲ್ಲೇಖಿಸಲಾಗಿದೆ. ಕರಿಯ ಕೆಳಜಾತಿಯ ಪಾತ್ರವಾದ ಕಾರಣ ಮೇಲ್ಜಾತಿಯ

ಕಿರಿಯ ಪಾತ್ರವನ್ನು ಸಹ ಗೌರವಸೂಚಕವಾಗಿ ಬಳಸಬೇಕೆಂಬುದು ಇದು ಸಾಮಾಜಿಕವಾಗಿ ರೂಢಿಯೂ ಆಗಿರುವುದರಿಂದ ಚಲನಚಿತ್ರದಲ್ಲಿಯೂ ಹಾಗೆಯೇ ಪ್ರತಿಫಲನಗೊಂಡಿದೆ. ಸಾಮಾಜಿಕ ಒತ್ತಡ. ಇದೇ ಸಂಭಾಷಣೆಯಲ್ಲಿ ಇನ್ನೊಂದು ಪಾತ್ರವನ್ನು ಉಲ್ಲೇಖಿಸಲಾಗಿದೆ. ಪರೋಕ್ಷ ಉಲ್ಲೇಖದಲ್ಲಿ ಹೊಸೂರು ಹನುಮ ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಹನುಮ ಎಂಬ ವ್ಯಕ್ತಿ ಕೆಳಜಾತಿಯ ಪಾತ್ರವಾಗಿರುವುದರಿಂದ ಇಲ್ಲಿ 'ಹನುಮ' ಎಂದು ಏಕವಚನದಲ್ಲಿ ಉಲ್ಲೇಖಿಸಲಾಗಿದೆ. ಆದರೆ ಆ ಸಂದರ್ಭದಲ್ಲಿ ಮೇಲ್ಜಾತಿಯ ಪಾತ್ರವನ್ನು ಉಲ್ಲೇಖಿಸಿದ್ದರೇ, ಗೌರವಸೂಚಕವಾಗಿಯೇ ಉಲ್ಲೇಖದಲ್ಲಿ ಬಳಕೆ ಮಾಡಲಾಗುತ್ತಿತ್ತು. ಚಲನಚಿತ್ರದಲ್ಲಿಯೇ ಇನ್ನೊಂದು ಉದಾಹರಣೆ ನೋಡಬಹುದು. 'ಮಾದ' ಎಂಬ ಕೆಳಜಾತಿ ವ್ಯಕ್ತಿ ಚಂದ್ರೇಗೌಡ ಎಂಬ ಮೇಲ್ಜಾತಿ ವ್ಯಕ್ತಿಯ ಹತ್ತಿರ ಮೇಲ್ಜಾತಿ ವ್ಯಕ್ತಿಗಳನ್ನು ಕುರಿತು ಉಲ್ಲೇಖಿಸುವ ಸಂದರ್ಭ

"ಮಾದ: ಇವತ್ತು ನ್ಯಾಯವಿದೆ ಕಣ್ರಪ್ಪ, ತಾವು ಈಗ್ಲೆ ಬರಬೇಕಂತೆ

ಕೆರೆಹಟ್ಟಿ ಬುದ್ದಿ, 'ದೊಡ್ಡಗೌಡ್ರು' ಎಲ್ಲ ಬಂದು ಬಿಟ್ಟವರೆ.

ಚಂದ್ರೇಗೌಡ: ಇವತ್ತು ಎಂಥದ್ಲ ನ್ಯಾಯ

ಮಾದ: ಅದೇ ನಮ್ಮ 'ಗಡಿಗೆ ಸುಬ್ಬ' ಇಲ್ಲುವ್ರ ಅವ್ನು ಏನೋ ನ್ಯಾಯ ತಂದವ್ನೆ ಅವ್ನು ಹೆಂಡ್ತಿ 'ದ್ಯಾವಿ' ಆ ಕೆಂಚನ ಜೋಡಿ.." (ಚಲನಚಿತ್ರ: ಕಾಡು)

ಈ ಮೇಲಿನ ಉದಾಹರಣೆಯಲ್ಲಿ ಮಾದ ಎಂಬ ಕೆಳಜಾತಿ ಪಾತ್ರ ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಬುದ್ಧಿ, ದೊಡ್ಡಗೌಡ್ರು ಎಂದು ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಉಲ್ಲೇಖಿಸಿದೆ. ಹಾಗೆ ಕೆಳಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಗಡಿಗೆ ಸುಬ್ಬ, ದ್ಯಾವಿ, ಕೆಂಚ ಎಂದು ಹೆಸರಿಡಿದು ಯಾವುದೇ ಗೌರವಸೂಚಕ ವಾಚಕಗಳನ್ನು ಬಳಸದೇ ಏಕವಚನದಲ್ಲಿ ಬಳಸಲಾಗಿದೆ. ಮೇಲ್ಜಾತಿ ಪಾತ್ರಗಳಿಗೆ ಪರೋಕ್ಷ ಉಲ್ಲೇಖದಲ್ಲೂ ಗೌರವಸೂಚಕಗಳನ್ನು ಬಳಸುತ್ತಾರೆ. ಕೆಳಜಾತಿ ಪಾತ್ರಗಳಿಗೆ ಪರೋಕ್ಷ ಮತ್ತು ಪ್ರತ್ಯಕ್ಷ ಉಲ್ಲೇಖಗಳೆರಡರಲ್ಲೂ ಸಹ ಏಕವಚನದಲ್ಲಿ ಉಲ್ಲೇಖಿಸುತ್ತಾರೆ. ಕಾರಣ ಜಾತಿಯ ಅಸಮಾನತೆಗಳ ಈ ಉಲ್ಲೇಖ ಬಳಕೆಯ ನೆಲೆಗಳಿಗೆ ಮುಖ್ಯವಾಗುತ್ತವೆ. ಈ ರೀತಿಯಾಗಿ ಬಳಕೆಯ ನೆಲೆಗಳನ್ನು ಉಲ್ಲೇಖದಲ್ಲಿ ಕಾಣಬಹುದು.

ದೇವಕಿ ಎಂ. ಶೆಟ್ಟಿ ಅವರ ಜಾತಿ ಭೂತಕ್ಕೆ ಬಲಿ ಎಂಬ ಕಥೆಯಲ್ಲಿ ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಮೇಲ್ಜಾತಿ ಪಾತ್ರವನ್ನು ಉಲ್ಲೇಖಿಸುವ ಕ್ರಮವನ್ನು ನೋಡಬಹುದು.

ಉದಾಹರಣೆಗೆ ಈ ಕೆಳಗಿನಂತಿದೆ.

"ಏನಾಯಿತು ಚೆನ್ನಿ, ಹೀಗೆ ಅಳುತ್ತಿದ್ದರೆ ನನಗೆ ಹೇಗೆ ಗೊತ್ತಾಗಬೇಕು. ಅಲ್ಲಾ ಚಿಕ್ಕದೆತ್ತಿ ಬಂದಿದ್ದರು ನಾನು...

ಯಾರು ಸಖೂ ಅಮ್ಮನೇ, ದೇವರಂತ ಮಗು ಏನಾಯಿತು ಅವರಿಗೆ...

(ಉಷಾ ಪಿ ರೈ ಕೆ. (ಪ್ರ.ಸಂ), ಲೇಖಕಿಯ ಸಣ್ಣಕಥೆಗಳು, ಭಾಗ-೨, ಪುಟ-೧೮೪)

ಈ ಮೇಲಿನ ಉದಾಹರಣೆಯಲ್ಲಿ ಮಾತನಾಡುತ್ತಿರುವ ಕೆಳಜಾತಿಯ ದೂಮ ಮತ್ತು ಚೆನ್ನಿ ಗಂಡ-ಹೆಂಡತಿ ಎಂಬ ಪಾತ್ರಗಳು, ಮೇಲ್ಜಾತಿಯ ಮಹಿಳೆಯನ್ನು ಕುರಿತು ಉಲ್ಲೇಖಿಸುತ್ತಿದ್ದಾರೆ. ಆ ಮೇಲ್ಜಾತಿ ಮಹಿಳೆ ಈ ದೂಮ ಮತ್ತು ಚೆನ್ನಿಗಿಂತ ವಯಸ್ಸಿನಲ್ಲಿ ಕಿರಿಯವ. ಕೆಳಜಾತಿಯ ಚೆನ್ನಿ ಪಾತ್ರ ಪರೋಕ್ಷ ಉಲ್ಲೇಖದಲ್ಲಿ ಮೇಲ್ಜಾತಿಯ ಕಿರಿಯ ಮಹಿಳೆಯನ್ನು 'ಚಿಕ್ಕದೆತೀ' ಎಂದು ಉಲ್ಲೇಖಿಸಿದರೆ, ಕೆಳಜಾತಿಯ ದೂಮ 'ಸಖೂ ಅಮ್ಮ' ಎಂದು ಉಲ್ಲೇಖಿಸುವುದನ್ನು ಕಾಣಬಹುದು. 'ಚಿಕ್ಕದೆತ್ತೀ' ಎಂದು ಗೌರವಸೂಚಕವನ್ನು ಬಳಸಿ ಉಲ್ಲೇಖಿಸುತ್ತಾ, ಹೆಸರು ಮತ್ತು ಹೆಸರಿನ ಅಂತ್ಯದಲ್ಲಿ 'ಅಮ್ಮ' ಎಂದು ಗೌರವಸೂಚಕವನ್ನು ಬಳಸಿ ಉಲ್ಲೇಖಿಸಿದ್ದಾರೆ. ಮೇಲ್ಜಾತಿಯ ವ್ಯಕ್ತಿಗಳನ್ನು ಪರೋಕ್ಷ ಉಲ್ಲೇಖದಲ್ಲೂ ಗೌರವಸೂಚಕಗಳನ್ನು ಬಳಸಿ ಉಲ್ಲೇಖಿಸಿದ್ದಾರೆ. ಸಾಮಾನ್ಯವಾಗಿ ಪರೋಕ್ಷ ಉಲ್ಲೇಖದಲ್ಲಿ ಏಕವಚನವನ್ನು ಬಳಸಲಾಗುತ್ತದೆ. ಆದರೆ ಗೌರವಸೂಚಕಗಳನ್ನು ಬಳಸಿ ಉಲ್ಲೇಖಿಸಿರುವುದನ್ನು ನೋಡಿದರೆ ಉಲ್ಲೇಖದ ಸಾಮಾಜಿಕ ಸ್ತರವಿನ್ಯಾಸವನ್ನು ಅರ್ಥ ಮಾಡಿಕೊಳ್ಳಬಹುದು.

ಚನ್ನಣ್ಣ ವಾಲೀಕಾರ ಅವರ ಇಪ್ಪತ್ತಂಶಗಳು ಎಂಬ ನಾಟಕದಲ್ಲಿ ಕೆಳಜಾತಿಯವರು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸಿರುವ ಕ್ರಮವನ್ನು ಕುರಿತು ಉದಾಹರಣೆಯ ಮೂಲಕ ನೋಡಬಹುದು. ಕೆಳಜಾತಿಯ ನಿಂಗ್ಯಾ ಮತ್ತು ಭೀಮಣ್ಣ ಮಾತನಾಡುವ ಸಂದರ್ಭದಲ್ಲಿ ಮೇಲ್ಜಾತಿಯ ಪಾತ್ರಗಳನ್ನು ಉಲ್ಲೇಖಿಸಿರುವುದು ಈ ಕೆಳಗಿನಂತಿದೆ.

"ನಿಂಗ್ಯಾ: ಏ ಎಪೊ ಅಪ್ಪಣ್ಣಪೋ ಘಾತವಾಯ್ತಪೋ ಘಾತಾಯ್ತ್ ನಂದ್ ಮರಾದಿ ಹೋಯ್ತಪೊ ನಂದ್ ಮರಾದಿ ಹೋಯ್ತ್

ಭೀಮಣ್ಣ: ಏನಾಯ್ತೋ ನಿಂಗಪ್ಪಣ್ಣ ಏ ನಿಂಗಪ್ಪಣ್ಣ ಸ್ವಲ್ಪ್ ಗಪ್ಪಾಗ್ಯ್ ಹೇಳ್ಯ್

ನಿಂಗ್ಯಾ: ಆ ಗೌಡ್ತಿ ಮಗಾ ಸೂಪಣ್‌ಗೌಡಿಲ್ಲೇನಪೋ ಸೂಪಣ್‌ಗೌಡ್

ಭೀಮಣ್ಣ: ಹೌದೌದ್ ಆ ಗುಂಡಮ್‌ಗೌಡ್ತಿ ಮಗಾ ಸೂಪಣ್‌ಗೌಡ ಏನಾಯ್ತ್ ಹೇಳೋ?

(ಚನ್ನಣ್ಣ ವಾಲೀಕರ, ಸಮಗ್ರ ನಾಟಕ ಸಂಪುಟ, ಪುಟ-೧೦೩)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿ ಪಾತ್ರಗಳು ಮಾತಾಡುವ ಸಂದರ್ಭದಲ್ಲಿ ಮೇಲ್ಜಾತಿಯ ಪಾತ್ರಗಳನ್ನು 'ಆ ಗೌಡ್ತಿ', 'ಸೂಪಣ್‌ಗೌಡ್' ಎಂದು ಏಕವಚನದಲ್ಲಿ ಉಲ್ಲೇಖಿಸಿವೆ. 'ಗುಂಡಮ್ಮ', 'ಸೂಪಣ್ಣ' ಎಂದು ಉಲ್ಲೇಖಿಸಿಲ್ಲ. 'ಗೌಡ', 'ಗೌಡ್ತಿ' ಎಂಬ ಗೌರವಸೂಚಕಗಳನ್ನು ಸೇರಿಸಿ ಉಲ್ಲೇಖಿಸಲಾಗಿದೆ. ಇದು ಪರೋಕ್ಷ ಉಲ್ಲೇಖವಾಗಿದೆ. ಪರೋಕ್ಷ ಉಲ್ಲೇಖದಲ್ಲಿ

ಸಾಮಾನ್ಯವಾಗಿ ಏಕವಚನದಿಂದಲೇ ಉಲ್ಲೇಖಿಸುವುದು ಹೆಚ್ಚು. ಆದರೂ ಗೌರವಸೂಚಕದಿಂದ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸಿವೆ. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಯಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಕೆಳಜಾತಿಯ ಪಾತ್ರಗಳು ಮೇಲ್ಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಗೌರವಸೂಚಕಗಳನ್ನು ಬಳಸಿ ಹೆಚ್ಚು ಬಳಸಲಾಗಿದೆ. ಪರೋಕ್ಷ ಉಲ್ಲೇಖದಲ್ಲಿ ಬಹುವಚನ ಮತ್ತು ಏಕವಚನ ಎರಡು ರೀತಿಯಲ್ಲೂ ಉಲ್ಲೇಖ ಮಾಡಲಾಗಿದೆ. ಅವರು ಉಲ್ಲೇಖಿಸಿದ ಮೇಲ್ಜಾತಿ ಪಾತ್ರಗಳ ಮೇಲೆ ಗೌರವ ಹೆಚ್ಚಾಗಿದ್ದರೆ, ಪರೋಕ್ಷ ಉಲ್ಲೇಖಲ್ಲೂ ಗೌರವಸೂಚಕದ ಜೊತೆಗೆ ಬಹುವಚನವನ್ನು ಬಳಸುತ್ತಾರೆ. ಗೌರವ ಕಡಿಮೆಯಿದ್ದರೆ ಅಥವಾ ಆ ಪಾತ್ರದ ಮೇಲೆ ದ್ವೇಷ ಕೋಪವಿದ್ದರೆ ಏಕವಚನದಿಂದ ಉಲ್ಲೇಖಿಸಿರುವುದನ್ನು ಕಾಣಬಹುದು. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಹೆಸರಿಡಿದು ಉಲ್ಲೇಖಿಸುವುದು ವಿರಳವೆಂದೆ ಹೇಳಬಹುದು. ಕೆಳಜಾತಿಯ ಪಾತ್ರಕ್ಕಿಂತ ತುಂಬ ಕಿರಿಯ ಪಾತ್ರವಾದ ಮೇಲ್ಜಾತಿ ಪಾತ್ರವನ್ನು ಹೆಸರಿಡಿದು ಅದರ ಜೊತೆಗೆ ಬಹುವಚನವನ್ನು ಬಳಸಿದ ಉದಾಹರಣೆಗಳನ್ನು ಕಾಣಬಹುದು. ಉದಾಹರಣೆಗೆ 'ಕಿಟ್ಟಪ್ಪೋರು, 'ಸಖೂ ಅಮ್ಮ' ಈ ರೀತಿಯಾಗಿ ಬಳಕೆ ಮಾಡಿರುವುದನ್ನು ಕಾಣಬಹುದು. ಮೇಲ್ಜಾತಿ ವ್ಯಕ್ತಿಯ ಗೈರು ಹಾಜರಿಯಲ್ಲಿಯೂ ಸಹ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸಿರುವ ನೆಲೆಗಳು ಹೆಚ್ಚಾಗಿ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಕಾಣಬಹುದು. ವಾಸ್ತವದಲ್ಲೂ ಸಹ ಈ ರೀತಿಯ ಉಲ್ಲೇಖದ ಬಳಕೆಯ ನೆಲೆಗಳ ಪ್ರಕ್ರಿಯೆಯನ್ನು ಕಾಣಬಹುದಾಗಿದೆ.

೩.೨.೩. ಕೆಳಜಾತಿಯ ಪಾತ್ರಗಳು ಕೆಳಜಾತಿಯ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

ಕೆಳಜಾತಿಯ ಪಾತ್ರಗಳನ್ನು ಕೆಳಜಾತಿಯ ಪಾತ್ರಗಳು ಉಲ್ಲೇಖಿಸುವ ಸಮಾನ ಗೌರವ ಸ್ಥಾನಮಾನಗಳೊಂದಿಗೆ ಉಲ್ಲೇಖಿಸುತ್ತವೆ. ಇದು ಸಹ ಪರೋಕ್ಷ ಮತ್ತು ಪ್ರತ್ಯಕ್ಷ ಉಲ್ಲೇಖ ಎಂದು ಎರಡು ಆಯಾಮಗಳಲ್ಲಿರುತ್ತವೆ. ಪರೋಕ್ಷ ಉಲ್ಲೇಖದಲ್ಲಿ ಹೆಚ್ಚಾಗಿ ಏಕವಚನದಲ್ಲಿ ಉಲ್ಲೇಖ ಮಾಡಿದರೆ, ಪ್ರತ್ಯಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಗೌರವಸೂಚಕ ಉಲ್ಲೇಖ ಮಾಡುವುದು ಸಾಮಾನ್ಯ ನಿಯಮ. ಹಿರಿಯರಾಗಿದ್ದರೆ ಗೌರವಸೂಚಕಗಳನ್ನು ಅಥವಾ ಬಹುವಚನಗಳಿಂದ ಉಲ್ಲೇಖಿಸಲಾಗುತ್ತದೆ. ಕಿರಿಯರಾಗಿದ್ದರೆ ಹೆಸರಿಡಿದು ಏಕವಚನದಲ್ಲಿ ಉಲ್ಲೇಖಿಸಲಾಗುತ್ತದೆ. ಕೆಳಜಾತಿ ಪಾತ್ರಗಳು ಸಹ ತನ್ನ ಗಂಡ ಅಥವಾ ಹೆಂಡತಿ ಎಂದು ಉಲ್ಲೇಖಿಸುವ ಬದಲು ಜಾತಿಯಿಂದ ಉಲ್ಲೇಖಿಸಿರುವ ಉದಾಹರಣೆಗಳಿವೆ. ಉದಾಹರಣೆಗೆ ಚೋಮನದುಡಿ ಚಲನಚಿತ್ರದಲ್ಲಿ ಚೋಮ ತನ್ನ ಹೆಂಡತಿಯನ್ನು ಕುರಿತು ಹೇಳುವಾಗ 'ಹೊಲತಿ'

ಇದ್ದಾಗಿಂದ್ಲೂ ಅದೊಂದು ಆಸೆ ಒಡೆಯ. ಎಂದು ತನ್ನ ಹೆಂಡತಿಯನ್ನು ಕುರಿತು ಉಲ್ಲೇಖಿಸಲಾಗಿದೆ.

'ಜಾತಿ ಭೂತಕ್ಕೆ ಬಲಿ' ಎಂಬ ಕಥೆಯಲ್ಲೂ ಚೆನ್ನಿ ಎಂಬ ಕೆಳಜಾತಿ ಮಹಿಳೆ ತನ್ನ ಗಂಡನನ್ನು ಕುರಿತು ಉಲ್ಲೇಖಿಸುವಾಗ 'ನನ್ನ 'ಮಾದಿಗ' ಇನ್ನೂ ಬಂದಿಲ್ಲ" ಎಂದು ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಜಾತಿಯನ್ನು ಆರೋಪಿಸಿಕೊಂಡು ಬಳಕೆ ಮಾಡಲಾಗಿದೆ. ಕೆಳಜಾತಿಯವರಷ್ಟೆ ಅಲ್ಲ ಮೇಲ್ಜಾತಿಯವರು ಕೂಡ ಇದೇ ರೀತಿ ಜಾತಿಯನ್ನು ಕೆಳಜಾತಿ ವ್ಯಕ್ತಿಗಳಿಗೆ ಆರೋಪಿಸುತ್ತಾರೆ. ಹೊಲೆಯ, ಹೊಲತಿ, ಮಾದಿಗ, ಕೊರವ ಎಂದು ಉಲ್ಲೇಖಿಸುತ್ತಾರೆ. ಪ್ರತ್ಯಕ್ಷ ಉಲ್ಲೇಖದಲ್ಲೂ ಸಹ ಜಾತಿ ಹಿಡಿದು ಉಲ್ಲೇಖ ಮಾಡುತ್ತಾರೆ. ಕೆ.ಸದಾಶಿವ ಅವರ ಗಿಡ್ಡಿ ಕಥೆಯಲ್ಲಿ ಮೇಲ್ಜಾತಿಯ ತಿಮ್ಮಪ್ಪಯ್ಯ ಗಿಡ್ಡಿಯನ್ನು ನೀನು ಯಾರ 'ಹೊಲತಿಯಾಗುವವಳು ಎಂದು ಉಲ್ಲೇಖಿಸುವುದು ಕಾಣಬಹುದು. ಹೇಮಾವತಿ ಚಲನಚಿತ್ರದಲ್ಲಿ ಮೇಲ್ಜಾತಿ ಮಹಿಳೆಯರು ಕೆಳಜಾತಿಯ ಚೆನ್ನಿಯನ್ನು ಕುರಿತು ತಮ್ಮ ಗುರುಗಳಿಗೆ ಹೇಳುತ್ತಾರೆ. 'ಮೊದ್ಲು ಆ ಹೊಲತಿನ ಆಚೆ ಕಳ್ಸಿ' ಎಂದು ಉಲ್ಲೇಖಿಸುತ್ತಾರೆ. ಕೆಳಜಾತಿಯವರು ಈ ರೀತಿ ಉಲ್ಲೇಖ ಮಾಡುವುದಕ್ಕಿಂತ ಮೇಲ್ಜಾತಿಯವರೆ ಹೆಚ್ಚಾಗಿ ಉಲ್ಲೇಖಮಾಡುತ್ತಾರೆ. ಕೆಳಜಾತಿಯವರು ನನ್ನ 'ಹೊಲತಿ' ನನ್ನ 'ಮಾದಿಗ' ಎಂದು ಉಲ್ಲೇಖ ಮಾಡಿದಾಗ 'ಗಂಡ' 'ಹೆಂಡತಿ' ಎಂಬ ಅರ್ಥಗಳಷ್ಟೇ ನಿಲುಕುತ್ತವೆ. ಇಲ್ಲಿ ಸಾಮಾಜಿಕ ಗೌರವಕ್ಕೆ ದಕ್ಕೆ ಉಂಟಾಗುವುದಿಲ್ಲ. ಬೇರೆ ಸಮುದಾಯದ ವ್ಯಕ್ತಿಗಳು ಆ ರೀತಿಯಾಗಿ ಕೆಳಜಾತಿ ವ್ಯಕ್ತಿಗೆ ಆ ಜಾತಿಯನ್ನು ಆರೂಪಿಸಿ ಉಲ್ಲೇಖದಲ್ಲಿ ಬಳಕೆ ಮಾಡಿದರೆ ಆ ಪಾತ್ರದ ಸಾಮಾಜಿಕ ಸ್ಥಾನಮಾನಗಳು ಇಳಿಮುಖಗೊಳ್ಳುತ್ತವೆ. ಮೇಲ್ಜಾತಿ ಪಾತ್ರಗಳ ಪ್ರಜ್ಞಾಪೂರ್ವಕವಾಗಿಯೇ ಜಾತಿಯನ್ನು ಆರೋಪಿ ಉಲ್ಲೇಖ ಮಾಡುವುದು ಹೆಚ್ಚು. ಮೇಲ್ಜಾತಿಯ ಮತ್ತು ಕೆಳಜಾತಿಯ ಭಿನ್ನತೆಗಳನ್ನು, ಅಸಮಾನತೆಗಳನ್ನು ಗುರುತಿಸುವುದಕ್ಕಾಗಿಯೇ ಆ ರೀತಿಯಾಗಿ ಬಳಕೆ ಮಾಡಲಾಗುತ್ತಿದೆ. ಈ ರೀತಿಯಾಗಿ ಮೇಲ್ಜಾತಿಯವರು ಉಲ್ಲೇಖ ಮಾಡುತ್ತಾರೆ. ಆದರೆ ಕೆಳಜಾತಿಯ ವ್ಯಕ್ತಿಗಳು ಕೆಳಜಾತಿ ವ್ಯಕ್ತಿಗಳನ್ನು ಗಂಡ-ಹೆಂಡತಿಯನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳನ್ನು ಉಲ್ಲೇಖ ಮಾಡಬೇಕಾದರೆ 'ಹೊಲೆಯ, 'ಹೊಲತಿ', 'ಮಾದಿಗ', 'ಮಾದಗಿತ್ತಿ', 'ಕೊರವ' ಎಂದು ವ್ಯಕ್ತಿಗೆ ಜಾತಿಯನ್ನು ಆರೋಪಿಸಿ ಉಲ್ಲೇಖದಲ್ಲಿ ಬಳಸುವುದಿಲ್ಲ. ಹೆಸರಿಡಿದು ಅಥವಾ ಏಕವಚನದಲ್ಲಿ ಬಳಸಿರುವುದನ್ನು ಕಾಣಬಹುದು. ವಯಸ್ಸಿನ ಆಧಾರದ ಮೇಲೆ ಉಲ್ಲೇಖದ ಬಳಕೆಯ ನೆಲೆಗಳನ್ನು ಬಳಸಲಾಗುತ್ತದೆ. ಈ ರೀತಿಯ ಬಳಕೆಯ ನೆಲೆಗಳನ್ನು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತಿರುವ ಉದಾಹರಣೆಗಳ ಮೂಲಕ ಇಲ್ಲಿ ಚರ್ಚಿಸಲಾಗುತ್ತದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳಜಾತಿಯ ಪಾತ್ರಗಳಾದ ಚೀಂಕ್ರ ಮತ್ತು ಪಿಜಿಣ ಇನ್ನೊಂದು ಕೆಳಜಾತಿಯ ಪಾತ್ರವನ್ನು ಕುರಿತು ಮಾತನಾಡುವ ಸಂದರ್ಭ ಈ ಕೆಳಗಿನಂತಿದೆ.

"ಹೌದಾ, ಹಸಲೋರ ಬಿಡಾರದಲ್ಲಿ ಒಂದು ಸುದ್ದಿ ಹಬ್ಬಿತ್ತು, ಕೇಳ್ದ್ಯಾ?" ಎಂದನು.

"ಅವನು ಹೊತ್ತಾರೆ ಒಲೆ ಹಚ್ಚಲು ಕೆಂಡ ತರಲು 'ಕದುಕನ' ಬಿಡಾರಕ್ಕೆ ಹೋಗಿದ್ದನಂತೆ. ಅದನ್ನೆ ದೊಡ್ಡದು ಮಾಡಿ ಕುದುಕನ ಹೆಂಡತಿಮ್ಯಾಲೆ ಪುಕಾರು ಹುಟ್ಟಿಸಿದ್ದಾರಂತೆ. ಕುದುಕನ ಹೆಂಡತಿ ಅಂಥವಳೇನಲ್ಲ" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೧೩)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಹೆಸರಿಡಿದು ಏಕವಚನದಲ್ಲಿ ಉಲ್ಲೇಖಿಸಿದ್ದಾರೆ. ಇದು ಪರೋಕ್ಷ ಉಲ್ಲೇಖವಾಗಿದೆ. ಪರೋಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಏಕವಚನವನ್ನು ಬಳಸುತ್ತಾರೆ. ಕೆಳಜಾತಿಯನ್ನು ಕುದುಕನ ಎಂದು ಅವನ ಹೆಸರಿಡಿದು ಉಲ್ಲೇಖಿಸಲಾಗಿದೆ. ಆದರೆ ಇವನ ಹೆಂಡತಿಯ ಹೆಸರನ್ನು ಉಲ್ಲೇಖಮಾಡಿಲ್ಲ. ಅವಳನ್ನು ಗುರುತಿಸಬೇಕಾದರೆ, ಉಲ್ಲೇಖಿಸಬೇಕಾದರೆ ಕುದುಕನ ಮೂಲಕವೇ ಉಲ್ಲೇಖಿಸಿರುವುದನ್ನು ಕಾಣಬಹುದು. 'ಕುದುಕನ ಹೆಂಡತಿ' ಎಂದು ಉಲ್ಲೇಖಿಸುವುದನ್ನು ಕಾಣುತ್ತೇವೆ. ಇಲ್ಲಿ ಜಾತಿಯ ಕಾರಣಕ್ಕಾಗಿ ಉಲ್ಲೇಖದ ಬಳಕೆಯ ನೆಲೆಯಲ್ಲಿ ಭಿನ್ನತೆಗಳು ಕಂಡು ಬರುವುದಿಲ್ಲ. ಲಿಂಗ, ವಯಸ್ಸನ್ನು ಆಧಾರಿಸಿ ಉಲ್ಲೇಖದಲ್ಲಿ ಭಿನ್ನತೆಗಳು ಕಂಡುಬರುತ್ತವೆ.

ಬಿ.ವಿ.ಕಾರಂತ ಅವರ ನಿರ್ದೇಶನದ 'ಚೋಮನದುಡಿ' ಚಲನಚಿತ್ರದಲ್ಲಿ ಕೆಳಜಾತಿಯ ಪಾತ್ರಗಳಾದ ಪೊಮ್ಮ-ಚೀಂಕ್ರ ಎಂಬ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಇನ್ನೊಂದು ಕೆಳಜಾತಿ ಪಾತ್ರವನ್ನು ಉಲ್ಲೇಖಿಸುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು.

ಚೀಂಕ್ರ: ಏನ್ ಪೊಮ್ಮಣ್ಣ ನಿನ್ ಸಂಗಡ ಮಗಳು ಬ್ಯಾರೆ ಬಂದಿದಾಳೆ ಆಯ್ತು ಸಂಪಾದನೆಗೆ ಒಂದು ದಾರಿ.

ಪೊಮ್ಮ: ಏನ್ ಮಾಡೋದು ಚೀಂಕ್ರಣ್ಣ ಹೊಟ್ಟೆ ಪಾಡೊಂದು ಇದಿಯಲ್ಲ ಯಾರೀ ಮಕ್ಕಳು ಒಳ್ಳೆ ಗಟ್ಟಿ ಮುಟ್ನವು

ಚೀಂಕ್ರ: ಬೋಗ್ನಹಳ್ಳಿಯ ಚೋಮನವು ಇವ ಚನಿಯ, ಅವ ಗುರುವ. ಚಲನಚಿತ್ರ: (ಚೋಮನ ದುಡಿ)

ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಇನ್ನೊಂದು ಕೆಳಜಾತಿಯ ಪಾತ್ರವನ್ನು ಉಲ್ಲೇಖಿಸಿವೆ. ಆ ಪಾತ್ರವನ್ನು ಬೋಗ್ನಹಳ್ಳಿಯ ಚೋಮ ಎಂದು ಹೆಸರಿಡಿದು ಏಕವಚನದಲ್ಲಿ ಉಲ್ಲೇಖಿಸಲಾಗಿದೆ. ಇದು ಪರೋಕ್ಷ ಉಲ್ಲೇಖವಾಗಿರುವುದರಿಂದ ಏಕವಚನದಿಂದಲೇ ಉಲ್ಲೇಖಿಸಲಾಗಿದೆ. ಇನ್ನೊಂದು ಪ್ರತ್ಯಕ್ಷ ಉಲ್ಲೇಖವಿದೆ. ಈ ಮೇಲಿನ ಸಂಭಾಷಣೆಯಲ್ಲಿ ಚೋಮನ ಮಕ್ಕಳನ್ನು ಇವ 'ಚನಿಯ', ಅವ

'ಗುರುವ' ಎಂದು ಪ್ರತ್ಯಕ್ಷ ಉಲ್ಲೇಖವಾದರೂ ಏಕವಚನದಲ್ಲಿ ಉಲ್ಲೇಖಿಸಿದ್ದಾರೆ. ಯಾಕೆಂದರೆ ಚನಿಯ ಮತ್ತು ಗುರುವ ಎಂಬ ಕೆಳಜಾತಿ ಪಾತ್ರಗಳು ಚೇಂಕ್ರ ಎಂಬ ಪಾತ್ರಕ್ಕಿಂತ ವಯಸ್ಸಿನಲ್ಲಿ ಕಿರಿಯ ಪಾತ್ರಗಳಾಗಿವೆ. ಆದ್ದರಿಂದ ಪ್ರತ್ಯಕ್ಷ ಉಲ್ಲೇಖದಲ್ಲೂ ಏಕವಚನದಿಂದ ಉಲ್ಲೇಖಿಸಲಾಗಿದೆ.

ಚೋಮನದುಡಿ ಚಲನಚಿತ್ರದಲ್ಲಿಯೇ ಕೆಳಜಾತಿಯ ವ್ಯಕ್ತಿ ತನ್ನ ಹೆಂಡತಿಯನ್ನು ಜಾತಿಗೆ ಆರೋಪಿಸಿ ಉಲ್ಲೇಖಿಸುವುದನ್ನು ನೋಡಬಹುದು. ಉದಾಹರಣೆಗೆ "ಹೊಲತಿ ಇದ್ದಾಗಿಂದ್ಲೂ ಅದೊಂದು ಆಸೆ ಒಡೆಯ ಈಗ ಹ್ಯಾಗೂ ಎತ್ತಿನ ಜೋಡಿ ಇದೆ ಉಳೋದಿಕ್ಕೆ ಸಾಯೋದ್ರೊಳಗೆ ನನ್ದೆ ಒಂದು ಗೇಣಿ ನೆಲ ಮತ್ತು ಭಿತ್ತಿದ್ರೆ ಬದುಕಿದ್ದಕ್ಕೂ ಒಂದು ಲೆಕ್ಕ" (ಚಲನಚಿತ್ರ : ಚೋಮನ ದುಡಿ)

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಕೆಳಜಾತಿಯ ವ್ಯಕ್ತಿ ತನ್ನ ಹೆಂಡತಿಯನ್ನು 'ಹೊಲತಿ' ಎಂದು ಉಲ್ಲೇಖಿಸಿರುವುದು ಕಾಣುತ್ತದೆ. ಅಂದರೆ ಇಲ್ಲಿ ಹೆಂಡತಿ ಎಂಬ ಅರ್ಥ ಮಾತ್ರ ಬರುತ್ತದೆ. ಕೆಳಜಾತಿ ಪಾತ್ರ ತನ್ನ ಹೆಂಡತಿ ಹೊಲತಿ ಎಂದರೆ ಯಾವುದೇ ರೀತಿಯ ಅಗೌರವ ಉಂಟಾಗುವುದಿಲ್ಲ. ಬೇರೆ ಸಮುದಾಯದವಳು 'ಹೊಲತಿ' ಎಂದು ಉಲ್ಲೇಖಿಸಿದರೆ ಆ ಪಾತ್ರಕ್ಕೆ ಅಗೌರವ ಉಂಟಾಗುತ್ತದೆ. ಅವರ ಸಮುದಾಯವನ್ನು ಸೂಚಿಸುತ್ತದೆ. ಆ ಸಾಮಾಜಿಕ ಸ್ತರವಿನ್ಯಾಸವನ್ನು ಸಹ ಸೂಚಿಸುತ್ತದೆ.

ದೇವಕಿ ಎಂ.ಶೆಟ್ಟಿ ಅವರ 'ಜಾತಿ ಭೂತಕ್ಕೆ ಬಲಿ' ಎಂಬ ಕಥೆಯಲ್ಲಿ ಇದೇ ರೀತಿ ಕೆಳಜಾತಿಯ ಮಹಿಳೆ ತನ್ನ ಗಂಡನನ್ನು ಜಾತಿಗೆ ಆರೋಪಿಸಿ ಉಲ್ಲೇಖ ಮಾಡಿರುವುದನ್ನು ಕಾಣಬಹುದು. ಉದಾಹರಣೆಗೆ

"ಏನು ಮಾಡಿದೆ ಚೆನ್ನಿ ಬಂದು ಕುಳಿತೆನಲ್ಲ. ನಾನು ಬಂದದ್ದು ಆಗಲಿಲ್ಲವೇನು? ನಿನ್ನ ಗಂಡ ಎಲ್ಲಿ ಹೋದನೇ?ನನ್ನ ಮಾದಿಗ ಇನ್ನೂ ಬಂದಿಲ್ಲ. ಈಗ ಬಂಧನು ತಾಯಿ' (ಉಷಾ ಪಿ ರೈ.ಕೆ (ಪ್ರ.ಸಂ) ಲೇಖಕಿಯ ಕಥೆಗಳು ಭಾಗ-೨, ಪುಟ-೧೭೯)

ಈ ಮೇಲಿನ ಉದಾಹರಣೆಯಲ್ಲಿಯೂ ಸಹ ಕೆಳಜಾತಿ ಮಹಿಳೆ ತನ್ನ ಗಂಡನನ್ನು 'ಮಾದಿಗ' ಎಂದೇ ಉಲ್ಲೇಖಿಸುತ್ತಿರುವುದು ನೋಡಬಹುದು. ಇಲ್ಲಯೂ 'ನನ್ನ ಮಾದಿಗ' ಎಂದರೆ 'ನನ್ನ ಗಂಡ' ಎಂಬ ಅರ್ಥವನ್ನು ಸೂಚಿಸುತ್ತದೆ. ಉಲ್ಲೇಖದ ಬಳಕೆಯ ನೆಲೆ ಈ ರೀತಿಯಾಗಿರುತ್ತವೆ.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಕೆಳಜಾತಿಯ ಪಾತ್ರಗಳು ಕೆಳ ಜಾತಿಯ ಪಾತ್ರಗಳನ್ನು ಉಲ್ಲೇಖಮಾಡುವಾಗ ಹೆಸರಿಡಿದು ಏಕವಚನದಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಪರೋಕ್ಷ ಉಲ್ಲೇಖದಲ್ಲಿ ಏಕವಚನದಿಂದಲೇ ವ್ಯಕ್ತಿಗಳನ್ನು ಉಲ್ಲೇಖಿಸಲಾಗುತ್ತದೆ. ಕೆಳಜಾತಿ ವ್ಯಕ್ತಿಗಳನ್ನು ವಯಸ್ಸಿನ ಆಧಾರದ ಮೇಲೆ ಉಲ್ಲೇಖಸಲಾಗಿದೆ. ಉಲ್ಲೇಖದ ನೆಲೆಯಲ್ಲಿ

ಬಹುವಚನಗಳನ್ನು ಬಳಸಿರುವುದು ಕಂಡು ಬರುವುದಿಲ್ಲ. ಹಾಗೆಯೇ ಕೆಳಜಾತಿ ಪುರುಷ ತನ್ನ ಹೆಂಡತಿಯನ್ನು ಉಲ್ಲೇಖಿಸುವಾಗ 'ಹೊಲತಿ' ಎಂದು ಕೆಳಜಾತಿ ಮಹಿಳೆ ತನ್ನ ಗಂಡನನ್ನು ಉಲ್ಲೇಖಿಸುವಾಗ 'ಮಾದಿಗ' ಎಂದು ಜಾತಿಯನ್ನು ಆ ವ್ಯಕ್ತಿಗಳಿಗೆ ಬಳಸಿ ಉಲ್ಲೇಖಿಸಿರುವ ಉದಾಹರಣೆಗಳು ಸಹ ಇಲ್ಲಿ ದೊರೆಯುತ್ತವೆ. ಈ ರೀತಿಯಾಗಿ ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಉಲ್ಲೇಖಿಸುವ ಬಳಕೆಯಾಗುವ ನೆಲೆಗಳನ್ನು ಕಾಣಬಹುದು.

೩.೨.೪. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವ ಸಂದರ್ಭ

ಸಾಮಾನ್ಯವಾಗಿ ಎರಡು ರೀತಿಯಲ್ಲಿ ಉಲ್ಲೇಖ ಮಾಡುವುದನ್ನು ಕಾಣಬಹುದು. ಪ್ರತ್ಯಕ್ಷ ಉಲ್ಲೇಖದಲ್ಲಿ ಗೌರವ ಸೂಚಕ ಬಹುವಚನಗಳನ್ನು ಬಳಸಿ ಉಲ್ಲೇಖಿಸಿದರೆ, ಪರೋಕ್ಷ ಉಲ್ಲೇಖದಲ್ಲಿ ಏಕವಚನವನ್ನು ಬಳಸಿವುದು ಕಾಣಬಹುದು. ವಯಸ್ಸು ಮತ್ತು ಲಿಂಗದ ಆಧಾರದ ಮೇಲೆ ಉಲ್ಲೇಖಗಳು ಬಳಕೆಯಾಗುತ್ತವೆ. ಹಿರಿಯರಾದರೆ ಬಹುವಚನದಿಂದ ಉಲ್ಲೇಖಿಸಲಾಗುತ್ತದೆ. ಕಿರಿಯರಾದರೆ ಹೆಸರಿಡಿದು ಏಕವಚನದಿಂದ ಉಲ್ಲೇಖಿಸಲಾಗುತ್ತದೆ. ಮಹಿಳೆಯರಾದರೆ ಪುರುಷರನ್ನು ಗೌರವಸೂಚಕವಾಗಿ ಉಲ್ಲೇಖಿಸಿವೆ. ಮಹಿಳೆಯನ್ನು ಹಿರಿಯರಾದರೆ ಬಹುವಚನದಿಂದ, ಕರಿಯರಾದರೆ ಏಕವಚನದಿಂದ ಉಲ್ಲೇಖಿಸಿದ ನೆಲೆಗಳನ್ನು ಕಾಣಬಹುದು. ಈ ರೀತಿಯ ಉಲ್ಲೇಖದ ಬಳಕೆಯ ನೆಲೆಗಳನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಮತ್ತು ಚಲನಚಿತ್ರಗಳಲ್ಲಿ ದೊರೆಯುವ ಸಂಭಾಷಣೆಯ ಆಧಾರದ ಮೇಲೆ ಚರ್ಚಿಸಲಾಗುವುದು.

ಉದಾಹರಣೆಗೆ

ಅನಂತಮೂರ್ತಿ ಯು.ಆರ್, ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಮೇಲ್ಜಾತಿಯವರು ಮಾತನಾಡುವ ಸಂದರ್ಭದಲ್ಲಿ ಮೇಲ್ಜಾತಿಯವರನ್ನು ಉಲ್ಲೇಖ ಮಾಡುವ ಕ್ರಮವನ್ನು ಗಮನಿಸಬಹುದು. "ಗರುಡಾಚಾರ್ಯನ ಮಗ ಮನೆ ಬಿಟ್ಟು ಓಡಿ ಹೋಗಿ ಮಿಲಿಟರಿ ಸೇರುವಂತೆ ಪ್ರೇರೇಪಿಸಿದವ ನಾರಾಯಣಪ್ಪನಲ್ಲದೆ ಯಾರು? ಅವನಿಗೆ ಪ್ರಾಣೇಶಚಾರ್ಯರು ವೇದ ಕಲಿಸಿ ಕೂಡ ಕೊನೆಗೆ ನಡೆದದ್ದು ನಾರಣಪ್ಪನ ಮಾತೆ"

(ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ-೧೫)

ಈ ಮೇಲಿನ ಉದಾಹರಣೆಯಲ್ಲಿ ಪರೋಕ್ಷ ಉಲ್ಲೇಖ ಮತ್ತು ಪ್ರತ್ಯಕ್ಷ ಉಲ್ಲೇಖ ಎರಡೂ ಬಳಕೆಯಾಗಿವೆ. ಮೇಲ್ಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಬಳಕೆಯಾದ ಉಲ್ಲೆಖ, 'ಗರುಡಚಾರ್ಯನ' ಎಂದು ಪರೋಕ್ಷ ಉಲ್ಲೇಖದಲ್ಲಿ ಹೆಸರನ್ನು ಪೂರ್ಣ ರೂಪದಲ್ಲಿ ಉಲ್ಲೇಖಮಾಡಿದರೂ 'ಅವನ' ಎಂಬ ಏಕವಚನ ರೂಪವನ್ನು ಉಲ್ಲೇಖಿಸಿ ಬಳಕೆ ಮಾಡಲಾಗಿದೆ. ಪ್ರತ್ಯಕ್ಷ ಉಲ್ಲೇಖದಲ್ಲಿ 'ಪ್ರಾಣೇಶಾಚಾರ್ಯರು' ಎಂದು ಗೌರವಸೂಚಕ ಬಹುವಚನದಿಂದ ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಮೇಲ್ಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ

ಪ್ರತ್ಯಕ್ಷ ಮತ್ತು ಪರೋಕ್ಷ ಉಲ್ಲೇಖದಲ್ಲಿ ಬಳಕೆಯ ನೆಲೆಗಳನ್ನು ನಿಯಮಕ್ಕೆ ಅನುಸಾರವಾಗಿ ಬಂದಿರುವುದನ್ನು ಕಾಣಬಹುದು.

ಗಿರೀಶ ಕಾರ್ನಾಡ ಅವರ ನಿರ್ದೇಶನದ, ಶ್ರೀಕೃಷ್ಣ ಆಲನಹಳ್ಳಿ ಕಾದಂಬರಿ ಆಧಾರಿತ 'ಕಾಡು' ಚಲನಚಿತ್ರದಲ್ಲಿ ಮೇಲ್ಜಾತಿ ಮಹಿಳೆಯು ಮಾತನಾಡುವಾಗ ಮೇಲ್ಜಾತಿ ಪಾತ್ರವನ್ನು ಉಲ್ಲೇಖ ಮಾಡಿರುವ ನೆಲೆಯನ್ನು ನೋಡಬಹುದು. ಮೇಲ್ಜಾತಿಯ ಪಾತ್ರಗಳಾದ ಕಮಲಕ್ಕ ಮತ್ತು ಕಲ್ಯಾಣಿ ಮಾತನಾಡು ಸಂದರ್ಭ ಈ ಕೆಳಗಿನಂತಿದೆ.

ಕಲ್ಯಾಣಿ: ನೋಡು ಕಮಲಕ್ಕ ಇಲ್ಲಿ ತೊಡೆ ಮ್ಯಾಲೆಲ್ಲ ಬರೆ ಹಾಕಿ..

ಕಮಲಕ್ಕ: ಅಯ್ಯೋ..ಥೇ...ಥೇ...ದೇವ್ರೆ ಹೆಂಗ್ ಮನ್ಸು ಬಂತು ಆ ಸಿಂಗಪ್ಪವ್ರಗೆ ದನಕ್ಕೆ ಬರೆ ಹಾಕ್ದಂಗೆ......ಅವ್ರು ಒಬ್ರು ಮನ್ಸುರೆ ಅಲ್ಲ ಬುಡು" (ಚಲನಚಿತ್ರ: ಕಾಡು)

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಮೇಲ್ಜಾತಿ ಮಹಿಳಾ ಪಾತ್ರಗಳು ಮೇಲ್ಜಾತಿ ಪುರುಷ ಪಾತ್ರವನ್ನು ಉಲ್ಲೇಖಿಸುವಾಗ 'ಆಸಿಂಗಪ್ಪವ್ರಿಗೆ' ಎಂದು ಬಹುವಚನದಿಂದ ಉಲ್ಲೇಖಿಸಲಾಗಿದೆ ಪರೋಕ್ಷ ಉಲ್ಲೇಖದಲ್ಲಿ ಸಾಮಾನ್ಯವಾಗಿ ಏಕವಚನದಿಂದ ಉಲ್ಲೇಖಿಸಿದ ಪ್ರಕ್ರಿಯೆ ಇದೆ. ಮನಸ್ಸಿನಲ್ಲಿ ಕಮಲಕ್ಕ ಪಾತ್ರಕ್ಕಿಂತ ಹಿರಿಯ ಪಾತ್ರವಾದ್ದರಿಂದ ಏನಾದರೂ ಆ ರೀತಿಯಾತಿ ಬಹುವಚನವನ್ನು ಉಲ್ಲೇಖದಲ್ಲಿ ಬಳಸಿರಬಹುದು. 'ಅವರಿಗೆ' ಎಂಬ ಬಹುವಚನವನ್ನು ಮೇಲ್ಜಾತಿ ಪಾತ್ರ ಮೇಲ್ಜಾತಿ ಪಾತ್ರಕ್ಕೆ ಉಲೇಖಿಸಿದೆ. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಯನ್ನು ಕಾಣಬಹುದು.

೩.೨.೫. ನಿರೂಪಣೆಯಲ್ಲಿ ಉಲ್ಲೇಖದ ಬಳಕೆಯ ನೆಲೆ

ಸೃಜನಶೀಲ ಕೃತಿಗಳಲ್ಲಿ ಲೇಖಕರು ನಿರೂಪಣೆಯನ್ನು ಮಾಡುವ ಸಂದರ್ಭದಲ್ಲಿ ಮೇಲ್ಜಾತಿ ಪಾತ್ರವನ್ನು ಮತ್ತು ಕೆಳಜಾತಿ ಪಾತ್ರವನ್ನು ಚಿತ್ರಿಸುವ ಸಂದರ್ಭದಲ್ಲಿ ಆ ಪಾತ್ರಗಳ ವಸ್ತುಸ್ಥಿತಿಯನ್ನು ಹೇಳುವ ಸಂದರ್ಭದಲ್ಲಿ ಲೇಖಕರು ಆ ಪಾತ್ರಗಳ ಸಾಮಾಜಿಕತೆಗೆ ಅನುಗುಣವಾಗಿ ಪಾತ್ರಗಳನ್ನು ಉಲ್ಲೇಖ ಮಾಡುತ್ತಿರುತ್ತಾರೆ. ಜಾತಿ, ಲಿಂಗ, ವಯಸ್ಸಿಗೆ ಅನುಗುಣವಾಗಿ ಉಲ್ಲೇಖ ಮಾಡುವುದನ್ನು ಕಾಣಬಹುದು. ಗೌಡರು, ಹೆಗ್ಗಡೆಯವರು, ಬ್ರಾಹ್ಮಣರು ಮುಂತಾದ ಮೇಲ್ಜಾತಿ ಪಾತ್ರಗಳು ಬಂದಾಗ ಮಾಡುವ ನಿರೂಪಣೆಗೂ, ಹೊಲೆಯರು, ಮಾದಿಗರು ಇನ್ನು ಮುಂತಾದ ಕೆಳಜಾತಿ ಪಾತ್ರಗಳು ಬಂದಾಗ ನಿರೂಪಿಸಿರುವ ನಿರೂಪಣೆಗೂ ಒಂದೇ ರೀತಿಯಾಗಿರುವುದಿಲ್ಲ. ಮೇಲ್ಜಾತಿಯವರಿಗೆ ಗೌರವ ಸೂಚಕ ಮತ್ತು ಬಹುವಚನಗಳನ್ನು ಅಂತಸ್ತಿಗೆ ಅನುಗುಣವಾಗಿ ಉಲ್ಲೇಖ ಮಾಡಲಾಗುತ್ತದೆ. ಕೆಳಜಾತಿ ಪಾತ್ರಗಳಿಗೆ ಹೆಸರಿಡಿದು ಏಕವಚನದಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಗಳು ಇರುವುದನ್ನು ಕಾಣಬಹುದು.

ಉದಾಹರಣೆಗೆ

ಸಂಕಪ್ಪಯ್ಯ/ನ-ಸಂಪ್ಪಯ್ಯನವರು

ಸುಬ್ಬಣ್ಣ ಹೆಗ್ಗಡೆ/ತಿ-ಸುಬ್ಬಣ್ಣ ಹೆಗ್ಗಡೆಯವರು

ಪ್ರಾಣೇಶಾಚಾರ್ಯ/ನ-ಪ್ರಾಣೇಶಾಚಾರ್ಯರು

ದಾನಮ್ಮ ಹೆಗ್ಗಡತಿ/ಯ-ದಾನಮ್ಮ ಹೆಗ್ಗಡತಿಯವರು

ಈ ರೀತಿಯಾಗಿ ಮೇಲ್ಜಾತಿಯವರನ್ನು ಹೆಸರನ್ನು ಗೌರವಸೂಚಕವಾಗಿ ಬಳಸಿ ಆ ನಂತರ 'ಅವರು' ಎಂಬ ಬಹುವಚನ ಸೂಚಕವನ್ನು ಬಳಸಲಾಗುತ್ತದೆ. ಕೆಳಜಾತಿಯವರನ್ನು ಬಳಸಿರುವ ಕ್ರಮವನ್ನು ನೋಡುವುದಾದರೆ.

ಉದಾಹರಣೆಗೆ:

ಚೋಮ-ಚೋಮನ

ದುರ್ಗ-ದುರ್ಗನ

ಚಂದ್ರಿ-ಚಂದ್ರಿಯ

ಬೆಳ್ಳಿ-ಬೆಳ್ಳಿಯ

ಈ ಮೇಲಿನ ಪಟ್ಟಿಯಲ್ಲಿಯ ಕೆಳಜಾತಿ ಹೆಸರುಗಳು ಏಕವಚನದಲ್ಲಿ ಉಲ್ಲೇಖಗೊಂಡಿವೆ. ಚೋಮಣ್ಣನವರು, ಚಂದ್ರಮ್ಮನವರು, ದುರ್ಗಪ್ಪನವರು ಎಂದು ನಿರೂಪಣೆಯಲ್ಲಿ ಉಲ್ಲೇಖವಾಗಿರುವುದಿಲ್ಲ. ಚೋಮ ಚೋಮನ ಈ ಎರಡು ಹಂತಕ್ಕೆ ಮಾತ್ರ ಸೀಮಿತವಾಗುತ್ತವೆ. ಕೆಳಜಾತಿ ಪಾತ್ರಗಳ ಉಲ್ಲೇಖ ನಿರೂಪಣೆಯಲ್ಲಿಯೂ ಸಹ ಏಕವಚನದಲ್ಲಿ ಬಳಕೆಯಾಗಿರುವುದನ್ನು ನೋಡಬಹುದು.

ಮೇಲ್ಜಾತಿಯ ಪಾತ್ರಗಳು ಮೂರು ಹಂತದಲ್ಲಿ ಉಲ್ಲೇಖಗೊಳ್ಳುತ್ತವೆ. ಸಂಕಪ್ಪ-ಸಂಕಪ್ಪಯ್ಯ-ಸಂಕಪ್ಪಯ್ಯನವರು ಎಂದು ಮೂರು ಹಂತದಲ್ಲಿ ಮೇಲ್ಜಾತಿ ಪಾತ್ರಗಳು ನಿರೂಪಣೆಯಲ್ಲಿ ಉಲ್ಲೇಖಗೊಳ್ಳುವುದನ್ನು ನೋಡಬಹುದು. ನಿರೂಪಣೆಯಲ್ಲೂ ಸಹ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಸಾಮಾಜಿಕ ಸ್ತರವಿನ್ಯಾಸ ಕಾಣಬಹುದು. ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಲೇಖಕರು ನಿರೂಪಣೆಯಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸಿರುವ ಸಂದರ್ಭಗಳನ್ನು ನೋಡಬಹುದು.

"ಸಿಂಭಾವಿ ಭರಮ್ಮೆ ಹೆಗ್ಗಡೆಯವರ ದೊಡ್ಡಿ ಚೌಕಿ ಮನೆಯ ಹೆಬ್ಬಾಗಿಲು ದಾಟಿದ ಅವರ ಮನೆಯ ಜೀತದಾಳು, ಹೊಲೆಯರ ನಾಯಿಗುತ್ತಿ ಹೊರ ಅಂಗಳದ ಕಡೆಯ ಮೆಟ್ಟಿಲಲ್ಲಿ ನಿಂತು ಆಕಾಶದ ಕಡೆಗೆ ಬಿಡುಗಣ್ಣಾಗಿ ನೋಡುತ್ತಿದ್ದನು. ಮನೆಯ ಪಕ್ಕದಲ್ಲಿದ್ದ ಆ

ತೋಟದಿಂದ ಒಂದು ಕೈಯಲ್ಲಿ ಕರಿಬಾಳೆಯ ಗೊನೆಯನ್ನು ಮತ್ತೊಂದು ಕೈಯಲ್ಲಿ ಬಾಳೆಯೆಲೆಗಳ ಕಟ್ಟೊಂದನ್ನು ಹಿಡಿದು, ಆರಡಿ ಎತ್ತರವಿದ್ದರೂ ಅತಿ ನಿಧಾನವಾಗಿ ಬರುತ್ತಿದ್ದ ಮನೆಗೆಲಸದ ಮರಾಟಿ ಮಂಜನು...(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧)

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಲೇಖಕರು ನಿರೂಪಣೆಯ ಸಂದರ್ಭದಲ್ಲಿ ಮೂರು ಪಾತ್ರಗಳನ್ನು ಭಿನ್ನವಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ.

೧. ಸಿಂಭಾವಿ ಭರಮೈ ಹೆಗ್ಗಡೆಯವರು

೨. ಹೊಲೆಯರ ನಾಯಿಗುತ್ತಿ

೩. ಮನೆಗೆಲಸದ ಮರಾಟಿ ಮಂಜನು

ಹೀಗೆ ಮೂರು ಪಾತ್ರಗಳನ್ನು ನಿರೂಪಣೆಯಲ್ಲಿ ಉಲ್ಲೇಖಿಸಿರುವುದು ಕಾಣಬಹುದು. 'ಸಿಂಭಾವಿ ಭರಮೈ ಹೆಗ್ಗಡೆಯವರ' ಂದು ನಿರೂಪಣೆಯಲ್ಲಿ ಅವರಿಗೆ ಗೌರವ ಮತ್ತು ಬಹುವಚನ ಸೂಚಕಗಳನ್ನು ಬಳಸಿ ಉಲ್ಲೇಖಿಸಿದ್ದಾರೆ. 'ಹೊಲೆಯರ ನಾಯಿಗುತ್ತಿ' ಎಂದು ಕೆಳಜಾತಿಯ ಪಾತ್ರವನ್ನು ಏಕವಚನದಲ್ಲಿ ನಿರೂಪಿಸಲಾಗಿದೆ. 'ಮನೆಗೆಲಸದ ಮರಾಟಿ ಮಂಜನು' ಎಂದು ಉಲ್ಲೇಖಿಸಲಾಗಿದೆ. ಈ ನಿರೂಪಣೆಯಲ್ಲಿ ಮೂರು ಪಾತ್ರಗಳ ಸಾಮಾಜಿಕತೆಯನ್ನು ಹೇಳಲಾಗುತ್ತದೆ. ಹೊಲೆಯ ನಾಯಿಗುತ್ತಿಯವರು ಎಂದು ಉಲ್ಲೇಖಿಸಲು ನಿರೂಪಣೆಯಲ್ಲಿ ಸಾಧ್ಯವಿಲ್ಲ ಎಂದು ಹೇಳಬಹುದು. ಲೇಖಕರು ಆ ಪಾತ್ರಗಳ ಸಾಮಾಜಿಕತೆಗೆ ಅನುಗುಣವಾಗಿ ಉಲ್ಲೇಖವನ್ನು ಮಾಡಿದ್ದಾರೆ. ಈ ರೀತಿಯಾಗಿ ಉಲ್ಲೇಖದ ಬಳಕೆಯ ನೆಲೆಗಳನ್ನು ಕಾಣಬಹುದು. ನಿರೂಪಣೆಯಲ್ಲಿಯೂ ಸಹ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದಾಗಿದೆ.

ಸಮಾಜದಲ್ಲಿ ವ್ಯಕ್ತಿಗಳನ್ನು ಉಲ್ಲೇಖಿಸುವಾಗ ಅವರ ಸಾಮಾಜಿಕತೆ, ಅಂತಸ್ತು, ವರ್ಗಕ್ಕೆ ಅನುಗುಣವಾಗಿ ಉಲ್ಲೇಖ ಮಾಡಲಾಗುತ್ತದೆ. ಪ್ರತ್ಯಕ್ಷ ಅಥವಾ ಪರೋಕ್ಷ ಉಲ್ಲೇಖದಲ್ಲಿ ವ್ಯಕ್ತಿಗಳ ಹೆಸರನ್ನು ಉಲ್ಲೇಖಿಸಲಾಗುತ್ತದೆ. ಅದರಲ್ಲಿ ಕೆಳಜಾತಿ ಪಾತ್ರಗಳ ಹೆಸರುಗಳನ್ನು ಏಕವಚನದಿಂದಲೇ ಉಲ್ಲೇಖಿಸಲಾಗಿದೆ. ಪ್ರತ್ಯಕ್ಷ ಉಲ್ಲೇಖ ಪರೋಕ್ಷ ಉಲ್ಲೇಖ ಎರಡು ನೆಲೆಯಲ್ಲಿಯೂ ಕೆಳಜಾತಿ ಪಾತ್ರಗಳು ಏಕವಚನದಲ್ಲಿ ಉಲ್ಲೇಖಗೊಂಡಿವೆ. ಬಹುವಚನಗಳನ್ನು ಬಳಸಿ ಉಲ್ಲೇಖ ಮಾಡಿರುವುದಿಲ್ಲ. ಮೇಲ್ಜಾತಿಯವರಿರಬಹುದು, ನಿರೂಪಣೆಯಲ್ಲಿರಬಹುದು ಏಕವಚನದಲ್ಲಿಯೇ ಕೆಳಜಾತಿ ಪಾತ್ರಗಳು ಉಲ್ಲೇಖಗೊಂಡಿವೆ. ಮೇಲ್ಜಾತಿ ಪಾತ್ರಗಳು ಎರಡು ನೆಲೆಯಲ್ಲಿ ಉಲ್ಲೇಖಗೊಂಡಿವೆ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉಲ್ಲೇಖಿಸುವಾಗ ಹೆಚ್ಚಾಗಿ ಗೌರವಸೂಚಕ ಬಹುವಚನಗಳಿಂದಲೇ ಉಲ್ಲೇಖಿಸಿರುವುದನ್ನು ಕಾಣಬಹುದು. ಸಮಾಜದಲ್ಲಿ ಜಾತಿ, ಅಂತಸ್ತು, ವರ್ಗಕ್ಕೆ ಅನುಗುಣವಾಗಿ ಉಲ್ಲೇಖದ ಬಳಕೆಯ ನಲೆಗಳು ರೂಪುಗೊಂಡಿವೆ. ಈ ಎಲ್ಲಾ ರೀತಿಯ ಬಳಕೆಯಿಂದ ಕಾದಂಬರಿ, ಸಿನಿಮಾ ಹಾಗೂ ನಾಟಕಗಳಲ್ಲಿನ ಸಂಭಾಷಣೆ,

ನಿರೂಪಣೆಗಳಲ್ಲಿ ಲೇಖಕರು ಹಾಗೂ ನಿರ್ದೇಶಕರುಗಳು ತಮ್ಮ ಕಥನ ನಿರೂಪಣೆಗಳಲ್ಲಿ ಸಾಮಾಜಿಕ ಸ್ತರವಿನ್ಯಾಸಗಳು ಕಂಡುಬರುತ್ತವೆ.

ಸಂಬೋಧನೆ ಮತ್ತು ಉಲ್ಲೇಖದ ಬಳಕೆಯ ನೆಲೆಗಳು ಸಮಾಜದಲ್ಲಿ ಜಾತಿ, ಲಿಂಗ, ವಯಸ್ಸು, ವರ್ಗ, ಅಂತಸ್ತು ಇನ್ನು ಮುಂತಾದ ಸಾಮಾಜಿಕ ಭಿನ್ನಾಂಶಗಳನ್ನು ಅನುಸರಿಸಿ ಪಾತ್ರಗಳು ನಿರೂಪಣೆಗೊಂಡಿರುತ್ತವೆ. ಈ ಅಧ್ಯಾಯದಲ್ಲಿ ಮುಖ್ಯವಾಗಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳನ್ನು ಗಮನದಲ್ಲಿಟ್ಟುಕೊಂಡು ಸಂಬೋಧನೆ ಮತ್ತು ಉಲ್ಲೇಖದ ಬಳಕೆಯ ನೆಲೆಗಳನ್ನು, ಸಾಮಾಜಿಕ ಸ್ತರವಿನ್ಯಾಸವನ್ನು ಗಮನಿಸಬಹುದಾಗಿದೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಮಾಜದ ವಾಸ್ತವದಲ್ಲಿ ಕಾಣುವಂತೆ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಆ ಸಂದರ್ಭದ, ಪರಿಸರದ, ಸ್ತರವಿನ್ಯಾಸದ, ವಾಸ್ತವದ ಚಿತ್ರಣವನ್ನು ಕಟ್ಟಿಕೊಡಲಾಗಿದೆ.

ಸಮಾಜದಲ್ಲಿ ಜಾತಿಯ ಅಸಮಾನತೆಗಳು ಮತ್ತು ಆರ್ಥಿಕ ಅಸಮಾನತೆಗಳು ವ್ಯಕ್ತಿಯನ್ನು ಮತ್ತು ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತಿರುತ್ತವೆ. ಈ ಅಸಮಾನತಗಳೆ ಸಾಮಾಜಿಕ-ಸಾಂಸ್ಕೃತಿಕ ರಾಜಕಾರಣಕ್ಕೆ ಕಾರಣವಾಗುತ್ತವೆ. ಜಾತಿ, ಲಿಂಗ, ವರ್ಗ, ಅಂತಸ್ತು ಇನ್ನು ಮುಂತಾದ ಸಾಮಾಜಿಕ ಭಿನ್ನಾಂಶಗಳನ್ನು ಸಂಬೋಧನೆ ಮತ್ತು ಉಲ್ಲೇಖದ ಬಳಕೆಯ ನೆಲೆಯ ಮೂಲಕ ನೋಡಿ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಲಾಗಿದೆ. ಈ ಎಲ್ಲಾ ಅಂಶಗಳು ಸಾಮಾಜಿಕ ಸ್ತರವಿನ್ಯಾಸಕ್ಕೆ ಕಾರಣವಾಗುತ್ತವೆ.

* * *

. ಸಂಬೋಧನಾ ರೂಪಗಳ ಸ್ತರವಿನ್ಯಾಸದ ಕೋಷ್ಟಕಗಳ ಪಟ್ಟಿ

ಕೋಷ್ಟಕ–೧

ಕ್ರ.ಸಂ	ಸಂಬೋಧನಾ ರೂಪ	ಕೆಳಜಾತಿ ಪುರುಷ	ಮೇಲ್ಜಾತಿ ಪುರುಷನಿಗೆ
೧.	ಅಯ್ಯ	ಗುತ್ತಿ	ಮುಕುಂದಯ್ಯನಿಗೆ
೨.	ಆಚಾರ್ರೆ	ಪುಟ್ಟ	ಪ್ರಾಣೇಶಾಚಾರ್ಯನಿಗೆ
೩.	ಯಪ್ಪಾ	ಚನ್ನಾ	ಪಡದಯ್ಯನಿಗೆ
೪.	ಒಡೆಯ	ಪಿಳ್ಳ	ಜಗನ್ನಾಥನಿಗೆ
೫.	ಒಡೆಯ/ಧಣಿ	ಚೋಮ	ಸಂಕಪ್ಪಯ್ಯನಿಗೆ
೬.	ಬುದ್ಧಿ	ಕಾಳಣ್ಣ	ಆನಂದನಿಗೆ
೭.	ಗೌಡ್ರೇ	ಮಾದ	ಕಿರಿಗೌಡನಿಗೆ
೮.	ಧಣಿ	ಮುನಿಯ	ದೊಡ್ಡೇಗೌಡನಿಗೆ
೯	ಸ್ವಾಮಿ	ಗಾಲೂರಯ್ಯ	ಪಣಗಾರನಿಗೆ

ಕೋಷ್ಟಕ–೨

ಕ್ರ.ಸಂ	ಸಂಬೋಧನಾ ರೂಪ	ಕೆಳಜಾತಿ ಪುರುಷ	ಮೇಲ್ಜಾತಿ ಮಹಿಳೆಗೆ
೧.	ಅಮ್ಮಾರೇ	ಲಕ್ಕ	ರುಕ್ಮಿಣಿಗೆ
೨.	ಅವ್ವ	ಕಾಳಣ್ಣ	ಹೇಮಾವತಿಗೆ
೩.	ಯವ್ವಾ	ದುರ್ಗಪ್ಪ	ಸೂಗವ್ವನಿಗೆ

ಕೋಷ್ಟಕ–೩

ಕ್ರ.ಸಂ	ಸಂಬೋಧನಾ ರೂಪ	ಕೆಳಜಾತಿ ಮಹಿಳೆಗೆ	ಮೇಲ್ಜಾತಿ ಮಹಿಳೆಗೆ
೧.	ಅಕ್ಕ	ಪೀಂಚಲು	ಚೆನ್ನಮ್ಮನಿಗೆ
೨.	ಅವ್ವ	ಮಾತಂಗಿ	ಸತ್ಯಭಾಮೆಗೆ
೩.	ದೆತ್ತೀ	ಚೆನ್ನಿ	ಸಖೂಗೆ

ಕೋಷ್ಟಕ–೪

ಕ್ರ.ಸಂ	ಸಂಬೋಧನಾ ರೂಪ	ಮೇಲ್ಜಾತಿ ಪುರುಷ	ಕೆಳಜಾತಿ ಪುರುಷನಿಗೆ
೧.	ಯಾರಲೇ	ಪಡದಯ್ಯ	ಚನ್ನನಿಗೆ
೨.	ಏನೋ	ಕೇಶವಯ್ಯ	ಲಕ್ಕನಿಗೆ
೩.	ಅಲ್ಲೋ	ಸಂಗಪ್ಪಯ್ಯ	ಚೋಮನಿಗೆ
೪.	ಕಾಳಣ್ಣ	ಆನಂದ	ಕಾಳಣ್ಣನಿಗೆ
೫.	ಏನ್‌ಲೇ	ಕಿರಿಗೌಡ	ಮಾದನಿಗೆ
೬.	ಏನೋ	ದೊಡ್ಡೇಗೌಡ	ಮುನಿಯನಿಗೆ
೭	ಲೇ	ಪಣಗಾರ	ಗಾಲೂರಯ್ಯನಿಗೆ
೮.	ಏನ್ಲಾ	ಮಲ್ಲೇಶಪ್ಪ	ಸಣ್ಣಗೆ
೯	ದುರುಗಾ	ದುರುಗಪ್ಪ	ಶಾಂತಗೌಡನಿಗೆ

ಕೋಷ್ಟಕ–೫

ಕ್ರ.ಸಂ	ಸಂಬೋಧನಾ ರೂಪ	ಮೇಲ್ಜಾತಿ ಮಹಿಳೆ	ಕೆಳಜಾತಿ ಪುರುಷನಿಗೆ
೧.	ಕಾಳಣ್ಣ	ಹೇಮಾವತಿ	ಕಾಳಣ್ಣನಿಗೆ
೨.	ಮುನಿಯ	ಮೇಲ್ಜಾತಿ ಮಹಿಳೆ	ಮುನಿಯನಿಗೆ
೩.	ದುರುಗಪ್ಪ	ಸೂಗವ್ವ	ದುರುಗಪ್ಪನಿಗೆ

ಕೋಷ್ಟಕ–೬

ಕ್ರ.ಸಂ	ಸಂಬೋಧನಾ ರೂಪ	ಮೇಲ್ಜಾತಿ ಮಹಿಳೆ	ಕೆಳಜಾತಿ ಮಹಿಳೆಗೆ
೧.	ಏನೇ	ಚೆನ್ನಮ್ಮ	ಪೀಂಚಲುಗೆ
೨.	ಏನೇ ಲೇ	ಮೇಲ್ಜಾತಿ ಮಹಿಳೆ	ಕಾವೇರಿಗೆ
೩.	ಚೆನ್ನಿ	ಸಖೂ	ಚೆನ್ನಿಗೆ

ಅಧ್ಯಾಯ: ನಾಲ್ಕು

ಅಭಿವ್ಯಕ್ತಿ: ಪಾತ್ರಗಳ ವ್ಯಕ್ತಿನಾಮಗಳು

ಅಧ್ಯಾಯ: ನಾಲ್ಕು

ಅಭಿವ್ಯಕ್ತಿ: ಪಾತ್ರಗಳ ವ್ಯಕ್ತಿನಾಮಗಳು

೪.೧. ವ್ಯಕ್ತಿನಾಮಗಳು : ಸಾಮಾಜಿಕ ಆಯಾಮ

೪.೨ ವ್ಯಕ್ತಿನಾಮಗಳಲ್ಲಿ : ಜಾತಿ, ಸ್ತರಸೂಚಕ ಅಂಶಗಳು

೪.೨.೧. ಜಾತಿಸೂಚಕ ವ್ಯಕ್ತಿನಾಮಗಳು

೪.೨.೨. ಲಿಂಗ ಮತ್ತು ವ್ಯಕ್ತಿನಾಮಗಳು

೪.೨.೩. ವಯಸ್ಸು ಆಧಾರಿತ ವ್ಯಕ್ತಿನಾಮಗಳು

೪.೨.೪ ಶಿಕ್ಷಣ : ವ್ಯಕ್ತಿನಾಮಗಳು

೪.೨.೫. ಧರ್ಮ ಆಧಾರಿತ ವ್ಯಕ್ತಿನಾಮಗಳು

೪.೩. ವ್ಯಕ್ತಿನಾಮಗಳು : ಬಳಕೆಯ ನೆಲೆಗಳು

೪.೪. ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟ

ಈ ಅಧ್ಯಾಯದಲ್ಲಿ ಬಳಕೆಯಾಗಿರುವ ಸಂಕ್ಷೇತ ರೂಪಗಳು

ಕ್ರಸಂ. ಕಾದಂಬರಿ

೦೧. ಕಾರ್ಯ– ಅವರವಿಂದ ಮಾಲಗತ್ತಿ(ಕಾ–೧)

೦೨. ಕುಸುಮಬಾಲೆ–ದೇವನೂರು ಮಹದೇವ(ಕಾ–೨)

೦೩. ಗ್ರಾಮಾಯಣ–ರಾವಬಹದೂರ(ಕಾ–೩)

೦೪. ದಾಟು– ಎಸ್. ಎಲ್. ಭೈರಪ್ಪ(ಕಾ–೪)

೦೫. ಭಾರತೀಪುರ– ಯು. ಅನಂತಮೂರ್ತಿ(ಕಾ–೫)

೦೬. ಮಲೆಗಳಲ್ಲಿ ಮದುಮಗಳು– ಕುವೆಂಪು(ಕಾ–೬)

೦೭. ಮರಣ ಮಂಡಲ ಮಧ್ಯದೊಳಗೆ– ಮುಳ್ಳೂರು ನಾಗರಾಜು(ಕಾ–೭)

೦೮. ವೈಶಾಖ– ಚದುರಂಗ(ಕಾ–೮)

೦೯. ಸಂಸ್ಕಾರ–ಯು. ಅನಂತಮೂರ್ತಿ(ಕಾ–೯)

ಕ್ರಸಂ. ಚಲನಚಿತ್ರ

೧೦. ಆನಂದ ಭೈರವಿ(ಚ–೧೦)

೧೧. ಕಾಡು(ಚ–೧೧)

೧೨. ಕಾಮನ ಬಿಲ್ಲು(ಚ–೧೨)

೧೩. ಕಾವೇರಿ(ಚ–೧೩)

೧೪. ಕೃಷ್ಣ ನೀ ಬೇಗನೇ ಬಾರೋ(ಚ–೧೪)

೧೫. ಚೋಮನ ದುಡಿ(ಚ–೧೫)

೧೬. ಪಡುವಾರಳ್ಳಿ ಪಾಂಡವರು(ಚ–೧೬)

೧೭. ಮುನಿಯನ ಮಾದರಿ(ಚ–೧೭)

೧೮. ಸನಾದಿ ಅಪ್ಪಣ್ಣ(ಚ–೧೮)

೧೯. ಹುಲಿಯಾ(ಚ–೧೯)

೨೦. ಹೇಮಾವತಿ(ಚ–೨೦)

ಕ್ರಸಂ. ಕಥೆ

೨೧. ಅನ್ನ– ಹನೂರು ಚನ್ನಪ್ಪ(ಕ–೨೧)

೨೨. ಅಸ್ಪೃಶ್ಯ– ವಿಜಯ ಸಾಸೂರು(ಕ–೨೨)

೨೩. ಒಂದು ಹಳೇ ಚಡ್ಡಿ– ಮೊಗಳ್ಳಿ ಗಣೇಶ(ಕ–೨೩)

೨೪. ಕಿಚ್ಚು– ಮೊಗಳ್ಳಿ ಗಣೇಶ(ಕ–೨೪)

೨೫. ಕೊಂಡ– ಮೊಗಳ್ಳಿ ಗಣೇಶ(ಕ–೨೫)

೨೬. ಗಿಡ್ಡಿ– ಕೆ. ಸದಾಶಿವ(ಕ–೨೬)

೨೭. ಗೋದಾನ– ಶಾಂತರಸ(ಕ–೨೭)

೨೮. ಜಾತಿ ಭೂತಕ್ಕೆ ಬಲಿ– ದೇವಕಿ ಎಂ. ಶೆಟ್ಟಿ(ಕ–೨೮)

೨೯. ತಮಂಧದ ಕೇಡು– ಅಮರೇಶ ನುಗಡೋಣಿ(ಕ–೨೯)

೩೦. ತೂತಿನ ದುಡ್ಡು ಮತ್ತು ನೀರು– ಅರವಿಂದ ಮಾಲಗತ್ತಿ(ಕ–೩೦)

೩೧. ದೇವರ ಹೆಣ– ಕುಂ. ವೀರಭದ್ರಪ್ಪ(ಕ–೩೧)

೩೨. ಧನಿಯರ ಸತ್ಯನಾರಾಯಣ– ಕೊರಡ್ಕಲ್ ಶ್ರೀನಿವಾಸರಾವ್(ಕ–೩೨)

೩೩. ಧರೆ ಉರಿದರೆ– ಅಮರೇಶ ನುಗಡೋಣಿ(ಕ–೩೩)

೩೪. ಭತ್ತ– ಮೊಗಳ್ಳಿ ಗಣೇಶ(ಕ–೩೪)

೩೫. ಬಾಡೂಟ- ಮೊಗಳ್ಳಿ ಗಣೇಶ(ಕ-೩೫)

೩೬. ಬುಗುರಿ- ಮೊಗಳ್ಳಿ ಗಣೇಶ(ಕ-೩೬)

೩೭. ಮುಂಡನ-ಅರವಿಂದ ಮಾಲಗತ್ತಿ(ಕ-೩೭)

೩೮. ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ- ದೇವನೂರು ಮಹದೇವ(ಕ-೩೮)

೩೯. ಯಾರು ಅರಿಯದ ವೀರ- ಕುವೆಂಪು(ಕ-೩೯)

೪೦. ವೆಂಕಟಗಿನ ಹೆಂಡತಿ- ಮಾಸ್ತಿವೆಂಕಟೇಶ ಅಯ್ಯಂಗಾರ್(ಕ-೪೦)

೪೧. ಹಬ್ಬ- ಮೊಗಳ್ಳಿ ಗಣೇಶ(ಕ-೪೧)

೪೨. ಹಬ್ಬ ಮತ್ತು ಬಲಿ- ಬಿ. ಟಿ. ಲಲಿತಾ ನಾಯಕ್(ಕ-೪೨)

ಕ್ರಸಂ. ನಾಟಕ

೪೩. ಇಪ್ಪತ್ತಂಶಗಳು- ಚೆನ್ನಣ್ಣ ವಾಲೀಕಾರ(ನಾ-೪೩)

೪೪. ಉದ್ಧಾರ- ದ. ರಾ. ಬೇಂದ್ರೆ(ನಾ-೪೪)

೪೫. ಗರ್ಭಗುಡಿ- ಶಿವರಾಮ ಕಾರಂತ(ನಾ-೪೫)

೪೬. ಜೋಗತಿ- ಚೆನ್ನಣ್ಣ ವಾಲೀಕಾರ(ನಾ-೪೬)

೪೭. ತಲೆದಂಡ- ಗಿರೀಶ್ ಕಾರ್ನಾಡ(ನಾ-೪೭)

೪೮. ಪಂಚಮ-ಸಿದ್ಧಲಿಂಗಯ್ಯ(ನಾ-೪೮)

೪೯. ಪತಿತೋದ್ಧಾರ- ಹುಯಿಲಗೋಳ ನಾರಾಯಣರಾಯ(ನಾ-೪೯)

೫೦. ಭಾರತಾಂಬೆ- ಚಂದ್ರಶೇಖರ್ ಕಂಬಾರ(ನಾ-೫೦)

೫೧. ಭೂಮಿ- ಟಿ. ಎಂ. ಭಾಸ್ಕರ್(ನಾ-೫೧)

೫೨. ಬೆಲ್ಲದ ದೋಣಿ- ಹನೂರು ಚನ್ನಪ್ಪ(ನಾ-೫೨)

೫೩. ಸಂಕ್ರಾಂತಿ- ಪಿ. ಲಂಕೇಶ(ನಾ-೫೩)

೫೪. ಹರಿಜನ್ವಾರ- ಶ್ರೀರಂಗ(ನಾ-೫೪)

ಅಧ್ಯಾಯ : ನಾಲ್ಕು

ಅಭಿವ್ಯಕ್ತಿ : ಪಾತ್ರಗಳ ವ್ಯಕ್ತಿನಾಮಗಳು

ವ್ಯಕ್ತಿನಾಮಗಳು ಯಾದೃಚ್ಛಿಕವಾದುವಲ್ಲ – ವ್ಯಕ್ತಿನಾಮಗಳು ಸಾಮಾಜಿಕ, ಸಾಂಸ್ಕೃತಿಕ ಪರಂಪರೆಯಿಂದ ನಿಯಂತ್ರಿಸಲ್ಪಡುತ್ತವೆ. ವ್ಯಕ್ತಿನಾಮಗಳನ್ನು ಇಡುವ, ಇಟ್ಟುಕೊಳ್ಳುವ, ಬಳಸುವ, ಸಂಬೋಧಿಸುವ, ಉಲ್ಲೇಖಿಸುವ ವಿಧಾನಗಳು, ಕ್ರಮಗಳೂ ಔಪಚಾರಿಕ, ಅನೌಪಚಾರಿಕ ಬಳಕೆಯ ನೆಲೆಗಳು ಲಿಖಿತ ದಾಖಲೆ ಮತ್ತು ಮೌಖಿಕ ಬಳಕೆಯ ಸಂದರ್ಭಗಳು ಸಾಮಾಜಿಕ ಧೋರಣೆಯನ್ನು ಅಭಿವ್ಯಕ್ತಿಸುವ ಮುಖ್ಯ ಆಕರಗಳಾಗಿವೆ. ಪ್ರಸ್ತುತ ಅಧ್ಯಾಯದಲ್ಲಿ ದಲಿತ ಪಾತ್ರಗಳ ವ್ಯಕ್ತಿನಾಮಗಳು ದೃಶ್ಯ ಮತ್ತು ಬರಹದ ಸೃಜನಶೀಲ ರಚನೆಗಳಲ್ಲಿ ಅಭಿವ್ಯಕ್ತಿಯಾಗಿರುವುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬರಿಗೂ ಒಂದು ಹೆಸರು ಇರುತ್ತದೆ. ಅವರನ್ನು ಬೇರೆಯವರು ಗುರುತಿಸಲು ಅನುಕೂಲವಾಗುವ ಚಹರೆ ಅದು. ಭಾಷೆಯ ಪದಕೋಶದಲ್ಲಿ ನಾಮಪದಗಳು ಎಂಬ ಘಟಕವಿರುತ್ತದೆ. ಈ ಘಟಕದಲ್ಲಿ ವ್ಯಕ್ತಿನಾಮಗಳು ಮುಖ್ಯ ಸಾಲಿನಲ್ಲಿ ನಿಲ್ಲುತ್ತವೆ. ವ್ಯಕ್ತಿನಾಮಗಳ ಘಟಕ ಸದಾ ಚಲನೆ ಮತ್ತು ಪಲ್ಲಟಗಳಿಂದ ಕೂಡಿರುವಂಥದ್ದು, ವ್ಯಕ್ತಿನಾಮಗಳ ಅಧ್ಯಯನದಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ತಿಳಿದುಕೊಳ್ಳಬಹುದು.

ವ್ಯಕ್ತಿನಾಮಗಳು ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತವೆ. ವ್ಯಕ್ತಿನಾಮಗಳಲ್ಲಿ ಎರಡು ಘಟಕಗಳಿವೆ. ಒಂದು ನಿರ್ದಿಷ್ಟ, ಮತ್ತೊಂದು ವಾರ್ಗಿಕ. ಹೆಸರಿನ ನಿರ್ದಿಷ್ಟ ಭಾಗದಿಂದ ಧರ್ಮ, ಲಿಂಗ, ಜಾತಿಯಂತಹ ವಿಷಯಗಳು ಕಂಡುಬಂದರೆ, ಹೆಸರಿನ ವಾರ್ಗಿಕ ಭಾಗದಿಂದ ವ್ಯಕ್ತಿಯ ಜಾತಿ, ಸಾಮಾಜಿಕ ಸ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ.

ಪ್ರಸ್ತುತ ಅಧ್ಯಾಯದಲ್ಲಿ ವ್ಯಕ್ತಿನಾಮಗಳು ಕನ್ನಡ ಅಭಿವ್ಯಕ್ತಿಯಲ್ಲಿ ಅಂದರೆ ಕನ್ನಡ ಕಾದಂಬರಿ, ಸಿನಿಮಾ, ಕಥೆ ಮತ್ತು ನಾಟಕ ಪ್ರಕಾರಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಸಾಮಾಜಿಕತೆ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಇಲ್ಲಿ ಮುಖ್ಯವಾಗಿ ದಲಿತ ಮತ್ತು ದಲಿತೇತರ

ಪಾತ್ರಗಳ ವ್ಯಕ್ತಿನಾಮಗಳು ಅಭಿವ್ಯಕ್ತಿಗೊಂಡಿರುವ ಕ್ರಮವನ್ನು ದಾಖಲಿಸಲಾಗಿದೆ. ಉದಾಹರಣೆಗೆ ದೇವನೂರು ಮಹಾದೇವ ಅವರ ಕಥೆಯಾದ ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ ಕಥೆಯಲ್ಲಿ ದಲಿತ ವ್ಯಕ್ತಿಯ ರಂಗಪ್ಪನ ಮಗನಾದ ರಾಜನಿಗೆ ಒಂದು ಕನಸು ಬೀಳುತ್ತದೆ. ರಾಜ ಬೆಚ್ಚಿಬಿದ್ದು ಎದ್ದು ಕುಳಿತುಕೊಳ್ಳುತ್ತಾನೆ. ಅಲ್ಲೆ ಎದುರಿಗಿದ್ದ ತಾಯಿ ಏನು ಕನ್ಸ ಕಂಡ್ಯ ಹೇಳು ಎಂದಾಗ "ನೋಡವ್ವ ನೋಡವ್ವ ಪಟೇಲ್ರ ಶಂಭಪ್ಪ ಅವ್ನಲ್ಲ, ಅವ ಅವ ನನ್ನ ರಾಜ ಅನ್ನಕಿಲ್ವಂತೆ' ಅಂದ. ಪಾರೋತಿ ಯಾಕಂತ? ಅಂತಂತಲೆ ರಾಜ-'ಶಂಭಪ್ಪ' ಇಸ್ಕುಲು ಬುಡ್ತಲೆ ಅಂದ. ನೀವು ವಲಾರ್ರುಕಲಾ. ಅದ್ಕ ನಿನ್ನ ರಾಜ ಅನ್ನಾಕಿಲ್ಲ. ಗೀಜ ಅಂತೀನಿ ಅಂದ" (ಫಕೀರ್ ಮಹಮದ್ ಕಟ್ಪಾಡಿ, ಕೃಷ್ಣಮೂರ್ತಿ ಹನೂರು(ಸಂ) ಕನ್ನಡದ ಮೂವತ್ತು ಕಥೆಗಳು ಪುಟ-೧೧೪). ಇಲ್ಲಿ ಮೇಲ್ಜಾತಿ ವ್ಯಕ್ತಿಯ ಮನೋಧೋರಣೆಯನ್ನು ಗುರುತಿಸಬಹುದು. ಕೆಳಜಾತಿ ವ್ಯಕ್ತಿಗಳು 'ರಾಜ' ಎಂದು ಹೆಸರಿಟ್ಟುಕೊಳ್ಳಲು ಅರ್ಹರಲ್ಲ. ಹೊಲೆಯರ ಜಾತಿಯವರು ಕರಿಯ, ಕೆಂಚ, ಮಾದ ಈ ರೀತಿಯ ಹೆಸರುಗಳನ್ನೇ ಇಟ್ಟುಕೊಳ್ಳಬೇಕು ಎಂಬುದು ಮನೋಧೋರಣೆಯಾಗಿದೆ. ಸಮಾಜದಲ್ಲಿರುವ ವಾಸ್ತವವೇ ಈ ಕಥೆಯಲ್ಲಿ ಪ್ರತಿಫಲನಗೊಂಡಿದೆ. ಇಲ್ಲಿ ವ್ಯಕ್ತಿನಾಮಗಳ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದಾಗಿದೆ.

ಹೆಸರಿನ ಸ್ವರೂಪದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮವನ್ನು ಬಳಕೆಯ ನೆಲೆಯಿಂದ ಅದರ ಗುರುತನ್ನು ಗುರುತಿಸಬಹುದು. ಇದನ್ನು ಕಾದಂಬರಿ, ಚಲನಚಿತ್ರ, ಕಥೆ, ನಾಟಕಗಳಲ್ಲಿ ಒಂದೊಂದು ಉದಾಹಣೆಗಳ ಮೂಲಕ ನೋಡಬಹುದು.

ಕಾ ೧. ಮಲೆಗಳಲ್ಲಿ ಮದುಮಗಳು – ಗುತ್ತಿ, ತಿಮ್ಮ, ಐತ, ಪೀಂಚಲು

ಚ ೨. ಪಡುವಾರಹಳ್ಳಿ ಪಾಂಡವರು – ಮಾದ, ಕೆಂಚ, ಕರಿಯ, ಮಾಚ

ಕ ೩. ಧನಿಯರ ಸತ್ಯನಾರಾಯಣ – ತೌಡ, ದೇಯ್ಯಿ, ಬೂದ, ತುಕ್ರಿ

ನಾ ೪. ಇಪ್ಪತ್ತಾಂಶಗಳು – ನಿಂಗ್ಯಾ, ಕಲ್ಯಾ, ರುದ್ರ್ಯಾ, ನವಲ್ಯಾ

ಮೇಲಿನ ಉದಾಹರಣೆಗಳಿಗೆ ನೀಡಲಾಗಿರುವ ಸಂಕೇತಗಳು 'ಕಾ' ಕಾದಂಬರಿ, 'ಚ' ಚಲನಚಿತ್ರ, 'ಕ' ಕಥೆ ಹಾಗೂ 'ನಾ' ಎಂದರೆ ನಾಟಕ. ಈ ಮೇಲಿನ ಹೆಸರುಗಳ ಸ್ವರೂಪವನ್ನು ನೋಡಿದ ಕೂಡಲೇ ಈ ಹೆಸರುಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಾಗೂ ಜಾತಿ ಆಯಾಮಗಳಿರುವುದನ್ನು ಗಮನಿಸಬಹುದು.

ಈ ಹೆಸರುಗಳೆಲ್ಲವೂ ಕೆಳಜಾತಿ ಪಾತ್ರಗಳ ಹೆಸರುಗಳೆಂದು ಗುರುತಿಸಬಹುದು. ಮೇಲ್ಜಾತಿ ಪಾತ್ರಗಳಲ್ಲಿ ಈ ರೀತಿಯ ಹೆಸರುಗಳು ಕಂಡುಬರುವುದಿಲ್ಲ. ಒಂದು ವೇಳೆ ಕಂಡು ಬಂದರು ಈ ಹೆಸರುಗಳ ಸ್ವರೂಪ ಬದಲಾಗಿ, ವಾರ್ಗಿಕ ಮತ್ತು ಗೌರವ ಸೂಚಕಗಳು ಸೇರಿಕೊಂಡು

ಬರುತ್ತವೆ. ಉದಾಹರಣೆಗೆ ತಿಮ್ಮಪ್ಪಗೌಡ, ತಿಮ್ಮಪ್ಪಹೆಗ್ಗಡೆ, ಮಾದೇಗೌಡ, ನಿಂಗಪ್ಪ, ಕಲ್ಲಯ್ಯಗೌಡ ಎಂಬುದಾಗಿ ಸ್ವರೂಪದಲ್ಲಿ ಬದಲಾಗಿ ವಾರ್ಗಿಕ ಮತ್ತು ಗೌರವಸೂಚಕಗಳು ಬಳಕೆಯಲ್ಲಿರುತ್ತವೆ. ಮೇಲೆ ಗುರುತಿಸಿರುವ ಕೆಳಜಾತಿ ಪಾತ್ರಗಳಿಗೆ ವಾರ್ಗಿಕ ಮತ್ತು ಗೌರವಸೂಚಕಗಳು ಬಳಕೆಯಾಗಿರುವುದಿಲ್ಲ. ಕೆಳಜಾತಿ ಪಾತ್ರಗಳ ಹೆಸರುಗಳಲ್ಲಿ 'ಅಪ್ಪ', 'ಅಣ್ಣ', 'ಅಯ್ಯ', 'ಅಮ್ಮ', 'ಅಕ್ಕ' ವಾರ್ಗಿಕಗಳು ಇದ್ದರೂ ಸಹ ಅವರ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಹಾಗೂ ಪ್ರಾದೇಶಿಕ ಆಡುಮಾತಿನಲ್ಲಿ ಮೇಲ್ಜಾತಿ ಪಾತ್ರಗಳು ಬಳಕೆ ಮಾಡುತ್ತವೆ. ಉದಾಹರಣೆಗೆ,

ಕಾ. ವೈಶಾಖ – ಬುಳ್ಳಪ್ಪ

ಚ. ಹೇಮಾವತಿ – ಕಾಳಣ್ಣ

ಕ. ಕಿಚ್ಚು – ತಿಮ್ಮಕ್ಕ

ನಾ. ಭೂಮಿ – ಚನ್ನಯ್ಯ

ಮೇಲೆ ನೀಡಿರುವ ಉದಾಹರಣೆಗಳಲ್ಲಿ 'ಅಪ್ಪ', 'ಅಣ್ಣ', 'ಅಕ್ಕ', ಮತ್ತು 'ಅಯ್ಯ' ವಾರ್ಗಿಕಗಳು ಕೆಳಜಾತಿ ಪಾತ್ರಗಳಿಗೆ ಬಳಕೆಯಾಗಿದ್ದರೂ ಮೇಲ್ಜಾತಿ ಪಾತ್ರಗಳು ಬಳಕೆ ಮಾಡುವಾಗ ಬುಳ್ಳ, ಕಾಳ, ತಿಮ್ಮಿ, ಚನ್ನ ಎಂಬುದಾಗಿ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಬಳಕೆ ಮಾಡುತ್ತವೆ. ಹಾಗೆಯೇ ವಾರ್ಗಿಕಗಳೆ ಇಲ್ಲದ ಕೆಳಜಾತಿಯ ಪಾತ್ರಗಳ ಹೆಸರುಗಳನ್ನು ಕಾಣಬಹುದು. ಉದಾಹರಣೆ : ಭೈರ, ಗಿಡ್ಡಿ, ಸಿದ್ದ, ಅಕ್ಕಣಿ, ಇನ್ನೂ ಮುಂತಾದ ಪಾತ್ರಗಳನ್ನು ಕಲಾಭಿವ್ಯಕ್ತಿಯಲ್ಲಿ ಕಾಣಬಹುದು. ಮೇಲ್ಜಾತಿಯ ಪಾತ್ರಗಳಲ್ಲೂ ಸಹ ವಾರ್ಗಿಕಗಳಿಲ್ಲದ ಹೆಸರುಗಳು ಕಂಡುಬರುತ್ತವೆ. ಅವುಗಳೆಂದರೆ, ವಾಸಂತಿ, ವಾಸು, ತಿಮ್ಮು, ಶಾಂತಿ, ರಾಮು ಮುಂತಾದವು. ಆದರೆ ಕೆಳಜಾತಿಯ ವಾರ್ಗಿಕಗಳಿಲ್ಲದ ಹೆಸರುಗಳಿಗೂ ಮತ್ತು ಮೇಲ್ಜಾತಿಯ ವಾರ್ಗಿಕಗಳಿಲ್ಲದ ಹೆಸರುಗಳಿಗೂ ಸಾಮಾಜಿಕವಾಗಿ ಅಂತರವನ್ನು ಕಾಣಬಹುದಾಗಿದೆ. ಈ ರೀತಿಯ ವ್ಯತ್ಯಾಸಗಳು ಕಲಾಭಿವ್ಯಕ್ತಿಯಯಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಒಟ್ಟು ಅಭಿವ್ಯಕ್ತಿಯಲ್ಲಿ ದಲಿತ ಮತ್ತು ದಲಿತೇತರ ವ್ಯಕ್ತಿನಾಮಗಳು ಅಭಿವ್ಯಕ್ತಗೊಂಡಿರುವ ಸ್ವರೂಪವನ್ನು ನೋಡುವುದಾಗಿದೆ. ಈ ಅಧ್ಯಾಯವು ನಾಲ್ಕು ಉಪಧ್ಯಾಯಗಳನ್ನು ಒಳಗೊಂಡಿದೆ ಅವುಗಳೆಂದರೆ,

ವ್ಯಕ್ತಿನಾಮಗಳು : ಸಾಮಾಜಿಕ ಆಯಾಮ

ವ್ಯಕ್ತಿನಾಮಗಳು : ಜಾತಿ, ವೃತ್ತಿ ಸ್ತರಸೂಚಕ ಅಂಶಗಳು

ವ್ಯಕ್ತಿನಾಮಗಳು : ಬಳಕೆಯ ನೆಲೆಗಳು

ವ್ಯಕ್ತಿನಾಮಗಳು : ಚಲನೆ ಮತ್ತು ಪಲ್ಲಟ.

ಈ ಉಪ ಅಧ್ಯಾಯಗಳ ಮೂಲಕ ದಲಿತ ಮತ್ತು ದಲಿತೇತರ ಪಾತ್ರಗಳ ವ್ಯಕ್ತಿನಾಮಗಳ ಅಭಿವ್ಯಕ್ತಿಯ ಸ್ವರೂಪವನ್ನು ವಿವರಿಸಲಾಗಿದೆ.

ಹೆಸರಿಡುವುದರ ಹಿನ್ನೆಲೆಯಲ್ಲಿ ಪ್ರತಿಯೊಂದು ಸಮಾಜವು ತನ್ನ ಭಾಷೆ, ಸಂಸ್ಕೃತಿ, ಧರ್ಮ, ಜಾತಿ, ನಂಬಿಕೆಗಳನ್ನು ಅವಲಂಬಿಸಿರುತ್ತದೆ. ಹಾಗಾಗಿ ಹೆಸರುಗಳು ಸಾಮಾಜಿಕ, ಧಾರ್ಮಿಕ ನಿಯಂತ್ರಣಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಮಗು ವ್ಯಕ್ತಿಯಾಗಿ ಬೆಳೆದು ಸಮಾಜದಲ್ಲಿ ಸಾಮಾಜಿಕವಾಗಿ ಗುರುತಿಸಿಕೊಂಡ ನಂತರ ಹೆಸರುಗಳು ವ್ಯಕ್ತಿಯ ಸ್ಥಾನಮಾನ, ಆರ್ಥಿಕ, ಸಾಮಾಜಿಕ ಸ್ತರ ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬುದನ್ನು ಮುಂದೆ ವ್ಯಕ್ತಿನಾಮಗಳ ಸಾಮಾಜಿಕ ಆಯಾಮದಲ್ಲಿ ನಿರೂಪಿಸಲಾಗಿದೆ.

ವ್ಯಕ್ತಿನಾಮಗಳಲ್ಲಿ ಜಾತಿ, ವೃತ್ತಿ, ಸ್ತರ ಸೂಚಕ ಅಂಶಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ಈ ಉಪ ಅಧ್ಯಾಯದಲ್ಲಿ ಪರಿಚಯಿಸಲಾಗುತ್ತದೆ. ಜಾತಿಯಿಂದ ಆಗುವಂತ ಸಾಮಾಜಿಕ ವ್ಯತ್ಯಾಸವೇನು? ಹಾಗೆಯೇ ಇನ್ನಿತರ ಸ್ತರಸೂಚಕಗಳಾದ ಲಿಂಗ, ಶಿಕ್ಷಣ, ವಯಸ್ಸು ಇವುಗಳ ಆಧಾರದ ಮೇಲೆ ದಲಿತ ಮತ್ತು ದಲಿತೇತರ ವ್ಯಕ್ತಿನಾಮಗಳು ಅಭಿವ್ಯಕ್ತಗೊಂಡಿರುವ ಕ್ರಮ ಯಾವುದು ಎಂದು ನೋಡುವ ಅವಶ್ಯಕತೆಯಿದೆ.

ವ್ಯಕ್ತಿನಾಮಗಳು ಬಳಕೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ? ದಲಿತ ಪಾತ್ರಗಳು ಮೇಲ್ಜಾತಿ ಪಾತ್ರಗಳ ಹೆಸರುಗಳನ್ನು ಹೇಗೆ ಬಳಸುತ್ತವೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಹೆಸರುಗಳನ್ನು ಹೇಗೆ ಬಳಸುತ್ತವೆ. ಎಂಬುದನ್ನು ಅಧ್ಯಯನ ಮಾಡುವುದರ ಒಂದೇ ಸಮುದಾಯದ ಜೊತೆಗೆ ಪಾತ್ರಗಳ ಹೆಸರುಗಳನ್ನು ಬಳಸುವ ಕ್ರಮ ಯಾವುದು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟಗೊಂಡಿರುವ ಬಗೆ ಯಾವುದು? ಚಲನೆ ಮತ್ತು ಪಲ್ಲಟಗಳಿಗೆ ಕಾರಣಗಳೇನು? ಅವುಗಳ ಅಭಿವ್ಯಕ್ತಿಯ ಸ್ವರೂಪವನ್ನು ಈ ಉಪ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಸಾಮಾಜಿಕ ಆಯಾಮಗಳು, ಸ್ತರಸೂಚಕಗಳು, ಬಳಕೆಯ ನೆಲೆಗಳು, ಚಲನೆ ಮತ್ತು ಪಲ್ಲಟ ವ್ಯಕ್ತಿನಾಮಗಳಲ್ಲಿ ಹೇಗೆ ಕಾರ್ಯ ನಿರ್ವಹಿಸಿವೆ ಎಂಬುದನ್ನು ಮುಂದೆ ಉದಾಹರಣೆಗಳ ಮೂಲಕ ನೋಡಬಹುದು.

೪.೧. ವ್ಯಕ್ತಿನಾಮಗಳು : ಸಾಮಾಜಿಕ ಆಯಾಮ

ಆರಂಭದಲ್ಲಿ ವ್ಯಕ್ತಿಗಳಿಗೆ ಶಾರೀರಿಕ ಲಕ್ಷಣ ಮತ್ತು ಗುಣಲಕ್ಷಣಗಳಿಗೆ ಅನುಗುಣವಾಗಿ ಹೆಸರಿಡುತ್ತಿದ್ದರು. ಆದಿ ಮಾನವರು ನಾಗರೀಕರಾದಂತೆಲ್ಲ ವೈವಿಧ್ಯಮಯ ಜೀವನ ಸಂಸ್ಕೃತಿಯನ್ನು, ಆರಾಧನಾ ಪದ್ಧತಿಗಳನ್ನು ರೂಢಿಸಿಕೊಂಡರು. ಅನ್ವರ್ಥನಾಮಗಳಿಗೆ ಬದಲಾಗಿ ದೈವ, ಸಾಂಸ್ಕೃತಿಕ

ನಾಯಕರ ಹೆಸರು ಮತ್ತು ಪ್ರಕೃತಿನಿಷ್ಠ ವ್ಯಕ್ತಿನಾಮಗಳನ್ನು ನಿರ್ದೇಶನ ಮಾಡುವುದು ರೂಢಿಗೆ ಬಂದಿತು. ವ್ಯಕ್ತಿಯ ಹೆಸರುಗಳು ಸಾಂಸ್ಕೃತಿಕ ಆಯಾಮವನ್ನು ಪಡೆದುಕೊಂಡವು.

ವ್ಯಕ್ತಿನಾಮಗಳು ಕೇವಲ ಅಂಕಿತನಾಮಗಳಾಗಿ ಉಳಿದಿಲ್ಲ. ಅವು ತನ್ನೊಳಗೆ ಸಮುದಾಯಗಳ ಆಚಾರ-ವಿಚಾರ, ರೂಢಿ, ಸಂಪ್ರದಾಯ, ಜೀವನ ಪದ್ಧತಿಯನ್ನು ಒಳಗೊಂಡಿರುತ್ತವೆ. ಹಾಗೂ ಹೆಸರುಗಳು ಸಮುದಾಯಗಳು ಜೀವಿಸುವ ಸಂಸ್ಕೃತಿಯ ವಾಸ್ತವ ಅಭಿವ್ಯಕ್ತಿಗಳಿಗೂ ಸಂಸ್ಕೃತಿಯ ಪ್ರತಿಬಿಂಬಗಳೂ ಆಗಿರುತ್ತವೆ.

ಹೆಸರಿಡುವ ಹಿನ್ನೆಲೆಯಲ್ಲಿ ಪ್ರತಿಯೊಂದು ಸಮಾಜವು ತನ್ನ ಭಾಷೆ, ಸಂಸ್ಕೃತಿ, ಧರ್ಮ, ಜಾತಿ, ನಂಬಿಕೆಗಳನ್ನು ಅವಲಂಬಿಸಿರುತ್ತದೆ. ಹಾಗಾಗಿ ಹೆಸರುಗಳು ಸಾಮಾಜಿಕ, ಧಾರ್ಮಿಕ ನಿಯಂತ್ರಣ ಹೊಂದಿರುವುದನ್ನು ಕಾಣಬಹುದು.

ಕನ್ನಡ ಅಭಿವ್ಯಕ್ತಿಯಲ್ಲಿ ಅಂದರೆ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ವ್ಯಕ್ತಿನಾಮಗಳ ಸಾಮಾಜಿಕತೆಯನ್ನು ನೋಡಬಹುದು. ಹೆಸರನ್ನು ನೋಡಿದ ಅಥವಾ ಕೇಳಿದ ಕೂಡಲೇ ಕೆಳಜಾತಿಯವರೋ ಅಥವಾ ಮೇಲ್ಜಾತಿಯವರೋ ಎಂದು ಹೇಳಿಬಿಡಬಹುದು. ಉದಾಹರಣೆಗೆ ದೇವಯ್ಯಗೌಡ, ಮಂಜಭಟ್ಟ, ಅಂತಕ್ಕಶೆಟ್ಟಿ, ಪ್ರಾಣೇಶಾಚಾರ್ಯ, ಕೃಷ್ಣಶಾಸ್ತ್ರೀ, ರುಕ್ಮಿಣಿ, ಮಧ್ವಾಚಾರ್ಯ, ಸಂಕಪ್ಪಯ್ಯ, ಹೇಮಾವತಿ, ಸಂಗಪ್ಪ, ಅನಂತಯ್ಯ, ಹಯವದನರಾವ್ ಈ ಹೆಸರುಗಳನ್ನು ನೋಡಿದ ಕೂಡಲೇ ಬೇರೆ ಬೇರೆ ಜಾತಿಗೆ ಸೇರಿದ ಮೇಲ್ಜಾತಿಯ ಹೆಸರುಗಳು ಎಂದು ಹೇಳಬಹುದು. ಗೌಡ, ಭಟ್ಟ, ಸೆಟ್ಟಿ, ಆಚಾರ್ಯ, ರಾವ್ ಎಂಬ ವಾರ್ಗಿಕಗಳು ಮೇಲ್ಜಾತಿಯ ವ್ಯಕ್ತಿಗಳಿಗೆ ಮಾತ್ರ ಇರುವಂತಹದ್ದನ್ನು ಕಾಣಬಹುದು. ಕೆಳಜಾತಿಯ ಪಾತ್ರಗಳಲ್ಲಿ ಈ ರೀತಿಯ ವಾರ್ಗಿಕಗಳು ಕಂಡುಬರುವುದಿಲ್ಲ ಎಂದು ಹೇಳಬಹುದು.

ವ್ಯಕ್ತಿನಾಮಗಳು ಜಾತಿಯ ಸೂಚಕವಾಗಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದಕ್ಕೆ 'ದಾಟು' ಕಾದಂಬರಿಯಲ್ಲಿ ಬರುವಂತಹ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳ ಸನ್ನಿವೇಶವನ್ನು ಗಮನಿಸುವುದು ಅವಶ್ಯಕ. ಉದಾಹರಣೆಗೆ "ಬಹುವಚನದಲ್ಲಿ ಕೂಗಿದರೆ ಗೌಡರಿಗೆ ಕುತ್ತಿಗೆ ಉದ್ದವಾಗುತ್ತೇನು? ಎಂದಳು. ಗೌಡರು ಅಂತ ಯಾಕಂತೀಯ? ಅವನು ಇರಸು ಮುರಸಿನಿಂದ ಕೇಳಿದ. ಹಾಗಾದ್ರೆ ನೀವು ಗೌಡರಲ್ಲವೆ? ಅಸಮ್ಮತಿ ಸೂಚಕ ಮೌನ ತಾಳಿದ. ಅವಳೇ ಅದ್ಯಾಕೆಸಿಟ್ಟು? ಗೌಡ ಅಂದ್ರೆ 'ಯಜಮಾನ' ಅಂತ; ನನಗೆ ಎಂದಾಗ ಅವನ ಮುಖದ ಇರಸು ಮುರಸು ಹೋಗಿ ನಗುಕಾಣಿಸಿತು. ಎಷ್ಟುಬೇಗ ಖುಷಿಯಾಯ್ತು! ನಾನು ನೀನು ಇಬ್ಬರೇ ಇದ್ದಾಗ ಗೌಡ್ರುರು ಅಂತೀನಿ. ಆದರೆ ನಿನ್ನ ಗೌಡಿಕೆ ಉಳಿದೋರ ಮೇಲೆ ತೋರಿಸಕೂಡದು; ಇದು ಡೆಮಾಕ್ರಸಿ ಕಾಲ. ಅವನು ಸುಮ್ಮನೆ ನಕ್ಕ.

ನಿಮ್ಮ ಹೆಸರಿನ ಮುಂದೆ 'ಗೌಡ' ಅಂತ ಇದ್ದಿದ್ರೆ ನಾನು ಖಂಡಿತ ಮದುವೆಗೆ ಒಪ್ಪುತ್ತಿರಲಿಲ್ಲ. ಜಾತಿಸೂಚಕ ಅನ್ನೂದೊಂದೆ ಕಾರಣವಲ್ಲ. ಬಲು ಜಂಬದ ಟೈಟಲ್ ಅದು. ರಾವ್ ಇಟ್ಕಂಡಿದ್ರೆ?

ಎಂದು ಚುಡಾಯಿಸಿದ. ರಾವ್ ಅನ್ನೂದು ಬ್ರಾಹ್ಮಣರಿಗೆ ಹ್ಯಾಗೆ ಬಂತೋ ಗೊತ್ತಿಲ್ಲ. 'ರಾಯ' ಅನ್ನೂದು ರಾವ್ ಆಯಿತು. ರಾಜನಿಂದ ರಾಯಬಂತು.

ಬ್ರಾಹ್ಮಣರಿಗೆ ರಾಜ ಅನ್ನೂದು ಹ್ಯಾಗೆ ಸೇರುತ್ತೆ? ಪೇಶ್ವೆ ಬ್ರಾಹ್ಮಣರು ಆಳ್ತಿದ್ದಾಗ ಸೇರಿಕೊಂಡ ಈ ಬಿರುದು ಕರ್ನಾಟಕದ ಬ್ರಾಹ್ಮಣರಿಗೂ ಬಂತೋ ಏನೋ! ಇದರ ಹುಟ್ಟು ಬೆಳವಣಿಗೆನಾ ಶೋಧನೆ ಮಾಡಬೇಕು. ಕರ್ನಾಟಕದ ಬ್ರಾಹ್ಮಣರಿಗೆ 'ಅಯ್ಯ' ಅನ್ನೂದೇ ಮೊದಲಿನಿಂದ ಇದ್ದದ್ದು. ಅಂದ್ರೆ ಆರ್ಯ ಅನ್ನೂದ್ರಿಂದ ಬಂದದ್ದು (ಎಸ್. ಎಲ್. ಭೈರಪ್ಪ, ದಾಟು, ಪುಟ-೫೨-೫೮)

ಈ ಮೇಲಿನ ಉದಾಹರಣೆಯು 'ಗೌಡ' ಮತ್ತು 'ರಾವ್' ಎನ್ನುವ ಗೌರವಸೂಚಕಗಳು, ಜಾತಿಸೂಚಕಗಳು ಆಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗೌಡ ಎಂದರೆ ಯಜಮಾನ, 'ರಾಯ' ಅನ್ನುವುದು 'ರಾವ್' ಆಯಿತು. ರಾಜನಿಂದ 'ರಾಯ' ಎಂಬ ಪದ ಬಂತು. ಈ ಗೌರವ ಸಂಬೋಧನೆಗಳು ಪ್ರಸ್ತುತದಲ್ಲಿ ಜಾತಿಸೂಚಕಗಳಾಗಿ ಕೆಲಸ ಮಾಡುತ್ತಿವೆ. 'ಗೌಡ' ಮತ್ತು 'ರಾವ್' ಎನ್ನುವ ಗೌರವಸೂಚಕಗಳು ಒಬ್ಬ ವ್ಯಕ್ತಿಯ ಹೆಸರಿನ ಮುಂದೆ ಬಂದರೆ ಅವು ಒಂದೊಂದು ಸಮುದಾಯವನ್ನು ಸೂಚಿಸುತ್ತಿರುತ್ತವೆ.

ವ್ಯಕ್ತಿನಾಮಗಳು ಜಾತಿಸೂಚಕವಾಗಿ ಕೆಲಸ ಮಾಡುತ್ತಿವೆ ಎಂಬುದಕ್ಕೆ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಎಸ್. ಎಲ್. ಭೈರಪ್ಪ 'ದಾಟು' ಕಾದಂಬರಿಯಲ್ಲಿ ಬರುವಂತಹ ಸನ್ನಿವೇಶ "ನೋಡು ನನಗನ್ಸುತ್ತೆ; ದೇವರ ಹೆಸರುಗಳನ್ನು ಇಟ್ಟುಕೊಳ್ಳೂದ ಬಿಡಬೇಕು. ಒಂದೊಂದು ದೇವರ ಹೆಸರಿಗೂ ಒಂದೊಂದು ಜಾತಿಸೂತಕ ಅಂಟಿಕೊಂಡಿರುತ್ತೆ.

ತಿರುಮಲ ಅಂದ್ರೆ ವೈಷ್ಣವ, ಶಂಕರ ಅಂದ್ರೆ ಶೈವ, ಶಿವಣ್ಣ ಅಂದ್ರೆ ಸಾಮಾನ್ಯವಾಗಿ ಲಿಂಗಾಯತ, ಶಿವಪ್ಪ ಲಿಂಗಾಯತನೂ ಆದೀತು, ಒಕ್ಕಲಿಗನೂ ಆದೀತು. ಶಿವಸ್ವಾಮಿ ಬ್ರಾಹ್ಮಣನಾಗುತ್ತೆ. ಇದರ ಬದಲು ಪ್ರಕೃತಿ, ಹೂವು, ನಮ್ಮ ಜೀವನದ ಆಶೆ, ಆಕಾಂಕ್ಷೆ ಇಂಥವುಗಳ ಹೆಸರು ಎಷ್ಟು ಚಂದಾ! ಕಮಲ ಅನ್ನೂದು ಎಷ್ಟು ಚೆನ್ನಾದ ಹೆಸರು! ಆದರೆ ಕಮಲದಿಂದ ಲಕ್ಷ್ಮೀ ಹುಟ್ಟು, ಅವಳು ವಿಷ್ಣುವಿನ ಹೆಂಡತಿಯಾಗಿ, ಆ ಮೂಲಕ ವೈಷ್ಣವ ಪಂಥದ ಜಾತಿಸೂಚಕ ಬಡಿದು ಕಮಲದ ಸೊಬಗೇ ಹಾಳಾಯ್ತು. (ಭೈರಪ್ಪ ಎಸ್.ಎಲ್, ದಾಟು, ಪುಟ-೮೮)

ದೇವರ ಹೆಸರುಗಳನ್ನು ವ್ಯಕ್ತಿಗಳಿಗೆ ಇಡುವುದು ಸಾಮಾನ್ಯ. ದೇವರ ಹೆಸರುಗಳು ಸಹ ಇಂಥ ಜಾತಿಯವರೇ ಇಟ್ಟುಕೊಳ್ಳಬೇಕು ಎಂಬ ಸಾಮಾಜಿಕ ನಿಯಂತ್ರಣಗಳು ಸಹ ಇವೆ. ಕೆಳಜಾತಿಯ ವ್ಯಕ್ತಿಗಳು 'ನಾರಾಯಣ' ಎಂಬ ಹೆಸರನ್ನು ಇಟ್ಟುಕೊಳ್ಳುವುದು ಒಂದು ರೀತಿಯ ಸಾಮಾಜಿಕ ನಿಷಿದ್ಧವಾಗಿರುವುದನ್ನು ಕಾಣಬಹುದು. ಉದಾಹರಣೆಗೆ "ಒಬ್ಬ ದಲಿತ ವ್ಯಕ್ತಿಗೆ

'ಶ್ರೀನಿವಾಸ ಅಯ್ಯಂಗಾರ್' ಎಂದು ಹೆಸರಿಡಲಾಗಿತ್ತು. ಅದರ ಕಥೆ ಹೀಗಿದೆ. "ಇದು ರಾಮಚಂದ್ರಪ್ಪ ಎಂಬ ನಿವೃತ್ತ ಶಿಕ್ಷಕರ ಅನುಭವದ ನಿರೂಪಣೆ. ಅವರ ಮನೆಯ ಮುಂದಿನ ಬೋರ್ಡ್‌ನಲ್ಲಿ ರಾಮಚಂದ್ರಪ್ಪ ನಿವೃತ್ತ ಶಿಕ್ಷಕರು ಎಂಬುದರ ಜೊತೆಗೆ 'ಶ್ರೀನಿವಾಸ ಅಯ್ಯಂಗಾರ್' ಎಂಬ ಹೆಸರೂ ಇತ್ತು. "ಅವರು ಉದ್ದೇಶಪೂರ್ವಕವಾಗಿಯೇ ಮಗನಿಗೆ 'ಶ್ರೀನಿವಾಸ ಅಯ್ಯಂಗಾರ್' ಎಂದು ನಾಮಕರಣ ಮಾಡಿದ್ದರು. ದಲಿತರೊಬ್ಬರು ತಮ್ಮ ಮಗನಿಗೆ ಈ ರಿತಿ ಹೆಸರಿಟ್ಟಿರುವುದು ಬಹುಶಃ ಇದೇ ಮೊದಲಿರಬೇಕು. ಅವರ ಮಗ ಎಂ.ಟೆಕ್ ಮುಗಿಸಿಕೊಂಡು ಬೆಂಗಳೂರಿನ ಎಚ್.ಎ.ಎಲ್ ನಲ್ಲಿ ಕೆಲಸಕ್ಕಿದ್ದಾರೆ"

ಅಯ್ಯಂಗಾರ್ ಎಂದು ಹೆಸರಿಡಲು ಅವರು ಕೊಟ್ಟ ವಿವರಣೆ "ನಾವು ಕೂಡ ನಾಮ ಹಾಕಿಕೊಳ್ಳುವವರು. ನಮ್ಮ ತಾತ ಮುತ್ತಾತನ ಕಾಲದಿಂದಲೂ ಇದು ಚಾಲ್ತಿಯಲ್ಲಿದೆ. ಬ್ರಾಹ್ಮಣನಿರಿಗಿಂತಲೂ ಉತ್ತಮವಾಗಿ ಹರಿಸ್ಮರಣೆ ಮಾಡುತ್ತೇವೆ. ಆದ್ದರಿಂದ ನಾವೂ ಯಾಕೆ 'ಅಯ್ಯಂಗಾರ್' ಅಂತ ಹೆಸರಿಟ್ಟುಕೊಳ್ಳಬಾರದು? ಜಾತಿಯಲ್ಲ ಹೆಸರು ಮಾತ್ರ.

ಈ ಹೆಸರಿಟ್ಟಿದ್ದರಿಂದ ತಹಶೀಲ್ದಾರ್ ವಿರೋಧಿಸಿದರು. ಜಾತಿ ಪ್ರಮಾಣ ಪತ್ರ ಮಾಡಿಸಲು ಹೋದಾಗ ತಕರಾರು ತೆಗೆದರು. ಜಾತಿ ಪ್ರಮಾಣ ಪತ್ರ ಸಾಧ್ಯವಿಲ್ಲ ಎಂದು ಸ್ವಲ್ಪ ಒರಟಾಗಿ ಮಾತನಾಡಿದರು. ಅದಕ್ಕೆ ನಾನು, ನಾವು ಯಾಕೆ ರಾಷ್ಟ್ರಪತಿಯವರಿಗೆ ದೂರು ಕೊಡಬಾರದು? ನಾವೇ ಅವರನ್ನು ವಿವರಣೆ ಕೇಳುತ್ತೇವೆ. ಸಂವಿಧಾನದ ಯಾವ ಪರಿಚ್ಛೇದದಲ್ಲಿ ಜಾತಿ ಆಧಾರಿತ ಹೆಸರಿಡಬೇಕು ಎಂಬ ನಿಯಮವಿದೆ ಎಂದು? ಅದರ ಪ್ರಕಾರ ನಾವು ಯಾವ ಹೆಸರನ್ನಾದರೂ ಇಟ್ಟುಕೊಳ್ಳುತ್ತೇವೆ" ಎಂದೆ.

"ರಾಷ್ಟ್ರಪತಿ ಎಂದ ಕೂಡಲೇ ಹೆದರಿದ ತಹಶೀಲ್ದಾರ್ ಜಾತಿ ಪ್ರಮಾಣ ಪತ್ರ ಮಾಡಿಕೊಟ್ಟರು. ನಂತರ ನನ್ನ ಮಗನಿಗೆ ಎಚ್.ಎ.ಎಲ್ ನಲ್ಲಿ ಕೆಲಸ ಸಿಕ್ಕಿತು. ಹೆಸರಿನಿಂದಾಗಿಯೇ ಕೆಲಸಕ್ಕೆ ಸೇರುವುದು ನಾಲ್ಕು ತಿಂಗಳು ತಡವಾಯಿತು. ನಾವು ಎಲ್ಲ ದಾಖಲೆ ಒದಗಿಸಿದೆವು. ಆದರೆ ಅಲ್ಲಿಯ ಅಧಿಕಾರಿಯೊಬ್ಬರು "ನೀವು ಮಾತ್ರ ಈ ಹೆಸರು ಬದಲಾಯಿಸಿ" ಎಂದರು. ಆಗ ನನ್ನ ಮಗ ಇದು ನನ್ನ ಅಪ್ಪ ಇಟ್ಟ ಹೆಸರು. ಈಗ ನಾನು ಅದನ್ನು ಬದಲಾಯಿಸಿದರೆ ಮುಂದೆ ತೊಂದರೆಯಾಗುತ್ತದೆ. ನಾವು ಈಗಾಗಲೇ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿ ವಿವರಣೆ ಕೋರಿದ್ದೇವೆ. ನಿಮ್ಮ ಮೇಲೆ ಯಾಕೆ ನ್ಯಾಯಲಕ್ಕೆ ಹೋಗಬಾರದು? ಎಂದು ಪ್ರಶ್ನಿಸಿದ. ಆಗ ಅವನಿಗೆ ಕೆಲಸ ಸಿಕ್ಕಿತು" (ಮೋಹನರಾಂ ಎನ್. ಕೆ, ದಲಿತರ ದೇವಸ್ಥಾನ ಪ್ರವೇಶದ ಸಾವಿರ ವರ್ಷ : ದಲಿತರು ಮರೆತ ರಾಮಾನುಜ, ಪುಟ–೧೭–೧೮)

ಆ ರೀತಿಯ ಹೆಸರುಗಳು ಒಂದು ವರ್ಗಕ್ಕೆ ಮಾತ್ರ ಸೀಮಿತ ಎಂದು ಪ್ರತಿಪಾದಿಸುವಂತಿದೆ. ಸಮಾಜದಲ್ಲಿ ಇಟ್ಟ ಹೆಸರು ಮತ್ತು ಇಟ್ಟುಕೊಂಡ ಹೆಸರು ಎಂದು ಮೂರು ರೀತಿಯಾಗಿ ಇವೆ. ಇವುಗಳ ಮೂಲಕ ವ್ಯಕ್ತಿನಾಮಗಳ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳನ್ನೂ

ಕಂಡುಕೊಳ್ಳಬಹುದಾಗಿದೆ. ಸಮಾಜದಲ್ಲಿ ಕೆಲವೊಂದು ಸಮುದಾಯದವರು ಕೆಲವೊಂದು ಹೆಸರುಗಳನ್ನು ಇಟ್ಟುಕೊಳ್ಳಬಾರದು ಎಂಬ ಸಾಮಾಜಿಕ ನಿಷೇಧ ಮತ್ತು ನಿರ್ಬಂಧಗಳಿರುವುದು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿಯೂ ಪ್ರತಿಫಲನಗೊಂಡಿದೆ ಹೆಸರುಗಳ ಮೂಲಕ ಅವರವರ ಜಾತಿಗಳನ್ನು ಗುರುತಿಸಬಹುದು ಎಂಬುದಕ್ಕೆ ಈ ಮೇಲಿನ ಎರಡು ಉದಾಹರಣೆಗಳನ್ನು ನೀಡಲಾಗಿದೆ.

ಕೆಳಜಾತಿಯ ವ್ಯಕ್ತಿಗಳ ಹೆಸರುಗಳನ್ನು ಗಮನಿಸಿದಾಗ ಮೇಲ್ಜಾತಿ ವ್ಯಕ್ತಿಗಳಿಗೆ ಇರುವ ಗೌರವ ಸೂಚಕಗಳು ಈ ವ್ಯಕ್ತಿಗಳ ಹೆಸರುಗಳಲ್ಲಿ ಕಾಣಬರುವುದಿಲ್ಲ. ಮತ್ತು ಅವರ ಹೆಸರಿನ ಮುಂದೆ ವಾರ್ಗಿಕಗಳು ಇರುವುದಿಲ್ಲ. ಕೆಲವೊಮ್ಮೆ ಕಂಡುಬರುತ್ತವೆಯಾದರು ಬಳಸುವಾಗ ವಾರ್ಗಿಕಗಳಿಲ್ಲದೆ ಮೇಲ್ಜಾತಿ ವ್ಯಕ್ತಿಗಳು ಬಳಸುತ್ತಾರೆ. ಗೌರವ ಸೂಚಕಗಳಾದ ಗೌಡ, ಶಾಸ್ತ್ರೀ, ಶೆಟ್ಟಿ, ಆಚಾರ್ಯ, ರಾವ್ ಮುಂತಾದವುಗಳು ಕಂಡುಬರುವುದಿಲ್ಲ. ವಾರ್ಗಿಕಗಳಲ್ಲಿ ಅಪ್ಪ, ಅವ್ವ, ಅಣ್ಣ, ಅಮ್ಮ, ಅಯ್ಯ ಈ ರೀತಿಯ ವಾರ್ಗಿಕಗಳು ಕಂಡುಬರುತ್ತವೆ. ಕೆಲವು ಹೆಸರುಗಳನ್ನು ನೋಡಿದ ಕೂಡಲೇ ಇವು ಕೆಳಜಾತಿಯ ವ್ಯಕ್ತಿಗಳ ಹೆಸರು ಎಂದು ಹೇಳಬಹುದು.

ಉದಾಹರಣೆಗೆ :	ಪುರುಷ	ಪುರುಷ	ಮಹಿಳೆ
	ಬಚ್ಚ (ಕಾ–೬)	ಪಿಳ್ಳ (ಕಾ–೦೬)	ಬೆಳ್ಳಿ (ಚ–೧೫)
	ಲಕ್ಕ (ಕಾ–೮)	ಕಲ್ಯಾ (ನಾ–೪೩)	ಸಣ್ಣಿ (ಚ–೧೨)
	ಬೂದ (ಕ–೩೨)	ಮೊಂಡ (ಕ–೨೬)	ಗುಡ್ಡಿ (ಕ–೦೪)
	ಕರಿಯ (ಚ–೧೧)	ಲೋಂಪಿ (ಚ–೧೧)	ಮಾರಿ (ನಾ–೪೪)
	ಗಂಗ್ಯಾ (ಕ–೩೨)	ಕಾಳ (ಚ–೨೦)	ತುಕ್ರಿ (ಕ–೩೨)
	ತೌಡ (ಕ–೩೨)	ಕುದುಕ (ಕಾ–೦೬)	ಚಂದ್ರಿ (ಚ–೯)

ಈ ರೀತಿಯ ಹೆಸರುಗಳನ್ನು ನೋಡಿದ ಕೂಡಲೆ ಇವು ಮೇಲ್ಜಾತಿ ಹೆಸರುಗಳು ಎಂದು ಹೇಳಲು ಸಾಧ್ಯವಾಗುವುದಿಲ್ಲ ಕೆಳಜಾತಿ ವ್ಯಕ್ತಿಗಳ ಹೆಸರುಗಳು ಎಂದ ತಿಳಿಯುತ್ತದೆ. ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಹೆಚ್ಚಾಗಿ ಎರಡು ಮತ್ತು ಮೂರಕ್ಷರದ ಹೆಸರುಗಳೇ ಹೆಚ್ಚು. ಈ ವ್ಯಕ್ತಿಗಳ ಸಾಮಾಜಿಕತೆ ಏನು ಎಂಬುದು ಇವರ ಹೆಸರುಗಳ ಕಂಡುಬರುತ್ತದೆ.

ಕೆಳಜಾತಿಯ ವ್ಯಕ್ತಿಗಳಲ್ಲಿ ವಾರ್ಗಿಕಗಳು ಇರುವ ವ್ಯಕ್ತಿನಾಮಗಳನ್ನು ಕಾಣಬಹುದು. ಅವುಗಳೆಂದರೆ,

ಮಹಿಳೆ	ಪುರುಷ
ತೂರಮ್ಮ (ಕಾ–೦೨)	ಕುರಿಯಯ್ಯ (ಕಾ–೦೨)

ಅಕ್ಕವ್ವ (ಕಾ–೦೧)	ಅಮ್ಮಣ್ಣ (ಕಾ–೦೧)
ಪುಟ್ಟಲಕ್ಕಮ್ಮ (ನಾ–೪೮)	ನರಸಯ್ಯ (ಕಾ–೦೮)
ತೋಪಮ್ಮ (ಕ–೩೪)	ಬೆಟ್ಟಯ್ಯ (ಕಾ–೦೪)
	ಸೀರಪ್ಪ (ಕ–೨೧)
	ಗುಂಜಾರಯ್ಯ (ನಾ–೫೨)

ಈ ರೀತಿಯಾಗಿ ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಅಮ್ಮ, ಅವ್ವ, ಅಯ್ಯ, ಅಣ್ಣ, ಅಪ್ಪ ಎಂಬ ವಾರ್ಗಿಕಗಳಿರುವುದನ್ನು ಕಾಣಬಹುದು. ಈ ವಾರ್ಗಿಕಗಳು ಅವರ ಹೆಸರಿನಲ್ಲಿ ಸೇರಿರುವುದರಿಂದ ಅವರ ಸಾಮಾಜಿಕ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ. ಈ ವ್ಯಕ್ತಿಗಳನ್ನು ಮೇಲ್ಜಾತಿ ವ್ಯಕ್ತಿಗಳು ಸಂಬೋಧಿಸಿದಾಗ ವಾರ್ಗಿಕಗಳನ್ನು ಬಳಸದೇ ಸಂಬೋಧಿಸುತ್ತಾರೆ. ಒಂದು ವೇಳೆ ವಾರ್ಗಿಕಗಳನ್ನು ಬಳಸಿ ಸಂಬೋಧಿಸಿದರೆ ಅವರು ಶಿಕ್ಷಣ ಪಡೆದ ವ್ಯಕ್ತಿಗಳಾಗಿರುತ್ತಾರೆ. ಈ ರೀತಿಯಾಗಿ ಈ ಹೆಸರುಗಳ ಮೂಲಕ ಸಾಮಾಜಿಕ ಆಯಾಮವನ್ನು ಕಾಣಬಹುದು.

ಮೇಲ್ಜಾತಿ ವ್ಯಕ್ತಿಗಳಲ್ಲಿ ಸಹ ಕೆಳಜಾತಿ ವ್ಯಕ್ತಿಗಳಿಗೆ ಇರುವ ಹಾಗೆ ಅಪ್ಪ, ಅಮ್ಮ, ಅಯ್ಯ, ಅಣ್ಣ ಎಂಬ ವಾರ್ಗಿಕಗಳಿವೆ. ಹಾಗೂ ವಾರ್ಗಿಕಗಳಿಲ್ಲದೆ ಇರುವ ಹೆಸರುಗಳು ಇವೆ. ಈ ವಾರ್ಗಿಕಗಳು ಇಲ್ಲಿ ಬಂದಾಕ್ಷಣ ಮೇಲ್ಜಾತಿ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನ ಕೆಳಗೆ ಹೋಗುವುದಿಲ್ಲ.

ಉದಾಹರಣೆಗೆ

ಪುರುಷ	ಮಹಿಳೆ
ನಾಗಪ್ಪ (ಕಾ–೦೮)	ಮಾದಮ್ಮ (ಕಾ–೦೮)
ರಂಗಣ್ಣ (ಕಾ–೦೫)	ರಂಗಮ್ಮ (ಕಾ–೦೬)
ಮಾದಪ್ಪ (ಕಾ–೦೭)	ಸಿದ್ದಮ್ಮ (ಕಾ–೦೮)
ನೀಲಪ್ಪ (ಕಾ–೧೯)	ಸೋಮಕ್ಕ (ಕ–೩೯)

ಈ ತರಹದ ಮೇಲ್ಜಾತಿ ಪಾತ್ರಗಳ ಹೆಸರುಗಳಲ್ಲಿ ಈ ವಾರ್ಗಿಕಗಳನ್ನು ಕಾಣಬಹುದು. ಆದರೆ ಸಮಾಜದಲ್ಲಿ ಕೆಳಜಾತಿಯ ವ್ಯಕ್ತಿಗಳು ಇವರನ್ನು ಹೆಸರಿಡಿದು ಮಾತನಾಡಿಸಲು ಸಾಧ್ಯವಾಗುವುದಿಲ್ಲ. ಗೌರವಸೂಚಕ ಪದಗಳನ್ನು ಬಳಸಿಯೇ ಸಂಬೋಧಿಸುತ್ತಾರೆ. ಮೇಲ್ಜಾತಿ ವ್ಯಕ್ತಿಗಳ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ.

ಹಾಗೆಯೇ ವಾರ್ಗಿಕಗಳಿಲ್ಲದ ಹೆಸರುಗಳು ಮೇಲ್ಜಾತಿ ವ್ಯಕ್ತಿಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಗುಳ್ಳ, ಲಚ್ಚ, ದುರ್ಗಿ, ಮಾದ ಎಂಬ ಹೆಸರುಗಳನ್ನು ನೋಡಿದ ಕೂಡಲೇ ಕೆಳಜಾತಿ ವ್ಯಕ್ತಿಗಳ ಹೆಸರುಗಳು ಎಂದು ತಕ್ಷಣಕ್ಕೆ ಅನಿಸುತ್ತದೆ. ಆದರೆ ಇವು ಮೇಲ್ಜಾತಿ ವ್ಯಕ್ತಿಗಳ ಹೆಸರುಗಳು. ಈ ಹೆಸರುಗಳಿಗೆ ವಾರ್ಗಿಕಗಳಿಲ್ಲ, ಗೌರವ ಸೂಚಕಗಳಿಲ್ಲ. ಆದರೂ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಬಳಕೆಯಾಗುತ್ತಿವೆಯಲ್ಲ ಎಂಬ ಪ್ರಶ್ನೆ ಬರುತ್ತದೆ. 'ಭೂತಯ್ಯನ ಮಗ ಅಯ್ಯು' ಸಿನಿಮಾದಲ್ಲಿ 'ಗುಳ್ಳ' ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಲಚ್ಚ, ಸಂಪತ್ತಿಗೆ ಸವಾಲ್ ಸಿನಿಮಾದಲ್ಲಿ ಬರುವ ದುರ್ಗಿ ಹಾಗೂ ಮಾದ ಮತ್ತು ಮಾನಸಿ ಸಿನಿಮಾದಲ್ಲಿ ಬರುವ ನಾಯಕಿಯ ಪಾತ್ರವಾದ ಈ ಸಿನಿಮಾ ಮತ್ತು ಕಾದಂಬರಿಗಳಲ್ಲಿ ಉಲ್ಲೇಖಿಸಿರುವ ಪಾತ್ರಗಳು ಕೆಳಜಾತಿ ಪಾತ್ರಗಳ ಹೆಸರುಗಳಲ್ಲ. ಆದರೂ ವಾರ್ಗಿಕ ಮತ್ತು ಗೌರವ ಸೂಚಕಗಳಿಲ್ಲದೆ ಹೆಸರುಗಳು ಸಂಕ್ಷಿಪ್ತರೂಪದಲ್ಲಿವೆ. ಕೆಲವು ಮುದ್ದು ನಾಮವಾಗಿ, ವರ್ತನೆ ಮತ್ತು ಸ್ವಭಾವಕ್ಕೆ ಅನುಗುಣವಾಗಿ ನಿರ್ದೇಶಕರು ಮತ್ತು ಲೇಖಕರು ಕಲಾಭಿವ್ಯಕ್ತಿಯಲ್ಲಿ ಬಳಕೆ ಮಾಡಿದ್ದಾರೆ. ಕೆಳಜಾತಿ ಪಾತ್ರಗಳು ಇವರ ಹೆಸರಿಡಿದು ಏಕವಚನದಲ್ಲಿ ಮಾತನಾಡಿಸಲು ಸಾಧ್ಯವಿಲ್ಲ. ಆ ಮೇಲ್ಜಾತಿ ಪಾತ್ರಗಳಿಗೆ ಗೌರವ ಸೂಚಕಗಳನ್ನು ಬಳಸಿಯೇ ಸಂಬೋಧಿಸುವುದು ಕಂಡುಬರುತ್ತದೆ.

ಮರಳಿಮಣ್ಣಿಗೆ ಕಾದಂಬರಿಯಲ್ಲಿ ಲಕ್ಷ್ಮೀ ನಾರಾಯಣ–ಲಚ್ಚ, ಮಾದ ಮತ್ತು ಮಾನಸಿ ಸಿನಿಮಾದಲ್ಲಿ ಮಾದೇಶ್ವರ ಮಾದ ಈ ರೀತಿಯಾಗಿ ಹೆಸರುಗಳು ಸಂಕ್ಷಿಪ್ತಗೊಂಡಿವೆ. ಇವು ಮುದ್ದುನಾಮವಾಗಿ ಬಳಕೆಯಾಗಿವೆ. ಸಂಪತ್ತಿಗೆ ಸವಾಲ್ ಸಿನಿಮಾದಲ್ಲಿ 'ದುರ್ಗಿ' ಎಂಬ ಮೇಲ್ಜಾತಿ ಪಾತ್ರದ ವರ್ತನೆ ಮತ್ತು ಸ್ವಭಾವಕ್ಕೆ ಅನುಗುಣವಾಗಿ ನಿರ್ದೇಶಕರು ಈ ರೀತಿಯ ಹೆಸರು ಬಳಸಿರಬಹುದು. ಬೂತಯ್ಯನ ಮಗ ಅಯ್ಯು ಸಿನಿಮಾದಲ್ಲಿ 'ಗುಳ್ಳ' ಪಾತ್ರ ಕೆಳಜಾತಿ ಪಾತ್ರವಲ್ಲ. ಆದರೆ ಈ ಪಾತ್ರಗಳಿಗೆ ಕೆಳಜಾತಿ ಪಾತ್ರಗಳು ಹೆಸರಿಡಿದು ಮಾತನಾಡಿಸುವುದಿಲ್ಲ. ಈ ರೀತಿಯ ಹೆಸರು ಇಟ್ಟುಕೊಂಡಿರುವುದರಿಂದ ಅವರ ಸಾಮಾಜಿಕ ಸ್ಥಾನಮಾನ ಇಳಿಮುಖಗೊಂಡಿಲ್ಲ. ಆದರೆ ಕೆಳಜಾತಿ ಪಾತ್ರಗಳ ಹೆಸರುಗಳಿಗೆ ಮಾತ್ರ ಈ ರೀತಿಯ ಸಾಮಾಜಿಕ ಸ್ಥಾನಮಾನಗಳು ದೊರೆಯುವುದಿಲ್ಲ.

ಇನ್ನೂ ಕೆಲವು ಮೇಲ್ಜಾತಿ ಪಾತ್ರಗಳ ಹೆಸರುಗಳನ್ನು ಉದಾಹರಣೆಯಾಗಿ ಗಮನಿಸಬಹುದು, ಅಂದರೆ ವಾರ್ಗಿಕಗಳಿಲ್ಲದ ಹೆಸರುಗಳು

ಪುರುಷ	ಮಹಿಳೆ
ತಿಮ್ಮು (ಕಾ–೦೬)	ಕಮಲಿ (ಚ–೦೨)
ಧರ್ಮು (ಕಾ–೦೬)	ಸಾವಿತ್ರಿ (ಚ–೦೮)
ವಾಸು (ಚ–೨೦)	ಮಂಗಳ (ಚ–೧೬)

ಸುಂದ್ರು (ಚ-೨೦)	ಲಕ್ಷ್ಮೀ (ಚ-೧೬)
ದೀಕ್ಷಿತ (ಚ-೨೦)	ಮಾಲತಿ (ಚ-೧೬)
ಶಂಕರ (ಚ-೧೬)	ಸೀತಾ (ಚ-೧೩)
ಕಿಟ್ಟಿ (ಚ-೧೧)	ಗೀತಾ (ಚ-೧೩)
ಆನಂದ (ಚ-೨೦)	ಪ್ರೀಯಾ (ಚ-೧೦)
ಕೇಶವ (ಚ-೨೦)	ಗಿರಿಜಾ (ಚ-೧೨)
ರಂಗ (ಚ-೧೬)	ರೇಖಾ (ಚ-೧೯)
ಶ್ರೀನಿವಾಸ (ಕ-೨೬)	ಶಾಂತಿ (ಕಾ-೦೮)
ರಾಮ (ಚ-೧೯)	ಶಾರದೆ (ನಾ-೨೧)
ಶೀನ	ನಂದಿನಿ (ಕ-೨೧)

ಮುಂತಾದ ವಾರ್ಗಿಕ ಮತ್ತು ಗೌರವಸೂಚಕಗಳಿಲ್ಲದ ಹೆಸರುಗಳು ಈ ಮೇಲೆ ಉದಾಹರಣೆಯಾಗಿ ಉಲ್ಲೇಖಿಸಲಾಗಿದೆ. ಇವೆಲ್ಲವೂ ಕಾದಂಬರಿ, ಚಲನಚಿತ್ರ, ಕಥೆ, ನಾಟಕಗಳಲ್ಲಿ ಮೇಲ್ಜಾತಿ ಪಾತ್ರಗಳಾಗಿ ಬಂದಿರುವ ಹೆಸರುಗಳು. ಈ ಹೆಸರುಗಳನ್ನು ಕೆಳಜಾತಿ ಪಾತ್ರಗಳು ಹೆಸರಿಡಿದು ಸಂಬೋಧಿಸುವುದಿಲ್ಲ. ಕೆಳಜಾತಿ ಪಾತ್ರಗಳಲ್ಲಿ ಕೆಲವು ಹೆಸರುಗಳಿವೆ ಅವುಗಳೆಂದರೆ, ರಾಮ್ಯಾ, ತಿಮ್ಮ, ತಿಮ್ಮಿ, ಈ ರೀತಿಯ ಹೆಸರುಗಳು ಮೇಲ್ಜಾತಿ ಪಾತ್ರಗಳಲ್ಲಿ ಕಂಡುಬರುವುದಿಲ್ಲ. ಆ ರೀತಿಯ ಹೆಸರುಗಳು ಬಳಕೆಯಾದರೂ ಮುದ್ದುನಾಮವಾಗಿ ರಾಮು, ತಿಮ್ಮು, ಧರ್ಮು ಎಂದು ಬಳಸಲಾಗಿದೆ. ಈ ಹೆಸರುಗಳಿಂದಲೇ ಅವರ ಸಾಮಾಜಿಕ ನೆಲೆಗಳೇನು? ಎಂಬುದನ್ನು ತಿಳಿಯಬಹುದಾಗಿದೆ. ಮೇಲ್ಜಾತಿ ಪಾತ್ರಗಳಿಗೆ ವಾರ್ಗಿಕಗಳಿಲ್ಲದ್ದಿದ್ದರೂ ಕೆಳಜಾತಿ ಪಾತ್ರಗಳು ಗೌರವಸೂಚಕ ಪದಗಳನ್ನು ಬಳಸಿ ಸಂಬೋಧಿಸುತ್ತಾರೆ. ಹಾಗಾಗಿ ಇವರ ಸಾಮಾಜಿಕ ಸ್ಥಾನಮಾನ ಬದಲಾಗುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬಹುದು.

ಕೆಳಜಾತಿ ವ್ಯಕ್ತಿನಾಮಗಳಲ್ಲಿ ಇನ್ನೊಂದು ಮಾದರಿಯನ್ನು ನೋಡಬಹುದು. ಸಾಕುಪ್ರಾಣಿಗಳಿಗೆ ಕೆಳಜಾತಿಯ ವ್ಯಕ್ತಿನಾಮಗಳನ್ನು ಇಡುವ ಮಾದರಿ. ದಲಿತರಿಗೆ ಅಥವಾ ಕೆಳಜಾತಿಯಲ್ಲಿ ಕೆಲವರಿಗೆ ಇರುವ ಹೆಸರುಗಳಾದ ಕರಿಯ, ಕಾಳ ಎಂಬ ಹೆಸರುಗಳನ್ನು ಮನೆಯಲ್ಲಿ ಸಾಕು ಪ್ರಾಣಿಗಳಿಗೂ ಇಡಲಾಗಿದೆ. ಆದರೆ ಯಾವುದೇ ಸಾಕು ಪ್ರಾಣಿಗಳಿಗೆ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳನ್ನು ಇಡುವುದು ಕಂಡುಬರುವುದಿಲ್ಲ. ಶಾಸ್ತ್ರೀ, ಗೌಡ, ಶೆಟ್ಟಿ, ಆಚಾರಿ, ಹೆಗ್ಗಡೆ ಎಂಬ ಹೆಸರುಗಳನ್ನು ಬಳಸಿ ಕರೆಯುವುದಿಲ್ಲ. ಕರಿಯ, ಕಾಳ, ಕೆಂಚ, ಬೀರ, ಹುಲಿಯಾ ಎಂಬ ಹೆಸರುಗಳನ್ನು ಬಳಸಿ ಕರೆಯುತ್ತಾರೆ. ಉದಾಹರಣೆಗೆ ರಾಜ್‌ಕುಮಾರ ಅಭಿನಯದ

'ಕವಿರತ್ನ ಕಾಳಿದಾಸ' ಸಿನಿಮಾದಲ್ಲಿ 'ಬೆಳ್ಳಿ ಮುಡಿತೋ ಕೋಳಿ ಕೂಗಿತೋ' ಎಂಬ ಹಾಡಿನಲ್ಲಿ ಕೆಳಜಾತಿ ವ್ಯಕ್ತಿಗಳ ಹೆಸರುಗಳಾದ ಕಾಳ, ಕರಿಯ, ಮುನಿಯ, ಮರಿಯ, ಕೆಂಚ, ಜವರ, ಬೀರ, ಮಾರ, ನಂಜ, ಕೆಂಪ ಎಂಬ ಹೆಸರುಗಳನ್ನು ಅವನು ಸಾಕಿದ ಕುರಿಗಳಿಗೆ ಇಡಲಾಗಿದೆ. ಅದೇ ಕುರಿಗಳಿಗೆ ಗೌಡ, ಶಾಸ್ತ್ರೀ, ಹೆಗ್ಗಡೆ, ಶೆಟ್ಟಿ ಎಂದು ಬಳಸುವುದು ಕಂಡುಬರುವುದುದಿಲ್ಲ. "ಬೆಳ್ಳಿ ಮುಡಿತೋ ಕೋಳಿ ಕೂಗಿತೋ ಎಂಬ ಹಾಡಿನಲ್ಲಿ ಓ ಕಾಳ, ಓ ಕರಿಯ, ಓ ಮುನಿಯ, ಓ ಮರಿಯ, ಓ ಕೆಂಚ, ಓ ಜವರ ಇಂದು ಈ ಭೂಮಿಮ್ಯಾಗೆ ನನ್ನ ನಿನ್ನ ತಂದವರ್‍ಯಾರು. ಬೆಳ್ಳಿ ಮೂಡಿತೋ ಕೋಳಿ ಕೂಗಿತೋ" ಎಂಬ ಹಾಡಿನಲ್ಲಿ ಬರುವ ಎಲ್ಲ ಹೆಸರುಗಳು ಕೆಳಜಾತಿ ವ್ಯಕ್ತಿಗಳ ಹೆಸರುಗಳು ಹಾಡು ಇನ್ನೂ ಮುಂದುವರೆದು "ಓ ಬೀರ, ಓ ಮಾರ, ಓ ನಂಜ, ಓ ಕೆಂಪ ಬರ‍್ರಲ್ಲೆ ಹೊತ್ತಾಯ್ತು, ಹೊಟ್ಟೆ ಚುರುಗುಟ್ಟುತೈತೆ ರಾಗಿ ಮುದ್ದೆ ಉಣ್ಣೊ ಹೊತ್ತು ಬೆಳ್ಳಿ ಮುಡಿತೋ ಕೋಳಿ ಕೂಗಿತೋ" ಎಂದು ಹಾಡು ಮುಂದುವರೆಸುತ್ತಾರೆ.

ಈ ಮೇಲಿನ ವ್ಯಕ್ತಿನಾಮಗಳು ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಾಗಿಲ್ಲ. ಸಾಕು ಪ್ರಾಣಿಗಳಿಗೆ ಕೆಳಜಾತಿ ವ್ಯಕ್ತಿಗಳ ಹೆಸರುಗಳನ್ನು ಬಳಸಲಾಗಿದೆ. ಈ ಹೆಸರುಗಳೆಲ್ಲವೂ ವಾಸ್ತವದಲ್ಲಿ ವ್ಯಕ್ತಿಗಳ ಹೆಸರುಗಳಾಗಿವೆ. ಕಾದಂಬರಿ, ಸಿನಿಮಾ, ಕಥೆ, ನಾಟಕಗಳಲ್ಲಿ ಬರುವ ಕೆಳಜಾತಿಯ ವ್ಯಕ್ತಿನಾಮಗಳು ಸಹ ಆಗಿವೆ.

ಬಿ. ಚಿನ್ನಸ್ವಾಮಿ ಅವರ 'ಮೂಗನಪಾಡು' ಎಂಬ ಕಥೆಯಲ್ಲಿ ಹೋರಿಗೆ 'ಕಾಳ' ಎಂದು ಹೆಸರು ಇಡಲಾಗಿದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಎಂಬ ಕಾದಂಬರಿಯಲ್ಲಿ ನಾಯಿಗೆ 'ಹುಲಿಯಾ' ಎಂದು ಹೆಸರಿಡುತ್ತಾನೆ. ನಾಯಿಯ ಗಾತ್ರ, ಅದರ ಧೈರ್ಯ, ಅದರ ಮೋರೆ ಇವುಗಳನ್ನು ನೋಡಿ ಅದಕ್ಕೆ 'ಹುಲಿಯಾ' ಎಂದು ನಾಮಕರಣ ಮಾಡಿದನು. ಕೆಲವರು ಅದರ ಬಣ್ಣ ನೋಡಿ 'ಕರಿಯ' ಎಂದು ಹೆಸರಿಡಲು ಸೂಚಿನೆಕೊಟ್ಟರು. (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೯)

ನಾಯಿಯ ಬಣ್ಣ ಕಪ್ಪಾಗಿದೆ ಅದಕ್ಕಾಗಿ 'ಕರಿಯ' ಎಂದು ಹೆಸರಿಡಲು ಸೂಚಿಸಿದರೂ ಸಹ ಅದು ಕೆಳಜಾತಿಯ ಪಾತ್ರದ ಹೆಸರಾಗಿದೆ.

ದೇವನೂರು ಮಹಾದೇವ ಅವರ 'ಅಮಾಸ' ಕಥೆಯಲ್ಲಿ ಕೆಳಜಾತಿ ವ್ಯಕ್ತಿಯ ಹೆಸರು 'ಕುರಿಯಯ್ಯ' ಎಂದು ಬರುತ್ತದೆ. ಇಲ್ಲಿ ಕೂಡ ಒಂದು ಪ್ರಾಣಿಯ ಹೆಸರನ್ನು ಕಾಣಬಹುದು.

ಸಾಕು ಪ್ರಾಣಿಗಳು ಮತ್ತು ಕೆಳಜಾತಿ ವ್ಯಕ್ತಿಗಳು ಎರಡು ಕೂಡ ಒಡೆಯರ ಒಡೆಯತನದಲ್ಲಿರುವಂತಹವುಗಳು ಅಂದರೆ ಇವುಗಳ ಮೇಲೆ ಅಧಿಕಾರವುಳ್ಳವರು ಈ ರೀತಿಯಾಗಿ ಕರೆಯುತ್ತಾರೆ.

ಸಾಕು ಪ್ರಾಣಿಗಳು ಮತ್ತು ಕೆಳಜಾತಿ ವ್ಯಕ್ತಿಗಳು ಒಡೆಯರು ಹೇಳಿದ ಕೆಲಸಗಳನ್ನು ಮಾಡುವ ಕಾರಣಕ್ಕಾಗಿ ಇವೆರಡರ ಮೇಲೂ ಅಧಿಕಾರವುಳ್ಳವರು, ಜಮೀನ್ದಾರರು, ಧಣಿಗಳು, ಗೌಡರು ಇನ್ನೂ ಮುಂತಾದವರು. ಅದಕ್ಕಾಗಿ ಈ ರೀತಿಯ ಹೆಸರುಗಳು ಪ್ರಾಣಿಗಳಲ್ಲಿ ಹೆಸರುಗಳಾಗಿ ಚಾಲ್ತಿಯಲ್ಲಿರುವುದು ಕಾಣಬಹುದು.

ಹೀಗೆ ವ್ಯಕ್ತಿನಾಮಗಳು ಸಮಾಜದಲ್ಲಿ ಯಾವ ರೀತಿಯಾಗಿ ಕೆಲಸ ಮಾಡುತ್ತಿವೆ ಎಂಬುದಾಗಿ ನೋಡಬಹುದು. ವಾರ್ಗಿಕ ಮತ್ತು ವಾರ್ಗಿಕಗಳಿಲ್ಲದೆ ಇರುವ ಹೆಸರುಗಳು, ಕೆಲವು ಸಮುದಾಯಗಳಿಗೆ ಮಾತ್ರ ಸೀಮಿತವಾಗಿರುವ ವ್ಯಕ್ತಿನಾಮಗಳು ಮತ್ತು ಸಾಕು ಪ್ರಾಣಿಗಳಿಗೆ ಕೆಳಜಾತಿ ವ್ಯಕ್ತಿಗಳ ಹೆಸರುಗಳು ಇಟ್ಟಿರುವಂತಹ ಸಂದರ್ಭ ಈ ಎಲ್ಲಾ ಉದಾಹರಣೆಗಳ ಮೂಲಕ ವ್ಯಕ್ತಿನಾಮಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ತಿಳಿದುಕೊಳ್ಳಲಾಗಿದೆ.

ಈ ಮೇಲಿನವುಗಳೆಲ್ಲ ಆರ್ಥಿಕ ಮತ್ತು ಸಾಮಾಜಿಕ ಸ್ತರ ಮತ್ತು ಅಂತರಗಳನ್ನು ನಿರ್ಧರಿಸುತ್ತಿರುತ್ತವೆ.

೪.೨. ವ್ಯಕ್ತಿನಾಮಗಳಲ್ಲಿ : ಜಾತಿ, ಸ್ತರಸೂಚಕ ಅಂಶಗಳು

ಭಾರತೀಯ ಸಮಾಜ ಜಾತಿ ಪ್ರಧಾನ ವ್ಯವಸ್ಥೆಯಿಂದ ಕೂಡಿದೆ. ಕನ್ನಡ ಪರಿಸರವೂ ಈ ವ್ಯವಸ್ಥೆಯಿಂದ ಹೊರತಾದುದಲ್ಲ. ಸಮಾಜದಲ್ಲಿ ಆಯಾ ಜಾತಿ, ಧರ್ಮ, ಪ್ರದೇಶಕ್ಕೆ ಅನುಗುಣವಾಗಿ ಹೆಸರಿಡುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಮೂರು ನೆಲೆಗಳಲ್ಲೂ ಮೇಲ್ಜಾತಿ ಮತ್ತು ಕೆಳಜಾತಿಗಳಲ್ಲಿ ಹೆಸರಿಡುವುದರಲ್ಲಿ ಭಿನ್ನತೆಯಿಂದ ಕೂಡಿರುತ್ತದೆ.

ಜಾತಿಯಂತೆ ಲಿಂಗದ ನೆಲೆಯು ಸಹ ವ್ಯಕ್ತಿನಾಮಗಳ ಅಧ್ಯಯನದಲ್ಲಿ ಮಹತ್ವದ ಅಂಶಗಳನ್ನು ದಾಖಲಿಸುತ್ತದೆ. ಮೇಲ್ಜಾತಿ ಗಂಡಸರ ಹೆಸರುಗಳಿಗೂ, ಹೆಂಗಸರ ಹೆಸರುಗಳಿಗೂ ವ್ಯತ್ಯಾಸವಿದೆ. ಅದರಂತೆ ಕೆಳಜಾತಿಯ ಗಂಡಸರ ಹೆಸರುಗಳಿಗೂ ಮತ್ತು ಹೆಂಗಸರ ಹೆಸರುಗಳಿಗೂ ಭಿನ್ನತೆಯಿದೆ. ಲಿಂಗದ ನೆಲೆಯಲ್ಲಿ ವ್ಯಕ್ತಿಗೆ ಹೆಸರನ್ನು ಇಡುವಾಗ ಅನುಸರಿಸುವ ಪದ್ಧತಿಗಳು ಬೆಳೆದುಬಂದ ಬಗ್ಗೆ, ಅದರಂತೆ ಲಿಂಗತಾರತಮ್ಯದ ನೆಲೆಯಲ್ಲಿ ವ್ಯಕ್ತಿನಾಮಗಳ ಸಾಮಾಜಿಕ ಆಯಾಮ ಬಹುಮುಖ್ಯ ಪಾತ್ರವಹಿಸುತ್ತದೆ. ಲಿಂಗ ಸಂಬಂಧಿ ನೆಲೆಯಲ್ಲಿ ಗಮನಿಸಿದಾಗ ಧರ್ಮ-ಧರ್ಮಗಳ ನಡುವೆಯೂ ಸಾಕಷ್ಟು ಭಿನ್ನತೆಯಿಂದ ಕೂಡಿರುವುದನ್ನು ಕಾಣಬಹುದು. ವೃತ್ತಿಯಿಂದ ವ್ಯಕ್ತಿನಾಮಗಳು ಬಳಕೆಯಲ್ಲಿರುವುದು ತಿಳಿಯುತ್ತದೆ. ಸಮುದಾಯಗಳ ವೃತ್ತಿಗಳನ್ನು ಆಧರಿಸಿದ ಜಾತಿಶ್ರೇಣೀಕರಣ ನೆಲೆಗಳಲ್ಲಿ ಆ ಸಮುದಾಯ ಮತ್ತು ವ್ಯಕ್ತಿಗಳ ಸಾಮಾಜಿಕತೆ ಮತ್ತು ಸಂಸ್ಕೃತಿಯೂ ರೂಪುಗೊಂಡಿರುತ್ತದೆ.

ಈ ಮೇಲಿನ ಅಂಶಗಳಿಂದ ಕನ್ನಡ ಅಭಿವ್ಯಕ್ತಿಯಲ್ಲಿ ಅಂದರೆ ಕಾದಂಬರಿ, ಸಿನಿಮಾ, ಕಥೆ, ನಾಟಕಗಳ ಮೂಲಕ ಜಾತಿ, ಲಿಂಗ, ವೃತ್ತಿ, ಸ್ತರಸೂಚಕಗಳ ಮೂಲಕ ಉಂಟಾದ ಸಾಮಾಜಿಕ

ಸಂಗತಿಗಳ ಕಡೆಗೆ ಗಮನಹರಿಸಲಾಗಿದೆ. ಕೆಲವು ಮುಖ್ಯವಾಗಿ ಪ್ರಾತಿನಿಧಿಕ ಕೃತಿಗಳು ಮತ್ತು ಚಲನಚಿತ್ರಗಳನ್ನು ಈ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಕಲಾಭಿವ್ಯಕ್ತಿಯಲ್ಲಿ ಕಂಡುಬರುವ ಅಗತ್ಯವೆನಿಸಿದ ಕೆಲವು ಹೆಸರುಗಳನ್ನು ಮೊದಲಿಗೆ ತೆಗೆದುಕೊಂಡು, ಆ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೪.೨.೧. ಜಾತಿನೆಲೆ : ವ್ಯಕ್ತಿನಾಮಗಳು

ಭಾರತೀಯ ಸಮಾಜದಲ್ಲಿ ವ್ಯಕ್ತಿನಾಮಗಳು ಯಾದೃಚ್ಛಿಕವಾದವುಗಳಲ್ಲ ವ್ಯಕ್ತಿ, ಸಮುದಾಯ, ಸಂಸ್ಕೃತಿ ಪ್ರದೇಶಗಳಿಗೆ ಅನುಗುಣವಾಗಿ ವ್ಯಕ್ತಿನಾಮಗಳು ರೂಪುಗೊಂಡಿರುತ್ತವೆ. ಸಮುದಾಯದಿಂದ ಇನ್ನೊಂದು ಸಮುದಾಯದ ವ್ಯಕ್ತಿಗಳ ಹೆಸರುಗಲು ಭಿನ್ನತೆಯಿಂದ ಕೂಡಿರುತ್ತವೆ.

ವೃತ್ತಿ ಅಥವಾ ಜಾತಿಯನ್ನು ಸೂಚಿಸುವಂತ ವಾರ್ಗಿಕಗಳು ವ್ಯಕ್ತಿಗಳ ಹೆಸರುಗಳಲ್ಲಿ ಬಳಕೆಯಾಗಿ, ಆ ವ್ಯಕ್ತಿಯ ಮತ್ತು ಸಮುದಾಯದ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ಸೂಚಿಸುತ್ತಿರುತ್ತವೆ. ಜೊತೆಗೆ ಲಿಂಗ ಭಿನ್ನತೆ, ಸಾಮಾಜಿಕ ಭಿನ್ನತೆಗಳು ಕಂಡುಬರುತ್ತವೆ ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಜಾತಿ ಸಊಚಿಸುವಂತಹ ವ್ಯಕ್ತಿನಾಮಗಳು ಮೇಲ್ಜಾತಿ ಪುರುಷರಲ್ಲಿ ಮಾತ್ರ ಕಂಡುಬರುತ್ತವೆ. ಮಹಿಳೆಯರ ಹೆಸರುಗಳ ಆರ್ಗಿಕ ಭಾಗದಲ್ಲಿ ವೃತ್ತಿ ಅಥವಾ ಜಾತಿಸೂಚಕ ವಾರ್ಗಿಕಗಳು ಕಂಡುಬರುವುದಿಲ್ಲ. ಸವಾಜದ ವಾಸ್ತವದಲ್ಲಿರುವಂತೆ ಕಲಾಭಿವ್ಯಕ್ತಿಯಲ್ಲೂ ಪ್ರತಿಫಲನಗೊಂಡಿದೆ.

ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ದೊರೆತ ಕೆಲವು ಉದಾಹರಣೆಗಳ ಮೂಲಕ ಕಲಾಭಿವ್ಯಕ್ತಿಯಲ್ಲಿ (ಕಾದಂಬರಿ, ಸಿನಿಮಾ, ಕಥೆ, ನಾಟಕ) ಜಾತಿಸೂಚಕ ವ್ಯಕ್ತಿನಾಮಗಳನ್ನು ಗುರುತಿಸಲಾಗಿದೆ. ಎಲ್ಲಾ ಜಾತಿ/ವೃತ್ತಿ ಸೂಚಕ ವಾರ್ಗಿಕಗಳು ಮೇಲ್ಜಾತಿಯ ವ್ಯಕ್ತಿನಾಮಗಳಲ್ಲಿ ಮಾತ್ರ ಕಂಡುಬಂದಿವೆ. ಕೆಳಜಾತಿಯ ವ್ಯಕ್ತಿನಾಮಗಳಲ್ಲಿ ಜಾತಿ/ವೃತ್ತಿ ಸೂಚಕ ವಾರ್ಗಿಕಗಳು ಕಂಡುಬರುವುದಿಲ್ಲ. ಅದರಂತೆ ಮೇಲ್ಜಾತಿ ಮಹಿಳೆ ಮತ್ತು ಕೆಳಜಾತಿ ಮಹಿಳೆಯರ ವ್ಯಕ್ತಿನಾಮಗಳಲ್ಲೂ ಜಾತಿಸೂಚಕ ವ್ಯಕ್ತಿನಾಮಗಳು ಕಂಡುಬರುವುದಿಲ್ಲ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಶೆಟ್ಟಿ ಸಮುದಾಯಕ್ಕೆ ಸೇರಿದ ಮಹಿಳೆಯ ಹೆಸರು ಅಂತಕ್ಕಶೆಟ್ಟಿ. ಈ ಒಂದು ಉದಾಹರಣೆ ಮಾತ್ರ ದೊರೆತಿದೆ. ಇನ್ನೂ ಯಾವುದೇ ಉದಾಹರಣೆಗಳು ದೊರಕಿಲ್ಲ. ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ, ನಾಟಕಗಳಿಂದ ದೊರಕಿದ ಆಕರಗಳಲ್ಲಿ ಅಧ್ಯಯನಕ್ಕೆ ಅಗತ್ಯವೆನಿಸಿದ ವ್ಯಕ್ತಿನಾಮಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಹೆಸರುಗಳ ಮುಂದೆ ಕಾದಂಬರಿ ಸಂಕೇತಕ್ಕೆ 'ಕಾ', ಚಲನಚಿತ್ರ ಸಂಕೇತಕ್ಕೆ 'ಚ' ಕಥೆಗೆ 'ಕ' ಮತ್ತು ನಾಟಕಕ್ಕೆ 'ನಾ' ಎಂದು ಸಂಕೇತವನ್ನು ಸೂಚಿಸಲಾಗಿದೆ.

ಮೇಲ್ಜಾತಿ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳನ್ನು ಹೆಗ್ಗಡೆ, ಗೌಡ, ಆಚಾರ್ಯ, ಅಯ್ಯಂಗಾರ್, ಜೋಯಿಸ, ಭಟ್ಟ, ಶೆಟ್ಟಿ, ನಾಯ್ಕ, ರಾಯ, ಶಾಸ್ತ್ರೀ, ರಾವ್ ಎಂದು ಅಧ್ಯಯನದ ಅನುಕೂಲಕ್ಕಾಗಿ ವರ್ಗೀಕರಿಸಲಾಗಿದೆ.

ಹೆಗ್ಗಡೆ	**ಗೌಡ**	**ಆಚಾರ್ಯ**
ಭರಮ್ಮೆ ಹೆಗ್ಗಡೆ (ಕಾ–೬)	ಕಲ್ಲಯ್ಯಗೌಡ (ಕಾ–೬)	ಪ್ರಾಣೇಶಾಚಾರ್ಯ(ಕಾ–೯)
ಸುಬ್ಬಣ್ಣ ಹೆಗ್ಗಡೆ (ಕಾ–೬)	ರಂಗಪ್ಪಗೌಡ (ಕಾ–೬)	ಗರುಡಾಚಾರ್ಯ (ಕಾ–೯)
ಶಂಕರ ಹೆಗ್ಗಡೆ (ಕಾ–೬)	ದೇವಯ್ಯಗೌಡ (ಕಾ–೬)	ಲಕ್ಷ್ಮಣಾಚಾರ್ಯ (ಕಾ–೯)
ತಿಮ್ಮಪ್ಪ ಹೆಗ್ಗಡೆ (ಕಾ–೬)	ಚಿನ್ನಪ್ಪಗೌಡ (ಕಾ–೬)	ದುರ್ಗಾಚಾರ್ಯ (ಕಾ–೯)
ದೊಡ್ಡಣ್ಣ ಹೆಗ್ಗಡೆ (ಕಾ–೬)	ಚಂದ್ರಯ್ಯಗೌಡ (ಕಾ–೬)	ದಾಸಾಚಾರ್ಯ (ಕಾ–೯)
ದುಗ್ಗಣ್ಣ ಹೆಗ್ಗಡೆ (ಕಾ–೬)	ರಾಮಯ್ಯಗೌಡ (ಕಾ)	ಪದ್ಮನಾಬಾಚಾರ್ಯ(ಕಾ–೯)
	ಶಂಕರಪ್ಪಗೌಡ (ಕಾ–೩)	ಭೀಮಾಚಾರ್ಯ (ಕಾ–೯)
	ಲಿಂಗಪ್ಪಗೌಡ (ಕಾ–೩)	ವೆಂಕಟರಮಣಾಚಾರ್ಯ(ಕಾ–೯)
	ಕಾಳೇಗೌಡ (ಕಾ–೮)	ಶ್ರೀನಿವಾಸಾಚಾರ್ಯ(ಕಾ–೯)
	ನಂಜೇಗೌಡ (ಕಾ–೮)	ಗುಂಡಾಚಾರ್ಯ (ಕಾ–೯)
	ಯಾಡೇಗೌಡ (ಕಾ–೨)	ಹನುಮಂತಾಚಾರ್ಯ(ಕಾ)
	ರುದ್ರಗೌಡ (ಕಾ–೧)	ವೆಂಕಣ್ಣಾಚಾರ್ಯ(ಕಾ–೯)
	ಶಾಂತಗೌಡ (ಕಾ–೧)	ಬಾಳಾಚಾರ್ಯ (ಕಾ–೩)
	ತಿರುಮಲೇಗೌಡ (ಕಾ–೪)	ಗೋಪಾಳಾಚಾರ್ಯ(ಕಾ–೩)
	ಮೇಲಗಿರಿಗೌಡ (ಕಾ–೪)	ಹಣುಮಂತಾಚಾರ್ಯ(ಕಾ–೩)
	ಬೋರನಿಂಗೇಗೌಡ (ಕಾ–೪)	ಮಧ್ವಾಚಾರ್ಯ (ಕಾ–೨)
	ಲಂಕೇಗೌಡ (ಕಾ–೪)	ಗೋವಿಂದಾಚಾರ್ಯ(ಕಾ–೫)
	ಮರಿಗೌಡ(ಕಾ–೪)	ಚನ್ನಮುದ್ದಣಾಚಾರ್ಯ(ನಾ–೪೯)
	ಚಿನ್ನೆಗೌಡ(ಕಾ–೪)	ಅಹೋಬಲಾಚಾರ್ಯ (ನಾ–೪೯)
	ಶಿಂಗೇಗೌಡ (ಕಾ–೪)	
	ನಂಜುಂಡೇಗೌಡ (ಕಾ–೪)	
	ನಾಗೇಗೌಡ (ಕಾ–೪)	
	ರಾಜೇಗೌಡ (ಕಾ–೪)	
	ಮಂಚೇಗೌಡ (ಕಾ–೪)	
	ಮುದ್ದೇಗೌಡ (ಕಾ–೪)	

ಪುಟ್ಟೇಗೌಡ (ಕಾ-೪)

ಪುಟ್ಟಸಿದ್ದೇಗೌಡ (ಕಾ-೨)

ಚಂದ್ರೇಗೌಡ (ಚ-೧೧)

ಸಿಂಗಪ್ಪಗೌಡ (ಚ-೧೧)

ಹೆತ್ತೇಗೌಡ (ಚ-೧೧)

ದುಡಿಮೆಗೌಡ (ಚ-೧೧)

ಬೋರೆಗೌಡ (ಚ-೧೨)

ಕಾಳೇಗೌಡ (ಚ-೧೨)

ಸಿದ್ದೇಗೌಡ (ಚ-೧೨)

ಕೆಂಪೇಗೌಡ (ಚ-೧೨)

ಹಿರಿಗೌಡ (ಚ-೧೨)

ಕಿರಿಗೌಡ (ಚ-೧೨)

ಶಾಂತಗೌಡ (ಕ-೨೯)

ಸುಬ್ಬಣ್ಣಗೌಡ (ಕ-೩೯)

ರಂಗಗೌಡ (ಕ-೩೯)

ರಾಮೇಗೌಡ (ಕ-೩೯)

ಸಿದ್ದೇಗೌಡ (ಕ-೩೯)

ಕೊಟ್ರಗೌಡ (ಕ-೩೧)

ಚೋಮನಗೌಡ (ಕ-೨೮)

ಮರ್ರೆಪ್ಪಗೌಡ (ನಾ-೪೨)

ಜೋಯಿಸ	ಭಟ್ಟ	ಶೆಟ್ಟಿ
ಮಂಜಯ್ಯ ಜೋಯಿಸ (ಕಾ-೬)	ಮಂಜಭಟ್ಟ (ಕಾ-೬)	ಸುಬ್ಬಯ್ಯಶೆಟ್ಟಿ(ಕಾ-೬)
ನಾಗರಾಜ ಜೋಯಿಸ (ಕಾ-೫)	ನಾರಾಯಣಭಟ್ಟ (ಕಾ-೬)	ಕಿಟ್ಟಯ್ಯಶೆಟ್ಟಿ(ಕಾ-೬)
ರಾಮ ಜೋಯಿಸ (ಕಾ-೫)	ಕೃಷ್ಣಭಟ್ಟ (ಕಾ-೪)	ಜೈಸೆಟ್ಟಿ (ಕಾ-೮)
ನರಸಿಂಹ ಜೋಯಿಸ್(ಕಾ-೪)	ವಿಘ್ನೇಶ್ವರಭಟ್ಟ (ನಾ-೪೪)	ಮಾದಸೆಟ್ಟಿ (ಕಾ-೮)
ವೆಂಕಟೇಶ ಜೋಯಿಸ್(ಕಾ-೮)	ರಂಗಪ್ಪಸೆಟ್ಟಿ (ಕಾ)	ಜನಾರ್ಧನ ಸೆಟ್ಟಿ(ಕಾ-೫)
	ಗಣಪತಿಭಟ್ಟ (ಕಾ-೫)	ಅಂತಕ್ಕಸೆಟ್ಟಿ(ಕಾ-೬)
	ದಾಮೋದರಭಟ್ಟ(ನಾ-೪೭)	ರಾಮಶೆಟ್ಟಿ(ಕ-೨೮)
		ಚನಸೆಟ್ಟಿ(ಕ-೩೧)

ಮಾಚಣ್ಣಸೆಟ್ಟಿ(ನಾ–೪೯)
ರಾಮಸೆಟ್ಟಿ(ನಾ–೫೦)

ಅಯ್ಯಂಗಾರ್

ಕುಪ್ಪಣ್ಣಾಯ್ಯಂಗಾರ್ (ಕಾ–೪)
ತಿರುನಾರಾಯಣಾಯ್ಯಂಗಾರ್ (ಕಾ–೪)
ಅಪ್ಪಣ್ಣಾಯ್ಯಂಗಾರ್ (ಕಾ–೪)
ಕೇಶವಾಯ್ಯಂಗಾರ್ (ಕಾ–೪)
ಶ್ರೀನಿವಾಸ ಅಯ್ಯಂಗಾರ್ (ನಾ–೪೮)

ನಾಯ್ಕ

ಸೇಸನಾಯ್ಕ (ಕಾ–೬)
ತಿಮ್ಮನಾಯ್ಕ (ಕಾ–೬)
ಹಮಿರನಾಯ್ಕ (ಕಾ–೬)
ರಂಗೇನಾಯ್ಕ(ಕ–೩೯)
ಶೇಷೆನಾಯ್ಕ(–೩೯)

ರಾಯ

ಶ್ಯಾಮರಾಯ (ಕಾ–೩)
ಗೋವಿಂದರಾಯ(ಕಾ–೮)
ಶ್ರೀಪತಿರಾಯ (ಕಾ–೫)
ನರಹರಿರಾಯ (ಕಾ–೫)
ಆನಂದರಾಯ (ಕಾ–೫)
ವೆಂಕಟರಾಯ (ಕಾ–೫)
ವೆಂಕಟಕೃಷ್ಣರಾಯ(ಕಾ–೫)
ಭೀಮಸೇನರಾಯ(ಕಾ–೪)
ನಾರಾಯಣರಾಯ(ಕಾ–೪)
ಮಾಧವರಾಯ (ಚ–೧೩)
ಶಿವರಾಯ (ಚ–೧೮)
ಕನಕರಾಯ(ನಾ–೪೯)
ಮಲ್ಲಿನಾಥರಾಯ(ನಾ–೪೯)
ದೊಡ್ಡರಾಯ(ನಾ–೫೪)
ಕೋದಂಡರಾಯ(ನಾ–೪೪)
ಹಯವದನರಾಯ(ನಾ–೪೪)

ಶಾಸ್ತ್ರೀ

ಕೃಷ್ಣಶಾಸ್ತ್ರೀ (ಕಾ–೮)
ವಿಶ್ವನಾಥಶಾಸ್ತ್ರೀ (ಕಾ–೫)
ವಿಶ್ವೇಶ್ವರ ಶಾಸ್ತ್ರೀ (ಕಾ–೪)
ಸರ್ವೇಶ್ವರ ಶಾಸ್ತ್ರೀ (ಚ–೧೦)

ರಾವ್

ರಂಗಾರಾವ್ (ಕಾ–೫)
ರಾಘವೇಂದ್ರರಾವ್ (ಚ–೧೩)
ಸೂರ್ಯನಾರಾಯಣರಾವ್ (ಚ–೧೨)
ಜಗನ್ನಾಥರಾವ್ (ಚ–೧೯)
ಬಿಚ್ಚುನಾಥರಾವ್ (ನಾ–೪೯)
ಸದಾಶಿವರಾವ್ (ನಾ–೪೫)
ಹಯವದನರಾವ್ (ನಾ–೪೮)

ಮೇಲೆ ಹೇಳಿರುವಂತೆ ಗುಂಪುಗಳಲ್ಲಿ ವಿವಿಧ ಬಗೆಯ ವಾರ್ಗಿಕಗಳುಳ್ಳ ಹೆಸರುಗಳಿವೆ. ಇದರಲ್ಲಿ ಹೆಸರಿನ ಎರಡನೇ ಭಾಗ ಅಂದರೆ ವಾರ್ಗಿಕಗಳಲ್ಲಿ ಗೌಡ, ಆಚಾರ್ಯ, ಅಯ್ಯಂಗಾರ್, ಜೋಯಿಸ, ಭಟ್ಟ, ಶೆಟ್ಟಿ, ನಾಯ್ಕ, ರಾಯ, ಶಾಸ್ತ್ರೀ, ರಾವ್ ಈ ವಾರ್ಗಿಕಗಳು ವ್ಯಕ್ತಿಗಳ ಜಾತಿ ಅಥವಾ ವೃತ್ತಿಗಳನ್ನು ಸೂಚಿಸುವಂತಹವುಗಳಾಗಿವೆ. ಈ ವ್ಯಕ್ತಿನಾಮಗಳು ಪ್ರಾದೇಶಿಕವಾಗಿ ಭಿನ್ನತೆಯನ್ನು ಕೂಡ ಹೊಂದಿವೆ. ಉದಾಹರಣೆಗೆ ಹೆಗ್ಗಡೆ ಎಂಬ ವಾರ್ಗಿಕವನ್ನು ಹೊಂದಿರುವ ಹೆಸರುಗಳು ಉತ್ತರ ಕರ್ನಾಟಕದಲ್ಲಿ ಕಂಡುಬರುವುದು ವಿರಳ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಭರಮೈ ಹೆಗ್ಗಡೆ, ಸುಬ್ಬಣ್ಣ ಹೆಗ್ಗಡೆ, ಶಂಕರ ಹೆಗ್ಗಡೆ, ತಿಮ್ಮಪ್ಪ ಹೆಗ್ಗಡೆ ಎಂಬ ಹೆಸರುಗಳು ಕಂಡುಬರುತ್ತವೆ. ಮಹಿಳೆಯರ ಹೆಸರಿನಲ್ಲಿ ಈ ಹೆಗ್ಗಡೆ ವಾರ್ಗಿಕ ಬಳಕೆಯಾಗುವುದಿಲ್ಲ. ಉಲ್ಲೇಖದ ಸಂದರ್ಭದಲ್ಲಿ ಹೆಗ್ಗಡತಿ, ಹೆಗ್ಗಡ್ತಮ್ಮ ಎಂಬುದು ಬಳಕೆಯಾಗುತ್ತದೆ. ಉದಾಹರಣೆಗೆ "ಗಾಡಿಯೊಳಗೆ ಮುಂದೆ ಕುಳಿತಿದ್ದ ದೊಡ್ಡಮ್ಮ ಹೆಗ್ಗಡಿತಿಯವರು ಕೇಳಿದರು" ಯಾರೋ ಅದು ಅಲ್ಲಿ ಕೂತಿದಾರಲ್ಲಾ? ದಾಸಯ್ಯನ ಕಂಡ ಹಾಂಗೆ ಕಾಣ್ತದೆ! (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೪೨೦)

ಮದುವೆಗೂ ಮುಂಚೆ 'ಹೆಗ್ಗಡತಿ' ಎಂದು ಬಳಕೆಯಾಗುವುದಿಲ್ಲ. ಹೆಗ್ಗಡೆಯವರನ್ನು ಮದುವೆಯಾದ ನಂತರ ಹೆಗ್ಗಡತಿ ಎಂಬ ಪಟ್ಟ ಬರುತ್ತದೆ. ದಾನಮ್ಮ ಹೆಗ್ಗಡತಿ, ಕಾನೂರು ಸುಬ್ಬಮ್ಮ ಹೆಗ್ಗಡತಿ ಈ ರಿತಿಯಾಗಿ ಬಳಕೆಯಾಗುತ್ತದೆ. ಹಾಗೆಯೇ 'ಗೌಡ' ಎಂಬ ವಾರ್ಗಿಕ ಪುರುಷರ ಹೆಸರಿನ ಮುಂದೆ ಬಳಕೆಯಾದರೆ, ಸ್ತ್ರೀಯರಿಗೆ ಹೆಸರಿನ ಮುಂದೆ 'ಗೌಡ್ತಿ' ಎಂದು ಬಳಕೆಯಾಗುವುದಿಲ್ಲ. 'ಗೌಡ್ತಿ' ಎಂಬುದು ಸಹ ಉಲ್ಲೇಖದಲ್ಲಿ ಮಾತ್ರ ಬಳಕೆಯಾಗುತ್ತದೆ.

ಉದಾಹರಣೆಗೆ ಚನ್ನಣ್ಣ ವಾಲೀಕಾರ ಅವರ 'ಇಪ್ಪತ್ತಂಶಗಳು' ಎಂಬ ನಾಟಕದಲ್ಲಿ 'ಗುಂಡಮ್ಮ ಗೌಡ್ತಿ' ಎಂದು ಬಳಕೆಯಾಗಿದೆ. ಪ್ರಾದೇಶಿಕವಾಗಿ ವ್ಯಕ್ತಿನಾಮಗಳನ್ನು ನೋಡುವುದಾದರೆ ಮಂಚೇಗೌಡ, ಮುದ್ದೇಗೌಡ, ಹತ್ತೇಗೌಡ, ಯಾಡೆಗೌಡ ಎಂಬ ಹೆಸರುಗಳು ಮೈಸೂರು ಭಾಗದಲ್ಲಿ ಮಾತ್ರ ಹೆಚ್ಚು ಬಳಕೆಯಾಗುವ ಹೆಸರುಗಳಾಗಿವೆ.

'ಗೌಡ' ಎಂಬ ವಾರ್ಗಿಕವುಳ್ಳ ವ್ಯಕ್ತಿಗಳು ಜಾತಿ ಅಥವಾ ವೃತ್ತಿಯ ಸೂಚಕಗಳಾಗಿವೆ. ಇವು ಮೇಲ್ಜಾತಿ ವ್ಯಕ್ತಿಗಳಲ್ಲಿ ಮಾತ್ರ ಕಂಡುಬರುತ್ತವೆ. ಗೌಡ ಎಂಬ ಪದವು ಹೇಗೆ ಬಳಕೆಗೆ ಬಂತು ಎಂಬುದಕ್ಕೆ ಉದಾಹರಣೆ "ಗೌಡ ಎಂಬುದು ಒಂದು ಹುದ್ದೆಯನ್ನು ಸೂಚಿಸುತ್ತದೆ. ಗ್ರಾಮದ ಮುಖಂಡನಿಗೆ ಹಿಂದೆ ಈ ಹೆಸರಿನಿಂದ ಕರೆಯಲಾಗುತ್ತಿತ್ತು. ಈ ಅಧಿಕಾರವನ್ನು ಹೊಂದಿರುವ ವ್ಯಕ್ತಿ ಇತರರಿಗಿಂತ ಭಿನ್ನವೆಂದು ಸೂಚಿಸಿಕೊಳ್ಳಲು, ತಮ್ಮ ಹೆಸರಿನ ಮುಂದೆ ತಮ್ಮ ಹುದ್ದೆಯ ಹೆಸರನ್ನು ಬರೆಯಿಸಿಕೊಳ್ಳುವಂಥದ್ದು ಒಂದು ಸಾಮಾನ್ಯ ಪ್ರಕ್ರಿಯೆಯಾಗಿತ್ತು. ಹೀಗೆ ಬಳಸಿ

ಬಂದ ಹೆಸರು ವ್ಯಕ್ತಿನಾಮದ ಭಾಗವಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಪ್ರಾಚೀನ ಕಾಲದಲ್ಲಿ 'ಗೌಡ' ಎಂಬುದು 'ಗಾವುಂಡ' ಎಂದು ಬಳಕೆಯಾಗಿದೆ. ಶಾಸನ, ಕಾವ್ಯಗಳಿಂದ ಅನೇಕ ಉದಾಹರಣೆಗಳನ್ನು ಇದಕ್ಕೆ ಕೊಡಬಹುದು. 'ವಿಕ್ರಮಗಾವುಂಡ', 'ವಲ್ಲಭಗಾವುಂಡ' ಎಂಬ ಹೆಸರುಗಳನ್ನು ಗಮನಿಸಬಹುದು. (ಸಣ್ಣಪಾಪಯ್ಯ, ಚಿತ್ರದುರ್ಗ ಜಿಲ್ಲೆಯ ವ್ಯಕ್ತಿನಾಮಗಳು, ಪುಟ-೮೨)

'ಗೌಡ' ಎಂಬ ಪದವು ಹುದ್ದೆ ಅಥವಾ ಅಧಿಕಾರವನ್ನು ಸೂಚಿಸುವಂತಹ ಪದವಾಗಿರುವುದರಿಂದ ಕೆಳಜಾತಿ ವ್ಯಕ್ತಿಗಳಿಗೆ 'ಗೌಡ' ಎಂಬ ವಾರ್ಗಿಕ ಹೆಸರಿನಲ್ಲಿ ಬಂದಿಲ್ಲ. ಯಾಕೆಂದರೆ ಹುದ್ದೆ, ಅಧಿಕಾರ ಯಾವಾಗಲೂ ಮೇಲ್ಜಾತಿಯವರಿಗೆ ಮಾತ್ರ ಸೀಮಿತವಾಗಿರುತ್ತಿತ್ತು. ಗ್ರಾಮದ ಮುಖಂಡನಿಗೂ ಹಿಂದೆ ಈ ಹೆಸರಿನಿಂದ ಕರೆಯಲಾಗುತ್ತಿತ್ತು. ಕೆಳಜಾತಿಯ ವ್ಯಕ್ತಿಗಳು ಹಿಂದಿನಿಂದ ಯಾವಾಗಲೂ ಗ್ರಾಮದ ಮುಖಂಡರಾಗಿರಲಿಲ್ಲ. ಆದ್ದರಿಂದ ಈ ರೀತಿಯ ಹೆಸರುಗಳು ಮೇಲ್ಜಾತಿ ಹೆಸರುಗಳಲ್ಲಿ ಮಾತ್ರ ಕಂಡುಬರುತ್ತವೆ.

ಈ ಮೇಲೆ ಉಲ್ಲೇಖಿಸಿರುವ ವ್ಯಕ್ತಿನಾಮಗಳಾದ ಭರಮೈಹೆಗ್ಗಡೆ, ಸುಬ್ಬಣ್ಣಹೆಗ್ಗಡೆ, ತಿಮ್ಮಪ್ಪಹೆಗ್ಗಡೆ ಹೆಸರುಗಳು ಮೇಲ್ಜಾತಿ ಪುರುಷರ ಹೆಸರುಗಳಲ್ಲಿ ಮಾತ್ರ ಬಳಕೆಯಾಗುತ್ತದೆ. ಹೆಗ್ಗಡೆ ಎಂಬುದು ಪುರುಷರ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿರುವ ಪದವು ಭೌಗೋಳಿಕವಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಬಳಕೆಯಾಗುತ್ತಿದೆ. ಆದರೆ ಸಾಮಾಜಿಕವಾಗಿ ನೋಡುವುದಾದರೆ ಮಹಿಳೆ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಹೆಗ್ಗಡೆ ಪದ ಬಳಕೆಯಾಗುತ್ತಿಲ್ಲ. ಮೇಲ್ಜಾತಿ ಮಹಿಳೆಯ ಹೆಸರುಗಳಲ್ಲಿ ಉಲ್ಲೇಖ ರೂಪದಲ್ಲಾದರೂ ಬಳಕೆಯಾಗುತ್ತಿದೆ. ಆದರೆ, ಕೆಳಜಾತಿ ವ್ಯಕ್ತಿಗಳಲ್ಲಿ ಬಳಕೆಯಾಗಿಲ್ಲ. 'ಹೆಗ್ಗಡೆ' ಎಂಬ ಪದ ಹೇಗೆ ಬಳಕೆಗೆ ಬಂತು ಎಂಬುದನ್ನು ನೋವುದಾದರೆ,

"ಹೆಗ್ಗಡೆ ಅಥವಾ ಹೆಗಡೆ ಎಂಬುದು ಪುರುಷ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿರುವ ಒಂದು ವಾರ್ಗಿಕವಾಗಿದೆ. 'ಹೆಗ್ಗಡೆ' ಎಂಬುದು 'ಪೆರ್ಗಡೆ' ಎಂಬ ಬೆಳೆದ ಪದವಾಗಿದೆ. ಹೆಗ್ಗಡೆ/ಹೆಗಡೆ ಎಂಬುದು ನಾಯಕ, ಮುಂದಾಳು, ಮುಖಂಡ ಎಂಬ ಅರ್ಥಗಳನ್ನು ನೀಡುತ್ತದೆ. 'ಹೆಗ್ಗಡೆ', ಹೆಗ್ಡೆ', ಮತ್ತು 'ಹೆಗಡೆ' ಎಂಬ ಈ ರೂಪಗಳು ಒಂದೇ ಮೂಲಪದದಿಂದ ನಿಷ್ಪನ್ನಗೊಂಡ ಬೇರೆ ಬೇರೆ ರೂಪಗಳಾಗಿರುವುದರಿಂದ, ಮೂರು ಪದಗಳು ಸೂಚಿಸುವ ಅರ್ಥ ಸಾಮಾನ್ಯವಾಗಿ ಒಂದೇ ಆಗಿದೆ. ಆದರೆ ಈ ಮೂರು ಪದರೂಪಗಳು ಸಾಮಾಜಿಕವಾಗಿ ಮತ್ತು ಭೌಗೋಳಿಕವಾಗಿ ಬೇರೆ ಬೇರೆ ಸಮುದಾಯವನ್ನು ಪ್ರತಿನಿಧಿಸುತ್ತವೆ" (ಸಣ್ಣಪಾಪಯ್ಯ, ಚಿತ್ರದುರ್ಗ ಜಿಲ್ಲೆಯ ವ್ಯಕ್ತಿನಾಮಗಳು, ಪುಟ-೬೯)

'ಕುವೆಂಪು' ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಭರಮೈಹೆಗ್ಗಡೆ, ಸುಬ್ಬಣ್ಣಹೆಗ್ಗಡೆ, ತಿಮ್ಮಪ್ಪಹೆಗ್ಗಡೆ, ದೊಡ್ಡಣ್ಣಹೆಗ್ಗಡೆ ಈ ಎಲ್ಲ ಪಾತ್ರಗಳು ಮೇಲ್ಜಾತಿ ಪಾತ್ರಗಳು.

ಮೇಲ್ಜಾತಿ ಪಾತ್ರಗಳಲ್ಲಿ ಒಂದು ಸಮುದಾಯದವರ ಹೆಸರುಗಳಲ್ಲಿ ಮಾತ್ರ ಬಳಕೆಯಾಗುತ್ತಿದೆ. ಇಡೀ ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳ ಯಾವ ವ್ಯಕ್ತಿಗಳ ಹೆಸರುಗಳಲ್ಲಿ 'ಹೆಗ್ಗಡೆ' ಪದ ಬಳಕೆಯಾಗಿಲ್ಲ. ಕೆಳಜಾತಿ ವ್ಯಕ್ತಿಗಳಲ್ಲಿ 'ತಿಮ್ಮ' ಎಂಬ ಪಾತ್ರವಿದೆ. ಆದರೆ ಯಾವ ವಾರ್ಗಿಕಗಳು ಆ ಪಾತ್ರದ ಹೆಸರಿಗೆ ಬಳಕೆಯಾಗಿಲ್ಲ. ಮೇಲ್ಜಾತಿ ಪಾತ್ರದಲ್ಲಿ 'ತಿಮ್ಮಪ್ಪ' ಎಂಬ ಪಾತ್ರವಿದೆ ಆ ಪಾತ್ರಕ್ಕೆ 'ಹೆಗ್ಗಡೆ' ಎಂಬ ವಾರ್ಗಿಕ ಸೇರಿ ತಿಮ್ಮಪ್ಪಹೆಗ್ಗಡೆಯಾಗಿ ಬಳಕೆಯಾಗುತ್ತಿದೆ. ಇಲ್ಲಿ ಹೆಗ್ಗಡೆ ಎಂಬ ಪದವು ನಾಯಕ, ಮುಂದಾಳು, ಮುಖಂಡ ಎಂಬ ಅರ್ಥಗಳನ್ನು ಪಡೆದಿರುವುದರಿಂದ ಕೆಳಜಾತಿ ವ್ಯಕ್ತಿಗಳಲ್ಲಿ ಸೇರಿಲ್ಲ. ಯಾಕೆಂದರೆ ಹಿಂದೆ ಕೆಳಜಾತಿ ವ್ಯಕ್ತಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದರಿಂದ ಅವರಿಗೆ ಸಮಾಜದಲ್ಲಿ ಯಾವ ರೀತಿಯ ಅಧಿಕಾರ, ನಾಯಕತ್ವಗಳು ದೊರೆಯುತ್ತಿರಲಿಲ್ಲ. ಆದ ಕಾರಣ ಈ ಹೆಗ್ಗಡೆ ಎಂಬ ಪದ ಕೆಳಜಾತಿಯ ಹೆಸರುಗಳಲ್ಲಿ ಬಂದು ಸೇರಿಲ್ಲ ಎಂದು ಹೇಳಬಹುದು.

ಬ್ರಾಹ್ಮಣ ಸಮುದಾಯದ ವ್ಯಕ್ತಿಗಳ ಹೆಸರುಗಳಲ್ಲಿ ಕಂಡುಬರುವಂತಹ ವಾರ್ಗಿಕಗಳಾದ ರಾಯ, ರಾವ್, ಆಚಾರ್ಯ, ಭಟ್ಟ, ಶಾಸ್ತ್ರೀ, ಜೋಯಿಸ, ಅಯ್ಯಂಗಾರ್ ಎಂಬ ವಾರ್ಗಿಕಗಳು ಕನ್ನಡ ಅಭಿವ್ಯಕ್ತಿಯಲ್ಲಿ ಎಲ್ಲಿಯೂ ಸಹ ಬಳಕೆಯಾಗಿಲ್ಲ ಯಾಕೆಂದರೆ ಈ ಹೆಸರುಗಳನ್ನು ನೋಡಿದ ಅಥವಾ ಕೇಳಿದ ಕೂಡಲೇ ಇದು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಯ ಹೆಸರೆಂದು ಹೇಳಬಹುದು.

ಯು.ಆರ್. ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯಲ್ಲಿ ಬರುವ ಪ್ರಾಣೇಶಾಚಾರ್ಯ, ಕಾವೇರಿ ಸಿನಿಮಾದಲ್ಲಿ ಬರುವ ನಾಯಕ ಪಾತ್ರವಾದ ರಾಘವೇಂದ್ರರಾವ್, ಸಿದ್ದಲಿಂಗಯ್ಯ ಅವರ 'ಪಂಚಮ' ಕಥೆಯಲ್ಲಿ ಬರುವ ಹಯವದನರಾವ್, ಚದುರಂಗರ 'ವೈಶಾಖ' ಕಾದಂಬರಿಯಲ್ಲಿ ಬರುವ ಕೃಷ್ಣಶಾಸ್ತ್ರೀ ಪಾತ್ರ, ದೇವನೂರರ ಕುಸುಮಬಾಲೆ ಕಾದಂಬರಿಯಲ್ಲಿ ಬರುವ ಮಧ್ವಾಚಾರ್ಯರು ಇನ್ನೂ ಮುಂತಾದ ಕೃತಿ ಮತ್ತು ಚಲನಚಿತ್ರಗಳಲ್ಲಿ ಬರುವ ಕೃಷ್ಣಪ್ಪಯ್ಯಂಗಾರ್, ನರಸಿಂಹಜೋಯಿಸ, ಕೃಷ್ಣಭಟ್ಟ, ಶಿವರಾಯ ಪಾತ್ರಗಳೆಲ್ಲವೂ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಹೆಸರುಗಳಾಗಿವೆ. ಬ್ರಾಹ್ಮಣ ಸಮುದಾಯವನ್ನು ಹೊರತುಪಡಿಸಿ ಬೇರೆಯಾವ ಸಮುದಾಯದಲ್ಲೂ ಈ ವಾರ್ಗಿಕಗಳು ಇರುವ ಹೆಸರುಗಳು ಕಂಡುಬರುವುದಿಲ್ಲ. ಹಾಗೆಯೇ ಕೆಳಜಾತಿ ಅಥವಾ ದಲಿತರಲ್ಲಿಯೂ ಸಹ ಕಂಡುಬರುವುದಿಲ್ಲ. ಅದರಂತೆ ಮಹಿಳೆಯರ ಹೆಸರುಗಳಲ್ಲಿಯೂ ಸಹ ಅಯ್ಯಂಗಾರ್, ಭಟ್ಟ, ವಾರ್ಗಿಕಗಳಿರುವ ಹೆಸರುಗಳು ಕಂಡುಬರುವುದಿಲ್ಲ ಎಂದು ಹೇಳಬಹುದು.

ಈ ಮೇಲೆ ಉಲ್ಲೇಖಿಸಿದ ವಾರ್ಗಿಕಗಳು ಬ್ರಾಹ್ಮಣ ಸಮುದಾಯದ ವ್ಯಕ್ತಿಗಳ ಹೆಸರುಗಳಲ್ಲಿ ಸೇರಲು ಕಾರಣಗಳನ್ನು ಪರಿಶೀಲಿಸುವುದಾದರೆ, ಉದಾರಣೆಗೆ 'ಆಚಾರ್ಯ' ಎಂಬ ಪದವನ್ನು

ನೋಡುವುದಾದರೆ 'ಆಚಾರ್ಯ' ಎಂದರೆ ಗುರು, ಪುರೋಹಿತ, ವಿದ್ವಾಂಸ ಎಂಬರ್ಥ. ನಮ್ಮ ಸಮಾಜ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯಾಗಿದ್ದು, ಇದರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳಿವೆ. ಈ ವರ್ಗ ಕ್ರಮದಲ್ಲಿ ಬ್ರಾಹ್ಮಣರು ಎಲ್ಲರಿಗಿಂತಲೂ ಶ್ರೇಷ್ಠರೆಂದು ಮೊದಲ ಸ್ಥಾನವನ್ನು ಪಡೆದಿದ್ದಾರೆ. ಆದುದರಿಂದ ಬ್ರಾಹ್ಮಣರು ರಾಜರುಗಳಿಗೆ ಮಾತ್ರವಲ್ಲ ಇಡೀ ಸಮಾಜಕ್ಕೆ ಗುರುಗಳು ಇದ್ದ ಹಾಗೆ ಎಂದು ಜನ ಭಾವಿಸಿದ್ದಾರೆ. ಬ್ರಾಹ್ಮಣರಲ್ಲಿ ಒಂದು ವರ್ಗಕ್ಕೆ ಮಾತ್ರ ಈ ಹೆಸರು ಸೀಮಿತವಾಗಿದ್ದು, ಅವರ ಹೆಸರುಗಳಲ್ಲಿ ಮಾತ್ರ 'ಆಚಾರ್ಯ' ಎಂಬುದು ಬಳಕೆಯಾಗುತ್ತದೆ. ಬ್ರಾಹ್ಮಣರಲ್ಲಿ ದಾನ-ದಕ್ಷಣೆ ಸ್ವೀಕರಿಸುವ ಮತ್ತು ಕೊಡುವ ಅಧಿಕಾರವಿರುವವರು ಅಥವಾ ಪೌರೋಹಿತ್ಯ ಮಾಡಿಸುವ ಹಾಗೂ ಮಾಡುವ ಎರಡು ಅಧಿಕಾರ ಇರುವವರು ಮಾತ್ರ ತಮ್ಮ ಹೆಸರುಗಳಲ್ಲಿ 'ಆಚಾರ್ಯ' ಎಂದು ಇಟ್ಟುಕೊಳ್ಳುತ್ತಾರೆ. (ಸಣ್ಣಪಾಪಯ್ಯ, ಚಿತ್ರದುರ್ಗ ಜಿಲ್ಲೆಯ ವ್ಯಕ್ತಿನಾಮಗಳು, ಪುಟ-೬೬)

'ಆಚಾರ್ಯ' ಎಂದರೆ ಗುರು, ಪುರೋಹಿತ, ವಿದ್ವಾಂಸ ಎಂಬ ಅರ್ಥಗಳು ಬರುತ್ತವೆ. ನಮ್ಮ ಭಾರತೀಯ ಸಮಾಜದಲ್ಲಿ ಹಿಂದೆ ಶಿಕ್ಷಣ ಎಂಬುದು ಕೆಲವು ಸಮುದಾಯಗಳಿಗೆ ಮಾತ್ರ ಸೀಮಿತವಾಗಿತ್ತು. ಶಿಕ್ಷಣ, ವೇದಾಭ್ಯಾಸ ಮಾಡಿದವರು ಗುರುಗಳಾಗುತ್ತಾರೆ, ಪುರೋಹಿತರಾಗುತ್ತಾರೆ ಮತ್ತು ವಿದ್ವಾಂಸರೂ ಆಗುತ್ತಾರೆ. ಯಾರು ಶಿಕ್ಷಣ ಪಡೆದು ವಿದ್ವಾಂಸರಾಗಿದ್ದರೋ, ಪೌರೋಹಿತ್ಯ ಮಾಡುತ್ತಿದ್ದರೋ ಅವರಿಗೆ ಈ 'ಆಚಾರ್ಯ' ಪದ ವಾರ್ಗಿಕವಾಗಿ ಅವರ ಹೆಸರುಗಳಲ್ಲಿ ಬಳಕೆಯಾಗಿದೆ. ಕೆಳಜಾತಿ ದಲಿತರಿಗೆ ಶಿಕ್ಷಣ ಪಡೆಯುವ ಅವಕಾಶ ಇರಲಿಲ್ಲ. ಆದ್ದರಿಂದ ಕೆಳಜಾತಿ ದಲಿತರ ಹೆಸರುಗಳಲ್ಲಿ ಈ ಆಚಾರ್ಯ ಎಂಬ ವಾರ್ಗಿಕ ಬಂದಿಲ್ಲ ಎನ್ನಬಹುದು. ಮೇಲ್ಜಾತಿಯವರಲ್ಲಿ ಈಗ ವೇದಾಭ್ಯಾಸ ಮಾಡಿದಿದ್ದರೂ ಈ ಆಚಾರ್ಯ ಎಂಬ ವಾರ್ಗಿಕ ಎಂಬ ಹೆಸರಿನ ಜೊತೆಗೆ ಬಳಕೆಯಾಗುತ್ತಿದೆ. ಅದೊಂದು ಈಗ ಜಾತಿಯ ಸಂಕೇತವಾಗಿ ಬಳಕೆಯಾಗುತ್ತಿದೆ.

'ಶಾಸ್ತ್ರೀ' ಎಂಬ ವಾರ್ಗಿಕ ಪದವೂ ಸಹ ಬ್ರಾಹ್ಮಣ ವ್ಯಕ್ತಿಗಳ ಹೆಸರುಗಳಲ್ಲಿ ಮಾತ್ರ ಉಲ್ಲೇಖವಾಗುತ್ತದೆ. ವೈಶಾಖ ಕಾದಂಬರಿಯಲ್ಲಿ ಬರುವ ಕೃಷ್ಣಶಾಸ್ತ್ರೀ ಹಾಗೂ ಆನಂದ ಭೈರವಿ ಚಲನಚಿತ್ರದಲ್ಲಿನ ಸರ್ವೇಶ್ವರಶಾಸ್ತ್ರೀ, ಭಾರತೀಪುರ ಕಾದಂಬರಿಯ ವಿಶ್ವನಾಥಶಾಸ್ತ್ರೀ ಈ ಪಾತ್ರಗಳೆಲ್ಲವೂ ಸಹ ಬ್ರಾಹ್ಮಣ ಸಮುದಾಯದ ಪಾತ್ರಗಳಾಗಿವೆ.

'ಶಾಸ್ತ್ರೀ' ಎಂಬ ಪದ ಕೆಳಜಾತಿಯ ದಲಿತ ಪಾತ್ರಗಳಲ್ಲಿ ಮತ್ತು ಇನ್ನೂ ಯಾವುದೇ ಸಮುದಾಯದ ವ್ಯಕ್ತಿಗಳ ಹೆಸರುಗಳಲ್ಲಿ ಕಂಡುಬರುವುದಿಲ್ಲ. 'ಶಾಸ್ತ್ರೀ' ಎಂಬ ವಾರ್ಗಿಕ ಬ್ರಾಹ್ಮಣ ಸಮುದಾಯದ ವ್ಯಕ್ತಿಗಳ ಹೆಸರುಗಳಲ್ಲಿ ಮಾತ್ರ ಹೇಗೆ ಬಂತು ಎಂಬುದನ್ನು ನೋಡುವುದಾದರೆ,

'ಶಾಸ್ತ್ರೀ' ಎಂದರೆ 'ಶಾಸ್ತ್ರಜ್ಞ' ಎಂದರ್ಥ. ಅಂದರೆ ಶಾಸ್ತ್ರ ಅಭ್ಯಾಸಗಳಲ್ಲಿ ಪಾರಂಗತನಾದವನು. ಕೆಲವು ಬ್ರಾಹ್ಮಣರ ವ್ಯಕ್ತಿನಾಮಗಳಲ್ಲಿ ಇದು ಗೌರವಸೂಚಿಯಾಗಿ ಬಳಕೆಯಾಗುತ್ತದೆ. ಶಾಸ್ತ್ರ ಅಧ್ಯಯನಗಳನ್ನು ತಿಳಿದವನಿಗೆ ಮಾತ್ರ ಈ ಉಪನಾಮದಿಂದ ಕರೆಯಲಾಗುತ್ತಿತ್ತು. ಆದರೆ ಬರಬರುತ್ತಾ ಅದನ್ನು ಒಂದು ಪರಂಪರೆಯನ್ನಾಗಿ ಬಳಸಿಕೊಳ್ಳತೊಡಗಿದರು. ಏನೂ ಓದದೆ ಇರುವವರು ಕೂಡ 'ಶಾಸ್ತ್ರೀ' ಎಂದು ಇಟ್ಟುಕೊಳ್ಳಬಹುದಾಯಿತು. (ಸಣ್ಣಪಾಪಯ್ಯ, ಚಿತ್ರದುರ್ಗ ಜಿಲ್ಲೆಯ ವ್ಯಕ್ತಿನಾಮಗಳು, ಪುಟ-೬೭-೬೮) ಹಿಂದೆ ಶಾಸ್ತ್ರ ಅಭ್ಯಾಸಗಳನ್ನು ಮಾಡುವುದಕ್ಕೆ ಬ್ರಾಹ್ಮಣ ಸಮುದಾಯದ ವ್ಯಕ್ತಿಗಳಿಗೆ ಮಾತ್ರ ಅವಕಾಶವಿತ್ತು. ಬೇರೆ ಯಾವ ಸಮುದಾಯದವರಿಗೂ ಅವಕಾಶವಿರಲಿಲ್ಲ. ಆದ್ದರಿಂದ ಆ ಸಮುದಾಯದ ವ್ಯಕ್ತಿಗಳಿಗೆ ಮಾತ್ರ ಈ ಹೆಸರು ಬಳಕೆಯಾಗುತ್ತದೆ. ಇದು ಇಂದು ಜಾತಿವಾಚಿಯಾಗಿ ಬಳಕೆಯಾಗುತ್ತಿದೆ. ಕೆಳಜಾತಿ ವ್ಯಕ್ತಿಗಳಲ್ಲಿ 'ಶಾಸ್ತ್ರೀ' ಎಂಬ ವಾರ್ಗಿಕ ಬಳಕೆಯಾಗುವುದಿಲ್ಲ.

ಬ್ರಾಹ್ಮಣ ಸಮುದಾಯದ ವ್ಯಕ್ತಿಗಳಲ್ಲಿ 'ಅಯ್ಯಂಗಾರ್' ಎಂಬ ವಾರ್ಗಿಕವೂ ಸಹ ಹೆಚ್ಚು ಬಳಕೆಯಲ್ಲಿದೆ. ಇದು ಜಾತಿವಾಚಿ ವಾರ್ಗಿಕ ಪದವಾಗಿ ಬಳಕೆಯಾಗುತ್ತಿದೆ. ಹಾಗೆಯೇ ಭಟ್ಟ, ಶರ್ಮ, ರಾವ್ ಮುಂತಾದ ವಾರ್ಗಿಕಗಳು ಬ್ರಾಹ್ಮಣ ಸಮುದಾಯದ ವ್ಯಕ್ತಿಗಳ ಹೆಸರುಗಳಲ್ಲಿ ವಾರ್ಗಿಕ ಪದವಾಗಿ ಬಳಕೆಯಲ್ಲಿದೆ. ಮೇಲೆ ಉಲ್ಲೇಖಿಸಿದ ಗೌಡ, ಹೆಗ್ಗಡೆ, ರಾವ್, ಆಚಾರ್ಯ, ಜೋಯಿಸ, ಶಾಸ್ತ್ರೀ ಈ ಎಲ್ಲ ವಾರ್ಗಿಕಗಳು ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಬಳಕೆಯಾದಂತಹ ವಾರ್ಗಿಕಗಳಾಗಿ. ಕೆಳಜಾತಿ ಪಾತ್ರಗಳ ಹೆಸರುಗಳಲ್ಲಿ ಈ ವಾರ್ಗಿಕಗಳನ್ನು ಕಾಣಲು ಸಾಧ್ಯವಾಗುವುದಿಲ್ಲ ಎಂದು ಹೇಳಬಹುದು. ಮುಖ್ಯವಾಗಿ ಜಾತಿನೆಲೆ ಉಪ ಅಧ್ಯಾಯದಲ್ಲಿ ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳು ಮತ್ತು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಭಿನ್ನತೆಯನ್ನು ಗುರುತಿಸುವುದಾಗಿದೆ. ಕೆಳಜಾತಿ ಅಥವಾ ದಲಿತ ವ್ಯಕ್ತಿಗಳ ಜಾತಿಗಳನ್ನು ಗುರುತಿಸುವುದಕ್ಕೆ ಅವರ ಹೆಸರುಗಳಿಗೆ ಜಾತಿಸೂಚಕ ವಾರ್ಗಿಕಗಳು ಬಳಕೆಯಾಗಿಲ್ಲ. ಎರಡಕ್ಷರ, ಮೂರಕ್ಷರ, ನಾಲ್ಕಕ್ಷರದ ವ್ಯಕ್ತಿನಾಮಗಳು ಕಂಡುಬರುತ್ತವೆ. ಅವುಗಳಲ್ಲಿ ಜಾತಿಸೂಚಕ ವಾರ್ಗಿಕಗಳು ಕಂಡುಬರುವುದಿಲ್ಲ.

ಕನ್ನಡದ ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ, ನಾಟಕಗಳ ಮೂಲಕ ಆಯ್ದ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳನ್ನು ನೋಡಬಹುದು ಉದಾಹರಣೆಗೆ

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳು

ಪುರುಷ	**ಮಹಿಳೆ**
ಗುತ್ತಿ (ಕಾ-೬)	ತಿಮ್ಮಿ (ಕಾ-೬)
ಐತ (ಕಾ-೬)	ಪೀಂಚಲು (ಕಾ-೬)

ಚನ್ನ (ಕಾ–೩)	ಚಂದ್ರಿ (ಕಾ–೬)
ಲಕ್ಕ (ಕಾ–೮)	ಸಿವುನಿ(ಕಾ–೮)
ಅಮಾಸ (ಕಾ–೨)	ಕೆಂಪಿ (ಕಾ–೨)
ಅಮ್ಮಣ್ಣ (ಕಾ–೧)	ಅಕ್ಕವ್ವ (ಕಾ–೧)
ಮಾದ (ಕಾ–೫)	ಗುಡ್ಡಿ (ಕಾ–೪)
ನಂಜ (ಕಾ–೭)	ರಂಗಿ(ಕಾ–೧೭)
ಚೋಮ (ಚ–೧೫)	ಬೆಳ್ಳಿ (ಚ–೧೫)
ಕಾಳ (ಚ–೨೦)	ಚೆನ್ನಿ (ಚ–೨೦)
ಮಾಚ (ಚ–೧೬)	ಸುಂದ್ರಿ(ಚ–೧೬)
ಕರಿಯ (ಚ–೧೧)	ನಂಜಿ(ಚ–೧೬)
ಲೋಂಪಿ (ಚ–೧೧)	ದೇವಿ(ಚ–೧೧)
ಚಿಕ್ಕ ನರಸ (ಚ–೧೩)	ಕಾವೇರಿ(ಚ–೧೩)
ತಮ್ಮಣ್ಣ (ಚ–೧೦)	ರಂಗಿ (ಚ–೧೦)
ಅಪ್ಪಣ್ಣ (ಚ–೧೮)	ಲಚುಮಿ(ಚ–೧೮)
ರಾಚ (ಚ–೧೨)	ಕಾಳಿ (ಚ–೧೨)
ಮುನಿಯ (ಚ–೧೭)	ಪುಟ್ಟಿ (ಚ–೧೭)
ತೌಡ (ಕ–೩೨)	ದೇಯ್ಯಿ (ಕ–೩೨)
ಬೂದ (ಕ–೩೨)	ತುಕ್ರಿ (ಕ–೩೨)
ರಂಗಪ್ಪ (ಕ–೩೮)	ಪಾರೋತಿ(ಕ–೩೨)
ಗುಂಜಾರಯ್ಯ (ಕ–೩೬)	ಸಿವಿ (ಕ–೨೧)
ಅತಾರಿ (ಕ–೩೬)	ಕುನ್ನಗೆಂಪಿ(ಕ–೩೨)
ಚಾಮಯ್ಯ (ಕ–೩೪)	ತೋಪಮ್ಮ (ಕ–೩೪)
ದುರ್ಗಪ್ಪ (ಕ–೨೨)	ಗಿಡ್ಡಿ (ಕ–೨೬)
ಮೊಂಡ (ಕ–೨೬)	ಬೂದಿ (ಕ–೨೬)
ಬುರ್ರ (ಕ–೩೩)	ಮಾಬಿ (ಕ–೩೩)
ಡೊಳ್ಳ (ಕ–೩೩)	ಸುಬ್ಬಿ (ಕ–೩೩)
ಗಂಗ್ಯಾ (ಕ–೨೭)	ಕುಲ್ಡಿ (ಕ–೩೧)
ಅನಿಮ್ಯಾ (ಕ–೨೭)	ರಂಗಿ (ಕ–೪೦)
ಕೊಣ್ಣಿ (ಕ–೨೧)	ಅಂಕಿ (ನಾ–೫೨)

ಕೆಂದ (ನಾ–೫೨)	ಶಿವಿ (ನಾ–೫೨)
ಬಿದ್ದಾಡಿ (ನಾ–೪೯)	ಗಂಗವ್ವ (ನಾ–೪೩)
ಕಲ್ಯಾ (ನಾ–೪೩)	ಮಾರಿ (ನಾ–೪೪)
ಮಲ್ಯಾ (ನಾ–೫೧)	ಪಾರಿ (ನಾ–೫೩)

ಈ ಮೇಲೆ ನೀಡಿರುವ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳನ್ನು ನೋಡಿದ ಕೂಡಲೇ ಕೆಳಜಾತಿಯ ವ್ಯಕ್ತಿನಾಮಗಳು ಎಂದು ಹೇಳಬಹುದು. ಆದರೆ ಕೆಳಜಾತಿಯಲ್ಲಿ ಯಾವ ಜಾತಿಗೆ ಸೇರಿದ ಹೆಸರುಗಳು ಎಂದು ಸೂಚಿಸಲು ಆಗುವುದಿಲ್ಲ. ಏಕೆಂದರೆ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಜಾತಿಸೂಚಕಗಳಾದ ಗೌಡ, ಹೆಗ್ಗಡೆ, ಶಾಸ್ತ್ರೀ, ಅಯ್ಯಂಗಾರ್, ಶೆಟ್ಟಿ ಮುಂತಾದ ವಾರ್ಗಿಕಗಳು ಈ ವ್ಯಕ್ತಿನಾಮಗಳಲ್ಲಿ ಈ ವ್ಯಕ್ತಿನಾಮಗಳಲ್ಲಿ ವಾರ್ಗಿಕ ಮತ್ತು ವಾರ್ಗಿಕಗಳಿಲ್ಲದ ವ್ಯಕ್ತಿನಾಮಗಳಿವೆ. ಹೆಸರನ್ನು ಸಂಕ್ಷಿಪ್ತಗೊಳಿಸಿರುವ ವ್ಯಕ್ತಿನಾಮಗಳಿವೆ. ಪ್ರಾದೇಶಿಕ ವ್ಯಕ್ತಿನಾಮಗಳಿವೆ. ಹಾಗೂ ಅನ್ವರ್ಥಕನಾಮಗಳನ್ನು ಕಾಣಬಹುದು.

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಕೆಲವು ವರ್ಗೀಕರಣವನ್ನು ಮಾಡಬಹುದು.

* ವಾರ್ಗಿಕ ಮತ್ತು ವಾರ್ಗಿಕರಹಿತ ವ್ಯಕ್ತಿನಾಮಗಳು
* ಸಂಕ್ಷಿಪ್ತಗೊಳಿಸಿರುವ ವ್ಯಕ್ತಿನಾಮಗಳು
* ಪ್ರಾದೇಶಿಕ ವ್ಯಕ್ತಿನಾಮಗಳು
* ಅನ್ವರ್ಥಕ ವ್ಯಕ್ತಿನಾಮಗಳು ಎಂದು ಈ ರೀತಿಯಾಗಿ ವರ್ಗೀಕರಿಸಬಹುದು.

ವಾರ್ಗಿಕಗಳಿರುವ ಕೆಳಜಾತಿ ಪಾತ್ರಗಳ ವ್ಯಕ್ತಿನಾಗಳು

ಪುರುಷ	**ಮಹಿಳೆ**
ಬುಳ್ಳಪ್ಪ (ಕಾ–೮)	ತೂರಮ್ಮ (ಕಾ–೨)
ಕುರಿಯಯ್ಯ (ಕಾ–೨)	ಅಕ್ಕವ್ವ (ಕಾ–೧)
ಚನ್ನಪ್ಪ (ಕಾ–೧)	ಸುಂಕವ್ವ (ಕಾ–೪)
ನರಸಯ್ಯ (ಕಾ–೮)	ಕೆಂಚಮ್ಮ (ಕಾ–೭)
ಮಾದಯ್ಯ (ಕಾ–೭)	ಗಿಡ್ಡಮ್ಮ (ಕಾ–೭)
ರಂಗಣ್ಣ (ಚ–೧೩)	ರಾಮಕ್ಕ (ಚ–೧೯)
ಕಂಟಣ್ಣ (ಕ–೩೬)	ನಿಂಗವ್ವ (ಚ–೧೭)
ಕಡುಬಯ್ಯ (ಕ–೩೬)	ನಾಗವ್ವ (ಚ–೧೭)

ರಾಯಪ್ಪ (ಕ–೨೧)	ತೋಪಮ್ಮ (ಕ–೩೪)
ಚಾಮಯ್ಯ (ಕ–೩೪)	ಮಾಯಮ್ಮ (ಕ–೩೪)
ಕರಿಯಣ್ಣ (ಕ–೨೪)	ಮಂಚವ್ವ (ಕ–೩೪)
ದುರ್ಗಪ್ಪ (ಕ–೨೨)	ತಿಮ್ಮಕ್ಕ (ಕ–೩೪)
ಭೀಮಪ್ಪಣ್ಣ (ನಾ–೪೩)	ಗಂಗವ್ವ (ನಾ–೪೩)
ಅಣ್ಣಯ್ಯ (ನಾ–೫೧)	ರಾಮಕ್ಕ (ನಾ–೫೦)
ಅರಬಣ್ಣ (ನಾ–೪೪)	ದುರುಗಪ್ಪ (ನಾ–೪೪)

ಮೇಲೆ ನೀಡಿರುವ ಕೆಳಜಾತಿ ವ್ಯಕ್ತಿನಾಮಗಳಲ್ಲಿ ಅಪ್ಪ, ಅಮ್ಮ, ಅಯ್ಯ, ಅವ್ವ, ಅಣ್ಣ, ಅಕ್ಕ ಎಂಬ ವಾರ್ಗಿಕಗಳು ಬಳಕೆಯಾಗಿವೆ. ಆದರೆ ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ವ್ಯಕ್ತಿಗಳನ್ನು ಸಂಬೋಧಿಸುವ ಮತ್ತು ಉಲ್ಲೇಖಿಸುವ ನೆಲೆಯಲ್ಲಿ ಹೆಸರುಗಳು ಸಂಕ್ಷಿಪ್ತಗೊಳ್ಳುತ್ತವೆ. ಉದಾಹರಣೆಗೆ ಬಳ್ಳಪ್ಪ ಬುಳ್ಳ, ಗಿಡ್ಡಮ್ಮ–ಗಿಡ್ಡಿ, ನರಸಯ್ಯ–ನರಸ, ಕೆಂಚಮ್ಮ–ಕೆಂಚಿ, ರಂಗಣ್ಣ–ರಂಗ, ರಾಮಕ್ಕ–ರಾಮಿ, ಕರಿಯಣ್ಣ–ಕರಿಯ, ನಿಂಗವ್ವ–ನಿಂಗಿ ಎಂಬುದಾಗಿ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಬಳಸುತ್ತಾರೆ. ಇದೇ ರೀತಿಯಲ್ಲಿ ಮೇಲ್ಜಾತಿಯ ಹೆಸರುಗಳು ಸಹ ಇವೆ. ಉದಾಹರಣೆಗೆ ರಂಗಪ್ಪ, ನಾಗಮ್ಮ, ನಿಂಗಮ್ಮ, ಬಸಮ್ಮ, ಭಿಮಯ್ಯ, ತಿಮ್ಮಪ್ಪ ಎಂಬುದಾಗಿ ಮೇಲ್ಜಾತಿ ಪಾತ್ರಗಳ ಹೆಸರುಗಳಲ್ಲಿ ವಾರ್ಗಿಕಗಳು ಬಳಕೆಯಾಗಿವೆ. ಆದರೆ ಆ ಹೆಸರುಗಳಿಗೆ ಗೌರವ ಸೂಚಕ ವಾರ್ಗಿಕಗಳನ್ನು ಸೇರಿಸಿಯೇ ಬಳಕೆ ಮಾಡಲಾಗುತ್ತದೆ. ಮೇಲ್ಜಾತಿ ಪಾತ್ರಗಳ ಗೌರವಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ. ಮೇಲ್ಜಾತಿ ವ್ಯಕ್ತಿಗಳಲ್ಲಿ ಬಳಕೆಯಾಗುತ್ತಿರುವ 'ಅಯ್ಯ' ಎಂಬ ವಾರ್ಗಿಕ ಕೆಳಜಾತಿ ವ್ಯಕ್ತಿಗಳಲ್ಲೂ ಬಳಕೆಯಾಗುತ್ತಿದೆ. ಮೇಲ್ಜಾತಿ ವ್ಯಕ್ತಿಗಳಲ್ಲಿ ಉದಾಹರಣೆ; ಮುಕುಂದಯ್ಯ, (ಕಾ) ವೆಂಕಟೇಶಯ್ಯ, (ಕಾ) ಅನಂತಯ್ಯ, (ಕಾ) ಮಂಜಯ್ಯ, (ಕಾ) ಕಲ್ಲಯ್ಯ, (ಕಾ) ಗೌಡಯ್ಯ, (ಕಾ) ಕೇಶವಯ್ಯ, (ಕಾ) ಶ್ರೀನಿವಾಸಯ್ಯ, (ಕಾ) ರಾಮಯ್ಯ, (ಕಾ) ಕೃಷ್ಣಯ್ಯ, (ಕಾ) ಗೊವಿಂದಯ್ಯ, (ಕಾ) ಸುಂದರಯ್ಯ, (ಕಾ) ಸಂಕಪ್ಪಯ್ಯ, (ಚ) ಮಲ್ಲಿಕಾರ್ಜುನಯ್ಯ, (ಚ) ಸೀತಾರಾಮಯ್ಯ, (ಚ) ನಾಗಪ್ಪಯ್ಯ, (ಕ) ರುದ್ರಯ್ಯ (ನಾ) ಮುಂತಾದ ಪಾತ್ರಗಳಲ್ಲಿ 'ಅಯ್ಯ' ಎಂಬ ಗೌರವಸೂಚಕ ಬಳಕೆಯಾಗಿರುವುದು ಕಾಣಬಹುದು. ಇವು ಬೇರೆ ಬೇರೆ ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಾಗಿವೆ. ಈ ಹೆಸರುಗಳನ್ನು ಗಮನಿಸಿದ ಕೂಡಲೇ ಮೇಲ್ಜಾತಿ ವ್ಯಕ್ತಿಯ ಹೆಸರುಗಳೆಂದು ಹೇಳಬಹುದು. ಸಂಬೋಧನೆ ನೆಲೆಯಲ್ಲೂ ಸಹ ಈ ವ್ಯಕ್ತಿಗಳನ್ನು ಪೂರ್ಣ ಹೆಸರಿಡಿದು ಮೇಲ್ಜಾತಿ ವ್ಯಕ್ತಿಗಳು ಮಾತನಾಡಿಸುತ್ತಾರೆ. ಈ 'ಅಯ್ಯ' ಎಂಬ ವಾರ್ಗಿಕ ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಬಳಕೆಗೊಂಡಿವೆ. ಉದಾಹರಣೆಗೆ ಕುರಿಯಯ್ಯ (ಕಾ) ದ್ಯಾವಯ್ಯ (ಕಾ) ಬೆಟ್ಟಯ್ಯ (ಕಾ) ಮಾದಯ್ಯ (ಕಾ) ಕೆಂಪಯ್ಯ (ಚ)

ದೊಡ್ಡನರಸಯ್ಯ (ಚ) ನಿಂಗಯ್ಯ (ಚ) ಮಾಹಾದೇವಯ್ಯ (ಚ) ಗುಂಜಾರಯ್ಯ (ಕ) ಚಾಮಯ್ಯ (ಕ) ಬಸಯ್ಯ (ಕ) ಕಡುಬಯ್ಯ (ಕ) ಗಾಲುರಯ್ಯ (ನಾ) ಚನ್ನಯ್ಯ (ನಾ) ದೇವಯ್ಯ (ನಾ) ಅಂಬಯ್ಯ (ನಾ) ಈ ರಿತಿಯಾಗಿ ಕೆಳಜಾತಿ ವ್ಯಕ್ತಿಗಳಲ್ಲಿ 'ಅಯ್ಯ' ವಾರ್ಗಿಕ ಬಳಕೆಯಾಗಿದೆ. ಆದರೆ ಮೈಸೂರಿನ ಸೂತ್ತಮುತ್ತಲಿನ ಪ್ರದೇಶದಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಆದರೆ 'ಅಯ್ಯ' ಎಂಬ ವಾರ್ಗಿಕ ಹೆಸರಿನೊಂದಿಗೆ ಸೇರಿದ ಬಳಕೆಯಾದರೂ ಅದು ಗೌರವಸೂಚಕವಾಗಿ ಬಳಕೆಯಾಗುವುದಿಲ್ಲ. ದಾಖಲೆಯಲ್ಲಿ ಮಾತ್ರ 'ಅಯ್ಯ' ವಾರ್ಗಿಕವಿದೆ. ಸಂಬೋಧನೆ ಉಲ್ಲೇಖದಲ್ಲಿ ಹೆಸರು ಸಂಕ್ಷಿಪ್ತಗೊಳಿಸಿ ಮೇಲ್ಜಾತಿ ಪಾತ್ರಗಳು ಬಳಸುತ್ತಾರೆ. ಮೇಲ್ಜಾತಿ ವ್ಯಕ್ತಿಗಳು ಸಂಬೋಧಿಸುವ ಮತ್ತು ಉಲ್ಲೇಖಿಸುವ ನೆಲೆಯಲ್ಲಿ ಈ ಹೆಸರುಗಳು ಸಂಕ್ಷಿಪ್ತಗೊಳ್ಳುತ್ತವೆ. ದ್ಯಾವ, ಬೆಟ್ಟ, ಮಾದ, ಕೆಂಪ ಎಂದು ಸಂಕ್ಷಿಪ್ತಗೊಳ್ಳುತ್ತವೆ. ಕೆಳಜಾತಿಯವರು ಕೆಳಜಾತಿ ವ್ಯಕ್ತಿಗಳನ್ನು ಉಲ್ಲೇಖಿಸುವಾಗ, ಸಂಬೋಧಿಸುವಾಗ ಪೂರ್ಣ ಹೆಸರಿನಿಂದ ಬಳಕೆ ಮಾಡುವುದು ಕಂಡುಬರುತ್ತದೆ.

ವಾರ್ಗಿಕಗಳಿಲ್ಲದ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳು

ಪುರುಷ	ಮಹಿಳೆ
ಚೇಂಕ (ಕಾ–೬)	ದೇಯಿ (ಕಾ–೬)
ಚನ್ನ (ಕಾ–೩)	ಮಲ್ಲಿ (ಕಾ–೩)
ಚೌಡ (ಕಾ–೯)	ಸಾಕಿ (ಕಾ–೮)
ಅಮಾಸ (ಕಾ–೨)	ಈರಿ (ಕಾ–೨)
ಮುದ್ದ (ಕಾ–೫)	ಗುಡ್ಡಿ (ಕಾ–೪)
ಜುಟ್ಟುಗ (ಕಾ–೪)	ರುದ್ರಿ (ಕಾ–೪)
ರಂಗ (ಕಾ–೨)	ರಂಗಿ (ಕಾ–೨)
ಚನಿಯ (ಚ–೧೫)	ಬೆಳ್ಳಿ (ಚ–೧೫)
ಜವರ(ಚ–೨೦)	ಚೆನ್ನಿ (ಚ–೨೦)
ಬೋರ (ಚ–೧೬)	ತಿಮ್ಮಿ (ಚ–೧೬)
ಅಂಕ (ಚ–೧೧)	ದೇವಿ (ಚ–೧೧)
ಮುನಿಯ (ಚ–೧೩)	ಚಂದ್ರಿ (ಚ–೧೩)
ಕಾಳ (ಚ–೧೭)	ಪುಟ್ಟಿ (ಚ–೧೭)

ದೂಮ (ಕ–೩೨)	ತುಕ್ರಿ (ಕ–೩೨)
ಸಣ್ಣು (ಕ–೪೨)	ಕೆಂಚಿ (ಕ–೪೨)
ಅತಾರಿ (ಕ–೩೬)	ನಂಜಿ (ಕ–೨೧)
ದುಬ್ಬ (ಕ–೨೪)	ಸಿದ್ದಿ (ಕ–೨೧)
ದೊಡೆ (ಕ–೨೪)	ಗಿಡ್ಡಿ (ಕ–೨೬)
ಡೊಳ್ಳ (ಕ–೩೩)	ಬೂದಿ (ಕ–೨೬)
ನಡ್ಯ (ಕ–೩೩)	ಗಂಗಿ (ಕ–೩೩)
ಸಿದ್ದ (ನಾ–೫೨)	ಶಿವಿ (ನಾ–೫೨)
ಬಿದ್ದಾಡಿ (ನಾ–೪೯)	ಮಾರಿ (ನಾ–೪೪)
ಕಲ್ಯಾ (ನಾ–೫೧)	ಪಾರಿ (ನಾ–೫೩)
ಮಲ್ಯಾ (ನಾ–೫೧)	

ಈ ಎಲ್ಲಾ ವ್ಯಕ್ತಿನಾಮಗಳು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳೆಂದು ಸುಲಭವಾಗಿ ಗುರುತಿಸಬಹುದು. ಕೆಳಜಾತಿ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳಿಲ್ಲದ ವ್ಯಕ್ತಿನಾಮಗಳೇ ಹೆಚ್ಚಾಗಿ ಕಂಡುಬರುತ್ತವೆ. ಬಳಕೆಯ ನೆಲೆಯಲ್ಲಿಯೂ ಸಹ ಹೆಚ್ಚಾಗಿ ವಾರ್ಗಿಕಗಳನ್ನು ಹೆಸರಿನ ಮುಂದೆ ಮೇಲ್ಜಾತಿ ಪಾತ್ರಗಳ ಬಳಸಿ ಸಂಬೋಧಿಸುವುದಿಲ್ಲ. ಈ ಹೆಸರುಗಳ ಮೂಲಕ ಕೆಳಜಾತಿ ವ್ಯಕ್ತಿಗಳ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದಾಗಿದೆ. ಈ ಮೇಲೆ ನೀಡಿರುವ ವ್ಯಕ್ತಿನಾಮಗಳೆಲ್ಲವು ಸಹ ಸಂಕ್ಷಿಪ್ತಗೊಳಿಸಿರುವ ವ್ಯಕ್ತಿನಾಮಗಳಾಗಿವೆ. ಇವುಗಳಿಗೆ ಅಪ್ಪ, ಅಮ್ಮ, ಅಯ್ಯ, ಅಣ್ಣ ಎಂಬ ವಾರ್ಗಿಕಗಳು ಕೆಲವು ಬಾರಿ ಸೇರಿದ್ದರು ಅವು ಬಳಕೆಯಾಗುತ್ತಿರುವುದಿಲ್ಲ. ಅವರ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಬಳಸಲಾಗುತ್ತದೆ. ಹೆಸರುಗಳ ಮೂಲಕ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳನ್ನು ತಿಳಿದುಕೊಳ್ಳಬಹುದು.

ಕೆಲವು ಪ್ರಾದೇಶಿಕ ವ್ಯಕ್ತಿನಾಮಗಳನ್ನು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಕಾಣಬಹುದು.

ಉದಾಹರಣೆಗೆ

ಪುರುಷ	**ಮಹಿಳೆ**
ಗುತ್ತಿ (ಕಾ–೬)	ತಿಮ್ಮಿ (ಕಾ–೬)
ಐತ (ಕಾ–೬)	ಪೀಂಚಲು (ಕಾ–೬)
ಚೀಂಕ್ರ (ಕಾ–೬)	ದೇಯಿ (ಕಾ–೬)

ಪಿಜಿಣಾ (ಕಾ–೬)	ಅಕ್ಕಣ್ಣಿ (ಕಾ–೬)
ಚೋಮ (ಚ–೧೫)	ತುಕ್ರಿ (ಕ–೩೨)
ಪೊಮ್ಮ (ಚ–೧೫)	
ಪೆತ್ರು (ಚ–೧೫)	
ಬೂದ (ಕ–೩೨)	
ಮಾಂಕು (ನಾ–೪೫)	
ಬಾಂಕು (ನಾ–೪೫)	

ಈ ವ್ಯಕ್ತಿನಾಮಗಳು ಮಲೆನಾಡಿನ ಪರಿಸರ ಮತ್ತು ಕರಾವಳಿ ಪ್ರದೇಶದಲ್ಲಿ ಮಾತ್ರ ಹೆಚ್ಚು ಬಳಕೆಯಲ್ಲಿವೆ. ಆ ಪರಿಸರವನ್ನು ಬಿಟ್ಟರೆ ಬೇರೆ ಪ್ರದೇಶಗಳಲ್ಲಿ ಈ ಹೆಸರುಗಳು ಕಂಡುಬರುವುದಿಲ್ಲ. ಮಾದ, ರಾಚ, ಮುನಿಯ, ನಂಜ, ನಂಜಿ, ಮಾದೇವಿ, ಮಾಚ, ಜವರ ಮುಂತಾದ ಹೆಸರುಗಳು ಮೈಸೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಡುಬರುತ್ತವೆ. ಕಲ್ಯಾ, ಮಲ್ಯಾ, ಬಸ್ಯಾ, ಚಂದ್ಯಾ, ಭೀಮ್ಯಾ ಮೂಂತಾದ ಹೆಸರುಗಳು ಉತ್ತರ ಕನಾಟಕದ ಭಾಗಗಳಲ್ಲಿ ಹೆಚ್ಚಾಗಿ ಕೆಳಜಾತಿ ವ್ಯಕ್ತಿನಾಮಗಳಾಗಿ ಕಂಡುಬರುತ್ತವೆ. ಹಾಗೆಯೇ ಉತ್ತರ ಕರ್ನಾಟಕ ಪ್ರದೇಶದಲ್ಲಿ ಕಲ್ಲಪ್ಪ-ಕಲ್ಯಾ, ನಿಂಗ–ನಿಂಗ್ಯಾ, ಭೀಮ–ಭೀಮ್ಯಾ, ಚಂದ್ರಪ್ಪ– ಚಂದ್ರ್ಯಾ ಆಗಿ ಬಳಕೆಗೊಳ್ಳುತ್ತವೆ. ಕೆಳಜಾತಿ ಹೆಸರುಗಳಲ್ಲಿ ಮಾತ್ರ ಈ ರೀತಿ ದಾಖಲೆ ಮತ್ತು ಮಾತಿಗೂ ಭಿನ್ನತೆ ವ್ಯಕ್ತಿನಾಮಗಳಲ್ಲಿ ಕಂಡುಬರುತ್ತದೆ.

ಅನ್ವರ್ಥಕ ನಾಮಗಳು :

ಅನ್ವರ್ಥಕ ನಾಮಗಳು ಎಂದು ಕರೆಸಿಕೊಳ್ಳುವ ಹೆಸರುಗಳು ಅನ್ವರ್ಥಕ ನಾಮಗಳಾಗಿ ಉಳಿಯದೇ ಅವುಗಳನ್ನು ಮೀರಿದ ಭೌತಿಕ ರಚನೆ ಕಾಣಬಹುದು. ಉದಾಹರಣೆಗೆ ಕರಿಯ–ಕಪ್ಪುಗೆ ಇಲ್ಲದಿರುವುದು, ಗಿಡ್ಡ–ಕುಳ್ಳಗೆ ಇಲ್ಲದಿರುವುದು, ಕೆಂಚ–ಕೆಂಪಗೆ ಇಲ್ಲದಿರುವುದು ಈ ರೀತಿಯಾಗಿ ವ್ಯಕ್ತಿನಾಮಗಳಲ್ಲಿ ಭೌತಿಕ ರಚನೆ ಬದಲಾಗಿರುವುದನ್ನು ಕಾಣಬಹುದು. ಹೆಸರಿಗೂ/ ಆವ್ಯಕ್ತಿಯ ಭೌತಿಕ ರಚನೆಯಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಆದರೂ ಈ ರೀತಿಯ ಹೆಸರುಗಳು ಹೆಚ್ಚಾಗಿ ಕೆಳಜಾತಿ ವ್ಯಕ್ತಿಗಳಲ್ಲಿಯೇ ಕಂಡುಬರುತ್ತವೆ. ಮೇಲ್ಜಾತಿ ವ್ಯಕ್ತಿಗಳಲ್ಲಿ ಸಹ ಕಂಡುಬರುತ್ತವೆ. ಆದರೆ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಸಂಬಂಧಸೂಚಕ ಅಥವಾ ಗೌರವ ಸೂಚಕಗಳು ವಾರ್ಗಿಕ ಭಾಗದಲ್ಲಿ ಸೇರಿ ಬಳಕೆಯಾಗುತ್ತವೆ. ಉದಾಹರಣೆಗೆ– ದೊಡ್ಡಣ್ಣಹೆಗ್ಗಡೆ, ಪುಟ್ಟನಾಯ್ಕ, ಕೆಂಗಣ್ಣಪ್ಪ, ಗಿಡ್ಡಬಸಪ್ಪ, ಪುಟ್ಟಮ್ಮ, ಪುಟ್ಟೇಗೌಡ, ಹಿರಿಗೌಡ, ಕಿರಿಗೌಡ ಈ ರೀತಿಯಾಗಿ ಸಂಬಂಧಸೂಚಕ ಮತ್ತು ಗೌರವ ಸೂಚಕ ವಾರ್ಗಿಕಗಳು

ಬಳಕೆಯಾಗುತ್ತವೆ. ಕೆಳಜಾತಿ ವ್ಯಕ್ತಿಯ ಹೆಸರುಗಳಲ್ಲಿ ಸಣ್ಣಿ, ಕರಿಯ, ಬೆಳ್ಳಿ, ಪುಟ್ಟಿ, ಸಣ್ಣತಿಮ್ಮ, ದೊಡ್ಡಬೀರ, ಗಿಡ್ಡಿ, ಕುಲ್ಡಿ ಎಂದು ಸಂಬಂಧ ಸೂಚಕ ಮತ್ತು ಗೌರವ ಸೂಚಕಗಳಿಲ್ಲದೆ ಬಳಕೆಯಾಗುತ್ತವೆ. ಉದಾಹರಣೆಗೆ

ಪುರುಷ	ಮಹಿಳೆ
ದೊಡ್ಡಬೀರ (ಕಾ–೬)	ಗಿಡ್ಡಿ (ಕಾ–೬)
ಸಣ್ಣತಿಮ್ಮ (ಕಾ–೬)	ಪುಟ್ಟಿ (ಕಾ–೬)
ಪುಟ್ಟಬೀರ (ಕಾ–೬)	ಬೆಳ್ಳಿ (ಚ–೧೫)
ಕರಿಸಿದ್ದ (ಕಾ–೬)	ಪುಟ್ಟಗೌರಿ (ಚ–೧೯)
ಕೆಂಚ (ಚ–೧೬)	ಚಿಕ್ಕನರಸ (ಚ–೧೩)
ಕರಿಯ (ಚ–೧೧)	
ಚಿಕ್ಕ (ಚ–೧೭)	
ಸಣ್ಣು (ಚ–೪೨)	

ಈ ರೀತಿಯಾಗಿ ಅನ್ವರ್ಥಕ ನಾಮಗಳನ್ನು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಕಾಣಬಹುದು. ಕಲಬುರ್ಗಿಯವರು ಅನ್ವರ್ಥಕನಾಮಗಳನ್ನು ಕುರಿತು ಹೇಳಿರುವುದನ್ನು ಗಮನಿಸಬಹುದು. ಕಲಬುರ್ಗಿಯವರು ಕನ್ನಡ ನಾಮವಿಜ್ಞಾನದ ಕೃತಿಯಲ್ಲಿ ಅನ್ವರ್ಥಕನಾಮಗಳನ್ನು ಕುರಿತು ಹೇಳುವಾಗ ವಾರ್ಗಿಕಗಳನ್ನು ಸೇರಿಸಿ ಉದಾಹರಣೆಯಾಗಿ 'ಸಣ್ಣಗಿದ್ದರೆ ಸಣ್ಣಪ್ಪ, ವೀರನಿದ್ದರೆ ವೀರ, ಕಪ್ಪಗಿದ್ದರೆ, ಕರಿಯಪ್ಪ, ಕೆಂಪಗಿದ್ದರೆ ಕೆಂಚಪ್ಪ" (ಕನ್ನಡ ನಾಮವಿಜ್ಞಾನ, ಎಂ.ಎಂ. ಕಲಬುರ್ಗಿ, ಪುಟ–೧೧) ಇವುಗಳನ್ನು ಕೊಟ್ಟಿದ್ದಾರೆ.

ಆದರೆ ಇಂದು ಅವುಗಳನ್ನು ಮೀರಿದ ಭೌತಿಕ ರಚನೆಯನ್ನು ಕಾಣಬಹುದು. ಅನ್ವರ್ಥ ನಾಮಗಳು ಗುರುತಿಗಾಗಿ ಬಳಕೆಯಾಗುತ್ತಿವೆ. ಕಣ್ಣು ಸರಿಯಾಗಿ ಕಾಣುತ್ತಿದ್ದರು. 'ಕುಲ್ಡಿ' ಎಂಬ ಹೆಸರು ಬಳಕೆಯಾಗಿದೆ. ಕಾಲು ಸರಿಯಾಗಿದ್ದರೂ ಅವರ ಹೆಸರು ಕುಂಟಣ್ಣ ಎಂದು ಬಳಕೆಯಾಗಿದೆ. ಹೀಗೆ ವ್ಯಕ್ತಿಯ ಗುಣ ಅಥವಾ ಭೌತಿಕ ರಚನೆಗೂ ವ್ಯಕ್ತಿನಾಮಗಳಿಗೂ ಸಾಮ್ಯತೆಯಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕಪ್ಪುಗಿದ್ದರೆ 'ಕರಿಯ' ಎಂಬ ಹೆಸರು ಇಟ್ಟಿರಬಹುದು ಆದರೆ ಇಂದು ಹೆಚ್ಚಾಗಿ ಆ ಭೌತಿಕ ರಚನೆಗಳನ್ನು ಮೀರಿದ ವ್ಯಕ್ತಿನಾಮಗಳಿವೆ ಎಂದು ಹೇಳಬಹುದು.

ಅನ್ವರ್ಥಕ ನಾಮಗಳ ಮೂಲಕ ವ್ಯಕ್ತಿಗಳ ಹೆಸರುಗಳು ಬಳಕೆಯಾಗುತ್ತವೆ ಎಂಬುದನ್ನು ಹೇಳಿದ್ದಾರೆ. ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳಲ್ಲೂ ಅನ್ವರ್ಥಕನಾಮಗಳು ಬಳಕೆಯಾಗುತ್ತವೆ.

ಮೇಲ್ಜಾತಿ ವ್ಯಕ್ತಿಗಳಲ್ಲಿ ಕುಲ್ಡಿ, ಕುಂಟಣ್ಣ, ಸಣ್ಣು, ಕೆಂಚ, ಕರಿಯ ಇನ್ನೂ ಈ ರೀತಿಯಹೆಸರುಗಳು ಕಂಡುಬರುವುದಿಲ್ಲ. ವ್ಯಕ್ತಿನಾಮಗಳು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಮಾತ್ರ ಕಂಡುಬರುವಂತಹ ಹೆಸರುಗಳಾಗಿವೆ. ಈ ಹೆಸರುಗಳ ಮೂಲಕ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಜಾತಿ ಸೂಚಕ ವ್ಯಕ್ತಿನಾಮಗಳಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಕಂಡುಬರುವ ಭಿನ್ನತೆಗಳನ್ನು ಈ ಮೇಲೆ ಉದಾಹರಣೆಗಳ ಮೂಲಕ ಉಲ್ಲೇಖಿಸಿದೆ. ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿನಾಮಗಳನ್ನು ಗಮನಿಸಿದಾಗ ಹೆಸರುಗಳಿಗೆ ಮತ್ತು ವ್ಯಕ್ತಿಗಳಿಗೆ ಇರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ತರವಿನ್ಯಾಸಗಳು ಕಂಡುಬರುತ್ತವೆ.

೪.೨.೨. ಲಿಂಗ ಮತ್ತು ವ್ಯಕ್ತಿನಾಮಗಳು

ಪುರುಷರ ಮತ್ತು ಸ್ತ್ರೀಯರ ವ್ಯಕ್ತಿನಾಮಗಳಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಮತ್ತು ಸಹಜವೂ ಕೂಡ. ಆದರೆ ಮುಖ್ಯವಾಗಿ ಇಲ್ಲಿ ಚರ್ಚಿಸುವುದೆನೆಂದರೆ ಮೇಲ್ಜಾತಿ ಮಹಿಳಾ ಪಾತ್ರಗಳ ಮತ್ತು ಕೆಳಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳಲ್ಲಿರುವ ಭಿನ್ನತೆಯನ್ನು ಕುರಿತು ಚರ್ಚಿಸುವುದಾಗಿದೆ. ಲಿಂಗಾಧಾರಿತ ವ್ಯಕ್ತಿನಾಮಗಳ ಮೂಲಕ ಸಾಮಾಜಿಕ ಆಯಾಮವನ್ನು ತಿಳಿದುಕೊಳ್ಳಬಹುದಾಗಿದೆ.

ಮೇಲ್ಜಾತಿ ಮಹಿಳಾ ಪಾತ್ರಗಳಾಗಿರಬಹುದು ಅಥವಾ ಕೆಳಜಾತಿ ಮಹಿಳಾ ಪಾತ್ರಗಳಾಗಿರಬಹುದು ಈ ಇಬ್ಬರಲ್ಲಿಯೂ ಸಹ ಜಾತಿಸೂಚಕ ಮತ್ತು ವೃತ್ತಿಸೂಚಕ ವಾರ್ಗಿಕಗಳು ಕಂಡುಬರುವುದಿಲ್ಲ. ಆದರೆ ಹೆಸರನ್ನು ನೋಡಿದ ಕೂಡಲೇ ಮೇಲ್ಜಾತಿ ಮಹಿಳೆ ಅಥವಾ ಕೆಳಜಾತಿ ಮಹಿಳೆಯ ಹೆಸರುಗಳೆಂದು ಗುರುತಿಸಬಹುದು. ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳ ಮೂಲಕ ಮೇಲ್ಜಾತಿ ಮತ್ತು ಕೆಳಜಾತಿ ಮಹಿಳೆಯರ ಹೆಸರುಗಳಲ್ಲಿ ವಾರ್ಗಿಕ ಸಹಿತ ವ್ಯಕ್ತಿನಾಮಗಳು ಮತ್ತು ವಾರ್ಗಿಕ ರಹಿತ ವ್ಯಕ್ತಿನಾಮಗಳನ್ನು ನೋಡಬಹುದು. ಮೇಲ್ಜಾತಿ ಮತ್ತು ಕೆಳಜಾತಿ ಮಹಿಳೆಯರಲ್ಲಿ ವಾರ್ಗಿಗಳಿರುವ ಮತ್ತು ಇಲ್ಲದೆ ಇರುವ ವ್ಯಕ್ತಿನಾಮಗಳು ಕಂಡುಬರುತ್ತವೆ. ಆದರೆ ಕೆಳಜಾತಿ ಮಹಿಳೆಯರಲ್ಲಿ ವಾರ್ಗಿಕಗಳಿಲ್ಲದೆ ಇರುವ ವ್ಯಕ್ತಿನಾಮಗಳೇ ಹೆಚ್ಚಾಗಿ ಕಂಡುಬರುತ್ತವೆ.

ವಾರ್ಗಿಕ ಸಹಿತ ವ್ಯಕ್ತಿನಾಮಗಳು

ಮೇಲ್ಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳು	ಕೆಳಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳು
ಸೀತಮ್ಮ (ಕಾ-೬)	ತೂರಮ್ಮ (ಕಾ-೨)
ಚಿನ್ನಮ್ಮ (ಕಾ-೬)	ಅಕ್ಕವ್ವ (ಕಾ-೧)

ದಾನವ್ವ (ಕಾ–೬)	ಸುಂಕವ್ವ (ಕಾ–೪)
ಲಕ್ಷ್ಮೀದೇವಮ್ಮ (ಕಾ–೯)	ಕೆಂಚಮ್ಮ (ಕಾ–೭)
ಲಕ್ಷ್ಮೀಬಾಯಿ (ಕಾ–೩)	ಗಿಡ್ಡಮ್ಮ (ಕಾ–೭)
ಮುತಳಿಬಾಯಿ (ಕಾ–೩)	ರಾಮಕ್ಕ (ಚ–೯)
ಮಾದಮ್ಮ (ಕಾ–೮)	ಕೆಂಚವ್ವ (ಚ–೧೭)
ಗಿರಿಜಮ್ಮ (ಕಾ–೮)	ನಿಂಗವ್ವ (ಚ–೧೭)
ಸಿದ್ದಮ್ಮ (ಕಾ–೮)	ನಾಗವ್ವ (ಚ–೧೭)
ಸಂಪಿಗೆಮ್ಮ (ಕಾ–೮)	ಮಾದೇವಕ್ಕ (ಕ–೪೨)
ಭದ್ರಮ್ಮ (ಕಾ–೮)	ಮಾಯಮ್ಮ (ಕ–೨೪)
ಭಾಗ್ಯಮ್ಮ (ಕಾ–೫)	ಮಂಚವ್ವ (ಕ–೨೪)
ನಾಗಮ್ಮ (ಕಾ–೪)	ತಾಯಕ್ಕ (ಕ–೨೪)
ಗೌರಮ್ಮ (ಕಾ–೭)	ದಾಯಮ್ಮ (ಕ–೩೩)
ಸಾವಿತ್ರಮ್ಮ (ಚ–೧೩)	ಗಂಗವ್ವ (ನಾ–೪೩)
ಸೀತಮ್ಮ (ಚ–೨೦)	ರಾಮಕ್ಕ (ನಾ–೫೦)
ಹಂಪವ್ವ (ಕ–೨೯)	ಪುಟ್ಟಲಕ್ಕಮ್ಮ (ನಾ–೪೮)
ನಾಗಮ್ಮ (ಕ–೨೯)	ಮಲ್ಲಮ್ಮ (ಕ–೩೩)
ಶಿವಲಿಂಗಮ್ಮ (ಕ–೩೩)	ಲೋಕಮ್ಮ (ಕ–೩೯)
ದಾನಮ್ಮ (ಕ)	ಸೋಮಕ್ಕ (ಕ–೩೯)
ಡವಳಬಾಯಿ (ನಾ–೪೯)	ಸಾಬವ್ವ (ನಾ–೪೩)

ಈ ಮೇಲೆ ನೀಡಿದ ಉದಾಹರಣೆಗಳಲ್ಲಿ 'ಅಮ್ಮ', 'ಅವ್ವ', 'ಅಕ್ಕ' ಎಂಬ ವಾರ್ಗಿಕಗಳು ಕೆಳಜಾತಿ ಮತ್ತು ಮೇಲ್ಜಾತಿ ಮಹಿಳೆ ಇಬ್ಬರಲ್ಲಿಯೂ ಸಹ ಬಳಕೆಯಾಗಿವೆ. 'ಬಾಯಿ' ಎಂಬ ಗೌರವ ಸೂಚಕ ಮೇಲ್ಜಾತಿ ಮಹಿಳೆಯರಲ್ಲಿ ಮಾತ್ರ ಕಂಡುಬರುತ್ತದೆ. 'ಬಾಯಿ' ಎಂಬ ಪದ ಮರಾಠಿ ಪ್ರಭಾವದಿಂದ ಬಂದಿರುವುದು. ಕೆಳಜಾತಿ ಮಹಿಳೆಯರಲ್ಲಿ ಕಂಡುಬರುವುದಿಲ್ಲ.

'ಅಮ್ಮ', 'ಅವ್ವ', 'ಅಕ್ಕ' ಎಂಬ ವಾರ್ಗಿಕಗಳು ಸಹ ಕಂಡುಬಂದರೂ ಇಬ್ಬರಿಗೂ ಸಿಗುವ ಸ್ಥಾನಮಾನ ಒಂದೇ ಆಗಿದೆಯೇ? ಎಂಬುದನ್ನು ಪರಿಶೀಲಿಸುವುದಾದರೆ, ಮೇಲ್ಜಾತಿ

ಮಹಿಳೆಯರು ಕೆಳಜಾತಿ ಮಹಿಳೆಯರನ್ನು ಸಂಬೋಧನೆ ಮಾಡುವಾಗ ಅಮ್ಮ, ಅವ್ವ, ಅಕ್ಕ ಎಂಬ ವಾರ್ಗಿಕಗಳನ್ನು ಹೆಚ್ಚಾಗಿ ಬಳಕೆ ಮಾಡುವುದಿಲ್ಲ. ನಿಂಗಿ, ಸಾಕಿ, ನಾಗಿ, ಮಾದಿ, ಕೆಂಚಿ ಎಂದು ಹೆಸರನ್ನು ಸಂಕ್ಷಿಪ್ತಗೊಳಿಸಿ ಬಳಕೆ ಮಾಡುತ್ತಾರೆ. ಆದರೆ ಕೆಳಜಾತಿಯ ಮಹಿಳೆಯರು, ಮೇಲ್ಜಾತಿ ಮಹಿಳೆಯರಿಗೆ ಈ ರೀತಿಯಾಗಿ ಹೆಸರಿಡಿದು ಅಥವಾ ಹೆಸರನ್ನು ಸಂಕ್ಷಿಪ್ತಗೊಳಿಸಿ ಬಳಕೆ ಮಾಡುವುದಿಲ್ಲ ಎಂದು ಹೇಳಬಹುದು. ಈ ರೀತಿಯಾಗಿ ವ್ಯಕ್ತಿನಾಮಗಳ ಬಳಕೆಯ ಸಾಮಾಜಿಕ ಅಂತರವಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ವಾರ್ಗಿಕ ರಹಿತ ವ್ಯಕ್ತಿನಾಮಗಳು

ಮೇಲ್ಜಾತಿ ಮತ್ತು ಕೆಳಜಾತಿ ಮಹಿಳೆಯರಲ್ಲಿ ವಾರ್ಗಿಕಗಳಿಲ್ಲದ ವ್ಯಕ್ತಿನಾಮಗಳನ್ನು ಗಮನಿಸಿದರೆ ಕೆಳಜಾತಿ ಮಹಿಳೆಯರಲ್ಲಿ ಹೆಚ್ಚು ವಾರ್ಗಿಕಗಳಿಲ್ಲದ ಹೆಸರುಗಳನ್ನು ಕಾಣಬಹುದು. ಈ ಹೆಸರುಗಳಲ್ಲಿ ಆಚರಣೆ, ನಂಬಿಕೆ, ದೈವಾದಾರಿತ, ಮತ್ತು ಪಾರಂಪರಿಕ ವ್ಯಕ್ತಿನಾಮಗಳು ಹೆಚ್ಚಿರುವುದು ಕಾಣಬಹುದು. ಮೇಲ್ಜಾತಿ ಮಹಿಳೆಯರಲ್ಲಿ ಆಧುನಿಕ ವ್ಯಕ್ತಿನಾಮಗಳನ್ನು ಹೆಚ್ಚಾಗಿ ಕಾಣಬಹುದು. ಇಬ್ಬರಲ್ಲಿಯೂ ವಾರ್ಗಿಕಗಳಿಲ್ಲದ ಹೆಸರುಗಳನ್ನು ಗಮನಿಸಬಹುದು. ಆದರೆ ಇಬ್ಬರಿಗೂ ಒಂದೇ ರೀತಿಯಾದ ಸಾಮಾಜಿಕ ಸ್ಥಾನಮಾನ ದೊರೆಯುತ್ತಿದೆಯೇ? ಎಂಬುದು ಮುಖ್ಯವಾಗುತ್ತದೆ. ಮೇಲ್ಜಾತಿ ಮಹಿಳೆಯರಲ್ಲಿ ವಾರ್ಗಿಕಗಳಿಲ್ಲದ್ದರೂ ಅಮ್ಮ, ಅವ್ವ, ಅಕ್ಕ ಎಂಬ ವಾರ್ಗಿಕಗಳನ್ನು ಸೇರಿಸಿ ಕೆಳಜಾತಿಯ ಮಹಿಳೆಯರು ಸಂಬೋಧಿಸುತ್ತಾರೆ. ಅನಸೂಯ ಇದ್ದರೆ ಅನಸೂಯಮ್ಮ, ರುಕ್ಮಿಣಿ–ರುಕ್ಮೀಣಿಯಮ್ಮ, ಯಮುನಾ–ಯಮನಕ್ಕಾ, ತುಳಸಿ–ತುಳಸಕ್ಕ, ಶಾಂತಿ–ಶಾಂತವ್ವ ಎಂಬ ವಾರ್ಗಿಕಗಳನ್ನು ಬಳಸುತ್ತಾರೆ. ಕೆಳಜಾತಿ ಮಹಿಳೆಯರಲ್ಲಿ ವಾರ್ಗಿಕಗಳಿದಿದ್ದರೂ ಸಂಕ್ಷಿಪ್ತಗೊಳಿಸಿ ಬಳಸುತ್ತಾರೆ. ಉದಾಹರಣೆ ಕೆಂಚಮ್ಮ–ಕೆಂಚಿ, ನಾಗಮ್ಮ–ನಾಗಿ, ಮಾದಮ್ಮ–ಮಾದಿ, ಕೆಂಚಮ್ಮ–ಕೆಂಪಿ ಈ ರೀತಿಯಾಗಿ ಬಳಕೆ ಮಾಡುತ್ತಾರೆ. ಕನ್ನಡದ ಕೆಲವು ಆಯ್ದ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಬರುವ ಕೆಳಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳು ಮತ್ತು ಮೇಲ್ಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳನ್ನು ನೋಡಬಹುದು.

ಮೇಲ್ಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳು	**ಕೆಳಜಾತಿ ಮಹಿಳಾ ಪಾತ್ರಗಳ ವ್ಯಕ್ತಿನಾಮಗಳು**
ಸೀತಾದೇವಿ (ಕಾ–೯)	ತಿಮ್ಮಿ (ಕಾ–೬)
ಅನಸೂಯಾ (ಕಾ–೯)	ಸೇಸಿ (ಕಾ–೬)
ಲೀಲಾವತಿ (ಕಾ–೯)	ಸಿದ್ದಿ (ಕಾ–೬)
ರತ್ನಾ (ಕಾ–೩)	ಗಿಡ್ಡಿ (ಕಾ–೬)

ಯಮುನಾ (ಕಾ–೩)

ರುಕ್ಮಿಣಿ (ಕಾ–೮)

ಸುಶೀ (ಕಾ–೮)

ಸರಸಿ (ಕಾ–೮)

ವಾಸಂತಿ (ಕಾ–೮)

ಶಾಂತಿ (ಕಾ–೮)

ಜಾನಕಿ (ಕಾ–೮)

ಸರೋಜ (ಕಾ–೮)

ನಳಿನಿ (ಕಾ–೮)

ಪದ್ಮ (ಕಾ–೮)

ಕಲ್ಯಾಣಿ (ಚ–೧೧)

ಕುಸುಮಬಾಲೆ (ಕಾ–೨)

ಸಾವಿತ್ರಿ (ಕಾ–೨)

ಭಗವತಿ (ಕಾ–೨)

ಪದ್ಮಾವತಿ (ಕಾ–೧)

ಕಾವೇರಿ (ಕಾ–೫)

ಶ್ರೀದೇವಿ (ಕಾ–೪)

ಸತ್ಯಭಾಮ (ಕಾ–೪)

ಹೇಮಾವತಿ (ಚ–೨೦)

ಲಕ್ಷ್ಮೀ (ಚ–೨೦)

ಮಂಗಳ (ಚ–೧೬)

ಮಾಲತಿ (ಚ–೧೬)

ಪ್ರಿಯಾ (ಚ–೧೦)

ಬಸಂತಿ (ಚ–೧೮)

ಪುಟ್ಟಿ (ಕಾ–೬)

ದೇಯಿ (ಕಾ–೬)

ಪೀಂಚಲು (ಕಾ–೬)

ಬಾಗಿ (ಕಾ–೬)

ಅಕ್ಕಣಿ (ಕಾ–೬)

ಬೆಳ್ಳಿ (ಕಾ–೯)

ಚೆನ್ನಿ (ಕಾ–೯)

ಚಂದ್ರಿ (ಕಾ–೯)

ಮಲ್ಲಿ (ಕಾ–೩)

ಸಾಕಿ (ಕಾ–೮)

ಗಂಗಿ (ಕಾ–೮)

ಸಣ್ಣಿ (ಕಾ–೮)

ಚಲುವಿ (ಕಾ–೮)

ಕೆಂಪಿ (ಕಾ–೨)

ಗುಡ್ಡಿ (ಕಾ–೪)

ರುದ್ರಿ (ಕಾ–೪)

ನಂಜಿ (ಚ–೧೬)

ಚೆನ್ನಿ (ಚ–೧೬)

ಸುಂದ್ರಿ (ಚ–೧೬)

ದೇವಿ (ಚ–೧೧)

ಕಾವೇರಿ (ಚ–೧೩)

ಚಂದ್ರಿ (ಚ–೧೩)

ರಂಗಿ (ಚ–೦)

ಗಂಗಿ (ಚ–೧೨)

ಪದ್ಮಜ (ಚ-೧೨)

ಕಾಳಿ (ಚ-೧೨)

ಆನಂದಿ (ಚ-೧೨)

ಪುಟ್ಟಗೌರಿ (ಚ-೧೯)

ರೇಖಾ (ಚ-೧೯)

ದೇಯಿ (ಕ-೩೨)

ಮೀನಾಕ್ಷಿ (ಚ-೧೭)

ತುಕ್ರಿ (ಕ-೩೨)

ಶಾರದ (ಕ-೩೮)

ಪಾರೋತಿ (ಕ-೩೮)

ನಂದಿನಿ (ಕ-೨೧)

ಸಿವಿ (ಕ-೨೧)

ಸೀತೆ (ಕ-೨೯)

ಸಿದ್ದಿ (ಕ-೨೧)

ಸಖೂ (ಕ-೨೮)

ಗಿಡ್ಡಿ (ಕ-೨೬)

ಅಂಜನಾ (ನಾ-೪೯)

ಸುಬ್ಬಿ (ಕ-೩೩)

ಉಷಾ (ನಾ-೫೩)

ಅಂಕಿ (ನಾ-೫೨)

ಉಮಾ (ನಾ-೫೩)

ರಂಗಿ (ನಾ-೫೨)

ಸುಮಾ (ನಾ-೫೩)

ಮಾರಿ (ನಾ-೪೪)

ರಮಾ (ನಾ-೫೩)

ಪಾರಿ (ನಾ-೫೩)

ಕಲಾವತಿ (ನಾ-೪೭)

ಕಮ್ಮಿಗಾ (ನಾ-೫೨)

ಈ ಮೇಲಿನ ಪಾತ್ರಗಳ ವ್ಯಕ್ತಿನಾಮಗಳನ್ನು ನೋಡಿದ ಕೂಡಲೇ ಆ ವ್ಯಕ್ತಿಗಳ ಮತ್ತು ಹೆಸರುಗಳಿಗಿರುವ ಸಾಮಾಜಿಕತೆಯನ್ನು ಗುರುತಿಸಬಹುದು. ಈ ಹೆಸರುಗಳಿಂದ ಸಮಾಜದಲ್ಲಿ ಆ ವ್ಯಕ್ತಿಗಳಿಗೆ ಸಿಗುವ ಸಾಮಾಜಿಕ ಮನ್ನಣೆಯೇ ಬೇರೆಯಾಗಿರುತ್ತದೆ. ಹೆಸರುಗಳ ಮೂಲಕವು ಸಹ ಗೌರವ ನಿಂತಿರುತ್ತದೆ. ತಿಮ್ಮ, ರುದ್ರಿ, ರಂಗಿ, ಭದ್ರಿ ಎಂದರೆ ಯಾವ ಸಮುದಾಯದವರು ಅಂದರೆ ಕೆಳಜಾತಿಗೆ ಸೇರಿದ ವ್ಯಕ್ತಿಗಳೆಂದು ಸುಲಭವಾಗಿ ಊಹಿಸುತ್ತಾರೆ. ವಾಸಂತಿ, ಕಲ್ಯಾಣಿ, ಶಾಂತಿ, ಉಷಾ, ರಮಾ ಎಂದರೆ ಈ ಹೆಸರುಗಳಿರುವ ವ್ಯಕ್ತಿಗಳಿಗೆ ಸಿಗುವ ಗೌರವವೇ ಬೇರೆಯಾಗಿರುತ್ತದೆ. ಈ ರೀತಿಯೂ ಸಾಮಾಜಿಕ ಆಯಾಮವನ್ನು ಇಲ್ಲಿ ಗುರುತಿಸಬಹುದಾಗಿದೆ.

೪.೨.೩. ವಯಸ್ಸು ಮತ್ತು ವ್ಯಕ್ತಿನಾಮಗಳು

ಸಾಮಾಜಿಕ ಭಿನ್ನಾಂಶಗಳಲ್ಲಿ ವಯಸ್ಸು ಸಹ ಬಹಳ ಮುಖ್ಯವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಬಹುದು. ಕಾಲಕ್ಕೆ ತಕ್ಕಂತೆ ವ್ಯಕ್ತಿನಾಮಗಳಲ್ಲಿಯೂ ಸಹ ಬದಲಾವಣೆಯನ್ನು ಗುರುತಿಸಬಹುದು. ವ್ಯಕ್ತಿನಾಮಗಳು ಚಲನೆ ಮತ್ತು ಪಲ್ಲಟಗೊಳ್ಳುತ್ತಿರುತ್ತವೆ. ಮುಖ್ಯವಾಗಿ ಮೇಲ್ಜಾತಿ ಹಿರಿಯ-ಕಿರಿಯ ಪಾತ್ರಗಳ ವ್ಯಕ್ತಿನಾಮಗಳು ಮತ್ತು ಕೆಳಜಾತಿ ವ್ಯಕ್ತಿಗಳ

ಹಿರಿಯ, ಕಿರಿಯ ಪಾತ್ರಗಳ ವ್ಯಕ್ತಿನಾಮಗಳು ಹೇಗಿವೆ ಎಂಬುದನ್ನು ಇಲ್ಲಿ ನೋಡಲಾಗುತ್ತದೆ. ಹೆಸರುಗಳು ಬದಲಾದಂತೆ ವ್ಯಕ್ತಿಗಳ ಸಾಮಾಜಿಕತೆಯಲ್ಲಿ ಏನಾದರೂ ಬದಲಾವಣೆ ಉಟಾಗಿದೆಯೇ ಎಂದು ಗಮನಿಸಬೇಕಾದ ಅಂಶವಾಗಿದೆ.

ಮೇಲ್ಜಾತಿ ಹಿರಿಯರ ವ್ಯಕ್ತಿನಾಮಗಳಲ್ಲಿದ್ದ ಗೌಡ, ಹೆಗ್ಗಡೆ, ಶಾಸ್ತ್ರೀ, ಶೆಟ್ಟಿ, ಅಯ್ಯಂಗಾರ್ ಮುಂತಾದ ವಾರ್ಗಿಕಗಳು ಮಕ್ಕಳಲ್ಲಿ ಮುಂದುವರೆದಿದೆಯೇ ಹಾಗೆಯೇ ಕೆಳಜಾತಿ ಹಿರಿಯರಲ್ಲಿದ್ದ ಮಾದ, ಕರಿಯ, ರುದ್ರ, ಮಾಚ, ಕೆಂಚ, ತಿಮ್ಮ, ಈ ರೀತಿಯ ವ್ಯಕ್ತಿನಾಮಗಳು ಹೋಗಿ ಆಧುನಿಕ ಸಂದರ್ಭಕ್ಕೆ ಅನುಗುಣವಾಗಿ ಹೆಸರುಗಳು ಬಂದಿವೆಯೇ? ಎಂಬುದನ್ನು ಉದಾಹರಣೆಗಳ ಮೂಲಕ ಗಮನಿಸುವುದಾದರೆ, ಉದಾಹರಣೆಗೆ ಈ ಕೆಳಗಿನಂತಿವೆ

ಮೇಲ್ಜಾತಿ ಹಿರಿಯರ ಪಾತ್ರಗಳ ವ್ಯಕ್ತಿನಾಮಗಳು		**ಮೇಲ್ಜಾತಿ ಕಿರಿಯ ಪಾತ್ರಗಳ ವ್ಯಕ್ತಿನಾಮಗಳು**
ಸುಬ್ಬಣ್ಣ ಹೆಗ್ಗಡೆ (ಕಾ–೬)	ಮಗ	ತಿಮ್ಮಪ್ಪ ಹೆಗ್ಗಡೆ (ಕಾ–೬)
ದೊಡ್ಡಣ್ಣ ಹೆಗ್ಗಡೆ (ಕಾ–೬)	ಮಗ	ಧರ್ಮು (ಕಾ–೬)
ರಂಗಪ್ಪಗೌಡ (ಕಾ–೬)	ಮಗ	ತಿಮ್ಮು (ಕಾ–೬)
ಕಲ್ಲಯ್ಯಗೌಡ (ಕಾ–೬)	ಮಗ	ಕಾಡು (ಕಾ–೬)
ಅಂತಕ್ಕಶೆಟ್ಟಿ (ಕಾ–೬)	ಮಗಳು	ಕಾವೇರಿ (ಕಾ–೬)
ಗರುಡಾಚಾರ್ಯ (ಕಾ–೯)	ಮಗ	ಶ್ಯಾಮ (ಕಾ–೯)
ತಿರುಮಲೇಗೌಡ (ಕಾ–೪)	ಮಗ	ಮೇಲಗಿರಿಗೌಡ (ಕಾ–೪)
ಮೇಲಗಿರಿದಾರ (ಕಾ–೪)	ಮಗ	ಶ್ರೀನಿವಾಸ (ಕಾ–೪)
ಭಟ್ಟ (ಚ–೨೦)	ಮಗ	ವಾಸು (ಚ–೨೦)
ಸಾಹುಕಾರ ಸಂಗಪ್ಪ (ಚ–೧೬)	ಮಗ	ಮರಿಪಡವಾರ್ (ಚ–೧೬)
ವೇದಾಯಚಾರ್ಯ (ಚ–೧೩)	ಮಗ	ರಾಘವೇಂದ್ರರಾವ್ (ಚ–೧೩)
ನಾರಾಯಣಶರ್ಮ (ಚ–೧೦)	ಮಗ	ಆನಂದ (ಚ–೧೦)
ದೊಡ್ಡೇಗೌಡ (ಚ–೧೭)	ಮಗ	ಮರುಳಪ್ಪ (ಚ–೧೭)
ಶಾಸ್ತ್ರೀ (ಕ–೨೭)	ಮಗ	ರಾಮಣ್ಣ(ಕ–೨೭)
ಕನಕರಾಯ (ನಾ–೪೯)		ಸರ್ವೋತ್ತಮ (ನಾ–೪೯)

ಈ ಮೇಲೆ ಉಲ್ಲೇಖಿಸಿದ ಉದಾಹರಣೆಗಳಲ್ಲಿ ಒಂದು ತಲೆಮಾರಿನ ಅಂತರದಲ್ಲಿನ ವ್ಯಕ್ತಿನಾಮಗಳನಷ್ಟೇ ನೋಡಲಾಗಿದೆ. ಕಾಲದ ಅಂತರವೂ ಇದೆ. ಆದರೆ ಪ್ರಮುಖವಾಗಿ ಕೆಲವು ಉದಾಹರಣೆಗಳನ್ನಷ್ಟೇ ಇಲ್ಲಿ ನೋಡಲಾಗಿದೆ. ಕೆಲವು ಕಡೆ ಜಾತಿ ಸೂಚಕ ಅಥವಾ ಗೌರವ ಸೂಚಕ ವಾರ್ಗಿಕಗಳು ಮಕ್ಕಳಲ್ಲಿ ಹಾಗೆಯೇ ಮುಂದುವರೆದಿದೆ. ಇನ್ನೂ ಕೆಲವರಲ್ಲಿ ಆ ರೀತಿಯ ವಾರ್ಗಿಕಗಳು ಬಳಕೆಯಾಗಿಲ್ಲ. ಆಧುನಿಕ ಸಂದರ್ಭದಲ್ಲಿ ಹೆಸರುಗಳು ಬಂದಿವೆ. ರಾಮು, ಧರ್ಮು, ಆನಂದ, ವಾಸು, ಶ್ಯಾಮ ಮುಂತಾದ ಹೆಸರುಗಳು ಮೇಲ್ಜಾತಿ ಕಿರಿಯ ವ್ಯಕ್ತಿಗಳ ಹೆಸರುಗಳಲ್ಲಿ ಆಧುನಿಕರಣಕ್ಕೆ ತೆರೆದುಕೊಂಡ ಹೆಸರುಗಳಾಗಿವೆ.

ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಈ ರೀತಿಯ ಬದಲಾವಣೆಗಳನ್ನು ಕಾಣಬಹುದೆಯೆ? ಅಲ್ಲಿಯೂ ಸಹ ಯಥಾಸ್ಥಿತಿ ಕಾಪಾಡಿಕೊಂಡು ಬಂದಿದೆಯೆ ಅಥವಾ ಬದಲಾವಣೆಗೊಂಡಿವೆಯೇ ಎಂಬುದನ್ನು ನೋಡಬಹುದು.

ಕೆಳಜಾತಿ ಹಿರಿಯರ ಪಾತ್ರಗಳ ವ್ಯಕ್ತಿನಾಮಗಳು		**ಕೆಳಜಾತಿ ಕಿರಿಯರ ಪಾತ್ರಗಳ ವ್ಯಕ್ತಿನಾಮಗಳು**
ದೊಡ್ಡಬೀರ (ಕಾ–೬)	ಮಗ	ಚಿಕ್ಕ ಬೀರ (ಕಾ–೬)
ಬೆಟ್ಟಯ್ಯ (ಕಾ–೪)	ಮಗ	ತಿಮ್ಮ (ಕಾ–೬)
ಚೋಮ (ಚ–೧೫)	ಮಗ	ಗುರುವ (ಚ–೧೫)
ಕಾಳ (ಚ–೨೦)	ಮಗ	ಚೆನ್ನಿ (ಚ–೨೦)
ದೊಡ್ಡನರಸ (ಚ–೧೩)	ಮಗ	ಚಿಕ್ಕನರಸ (ಚ–೧೩)
ಗಂಗಣ್ಣ (ಚ–೧೩)	ಮಗ	ಮುನಿಯ (ಚ–೧೩)
ಅಪ್ಪಣ್ಣ (ಚ–೧೮)	ಮಗ	ಹನುಮ (ಚ–೧೮)
ಕೆಂಚವ್ವ (ಚ–೧೭)	ಮಗಳು	ಚೆನ್ನಿ (ಚ–೧೭)
ತೌಡ (ಕ–೩೨)	ಮಗ	ಬೂದ (ಕ–೩೨)
ರಂಗಪ್ಪ (ಕ–೩೮)	ಮಗ	ರಾಜ (ಕ–೩೮)
ಮೊಂಡ (ಕ–೩೬)	ಮಗ	ಗಿಡ್ಡಿ ಕ–೩೬)
ಲಿಂಗ (ಕ–೩೯)	ಮಗ	ನಾಗ (ಕ–೩೯)
ಗಾಲೂರಯ್ಯ (ನಾ–೫೨)	ಮಗ	ಸಿದ್ದೇಶ (ನಾ–೫೨)
ಅಪ್ಪಣ್ಣ (ನಾ–೪೩)	ಮಗ	ರುದ್ರ (ನಾ–೪೩)

ರಾಮಕ್ಕ (ನಾ–೫೦)	ಮಗಳು	ಬಂಗಾರಿ (ನಾ–೫೦)
ಉಜ್ಜ (ನಾ–೫೩)	ಮಗ	ರುದ್ರ (ನಾ–೫೩)

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ತಂದೆ ಮತ್ತು ಮಕ್ಕಳ ಹೆಸರುಗಳನ್ನು ಕೆಲವು ಪ್ರಾತಿನಿಧಿಕ ಕೃತಿ ಮತ್ತು ಚಲನಚಿತ್ರಗಳ ಮೂಲಕ ಕೆಲವು ಉದಾಹರಣೆಗಳನ್ನು ನೋಡಲಾಗಿದೆ. ಇಲ್ಲಿ ಒಂದು ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚಿಸಿದ ಮತ್ತು ನಿರ್ದೇಶಿಸಿದವುಗಳಾಗಿವೆ. ಹಾಗಾಗಿ ನಿರ್ದಿಷ್ಟ ಕಾಲಘಟ್ಟದ ಮೂಲಕ ಇಲ್ಲಿ ವ್ಯಕ್ತಿನಾಮಗಳನ್ನು ನೋಡಲು ಸಾಧ್ಯವಾಗಿಲ್ಲ. ತಂದೆ ಮತ್ತು ಮಕ್ಕಳ ನಡುವೆ ಆಗಿರುವ ವ್ಯತ್ಯಾಸವನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಹೆಸರುಗಳಲ್ಲಿ ದೊಡ್ಡ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಕೆಲವು ಕಡೆ ಮಾತ್ರ ಬದಲಾವಣೆ ಆಗಿರುವುದನ್ನು ನೋಡಬಹುದು. ತಂದೆ ರಂಗಪ್ಪ ಮಗ ರಾಜ, ತಂದೆ ಗಾಲೂರಯ್ಯ ಮಗ ಸಿದ್ದೇಶ ಈ ರೀತಿಯ ಸಣ್ಣ ಬದಲಾವಣೆಯನ್ನು ಮಾತ್ರ ಕಾಣುವುದಕ್ಕೆ ಸಾಧ್ಯವಾಗಿದೆ. ಹೆಚ್ಚಿನದಾಗಿ ಪಾರಂಪರಿಕ ಹೆಸರುಗಳೆ ಕೆಳಜಾತಿ ವ್ಯಕ್ತಿಗಳಲ್ಲಿ ಪುನರಾವರ್ತನೆಗೊಂಡಿವೆ ಎಂದು ಹೇಳಬಹುದು. ಮೇಲ್ಜಾತಿ ಮಕ್ಕಳ ಮತ್ತು ಕೆಳಜಾತಿ ಮಕ್ಕಳ ಹೆಸರುಗಳಲ್ಲಿ ಕೆಲವು ವ್ಯತ್ಯಾಸವನ್ನು ಗುರುತಿಸಬಹುದು.

ಮೇಲ್ಜಾತಿ ಮಕ್ಕಳ ಪಾತ್ರಗಳ ವ್ಯಕ್ತಿನಾಮಗಳು	**ಕೆಳಜಾತಿ ಮಕ್ಕಳ ಪಾತ್ರಗಳ ವ್ಯಕ್ತಿನಾಮಗಳು**
ರಾಮು (ಕಾ–೬)	ಚೌಡ (ಕಾ–೯)
ಧರ್ಮು (ಕಾ–೬)	ನೀಲ (ಚ–೧೫)
ತಿಮ್ಮು (ಕಾ–೬)	ಕಾಳ (ಚ–೧೫)
ಕಾಡು (ಕಾ–೬)	ಚಿಕ್ಕನರಸ (ಚ–೧೩)
ಕಿಟ್ಟಿ (ಚ–೧೧)	ರಂಗಿ (ಚ–೧೦)
ನಾಗಿ (ಚ–೧೧)	ಕೆಂಚ (ಚ–೧೦)
ಆನಂದ (ಚ–೧೦)	ಯಲ್ಲಪ್ಪ (ಚ–೧೯)
ಕೆಂಪೇಗೌಡ (ಚ–೧೨)	ಬೂದ (ಕ–೩೨)
ರಾಮು (ಕ–೩೯)	ತುಕ್ರಿ (ಕ–೩೨)
ತಿಮ್ಮು (ಕ–೩೯)	ದೂಮ (ಕ–೩೨)
ರಾಮಣ್ಣ (ಕ–೧೭)	ರಾಜ (ಕ–೩೮)
ಕೃಷ್ಣ (ಕ–೨೮)	ಅನಿಮ್ಯಾ (ಕ–೩೭)
	ತಿಮ್ಮ (ಕ–೨೮)

ಈ ಮೇಲೆ ನೀಡಿರುವ ಉದಾಹರಣೆಗಳೆಲ್ಲವೂ ಮೇಲ್ಜಾತಿ ಮತ್ತು ಕೆಳಜಾತಿ ಮಕ್ಕಳ ಪಾತ್ರಗಳ ಹೆಸರುಗಳು. ಮೇಲ್ಜಾತಿ ಮತ್ತು ಕೆಳಜಾತಿ ಮಕ್ಕಳ ಪಾತ್ರಗಳ ಹೆಸರುಗಳಲ್ಲಿ ಯಾವ ರೀತಿಯಾದ ಸಾಮಾಜಿಕ ಸ್ತರವಿನ್ಯಾಸ ಕಾಣುತ್ತಿದೆ ಎಂಬುದನ್ನು ನೋಡಬಹುದಾಗಿದೆ. ಮೇಲ್ಜಾತಿ ಮಕ್ಕಳ ಪಾತ್ರಗಳ ಹೆಸರುಗಳಲ್ಲಿ ಕೆಲವು ಮುದ್ದು ನಾಮವಾಗಿ ಕಾಣುತ್ತಿವೆ. ಆಧುನಿಕ ಸಂದರ್ಭಕ್ಕೆ ತೆರೆದುಕೊಂಡಂತಹ ಹೆಸರುಗಳಿವೆ. ಉದಾಹರಣೆಗೆ ರಾಮು, ಧರ್ಮು, ಆನಂದ, ಕಿಟ್ಟಿ, ಈ ರೀತಿಯ ಹೆಸರುಗಳು ಕೆಳಜಾತಿ ಮಕ್ಕಳಲ್ಲಿ ಕಂಡುಬರುವುದಿಲ್ಲ. ಚೌಡ, ನೀಲ, ಕಾಳ, ಬೂದ, ತುಕ್ರಿ, ದೂಮ, ಅನಿಮ್ಯಾ ಮುಂತಾದ ಹೆಸರುಗಳು ಕೆಳಜಾತಿಯ ವ್ಯಕ್ತಿಗಳ ಪಾರಂಪರಿಕ ಹೆಸರುಗಳಾಗಿ ಕಂಡುಬರುತ್ತವೆ. ಮೂಡಲ ಸೀಮೆಲಿ ಕೊಲೆಗಿಲೆ ಮುಂತಾಗಿ ಕಥೆಯಲ್ಲಿ ಕೆಳಜಾತಿ ರಂಗಣ್ಣನ ಮಗನ ಹೆಸರು 'ರಾಜ'. ಈ ಹೆಸರನ್ನು ಕೆಳಜಾತಿಯವರು ಇಟ್ಟುಕೊಳ್ಳಬಾರದು ಎಂಬ ಮೇಲ್ಜಾತಿಯವರ ಮನೋಧೋರಣೆಯಾಗಿದೆ ಎಂಬುದನ್ನು ಈ ಕಥೆಯಲ್ಲಿ ಲೇಖಕರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಕೆಳಜಾತಿ ಮಕ್ಕಳಲ್ಲಿ 'ತಿಮ್ಮ' ಎನ್ನುವ ಪಾತ್ರವಿದೆ. ಮೇಲ್ಜಾತಿ ಮಕ್ಕಳಲ್ಲಿ 'ತಿಮ್ಮ' ಎನ್ನುವ ಇನ್ನೊಂದು ಪಾತ್ರವಿದೆ. ಕೆಳಜಾತಿ ತಿಮ್ಮನ ಪಾತ್ರವನ್ನು ತಿಮ್ಮು ಎಂದು ಕರೆಯುವುದಿಲ್ಲ. ಮೇಲ್ಜಾತಿ ತಿಮ್ಮುವಿನ ಪಾತ್ರವನ್ನು 'ತಿಮ್ಮ' ಎಂದು ಬಳಕೆ ಮಾಡುವುದಿಲ್ಲ. ಮಕ್ಕಳ ಪಾತ್ರಗಳ ಹೆಸರುಗಳಲ್ಲಿ ಇರುವಂತಹ ಸಾಮಾಜಿಕ ಸ್ತರವಿನ್ಯಾಸವನ್ನು ಈ ಮೇಲಿನ ಉದಾಹರಣೆಗಳ ಮೂಲಕ ಕಾಣಬಹುದಾಗಿದೆ.

ವಯಸ್ಸಿನ ಆಧಾರದ ಮೇಲೆಯೂ ಸಹ ಸಾಮಾಜಿಕ ಸ್ತರ ವಿನ್ಯಾಸವನ್ನು ಗುರುತಿಸಬಹುದು ಎನ್ನುವುದಕ್ಕೆ ಮೇಲಿನ ಉದಾಹರಣೆಗಳು ಸಾಕ್ಷಿಯಾಗಿವೆ. ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳಲ್ಲಿ ತಂದೆ ಮತ್ತು ಮಕ್ಕಳ ಹೆಸರುಗಳಲ್ಲಿ ಯಾವ ರೀತಿಯ ಚಲನೆಯಿದೆ ಮತ್ತು ಯಾವಸ್ಥಿತಿಯಿದೆ ಎಂಬುದನ್ನು ಮೇಲಿನ ಉದಾಹರಣೆಗಳ ಮೂಲಕ ಕಂಡುಕೊಳ್ಳಲಾಗಿದೆ. ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಒಂದು ಹಂತದ ಚಲನೆ ಕಂಡುಬಂದಿದೆ. ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಹೆಚ್ಚಾಗಿ ಚಲನೆ ಕಂಡುಬರುವುದಿಲ್ಲ. ವ್ಯಕ್ತಿನಾಮಗಳಲ್ಲಿ ಯತಾಸ್ಥಿತಿ ಅಥವಾ ಪಾರಂಪರಿಕ ಹೆಸರುಗಳು ಹೆಚ್ಚಾಗಿರುವುದನ್ನು ಕಾಣಬಹುದು.

೪.೨.೪ ಶಿಕ್ಷಣ ಮತ್ತು ವ್ಯಕ್ತಿನಾಮಗಳು

ಸಮಾಜದಲ್ಲಿ ಶಿಕ್ಷಣ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸಮಾಜದಲ್ಲಿ ಉಂಟಾಗುವ ಚಲನೆ ಮತ್ತು ಪಲ್ಲಟಗಳಲ್ಲಿ ಶಿಕ್ಷಣವೂ ಸಹ ಮುಖ್ಯವಾದ ಪಾತ್ರವನ್ನು ವಹಿಸಿರುತ್ತದೆ. ವ್ಯಕ್ತಿನಾಮಗಳ ಮೇಲೆ ಶಿಕ್ಷಣ ಯಾವ ರೀತಿಯಾದ ಪರಿಣಾಮವನ್ನು ಬೀರಿದೆ ಮತ್ತು ಅದರಿಂದ ಉಂಟಾದಂತಹ ಪರಿಣಾಮಗಳೇನು ಎಂಬುದನ್ನು ಗಮನಿಸಬಹುದು.

ಶಿಕ್ಷಣ ಅಂದರೆ ಅದರಲ್ಲೂ ಆಧುನಿಕ ಶಿಕ್ಷಣ ಜನರಲ್ಲಿ ಒಂದು ಹೊಸ ರೀತಿಯ ಆಲೋಚನಾ ಕ್ರಮವನ್ನು ಬಿತ್ತಿತು. ಇದರಿಂದ ಸಮಾಜದಲ್ಲಿ ಅನೇಕ ರೀತಿಯಾದ ಬದಲಾವಣೆಗಳು

ಆದವು. ಈ ಆಲೋಚನೆ ವ್ಯಕ್ತಿನಾಮಗಳ ಮೇಲೆ ಬಿದ್ದಿದೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡಬಹುದು. ಶಿಕ್ಷಣ ಪಡೆದ ವ್ಯಕ್ತಿಯು ಹೆಸರಿನ ಬಗ್ಗೆ ಆಲೋಚಿಸುವುದಕ್ಕೂ ಶಿಕ್ಷಣ ಪಡೆಯದೆ ಇರುವ ವ್ಯಕ್ತಿ ಯಾವ ಹೆಸರನ್ನು ಮಗುವಿಗೆ ಇಡಬಹುದು ಎಂಬುದನ್ನು ಆಲೋಚಿಸುವ ಕ್ರಮವನ್ನು ಒಂದು ಉದಾಹರಣೆ ಮೂಲಕ ನೋಡಬಹುದು. 'ಹನೂರು ಚನ್ನಪ್ಪ' ಅವರ 'ಬೆಲ್ಲದದೋಣಿ' ಯಲ್ಲಿ ಬರುವಂತಹ ಒಂದು ಸನ್ನಿವೇಶ ಈ ರೀತಿಯಾಗಿದೆ.

ನಾನಿದ್ಕಂದು ಒಂದಿನ
ಅಪ್ಪ ಸಿದ್ದೇಸಾ... ನಮ್ಮ ದೇವ್ರುಗೆ ಕೈಮುಗಿ
ಒಳ್ಳೆದಾಗಿ ಒಂದು ಗಂಡು ಕೂಸ್ ಕೊಟ್ರ
'ಯಂಕ್ಟೇಸ್' ಅಂತ ಹೆಸ್ರಿಡಮು, ಅಂದ್ರ ಯಾನನ್ಬೇಕು
'ಯಾವ್ ಯಂಕ್ಟೇಸ್ನ
'ಗೋತಮು' ಅಂತ ಹೆಸ್ರಿಡ್ತಿನಿ ಕನ ಕೂತ್ಕೋ ಅಂತನ (ಹನೂರು ಚನ್ನಪ್ಪ, ಬೆಲ್ಲದದೋಣಿ, ಪುಟ-೮೨)

ಕೆಳಜಾತಿ ಪಾತ್ರವಾದ ಅಂಕಿ ತನ್ನ ಸೊಸೆಯಾದ 'ರಂಗೀಗೆ' ತನ್ನ ಮಗನ ಜೊತೆ ನಡೆದ ಸಂಂಭಾಷಣೆಯನ್ನು ಕುರಿತು ಹೇಳುತ್ತಿದ್ದಾಳೆ. ಅಂಕಿ ಅನಕ್ಷರಸ್ಥೆ, ಸಿದ್ದೇಶ ಶಿಕ್ಷಣ ಪಡೆದ ವ್ಯಕ್ತಿ ಇಬ್ಬರೂ ಸಹ ಮಗುವಿಗೆ ಹೆಸರಿಡುವುದರ ಕುರಿತು ಆಲೋಚನೆ ನಡೆಸುತ್ತಿದ್ದಾರೆ. ಅಂಕಿ ತನ್ನ ಮನೆ ದೇವರ ಹೆಸರಿಡಬೇಕು ಎಂದು, ಸಿದ್ದೇಶ ಬುದ್ಧನ ಇನ್ನೊಂದು ಹೆಸರಾದ 'ಗೌತಮ' ಎಂದು ಹೆಸರಿಡಬೇಕು. ಎಂದು ಇಬ್ಬರ ಮಧ್ಯೆ ಚರ್ಚೆ ನಡೆಯುತ್ತದೆ. ಇಲ್ಲಿ ತಾಯಿಗೆ ನಂಬಿಕೆ, ದೈವಾ ಈ ರೀತಿ ಪಾರಂಪರಿಕ ಹೆಸರಿನ ಕುರಿತು ಆಲೋಚನೆಯಿದೆ. ಮಗ ಜಗತ್ತಿಗೆ ಮಾದರಿಯಾದ ಬುದ್ಧನ ಹೆಸರಿಡಬೇಕು ಎಂದು ಆಧುನಿಕವಾಗಿ ಆಲೋಚಿಸುತ್ತಾನೆ. ಈ ರೀತಿಯಾಗಿ ಶಿಕ್ಷಣದಿಂದ ಒಂದು ಆಲೋಚನಾ ಕ್ರಮ ಮೂಡುತ್ತದೆ. ಅದು ವ್ಯಕ್ತಿಗಳ ಮೇಲೆ ಸಹ ಪ್ರಭಾವ ಬೀರಿರುವುದನ್ನು ನೋಡಬಹುದು.

ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿ ಜಾತಿಸೂಚಕ ಮತ್ತು ಸಂಬಂಧಸೂಚಕ ವಾರ್ಗಿಕ ಬಳಕೆ ಕಡಿಮೆಯಾಗುತ್ತ ಬರುತ್ತಿವೆ. ಆಧುನಿಕ ಹೆಸರುಗಳನ್ನು ಬಳಸಲು ಇಷ್ಟಪಡುತ್ತಾರೆ. ಶಿಕ್ಷಣ ಪಡೆದ ಮೇಲ್ಜಾತಿ ವ್ಯಕ್ತಿ ತನ್ನ ಹೆಸರಿನಲ್ಲಿ ಜಾತಿಸೂಚಕ ವಾರ್ಗಿಕ ಇರುವುದನ್ನು ಬಿಟ್ಟು ತನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತಾನೆ. ಎಸ್. ಎಲ್. ಭೈರಪ್ಪ ಅವರ ಕಾದಂಬರಿಯಲ್ಲಿ ಬರುವಂತಹ ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರ ತನ್ನ ಹೆಸರನ್ನು ಬದಲು ಮಾಡಿಕೊಂಡ ಸನ್ನಿವೇಶ ನೋಡಬಹುದು. "ಮಗನ ಹುಟ್ಟು ಹೆಸರು ತಿರುಮಲಗೌಡ ಎಂದು. ಕಾಲೇಜಿಗೆ ಹೋದ

ಮೇಲೆ ಅವನು ಶ್ರೀನಿವಾಸನೆಂದು ಬದಲಾಯಿಸಿಕೊಂಡಿದ್ದಾನೆ" (ಎಸ್. ಎಲ್. ಭೈರಪ್ಪ, ದಾಟು, ಪುಟ-೫೨). ಕಾದಂಬರಿಯಲ್ಲಿ ಈ ರೀತಿಯಾಗಿ ಉಲ್ಲೇಖ ಬರುತ್ತದೆ. ಕಾಲೇಜಿಗೆ ಹೋದ ನಂತರ ಅವನ ಆಲೋಚನೆಗಳು ಬದಲಾಗುತ್ತವೆ. 'ಗೌಡ' ಎಂಬ ವಾರ್ಗಿಕ ಅವನ ಹೆಸರಿನಲ್ಲಿ ಇರುವುದಕ್ಕೆ ಅವನಿಗೆ ಇರುಸುಮುರುಸಾಗಿರುತ್ತಿರುತ್ತದೆ.

ಒಂದು ಕಾಲದಲ್ಲಿ 'ಗೌಡ' ಎಂಬ ವಾರ್ಗಿಕ ಹೆಸರಿನ ಜೊತೆಗೆ ಸೇರಿಕೊಂಡಿದ್ದಾರೆ ಅದನ್ನು ಜಾತಿಯೆಂದು ಗ್ರಹಿಸುವುದಕ್ಕಿಂತ ಕೃಷಿಕ, ಹಳ್ಳಿಯವನು ಎಂದು ಗ್ರಹಿಸಲಾಗುತ್ತಿತ್ತು. ಆ ಸಂದರ್ಭದಲ್ಲಿ ಆಧುನಿಕ ಶಿಕ್ಷಣ ಪಡೆಯುತ್ತಿದ್ದರೆ ವ್ಯಕ್ತಿಗಳು ತಮ್ಮ ಹೆಸರುಗಳಲ್ಲಿನ 'ಗೌಡ' ಎಂಬ ವಾರ್ಗಿಕವನ್ನು ಕಾನೂನಿನ ಮೂಲಕ ಬದಲಾಯಿಸಿಕೊಂಡಿರು ಉದಾಹರಣೆಗಳು ಸಹ ಇವೆ.

ಆದರೆ ಇಂದು ಜಾತಿವಾಚಿ ವಾರ್ಗಿಕಗಳು ತಮ್ಮ ಸಮುದಾಯದ ಅಸ್ಮಿತೆಯಾಗಿ, ಪ್ರತಿಷ್ಠೆಯಾಗಿ ಬಳಕೆಯಾಗುತ್ತಿದೆ. ಗೌಡ, ಯಾದವ, ಛಲವಾದಿ, ಮಾದರ್, ನಾಯಕ್, ರೆಡ್ಡಿ, ಗೊರವರ ಮುಂತಾದ ಜಾತಿಗಳ ಹೆಸರುಗಳು ವ್ಯಕ್ತಿ ಹೆಸರುಗಳ ವಾರ್ಗಿಕ ಭಾಗದಲ್ಲಿ ಬಳಕೆಯಾಗುತ್ತಿವೆ. ಸಾಮಾಜಿಕ ವ್ಯವಸ್ಥೆ ಪ್ರತಿಷ್ಠೆ ಮತ್ತು ಅಸ್ಮಿತೆಯಾಗಿ ಬಳಕೆಯಾಗುತ್ತಿವೆ. 'ದಾಟು' ಕಾದಂಬರಿಯಲ್ಲಿ ತಿರುಮಲಗೌಡ 'ಗೌಡ' ಎಂಬ ಪದ ದಬ್ಬಾಳಿಕೆಯನ್ನು ಸೂಚಿಸುವ ಪದ, ಜಾತಿಯನ್ನು ಸೂಚಿಸುತ್ತದೆ. ಎಂಬ ಕಾರಣಕ್ಕೆ ಕಾನೂನಿನ ಮೂಲಕ ಶ್ರೀನಿವಾಸನೆಂದು ಹೆಸರನ್ನು ಬದಲಾಯಿಸಿಕೊಳ್ಳುತ್ತಾನೆ. ಈ ಚಲನೆ ಅವನು ಪಡೆದ ಆಧುನಿಕ ಶಿಕ್ಷಣದ ಆಲೋಚನಾ ಕ್ರಮದಿಂದಾಗಿ ಈ ಚಲನೆ ಕಂಡುಬರುತ್ತದೆ.

ಶಿಕ್ಷಣ ಪಡೆದ ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಆಗಿರುವ ಬದಲಾವಣೆಗಳೇನು ಎಂಬುದನ್ನು ಕೆಲವು ಕೃತಿ ಮತ್ತು ಚಲನಚಿತ್ರಗಳಲ್ಲಿ ದೊರೆತಿರುವ ಉದಾಹರಣೆಗಳ ಮೂಲಕ ಗಮನಿಸಬಹುದು.

ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳು	**ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳು**
ನಾರಾಯಣಪ್ಪ (ಕಾ-೯)	ಸತ್ಯಪ್ರಕಾಶ್ (ಕಾ-೫)
ಜಗನ್ನಾಥ (ಕಾ-೫)	ಮೀರಾ (ಕಾ-೪)
ಸತ್ಯಭಾಮ (ಕಾ-೪)	ಮೋಹನ್ ದಾಸ್ (ಕಾ-೪)
ಶ್ರೀನಿವಾಸ್ (ಕಾ-೪)	ಹೊನ್ನೇಶ (ಕಾ-೪)
ಶಂಕರ (ಚ-೧೬)	ಗಾನಶಾರದೆ (ಚ-೨೦)
ಮಾಲತಿ (ಚ-೧೬)	ಸಿದ್ದೇಶ (ನಾ-೫೨)

ಆನಂದ (ಚ-೨೦)

ಪ್ರಿಯಾ (ಚ-೧೦)

ರಾಮ (ಚ-೧೬)

ಸಖೂ (ಕ-೨೮)

ಮಹೇಶ (ಕ-೨೮)

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದರೆ ಯಾವ ಹೆಸರುಗಳಲ್ಲಿಯೂ ಜಾತಿಸೂಚಕ ಅಂಶಗಳು ಕಂಡುಬರುತ್ತಿಲ್ಲ. ಎಲ್ಲಾ ವ್ಯಕ್ತಿಗಳಲ್ಲಿಯೂ ಹಾಗೆ ಬದಲಾಗಿಲ್ಲ. ಕೆಲವು ಉದ್ದೇಶಪೂರ್ವಕವಾಗಿ ಬದಲು ಮಾಡಿಕೊಂಡ ಸಂದರ್ಭಗಳಿವೆ. ಸಂಬಂಧಸೂಚಕ ಮತ್ತು ಗೌರವಸೂಚಕ ವಾರ್ಗಿಕಗಳು ವ್ಯಕ್ತಿನಾಮಗಳಲ್ಲಿ ಕಂಡುಬಂದಿಲ್ಲ. ಆಧುನಿಕ ಸಂದರ್ಭದಲ್ಲಿ ಈ ರೀತಿಯ ಬದಲಾವಣೆಗಳು ಹೆಚ್ಚಾಗಿ ಕಂಡುಬರುತ್ತಿವೆ. ಕೆಲವರು ಉದ್ದೇಶಪೂರ್ವಕವಾಗಿ ತಮ್ಮ ಜಾತಿಯ ಹೆಸರುಗಳನ್ನು ಇಟ್ಟುಕೊಳ್ಳುತ್ತಿರುವ ಸಂದರ್ಭಗಳು ಸಹ ಇವೆ. ಆದರೆ ಆ ರೀತಿಯ ಉದಾಹರಣೆಗಳು ಕಡಿಮೆ ಎಂದೇ ಹೇಳಬಹುದು. ಮೇಲ್ಜಾತಿ ವ್ಯಕ್ತಿಗಳಲ್ಲೂ ಸಹ ಬದಲಾವಣೆ ಆಗಿರುವುದನ್ನು ಗಮನಿಸಬಹುದು. ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಚಲನೆ ಮಾತ್ರ ಅಲ್ಲ ಪಲ್ಲಟವೂ ಸಹ ಆಗಿದೆ. ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟವನ್ನು ಕುರಿತು ಮುಂದೆ ಚರ್ಚಿಸಲಾಗುತ್ತದೆ. ಒಟ್ಟಾರೆಯಾಗಿ ಆಧುನಿಕ ಶಿಕ್ಷಣದಿಂದ ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಚಲನೆಯನ್ನು ಗುರುತಿಸಬಹುದಾಗಿದೆ.

೪.೨.೫. ಧರ್ಮ ಮತ್ತು ವ್ಯಕ್ತಿನಾಮಗಳು

ಧರ್ಮದ ಆಚರಣೆ, ಸಂಸ್ಕೃತಿಗೆ ಅನುಗುಣವಾಗಿ ಹೆಸರಿಟ್ಟುಕೊಳ್ಳುವುದು ಸಾಮಾನ್ಯ. ಇಲ್ಲಿ ಈಗಾಗಲೇ ಹಿಂದೂ ಧರ್ಮಕ್ಕೆ ಅನುಗುಣವಾಗಿ ಇರುವ ವ್ಯಕ್ತಿಗಳನ್ನು ಉದಾಹರಣೆಯಾಗಿ ನೋಡಲಾಗಿದೆ. ಆದ್ದರಿಂದ ಇಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಅನುಗುಣವಾಗಿ ಬಂದಿರುವ ಹೆಸರುಗಳನ್ನು ಮಾತ್ರ ಚರ್ಚಿಸಲಾಗುತ್ತದೆ. ಹಿಂದೂ ಧರ್ಮದಲ್ಲಿ ಕಂಡುಬರುವಂತೆ ಮೇಲ್ಜಾತಿ ಮತ್ತು ಕೆಳಜಾತಿಯವರಿಗೆ ವ್ಯಕ್ತಿನಾಮಗಳಲ್ಲಿ ಭಿನ್ನತೆಯಿರುವಂತೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮದ ವ್ಯಕ್ತಿನಾಮಗಳಲ್ಲಿ ಕಂಡುಬರುವುದು ವಿರಳ ಎಂದೇ ಹೇಳಬಹುದು.

ಮುಸ್ಲಿಂ ಮತ್ತು ಕ್ರಿಶ್ಚಿಯನ್ ಪಾತ್ರದ ಹೆಸರುಗಳನ್ನು ಕೆಲವು ಪ್ರಾತಿನಿಧಿಕ ಕೃತಿ ಮತ್ತು ಚಲನಚಿತ್ರಗಳ ಮೂಲಕ ನೋಡುವುದಾದರೆ,

ಮುಸ್ಲಿಂ ವ್ಯಕ್ತಿನಾಮಗಳು	**ಕ್ರಿಶ್ಚಿಯನ್ ವ್ಯಕ್ತಿನಾಮಗಳು**
ಕರೀಂಸಾಬ (ಕಾ-೬)	ಜೀವರತ್ನಯ್ಯ (ಕಾ-೬)
ಅಜೀಜ್‌ಸಾಬ (ಕಾ-೬)	ರೆವೆರೆಂಡ್ ಲೇಕ್ ಹಿಲ್(ಕಾ-೬)

ಅಹ್ಮದ್ ಬ್ಯಾರಿ (ಕಾ–೯)	ಮಿಸ್ ಕ್ಯಾಂಬೆಲ್ (ಕಾ–೬)
ಗಿಬ್ಬನ್ ಸಾಹೇಬ್ (ಕಾ–೩)	ಪೀಟರ್ (ಕಾ–೮)
ಉಸ್ಮಾನ್ (ಕಾ–೩)	ಯೇಸುದಾಸ್ (ಕಾ–೮)
ಇಸ್ಮಾಯಿಲ್ (ಕಾ–೩)	ಮಾರ್ಗರೆಟ್ (ಕಾ–೫)
ಸಾಬುಲಾಲ್ (ಕಾ–೮)	ಆಂತೋಣಿ (ಕಾ–೫)
ಗೊಸುಸಾಬ್ (ಕಾ–೮)	ಪೀಟರ್ (ಕಾ–೫)
ಕಾಸೀಂಸಾಬ್ (ಕಾ–೭)	ಟಾಮ್ (ಕಾ–೫)
ಬೇಗಂ (ಕಾ–೭)	ರೂಬೇನ್ಸ್ (ಕಾ–೫)
ಪಾಷ (ಚ–೧೯)	ಮೇರಿ (ಚ–೧೫)
ಸುಲ್ತಾನಮ್ಮ (ಕ–೩೩)	ಜಾರ್ಜ್ (ಚ–೧೫)
ಇಬ್ರಾಹಿಂ (ಕ–೩೩)	ಮನ್ವೇಲ್ (ಚ–೧೫)
ರಸೂಲ್ (ಕ–೩೩)	ಮಿಂಗೇಲ್ (ಚ–೧೫)
ಬಷೀರ್ (ನಾ–೫೦)	ಡೇವಿಡ್ (ಚ–೧೯)

ಪರ್ಶಿಯನ್, ಅರೇಬಿಕ್ ಮತ್ತು ಇಂಗ್ಲೀಷ್‌ನ ರೋಮನ್ ಭಾಷೆಯಿಂದ ಜೊತೆಗೆ ಕನ್ನಡ ಭಾಷೆ ಅಕ್ಕ, ಅಮ್ಮ, ಅಣ್ಣ ಅಪ್ಪ, ದಾಸ ಎಂಬ ವಾರ್ಗಿಕಗಳು ಸ್ಥಳೀಯರು ಮತಾಂತರಗೊಂಡ ಪ್ರಕ್ರಿಯೆಯಲ್ಲಿ ಸೇರಿಕೊಂಡಿವೆ. ಉರ್ದು ಮತ್ತು ಕನ್ನಡ ಭಾಷಿಕರ ಹೆಸರುಗಳಲ್ಲಿ ಸಾಂಸ್ಕೃತಿಕವಾಗಿ ಭಾರತೀಯ ಭಾಷೆಗಳ ಸಂದರ್ಭದಲ್ಲಿ ಬಳಕೆಯಲ್ಲಿ ವ್ಯಕ್ತಿನಾಮಗಳ ಆಕರಗಳ ಜೊತೆಗೆ ಈ ಸಂಬಂಧವಾಚಕಗಳು ಸಂಬೋಧನಾ ರೂಪಳು ಸೇರ್ಪಡೆಗೊಂಡು ರಚನೆಯಾಗಿರುತ್ತದೆ. ಉದಾ : ಸುಲ್ತಾನಮ್ಮ, ಯೇಸುದಾಸ್ ಈ ರೀತಿಯ ಹೆಸರುಗಳು ಪರ್ಶಿಯನ್, ಅರೇಬಿಕ್, ಲ್ಯಾಟಿನ್, ರೋಮನ್ ಮೂಲದ ವ್ಯಕ್ತಿನಾಮಗಳ ಆಕರಗಳು ಭಾರತೀಯ ಭಾಷೆಗಳಲ್ಲಿ ಆಗಿರುವುದು ವಿಶೇಷ. ಕನ್ನಡೀಕರಣಗೊಳಿಸಿಕೊಳ್ಳುವಾಗ ಈ ರೀತಿಯೂ ಪ್ರಕ್ರಿಯೆಗಳು ನಡೆದಿವೆ.

ಹಿಂದು ಧರ್ಮದ ಕೆಳಜಾತಿಯ ವ್ಯಕ್ತಿಗಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು ತಮ್ಮ ಹೆಸರುಗಳನ್ನು ಬದಲು ಮಾಡಿಕೊಂಡಿರುವ ಉದಾಹರಣೆಗಳನ್ನು ಕಾಣಬಹುದು. ಚೋಮನದುಡಿ ಚಲನ ಚಿತ್ರದಲ್ಲಿ ಬರುವ ಕೆಳ ಜಾತಿಯ ಪೊಮ್ಮನ ಮಗಳು 'ಮಾರಿ'

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ನಂತರ ಅವಳ ಹೆಸರು ಮೇರಿಯಾಗುತ್ತದೆ. ಚದುರಂಗರ ವೈಶಾಖ ಕಾದಂಬರಿಯಲ್ಲಿನ ಪುಟಾರಿ ಎಂಬ ಪಾತ್ರ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ನಂತರ ಪೀಟರ್ ಆಗಿ ಅವನ ಹೆಸರು ಬದಲಾಗುತ್ತದೆ. ಈ ರೀತಿಯಾಗಿ ಕೆಳಜಾತಿ ಪಾತ್ರಗಳ ಹೆಸರುಗಳು ಮತಾಂತರಗೊಂಡ ನಂತರ ಬದಲಾಗಿವೆ. ಅವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ನಂತರ ಅವರ ಸಾಮಾಜಿಕ ಗೌರವದಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ. ಅದೇ ರೀತಿಯ ಶೋಷಣೆ ಅನುಭವಿಸುತ್ತಿರುತ್ತಾರೆ. ಮತಾಂತರ ಪರಿಕಲ್ಪನೆಯಲ್ಲಿಯೂ ಸಹ ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟವನ್ನು ಕಾಣಬಹುದು. ಈ ರೀತಿಯಾಗಿ ಸಮಾಜದಲ್ಲಿ ವ್ಯಕ್ತಿಗಳ ಹೆಸರುಗಳ ಮೂಲಕ ಅವರ ಸಾಮಾಜಿಕ ನೆಲೆಯನ್ನು ಗುರುತಿಸಬಹುದು.

ಶ್ರೇಣೀಕರಣದ ಸಮಾಜದಲ್ಲಿ ವ್ಯಕ್ತಿನಾಮಗಳು ಯಾವ ರೀತಿಯ ಪಾತ್ರವನ್ನು ವಹಿಸುತ್ತವೆ? ವ್ಯಕ್ತಿ ಮತ್ತು ಹೆಸರುಗಳು ಸಮಾಜದಲ್ಲಿ ಯಾವ ರೀತಿಯ ಕೆಲಸಗಳನ್ನು ನಿರ್ವಹಿಸುತ್ತವೆ ಎಂಬುದನ್ನು ಜಾತಿ, ಲಿಂಗ, ವಯಸ್ಸು, ಶಿಕ್ಷಣ, ಧರ್ಮ ಈ ಐದು ಅಂಶಗಳಿಂದ ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಕಂಡು ಬಂದ ಸಾಮಾಜಿಕ ಸ್ತರ ವಿನ್ಯಾಸ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

೪.೩. ವ್ಯಕ್ತಿನಾಮಗಳು : ಬಳಕೆಯ ನೆಲೆಗಳು

ನಿರ್ದಿಷ್ಟ ಹಾಗೂ ವಾರ್ಗಿಕಗಳ ಸಂಕೀರ್ಣ ರೂಪವೇ ವ್ಯಕ್ತಿನಾಮ ಎಂದು ಕರೆಯುತ್ತಾರೆ. ವ್ಯಕ್ತಿನಾಮಗಳು ಭಾಷೆಯ ಘಟಕಗಳು ಆಗಿರುವಂತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟಕಗಳಾಗಿವೆ. ಸಾಮಾಜಿಕ ಮತ್ತು ಸಂಸ್ಕೃತಿಯ ನಿರ್ವಚನಕ್ಕೆ ವ್ಯಕ್ತಿನಾಮಗಳು ಮಹತ್ವದ ಸಂಗತಿಯನ್ನು ನೀಡುತ್ತವೆ. ವ್ಯಕ್ತಿನಾಮಗಳ ಸಂಬೋಧನೆಯಲ್ಲಿ ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಧರ್ಮ, ಲಿಂಗ, ವಯಸ್ಸು, ಶಿಕ್ಷಣ ಮುಂತಾದ ಸಂಗತಿಗಳು ಮುಖ್ಯವಾಗಿರುತ್ತವೆ. ಈ ಅಂಶಗಳನ್ನು ಆಧರಿಸಿ ವ್ಯಕ್ತಿನಾಮಗಳ ಬಳಕೆಯ ನೆಲೆಯಲ್ಲಿ ಭಿನ್ನತೆ ಕಂಡುಬರುತ್ತದೆ.

ಸಮಾಜದಲ್ಲಿ ವಿವಿಧ ಜಾತಿ, ವರ್ಗಗಳ ನಡುವಿನ ಆಂತರಿಕ ಸಂಬಂಧವನ್ನು ಅರ್ಥಮಾಡಿಕೊಳ್ಳುವಲ್ಲಿ, ವ್ಯಕ್ತಿನಾಮಗಳ 'ಬಳಕೆ' ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಹಿನ್ನೆಲೆಯಿಂದ ವ್ಯಕ್ತಿನಾಮಗಳ ಬಳಕೆಯ ನೆಲೆ ತುಂಬಾ ಮುಖ್ಯವಾಗಿರುತ್ತದೆ. ವ್ಯಕ್ತಿನಾಮಗಳ ಬಳಕೆ ಸಾಮಾಜಿಕ ಸ್ತರವಿನ್ಯಾಸಗಳಿಗೆ ಇಲ್ಲವೆ ಅಂತಸ್ತುಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತಿದ್ದು, ಈ ವ್ಯತ್ಯಾಸ ಸಾಮಾಜಿಕ ವರ್ಗ, ಜಾತಿ, ವರ್ಣ, ಲಿಂಗ ಇನ್ನಿತರ ಸ್ತರವನ್ನು ಸೂಚಿಸುತ್ತದೆ.

ಕೆಳಜಾತಿ ಪಾತ್ರಗಳು, ಮೇಲ್ಜಾತಿ ಪಾತ್ರಗಳನ್ನು ಸಂಬೋಧಿಸುವ ನೆಲೆಗೂ, ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಸಂಬೋಧಿಸುವ ಆಯಾಮಕ್ಕೂ ವ್ಯಕ್ತಿನಾಮ ಸಂಬೋಧನಾ ಕ್ರಮದಲ್ಲಿ ವ್ಯತ್ಯಾಸವಿದೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಹೆಸರಿಡಿದು ಕರೆಯಬಹುದು. ಆದರೆ ಕೆಳಜಾತಿಯವರು ಮೇಲ್ಜಾತಿ ಪಾತ್ರಗಳನ್ನು ಹೆಸರಿಡಿದು ಕರೆಯಲು ಸಾಧ್ಯವಿಲ್ಲ. ಈ

ರೀತಿಯ ನಿರ್ಬಂಧವಿದೆ. ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಮೇಲ್ಜಾತಿ ಕಿರಿಯರು ಕೆಳಜಾತಿಯ ಹಿರಿಯ ಪಾತ್ರಗಳನ್ನು ಹೆಸರಿಡಿದು ಕರೆಯುತ್ತಾರೆ. ಹಾಗೂ ಏಕವಚನದಲ್ಲಿ ಸಂಬೋಧಿಸುತ್ತಾರೆ. ಕೆಳಜಾತಿ ಹಿರಿಯರು ಮೇಲ್ಜಾತಿ ಕಿರಿಯರನ್ನು ಹೆಸರಿನ ಜೊತೆಗೆ ಗೌರವ ಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಕೆಲವೊಮ್ಮೆ ಗೌರವಸೂಚಕಗಳನ್ನು ಮಾತ್ರ ಬಳಸುತ್ತಾರೆ. ಈ ಆಯಾಮಗಳನ್ನಿಟ್ಟುಕೊಂಡು ಕೆಲವು ಪ್ರಾತಿನಿಧಿಕ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಬರುವ ಪಾತ್ರಗಳ ವ್ಯಕ್ತಿನಾಮಗಳನ್ನು ಬಳಸಿ ಚರ್ಚಿಸಲಾಗಿದೆ.

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಹೆಸರುಗಳನ್ನು ವಾರ್ಗಿಕ ಮತ್ತು ಗೌರವ ಸೂಚಕಗಳನ್ನು ಬಳಸಿಯೇ ಸಂಬೋಧಿಸುತ್ತಾರೆ. ಕೆಲವು ಸಂದರ್ಭದಲ್ಲಿ ಮೇಲ್ಜಾತಿ ಪಾತ್ರಗಳ ಹೆಸರುಗಳನ್ನು ಬಳಸುವುದು ನಿಷಿದ್ಧ ಎಂಬ ಸಂದರ್ಭಗಳಿವೆ. ಅದಕ್ಕಾಗಿ ಕೆಳಜಾತಿ ವ್ಯಕ್ತಿಗಳು ಗೌರವ ಸೂಚಕಗಳಾದ ಧಣಿ, ಒಡೆಯ, ಒಡತಿ, ಅಮ್ಮವ್ರು, ಅಯ್ಯನಾರೆ, ರಾಯರೇ, ಗೌಡ್ರೆ ಮುಂತಾದ ಗೌರವ ಸೂಚಕ ಪದಗಳನ್ನು ಬಳಸಿ ಮಾತನಾಡುತ್ತಾರೆ. ಹೆಸರನ್ನು ಹಿಡಿದು ಮಾತನಾಡುವುದು ವಿರಳ. ಈ ಸಂದರ್ಭಕ್ಕೆ 'ಕುವೆಂಪು' ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಎರಡು ಮೇಲ್ಜಾತಿ ಪಾತ್ರಗಳ ಸಂಭಾಷಣೆಯ ಸಂದರ್ಭವನ್ನು ಗಮನಿಸೋಣ.

ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ, ತಮ್ಮ ಮೇಲುತನವನ್ನೂ, ಹೆಚ್ಚುಗಾರಿಕೆಯನ್ನೂ ತಿಕ್ಕಿ, ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೆ 'ಕೀಳುಜನ'ರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದನು, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿತರಾಗಿದ್ದು, ಹೆಚ್ಚು ಕಡಿಮೆ ಅವರಷ್ಟೇ ವಯಸ್ಸಿನವರಾಗಿದ್ದು, ತನ್ನ ತಂದೆಯನ್ನು ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡ'ರು ಹುಷಾರಾಗಿದ್ದಾರೆಯೇ? ಎನ್ನದೆ, 'ಕಲ್ಲಯ್ಯ' ಹುಷಾರಾಗಿದ್ದಾನೇ? ಎಂದು ಏಕವಚನದಿಂದಲೇ ಮಾತನಾಡಿಸುವುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆದು ನಿಂತು, ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವವನಿಗೆ ಸರಿಯಾಗಿಯೇ ಉತ್ತರ ಹೇಳುತ್ತೇನೆ ಎಂದು ನಿಶ್ಚಯಿಸಿ ಲಘುವಾಗಿ ನಗುತ್ತ ಹೇಳಿದನು; ಯಾರು? ಹಳಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು! ಅಲ್ಲ ಮಾರಾಯಾ; ನಿನ್ನ ಅಪ್ಪಯ್ಯ ಕಲ್ಲಯ್ಯ ಗೌಡರು ಹುಷಾರಾಗಿದ್ದಾರೆಯೇ? ಅಂತ ಕೇಳಿದ್ದು...... ಏನೋ ನಾವು ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದೂ ಪರಿಚಯ ಏಕವಚನದಲ್ಲಿಯೇ ಮಾತನಾಡಿಸೋದು ರೂಢಿಯಾಗಿಬಿಟ್ಟಿದೆ. (ಕುವೆಂಪು, ಮಲೆಗಳಲಿ ಮದುಮಗಳು, ಪುಟ-೪೬೨).

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಲಿಂಗ, ವಯಸ್ಸು ಸಂಬೋಧನೆಯಲ್ಲಿ ಕೆಲಸ ಮಾಡಿವೆ. 'ಕೀಳುಜನ'ರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದು ಸಂಬೋಧಿಸಿದಕ್ಕೆ ದೇವಯ್ಯಗೌಡನಿಗೆ ಮಂಜಭಟ್ಟನ ಮೇಲೆ ಅತಿಯಾದ ಕೋಪಬರುತ್ತದೆ. ಅಂದರೆ ಸಮಾಜದಲ್ಲಿ ಕೀಳುಜನರನ್ನು ಗೌರವದಿಂದ ಕರೆಯುವುದಿಲ್ಲ ಎಂಬುದನ್ನು ಇಲ್ಲಿ ಸೂಚಿಸುತ್ತದೆ. ಮೇಲೂಜಾತಿಯವರಿಗೆ ಮಾತ್ರ ಗೌರವದಿಂದ ಮಾತನಾಡಿಸುತ್ತಾರೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತಿದೆ. ವಾಸ್ತವವಾಗಿ ಸತ್ಯದ ಸಂಗತಿ ಕೂಡ ಆಗಿದೆ. ಇದು ಜಾತಿಯ ಸ್ತರವಿನ್ಯಾಸವನ್ನು ಸೂಚಿಸುತ್ತದೆ. ಹೆಚ್ಚುಕಡಿಮೆ ಅವರಷ್ಟೆ ವಯಸ್ಸಿನವರಾಗಿದ್ದು ತನ್ನ ತಂದೆಯನು ಗೌರವಸೂಚಕ ಬಹುವಚನದಿಂದ ಕಲ್ಲಯ್ಯಗೌಡರು ಹುಷಾರಾಗಿದದಾರೆಯೇ? ಎನ್ನದೆ 'ಕಲ್ಲಯ್ಯ' ಎಂದದ್ದೂ ಸಹ ದೇವಯ್ಯಗೌಡನಿಗೆ ವಿಪರೀತ ಕೋಪ ಬರುತ್ತದೆ. ಮಂಜಭಟ್ಟರು ಮತ್ತು ಕಲ್ಲಯ್ಯಗೌಡರು ಇಬ್ಬರು ಸಮ ವಯಸ್ಕರು ಆದ್ದರಿಂದ ಮೊದಲಿನಿಂದಲೂ ಏಕವಚನದಲಿ ಸಂಬೋಧಿಸುವುದು ರೂಢಿ. ಏಕವಚನದಲಿ ಸಂಬೋಧಿಸಿದ್ದು ಕಲ್ಲಯ್ಯಗೌಡನ ಮಗನಿಗೆ ಸಹಿಸದ ಸಂಗತಿಯಾಗುತ್ತದೆ. ಇಬ್ಬರು ಸಹ ಮೇಲ್ಜಾತಿ ವ್ಯಕ್ತಿಗಳು ಹಾಗೂ ಸಮವಯಸ್ಕರು ಆದರೂ ಈ ರೀತಿ ಸಂಬೋಧಿಸಿದ್ದು ಸರಿಯಲ್ಲ ಎಂಬುದು ದೇವಯ್ಯಗೌಡನ ಮಾತು. ಇಲ್ಲಿ ದೇವಯ್ಯಗೌಡನ ಗೌಡಿಕೆ, ಆರ್ಥಿಕತೆ ಮತ್ತು ಪ್ರತಿಷ್ಠೆಯ ವಿಷಯಗಳು ಮುಖ್ಯ ನೆಲೆಯಲ್ಲಿ ನಿಲ್ಲುತ್ತವೆ.

'ಬ್ರಾಹ್ಮಣ' ವ್ಯಕ್ತಿ, 'ಗೌಡ' ಸಮುದಾಯಕ್ಕೆ ಸೇರಿದ ಕಲ್ಲಯ್ಯಗೌಡನನು ಏಕವಚನದಲ್ಲಿ ಸಂಬೋಧಿಸಿದ್ದಕ್ಕೆ ದೇವಯ್ಯನಿಗೆ ಸಹಿಸಲು ಆಗುವುದಿಲ್ಲ. ಮನಸ್ಸಿನಲ್ಲಿಯೇ ಕೋಪಗೊಳ್ಳುತ್ತಾನೆ. ಆದರೆ ಕೆಳಜಾತಿಯವರಾದ ಬಚ್ಚ, ಗುತ್ತಿ, ಐತ, ಪೀಂಚಲು, ಚೀಂಕ್ರ ಮುಂತಾದವರನ್ನು ಇದೇ ದೇವಯ್ಯಗೌಡರು ಮತ್ತು ಇವರ ಸಮುದಾಯದವರು ಏಕವಚನದಲ್ಲಿ ಗೌರವಸೂಚಕಗಳನ್ನು ಬಳಸದೇ ಸಂಬೋಧಿಸುತ್ತಾರೆ. ಮತ್ತು ಮೇಲ್ಜಾತಿ ಪಾತ್ರಕ್ಕಿಂತ ಕೆಳಜಾತಿ ಪಾತ್ರ ವಯಸ್ಸಿನಲ್ಲಿ ದೊಡ್ಡವನಾಗಿದ್ದರೂ ಏಕವಚನದಲ್ಲಿಯೇ ಸಂಬೋಧಿಸುತ್ತಾರೆ. ಉದಾಹರಣೆಗೆ ಧರ್ಮು ಮತ್ತು ಐತ ಮಾತನಾಡುವ ಸಂದರ್ಭವನ್ನು ನೋಡಬಹುದು.

ದೊಡ್ಡಣ್ಣ ಹೆಗ್ಗಡೆಯವರ ಮಗನಾದ ಧರ್ಮು ಕೆಳಜಾತಿಯ ಐತನಿಗಿಂತ ತುಂಬಾ ಚಿಕ್ಕವನು. ಇಬ್ಬರ ಸಂಭಾಷಣೆಯನ್ನು ಗಮನಿಸುವುದಾದರೆ,

"ಏ ಐತಾ ಈ ಸಾರಿ ಎಷ್ಟು ಜೇನು ನೋಡಿಟ್ಟಿಯೋ?"

"ಸುಮಾರು ನೋಡಿಟ್ಟೀನಿ......."

"ನನ್ನಿಂದ ಆಗೋದಿಲ್ಲಾಪ್ಪ ಕೀಳಾಕೆ. ಪೀಂಚಲು ಕೀಳ್ತಾಳೆ; ಅವಳಿಗೆ ಎಲೆ ಮದ್ದು ಗೊತ್ತು"

"ಥೂ ನಿನ್ನ! ನಿಂಗೆ ನಾಚಿಕೆ ಆಗೋದಿಲ್ಲೇನೋ? ನಿನ್ನ ಹೆಂಡ್ತಿ ಮಾಡಿದ್ದನ್ನು ಮಾಡಾಕೆ ನಿನ್ನ ಕೈಲಾಗದಿಲ್ಲೇನೋ?" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೨೫೪). ಈ ರೀತಿಯಾಗಿ ಸಂಭಾಷಣೆ ನಡೆಯುತ್ತದೆ. ಮೇಲ್ಜಾತಿಯ ತುಂಬಾ ಚಿಕ್ಕವನಾದ ಧರ್ಮು ಕೆಳಜಾತಿಯ ಹಿರಿಯ ವ್ಯಕ್ತಿಯಾದ ಐತನನ್ನು ಹೆಸರಿಡಿದು ಏಕವಚನದಲ್ಲಿ ಸಂಬೋಧಿಸುತ್ತಾನೆ. ಇಲ್ಲಿ ವಯಸ್ಸು ಮತ್ತು ಜಾತಿ ಎರಡು ಮುಖ್ಯವಾಗುತ್ತವೆ. ಸಮಾಜದ ಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸುವುದರ ಜೊತೆಗೆ ವಾಸ್ತವತೆಯನ್ನು ಸ್ಪಷ್ಟಪಡಿಸುತ್ತದೆ.

ಕೆಳಜಾತಿ ಹಿರಿಯ ಪಾತ್ರ ಮೇಲ್ಜಾತಿ ಕಿರಿಯ ಪಾತ್ರವನ್ನು ಸಂಬೋಧಿಸುವಾಗ ಹೆಸರಿಡಿದು ಮಾತನಾಡಿಸುವುದಾಗಲಿ ಅಥವಾ ಏಕವಚನದಲ್ಲಿ ಸಂಬೋಧಿಸುವುದಾಗಲಿ ಕಂಡುಬರುವುದಿಲ್ಲ. ಕೆಲವೊಮ್ಮೆ ಕಂಡುಬಂದರೆ ಅಲ್ಲಿನ ಸಂದರ್ಭವನ್ನು ನೋಡಬೇಕಾಗುತ್ತದೆ. ಕಂಡುಬರುವುದು ವಿರಳ ಎಂದು ಹೇಳಬಹುದು. ಕೆಳಜಾತಿ ಹಿರಿಯ ಪಾತ್ರ ಮೇಲ್ಜಾತಿ ಕಿರಿಯ ಪಾತ್ರವನ್ನು ಗೌರವಸೂಚಕದ ಮೂಲಕ ಸಂಬೋಧಿಸುವ ಉದಾಹರಣೆಯನ್ನು ನೋಡಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಧರ್ಮು ಮತ್ತು ಐತರ ಸಂಭಾಷಣೆಯ ಸಂದರ್ಭ.

"ಐತಾ, ನಿಂಗೆ ನಮ್ಮಪ್ಪಯ್ಯ ಗುರ್ತು ಚೆನ್ನಾಗಿತ್ತೇನೋ?"

"ಚೆನ್ನಾಗಿತ್ತಯ್ಯ......" ಐತ ಇನ್ನೂ ಏನನ್ನೋ ಹೇಳಬೇಕು ಎಂದಿದ್ದನು. ಅಷ್ಟರಲ್ಲಿ ಧರ್ಮು.

"ಅವರ ನೋಡಿದ್ರೆ ಈಗ್ಲೂ ನಿಂಗೆ ಗುರ್ತು ಸಿಗ್ತದಾ?" ಎಂದು ಕೇಳಿದನು.

"ಸಿಕ್ಕದೆ ಏನ್ರಯ್ಯ? ನಂಗೆ ಚೆನ್ನಾಗಿ ಬುದ್ಧಿ ಬಂದಮ್ಯಾಲೆ ಅಲ್ಲೇನು ಅವರು ತಿರುಪತಿಗೆ ಹೋಗಿದ್ದು? ಅವರು ಹೋಗಾಕೆ ಮುಂಚೆ ನೆಂಟರು ಇಷ್ಟರು ಎಲ್ಲರ್ನೂ ಕರೆದು ಔಂತ್ಲ ಮಾಡಿಸಿದ್ರು ನಿಮ್ಮ ಮನೇಲಿ. ನಾನೂ ಗಡದ್ದಾಗಿ ಉಂಡಿದ್ದೆ. ನೀವು ಆಗ ಬಾಳ ಸಣ್ಣೋರು......" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೨೫೪-೨೫೫)

ಈ ಸಂಭಾಷಣೆಯಲ್ಲಿ ಐತ ಧರ್ಮುಗಿಂತ ದೊಡ್ಡವನು ಎಂಬುದು ಗೊತ್ತಾಗುತ್ತದೆ. ಧರ್ಮು ಐತನಿಗಿಂತ ವಯಸ್ಸಿನಲ್ಲಿ ತುಂಬಾ ಚಿಕ್ಕವನಾಗಿದ್ದರೂ ಐತನನ್ನು ಏಕವಚನದಲ್ಲಿ ಮತ್ತು ಹೆಸರಿಡಿದು ಸಂಬೋಧಿಸುತ್ತಾನೆ. ಆದರೆ ಐತ ಧರ್ಮುಗಿಂತ ವಯಸ್ಸಿನಲ್ಲಿ ದೊಡ್ಡವನಾಗಿದ್ದರೂ ಧರ್ಮು ಎಂದು ಹೆಸರಿಡಿದು ಮಾತನಾಡಿಸುತ್ತಿಲ್ಲ. 'ಅಯ್ಯ' ಎಂಬ ಗೌರವಸೂಚಕ ಪದ ಬಳಸಿ ಬಹುವಚನದಲ್ಲಿ ಮಾತನಾಡಿಸುತ್ತಿದ್ದಾನೆ. ಇಲ್ಲಿಯೂ ಸಹ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಕೆಳಜಾತಿ ವ್ಯಕ್ತಿಗಳಿಗೆ ಕೆಲವು ಹೆಸರುಗಳನ್ನು ಕರೆಯುವುದು ಸಮಂಜಸವಲ್ಲ. ಆ ಹೆಸರುಗಳಿಗೆ ಅವರು ಅರ್ಹವಲ್ಲ, ಅವರನ್ನು ಆ ರೀತಿ ಕರೆಯಬಾರದು ಎಂಬ ಮೇಲ್ಜಾತಿ

ವ್ಯಕ್ತಿಗಳ ಮನೋಧೋರಣೆಯನ್ನು ಸೂಚಿಸುವಂತಹ ಒಂದು ಉದಾಹರಣೆಯನ್ನು ನೋಡಬಹುದು. 'ದೇವನೂರು' ಅವರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಎಂಬ ಕಥೆಯಲ್ಲಿ ಒಂದು ಸನ್ನಿವೇಶ ಬರುತ್ತದೆ. ಅದು ಈ ರೀತಿಯಾಗಿದೆ. "ಅಲ್ಲೆ ಮಲಗಿದ್ದ ಮಗ ಗದ್ಧರಿಸಿ ಎದ್ದು ತಡವರಿಸುತ್ತ ಕಣ್ಣುಮುಚ್ಚಿಕೊಂಡೆ ಕೂತುಕೊಂಡಿತು. ಪಾರೋತಿ ತಲೆ ಸವರಿ' ಯಾಕ ರಾಜ, ಯಾಕಪ್ಪ, ಕನ್ಸ ಕಂಡ್ಯ ಅಂದಳು, ರಾಜನ ಕಣ್ಣುಬುಟ್ಟು ದೊಡತಗೆ ನೋಡಿತು. ಅವ್ವ ಎದುರಿಗಿದ್ದಳು. ರಾಜ ಊ್ಞ ಅಂತ ತಲೆ ಕುಣಿಸಿತು. ಏನ ಕಂಡ್ಯಹೇಳು ಮತ್ತ ಅಂದಳು. ಹಾಗಂತಲೆ ರಾಜ ಮೊಂಡು ಮೊಖ ಮಾಡಿಕೊಂಡು 'ನೋಡವ್ವ ನೋಡವ್ವ ಪಟೇಲ್ರ ಶಂಭಪ್ಪ ಅವ್ನಲ್ಲ. ಅವ ಅವ ನನ್ನ ರಾಜ ಅನ್ನಕಿಲ್ವಂತೆ' ಅಂದ. ಪಾರೋತಿ ಯಾಕಂತ? ಅಂತಂತಲೆ ರಾಜ–ಶಂಭಪ್ಪ ಇಸ್ಕೂಲ ಬುಡ್ತಲೆ ಅಂದ. ವಲಾರುಕಲಾ. ಅದ್ಕ ನಿನ್ನ ರಾಜ ಅನ್ನಾಕಿಲ್ಲ. ಗೀಜ ಅಂತೀನಿ. ಅಂದ? (ಫಕೀರ್ ಮಹಮದ್ ಕಟ್ಪಾಡಿ, ಕೃಷ್ಣಮೂರ್ತಿ ಹನೂರು, (ಸಂ), ಕನ್ನಡದ ಮೂವತ್ತು ಕಥೆಗಳು, ಪುಟ–೧೪೪).

ಈ ಸಂಭಾಷಣೆಯು ಮೇಲ್ಜಾತಿಯವರ ಮನೋಧೋರಣೆಯನ್ನು ಸೂಚಿಸುತ್ತದೆ. ಜಾತಿಯಿಂದ ಕೆಳಗಿರುವುದರಿಂದ 'ರಾಜ' ಎನ್ನುವ ನಾಮಪದಕ್ಕೆ ನೀನು ಅರ್ಹನಲ್ಲ. ರಾಜ ಎನ್ನುವ ಪದ ಒಡೆಯ, ಶ್ರೀಮಂತ, ರಾಜ್ಯವನ್ನು ಆಳುವವನು, ಕ್ಷತ್ರಿಯ ಕುಲದವರು ಮುಂತಾದ ಅರ್ಥಗಳನ್ನು ಪಡೆದುಕೊಂಡಿರುವುದರಿಂದ ಕೆಳಜಾತಿಯ ಬಡ ವ್ಯಕ್ತಿಯಾದ ನಿನ್ನನ್ನು 'ರಾಜ' ಎಂದು ಕರೆಯುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಇದು ಕಥೆಯಾಗಿ ಬಂದರೂ ಸಹ ವಾಸ್ತವತೆಯನ್ನು ಸೂಚಿಸುತ್ತದೆ. ಈ ರೀತಿಯ ಅನೇಕ ಉದಾಹರಣೆಗಳನ್ನು ನೋಡಬಹುದು.

ಸಿದ್ದಲಿಂಗಯ್ಯ ಅವರ 'ಪಂಚಮ' ನಾಟಕದಲ್ಲಿ ಹಯವದನರಾವ್ ಎಂಬ ಮೇಲ್ಜಾತಿ ವ್ಯಕ್ತಿ ಜಿಲ್ಲಾಧಿಕಾರಿಯಾಗಿರುತ್ತಾನೆ. ಪುಟ್ಟಲಕ್ಕಮ್ಮ ಎಂಬ ಕೆಳಜಾತಿ ಮಹಿಳೆ ಇಂಟರ್‌ವ್ಯೂವ್‌ಗೆ ಹೋಗಿರುತ್ತಾಳೆ. ಹಯವದನರಾವ್ ಇಂಟರ್‌ವ್ಯೂವ್ ಮಾಡ್ತಾ ನಿಮ್ಮನ್ನ 'ಪುಟ್ಟಲಕ್ಕಿ' ಅಂತ ಕರದ್ರೆ ನಿಮ್ಗೆ ಬೇಜಾರ್ ಆಗುತ್ತಾ ಎಂದು ಕೇಳುತ್ತಾನೆ. ಇದು ಕೂಡ ಮೇಲ್ಜಾತಿ ವ್ಯಕ್ತಿಯ ಮನೋಧೋರಣೆಯನ್ನು ಸೂಚಿಸುತ್ತದೆ. ಕೆಳಜಾತಿಯವರನ್ನು ಗೌರವದಿಂದ ಸಂಬೋಧಿಸಬಾರದು ಅದಕ್ಕೆ ಅವರು ಅರ್ಹರಲ್ಲ ಎಂಬುದನ್ನು ಸೂಚಿಸುತ್ತದೆ. ಸರ್ಕಾರದ ಅಧಿಕಾರಿಯಾಗಿ ಯಾರೇ ಬಂದರೂ ಅವರಿಗೆ ಗೌರವ ಕೊಡುವುದು ಅವನ ಕರ್ತವ್ಯ ಅದು ಆ ವ್ಯಕ್ತಿಯ ಸ್ವಂತದಲ್ಲ. ಸಾರ್ವಜನಿಕರ ಕಛೇರಿ ಅಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕೂಡ ಗೌರವವನ್ನು ನೀಡಬೇಕು. ಎಲ್ಲರನ್ನು ಸಮಾನತೆಯಿಂದ ಕಾಣಬೇಕು. ಅಂತ ಸ್ಥಳದಲ್ಲೂ ಕೂಡ ಆ ಮಹಿಳೆಯನ್ನು ಏಕವಚನದಲ್ಲಿ ಸಂಬೋಧಿಸುವುದಕ್ಕೆ ಇಚ್ಚಿಸುತ್ತಾನೆ. ಇದು ಮೇಲ್ಜಾತಿ ವ್ಯಕ್ತಿಗಳ ಮನೋಧೋರಣೆಯನ್ನು ಸೂಚಿಸುತ್ತದೆ.

ಮಾಸ್ತಿಯವರ 'ವೆಂಕಟಿಗನ ಹೆಂಡತಿ' ಕಥೆಯಲ್ಲೂ ಸಹ ಈ ರೀತಿಯ ಒಂದು ಉದಾಹರಣೆಯನ್ನು ಕಾಣಬಹುದು.

"ತರುಣನ ಹೆಸರು ವೆಂಕಟರಮಣ ಅವನನ್ನು ಸಾಮಾನ್ಯವಾಗಿ 'ವೆಂಕಟಿಗ' ಎಂದು ಕರೆಯುವವರು 'ವೆಂಕಟರಮಣ' ಎನ್ನುವುದು ಸ್ವಲ್ಪ ಉದ್ದ; ಅಲ್ಲದೆ ಬಹುಮರ್ಯಾದೆಯ ಹೆಸರು; ಇವನಂತವರ ವಿಷಯಕ್ಕೆ ಅದು ವೆಂಕಟಿಗ ಆಗುತ್ತದೆ. ವೆಂಕಟಿಗ ಜನತೆಯಲ್ಲಿ ಬಾಯಲ್ಲಿ 'ಯಂಗಟಿಗ' ರೂಪವನ್ನು ಪಡೆಯುತ್ತದೆ" (ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಣ್ಣ ಕಥೆಗಳು ಭಾಗ–೨, ಪುಟ–೩೨).

ವೆಂಕಟಿಗನ ಹೆಂಡತಿ ಕಥೆಯಲ್ಲಿ ಬರುವ ವೆಂಕಟರಮಣನ ಪಾತ್ರ ಕೆಳಜಾತಿಯ ಬಡವ ಪಾತ್ರ. ಇಲ್ಲಿ ಸಾಮಾಜಿಕ ಸ್ತರ ಮತ್ತು ಆರ್ಥಿಕ ದೃಷ್ಟಿಕೋನ ಎರಡು ಮುಖ್ಯವಾಗುತ್ತವೆ. ಅದೇ ಮೇಲ್ಜಾತಿ ಬಡವ ವೆಂಕಟರಮಣನಾಗಿದ್ದಾನೆ. ಮೇಲ್ಜಾತಿ ಬಡವನನ್ನು 'ವೆಂಕಟಿಗ ಎಂದು ಕರೆಯಲು ಸಾಧ್ಯವಿತ್ತೆ? ಇಲ್ಲ ಇದು ಬರಿ ಆರ್ಥಿಕ ಅಸಮಾನತೆಯ ಮೇಲೆ ನಿಂತಿಲ್ಲ ಸಾಮಾಜಿಕ ಸ್ತರದಿಂದಲೂ ಸಹ ನೋಡಬೇಕಾಗುತ್ತದೆ. ಆರ್ಥಿಕ ದೃಷ್ಟಿಕೋನದಿಂದ ಸಾಮಾಜಿಕ ಸ್ತರವಿನ್ಯಾಸದ ನೆಲೆ ಬಹುಮುಖ್ಯವಾದದ್ದು. ಈ ಅಭಿವ್ಯಕ್ತಿ ಕೆಳಜಾತಿ ಪಾತ್ರಗಳ ಹೆಸರುಗಳ ಬಳಕೆಯ ಸ್ವರೂಪವಾಗಿದೆ.

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಗೌರವಸೂಚಕ ವಾರ್ಗಿಕ ಪಾತ್ರಗಳನ್ನು ಬಳಸದೆ ಏಕವಚನದಲ್ಲಿ ಸಂಬೋಧಿಸುವ ಒಂದು ಮಾದರಿಯಾಗಿದೆ. ಕೆಳಜಾತಿ ಪಾತ್ರಗಳೇ ತಮ್ಮ ಪರಿಚಯವನ್ನು ಮಾಡಿಕೊಳ್ಳುವಾಗ ಹೆಸರನು ಸಂಕ್ಷಿಪ್ತಗೊಳಿಸಿ ಬಳಕೆ ಮಾಡಿರುವುದನ್ನು ಉದಾಹರಣೆ ಸಹಿತ ನೋಡಬಹುದು.

ವಿಜಯ ಸಾಸನೂರು ಅವರ ಅಸ್ಪೃಶ್ಯ ಕಥೆಯಲ್ಲಿ ಬರುವಂತ ಸನ್ನಿವೇಶ. ಅಧಿಕಾರಿಯಾದ ರಾವಸಾಬ್ ಕೆಳಜಾತಿ ವ್ಯಕ್ತಿಯಾದ ದುರ್ಗಪ್ಪನನ್ನು ಕೇಳುವುದು.

> "ಅಂದಾಂಗ್ ನಿನ್ ಹೆಸರೇನಂದಿ ?
>
> ದುರ್ಗ್ಯಾರೀ ಯಪಾ
>
> 'ಏ ನೆಟ್ಟಗ್ ಹೇಳೋ ನಿಮ್ಮಪ್ಪಾ–ಅವ್ವಾ ಛಂದಾಗಿ ಇಟ್ಟಿದ್ದು"
>
> ದುರ್ಗಪ್ಪ ರೀ...... (ಲಂಕೇಶ ಪಿ.,(ಸಂ), ಪಾಂಚಾಲಿ, ಪುಟ–೭೨)

ದಾಖಲೆ ಮತ್ತು ಬಳಕೆ ಎರಡೂ ಬೇರೆ ಬೇರೆಯಾಗಿದೆ. ಮೇಲ್ಜಾತಿ ವ್ಯಕ್ತಿಗಳ ಬಳಕೆಯ ಹೆಸರುಗಳು/ದಾಖಲೆಗಿಂತ ಒಂದು ಹಂತ ಮೇಲೆ ಹೋಗುತ್ತದೆ. ಕೆಳಜಾತಿ ವ್ಯಕ್ತಿಗಳ ಹೆಸರುಗಳು ಬಳಕೆಯಲ್ಲಿ ದಾಖಲೆಗಿಂತ ಒಂದು ಹಂತ ಕೆಳಗೆ ಬರುತ್ತದೆ.

ಸುಬ್ಬಣ್ಣ ಹೆಗ್ಗಡೆ	ಸುಬ್ಬಣ್ಣ ಹೆಗ್ಗಡೇರು
ಕಲ್ಲಯ್ಯಗೌಡ	ಕಲ್ಲಯ್ಯಗೌಡ್ರು
ದುರ್ಗಪ್ಪ	ದುರ್ಗ್ಯಾ
ರಾಮು	ರಾಮ್ಯಾ
ಮಲ್ಲಪ್ಪ	ಮಲ್ಯಾ

ಈ ರೀತಿಯಾಗಿ ಮೇಲ್ಮುಖ ಮತ್ತು ಕೆಳಮುಖ ಚಲನೆ ವ್ಯಕ್ತಿನಾಮಗಳ ಬಳಕೆಯಲಲಿರುವುದು ಕಂಡುಕೊಳ್ಳಲಾಗಿದೆ. ಕೆಳಜಾತಿ ವ್ಯಕ್ತಿ ತನ್ನ ಹೆಸರಿನ ಪೂರ್ಣರೂಪವನು ಹೇಳಿಕೊಳ್ಳುವುದಕ್ಕೆ ಆಗದೆ ಇರುವಂತಹ ಸಂದರ್ಭವಿದೆ. ಜನರೆಲ್ಲರು ಅವನನ್ನು 'ದುರ್ಗ್ಯಾ' ಎಂದು ಕರೆದು ಅದೇ ಅಭ್ಯಾಸವಾಗಿರಬೇಕು. ಪರಿಚಯ ಮಾಡಿಕೊಳ್ಳುವಾಗ ಕೂಡ ಜನರು ಕರೆಯುವ ರೀತಿಯಲ್ಲಿಯೇ ಪರಿಚಯ ಮಾಡಿಕೊಳ್ಳುತ್ತಾನೆ. ವಾಸ್ತವದಲ್ಲಿರುವಂತೆ ತನ್ನ ಹೆಸರನ್ನು ಬಳಕೆ ಮಾಡುತಿರುವುದನ್ನು ಗುರುತಿಸಬಹುದಾಗಿದೆ.

ಕೆಳಜಾತಿಯವರು ಮೇಲ್ಜಾತಿ ಅಥವಾ ತಮ್ಮ ಒಡೆಯರ ಹೆಸರು ಹೇಳುವುದು ಅಸಾಧ್ಯ. ಹಾಗೇ ಹೇಳಬಾರದು ನಿರ್ಬಂಧ ಎಂಬ ಇರುವ ಸಾಮಾಜಿಕತೆಗೆ ಒಂದು ಉದಾಹರಣೆಯನ್ನು ಗಮನಿಸಬಹುದು. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗಿಡ್ಡಿ ಮತ್ತು ತಿಮ್ಮ ಎಂಬ ಎರಡು ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭ.

"ಒಡೇರ ದಿಬ್ಬದ ಮ್ಯಾಲೆ ಹೆಗ್ಗಡೇರು ನಿಂತಾರೆ. ಯಾರನ್ನೊ ಕೂಗ್ತಿದಾರೆ" ಎಂದಳು

"ಯಾವ ಹೆಗ್ಗಡೇರೆ ?"

"ಸಣ್ಣ ಹೆಗ್ಗಡೇರು"

"ಅಂದರೆ? ಹೆಂಚಿನ ಮನೇರೋ? ಸೋಂಗೆ ಮನೇರೋ?"

"ನಾನು ಹೆಸರು ಹೇಳಬಾರದ ಹೆಗ್ಗಡೇರು ಅಂತೀನೀ" ಎಂದು ತುಸು ಮುನಿದಂತೆ ನಾಚಿದಳು ಗಿಡ್ಡಿ. ತಿಮ್ಮನಿಗೆ ಅರ್ಥವಾಗಿ ತನ್ನ ಹೆಂಡಿತಿಗೆ ತನ್ನ ಮೇಲಿರುವ ಗೌರವಕ್ಕಾಗಿ ಅವಳಲ್ಲಿ ಅಭಿಮಾನ ಉಕ್ಕಿದಂತಾಯಿತು (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ– ೯೩).

ಇಲ್ಲಿ ಎರಡು ಆಯಾಮವನ್ನು ಗಮನಿಸಬಹುದು. ಒಂದು ಕೆಳಜಾತಿಯ ಒಬ್ಬ ಮಹಿಳೆ ಪರಪುರುಷನ ಹೆಸರನ್ನು ಬಳಸುವಂತಿಲ್ಲ. ಕೆಳಜಾತಿಯ ತಿಮ್ಮನು ಕೂಡ ಸುಬ್ಬಣ್ಣ ಹೆಗ್ಗಡೆರೋ ಅಥವಾ ಶಂಕರ ಹೆಗ್ಗಡೆರೋ ಎಂದು ಹೆಸರಿಡಿದು ಕೇಳಲಿಲ್ಲ. ಅದರ ಬದಲಾಗಿ

ಹೆಂಚಿನ ಮನೇರೋ ಅಥವಾ ಸೋಂಗೆ ಮನೋರೋ ಎಂದು ಕೇಳುತ್ತಾನೆ. ಗಿಡ್ಡಿಯೂ ಸಹ ಹೆಗ್ಗಡೆರು ಸಣ್ಣ ಹೆಗ್ಗಡೇರು ಎಂದು ಉಲ್ಲೇಖ ಮಾಡುತ್ತಾ ಹೆಸರನ್ನು ಬಳಸದೇ ಗೌರವಸೂಚಕ ಬಹುವಚನವನ್ನು ಬಳಸುತ್ತಾಳೆ. ಈ ಎರಡು ರೀತಿಯಲ್ಲಿ ವ್ಯಕ್ತಿನಾಮ ಬಳಕೆಯ ನೆಲೆ ಕಾಣಬಹುದು. ಸಾಮಾಜಿಕ ಸ್ತರವಿನ್ಯಾಸವನ್ನು ಈ ಉದಾಹರಣೆ ಸ್ಪಷ್ಟಪಡಿಸುತ್ತದೆ. ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ಹೆಸರುಗಳನ್ನು ಲೇಖಕರು ನಿರೂಪಣೆಯ ಸಂದರ್ಭದಲ್ಲಿ ಹೇಗೆ ಬಳಸುತ್ತಿದ್ದಾರೆ ಎಂಬುದನ್ನು ಸಂಸ್ಕಾರ ಕಾದಂಬರಿಯ ಒಂದು ಉದಾಹರಣೆಯ ಮೂಲಕ ನೋಡಬಹುದು. ನಾರಾಯಣಪ್ಪ ಸತ್ತ ಸುದ್ದಿ ಕೇಳಿ ಪ್ರಾಣೇಶಾಚಾರ್ಯರು ಹೊರಗೆ ಬಂದಾಗ

೧. "ಚಂದ್ರಿ ಸರ್‍ರನೆ ತಲೆ ಸೆರಗೆಳೆದುಕೊಂಡು ಒಳಗೆ ಭಯಗ್ರಸ್ಥಳಾದಳು" (ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ-೮) ಚಂದ್ರಿ ಕೆಳಜಾತಿ ಮಹಿಳೆ ಆಗಿರುವುದರಿಂದ ಅವಳ ಸಾಮಾಜಿಕ ಸ್ಥಾನಮಾನ ಹೇಗಿದೆ ಎಂಬುದು ಇಲ್ಲಿ ಗಮನಿಸಬಹುದು.

ಮೇಲ್ಜಾತಿ ಮಹಿಳೆಯ ಹೆಸರನ್ನು ನಿರೂಪಿಸುವ ಸಂದರ್ಭವನ್ನು ನೋಡುವುದಾದರೆ.

೨. ಸಟ್ಟುಗ ಹಿಡಿದು ನಿಶ್ಚೇಷ್ಟಿತಳಾಗಿನಿಂತ ಹೆಂಡತಿ ಸೀತಾದೇವಿಗೆ ಮಕ್ಕಳಿಗೆ ಅಡ್ಡಿಯಿಲ್ಲ, ಮಾಡಲಿ!! (ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ-೮)

ಕೆಳಜಾತಿ ಮಹಿಳೆಯ ಹೆಸರನ್ನು ಉಲ್ಲೇಖಮಾಡುವಾಗ ಯಾವುದೇ ವಾರ್ಗಿಕ ಬಳಸದೆ ಹೆಸರನ್ನು ಸಂಕ್ಷಿಪ್ತಗೊಳಿಸಿ ನಿರೂಪಿಸಲಾಗಿದೆ. ಅದೇ ಮೇಲ್ಜಾತಿ ಮಹಿಳೆಯ ಹೆಸರನ್ನು ಉಲ್ಲೇಖ ಮಾಡುವಾಗ 'ಸೀತಾದೇವಿ'ಗೆ ಎಂದು ಪೂರ್ಣ ಹೆಸರನ್ನು ಬಳಸಿ ನಿರೂಪಿಸುತ್ತಾರೆ. ನಿರೂಪಕರು ಅಥವಾ ಲೇಖಕರು ಆ ರೀತಿ ಬಳಸಿದ್ದಾರೆ ಎನ್ನುವುದಕ್ಕಿಂತ ಸಮಾಜದಲ್ಲಿರುವ ಭಿನ್ನತೆಯನ್ನು ಅಥವಾ ಸಾಮಾಜಿಕ ಸ್ತರವನ್ನು ಅಭಿವ್ಯಕ್ತಿಸಿದ್ದಾರೆ ಎಂದು ಹೇಳಬಹುದು.

ಕೆಳಜಾತಿ ಪಾತ್ರಗಳು ಪರಸ್ಪರ ಮಾತನಾಡುವಾಗ ಅವರು ಸಮವಯಸ್ಕರಾಗಿದ್ದಾರೆ ಹೆಸರಿಡಿದು ಗೌರವಸೂಚಕಗಳನ್ನು ಬಳಸಿ ಮಾತನಾಡುತ್ತಾರೆ. ದೊಡ್ಡವರಾಗಿದ್ದರೆ ಗೌರವಸೂಚಕಗಳನ್ನು ಬಳಸಿ ಮಾತನಾಡುತ್ತಾರೆ. ಪರಸ್ಪರ ಗೌರವ ಕೊಡುಕೊಳ್ಳುವಿಕೆ ಇಲ್ಲಿ ನಡೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ಕಾರಂತರ 'ಚೋಮನದುಡಿ' ಚಲನಚಿತ್ರದಲ್ಲಿ ಬರುವ ಸನ್ನಿವೇಶವನ್ನು ನೋಡಬಹುದು.

ಚೇಂಕ್ರ : ಏನ್ ಪೊಮ್ಮಣ್ಣ ನಿನ್ ಜಿಂಕ್ರಣ್ಣ ಸಂಗಡ ಮಗಳು ಬ್ಯಾರೆ ಬಂದಿದ್ದಾಳೆ. ಆಯ್ತು ಸಂಪಾದನೆಗೆ ಒಂದು ದಾರಿ.

ಪೊಮ್ಮ : ಏನ್ ಮಾಡೋದು ಚೇಂಕ್ರಣ್ಣ ಹೊಟ್ಟೆ ಪಾಡೊಂದು ಇದಿಯಲ್ಲ ಯಾರೀ..... ಈ ಮಕ್ಳು ಒಳ್ಳೆ ಗಟ್ಟಿಮುಟ್ನವು

ಚೇಂಕ್ರ : ಬೋಗ್ನಹಳ್ಳಿಯ ಚೋಮನವು ಇವ ಚನಿಯ, ಅವ ಗುರುವ (ಚಲನಚಿತ್ರ, ಚೋಮನದುಡಿ)

ಈ ಮೇಲಿನ ಸಂಭಾಷಣೆಯನ್ನು ಗಮನಿಸಿದರೆ ಜೆಂಕ್ರ ಮತ್ತು ಪೊಮ್ಮ ಎರಡು ಕೆಳಜಾತಿ ಪಾತ್ರಗಳು. ಇಬ್ಬರು ಕೂಡ 'ಅಣ್ಣ' ಎಂಬ ಸಂಬೋಧನಾರೂಪವನ್ನು ಬಳಸಿ ಸಂಬೋಧಿಸುತ್ತಾರೆ. ಚೋಮ ಇವರ ವಯಸ್ಸಿನವನೇ ಆಗಿರುವುದರಿಂದ ಉಲ್ಲೇಖ ಮಾಡುವಾಗ ಹೆಸರಿಡಿದು ಉಲ್ಲೇಖ ಮಾಡುತ್ತಾರೆ. ಗುರುವ ಮತ್ತು ಚನಿಯ ಇವರಿಗಿಂತ ವಯಸ್ಸಿನಲ್ಲಿ ಚಿಕ್ಕವರು ಹಾಗಾಗಿ ಇವರನು ಕೂಡ ಹೆಸರಿಡಿದು ಮಾತನಾಡಿಸುತ್ತಾರೆ. ಇಲ್ಲಿ ಸಾಮಾಜಿಕವಾಗಿ ದೊಡ್ಡವರು, ಚಿಕ್ಕವರು, ಸಮವಯಸ್ಕರ ನಡುವೆ ನಡೆಯುವ ಸಂಬೋಧನೆ ನಿಯಮಕ್ಕೆ ತಕ್ಕ ಹಾಗೆ ಮಾತು ಬಂದಿದೆ. ಪರಸ್ಪರ ಗೌರವ ಕೊಡುಕೊಳ್ಳುಗೆ ನಡೆದಿದೆ.

ವ್ಯಕ್ತಿನಾಮಗಳ ಬಳಕೆಯ ನೆಲೆಯಲ್ಲಿ ಮೇಲ್ಜಾತಿ ಪಾತ್ರಗಳಿಗೆ ಮತ್ತು ಕೆಳಜಾತಿ ಪಾತ್ರಗಳಿಗೆ ಗೌರವಸೂಚಕಗಳು ಯಾವ ಯಾವ ಹಂತದಲ್ಲಿ ಅಂದರೆ ಬಳಕೆ, ಉಲ್ಲೇಖ ಮತು ನಿರೂಪಣೆಯಲ್ಲಿ ಹೇಗೆ ಅಭಿವ್ಯಕ್ತಿಯಾಗಿವೆ ಎಂಬುದನ್ನು ಗಮನಿಸಬಹುದು.

ಮೇಲ್ಜಾತಿ ಪಾತ್ರಗಳು

ಸಂಕಪ್ಪ – ಸಂಕಪ್ಪಯ್ಯ –ಸಂಕಪ್ಪಯ್ಯನವರು (ನ/ರೆ)

ಸುಬ್ಬಣ್ಣ – ಸುಬ್ಬಣ್ಣಹೆಗ್ಗಡೆ – ಸುಬ್ಬಣ್ಣಹೆಗ್ಗಡೆಯವರು (ನ/ರೆ)

ಸುಬ್ಬಮ್ಮ – ಸುಬ್ಬಮ್ಮಹೆಗ್ಗಡತಿ – ಸುಬ್ಬಮ್ಮಹೆಗ್ಗಡತಿಯವರು (ಳ/ರೆ)

ಈ ಮೇಲೆ ಸೂಚಿಸಿರುವ ವ್ಯಕ್ತಿನಾಮಗಳನ್ನು ಮೂರು ಹಂತದಲ್ಲಿ ಬಳಕೆ ಮಾಡಲಾಗುತ್ತೆ. ಮೊದಲನೆ ಹಂತದಲ್ಲಿ ಸಂಕಪ್ಪ, ಸುಬ್ಬಣ್ಣ, ಸುಬ್ಬಮ್ಮ ಎಂಬುದರಲ್ಲಿ 'ಅಪ್ಪ', 'ಅಣ್ಣ', 'ಅಮ್ಮ' ಎಂಬ ವಾರ್ಗಿಕಗಳು ಬಳಕೆಯಾಗಿವೆ.

ಎರಡನೆ ಹಂತದಲ್ಲಿ ಸಂಕಪ್ಪಯ್ಯ, ಸುಬ್ಬಣ್ಣಹೆಗ್ಗಡ್ಡೆ, ಸುಬ್ಬಮ್ಮಹೆಗ್ಗಡೆ ಎನ್ನುವ ಹೆಸರುಗಳಲ್ಲಿ 'ಅಯ್ಯ', 'ಹೆಗ್ಗಡೆ', 'ಹೆಗ್ಗಡತಿ' ಎಂಬ ಗೌರವಸೂಚಕ ವಾರ್ಗಿಕಗಳು ಬಳಕೆಯಾಗಿವೆ.

ಮೂರನೆಯ ಹಂತದಲ್ಲಿ ಸಂಕಪ್ಪಯ್ಯನವರು, ಸುಬ್ಬಣ್ಣಹೆಗ್ಗಡೆಯವರು, ಸುಬ್ಬಮ್ಮಹೆಗ್ಗಡತಿಯವರು ಎನ್ನುವುದರಲ್ಲಿ 'ಅವರು' ಎಂಬ ಬಹುವಚನ ಸೂಚಕ ಬಳಕೆಯಾಗಿದೆ.

ಮೇಲ್ಜಾತಿ ಪಾತ್ರಗಳಿಗೆ ಮೂರು ಹಂತದಲ್ಲಿಯೂ ಸಹ ಅವರ ಸಾಮಾಜಿಕ ಸ್ಥಾನಮಾನಕ್ಕೆ ಧಕ್ಕೆ ಉಂಟಾಗುವುದಿಲ್ಲ. ಗೌರವಸೂಚಕ ಮತ್ತು ಅವರು ಎಂಬ ಬಹುವಚನ ಸೂಚಕಗಳ ಮೂಲಕ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳು ಬಳಕೆಯಾಗುತ್ತಿರುತ್ತವೆ. ಸಂಬೋಧನೆಯಲ್ಲಾಗಿರಬಹುದು,

ನಿರೂಪಣೆಯಲ್ಲಾಗಿರಬಹುದು ಅಥವಾ ಉಲ್ಲೇಖದಲ್ಲಾಗಿರಬಹುದು ಅವರ ಹೆಸರುಗಳು ಏಕವಚನದಲ್ಲಿ ಬಳಕೆಯಾಗುವುದಿಲ್ಲ. ಲೇಖಕರು ನಿರೂಪಣೆ ಮಾಡುವಾಗ ಚೋಮನದುಡಿಯಲ್ಲಿ ಮೇಲ್ಜಾತಿ ವ್ಯಕ್ತಿಯಾದ ಸಂಕಪ್ಪಯ್ಯನನ್ನು ಎಲ್ಲಿಯೂ ಸಹ 'ಸಂಕ' ಬಂದ ಎಂದು ನಿರೂಪಿಸಿಲ್ಲ. ಹಾಗೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಸುಬ್ಬಣ್ಣಹೆಗ್ಗಡೆಯನ್ನು 'ಸುಬ್ಬ' ಮನೆಯಿಂದ ಹೋರಟು ಹೋದ ಎಂದು ನಿರೂಪಿಸಿಲ್ಲ. ಸುಬ್ಬಮ್ಮನನ್ನು 'ಸುಬ್ಬಿ' ಎಂದು ಬಳಕೆ ಮಾಡಿಲ್ಲ. ಏಕೆಂದರೆ ಈ ಮೇಲ್ಜಾತಿ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನಗಳು ವ್ಯಕ್ತಿನಾಮಗಳ ನಿರ್ಧರಿಸುತ್ತಿರುತ್ತವೆ.

ಆದರೆ ಕೆಳಜಾತಿ ಪಾತ್ರಗಳಲ್ಲಿ 'ಸುಬ್ಬ', 'ಸುಬ್ಬಿ' ಎಂದು ಏಕವಚನದಲ್ಲಿ ಬಳಕೆಯಾಗುತ್ತದೆ. ಸಾಮಾಜಿಕ ಸ್ತರವಿನ್ಯಾಸ ಮತ್ತು ಅಂತಸ್ತು ವ್ಯಕ್ತಿನಾಮಗಳ ಬಳಕೆಯ ನೆಲೆಗಳನ್ನು ನಿರ್ಧರಿಸುತ್ತಿರುತ್ತವೆ.

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳು ಸಮಾಜದಲ್ಲಿ ಯಾವ ರೀತಿಯಾಗಿ ಬಳಕೆಯ ನೆಲೆಗಳನ್ನು ಗುರುತಿಸಿಕೊಂಡಿವೆ ಎಂಬುದನ್ನು ಕೆಲವು ಉದಾಹರಣೆಯ ಮೂಲಕ ನೋಡಬಹುದು.

ಕೆಳಜಾತಿ ಪಾತ್ರಗಳು

ಚೋಮ – ಚೋಮಣ್ಣ – ಚೋಮಣ್ಣನವರು

ದುರ್ಗ್ಯಾ – ದುರ್ಗಪ್ಪ – ದುರ್ಗಪ್ಪನವರು

ಚಂದ್ರ – ಚಂದ್ರಪ್ಪ – ಚಂದ್ರಪ್ಪನವರು

ಬೆಟ್ಟ – ಬೆಟ್ಟಪ್ಪ – ಬೆಟ್ಟಪ್ಪನವರು

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿಯೂ ಸಹ ಮೂರು ಹಂತದಲ್ಲಿ ಬಳಕೆಯಾಗುವ ವ್ಯಕ್ತಿಯ ಹೆಸರುಗಳನ್ನು ಗುರುತಿಸಲಾಗಿದೆ. ಮೇಲ್ಜಾತಿ ಪಾತ್ರಗಳಿಗೆ ಬಳಕೆಯಾಗುವಂತೆ ಕೆಳಜಾತಿ ಪಾತ್ರಗಳ ಹೆಸರುಗಳು ಮೂರು ಹಂತದಲ್ಲಿ ಬಳಕೆಯಾಗುವುದಿಲ್ಲ. ಎರಡು ಹಂತದವರಿಗೆ ಮಾತ್ರ ಬಳಕೆ ಯಾಗುವುದನ್ನು ಗಮನಿಸಬಹುದು.

ಮೊದಲನೆ ಹಂತದಲ್ಲಿ ಚೋಮ, ದುರ್ಗ್ಯಾ, ಚಂದ್ರಿ, ಬೆಟ್ಟ ಎಂಬ ಹೆಸರುಗಳು 'ಅಣ್ಣ, ಅಪ್ಪ, ಅಕ್ಕ, ಅಯ್ಯ ಮುಂತಾದ ವಾರ್ಗಿಕಗಳು ಬಳಕೆಯಾಗದೆ ಹೆಸರುಗಳು ಸಂಕ್ಷಿಪ್ತಗೊಂಡು ಬಳಕೆಯಾಗಿವೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಿಗೆ ವಾರ್ಗಿಕಗಳಿಲ್ಲದೆ ಬಳಕೆ ಮಾಡುತ್ತಾರೆ. ಹಾಗೆಯೇ ನಿರೂಪಣೆ ಸಂದರ್ಭದಲ್ಲೂ ಸಹ ಹೆಸರುಗಳು ಸಂಕ್ಷಿಪ್ತಗೊಂಡು ಅಭಿವ್ಯಕ್ತಿಯಾಗಿರುವುದನ್ನು ಕಾಣಬಹುದು.

ಎರಡನೆ ಹಂತದಲ್ಲಿ ಚೋಮಣ್ಣ, ದುರ್ಗಪ್ಪ, ಚಂದ್ರಕ್ಕ, ಬೆಟ್ಟಯ್ಯ ಎಂಬ ವ್ಯಕ್ತಿನಾಮಗಳಲ್ಲಿ ಅಣ್ಣ, ಅಪ್ಪ, ಅಕ್ಕ, ಎಂಬ ವಾರ್ಗಿಕಗಳು ಮತ್ತು ಅಯ್ಯ ಎಂಬ ಗೌರವಸೂಚಕ ವಾರ್ಗಿಕಗಳು ಬಳಕೆಯಾಗಿರುವುದನ್ನು ಕಾಣಬಹುದು.

ಚೋಮನದುಡಿ ಚಲನಚಿತ್ರದಲ್ಲಿ ಚೋಮನನ್ನು ಚೋಮ ಎಂದು ಉಲ್ಲೇಖಿಸಿರುವ, ಸಂಬೋಧಿಸಿರುವ ಅನೇಕ ಉದಾಹರಣೆಗಳು ದೊರೆಯುತ್ತವೆ. ಆದರೆ ಚೋಮಣ್ಣ ಎಂದು ಸಂಬೋಧಿಸಿರುವ ಮತ್ತು ಉಲ್ಲೇಖಿಸಿರುವ ಉದಾಹರಣೆಗಳು ವಿರಳ. ಹಿಂದೂ ಧರ್ಮದ ಕೆಳಜಾತಿಯಿಂದ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಜಾರ್ಜ್ ಎಂಬ ವ್ಯಕ್ತಿ ಚೋಮನಿಗಿಂತ ವಯಸ್ಸಿನಲ್ಲಿ ಚಿಕ್ಕವನು. ಒಂದು ಸಂದರ್ಭದಲ್ಲಿ ಮಾತ್ರ 'ಚೋಮಣ್ಣ' ಎಂದು ಸಂಬೋಧಿಸುತ್ತಾನೆ. ಉದಾಹರಣೆಯಾಗಿ ನೋಡುವುದಾದರೆ. ಚೋಮ ಮತ್ತು ಜಾರ್ಜ್ ಇವರಿಬ್ಬರ ನಡುವೆ ನಡೆಯುವಂತಹ ಸನ್ನಿವೇಶ.

"ಯಾಕೋ ಚೋಮಣ್ಣನ' ಮುಖ ಒಂದು ತರ ಇದೆಯಲ್ಲ, ಯಾಕೆ ಸುಮ್ಮನೆ ಕೂತಿದಿಯ 'ಚೋಮಣ್ಣ' ಗುಮ್ಮನಹಾಗೆ ಓ ಯಾರ ಬಿರುವ ಪೂಜಾರ್ರೆ...... ಏನು ಕತೆ ನಿಮ್ದು ನಮ್ಮ 'ಚೋಮಣ್ಣ' ಎಷ್ಟು ಹೊತ್ತಾಯ್ತು ಕೆಂಬೋರೆ ಬೇಡ್ವೋ" (ಚೋಮನದುಡಿ, ಚಲನಚಿತ್ರ).

ಈ ಒಂದು ಸಂದರ್ಭದಲ್ಲಿ ಮಾತ್ರ 'ಚೋಮಣ್ಣ' ಎಂದು ಜಾರ್ಜ್ ಬಳಕೆ ಮಾಡುತ್ತಾನೆ. ಬೇರೆಯವರು ಸಹ ಇಡೀ ಸಿನಿಮಾದಲ್ಲಿ ಎಲ್ಲಿಯೂ ಸಹ 'ಅಣ್ಣ' ಎಂಬ ವಾರ್ಗಿಕ ಸೇರಿಸಿ ಬಳಕೆ ಮಾಡಿಲ್ಲ. ಇಲ್ಲಿ ಜಾರ್ಜ್ ಯಾಕೆ ಚೋಮಣ್ಣ ಎಂದು ಸಂಬೋಧನೆ ಮಾಡುತ್ತಾನೆ ಎಂದರೆ ಪಾದ್ರಿಗಳಿಂದ ಚೋಮನಿಗೆ ಭೂಮಿ ಕೊಡಿಸಿದರೆ ಅವನು ನಮ್ಮ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುತ್ತಾನೆ ಎಂಬ ಉದ್ದೇಶದಿಂದ ಜಾರ್ಜ್ ಚೋಮಣ್ಣ ಎಂದು ಸಂಬೋಧನೆ ಮಾಡುತ್ತಾನೆ. ಬೇರೆ ಸಂದರ್ಭದಲ್ಲಿ ಚೋಮ ಆಗಿಯೇ ಉಳಿಯುತ್ತಾನೆ.

ವಿಜಯ ಸಾಸನೂರು ಅವರ 'ಅಸ್ಪೃಶ್ಯ' ಕತೆಯಲ್ಲಿ ದುರ್ಗಪ್ಪ ಎಂಬ ದಲಿತ ಪಾತ್ರ ತನ್ನ ಹೆಸರನ್ನು ಹೇಳುವಾಗ 'ಅಪ್ಪ' ಎಂಬ ವಾರ್ಗಿಕ ಬಿಟ್ಟು ತನ್ನ ಹೆಸರನ್ನು 'ದುರ್ಗ್ಯಾ' ಎಂದು ಹೇಳುತ್ತಾನೆ. ಆಗ ರಾವ್‌ಸಾಬ್ ನಿನ್ನ ತಂದೆ ತಾಯಿ ಇಟ್ಟ ಹೆಸರು ಚಂದಾಗಿ ಹೇಳು ಎಂದಾಗ 'ದುರ್ಗಪ್ಪ' ರೀ ಎಂದು ಹೇಳುತ್ತಾನೆ. ಇಲ್ಲಿ 'ದುರ್ಗಪ್ಪ' ಎಂಬ ಹೆಸರು ಬಳಕೆಯಾಗುತ್ತದೆ.

ಯು.ಆರ್. ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯಲ್ಲಿ ಬರುವ ಕೆಳಜಾತಿ ಚಂದ್ರಿ ಪಾತ್ರ ಉಲ್ಲೇಖದಲ್ಲಾಗಲಿ, ನಿರೂಪಣೆಯಲ್ಲಾಗಲಿ ಅಥವಾ ಸಂಬೋಧನೆಯಲ್ಲಾಗಲಿ ಎಲ್ಲಿಯೂ ಸಹ ಗೌರವಸೂಚಕ ವಾರ್ಗಿಕಗಳಿಂದ ಅಥವಾ ಬಹುವಚನಗಳಿಂದ ಬಳಕೆಯಾಗಿಲ್ಲ ಎಂದೆ ಹೇಳಬಹುದು. ಇದು ಈ ಪಾತ್ರದ ಸಾಮಾಜಿಕ ಸ್ತರವನ್ನು ಸೂಚಿಸುತ್ತದೆ.

ಈ ನಿಯಮಕ್ಕೆ ಅಪವಾದ ಎಂಬಂತೆ ಎಸ್. ಎಲ್ ಭೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಬರುವ ಕೆಳಜಾತಿ ಬೆಟ್ಟಯ್ಯನ ಪಾತ್ರ ಮೂರು ಹಂತದಲ್ಲಿಯೂ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

'ಬೆಟ್ಟ – ಬೆಟ್ಟಯ್ಯ – ಬೆಟ್ಟಯ್ಯನವರು' ಎಂದು ಮೂರು ಹಂತದಲ್ಲಿಯೂ ಸಹ ಬಳಕೆಯಾಗಿದೆ. ಉದಾಹರಣೆಗೆ

"ಸ್ಟ್ಯಾಂಡಿನ ಎದುರಿಗೆ ಅವನ ಮಾಲೀಕತ್ವದ ಹೋಟೆಲು. ಆದರೆ ಈ ಬಸ್ಸಿಗೆ ಸಾಮಾನ್ಯವಾಗಿ ಹೆಚ್ಚು ಪ್ರಯಾಣಿಕರು ಇರುವುದಿಲ್ಲ. ಇವರು ಬಂದ ಹತ್ತು ನಿಮಿಷದಲ್ಲಿ ಹರಿಜನರ 'ಬೆಟ್ಟಯ್ಯನವರು' ಬಂದರು. ಏನು ಎಂ. ಎಲ್. ಎ ಗಳು ಬೆಂಗಳೂರಿಗಾ? ಹೂಂ ಕಣ್ರಪ್ಪ ನೀವೂ ಬರ್ತೀರಾ? 'ನಾನು ಬರಲ್ಲ ಆಯಾರು ಬತ್ರಾರೆ' ಬೆಟ್ಟಯ್ಯನವರು ವೆಂಕಟಯ್ಯನವರಿಗೆ ಕೈಮುಗಿದರು" (ಭೈರಪ್ಪ ಎಸ್. ಎಲ್, ದಾಟು, ಪುಟ–೩೦)

ಇಲ್ಲಿ ಕೆಳಜಾತಿ ವ್ಯಕ್ತಿಯ ಹೆಸರಿನಲ್ಲಿ 'ಅಯ್ಯ' ಗೌರವಸೂಚಕ 'ಅವರು' ಬಹುವಚನ ಬಳಕೆಯಾಗಿದೆ. ಏಕೆಂದರೆ ಈ ಕೆಳಜಾತಿ ವ್ಯಕ್ತಿ ಎಂ.ಎಲ್.ಎ ಆಗಿದ್ದಾನೆ. ರಾಜಕೀಯ ಪ್ರಾತಿನಿಧ್ಯ ದೊರತಿದೆ. ಲೇಖಕರು ನಿರೂಪಣೆಯ ಸಂದರ್ಭದಲ್ಲಿ ಬಹುವಚನವನ್ನು ಬಳಸಿದ್ದಾರೆ. ಆದರೆ ಇದು ಎಂ. ಎಲ್. ಎ ಆದ ನಾಯಕ ಹಾಗೆ ಬಳಸುತ್ತಾರೆ. ಊರಿನಲ್ಲಿ ಬೆಟ್ಟಯ್ಯ ಚಪ್ಪಲಿ ಹೊಲೆಯುವಾಗ ಬೆಟ್ಟಯ್ಯನನ್ನು ಬೆಟ್ಟ ಎಂದೆ ನಿರೂಪಣೆಯಲ್ಲಿ ಬಳಕೆ ಮಾಡಿದ್ದಾರೆ. ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಬೆಟ್ಟಯ್ಯ ಹೋಗಿ ಬಂದ ನಂತರ ಅವನನ್ನು 'ಬೆಟ್ಟಯ್ಯ' ಎಂದು ಅಭಿವ್ಯಕ್ತಿಸುತ್ತಾರೆ. ಎಂ. ಎಲ್. ಎ ಆದ ನಾಯಕನನ್ನು ಬೆಟ್ಟಯ್ಯನವರು ಎಂದು ನಿರೂಪಣೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಸಾಮಾಜಿಕ ಸ್ತರ ಮೇಲೇರಿದಂತೆ ಅವರ ಸಾಮಾಜಿಕ ಸ್ಥಾನಮಾನ ಬದಲಾಗುತ್ತದೆ. ಆದರೆ ಊರಿನಲ್ಲಿ ಎಲ್ಲರೂ ಹಾಗೆ ಬಹುವಚನದಿಂದ ಮಾತನಾಡಿಸುವುದಿಲ್ಲ. ಅವರ ಕೇರಿಯ ಜನರು ಬಹುವಚನದಲ್ಲಿ ಮಾತನಾಡಿಸುತ್ತಾರೆ. ಮೇಲ್ಜಾತಿ ಶಿಕ್ಷಣ ಪಡೆದ ಸತ್ಯಭಾಮೆ ಅವರನ್ನು ಬಹುವಚನದಲ್ಲೇ ಮಾತನಾಡಿಸುತ್ತಾಳೆ. ಉದಾಹರಣೆಗೆ "ಬೆಟ್ಟಯ್ಯನವರೇ ಅಯ್ಯರು ಗ್ಯಾನ ತಪ್ಪ ಬಿದ್ದವ್ರೆ" (ಭೈರಪ್ಪ ಎಸ್. ಎಲ್, ದಾಟು, ಪುಟ–೩೪) ಎಂದು ಮೇಲ್ಜಾತಿ ಶಿಕ್ಷಣ ಪಡೆದ ಸತ್ಯಭಾಮೆ ಆ ರೀತಿಯಲ್ಲಿ ಮಾತನಾಡಿಸುತ್ತಾಳೆ. ಅವರ ತಂದೆ ವೆಂಕಟರಮಣ್ಣಯ್ಯ ಏಕವಚನದಲ್ಲಿಯೇ ಮಾತನಾಡಿಸುತ್ತಾರೆ. ಬೆಟ್ಟಯ್ಯನವರು ರಾಜಕೀಯ ಮತ್ತು ಆರ್ಥಿಕವಾಗಿ ಒಂದು ಹಂತಕ್ಕೆ ಬೆಳೆದ ನಾಯಕರಾದ ಮಾತ್ರಕ್ಕೆ ಅವರ ಸಾಮಾಜಿಕ ಸ್ತರವಿನ್ಯಾಸದಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ. ಊರಿನಲ್ಲಿ ಅವರನ್ನು ಅಸ್ಪೃಶ್ಯರನ್ನಾಗಿಯೇ ಕಾಣುತ್ತಾರೆ. ಶಿಕ್ಷಣ ಪಡೆದವರಲ್ಲಿ ಮಾತ್ರ ಒಂದು ಹಂತದ ಬದಲಾವಣೆಯನ್ನು ಕಾಣಬಹುದು.

'ಕೃಷ್ಣ ನೀ ಬೇಗನೆ ಬಾರೋ' ಸಿನಿಮಾದಲ್ಲಿಯೂ ಸಹ ಈ ರೀತಿಯ ಉದಾಹರಣೆ ಕಾಣಬಹುದು. ಕೆಳಜಾತಿಯ ಶಿಕ್ಷಣ ಪಡೆದ ನಿರುದ್ಯೋಗಿ ಮಹಾದೇವಯ್ಯನ ಪಾತ್ರ ಬರುತ್ತದೆ. ಕೃಷ್ಣ ಎಂಬ ಪಾತ್ರ ಈ ಚಲನಚಿತ್ರದ ನಾಯಕ. ನಾಯಕನ ಹತ್ತಿರ ಮಹಾದೇವಯ್ಯ ಕೆಲಸ

ಕೇಳಿಕೊಂಡು ಬರುತ್ತಾನೆ. ಆಗ ನಾಯಕ 'ಮಹಾದೇವಯ್ಯನವರೇ' ಎಂದೆ ಬಹುವಚನದಲ್ಲಿ ಮಾತನಾಡಿಸುತ್ತಾನೆ. ವಾಸ್ತವದಲ್ಲಿ ಹಾಗೆ ಇದೆಯೇ ಎಂದು ನೋಡಿದರೆ ಈ ರೀತಿಯ ಉದಾಹರಣೆ ವಿರಳ. ನಿರ್ದೇಶಕರು ನಾಯಕನ ಉದಾತ್ತ ಗುಣವನ್ನು ತೋರಿಸುವುದಕ್ಕಾಗಿ ಈ ರೀತಿಯ ಸನ್ನಿವೇಶಗಳನ್ನು ಸೃಷ್ಟಿಮಾಡಿರುತ್ತಾರೆ.

ಶಿಕ್ಷಣದಿಂದ ಈ ರೀತಿಯ ಬದಲಾವಣೆಗಳು ಸಮಾಜದಲ್ಲಿ ಆಗಿರುವುದನ್ನು ನಾವು ಗಮನಿಸಬಹುದು. ಈ ಮೇಲೆ ಉಲ್ಲೇಖಿಸಿದ ಉದಾಹರಣೆಗಳ ಮೂಲಕ ಸಮಾಜದಲ್ಲಿಯ ವಾಸ್ತವ ಸಂಗತಿಗಳನ್ನು ಸಹ ಅರ್ಥಮಾಡಿಕೊಳ್ಳಬಹುದು. ಸಂಬೋಧನೆ, ಉಲ್ಲೇಖ, ನಿರೂಪಣೆಯ ಸಂದರ್ಭದಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಕಂಡುಬಂದಿರುವಂತಹ ಭಿನ್ನತೆಗಳನ್ನು ಗಮನಿಸಲಾಗಿದೆ. ಏಕೆ ಈ ರೀತಿಯ ಭಿನ್ನತೆಗಳು ಕಂಡುಬರುತ್ತವೆ ಎಂದರೆ ಸಮಾಜದಲಿರುವಂತಹ ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಗಳೆ ಇದಕ್ಕೆ ಕಾರಣ ಎಂದು ಹೇಳಬಹುದು. ಈ ವ್ಯಕ್ತಿನಾಮಗಳ ಬಳಕೆಯ ನೆಲೆಗಳಿಂದ ಸಮಾಜದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕಾರಣವನ್ನು ಅರ್ಥಮಾಡಿಕೊಳ್ಳಬಹುದು.

೪.೪. ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟ

ಆಧುನೀಕರಣ ಪ್ರತಿಯೊಂದು ರಂಗವನ್ನು ಪ್ರವೇಶಿಸಿದೆ. ವ್ಯಕ್ತಿನಾಮಗಳ ಮೇಲು ತನ್ನ ಪ್ರಭಾವವನ್ನು ಬೀರಿದೆ. ಇದನ್ನು ವ್ಯಕ್ತಿಗಳ ಹೆಸರುಗಳಲ್ಲಿ ಮೂರು ರೀತಿಯಾಗಿ ಗುರುತಿಸಬಹುದು ಕೆಲವರ ಹೆಸರುಗಳಲ್ಲಿ ಯತಾಸ್ಥಿತಿ, ಚಲನೆ ಮತ್ತು ಪಲ್ಲಟ ಈ ಮೂರು ಹಂತದಲ್ಲಿ ನೋಡಬಹುದು. ಮುಖ್ಯವಾಗಿ ಇಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟ ಗೊಂಡಿವೆಯೇ? ಅಥವಾ ಯತಾಸ್ಥಿತಿಯನ್ನು ಕಾಪಾಡಿಕೊಂಡಿವೆಯೇ? ಎಂಬುದನ್ನು ನೋಡುವುದು, ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಚಲನೆ ಮತ್ತು ಪಲ್ಲಟ್ವಗೊಳ್ಳಲು ಕಾರಣಗಳೇನು? ಎಂಬುದನ್ನು ಚರ್ಚಿಸಲಾಗಿದೆ.

ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ಹೆಸರುಗಳಲ್ಲಿ ಚಲನೆ ಮತ್ತು ಪಲ್ಲಟ್ವಗೊಂಡಿರುವ ಅನೇಕ ಉದಾಹರಣೆಗಳು ದೊರೆಯುತ್ತವೆ. ಆಧುನೀಕರಣ ಸಂದರ್ಭದಲ್ಲಿ ವಾರ್ಗಿಕಗಳನ್ನು ಬಿಟ್ಟು ಇಟ್ಟುಕೊಳ್ಳುವ ಹೆಸರುಗಳೇ ಹೆಚ್ಚಾಗಿವೆ. ಮತ್ತು ಗೌರವಸೂಚಕ ವಾರ್ಗಿಕಗಳಾದ 'ಅಪ್ಪ', 'ಅವ್ವ', 'ಅಮ್ಮ', 'ಅಕ್ಕ', 'ಅಣ್ಣ' ಮುಂತಾದ ವಾರ್ಗಿಕಗಳು ಚಲನೆಗೊಂಡ ವ್ಯಕ್ತಿನಾಮಗಳಲ್ಲಿ ಕಂಡುಬರುವುದಿಲ್ಲ. ಗೌರವಸೂಚಕ ಅಥವಾ ಜಾತಿಸೂಚಕಗಳಾದ ಗೌಡ, ಹೆಗ್ಗಡೆ, ಶಾಸ್ತ್ರೀ, ಶೆಟ್ಟಿ ಮುಂತಾದ ವಾರ್ಗಿಕಗಳನ್ನು ಸಹ ಆಧುನೀಕರಣದ ಸಂದರ್ಭಗಳಲ್ಲಿ ಇಟ್ಟುಕೊಳ್ಳುವುದು ವಿರಳ. ಹೆಸರನ್ನು ನೋಡಿದ ಕೂಡಲೇ ಇವರು ಕೆಳಜಾತಿಯವರು ಎಂದು ಗುರುತಿಸುವ ವ್ಯಕ್ತಿನಾಮಗಳಾದ ಕರಿಯ, ಮಾದ, ರಂಗಿ, ತಿಮ್ಮಿ, ಮಾಚ, ರುದ್ರಿ ಮುಂತಾದ ಪಾರಂಪರಿಕ ಹೆಸರುಗಳು ಆಧುನಿಕರಣದ ಸಂದರ್ಭದಲ್ಲಿ ಬದಲಾಗುತ್ತವೆ. ಶಿಕ್ಷಣ ಪಡೆದ ನಂತರ ಅವರ ಮೂಲ ಹೆಸರುಗಳನ್ನು ಬದಲಿಸಿಕೊಂಡಿರುವ ಅನೇಕ ಉದಾಹರಣೆಗಳು ದೊರೆಯುತ್ತವೆ.

ವ್ಯಕ್ತಿಗಳ ಹೆಸರುಗಳಲ್ಲಿ ಈ ರೀತಿಯ ಚಲನೆ ಮತ್ತು ಪಲ್ಲಟಗಳು ಉಂಟಾಗಲೂ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಕಾರಣಗಳು ಮುಖ್ಯವಾಗಿರುತ್ತವೆ.

ಆಧುನಿಕ ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿಯೇ ಚಲನೆ ಮತ್ತು ಪಲ್ಲಟ ಹೆಚ್ಚಾಗಿ ಕಂಡುಬರುತ್ತದೆ. ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರಗಳು, ಕಥೆ ಮತ್ತು ನಾಟಕಗಳಲ್ಲಿ ದೊರೆಯುವ ಉದಾಹರಣೆಗಳ ಮೂಲಕ ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟ ಕುರಿತು ಚರ್ಚಿಸಲಾಗಿದೆ.

ಸಾಮಾಜಿಕ ಒತ್ತಡಗಳು, ಜಾತಿಯಿಂದಾದ ಅವಮಾನಗಳು ಶಿಕ್ಷಣ ಮತ್ತು ಆಧುನೀಕರಣದ ಪ್ರಭಾವಗಳು ವ್ಯಕ್ತಿಗಳ ಹೆಸರುಗಳಲ್ಲಿ ಚಲನೆ ಮತ್ತು ಪಲ್ಲಟ ಉಂಟಾಗಲು ಕಾರಣಗಳಾಗುತ್ತವೆ. ಮೇಲ್ಜಾತಿ ವ್ಯಕ್ತಿಗಳು ವಾರ್ಗಿಕಗಳನ್ನು ಬಿಟ್ಟು ಆಧುನಿಕ ಹೆಸರುಗಳನ್ನು ಇಟ್ಟುಕೊಂಡರೆ, ಕೆಳಜಾತಿ ವ್ಯಕ್ತಿಗಳು ವಾರ್ಗಿಕಗಳನ್ನು ಬಿಡುವುದರ ಜೊತೆಗೆ ತಮ್ಮ ಮೂಲ ಹೆಸರನ್ನೆ ಬದಲು ಮಾಡಿಕೊಂಡಿರುವ ಸಂದರ್ಭಗಳಿವೆ. ಜೊತೆಗೆ ಮತಾಂತರ ಪ್ರಕ್ರಿಯೆಯಲ್ಲಿ ಕೆಳಜಾತಿ ವ್ಯಕ್ತಿಗಳ ಹೆಸರುಗಳು ಬದಲಾಗಿವೆ. ಮೇಲ್ಜಾತಿ ವ್ಯಕ್ತಿಗಳು ಯಾರು ಸಹ ಮತಾಂತರಗೊಂಡಿಲ್ಲ. ಕೆಳಜಾತಿ ವ್ಯಕ್ತಿಗಳು ಮಾತ್ರ ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಧರ್ಮ ಆಧಾರಿತ ಹೆಸರುಗಳು ಕೂಡ ಪ್ರವೇಶ ಮಾಡಿವೆ.

ವ್ಯಕ್ತಿನಾಮಗಳ ಚಲನೆ

ವ್ಯಕ್ತಿನಾಮಗಳ ಸ್ವರೂಪದಲ್ಲಿ ಆದ ಬದಲಾವಣೆಯನ್ನು ವ್ಯಕ್ತಿನಾಮಚಲನೆ ಎಂದು ಕರೆಯಬಹುದು. ವ್ಯಕ್ತಿನಾಮಗಳು ಯಾದೃಚ್ಛಿಕವಾದವುಗಳಲ್ಲ. ಅವುಗಳ ಚಲನೆಯ ಪ್ರಕ್ರಿಯೆಯಲ್ಲಿರುತ್ತವೆ. ಆಧುನಿಕ ಶಿಕ್ಷಣ ಮತ್ತು ಆಧುನೀಕರಣದ ಪ್ರಭಾವದಿಂದಾಗಿ ವ್ಯಕ್ತಿನಾಮಗಳ ಸ್ವರೂಪದಲ್ಲಿ ಬದಲಾವಣೆಯಾಗಿರುವುದನ್ನು ಕಾಣಬಹುದು. ಗೌಡ, ಅಯ್ಯ, ಶೆಟ್ಟಿ, ಅಪ್ಪ, ಅಕ್ಕ, ಅಮ್ಮ, ಅಣ್ಣ, ಅವ್ವ ಮುಂತಾದ ವಾರ್ಗಿಕಗಳನ್ನು ಬಿಟ್ಟು ವಾರ್ಗಿಕ ರಹಿತವಾಗಿ ಇಟ್ಟುಕೊಳ್ಳುವ ಹೆಸರುಗಳು ಆಧುನಿಕ ಸಂದರ್ಭದ ಹೆಸರುಗಳಾಗಿವೆ. ಈ ಪ್ರಕ್ರಿಯೆ ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಆದ ಚಲನೆ. ಉದಾಹರಣೆಗೆ ಮೇಲ್ಜಾತಿ ಪಾತ್ರಗಳ ಹೆಸರುಗಳು ಈ ಕೆಳಗಿನಂತಿವೆ.

ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಆದ ಚಲನೆಯನ್ನು ಗಮನಿಸಬಹುದಾದರೆ, ಈ ಪಾತ್ರಗಳಲ್ಲಿ ವಾರ್ಗಿಕಗಳಿಲ್ಲದ ಹೆಸರುಗಳು ಮತ್ತು ಆಧುನಿಕ ಹೆಸರುಗಳನ್ನು ಕಾಣಬಹುದು. ಆದರೆ ಜಾತಿಕಾರಣಕ್ಕಾಗಿ ಅಥವಾ ಸಾಮಾಜಿಕ ಒತ್ತಡಗಳಿಂದಾಗಿ ಇಲ್ಲಿ ಹೆಸರುಗಳು ಬದಲಾಗುವುದಿಲ್ಲ. ಆಧುನೀಕರಣದ ಪ್ರಭಾವದಿಂದಾಗಿ ಮಾತ್ರ ಹೆಸರುಗಳು ಚಲನೆಯನ್ನು ಪಡೆಯುತ್ತವೆ. ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಕಂಡುಬರುವುದು ವಿರಳ. ಚಲನೆ ಎಂದರೆ ಹೆಸರುಗಳಲ್ಲಿ ಆಗಿರುವ ಬದಲಾವಣೆ ಎಂದು ಹೇಳಬಹುದು. ಉದಾಹರಣೆಗೆ ವಾರ್ಗಿಕ ರಹಿತ ಮತ್ತು ಆಧುನಿಕ ಹೆಸರುಗಳನ್ನು ವ್ಯಕ್ತಿನಾಮಗಳ ಚಲನೆಯಲ್ಲಿ ಕಾಣಬಹುದು.

ಪುರುಷ	ಮಹಿಳೆ
ವಾಸು (ಚ-೨೦)	ಮಾಲತಿ (ಚ-೧೬)
ಆನಂದ (ಚ-೨೦)	ಗೀತಾ (ಚ-೧೩)
ಸುಂದ್ರು (ಚ-೨೦)	ಮೈನಾ (ಚ-೧೬)
ಕೇಶವ (ಚ-೧೦)	ಪ್ರಿಯಾ (ಚ-೧೦)
ಮಹೇಶ (ಕ-೨೮)	ರೇಖಾ (ಚ-೧೯)
ಸುರೇಂದ್ರ (ಕ-೨೮)	ಉಷಾ (ನಾ-೫೩)
ಅಶ್ವತ್ಥ (ಕಾ-೪)	ರಮಾ (ನಾ-೫೩)
ಶಂಕರ (ಕಾ-೫)	ಸುಮಾ (ನಾ-೫೩)
ಸಂಜಯ (ಕಾ-೫)	ಕಾವೇರಿ (ಕಾ-೫)
ದೀಕ್ಷಿತ್ (ಕಾ-೫)	ರಾಧ (ಕಾ-೪)
ಕೃಷ್ಣ (ಕ-೨೮)	ಮಂಗಳ (ಚ-೧೬)

ಈ ರೀತಿಯ ಮುಂತಾದ ಹೆಸರುಗಳಲ್ಲಿ ಅಮ್ಮ, ಅಕ್ಕ, ಅಣ್ಣ, ಅವ್ವ, ಅಪ್ಪ ಮುಂತಾದ ವಾರ್ಗಿಕಗಳು ಬಳಕೆಯಾಗಿಲ್ಲ. ಗೌರವಸೂಚಕ ವಾರ್ಗಿಕಗಳಾದ ಗೌಡ, ಅಯ್ಯ, ಶಾಸ್ತ್ರೀ, ಶೆಟ್ಟಿ, ಆಚಾರ್ಯ ಮುಂತಾದ ವಾರ್ಗಿಕಗಳು ಸಹ ಬಳಕೆಯಾಗದೆ ಇರುವುದನ್ನು ಕಾಣಬಹುದು. ಕೆಲವು ಆಧುನಿಕ ಹೆಸರುಗಳು ಸಹ ಬಂದು ಸೇರಿವೆ. ಈ ಪ್ರಕ್ರಿಯೆಗೆ ವ್ಯಕ್ತಿನಾಮಗಳ ಚಲನೆ ಎಂದು ಹೇಳಬಹುದು.

ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ವಾರ್ಗಿಕ ರಹಿತ ವ್ಯಕ್ತಿನಾಮಗಳಿಗೆ ಚಲನೆಯಾದರೆ ಕೆಳಜಾತಿ ಪಾತ್ರಗಳಲ್ಲಿ ವ್ಯಕ್ತಿನಾಮಗಳಿಗೆ ವಾರ್ಗಿಕಗಳು ಸೇರುವುದೇ ಒಂದು ಹಂತದ ಚಲನೆಯಾಗಿದೆ. ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲೂ ಸಹ ಈ ಪ್ರಕ್ರಿಯೆ ನಡೆದಿದೆ. ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಗೌರವಸೂಚಕ ವಾರ್ಗಿಕಗಳು ಬಂದು ಸೇರುವ ಪ್ರಕ್ರಿಯೂ ಸಹ ಒಂದು ಹಂತದ ಚಲನೆಯಾಗಿದೆ. ಯಾಕೆಂದರೆ ದಲಿತ ಪಾತ್ರಗಳ ಹೆಸರುಗಳಲ್ಲಿ ಗೌರವಸೂಚಕ ವಾರ್ಗಿಕಗಳು ಹೆಚ್ಚಾಗಿ ಬಳಕೆಯಾಗುತ್ತಿರಲಿಲ್ಲ. ಕೆಲವು ಹೆಸರುಗಳಲ್ಲಿ ವಾರ್ಗಿಕಗಳು ಬಳಕೆಯಾಗಿದ್ದರೂ ಸಹ ಹೆಸರನು ಸಂಕ್ಷಿಪ್ತಗೊಳಿಸಿ ಬಳಕೆ ಮಾಡುತ್ತಿದ್ದರು. ಆನಂತರ ಆಧುನಿಕ ಹೆಸರುಗಳು ಬಂದು ಸೇರಿರುವ ಪ್ರಕ್ರಿಯೆಯನ್ನು ಕಾಣಬಹುದು.

ಆರಂಭದ ಸಂದರ್ಭದಲ್ಲಿ ದಲಿತ ಪಾತ್ರಗಳ ಹೆಸರುಗಳಲ್ಲಿ ವಾರ್ಗಿಕಗಳೆ ಇರಲಿಲ್ಲ. ಗೌರವ ವಾಚಕ ವಾರ್ಗಿಕಗಳನ್ನು ಬಳಸಿದರೆ ಅದು ಅವರಿಗೆ ಸಿಗುವ ಗೌರವವೆಂದೆ ಭಾವಿಸಲಾಗಿತ್ತು.

ಗುತ್ತಿ, ತಿಮ್ಮಿ, ಕುಲ್ಡಿ, ಕೆಂಚ, ಚೋಮ, ಬೆಳ್ಳಿ, ನೀಲ, ಚನಿಯ, ಮಾದ, ರಾಚ, ಸಿದ್ದು ಮುಂತಾದ ಹೆಸರುಗಳಿಗೆ ಗೌರವಸೂಚಕ ವಾರ್ಗಿಕಗಳು ಬಳಕೆಯಾಗುತ್ತಿರಲಿಲ್ಲ. ಈ ಹೆಸರುಗಳಿಗೆ ಅಮ್ಮ, ಅಕ್ಕ, ಅಣ್ಣ, ಅಪ್ಪ, ಅವ್ವ, ಅಯ್ಯ ಮುಂತಾದ ವಾರ್ಗಿಕಗಳು ಸೇರಿದರೆ ಒಂದು ಹಂತದ ಚಲನೆ. ಉದಾಹರಣೆಗೆ

ಪುರುಷ	**ಮಹಿಳೆ**
ಚನ್ನಪ್ಪ (ಕಾ–೧)	ಅಕ್ಕವ್ವ (ಕಾ–೧)
ಬೆಟ್ಟಯ್ಯ (ಕಾ–೪)	ಕೆಂಚಮ್ಮ (ಕಾ–೫)
ಹೊನ್ನೇಶ (ಕಾ–೪)	ರಾಮಕ್ಕ (ಚ–೧೭)
ರಂಗಣ್ಣ (ಚ–೧೩)	ನಿಂಗವ್ವ (ಚ–೧೭)
ಗುಂಜಾರಯ್ಯ (ಕ–೩೬)	ಬಸಕ್ಕ (ಕ–೨೧)
ಬಸವರಾಜ (ಕ–೨೧)	ಮಾಯಮ್ಮ (ಕ–೩೪)
ಕರಿಯಣ್ಣ (ಕ–೨೪)	ಬೋರಮ್ಮ (ಕ–೨೪)
ದುರ್ಗಪ್ಪ (ಕ–೨೨)	ತಾಯಮ್ಮ (ಕ–೨೯)
ಗಾಲುರಯ್ಯ (ನಾ–೫೨)	ಗಂಗವ್ವ (ನಾ–೪೩)

ಈ ರೀತಿಯಾಗಿ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಅಮ್ಮ, ಅಕ್ಕ, ಅಣ್ಣ, ಅಪ್ಪ, ಅವ್ವ, ಅಯ್ಯ, ಈಶ, ರಾಜ ಎಂಬಂತಹ ವಾರ್ಗಿಕಗಳು ಸೇರಿ ಬಳಕೆಯಾಗಿರುವುದಕ್ಕೆ ಒಂದು ಹಂತದ ಚಲನೆ ಎಂದು ಹೇಳಬಹುದು. ಯಾಕೆಂದರೆ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳಿಲ್ಲದ ವ್ಯಕ್ತಿನಾಮಗಳೆ ಹೆಚ್ಚಾಗಿ ಕಂಡುಬರುತ್ತವೆ. ವಾರ್ಗಿಕಗಳು ದಾಖಲೆ ಮತ್ತು ಮತ್ತು ಮಾತಿನಲ್ಲಿ ಬಳಕೆಯಾಗಿರುವುದು ಒಂದು ಹಂತದ ವ್ಯಕ್ತಿನಾಮಗಳ ಚಲನೆ ಎಂದು ಹೇಳಬಹುದು.

ತಿಮ್ಮ–ತಿಮ್ಮಕ್ಕ, ರುದ್ರ–ರುದ್ರಪ್ಪ, ನಿಂಗಿ–ನಿಂಗಮ್ಮ, ಕೆಂಚಿ–ಕೆಂಚವ್ವ, ಚೋಮ–ಚೋಮಣ್ಣ, ಬೆಟ್ಟ–ಬೆಟ್ಟಯ್ಯ, ಮಾದ–ಮಹಾದೇವಯ್ಯ ಈ ರೀತಿಯ ಕೆಳಜಾತಿಯ ವ್ಯಕ್ತಿಗಳಲ್ಲಿ ವಾರ್ಗಿಕಗಳು ಬಂದು ಸೇರಿರುವ ಪ್ರಕ್ರಿಯೆ ಮೊದಲ ಹಂತದ ಚಲನೆ. ಮೇಲ್ಜಾತಿ ವ್ಯಕ್ತಿಗಳಲ್ಲಿ ಅವರಿಗೆ ಆರಂಭದಿಂದಲೂ ವಾರ್ಗಿಕಗಳು ಸೇರಿಯೇ ಅವರ ಹೆಸರುಗಳಿರುತ್ತಿದ್ದವು.

ಆಧುನಿಕ ಶಿಕ್ಷಣ ಆಧುನೀಕರಣ ಪ್ರಭಾವದಿಂದಾಗಿ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಚಲನೆಗೊಂಡಿರುವ ಪ್ರಕ್ರಿಯೆಯನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ಆಧುನಿಕ ಸಂದರ್ಭದ ಹೆಸರುಗಳು ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಬಳಕೆಯಾಗಿರುವುದನ್ನು ನೋಡಬಹುದು. ಉದಾಹರಣೆ ಈ ಕೆಳಗಿನಂತಿದೆ.

ಪುರುಷ	ಮಹಿಳೆ
ಸತ್ಯಪ್ರಕಾಶ್ (ಕಾ–೫)	ಕಲ್ಯಾಣಿ (ಕಾ–೮)
ಬಸವರಾಜು (ಕಾ–೭)	ಮಂಜುಳ (ಕಾ–೭)
ರಾಜ (ಕ–೩೮)	ಕಾವೇರಿ (ಚ–೧೩)
ದೇವರಾಜ (ಕಾ–೩೩)	ರಾಧ (ಚ–೧೪)
ಲಿಂಗೇಶ (ಕಾ–೩೩)	ಜ್ಯೋತಿ (ಭಾಗ್ಯಜ್ಯೋತಿ (ಚ)
ಸಿದ್ದೇಶ (ನಾ–೫೨)	ಭೂಮಿ (ನಾ–೫೧)

ಕೆಳಜಾತಿಯ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಅಪ್ಪ, ಅಮ್ಮ, ಅಣ್ಣ ಅಕ್ಕ, ಅಯ್ಯ ಈ ರೀತಿಯ ವಾರ್ಗಿಕಗಳನ್ನು ಬಿಟ್ಟು ಆಧುನಿಕ ಸಂದರ್ಭದ ಹೆಸರುಗಳು ಬಳಕೆಯಾಗಿರುವುದು ಎರಡನೆಯ ಹಂತದ ಚಲನೆ ಎಂದು ಹೇಳಬಹುದು. ಈ ಎರಡನೆ ಹಂತದ ಚಲನೆಯ ಪ್ರತಿಕ್ರಿಯೆ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಕೆಳಜಾತಿಯ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಆಧುನಿಕ ಹೆಸರುಗಳು ಸಹ ಕಂಡುಬಂದಿವೆ. ಶಿಕ್ಷಣ ಮತ್ತು ಆಧುನಿಕರಣದ ಪ್ರಭಾವದಿಂದಾಗಿ ಆಧುನಿಕ ಹೆಸರುಗಳು ಕೆಳಜಾತಿ ಪಾತ್ರಗಳ ಹೆಸರುಗಳಲ್ಲಿ ಬಂದು ಸೇರಿರಬಹುದು. ಇದು ಎರಡನೆಯ ಹಂತದ ಚಲನೆಯ ಪ್ರಕ್ರಿಯೆಯಾಗಿದೆ. ಉದಾಹರಣೆಗೆ ಗಾಂಧಿದಾಸ್, ಕಾವೇರಿ, ರಾಜ, ಮೋಹನದಾಸ್, ಶೇಷಾದ್ರಿ, ಸತ್ಯಪ್ರಕಾಶ. ಈ ಹೆಸರುಗಳು ಆಧುನಿಕರಣ ಮತ್ತು ಶಿಕ್ಷಣದ ಪ್ರಭಾವದಿಂದ ಬಂದಿರುವ ಹೆಸರುಗಳು. ಕೆಳಜಾತಿ ಪಾತ್ರಗಳ ಹೆಸರುಗಳಲ್ಲಿ ಎರಡನೆಯ ಹಂತದ ಚಲನೆಯಲ್ಲಿ ಹೆಚ್ಚು ಹೆಸರುಗಳು ಕಂಡುಬರುವುದಿಲ್ಲ. ಅಂದರೆ ಕೆಳಜಾತಿ ಪಾತ್ರಗಳು ಆಧುನೀಕರಣಕ್ಕೆ ಹೆಚ್ಚು ತೆರೆದುಕೊಂಡಿಲ್ಲ ಎಂದು ಹೇಳಬಹುದು. ಈ ಅಧ್ಯಯನಕ್ಕೆ ತೆಗೆದುಕೊಂಡ ಆಕರಗಳಿಂದ ದೊರೆತ ಮಾಹಿತಿಗೆ ಅನ್ವಯಿಸಿ ಈ ಅಂಶವನ್ನು ಗುರುತಿಸಲಾಗಿದೆ.

ಕೆಳಜಾತಿ ವ್ಯಕ್ತಿಗಳಲ್ಲಿ ಇನ್ನೂ ಕೆಲವು ವಿಶಿಷ್ಟ ಹೆಸರುಗಳನ್ನು ಕಾಣಬಹುದು. ಭೂಮಿ, ಪಂಚಮ, ಕಾವೇರಿ, ಈ ಹೆಸರುಗಳು ಕೆಳಜಾತಿ ವ್ಯಕ್ತಿಗಳಲ್ಲಿ ಬಳಕೆಯಾಗಿವೆ. ಕೆಲವು ಲೇಖಕರು ಮತ್ತು ನಿರ್ದೇಶಕರು ಕಥೆಯ ವಸ್ತು ಮತ್ತು ಅವರ ಉದ್ದೇಶಕ್ಕೆ ಅನುಗುಣವಾಗಿ, ಉದ್ದೇಶಪೂರ್ವಕವಾಗಿ ಈ ರೀತಿಯ ಹೆಸರುಗಳನ್ನಿಟ್ಟಿರುವುದು ನೋಡಬಹುದು.

ಭಾಸ್ಕರ ಟಿ.ಎಂ, ಅವರ 'ಭೂಮಿ' ಎಂಬ ನಾಟಕದಲ್ಲಿ ಕೆಳಜಾತಿ ವಯಸ್ಕ ಮಹಿಳೆ 'ಭೂಮಿ' ನಾಟಕದಲ್ಲಿ ನಾಯಕಿಯ ಪಾತ್ರ. ವಯಸ್ಸಾದ ಮುದುಕಿಯ ಪಾತ್ರಕ್ಕೆ ನಾಟಕಕಾರರು

'ಭೂಮಿ' ಎಂದು ನಾಟಕದ ವಸ್ತುಗೆ ಅನುಗುಣವಾಗಿ ಹೆಸರಿಟ್ಟಿದ್ದಾರೆ. ಆ ನಾಟಕದಲ್ಲಿ ಬರುವ ಯಾವ ಪಾತ್ರಗಳಿಗೂ ಈ ರೀತಿಯ ಹೆಸರಿಲ್ಲ. ಕಲ್ಯಾ, ಮಲ್ಯಾ, ಸಾದೇವಿ, ಮಾದೇವಿ ಎಂಬ ಇನ್ನುಳಿದ ಕೆಳಜಾತಿ ಪಾತ್ರಗಳ ಹೆಸರುಗಳಾಗಿವೆ. 'ಭೂಮಿ' ಎಂಬ ಹೆಸರು ಈ ಸಂದರ್ಭದಲ್ಲಿ ವಾಸ್ತವಕ್ಕೆ ದೂರವಾದಂತಹ ಹೆಸರಾಗಿದೆ. ನಾಟಕಕಾರರು ಉದ್ದೇಶಪೂರ್ವಕವಾಗಿ ಈ ಹೆಸರನ್ನು ಬಳಸಿದ್ದಾರೆ.

ಸಿದ್ದಲಿಂಗಯ್ಯ ಅವರ 'ಪಂಚಮ' ನಾಟಕದಲ್ಲಿ ನಾಯಕ ಪಾತ್ರದ ಹೆಸರು 'ಪಂಚಮ' ಎಂದು. ಇಲ್ಲಿಯೂ ಸಹ ನಾಟಕದ ವಸ್ತುವಿಗೆ ಅನುಗುಣವಾಗಿ, ಉದ್ದೇಶಪೂರ್ವಕವಾಗಿ 'ಪಂಚಮ' ಎಂಬ ಹೆಸರನು ಬಳಕೆ ಮಾಡಲಾಗಿದೆ.

ರೆಡ್ಡಿ ಹೆಚ್. ಎನ್, ಅವರು ನಿರ್ದೇಶಿಸಿದ 'ಕಾವೇರಿ' ಎಂಬ ಚಲನಚಿತ್ರ ೧೯೭೫ರಲ್ಲಿ ಬಿಡುಗಡೆಯಾಗಿದೆ. ಸಿನಿಮಾದ ನಾಯಕಿಯ ಪಾತ್ರದ ಹೆಸರು 'ಕಾವೇರಿ'. ಇದು ಕೆಳಜಾತಿಯ ಪಾತ್ರವಾಗಿದೆ. ಆ ಸಂದರ್ಭದಲ್ಲಿ ಕೆಳಜಾತಿ ವ್ಯಕ್ತಿಗಳಲ್ಲಿ ಈ ರೀತಿಯ ಹೆಸರು ಕಂಡುಬರುವುದಿಲ್ಲ. ಏಕೆಂದರೆ ಆ ಸಿನಿಮಾದಲ್ಲಿ ಬರುವ ಯಾವ ಕೆಳಜಾತಿ ಪಾತ್ರಗಳಲ್ಲಿ ಈ ರೀತಿಯ ಹೆಸರುಗಳು ಕಂಡುಬರುವುದಿಲ್ಲ. ಮಾದ, ಮುನಿಯ, ಗಂಗಣ್ಣ, ಚಂದ್ರಿ ಎಂಬಂತಹ ಹೆಸರುಗಳು ಕಂಡುಬರುತ್ತವೆ. ಇಲ್ಲಿ ನಿರ್ದೇಶಕರು ತಮ್ಮ ಆಲೋಚನೆಗೆ ತಕ್ಕಂತೆ ಉದ್ದೇಶಪೂರ್ವಕವಾಗಿ ಈ ಹೆಸರನ್ನು ಬಳಸಿದ್ದಾರೆ.

ಈ ರೀತಿಯ ಹೆಸರುಗಳು ಕಥಾವಸ್ತುವಿಗೆ ಅನ್ವಯಿಸುವಂತೆ ಲೇಖಕರು, ನಿರ್ದೇಶಕರು ಉದ್ದೇಶಪೂರ್ವಕವಾಗಿ ಇಟ್ಟಿರುತ್ತಾರೆ. ಇದು ಅತಿ ಗ್ರಹಿಕೆಯ ನೆಲೆಯಾಗಿರುತ್ತದೆ. ಯಾಕೆಂದರೆ ಇದು ವಾಸ್ತವಕ್ಕೆ ದೂರವಾದ ಸಂಗತಿಯಾಗಿರುತ್ತದೆ. ವಾಸ್ತವದಲ್ಲಿ ಇಲ್ಲದಿದ್ದರೂ ಕಲಾಭಿವ್ಯಕ್ತಿಯಲ್ಲಿ ಈ ರೀತಿಯ ಪ್ರಕ್ರಿಯೆಗೆ ಅವಕಾಶವಿರುತ್ತದೆ ಎಂದು ಹೇಳಬಹುದು.

ವ್ಯಕ್ತಿನಾಮಗಳ ಪಲ್ಲಟ

ವ್ಯಕ್ತಿನಾಮಗಳಲ್ಲಿ ಪಲ್ಲಟವನ್ನು ಕುರಿತು ಚರ್ಚಿಸಬಹುದು. ವ್ಯಕ್ತಿನಾಮಗಳ 'ಪಲ್ಲಟ' ಎಂದರೆ ಸಾಮಾಜಿಕ ಒತ್ತಡ, ಜಾತಿಯ ಅವಮಾನಗಳಿಂದ ಶಿಕ್ಷಣ ಮತ್ತು ಆಧುನಿಕರಣದ ಪ್ರಭಾವದಿಂದ ತಮ್ಮ ಮೂಲ ಹೆಸರನ್ನು ಬಿಟ್ಟು ಇನ್ನೊಂದು ಹೊಸ ಹೆಸರನ್ನು ಇಟ್ಟುಕೊಳ್ಳುವ ಪ್ರಕ್ರಿಯೆಗೆ 'ವ್ಯಕ್ತಿನಾಮಗಳ ಪಲ್ಲಟ' ಎಂದು ಕರೆಯಬಹುದು. ವ್ಯಕ್ತಿನಾಮಗಳ ಪಲ್ಲಟದಲ್ಲಿ ತನ್ನ ಮೂಲ ಹೆಸರನ್ನು ಕಳೆದುಕೊಂಡು ಹೊಸ ಹೆಸರನ್ನು ಪಡೆಯಲಾಗುತ್ತದೆ. ಮೇಲ್ಜಾತಿ ವ್ಯಕ್ತಿಗಳಲ್ಲಿ ಈ ರೀತಿ ವ್ಯಕ್ತಿನಾಮಗಳಲ್ಲಿ ಪಲ್ಲಟಗೊಂಡಿರುವುದು ವಿರಳ. ಕೆಳಜಾತಿ ವ್ಯಕ್ತಿನಾಮಗಳಲ್ಲಿ ಪಲ್ಲಟ ಹೆಚ್ಚಾಗಿ ಕಂಡುಬರುತ್ತದೆ.

ಭೈರಪ್ಪ ಎಸ್.ಎಲ್, ಅವರ 'ದಾಟು' ಕಾದಂಬರಿಯಲ್ಲಿ ಮೇಲ್ಜಾತಿ ವ್ಯಕ್ತಿಯಾದ ತಿರುಮಲೆಗೌಡ-ಶ್ರೀನಿವಾಸನಾಗುತ್ತಾನೆ. ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟಕ್ಕೆ ದಾಟು ಕಾದಂಬರಿಯಲ್ಲಿ ಬರುವ ಮೇಲ್ಜಾತಿ ಪಾತ್ರದ ಉದಾಹರಣೆಯನ್ನು ನೀಡಬಹುದು. "ಮಗ ಶ್ರೀನಿವಾಸನ ಹುಟ್ಟು

ಹೆಸರು ತಿರುಮಲಗೌಡ ಎಂದು ಕಾಲೇಜಿಗೆ ಹೋದ ಮೇಲೆ ಅವನು ಶ್ರೀನಿವಾಸನೆಂದು ಬದಲಾಯಿಸಿಕೊಂಡಿದ್ದಾನೆ."(ಭೈರಪ್ಪ ಎಸ್.ಎಲ್, ದಾಟು, ಪುಟ-೫೩). ಇಲ್ಲಿ ಎರಡು ಸಂಗತಿಗಳನ್ನು ಗಮನಿಸಬಹುದು.

ಒಂದು ತಿರುಮಲೆಗೌಡ - ಶ್ರೀನಿವಾಸನಾಗಿದ್ದು, ಎರಡನೆಯ ಸಂಗತಿ ಕಾಲೇಜಿಗೆ ಹೋದ ಮೇಲೆ ತನ್ನ ಹೆಸರನು ಬದಲಾಯಿಸಿಕೊಂಡದ್ದು. ಏಕೆ ತನ್ನ ಹೆಸರನ್ನು ಬದಲಾಯಿಸಿಕೊಂಡ ಎಂದರೆ ಶಿಕ್ಷಣದಿಂದ ಪಡೆದ ವೈಚಾರಿಕ ಆಲೋಚನೆಯಿಂದ 'ಗೌಡ' ಜಾತಿಸೂಚಕ ತನ್ನ ಹೆಸರಿನಲ್ಲಿರಬಾರದು ಅದೊಂದು ರೀತಿ ಇರಸು ಮುರಸಿನ ಸಂಗತಿ ಎಂದು ತನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತಾನೆ. ಈ ರೀತಿ ಮೇಲ್ಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಪಲ್ಲಟವಾಗಿರುವ ಉದಾಹರಣೆಗಳು ವಿರಳ.

ಕೆಳಜಾತಿ ವ್ಯಕ್ತಿಗಳ ಹೆಸರುಗಳಲ್ಲಿ ಪಲ್ಲಟಗೊಂಡಿರುವ ಉದಾಹರಣೆಗಳು ಹೆಚ್ಚಾಗಿ ಸಿಗುತ್ತವೆ. ಆ ಉದಾಹರಣೆಗಳು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಿಂದ ಆಯ್ದುಕೊಳ್ಳಲಾಗಿದೆ.

ಭೈರಪ್ಪ ಎಸ್.ಎಲ್, ಅವರ 'ದಾಟು' ಕಾದಂಬರಿಯಲ್ಲಿ ಬರುವ ಹೊನ್ನೇಶ ಎಂಬ ವ್ಯಕ್ತಿ ಕೆಳಜಾತಿಯ ಪಾತ್ರವಾಗಿದೆ. ಈ ವ್ಯಕ್ತಿಯ ಹೆಸರನ್ನೆ ಕುರಿತು ಮೇಲ್ಜಾತಿ ಮಹಿಳೆ ಸತ್ಯಭಾಮ ಮತ್ತು ಕೆಳಜಾತಿ ವ್ಯಕ್ತಿ ಮೋಹನದಾಸ್ ಮಾತನಾಡುವ ಸಂದರ್ಭ.

"ಹೊನ್ನೇಶ ಅನ್ನೂ ಹೆಸರು ಯಾರಿಟ್ಟಿದ್ದು? ಅವರಪ್ಪ ಇಟ್ಟಿದ್ದನಂತೆ ಹೊನೂರು ಅಂತ. ಅವರಪ್ಪ ಅಂದ್ರೆ..... ವ್ಯಂಗ್ಯಬ್ಯಾಡ ಎಂದು ಹೇಳಿ ಎಂದಳು. ವ್ಯಂಗ್ಯಕ್ಕಲ್ಲ. ಗ್ಯಾಪಕಕ್ಕೆ ಬಂತು ಅಷ್ಟೆ. ಹಂಗಂದೆ. ಆ ಮ್ಯಾಲೆ ತುಮಕೂರಿನ ಎ.ಕೆ ಬೋರ್ಡಿಂಗಿಗೆ ಸೇರಿದ ಮ್ಯಾಲೆ ಹೊನ್ನೇಶ ಅಂತ ಇವನೆ ಮಾಡುಸ್ಕಂಡಿದಾನೆ" (ಭೈರಪ್ಪ ಎಸ್.ಎಲ್, ದಾಟು, ಪುಟ-೩೪೯). ಹೊನ್ನೂರು ಎಂಬ ಹೆಸರು ಕೆಳಜಾತಿಯ ಹೆಸರನ್ನು ಸೂಚಿಸುತ್ತದೆ. ಎಂಬ ಕಾರಣಕ್ಕೆ 'ಈಶ' ಎಂಬ ವಾರ್ಗಿಕ ಸೇರಿಸಿ 'ಹೊನ್ನೇಶ' ಎಂಬ ಹೆಸರನ್ನು ಇಟ್ಟುಕೊಳ್ಳುತ್ತಾನೆ. ಆ ಸಂದರ್ಭಕ್ಕೆ ಇದು ಆಧುನಿಕ ಹೆಸರಾಗಿದೆ. ಹೊನ್ನೇಶ ಎಂಬ ಹೆಸರಿನಿಂದ ಜಾತಿ ಗುರುತಿಸಲು ಆಗುವುದಿಲ್ಲ ಎಂಬ ಕಾರಣಕ್ಕೆ ತಂದೆ ಇಟ್ಟ ಹೆಸರನ್ನು ಬದಲು ಮಾಡಿಕೊಳ್ಳುತ್ತಾನೆ.

ಇದೇ ಕಾದಂಬರಿಯಲ್ಲಿ ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟಕ್ಕೆ ಕುರಿತಂತೆ ಇನ್ನೊಂದು ಉದಾಹರಣೆಯನ್ನು ನೋಡಬಹುದು.

"ಬೆಟ್ಟಯ್ಯ ತನ್ನ ಮಗ 'ತಿಮ್ಮ'ನ ಹೆಸರು ಮೋಹನದಾಸ್ ಎಂದು ಮಾಡಿದ. ಮಗಳು 'ಗುಡ್ಡಿ'ಗೆ 'ಮೀರಾ' ಎಂದು ಹೆಸರಿಟ್ಟ. 'ದಾಸ' ಎನ್ನುವುದು ಜಾತಿಗೆ ತಕ್ಕ ಹೆಸರು. ಆದರೆ ಮೋಹನ ಅಂತ ಹೆರಿಟ್ಟರೆ ಆ ಕರೀ ಮಾದಿಗ ಮುದ್ದುಮುಖದ ಕೃಷ್ಣನಾಗುತ್ತಾಯೇ? ಎಂದು

ಊರಿನವರೆಲ್ಲ ಅಂದುಕೊಂಡರು. ಆ ಮೇಲೆ ತಿಳಿಯಿತು. ಇವರು ಹೇಳುವ ಗಾಂಧಿ ಮಹಾತ್ಮನ ಹುಟ್ಟು ಹೆಸರು ಮೋಹನದಾಸ್ ಅಂತೆಲ್ಲ. ಬೆಟ್ಟಯ್ಯ ಅವನ ಗುರುವಿನ ಹೆಸರು ಮಗುವಿಗೆ ಇಟ್ಟಿದ್ದಾನೆ. ಮೀರಾ ಎಂದರೆ ಕೃಷ್ಣಭಕ್ತೆಯಂತೆ ಗಾಂಧಿ ಮಹಾತ್ಮನಿಗೆ ಗುರುವಾಗಿದ್ದಳಂತೆ." (ಭೈರಪ್ಪ ಎಸ್.ಎಲ್, ದಾಟು, ಪುಟ-೧೨೧)

ಈ ಕಾದಂಬರಿಯಲ್ಲಿ ಬೆಟ್ಟಯ್ಯ ಎಂಬ ವ್ಯಕ್ತಿ ಕೆಳಜಾತಿಗೆ ಸೇರಿದ ಪಾತ್ರವಾಗಿದೆ. ಬೆಟ್ಟಯ್ಯ ಗಾಂಧಿಜಿಯ ಸಬರಮತಿ ಆಶ್ರಮಕ್ಕೆ ಹೋಗಿ ಬಂದ ನಂತರ ತನ್ನ ಮಕ್ಕಳ ಹೆಸರನ್ನು ಬದಲಾಯಿಸುತ್ತಾನೆ. ತಿಮ್ಮ, ಗುಡ್ಡಿ, ಎಂಬ ಹೆಸರುಗಳು ಕೆಳಜಾತಿಯನ್ನು ಸೂಚಿಸುವ ಹೆಸರುಗಳೆಂದು ಭಾವಿಸಿ ಮಕ್ಕಳ ಹೆಸರುಗಳನ್ನು ಬದಲಾಯಿಸುತ್ತಾನೆ.

ಕಾದಂಬರಿಯಲ್ಲಿ ಕಂಡುಬಂದ ಹಾಗೆ ಸಿನಿಮಾಗಳಲ್ಲಿ ಸಹ ಕೆಳಜಾತಿ ವ್ಯಕ್ತಿಗಳಲ್ಲಿ ಚಲನೆ ಮತ್ತು ಪಲ್ಲಟಗೊಂಡಿರುವುದನ್ನು ಕಾಣಬಹುದು. ಸಿದ್ದಲಿಂಗಯ್ಯ ಅವರು ನಿರ್ದೇಶಿಸಿದ 'ಹೇಮಾವತಿ' ಸಿನಿಮಾದಲ್ಲಿ ಹೊಲೆಯರ 'ಚೆನ್ನಿ' ಸಂಗೀತ ವಿದ್ವಾಂಸೆಯಾದಾಗ ಗಾನಶಾರದೆಯಾಗುತ್ತಾಳೆ. ಹಳ್ಳಿಯಿಂದ ಪಟ್ಟಣಕ್ಕೆ ಹೋದಾಗ ಅವಳ ಗುರುಗಳು 'ಗಾನಶಾರದೆ' ಎಂಬ ಹೆಸರನ್ನು ಇಡುತ್ತಾರೆ. ಸಂಗೀತದಲ್ಲಿ ಅಷ್ಟು ದೊಡ್ಡ ಹೆಸರನ್ನು ಗಳಿಸಿ ತನ್ನ ಊರಿಗೆ ಮರಳಿ ಬರುತ್ತಾಳೆ. ಊರಿನ ಜನರು 'ಗಾನಶಾರದೆ' ಎಂದು ಹೆಸರಿಟ್ಟಿದ್ದರಿಂದ ಮೇಲು ಜಾತಿಯವಳೆಂದು ತಿಳಿದು ಆಹ್ವಾನಿಸಿ ಸನ್ಮಾನ ಮಾಡುತ್ತಾರೆ. ಅವಳು ಹೊಲೆಯರ ಚೆನ್ನಿ ಎಂದು ತಿಳಿದ ಮೇಲೆ ಮಡಿ ಆಯ್ತು ಎಂದು ಹೋಗಿ ನದಿಗೆ ಬೀಳುತ್ತಾರೆ(ಚಲನಚಿತ್ರ, ಹೇಮಾವತಿ).

ಕೆಳಜಾತಿಯ ವ್ಯಕ್ತಿಯ ಹೆಸರಿನಲ್ಲಿ ಬದಲಾವಣೆಯಾಗಿದ್ದರೂ ಅವರ ಸಾಮಾಜಿಕ ಸ್ತರವಿನ್ಯಾಸ ಬದಲಾವಣೆಯಾಗುವುದಿಲ್ಲ. ಜಾತೀಯತೆ ಮತ್ತು ಅಸ್ಪೃಶ್ಯತೆಯ ಶೋಷಣೆಯನ್ನು ಅನುಭವಿಸಬೇಕಾಗುತ್ತದೆ.

ದ್ವಾರಕೀಶ ನಟಿಸಿರುವ ಆನಂದ ಭೈರವಿ ಚಲನಚಿತ್ರ ೧೯೮೩ರಲ್ಲಿ ಬಿಡುಗಡೆಗೊಂಡಿದೆ. ಈ ಸಿನಿಮಾದಲ್ಲಿ ದೊಂಬರ 'ರಂಗಿ – ಭೈರವಿಯಾಗುವ ಸನ್ನಿವೇಶ.

ರಂಗಿ : ನೀವು ದೊಡ್ಡಾವ್ರು ಮುಟ್ಬುಬೌದ

ಲಕ್ಷ್ಮೀ : ನಿನ್ನಪ್ಪಿದ್ದಾಗ ನಾನು ಚಿಕ್ಕಳೆ ನಿನ್ ಹೆಸರೆನಮ್ಮ

ನಾಣಿ : ಭೈರವಿ

ರಂಗಿ : ಅಲ್ಲ ಬುದ್ಧ್ಯೋರ ನನ್ ಹೆಸ್ರು ರಂಗಿ ಅಲ್ವ

ನಾಣಿ : ನಾಟ್ಯ ದೇವತೆಗೆ ಅದಿದೇವತೆಯಾದ ಪಾರ್ವತಿ ಹೆಸ್ರಿಟ್ಟಿದ್ದೀನಿ" (ಚಲನಚಿತ್ರ, ಆನಂದ ಭೈರವಿ)

ದೊಂಬರ ಹುಡುಗಿ ರಂಗಿಯನ್ನು ಬ್ರಾಹ್ಮಣ ವ್ಯಕ್ತಿ ನಾರಾಯಣಶರ್ಮ ನಾಟ್ಯ ಕಲಿಸುತ್ತೇನೆಂದು ಮನೆಗೆ ಕರೆತಂದು ಅವಳ ಹೆಸರನ್ನು ಬದಲಾಯಿಸುತ್ತಾನೆ. ರಂಗಿ ಹೆಸರಿಗೆ ಬದಲಾಗಿ ಭೈರವಿ ಎಂದು ನಾಮಕರಣ ಮಾಡುತಾನೆ. ಹಿಂದೆ ಸಂಗೀತ, ನಾಟ್ಯ, ವೇದಭ್ಯಾಸಗಳೆಲ್ಲವೂ ಮೇಲು ಜಾತಿಯ ಸಮುದಾಯಗಳಿಗೆ ಮಾತ್ರ ಸೀಮಿತವಾಗಿತ್ತು. ಸಂಗೀತ, ನಾಟ್ಯ ಕಲಿತವರು ಸಮಾಜದಲ್ಲಿ ಅವಕಾಶ ವಂಚಿತರಾಗಬಾರದು ಎಂಬ ಕಾರಣಕ್ಕಾಗಿ ಮೇಲು ಸಮುದಾಯದ ಹುಡುಗಿ ಎಂದು ಕೊಳ್ಳಲಿ ಎಂಬ ಕಾರಣಕ್ಕೆ ಅವಳ ಹೆಸರನ್ನು ಬದಲಾಯಿಸುತ್ತಾನೆ.

ವಿಜಯ ನಿರ್ದೇಶಿಸಿದ 'ಸನಾದಿ ಅಪ್ಪಣ್ಣ' ಚಲನಚಿತ್ರವು ಕೃಷ್ಣಮೂರ್ತಿ ಪುರಾಣಿಕ ಅವರ ಕಥೆಯಾಧಾರಿತ ಸಿನಿಮಾವಾಗಿದೆ. ಕೊರವರ ಹನುಮಂತು ಶಿಕ್ಷಣ ಪಡೆದು ಅಧಿಕಾರಿಯಾದಾಗ ಕೆ.ಎಚ್. ರಾವ್ ಆಗಿ ಬದಲಾಗುತ್ತಾನೆ. ಆ ಒಂದು ಸನ್ನಿವೇಶವನ್ನು ಉದಾಹರಣೆಯಾಗಿ ನೋಡಬಹುದು. ತಂದೆ ಮಗನ ಸಂಭಾಷಣೆ.

ಅಪ್ಪಣ್ಣ : ಹನುಮಂತು ಹನುಮಂತು ನಿಮ್ಮ ತಾಯಿ ಬಸಂತಿ.

ಕೆ.ಎಚ್. ರಾವ್ : ಅಪ್ಪ ನೀವ್ ಇನ್ಮೇಲೆ ಹೀಗೆ ನನ್ನ ಪದೇ ಪದೇ ಹನುಮಂತು ಹನುಮಂತು ಕರಿ ಬೇಡಪ್ಪ.

ಅಪ್ಪಣ್ಣ : ಯಾಕಪ್ಪ

ಕೆ.ಎಚ್. ರಾವ್ : ಈಗ ನನ್ನ ಹೆಸರು ಹನುಮಂತು ಅಲ್ 'ರಾವ್' ಅಂತ.

ಅಪ್ಪಣ್ಣ : ರಾವೂ....... ಇದು ಯಾವ ಸೀಮೆ ಹೆಸರಯ್ಯ ಇದು..

ಕೆ.ಎಚ್. ರಾವ್ : ಇದು ಲೇಟೆಸ್ಟ್ ಪ್ಯಾಷನ್ ಅಪ್ಪ ಇದು.

ಅಪ್ಪಣ್ಣ : ಇದು ಯಾವ ಸೀಮೆ ಪ್ಯಾಷನ್ ಅಪ್ಪ ಇದು.

ಕೆ.ಎಚ್. ರಾವ್ : ಹಳೆ ಹೆಸರು ಚೆನ್ನಾಗಿರಲಿಲ್ಲ ಅಪ್ಪ ಅದಕ್ಕೆ ಹೀಗೆ ಬದಲಾಯಿಸಿಕೊಂಡಿದ್ದೀನಿ.

ಅಪ್ಪಣ್ಣ : ಓ..ಹೋ ಏನು ಹೆಸರು ಮಾತ್ರ ಬದಲಾಯಿಸಿಕೊಂಡಿದ್ದೀಯೋ ಇಲ್ಲಾ ನೀನು ಏನಾದ್ರು.....

ಕೆ.ಎಚ್. ರಾವ್ : ಹೆ..ಹೇ ಏನಪ್ಪ ನೀನು ನೋಡು ನನ್ನ ನೋಡೊಕೆ ದೊಡ್ಡ ದೊಡ್ಡ ಮನುಷ್ಯರೆಲ್ಲ ಈ ಮನೆಗೆ ಬರ್ತ್ತಾರೆ. ಅವ್ರು ನನ್ನ ಮಿಸ್ಟರ್ ರಾವ್ ಮಿಸ್ಟರ್ ರಾವ್ ಅಂತ ಕರಿತಿರಬೇಕಾದ್ರೆ ನೀನ್ ಮಾತ್ರ ಹನುಮ ಹನುಮಂತು ಅಂದ್ರೆ ಚೆನ್ನಾಗಿರುತ್ತಾ?

ಅಪ್ಪಣ್ಣ : ಹನುಮಂತು ಹನುಮಂತು ಹೇ ಹನುಮತು ನಮ್ಮ ಕುಲದೇವ್ರು ಕಣಯ್ಯ ಸಾಕ್ಷಾತ್ ಆಂಜನೇಯಸ್ವಾಮಿ ಆ ಹೆಸರನ್ನ ಚನ್ನಾಗಿಲ್ಲ ಅಂತೀಯ ಏನಯ್ಯ.

ಕೆ.ಎಚ್. ರಾವ್ : ಅದನ್ನೇನು ಬಿಟ್ಟಿಲ್ಲ ದೇವ್ರು ಹೆಸರನ್ನ ಚಿಕ್ಕದು ಮಾಡಿ ಕೆ.ಎಚ್. ರಾವ್ ಅಂತ ಮಾಡಿಕೊಂಡಿದ್ದಿನಿ.

ಅಪ್ಪಣ್ಣ : ಏನೇ ಆದ್ರು ಇಷ್ಟದಿನ ಹನುಮಂತು ಹನುಮಂತು ಅಂತ ಬಾಯ್ತುಂಬಾ ಕೂಗಿ ಈಗ ರಾವೂ ಅನ್ನುವುದಕ್ಕೆ ಮನಸ್ಸು ಸ್ವಲ್ಪ ಕಷ್ಟವಾಗ್ತದೆ ಅಪ್ಪ.

ಕೆ.ಎಚ್. ರಾವ್ : ಮೊದ್ ಮೊದ್ಲು ಸ್ವಲ್ಪ ಕಷ್ಟವಾಗೇ ಇರುತ್ತೆ ಆ ಮೇಲೆ ಎಲ್ಲಾ ಸರಿ ಹೋಗುತ್ತೆ. ನಾವು ಯಾವಾಗ್ಲೂ ಕಾಲಕ್ಕೆ ತಕ್ಕ ಹಾಗೇ, ಸ್ಥಳಕ್ಕೆ ತಕ್ಕ ಹಾಗೆ ಬದಲಾಯಿಸಿಕೊಳ್ಳಬೇಕಪ್ಪ, (ಚಲನಚಿತ್ರ, ಸನಾದಿ ಅಪ್ಪಣ್ಣ).

ಕೊರವರ ಹನುಮಂತು ಶಿಕ್ಷಣ ಪಡೆದು ಅಧಿಕಾರಿಯಾದಾಗ ತನ್ನ ಜಾತಿ ಸಮಾಜದಲ್ಲಿ ಗೊತ್ತಾಗಬಾರದೆಂದು ಕೊರವರ ಹನುಮಂತು ಎಂಬುದನ್ನ 'ಕೆ.ಎಚ್. ರಾವ್' ಎಂದು ಬದಲಾಯಿಸುತ್ತಾನೆ. ಯಾಕೆಂದರೆ ತನ್ನನ್ನು ಮೇಲುಜಾತಿಯವನೆಂದು ತಿಳಿದುಕೊಳ್ಳಲಿ ಎಂಬ ಕಾರಣಕ್ಕೆ. ಕೊರವರ ಹನುಮಂತು ಎಂಬ ಹೆಸರಿನ ತನಗೆ ಗೌರವ ಸಿಗುವುದಿಲ್ಲ. ಸಮಾಜದಲ್ಲಿ ಮಾನ್ಯತೆ ಸಿಗುವುದಿಲ್ಲ. ನಾನು ಗಳಿಸಿರುವ ಪ್ರತಿಷ್ಠೆಯಲ್ಲ ಹಾಳಾಗುತ್ತದೆ ಎಂಬ ಕಾರಣಕ್ಕೆ ತನ್ನ ತಂದೆಯನ್ನು ಅಪ್ಪ, ನನ್ನ ಪದೇ ಪದೇ ಹನುಂತು ಹನುಮಂತು ಎಂದು ಕರಿಬೇಡ. ನನ್ನ ನೋಡೋಕೆ ದೊಡ್ಡ ದೊಡ್ಡ ಮನುಷ್ಯರೆಲ್ಲ ಈ ಮನೆಗೆ ಬರ್ತಾರೆ. ಅವ್ರು ನನ್ನ ಮಿಸ್ಟರ್ ರಾವ್ ಮಿಸ್ಟರ್ ರಾವ್ ಅಂತ ಕರಿತಿರಬೇಕಾದ್ರೆ ನೀನ್ ಮಾತ್ರ ಹನುಮ ಹನುಮಂತು ಅಂದ್ರೆ ಚೆನ್ನಾಗಿರಲ್ಲ ಅಂತ ಹೇಳುತ್ತಾನೆ. ಕೊರವರ ಹನುಮಂತು 'ಕೆ.ಎಚ್. ರಾವ್' ಆಗಬೇಕಾದ್ರೆ ಸಮಾಜದಲ್ಲಿನ ಒತ್ತಡಗಳು, ಜಾತಿ ಕಾರಣಕ್ಕಾಗಿ ಅನುಭವಿಸಿದ ನೋವುಗಳು, ಹೆಸರಿನಿಂದಾಗಿ ಸಮಾಜದಲ್ಲಿ ಗೌರವ ಸಿಗದಿದ್ದ ಕಾರಣಕ್ಕಾಗಿ ತನ್ನ ಹೆಸರಿನ ಪೂರ್ಣರೂಪವನ್ನು ಇನ್‌ಷಿಯಲ್ 'ಕೆ.ಎಚ್. ಮಾಡಿ 'ರಾವ್' ಎಂಬ ಗೌರವಸೂಚಕ ಪದವನ್ನು ತನ್ನ ಹೆಸರಿನಲ್ಲಿ ಬಳಸಿ 'ಕೆ.ಎಚ್. ರಾವ್' ಎಂದು ಮಾಡಿಕೊಳ್ಳುತ್ತಾನೆ. ಹೆಸರಿನ ಮೂಲಕ ಸಾಮಾಜಿಕ ಸ್ತರವಿನ್ಯಾಸ ಕಾಣಬಹುದು. ಎನ್ನುವುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಸಾಮಾಜಿಕಸ್ತರ ಮತ್ತು ಜಾತಿ ಅವಮಾನಿತ ನೆಲೆಯು ತನ್ನ ಹೆಸರನ್ನು ಬದಲಾಯಿಸಿಕೊಳ್ಳಲು ಕಾರಣವಾಗುತ್ತದೆ.

ಕನ್ನಡದ ನಾಟಕಗಳಲ್ಲಿಯೂ ಸಹ ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟಗೊಂಡಿರುವುದನ್ನು ಕಾಣಬಹುದು. ಹನೂರು ಚೆನ್ನಪ್ಪ ಅವರ ಬೆಲ್ಲದ ದೋಣಿ ನಾಟಕದಲ್ಲಿ ಮಗುವಿಗೆ ಹೆಸರಿಡುವುದರ ಬಗ್ಗೆ ತಾಯಿ ಮತ್ತು ಮಗನ ನಡುವೆ ನಡೆಯುವ ಸಂಭಾಷಣೆ.

"ನಾನಿದ್ಕಂದು ಒಂದಿನಾ

ಅಪ್ಪ ಸಿದ್ದೇಸಾ........ ನಮ್ಮ ದೇವ್ರುಗೆ ಕೈಮುಗಿ

ಒಳ್ಳೆದಾಗಿ ಒಂದು ಗಂಡು ಕೂಸ್ ಕೊಟ್ರ

ಯಂಕ್ಟೇಸ್ ಅಂತ ಹೆಸ್ರಿಡಮು, ಅಂದ್ರ ಯಾನನ್ಬೇಕು

ಯಾವ್ ಯಂಕ್ಟೇಸ್ನ

'ಗೋತಮು' ಅಂತ ಹೆಸರಿಡ್ತಿನಿ ಕನ ಕೂತ್ಕೋ ಅಂತನ (ಹನೂರು ಚನ್ನಪ್ಪ, ಬೆಲ್ಲದ ದೋಣಿ, ಪುಟ–೮೨). ಇದರಲ್ಲಿ ಎರಡು ತಲೆಮಾರುಗಳ ಅಂತರದ ಆಲೋಚನೆಯಿದೆ. ಸಿದ್ದೇಶ ಶಿಕ್ಷಣ ಪಡೆದ ವ್ಯಕ್ತಿ. ಆಧುನೀಕರಣ ಮತ್ತು ಶಿಕ್ಷಣದ ಪ್ರಭಾವವು ಈ ರೀತಿ ವ್ಯಕ್ತಿನಾಮಗಳ ಪಲ್ಲಟಕ್ಕೆ ಕಾರಣ ಎಂದು ಹೇಳಬಹುದು.

ಸಿದ್ದಲಿಂಗಯ್ಯ ಅವರ 'ಪಂಚಮ' ನಾಟಕದಲ್ಲಿ ವ್ಯಕ್ತಿನಾಮ ಚಲನೆ ಮತ್ತು ಪಲ್ಲಟಗೊಂಡಿರುವುದನ್ನು ನೋಡಬಹುದು. ಶಿಕ್ಷಣ ಪಡೆದ ಕೆಳಜಾತಿ ವ್ಯಕ್ತಿ ತನ್ನ ಹಳೆಯ ಹೆಸರಾದ ಯಂಗಟ ಬಿಟ್ಟು 'ಶೇಷಾದ್ರಿ ಎಂಬ ಹೆಸರನ್ನು ಇಟ್ಟುಕೊಳ್ಳುತ್ತಾನೆ. ಮೇಲ್ಜಾತಿ ಮತ್ತು ಕೆಳಜಾತಿ ವ್ಯಕ್ತಿಯ ನಡುವೆ ನಡೆಯುವ ಸನ್ನಿವೇಶವನ್ನು ನೋಡಬಹುದು.

ಹಯವದನ್‌ರಾವ್ : ನಿಮ್ಮ ಹೆಸ್ರು ಹೇಳಿದ್ರಲ್ವಾ

ಶೇಷಾದ್ರಿ : ಶೇಷಾದ್ರಿ ಎಚ್. ಅಂತ ಹೇಳ್ಳಿಲ್ವಾ ಸಾ?

ಹಯವದನ್‌ರಾವ್ : ಎಚ್ ಅಂದ್ರೆ?

ಶೇಷಾದ್ರಿ : ನನ್ನ ಇನ್‌ಷಿಯಲ್ ಸಾ. ನಮ್ ತಂದೆಯವರ ಹೆಸ್ರು ಸಾ.

ಹಯವದನ್‌ರಾವ್ : ನಿಮ್ಮ ತಂದೆ ಹೆಸರು ಏನ್ರಿ

ಶೇಷಾದ್ರಿ : ಅದೆಲ್ಲಾ ಈಗ್ಯಾಕೆ ಬುಡಿ ಸಾ

ಹಯವದನ್‌ರಾವ್ : ಯಾಕ್ರೀ ತಂದೆ ಇರ್ಲಿಲ್ವಾ ಅಥವಾ ಈಗಿಲ್ವಾ?

ಶೇಷಾದ್ರಿ : ಛೇ.......ಛೇ!ಇದ್ರು, ಈಗ್ಲೂ ಇದ್ದಾರೆ ಏನ್ ಸಾ ಹೆತ್ತು, ಹೊತ್ತು ಸಾಕಿ ಸಲುಹುದೋರ್ನ ಹಂಗತೀರ?

ಹಯವದನ್‌ರಾವ್ : ಮತ್ತೆ ನಿಮ್ ತಂದೆ ಹೆಸರು ಹೇಳ್ರಿ, ಯಾಕ್ರಿ ಅವರ್ ಹೆಸರು ಹೇಳೋಕ್ ನಾಚಿಕೆ?

ಶೇಷಾದ್ರಿ : ಬುಡಿ ಸಾ. ನಿಮ್ ಗೂ ಬೇಜಾರಾಗ್ಬೋದು

ಹಯವದನ್‌ರಾವ್ : ಯಾಕ್ರಿ ಬೇಜಾರು? ನನ್ನ ಕೆಲ್ಸಾರೀ ಅದು

ಶೇಷಾದ್ರಿ : ತಪ್ ತಿಳ್ಕೊಳಲ್ಲ ಅಂದ್ರೆ ಹೇಳ್ತಿನಿ ಸಾ

ಹಯವದನ್‌ರಾವ್ : ಹೇಳ್ರಿ ಪರವಾಗಿಲ್ಲ.

ಶೇಷಾದ್ರಿ : ಹುಚ್ ಯಂಗಟಪ್ಪ ಅಂಥ ಸಾ. ಅವ್ರ ಹೆಸ್ರನ್ನೂ ಚೇಂಜ್ ಮಾಡುಸ್‌ಬುಡ್ತಿದ್ದೆ ಸಾ. ಆದ್ರೆ ವಯಸ್ಸಾಗಿರೋ ಮುದುಕರಿಗೆಲ್ಲ ಹೊಸ ಹೆಸ್ರ ಕಟ್ಬೂದು ಅಂದೆಂಥದೂ ಅಂಥ ಸುಮ್ನಾದೇ ಸಾ.

ಹಯವದನ್‌ರಾವ್ : ಹಾಗಾದ್ರೆ ನಿಮ್ ಹೆಸರನ್ನ ಚೇಂಜ್ ಮಾಡಿಸ್ಕೋಂಡ್ರೇನ್ರೀ? ನಿಮ್ ಮೊದಲನ್ನೇ ಹೇಸ್ರೇನಿರಿ?

ಶೇಷಾದ್ರಿ : ಈ ಗತಕಾಲದ ವಿಚಾರ ಮರೆತು ಬುಡಿ ಸಾ. ಏನೋ ನಮ್ ತಂದೆ ತಾಯಿಗಳು ನಾಯಿಗಳು, ಅನಾಗರೀಕರು uncivilized ಆ ಶೋಷಣೆನ ಮತ್ತೆ ಮತ್ತೆ ಯಾಕ ನೆನಪು ಮಾಡ್ಕೊಬೇಕು ಸಾ. ನಿಮ್ ಮನಸ್ಗೆ ಬೇಜಾರಾಗ್‌ಬೋದು ಸುಮ್ನಿರೀ ಸಾ.

ಹಯವದನ್‌ರಾವ್ : ರೀ ಏನೋ ಆಗೋದಾಗೋಯ್ತು. ಅದು ಸರಿ ಅಂಥನೂ ನಾ ಹೇಳೊಲ್ಲ, ತಪ್ಪು ಅಂಥನೂ ಹೇಳಲಿಲ್ಲ. ಇದ್ರಿಂದ ನನ್ಗೆ ಬೇಜಾರು ಆಗೋಲ್ಲ ಹೆಸರು ಹೇಳ್ರಿ?

ಶೇಷಾದ್ರಿ : ಚಿಕ್‌ಯಂಗಟ ಸಾ ಆದ್ರೆ ಈಗ ಶೇಷಾದ್ರಿ ಎಚ್. ಸಾ ಡಿಗ್ರಿ ಹೊಲ್ಡರ್ ಸಾ."(ಶ್ರೀನಿವಾಸರಾಜು ಚಿ. ದಾಮೋದರ ಶೆಟ್ಟಿ ನಾ,(ಸಂ), ಸುವರ್ಣ ನಾಟಕ(ಪೂರ್ಣಾವಧಿ) ಭಾಗ-೨, ಪುಟ-೯೦೨,೯೦೩)

ಕೆಳಜಾತಿ ವ್ಯಕ್ತಿಯು ಸಮಾಜದಲ್ಲಿ ಮೇಲ್ಜಾತಿಯವರಿಗೆ ಸಿಗುವ ಗೌರವ ಮರ್ಯಾದೆಯನ್ನು ಕಂಡು ಕೆಳಜಾತಿಯವರಾದ ನಮಗೂ ಆ ರೀತಿಯ ಗೌರವಗಳು ಸಿಗಬೇಕೆಂದು ಮೇಲ್ಜಾತಿಯವರಂತೆ ಹೆಸರಿನಿಂದ ಹಿಡಿದು ಸಾಂಸ್ಕೃತಿಕ ಆಚರಣೆಯನ್ನು ಪಾಲಿಸಲು ಮುಂದಾಗುತ್ತಾರೆ. ಇದು ಮೇಲ್ಮುಖ ಚಲನೆಯನ್ನು ಸೂಚಿಸುತ್ತದೆ. ಇಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಈ ಮೇಲೆ ಉಲ್ಲೇಖಿಸಿದ ಎಲ್ಲ ಉದಾಹರಣೆಗಳಲ್ಲೂ ಸಾಮಾಜಿಕ ಒತ್ತಡ, ಜಾತಿಯ ಕಾರಣಕ್ಕಾಗಿ, ವ್ಯಕ್ತಿಗಳ ಹೆಸರುಗಳಲ್ಲಿ ಪಲ್ಲಟಗೊಂಡಿರುವುದನ್ನು ಕಾಣಬಹುದು.

ಮತಾಂತರ ಪ್ರಕ್ರಿಯೆಯಲ್ಲಿ ವ್ಯಕ್ತಿನಾಮಗಳು ಪಲ್ಲಟಗೊಂಡಿವೆ. ಮತಾಂತರ ಪ್ರಕ್ರಿಯೆ ಎಂಬುದು ಸಾಮಾಜಿಕ ಅಪಮಾನಗಳನ್ನು ಮೀರುವ ಅಥವಾ ಸಾಮಾಜಿಕ ಅಪಮಾನಗಳನ್ನು ಕಳೆದುಕೊಳ್ಳುವ ನಿಟ್ಟಿನ ಒಂದು ಸಾಮಾಜಿಕ ಪ್ರಕ್ರಿಯೆಯಾಗಿ ಕಂಡುಬಂದರು ಆ ಪ್ರಕ್ರಿಯೆಯೊಂದಿಗೆ ಹೆಸರಿನ ಪಲ್ಲಟಗಳೂ ನಡೆದಿರುವುದು ಆಚರಣೆಯ ಪ್ರತಿಫಲನವಾಗುವುದನ್ನು ಕಂಡುಕೊಳ್ಳಲಾಗಿದೆ.

ಚೋಮನದುಡಿ ಸಿನಿಮಾದಲ್ಲಿ ಕೆಳಜಾತಿಯ ಪೊಮ್ಮನ ಮಗಳು ಮಾರಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ನಂತರ ಮೇರಿಯಾಗುತ್ತಾಳೆ.

ಮೊಗಳ್ಳಿ ಗಣೇಶ ಅವರ ಹಬ್ಬ ಕಥೆಯಲ್ಲಿ ಬರುವ ದೊಳ್ಳ ಊರೂಫ್ ಜಾನ್ ಆಗುತ್ತಾನೆ. "ಈ ಬೀದಿ ಜಗಳ ನಿಲ್ಲದೆ ಇಡೀ ಊರಿನ ದುರಂತೆ ಎಂಬಂತೆ ಹಂಚಿಕೆಯಾಗಿಬಿಟ್ಟಿತ್ತು. ಯಾವುದಕ್ಕೆ ಕಿತ್ತಾಡಬೇಕೋ ಅದಕ್ಕೆ ಕೊಂಚವೂ ಕಿತ್ತಾಡದೆ, ಇನ್ನಾವುದೊ ಘಟನೆಯ ಮೇಲೆ ತಮ್ಮ ಮತ್ಸರ, ಸಿಟ್ಟು ಸಂಕಟಗಳನ್ನು ಪ್ರದರ್ಶಿಸುತ್ತಿದ್ದರು. ಇದೆಲ್ಲವನ್ನು ನೋಡುತ್ತಾ ನಿಂತಿದ್ದ ದೊಳ್ಳ ಊರೂಫ್ ಜಾನ್ ಎಂಬ ಹೊಲೆಯರ ಪಿ.ಯು.ಸಿ ಹುಡುಗ ಕ್ರಿಶ್ಚಿಯನ್ ಆಗಿ ಮತಾಂತರಗೊಂಡಿದ್ದವನು, ಅತ್ಯಂತ ಉಪೇಕ್ಷೆಯಿಂದಲೂ ಹಾಗೂ ಕತ್ತೆಗಳಿಗೂ, ಕ್ರಿಸ್ತನಿಗೂ ಇದ್ದ ಕತೆ ನೆನಪಾಗಿ ದುಃಖವಾಗಿಯೂ ನಿಂತಿದ್ದ." (ಮೊಗಳ್ಳಿ ಗಣೇಶ, ಮೊಗಳ್ಳಿ ಕಥೆಗಳು, ಪುಟ-೧೮೨)

ಕೆಳಜಾತಿ ವ್ಯಕ್ತಿಗಳು ಹೆಚ್ಚಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಆಗ ಅವರ ಹೆಸರು ಕೂಡ ಅವರ ಧರ್ಮಕ್ಕೆ ಅನುಗುಣವಾಗಿ ಬದಲಾಗುತ್ತವೆ. ಇಲ್ಲಿ ಮತಾಂತರದ ಪ್ರಕ್ರಿಯೆಯಲ್ಲಿ ಹೆಸರುಗಳ ಬದಲಾವಣೆಯಾಗಿರುವುದನ್ನು ಕಾಣಬಹುದು.

ವ್ಯಕ್ತಿನಾಮಗಳಲ್ಲಿ ಇಟ್ಟ ಹೆಸರು, ಕೊಟ್ಟ ಹೆಸರು, ಇಟ್ಟುಕೊಂಡ ಹೆಸರು ಎಂಬುದಾಗಿ ಗಮನಿಸಬಹುದು. ಸಮುದಾಯಗಳಲ್ಲಿ ತಿಮ್ಮ, ಆಚರಣೆ, ನಂಬಿಕೆ, ಸಂಸ್ಕೃತಿಗೆ ಅನುಗುಣವಾಗಿ ವ್ಯಕ್ತಿಗಳಿಗೆ ಅನುಗುಣವಾಗಿ ವ್ಯಕ್ತಿಗಳಿಗೆ ಹೆಸರುಗಳನ್ನು ಇಡುತ್ತಾರೆ. ಮಕ್ಕಳಿಗೆ ಅವರ ತಂದೆ ತಾಯಿಗಳು ಇಡುವ ಹೆಸರುಗಳು ಇಟ್ಟ ಹೆಸರುಗಳಾಗಿರುತ್ತವೆ. ಕೊಟ್ಟ ಹೆಸರು ಈಗಾಗಲೇ ಇರುವಂತಹ ಹೆಸರನ್ನು ಬಿಟ್ಟ ಆ ವ್ಯಕ್ತಿಗೆ ಸಾಮಾಜಿಕ ಒತ್ತಡದ ಕಾರಣಕ್ಕಾಗಿ, ಬೇರೆ ವ್ಯಕ್ತಿಗಳು ಇಟ್ಟಂತಹ ಹೆಸರುಗಳು. ಉದಾಹರಣೆಗೆ ಆನಂದಭೈರವಿ ಚಲನಚಿತ್ರದಲ್ಲಿ ಡೊಂಬರ ಹುಡುಗಿ ರಂಗಿಗೆ ಮೇಲ್ಜಾತಿಯ ನಾರಾಯಣಶರ್ಮ ನಾಟ್ಯ ಕಲಿಸುವ ಉದ್ದೇಶದಿಂದ, ಅವರು ಕೆಳಜಾತಿಯ ವ್ಯಕ್ತಿ ಎಂದು ತಿಳಿಯಬಾರದು ಎಂಬ ಕಾರಣಕ್ಕೆ 'ಭೈರವಿ' ಎಂದು ನಾಮಕರಣ ಮಾಡುತ್ತಾರೆ. ಹೇಮಾವತಿ ಚಲನಚಿತ್ರದಲ್ಲಿಯೂ ಸಹ ಕೆಳಜಾತಿ ಚೆನ್ನಿಗೆ ಆನಂದ ಎಂಬ ಮೇಲ್ಜಾತಿ ಪುರುಷ ಸಂಗೀತ ಕಲಿಸುವ ಉದ್ದೇಶದಿಂದ ಸಮಾಜದಲ್ಲಿ ಅವಳಿಗೆ ಗೌರವಸಿಗಬೇಕು ಎಂದು 'ಗಾನಶಾರದೆ' ಎಂದು ಹೆಸರಿಡುತ್ತಾನೆ. ಈ ರೀತಿಯ ಹೆಸರುಗಳಿಗೆ ಕೊಟ್ಟ ಹೆಸರು ಎಂದು ಹೇಳಬಹುದು.

ಇನ್ನು ಇಟ್ಟುಕೊಂಡ ಹೆಸರುಗಳೆಂದರೆ ಸಾಮಾಜಿಕ ಒತ್ತಡದ ಜಾತಿಯಿಂದಾಗುವ ಅವಮಾನಗಳಿಂದಾಗಿ ತಮ್ಮ ಮೂಲ ಹೆಸರುಗಳನ್ನು ಬಿಟ್ಟು ಜಾತಿಸೂಚಿಸಿದೆ ಇರುವಂತಹ ಹೆಸರುಗಳನ್ನು ಇಟುಕೊಳ್ಳುವ ಪ್ರಕ್ರಿಯೆಗೆ ಇಟ್ಟುಕೊಂಡ ಹೆಸರು ಎಂದು ಹೇಳಬಹುದು. ಉದಾಹರಣೆಗೆ ಹೂನೂರ-ಹೊನ್ನೇಶ್, ಚಿಕ್ಕಯಂಗಟ-ಶೇಷಾದ್ರಿ ಮುಂತಾದ ಹೆಸರುಗಳು ಇಟ್ಟುಕೊಂಡ ಹೆಸರುಗಳಾಗಿವೆ. ಮೂರು ಈತಿಯಲ್ಲಿ ಹೆಸರುಗಳಿರುವುದನ್ನು ಕಾಣಬಹುದು.

ಕೊಟ್ಟ ಹೆಸರು ಮತ್ತು ಇಟ್ಟುಕೊಂಡ ಹೆಸರುಗಳು ಹೆಚ್ಚಾಗಿ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತವೆ. ಮೇಲ್ಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಕಂಡುಬರುವುದು ವಿರಳ.

ಇಟ್ಟ ಹೆಸರು	ಇಟ್ಟುಕೊಂಡ ಹೆಸರು
ಹೊನ್ನೂರು	ಹೊನ್ನೇಶ್ (ಕಾ-೪)
ಚಿಕ್‌ಯಂಗಟ	ಶೇಷಾದ್ರಿ, ಎಚ್ (ನಾ-೪೮)
ಕೊರವರ ಹನುಮಂತು	ಕೆ.ಎಚ್. ರಾವ್(ಚ-೧೮)

ಇಟ್ಟ ಹೆಸರು	ಕೊಟ್ಟ ಹೆಸರು
ಚೆನ್ನಿ	ಗಾನಶಾರದೆ(ಚ-೨೦)
ರಂಗಿ	ಭೈರವಿ (ಚ-೧೦)
ತಿಮ್ಮ	ಮೋಹನದಾಸ್(ಕಾ-೪)
ದೊಳ್ಳಿ	ಊರುಫ್‌ಜಾನ್ (ಕ-೪೨)
ಮಾರಿ	ಮೇರಿ(ಚ-೧೫)
ರಂಗಿ	ರೂಬಿ (ಚ-ಭಾಗ್ಯಜ್ಯೋತಿ)
ಪುಟಾರಿ	ಪೀಟರ್ (ಕಾ-೮)

ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳ ಪಲ್ಲಟದ ಪಟ್ಟಿ

ಪುರುಷ

ಮೂಲ ಹೆಸರು	ಪಲ್ಲಟಗೊಂಡ ಹೆಸರು
ತಿಮ್ಮ	ಮೋಹನದಾಸ್ (ಕಾ-೪)
ಹೊನ್ನೂರು	ಹೊನ್ನೇಶ್ (ಕಾ-೪)
ಚಿಕ್‌ಯಂಗಟ	ಶೇಷಾದ್ರಿ, ಎಚ್ (ನಾ-೪೮)
ಕೊರವರ ಹನುಮಂತು	ಕೆ.ಎಚ್. ರಾವ್(ಚ-೧೮)

ಮಹಿಳೆ

ಚೆನ್ನಿ	ಗಾನಶಾರದೆ(ಚ-೨೦)
ರಂಗಿ	ಭೈರವಿ (ಚ-೧೦)

ಮತಾಂತರ ಪ್ರಕ್ರಿಯೆಯಲ್ಲಿ ಪಲ್ಲಟಗೊಂಡ ವ್ಯಕ್ತಿನಾಮಗಳು


ಮೂಲ ಹೆಸರು	ಪಲ್ಲಟಗೊಂಡ ಹೆಸರು
ದೊಳ್ಳಿ	ಊರುಫ್‌ಜಾನ್ (ಕ–೪೨)
ಮಾರಿ	ಮೇರಿ(ಚ–೧೫)
ರಂಗಿ	ರೂಬಿ (ಚ–ಭಾಗ್ಯಜ್ಯೋತಿ)
ಪುಟಾರಿ	ಪೀಟರ್ (ಕಾ–೮)

ಮೇಲ್ಮುಖ ಚಲನೆ ಮತ್ತು ಮೇಲ್ಮುಖ ಪಲ್ಲಟಗೊಂಡಿರುವುದನ್ನು ವ್ಯಕ್ತಿನಾಮಗಳ ಮೂಲಕ ಕಂಡುಕೊಳ್ಳಲಾಗಿದೆ. ಮೇಲ್ಜಾತಿ ವ್ಯಕ್ತಿನಾಮಗಳು ತಿರುಮಲೇಗೌಡ, ಗೌಡ, ಎಂಬುವ ಒಂದು ಹಂತದ ಚಲನೆ ಆಗಿರಬಹುದು. ಒಂದು ಸಂದರ್ಭದಲ್ಲಿ ಗೌಡ ಎಂಬುದು ಕೃಷಿಕ, ಗ್ರಾಮೀಣ ಪ್ರದೇಶದ ವ್ಯಕ್ತಿ ಎಂದು ಸೂಚಿಸುತ್ತದೆ ಎಂಬ ಕಾರಣಕ್ಕೆ ಒಂದು ಹಂತದಲ್ಲಿ ಮೇಲ್ಜಾತಿಯವರು ಆ ಗೌಡ ಎಂಬ ಪದವನ್ನು ಬಳಸುತ್ತಿರಲಿಲ್ಲ. ಆದರೆ ಈಗ ಸಾಮಾಜಿಕ ವಾಸ್ತವದಲ್ಲಿ ರಾಜಕೀಯ ಮತ್ತು ಪ್ರತಿಷ್ಠೆಯ ಕಾರಣಕ್ಕಾಗಿ ಇಂದು ಮತ್ತೆ ಮುನ್ನೆಲೆಗೆ ಬರುತ್ತಿದೆ. ಅಭಿವ್ಯಕ್ತಿಯಲ್ಲೂ ಸಹ ನೋಡುವುದಾದರೆ ಕೆಂಪೇಗೌಡ, ಗೌಡತಿ, ಗೌಡ್ರು ಎಂಬಂತಹ ಸಿನಿಮಾಗಳು ಜಾತಿಯ ಆಧಾರದ ಮೇಲೆ ಚಲನಚಿತ್ರ ಬಂದಿವೆ. ಕೆಳಜಾತಿ ವ್ಯಕ್ತಿಗಳಲ್ಲಿ ಸಹ ಪ್ರತಿಷ್ಠೆಯ ರಾಜಕೀಯ, ಶಿಕ್ಷಣ, ಸಾಮಾಜಿಕ ಸ್ಥಾನಮಾನದ ಕಾರಣ, ಛಲವಾದಿ, ಹೊಲೆಯರ್ ಯಾದವ್ ಎಂಬಂತಹ ಹೆಸರುಗಳು ದಾಖಲೆಗಳಲ್ಲಿ ಸೇರುತ್ತವೆ. ಈ ರೀತಿಯಾಗಿ ಚಲನೆ ಮತ್ತು ಪಲ್ಲಟಗಳ ಸಾಮಾಜಿಕ ವಿಸ್ತಾರವಾದ ನೆಲೆಗಳಲ್ಲಿ ಕಂಡುಬರುತ್ತವೆ. ಮೇಲ್ಮುಖ ಚಲನೆ ಮತ್ತು ಮೇಲ್ಮುಖ ಪಲ್ಲಟಗಳು ವ್ಯಕ್ತಿನಾಮಗಳಲ್ಲಿ ಕಂಡುಬರುತ್ತಿವೆ. ಈ ರೀತಿಯಾಗಿ ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟಗಳು ಉಂಟಾಗಿವೆ. ಮೇಲೆ ಹೇಳಿದ ಶಿಕ್ಷಣ, ಜಾತಿ, ಧರ್ಮ, ಸಾಮಾಜಿಕ ಒತ್ತಡ ಮತ್ತು ಆಧುನೀಕರಣ ಈ ಎಲ್ಲಾ ಅಂಶಗಳಿಂದ ವ್ಯಕ್ತಿಗಳ ಹೆಸರುಗಳಲ್ಲಿ ಚಲನೆ ಮತ್ತು ಪಲ್ಲಟಗೊಂಡಿರುವುದನ್ನು ಕಾಣಬಹುದು.


ಹೀಗೆ ವ್ಯಕ್ತಿನಾಮಗಳ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ನೋಡಬಹುದಾಗಿದೆ. ವ್ಯಕ್ತಿಗಳ ಸಾಮಾಜಿಕತೆ, ಸಾಮಾಜಿಕ ಸ್ತರವಿನ್ಯಾಸಗಳು, ವ್ಯಕ್ತಿನಾಮಗಳ ಬಳಕೆ ನೆಲೆ ಮತ್ತು ವ್ಯಕ್ತಿನಾಮಗಳ ಚಲನೆ ಮತ್ತು ಪಲ್ಲಟಗಳಿಂದ ಸಮಾಜದಲ್ಲಿ ವ್ಯಕ್ತಿನಾಮಗಳು ವ್ಯಕ್ತಿಗಳ ಜೀವನಕ್ಕೆ ಯಾವ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತವೆ ಹಾಗೂ ವ್ಯಕ್ತಿನಾಮಗಳಿಂದ ವ್ಯಕ್ತಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಈ ಮೇಲಿನ ಎಲ್ಲ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

* * *

ಕೋಷ್ಟಕ-೧ ಸಾಮಾಜಿಕ ಸ್ತರವಿನ್ಯಾಸದಲ್ಲಿ ಕಂಡುಬರುವ ವ್ಯಕ್ತಿನಾಮಗಳು



ತಿಮ್ಮ ಎಂಬ ಹೆಸರಿನ ನಿರ್ದಿಷ್ಟ ಭಾಗಕ್ಕೆ ಗೌಡ, ಹೆಗ್ಗಡೆ, ಅಪ್ಪ ಎಂಬ ವಾರ್ಗಿಕಗಳು ಸೇರಿವೆ. ಆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಪ್ರತಿಷ್ಠೆ ಮೇಲ್ಮುಖ ಚಲನೆಯಲ್ಲಿರುತ್ತದೆ. ನಿರ್ದಿಷ್ಟ ಭಾಗದಲ್ಲಿ ತಿಮ್ಮ ಎಂದು ಮಾತ್ರ ಬಳಕೆಯಾದರೆ ಸಾಮಾಜಿಕ ಸ್ಥಾನಮಾನ ಇಳಿಮುಖಗೊಳ್ಳುತ್ತದೆ. ಕೆಳಜಾತಿ ಪಾತ್ರಗಳಲ್ಲಿ ಮಾತ್ರ ಯಾವುದೇ ವಾರ್ಗಿಕಗಳಿಲ್ಲದೇ ತಿಮ್ಮ ಎಂದು ಬಳಕೆಯಾಗಿರುತ್ತದೆ.



ಅಯ್ಯ ಎಂಬ ವಾರ್ಗಿಕಕ್ಕೆ ಬೇರೆ ಬೇರೆ ನಿರ್ದಿಷ್ಟಗಳು ಸೇರಿ ವ್ಯಕ್ತಿನಾಮಗಳು ಬಳಕೆಯಾಗುತ್ತವೆ. ಸೀತಾರಾಮಯ್ಯ, ಅನಂತಯ್ಯ, ಗಾಲೂರಯ್ಯ, ಬೆಟ್ಟಯ್ಯ, ಎಂದು ಎಲ್ಲರ ವ್ಯಕ್ತಿನಾಮಗಳಲ್ಲೂ ಅಯ್ಯ ಎಂಬ ವಾರ್ಗಿಕ ಸೇರಿಕೊಂಡಿದೆ. ಆದರೆ ಬಳಕೆಯ ನೆಲೆಯಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸ್ಥಾನಮಾನ ಒಂದೇ ಆಗಿರುವುದಿಲ್ಲ. ಅನಂತಯ್ಯನನ್ನು ಅನಂತ ಎಂದು ಎಲ್ಲೂ ಬಳಕೆ ಮಾಡುವುದಿಲ್ಲ. ಆದರೆ ಕೆಳಜಾತಿ ಪಾತ್ರಗಳಾದ ಗಾಲೂರ, ಬೆಟ್ಟ ಎಂದು ಬಳಕೆ ಮಾಡಲಾಗುತ್ತದೆ. ಆದರೆ ಅಯ್ಯ ಎಂಬ ವಾರ್ಗಿಕವನ್ನು ಬಳಕೆ ಮಾಡದಿರುವುದು ಕಂಡುಬರುತ್ತದೆ. ಹೀಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಬಳಕೆಯ ನೆಲೆಗಳನ್ನು ನಿರ್ಧರಿಸುತ್ತಿರುತ್ತವೆ.

ಕೋಷ್ಟಕ-೨ ಕೆಳಜಾತಿ ಪಾತ್ರಗಳ ಹೆಸರುಗಳು ಸಾಕು ಪ್ರಾಣಿಗೆ ಬಳಕೆಯಾಗಿರುವುದು

ಕ್ರ.ಸಂ	ಕೆಳಜಾತಿ ಪಾತ್ರಗಳ ಹೆಸರು	ಸಾಕುಪ್ರಾಣಿಗಳ ಹೆಸರು
೧.	ಹುಲಿಯಾ	ಹುಲಿಯಾ (ನಾಯಿ)
೨.	ಕಾಳ	ಕಾಳ (ಹೋರಿ)
೩.	ಕರಿಯ	ಕರಿಯ (ಕುರಿ)
೪.	ಮುನಿಯ	ಮುನಿಯ (ಕುರಿ)
೫.	ಜವರ	ಜವರ (ಕುರಿ)

ಕೋಷ್ಟಕ-೩ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳ ಚಲನೆಯ ಪಟ್ಟಿ

ಪುರುಷ	ಮಹಿಳೆ
ಸತ್ಯಪ್ರಕಾಶ್ (ಕಾ-೫)	ಕಲ್ಯಾಣಿ (ಕಾ-೮)
ಬಸವರಾಜು (ಕಾ-೭)	ಮಂಜುಳ (ಕಾ-೭)
ರಾಜ (ಕ-೩೮)	ಕಾವೇರಿ (ಚ-೧೩)
ದೇವರಾಜ (ಕಾ-೩೩)	ರಾಧ (ಚ-೧೪)
ಲಿಂಗೇಶ (ಕಾ-೩೩)	ಜ್ಯೋತಿ (ಭಾಗ್ಯಜ್ಯೋತಿ (ಚ)
ಸಿದ್ದೇಶ (ನಾ-೫೨)	ಭೂಮಿ (ನಾ-೫೧)

ಕೋಷ್ಟಕ-೪ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳ ಪಲ್ಲಟದ ಪಟ್ಟಿ

ಮೂಲ ಹೆಸರು	ಪಲ್ಲಟಗೊಂಡ ಹೆಸರು
ತಿಮ್ಮ	ಮೋಹನದಾಸ್ (ಕಾ-೪)
ಹೊನ್ನೂರ	ಹೊನ್ನೇಶ್ (ಕಾ-೪)
ಚಿಕ್‌ಯಂಗಟ	ಶೇಷಾದ್ರಿ. ಎಚ್ (ನಾ-೪೮)
ಕೊರವರ ಹನುಮಂತು	ಕೆ.ಎಚ್. ರಾವ್(ಚ-೧೮)
ಚೆನ್ನಿ	ಗಾನಶಾರದೆ(ಚ-೨೦)
ರಂಗಿ	ಭೈರವಿ (ಚ-೧೦)

ಕೋಷ್ಟಕ-೫ ಕೆಳಜಾತಿ ಪಾತ್ರಗಳ ಮತಾಂತರ ಪ್ರಕ್ರಿಯೆಯಲ್ಲಿ ಪಲ್ಲಟಗೊಂಡ ವ್ಯಕ್ತಿನಾಮಗಳ ಪಟ್ಟಿ

ಮೂಲ ಹೆಸರು	ಪಲ್ಲಟಗೊಂಡ ಹೆಸರು
ದೊಳ್ಳ	ಊರುಫ್‌ಜಾನ್ (ಕ-೪೨)
ಮಾರಿ	ಮೇರಿ(ಚ-೧೫)
ರಂಗಿ	ರೂಬಿ (ಚ-ಭಾಗ್ಯಜ್ಯೋತಿ)
ಪುಟಾರಿ	ಪೀಟರ್ (ಕಾ-೮)

ಅಧ್ಯಾಯ: ಐದು

ಸಂಕಥನಗಳು: ಅಭಿವ್ಯಕ್ತಿಯ ಕ್ರಮಗಳು

ಅಧ್ಯಾಯ: ಐದು

ಸಂಕಥನಗಳು: ಅಭಿವ್ಯಕ್ತಿಯ ಕ್ರಮಗಳು

ಸಂಕಥನಗಳು: ಅಭಿವ್ಯಕ್ತಿಯ ಕ್ರಮ

೫.೧. ಬೈಗುಳಗಳು: ಅಭಿವ್ಯಕ್ತಿಯ ಕ್ರಮ

೫.೧.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೧.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

೫.೨. ಗಾದೆಗಳು: ಅಭಿವ್ಯಕ್ತಿಯ ಕ್ರಮ

೫.೨.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

೫.೨.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಅಧ್ಯಾಯ: ಐದು

ಸಂಕಥನಗಳು: ಅಭಿವ್ಯಕ್ತಿಯ ಕ್ರಮಗಳು

ಭಾಷಿಕ ಸಂಕಥನಗಳಾದ ಬೈಗುಳ, ಗಾದೆಗಳ ಬಳಕೆಯನ್ನು ಅನುಲಕ್ಷಿಸಿ ಪಾತ್ರಗಳ ಸಾಮಾಜಿಕ ನೆಲೆಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಈ ಸಂಕಥನಗಳು ಸಾಮಾನ್ಯ ಭಾಷಿಕ ಘಟಕಗಳಾದರೂ ಬಳಕೆಯನ್ನು ನಿರ್ಬಂಧಿರುವ ನಿಷೇಧಿಸಿರುವ ಮತ್ತು ಮುಕ್ತಾಗಿರಿಸಿರುವ ಸಂದರ್ಭಗಳನ್ನು ಕಂಡುಕೊಳ್ಳುವ ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಭಾಷಾಶಾಸ್ತ್ರೀಯ ಪರಿಕಲ್ಪನೆಯಲ್ಲಿ ಸಂಕಥನವೂ ಒಂದಾಗಿದೆ. ಬೈಗುಳ, ಗಾದೆ, ನುಡಿಗಟ್ಟು, ಒಗಟು ಇವುಗಳು ಸಂಕಥನದ ಘಟಕಗಳಾಗಿವೆ. ಆದರೆ ಈ ಅಧ್ಯಾಯದಲ್ಲಿ ಬೈಗುಳ ಮತ್ತು ಗಾದೆಗಳನ್ನು ಕುರಿತು ಮಾತ್ರ ಚರ್ಚಿಸಲಾಗಿದೆ. ಬೈಗುಳ ಮತ್ತು ಗಾದೆಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿಯ ಪಾತ್ರಗಳು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳ ಮೂಲಕ ಅಭಿವ್ಯಕ್ತಗೊಂಡಿರುವ ಕ್ರಮ ಕುರಿತು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ.

ಸಂಕಥನದ ನಿಷ್ಪತ್ತಿಯನ್ನು ಕುರಿತು ಹೇಳಿರುವುದನ್ನು ಈ ಕೆಳಗೆ ಗಮನಿಸಬಹುದು. "ಸಂಸ್ಕೃತದ 'ಸಂಕಥನ' ಪದಕಟ್ಟನ್ನು ಬಿಡಿಸಿ ನೋಡಿದರೆ 'ಸಂ-ಕಥನ'ಗಳಿರುವುದು ತಿಳಿಯುತ್ತದೆ. 'ಕತೆ' ಎನ್ನುವ ಪದವು ಬಹಳ ಹಿಂದಿನಿಂದಲೇ ಕನ್ನಡ ಜನಬದುಕಿನಲ್ಲಿ ಬಳಕೆಯಲ್ಲಿದೆ. ಕತೆ ಹೇಳು, ಕತೆಗಳು, ಕತೆಕಟ್ಟು ಎನ್ನುವ ಬಳಕೆಯಲ್ಲಿ 'ಕತೆ'ಯಾಗಿ ಕನ್ನಡವೇ ಆಗಿ ಹೋಗಿವೆ. ಆದರೆ, ಕನ್ನಡದಲ್ಲಿ 'ಕಥನ' ಎನ್ನುವ 'ಸಂಸ್ಕೃತ' ಪದವನ್ನು ಸಾಹಿತ್ಯ ಬರೆಹಗಳಲ್ಲಿ, ಸಾಹಿತ್ಯ ಬರೆಹದ ಓದು ಮತ್ತು ಚರ್ಚೆಗಳ ಸನ್ನಿವೇಶದಲ್ಲಿ ಬಳಕೆಗೆ ತಂದುಕೊಂಡಿರುವುದು ಕಂಡುಬರುತ್ತದೆ. 'ಕಥನ'ವನ್ನು ಹೇಳುವಿಕೆ, ಅಥವಾ ನಿರೂಪಣೆ ಎನ್ನುವ ಅರ್ಥದಲ್ಲಿ ಬಳಸಲಾಗಿದೆ. 'ಸಾಹಿತ್ಯ ಕಥನ', 'ಅನುಭವ ಕಥನ', 'ಸಾಮಾಜಿಕ ಕಥನ' ಎನ್ನುವ ಪದಗಟ್ಟುಗಳ ಬಳಕೆಯಲ್ಲಿ ಇದನ್ನು ನೋಡಬಹುದು. ಪದಕ್ಕೆ ಬದಲಿಯಾಗಿ 'ಕಥನ'ವನ್ನು ಬಳಸುತ್ತಿರುವುದು. ಅಂದರೆ, 'ಕಟ್ಟಿ ಹೇಳಿದ ಕತೆ' ಎನ್ನುವ ತಿರುಳನ್ನೇ ಇದೂ ಕೂಡ ಹೇಳುತ್ತಿರುವುದು.

'ಸಂ' ಎನುವುದು 'ಕಥನ'ದ ಹಿನ್ನೋಟದಂತೆ ಕಾಣುತ್ತಿದ್ದರೂ ಅದನ್ನು 'ಸಂಯೋಜಿಸಿ/ಜೋಡಿಸಿ/ಕಟ್ಟಿಹೇಳುವ ಎಂಬ ತಿರುಳಿನಲ್ಲಿ ಬಳಸಿರುವುದು ತಿಳಿಯುತ್ತದೆ. ನಿಖರವಾಗಿ/ಚನ್ನಾಗಿ/ತಿಳಿಯುವಂತೆ/ಅರಿಯುವಂತೆ ಕಟ್ಟಿಹೇಳಿರುವುದನ್ನು ಸೂಚಿಸುವುದು ಇದರ ಗುರಿಯಾಗಿದೆ. ಹೀಗಾಗಿ ಹಲವು ಬಗೆಯ ಕಲ್ಚರಲ್ ಚರ್ಚೆಯ ಅರಿವುಗಳ ಕಟ್ಟಿನ ನಿಕರತೆಯನ್ನು ಹಿಡಿದುಕೊಡುವ ಪದಕಟ್ಟಾಗಿ ಬಳಸಬೇಕೆಂಬ ಒತ್ತಾಯವು 'ಕಟ್ಟಿದರಿವು(ಸಂಕಥನ)' ಎದ್ದು ಕಾಣುತ್ತದೆ. 'ಸಂಕಥನ' ಈ ಪದವನ್ನು ಬಹುಮಟ್ಟಿಗೆ ಮೊದಲು ಕನ್ನಡದಲ್ಲಿ ಬಳಕೆಗೆ ತಂದವರು, ಇಂಗ್ಲಿಶ್ ಮೇಷ್ಟ್ರುಗಳು. ಅದಕ್ಕೆ ಕಾರಣವು ಇದೆ. ಇಂಗ್ಲಿಶ್‌ನ ಡಿಸ್ಕೋರ್ಸ್ ಪದದ ಕನ್ನಡ ರೂಪ ಸಂಕಥನ. ಹಾಗೆಂದು ಎಲ್ಲ ಇಂಗ್ಲಿಶ್ ಮೇಷ್ಟ್ರುಗಳು ಇಂಗ್ಲಿಶ್‌ನ ಡಿಸ್ಕೋರ್ಸ್‌ನ್ನು ಕನ್ನಡೀಕರಿಸಿಲ್ಲ. ಇಂಗ್ಲಿಶ್ ಮತ್ತು ಕನ್ನಡ ಬಲ್ಲ ಮೇಷ್ಟ್ರುಗಳು ಈ ಕೆಲಸ ಮಾಡಿದ್ದಾರೆ(ಚಂದ್ರಪೂಜಾರಿ (ಸಂ) ಸಾಮಾಜಿಕ ಮತ್ತು ಮಾನವಿಕ ಅಧ್ಯಯನಗಳ ಪರಿಭಾಷಾಕೋಶ, (ಲೇಖನ. ಸಂಕಥನ–ಕಟ್ಟಿದರಿವು, ಚಲಪತಿ ಆರ್, ಪುಟ–೨೩೧) ಈ ಮೇಲಿನ ಉದಾಹರಣೆಯಲ್ಲಿ ಸಂಕಥನದ ನಿಷ್ಪತ್ತಿ ಮತ್ತು ಕನ್ನಡಕ್ಕೆ ಬಂದ ಸಂದರ್ಭವನ್ನು ತಿಳಿಸಲಾಗಿದೆ.

ಸಂಕಥನವನ್ನು ಭಾಷಾಶಾಸ್ತ್ರದ ದೃಷ್ಟಿಕೋನದಿಂದ ಮಹಾದೇವಯ್ಯ ಪಿ. ಅವರು ಕನ್ನಡ ನುಡಿ ಬಳಕೆಯ ನೆಲೆಗಳು ಎಂಬ ಪುಸ್ತಕದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಕನ್ನಡದಲ್ಲಿ ಕಥನ, ಸಂಕಥನ ಪದಗಳೆರಡು ಬಳಕೆಯಲ್ಲಿವೆ. ಸಂಕಥನ ಎನ್ನುವುದು ಭಾಷಾಶಾಸ್ತ್ರೀಯ ಪರಿಕಲ್ಪನೆಯಾಗಿದೆ. ಪ್ರಸಿದ್ಧ ಭಾಷಾತಜ್ಞ ಫರ್ಡಿನಾಂಡ್ ಡಿ. ಸಸ್ಸೂರ್ ಲಾಂಗ್(Langue) ಮತ್ತು ಪರೋಲ್ (parole) ಎಂಬುದಾಗಿ ಭಾಷೆಯನ್ನು ವರ್ಗೀಕರಿಸಿದ್ದಾನೆ. ಈ ಸ್ವರೂಪದ ಭಾಷೆಯಲ್ಲಿ ಎರಡು ನೆಲೆಗಳಿರುತ್ತವೆ. ಒಂದು : ಒಳನೆಲೆ. ಅಂದರೆ ನುಡಿಯ ಎಲ್ಲ ಚಹರೆಗಳು ಒಳಗೊಂಡಿರುತ್ತದೆ. ಇದನ್ನೇ 'ಲಾಂಗ್' ಎಂದು ಕರೆದಿರುವುದು. ಎರಡನೆಯ ನೆಲೆ ಹೊರನೆಲೆ. ಇಲ್ಲಿ ಎಲ್ಲ ನುಡಿ ಚಟುವಟಿಕೆಗಳು ಒಳಗೊಂಡಿರುತ್ತದೆ. ಇದನ್ನೇ 'ಪರೋಲ್' ಎಂದು ಕರೆಯಲಾಗಿದೆ. ಇದು ನಿಯಮಾನುಸಾರವಾಗಿ ನಡೆಯುವ ವ್ಯಕ್ತಿಗತ ಉಚ್ಚಾರಣೆಯಾಗಿದೆ.

'ಪರೋಲ್' ಎಂಬುದು 'ಲಾಂಗನ್ನೇ' ಅನುಸರಿಸಿ ಬರುತ್ತದೆ. ಭಾಷೆಯಲ್ಲಿ ವಾಕ್ಯವೊಂದನ್ನು ಅಥವಾ ಸಂಜ್ಞೆಗಳನ್ನು ಭಾಷಾ ಸಂಕಥನವನ್ನು ಸಂಕಥನಕ್ಕೆ ಅಥವಾ ಸಂದೇಶಗಳಿಗೆ(message) ಬಳಸಬೇಕೆಂದಿದ್ದಲ್ಲಿ ಸಂಕಥನವನ್ನು 'ಸಂಗತಿ' ಎಂದು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ 'ಲಾಂಗ್' ಮತ್ತು 'ಪರೋಲ್' ಎಂಬ ಮಾದರಿಗಳ ಹಿನ್ನೆಲೆಯಲ್ಲೇ 'ಸಂಕಥನ' ರೂಪಗೊಂಡಿದೆ. ಭಾಷೆಯಲ್ಲಿ ಸಂಕಥನದ ಕನಿಷ್ಟ ಘಟಕ ವಾಕ್ಯವಾಗಿರುತ್ತದೆ. ಭಾಷೆಯಲ್ಲಿನ ವಾಕ್ಯರಚನೆ ಸಂಗತಿ ಮತ್ತು ಅರ್ಥವನ್ನು ಒಳಗೊಂಡಿರುತ್ತದೆ.

'ಸಂಕಥನ' ಎಂದರೆ ಭಾಷೆಯ ಸಂದರ್ಭದಲ್ಲಿ ಮಾತುಕತೆ ಎಂದರ್ಥ. 'ಸಂಕಥನ' ಎಂದರೆ ಒಂದು ನಿರ್ದಿಷ್ಟ ವಿಷಯ, ಸಂಗತಿಯನ್ನು ಕುರಿತು ಹೆಚ್ಚು ಜನರು ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಸುವ ಮಾತುಕತೆಯನ್ನು 'ಸಂಕಥನ' ಎನ್ನುತ್ತಾರೆ. ಜನಪದರು ತಮ್ಮ ಅನುಭವಗಳನ್ನು ನಿರೂಪಿಸುವುದೇ ಮಾತುಕತೆ ಮೂಲಕ ಹಾಗಾಗಿ ಜನಪದರು ಸಂಗತಿಗಳನ್ನು ವಿವರಿಸುವ, ಅಭಿವ್ಯಕ್ತಿಸುವ ಅಥವಾ ಪ್ರತಿನಿಧಿಸುವ ಜಗತ್ತು ವಿಶಿಷ್ಟವಾಗಿದೆ.

'ಸಂಕಥನ' ಎಂದರೆ ಮಾತುಕತೆ ಇಲ್ಲವೇ ನಿರೂಪಣೆಗಳ ಸ್ವರೂಪದಲಿರುತ್ತವೆ. ಇಂತಹ ನಿರೂಪಣೆಗಳು ಕಾಲಬದ್ಧವಾಗಿಯೂ, ಸಮಕಾಲೀನ ಸಂದರ್ಭವನ್ನು ಪ್ರತಿನಿಧೀಕರಿಸುವವು ಎಂದು ತಿಳಿಯಲಾಗಿದೆ. ಅಂದರೆ ಜನಪದರು ಯಾವಾಗಲೂ ಭಾಷಾನಿಯಮಗಳು ವಾಸ್ತವವೂ, ಕಾಲಾತೀತವಾಗಿಯೂ ನಿರೂಪಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ(ಮಹಾದೇವಯ್ಯ ಪಿ, ಕನ್ನಡ ನುಡಿ ಬಳಕೆಯ ನೆಲೆಗಳು, ಪುಟ-೩೮-೩೯).

ಈ ಮೇಲಿನ ಉದಾಹರಣೆಯಲ್ಲಿ ಸಂಕಥನವನ್ನು ಭಾಷಾಶಾಸ್ತ್ರೀಯ ಹಿನ್ನೆಲೆಯಲಿ ವಿವರಿಸಲಾಗಿದೆ. ಸಂಕಥನ ಬೈಗುಳ, ಗಾದೆ, ಒಗಟು, ನುಡಿಗಟ್ಟು ಎಂಬ ಘಟಕಗಳನ್ನು ಒಳಗೊಂಡಿರುತ್ತದೆ. ಜನಪದರು ಇವುಗಳನ್ನು ಒಂದು ನಿರ್ದಿಷ್ಟ ವಿಷಯ, ಸಂಗತಿಯನ್ನು ಕುರಿತು ನಿದಿಷ್ಟ ಉದ್ದೇಶಕ್ಕಾಗಿ ಬಳಸುತ್ತಾರೆ. ಇವುಗಳ ಕಾಲಬದ್ಧವಾಗಿಯೂ, ಸಮಕಾಲೀಕ ಸಂದರ್ಭವನ್ನು ಪ್ರತಿನಿಧಿಕರೀಸುತ್ತಿರುತ್ತವೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಲಿಂಗ, ವಯಸ್ಸು, ವರ್ಗ ಮುಂತಾದ ಅಂಶಗಳನ್ನು ಒಳಗೊಂಡು ಸಂಕಥನಗಳನ್ನು ಬಳಕೆ ಮಾಡಲಾಗುತ್ತದೆ. ಇಲ್ಲಿ ಮುಖ್ಯವಾಗಿ ಬೈಗುಳ ಮತು ಗಾದೆಗಳನ್ನು ಮಾತ್ರ ಕುರಿತು ಚರ್ಚಿಸಲಾಗಿದೆ.

ಬೈಗುಳ ಮತ್ತು ಗಾದೆಗಳಲ್ಲಿ ಜಾತಿ, ಲಿಂಗ, ವರ್ಗ ಮುಂತಾದ ಅಂಶಗಳನ್ನು ಬಳಸಿ ಜನರು ಅಭಿವ್ಯಕ್ತಿಸುತ್ತಾರೆ. ಬೈಗುಳ ಮತ್ತು ಗಾದೆಗಳಲ್ಲಿ ದಲಿತ ಮತ್ತು ದಲಿತೇತರ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ನೋಡಲಾಗಿದೆ. ಮೇಲ್ಜಾತಿಯವರು ಕೆಳಜಾತಿಯವರಿಗೆ ಯಾವ ರೀತಿಯ ಬೈಗುಳ ಮತ್ತು ಗಾದೆಗಳನ್ನು ಬಳಸುತ್ತಾರೆ? ಕೆಳಜಾತಿಯವರು ಮೇಲ್ಜಾತಿಯವರಿಗೆ ಬಳಸಲಾದ ಬೈಗುಳ ಮತು ಗಾದೆಗಳು ಯಾವುವು? ಯಾವ ಉದ್ದೇಶಕ್ಕಾಗಿ ಈ ರೀತಿಯ ಸಂಕಥನಗಳು ಬಳಕೆಗೊಂಡಿವೆ? ಬಳಕೆಗೊಂಡಿರುವ ಸಂದರ್ಭ ಯಾವುದು ಎಂಬುದನ್ನು ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ.

ಸಮಾಜದಲ್ಲಿ ಬಳಕೆಯಲ್ಲಿರುವ ಬೈಗುಳ ಮತ್ತು ಗಾದೆಗಳು ಕೆಲವು ಸೃಜನಶಿಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿಯೂ ಬಳಕೆಗೊಂಡಿವೆ. ಇವುಗಳಿಂದ ಬೈಗುಳ ಮತು ಗಾದೆಗಳು ಹೇಗೆ ಸಾಮಾಜಿಕ ಸೂಚಕವಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಉದಾಹರಣೆಗೆ 'ದನಾ ತಿನ್ನೋ ಸೂಳೆ ಮಕ್ಳು, ಚಾಂಡಾಲ ನನ್ಮಗ, ಮಾದಿಗ ಸೂಳೆಮಗ,

ಮಾದರ್ ಚೋದ್ ಲೌಡಿ, ಹೊಲೆಸೂಳೆಮಗ' ಎಂಬಂತಹ ಬೈಗುಳಗಳು ಹಾಗೆಯೇ "ದನಾ ತಿನ್ನುವವನಿಗೆ ಗೊಬ್ಬರದ ಆಣೆ, ಹೊಟ್ಟೆಹೊಲ್ಯಾರ ಮನಿ ಹೋಗಿಸಿತಂತೆ ಬಿಳಿಯ ಮಾದಿಗ, ಕರಿಯ ಬ್ರಾಹ್ಮಣ ಜಾತಿಯನ್ನು ನಂಬಬಾರದು, ಸತ್ತವ್ರು ಹೆಣಕ್ಕೆ ಅತ್ರೆ, ಹಲಿಗೆವ್ರು ಹಣಕ್ಕೆ ಅತ್ರಂತೆ" ಎಂಬಂತಹ ಗಾದೆಗಳು ಸಮಾಜದಲ್ಲಿ ಕಂಡುಬರುತ್ತವೆ. ಈ ಬೈಗುಳ ಮತ್ತು ಗಾದೆಗಳು ಏಕೆ ಪದೇ ಪದೇ ಬಳಕೆಯಾಗುತ್ತಿವೆ? ಯಾವ ಸಂದರ್ಭವನ್ನು, ಯಾರನ್ನು ಕುರಿತು ಹೇಳುತ್ತಿವೆ? ಎಂಬ ಪ್ರಶ್ನೆಗಳು ಬಹಳ ಮುಖ್ಯವಾದ ಪ್ರಶ್ನೆಗಳಾಗಿವೆ. ಈ ರೀತಿಯ ಬೈಗುಳ ಮತ್ತು ಗಾದೆಗಳು ಕನ್ನಡದ ಸಂದರ್ಭದಲ್ಲಿ ಹುಟ್ಟಿಕೊಳ್ಳಲು ಕಾರಣಗಳೇನು? ಈ ಸಂದರ್ಭಗಳು ಯಾರನ್ನು ಪ್ರತಿನಿಧಿಸುತ್ತಿವೆ? ಎಂಬುದನ್ನು ಈ ಅಧ್ಯಾಯದಲ್ಲಿ ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ.

೫.೧. ಬೈಗುಳ : ಅಭಿವ್ಯಕ್ತಿಯ ಕ್ರಮ

ಸಮಾಜದಲ್ಲಿ ಜನರು ಬೈಗುಳಗಳನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಬೈಯ್ಯುವ, ಬೈಯ್ಯಿಸಿಕೊಳ್ಳುವ ಅಥವಾ ಕೇಳಿಸಿಕೊಳ್ಳುವ ಕ್ರಿಯೆಯಲ್ಲಿ ಭಾಗಿಯಾಗಿರುತ್ತಾರೆ. ಬೈಗುಳವೂ ಸಹ ಅವರ ಮಾತಿನ ಶೈಲಿಯ ಒಂದು ಭಾಗವಾಗಿದೆ. ಸಮಾಜದಲ್ಲಿ ಯಾವುದೇ ವರ್ಗಕ್ಕೆ ಸೇರಿದ ವ್ಯಕ್ತಿಯಾಗಲಿ ಅಂದರೆ ಅಕ್ಷರಸ್ಥರಾಗಲಿ ಅಥವಾ ಅನಕ್ಷರಸ್ಥರಾಗಲಿ, ಬಡವರಾಗಲಿ ಅಥವಾ ಶ್ರೀಮಂತರಾಗಲಿ, ಕೆಳಜಾತಿಯವರಾಗಲಿ ಅಥವಾ ಮೇಲ್ಜಾತಿಯವರಾಗಲಿ, ಹಳ್ಳಿಯವರಾಗಲಿ ಅಥವಾ ನಗರದವರಾಗಲಿ ಒಟ್ಟಿನಲ್ಲಿ ಸಮಾಜದ ಯಾವುದೇ ವರ್ಗಕ್ಕೆ ಸೇರಿದವರಾಗಿರಲಿ ತಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಹಲವಾರು ಬಗೆಯ ಬೈಗುಳಗಳನ್ನು ಬಳಸಿರುತ್ತಾರೆ, ಬೈಗುಳಗಳಿಗೆ ಒಳಗಾಗುತ್ತಾರೆ ಅಥವಾ ಕೇಳಿಸಿಕೊಂಡಿರುತ್ತಾರೆ.

ಇಲ್ಲಿ ಬೈಗುಳಗಳು ಬಳಕೆಯಾಗುವ ಉದ್ದೇಶ, ಸಂದರ್ಭ ಬಹಳ ಮುಖ್ಯವಾಗಿರುತ್ತದೆ. ಆ ಬೈಗುಳಗಳನ್ನು ಆಡುವ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು, ನಡವಳಿಕೆಗಳು, ಕಟ್ಟುಪಾಡುಗಳು ಮತ್ತು ಅವರ ಬದುಕಿನ ಮೌಲ್ಯಗಳು ಕಂಡುಬರುತ್ತವೆ. ಬೈಗುಳಗಳು ಜನರ ಮನಸ್ಸಿನಿಂದ ನೇರವಾಗಿ ಹೊರಬೀಳುವ ನುಡಿಗಳು. ಅತ್ಯಂತ ತೀಕ್ಷ್ಣವಾದ ಪರಿಣಾಮವನ್ನುಂಟು ಮಾಡುವಂತಹ ಶಕ್ತಿಯನ್ನು ಪಡೆದಿರುತ್ತವೆ. ಬೈಗುಳಗಳು ಬಹುತೇಕ ಸಂದರ್ಭಗಳಲ್ಲಿ ಹಲವು ವಿಧವಾದ ಪರಿಣಾಮವನ್ನುಂಟು ಮಾಡುತ್ತವೆ. ವ್ಯಕ್ತಿಯ ಮನಸ್ಸಿನ ಆಕ್ರಮಣಶೀಲತೆಯಿಂದ ಕೂಡಿದ ರೋಷ, ಮಾತ್ಸರ್ಯ, ವ್ಯಂಗ್ಯ, ಅಸೂಯೆ, ಸಂಕಟ, ಭೀತಿಯಿಂದ ಬೈಗಳುಗಳು ಬಳಕೆಗೊಳ್ಳುತ್ತವೆ. ಮತ್ತು ತಮಾಷೆಗೆ ಸಲುಗೆಯಿಂದ ಆತ್ಮೀಯರೊಡನೆಯೂ ಸಹ ಬೈಗುಳಗಳನ್ನು ಬಳಸುತ್ತಾರೆ. ಆದರೆ ಈ ರೀತಿಯ ಬೈಗುಳಗಳು ಯಾವುದೇ ರೀತಿಯ ಬೇಸರ, ಕೋಪ, ಅಸೂಯೆ, ವ್ಯಂಗ್ಯದ ಭಾವನೆಗಳಿಂದ ಕೂಡಿರುವುದಿಲ್ಲ ಎಂದು ಹೇಳಬಹುದು.

ಬೈಗುಳದ ಪದ ನಿಷ್ಪತ್ತಿಯನ್ನು ಸಿ.ಪಿ. ನಾಗರಾಜ ಅವರ 'ಕನ್ನಡ ಬಯ್ಗುಳಗಳ ಅಧ್ಯಯನ' ಎಂಬ ಎಂ.ಫಿಲ್ ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧದಲ್ಲಿ ಕಾಣಬಹುದು ಅದು ಈ ಕೆಳಗಿನಂತಿದೆ.

"ಬಯ್ಗುಳ್, ಬಯಿಗಳ್, ಬಯಿಗುಳ್, ಬಯ್ಗುಳು, ಬಯ್ಗುಳ, ಬಯ್ಗುಳು, ಬೈಗಳು, ಬೈಗುಳ್, ಬೈಗಳ" ಎಂಬ ಪದಗಳನ್ನು ನೀಡಿ, ಇವುಗಳನ್ನು ನಾಮಪದವೆಂದು ಗುರುತಿಸಿ ಜರಿಯುವಿಕೆ, ನಿಂದೆ, ತೆಗಳಿಕೆ" ಎಂಬ ಮೂರು ಅರ್ಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ದಾಖಲುಗೊಳಿಸಿದೆ.

"ಬಯಿಗಳ್, ಬಯಿಗುಳ್, ಬಯ್ಗಳ್, ಬಯ್ಗುಳ್, ಬಯ್ಗಳು, ಬಯ್ಗುಳು, ಬೋಗುಳ" ಎಂಬ ಪದಗಳನ್ನು ಕಿಟೆಲ್ ಕೋಶದಲ್ಲಿ ನೀಡಿ, 'ಶಾಪ, ಆಕ್ರೋಶ, ಆಕ್ಷೇಪ, ಕ್ಷಾರಣೆ, ಸೋಲ್ಲುಣ್ಣು, ಸೋತ್ಪ್ರಾಸ, ಸೋಪಹಾಸ, ಪರಿಗ್ರಹ, ಗಾಳಿಮಾತು, ತಿಟ್ಟು, ಚುನ್ನ" ಎಂಬ ಅರ್ಥಗಳನ್ನು ಕೊಡಲಾಗಿದೆ. "reviling, abuse, bad, language, cursing ಎಂಬ ಇಂಗ್ಲಿಷನ ಪದಗಳನ್ನು ನಮೂದಿಸಿದ್ದಾರೆ. (ನಾಗರಾಜ ಸಿ.ಪಿ., ಕನ್ನಡ ಬಯ್ಗುಳಗಳ ಅಧ್ಯಯನ, ಪುಟ–೨೧)

ಬೈಗುಳದ ನಿಷ್ಪತಿಯನ್ನು ಸಾಹಿತ್ಯ ಪರಿಷತ್ತಿನ ನಿಘಂಟು ಮತ್ತು ಕಿಟೆಲ್ ಕೋಶದಲ್ಲಿ ಈ ರೀತಿಯಾಗಿ ಹೇಳೀದ್ದಾರೆ ಎಂದು ಸಿ.ಪಿ. ನಾಗರಾಜು ಅವರು ದಾಖಲಿಸಿದ್ದಾರೆ.

ಯಾವುದೇ ವಸ್ತುವನ್ನಾಗಲಿ, ಸಂಗತಿಯನ್ನಾಗಲಿ, ವ್ಯಕ್ತಿಯನ್ನಾಗಲಿ ತೆಗಳುವುದಕ್ಕಾಗಿ, ವ್ಯಂಗ್ಯಮಾಡುವುದಕ್ಕಾಗಿ, ಮೂದಲಿಸುವುದಕ್ಕಾಗಲಿ, ನೋಯಿಸುವುದಕ್ಕಾಗಿ, ಕೇಡು ತಟ್ಟಲೆಂದು ಶಪಿಸುವುದಕ್ಕಾಗಿ ಆಡುವ ನುಡಿ ಆಕರಗಳನ್ನು ಬೈಗುಳ ಎಂದು ಕರೆಯುತ್ತಾರೆ. ಉದಾಹರಣೆಗೆ ಇದರ ಮನೆ ಹಾಳಾಗ್ಲೋ, ಆ ಹೊಲೆಯ ಲೌಡಿಮಗನ ಸೊಕ್ಕುನೋಡು, ನನ್ನ ಸವತಿ, ತಾಟಗಿತ್ತಿ, ನೀಚಲೌಡಿಮಗ, ಲೋಫರ್ ನನ್ ಮಗ ಎಂದು ಈ ರೀತಿಯಾಗಿ ಬೈಗುಳ ಬಳಕೆಗೊಳ್ಳುವುದನ್ನು ಕಾಣಬಹುದು.

ಈ ಅಧ್ಯಾಯದಲ್ಲಿ ಬೈಗುಳಗಳನ್ನು ನೋಡುವ ಕ್ರಮ ಯಾವುದೆಂದರೆ ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಬೈಗುಳ, ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ, ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಬೈಗುಳಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿ ಆಯಾಮದಿಂದ ನೋಡಲಾಗಿದೆ.

ಬೈಗುಳಗಳ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನು ತಿಳಿದುಕೊಳ್ಳಬಹುದಾಗಿದೆ. ಇಲ್ಲಿ ಮುಖ್ಯವಾಗಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಬಳಸಿರುವ ಬೈಗುಳಗಳನ್ನು

ಮುಖ್ಯವಾಗಿಟ್ಟುಕೊಂಡು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ.

೫.೧.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

ಬೈಗುಳಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎರಡೂ ರೀತಿಯಲ್ಲೂ ಬಳಕೆಯಾಗುತ್ತವೆ. ಜಾತಿ ಕೇಂದ್ರಿತ, ಲಿಂಗಕೇಂದ್ರಿತ, ವರ್ಗಕೇಂದ್ರಿತ ಬೈಗುಳಗಳನ್ನು ಕಾಣಬಹುದಾಗಿದೆ. ಸಮಾಜದಲ್ಲಿ ಏಕೆ ಜಾತಿ ಕೇಂದ್ರಿತ, ಲಿಂಗಕೇಂದ್ರಿತ, ವರ್ಗಕೇಂದ್ರಿತ ಬೈಗುಳಗಳನ್ನು ಬಳಸುತ್ತಾರೆ? ಬೈಗುಳಗಳನ್ನು ಬಳಸುವವರ ಉದ್ದೇಶವೇನಾಗಿರುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಬೈಗುಳಗಳು ಜಾತಿ ಸೂಚಕವಾಗಿ ಮುಖ್ಯವಾಗಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳಗಳನ್ನು ಕೇಂದ್ರವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಪುರುಷರು ಮಹಿಳೆಯರಿಗೆ, ಮಹಿಳೆಯರು ಪುರುಷರಿಗೆ ಬೈಯ್ಯುವ ಬೈಗುಳಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿರುವುದಿಲ್ಲ. ಕೆಲವು ಉದಾಹರಣೆಗಳ ಮೂಲಕ ಬೈಗುಳಗಳ ಅಭಿವ್ಯಕ್ತಿಯ ಕ್ರಮವನ್ನು ಚರ್ಚಿಸಲಾಗಿದೆ.

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಬೈಗುಳಗಳನ್ನು ಈ ಕೆಳಗಿನಂತೆ ನೋಡಬಹುದು. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ತಿಮ್ಮಪ್ಪ ಹೆಗ್ಗಡೆ, ಕೆಳಜಾತಿಯವರಿಗೆ ಬೈಯ್ಯುವುದು ಈ ರೀತಿಯಾಗಿದೆ. "ತಾಳ್ಮೆಗೆಟ್ಟು ಸಿಟ್ಟೇರಿದ ತಿಮ್ಮಪ್ಪ ಹೆಗ್ಗಡೆಯ ಅಬ್ಬರದ ಕೂಗು : "ಯಾರೂ ಇಲ್ಲೇನ್ರೋ ಕೇರೀಲಿ? ಎಲ್ಲ ಸುಟ್ಟು ನಾಶನ ಆದ್ರೇನೋ? ಏ ಮಂಜಾ! ಏ ತಿಮ್ಮಾ! ಏ ಸಿದ್ದಾ! ಏ ಸಣ್ಣಾ! ನಿಮ್ಮ ಗಂಟ್ಲೆಲ್ಲಾ ಕಟ್ಟಿಹೋಗಾ! ಓಕೊಳ್ಳಾಕೆ ಏನಾಗಿದ್ರೋ! ಹೊಲೆಸೂಳೆಮಕ್ಳಾ!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ- ೯೬) ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಮೇಲ್ಜಾತಿ ತಿಮ್ಮಪ್ಪ ಹೆಗ್ಗಡೆ ಕೆಳಜಾತಿ ಪಾತ್ರಗಳನ್ನು ಬೈಯ್ಯುತ್ತಿರುವುದು ತಿಳಿಯುತ್ತದೆ. ಕೆಳಜಾತಿ ಪಾತ್ರಗಳಿಗೆ ಶಾಪ ಹಾಕುತ್ತಾ, ಅವರ ಜಾತಿಯನ್ನು ಬೈಯ್ಯುತ್ತಿದ್ದಾನೆ. ಏಕೆ ಬೈಯ್ಯುತ್ತಿದ್ದಾನೆ ಎಂದರೆ ಕೆಳಜಾತಿಯವರು ಸಮಯ ಆಗಿದ್ದರೂ ಯಾರೂ ಸಹ ಗದ್ದೆ ಕೆಲಸಕ್ಕೆ ಹೋಗುವುದಿಲ್ಲ ಅದಕ್ಕಾಗಿ ಅವರನ್ನು ಕೆಲಸಕ್ಕೆ ಕರೆಯಲು ಬಂದಿರುತ್ತಾನೆ. ತಿಮ್ಮಪ್ಪ ಹೆಗ್ಗಡೆಯ ಮಾತು ಕೇಳಿದರೂ ಯಾರು ಮಾತನಾಡುವುದಿಲ್ಲ. ಆದ್ದರಿಂದ ತಾಳ್ಮೆಗೆಟ್ಟು, ಸಿಟ್ಟಿಗೇರಿ ಬೈಯ್ಯುತ್ತಾನೆ. 'ನಿಮ್ಮ ಗಂಟ್ಲೆಲ್ಲಾ ಕಟ್ಟಿಹೋಗಾ' ಎಂದು ಶಾಪ ಹಾಕುತ್ತಾ? ಓಕೊಳ್ಳಾಕೆ ಏನಾಗಿದ್ರೋ! ಹೊಲೆಸೂಳೆಮಕ್ಳಾ! ಎಂದು ಜಾತಿ ಮತ್ತು ಲಿಂಗ ಕೇಂದ್ರಿತವಾದ ಬೈಗುಳವನ್ನು ಬಳಸುತ್ತಾನೆ. ಕೆಳಜಾತಿ ಮತ್ತು ಅವರ ತಾಯಿಯನ್ನು ಕುರಿತು ಬೈಯ್ಯುತ್ತಾನೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಅವರ ಜಾತಿ ಹಿಡಿದು ಸಹಜವಾಗಿಯೇ ಬೈಯ್ಯುತ್ತಾರೆ. ಹೊಲೆಯ, ಮಾದಿಗ, ಕೊರವ ಇನ್ನೂ ಮುಂತಾದ ಜಾತಿಗಳ ಹೆಸರನ್ನು ಹಿಡಿದು ಬೈಯ್ಯುವುದನ್ನು ಕಾಣಬಹುದು. ಜಾತಿಯಲ್ಲಿ

ಕೀಳು ಮತ್ತು ಅವರ ತಾಯಿ ಸೂಳೆ ಎಂಬ ಅರ್ಥವನು ಸೂಚಿಸುತ್ತದೆ. ಆದರೆ ಕೆಳಜಾತಿಯವರು ಮೇಲ್ಜಾತಿಯವರ ಜಾತಿಯನ್ನು ಹಿಡಿದು ಬೈಯ್ಯುವುದು ವಿರಳವೆಂದೆ ಹೇಳಬಹುದು. ಬೈಯ್ಯುವವರ ಮನೋಧೋರಣೆ ಏನಾಗಿದೆ ಎಂಬುದನ್ನು ಸೂಚಿಸುವುದರ ಜೊತೆಗೆ ಕೆಳಜಾತಿಯವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಈ ಬೈಗುಳ ಸೂಚಿಸುತ್ತದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೇ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳಗಳನ್ನು ನೋಡಬಹುದು. ಮೇಲ್ಜಾತಿಯ ಸುಬ್ಬಣ್ಣ ಹೆಗ್ಗಡೆ ಕೆಳಜಾತಿ ಪಾತ್ರಗಳಿಗೆ ಈ ರೀತಿಯಾಗಿ ಬೈಯ್ಯುತ್ತಾನೆ. "ಇಂದೇನು ಇಷ್ಟ ಜನಬಟ್ಟೇ ಕೆಲಸಕ್ಕೆ ಬಂದಾರಲ್ಲಾ ಅಂತಿದ್ದೆ? ಈಗ ಗೊತ್ತಾತು! ಬಾಡು ಸಿಗ್ತದೆ ಪಾಲಿಗೆ ಅಂತಾ ಬಿಡಾರನೆಲ್ಲ ಖಾಲಿಮಾಡಿ ಬಂದೀರಿ ಅಲ್ಲೇನ್ರೋ, ಕಳ್ಳಸೂಳೆ ಮಕ್ಕಳ್ರಾ?" ಎಂದು ಬಯ್ದು ಮತ್ತೇ ಗಂಭೀರವಾಗಿ ಆಜ್ಞೆಮಾಡಿದರು!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೦೦) ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿಯ ಸುಬ್ಬಣ್ಣ ಹೆಗ್ಗಡೆ ಅವರು ಕೆಳಜಾತಿ ಪಾತ್ರಗಳಿಗೆ 'ಕಳ್ಳಸೂಳೆ ಮಕ್ಕಳ್ರಾ' ಎಂದು ಬೈಯ್ಯುತ್ತಿದ್ದಾರೆ. ಇವರಿಗೆ ಬೈಯ್ಯಬೇಕೋ ಬೇಡವೋ ಎಂದು ಆಲೋಚಿಸುವುದಿಲ್ಲ. ಸಹಜವಾಗಿಯೇ ಲೌಡಿಮಕ್ಕಳ್ಳಿರಾ, ದುಣ್ಣಮುಂಡೆಗಂಡರ ಇನ್ನೂ ಮುಂತಾದ ಬೈಗುಳಗಳನ್ನು ಬಳಸುತ್ತಾರೆ. ಏಕೆಂದರೆ ಕೆಳಜಾತಿ ವ್ಯಕ್ತಿಗಳು ಇವರ ಒಡೆತನದಲ್ಲಿರುವಂತಹ ಆಳುಗಳು. ಇವರು ಹೇಳಿದ ಹಾಗೆ ಕೇಳಬೇಕು, ಬೈದ ಹಾಗೆ ಬೈಯಿಸಿಕೊಳ್ಳಬೇಕು. ಮೇಲ್ಜಾತಿ ಪಾತ್ರಗಳಿಗೆ ಎದುರು ಬೈಯ್ಯುವಂತಹ ಸಂದರ್ಭಗಳು ವಿರಳವೆಂದೆ ಹೇಳಬಹುದು. ಯಾಕೆಂದರೆ ಅವರಿಗೆ ತಿರುಗಿಬಿದ್ದರೆ, ಎದುರು ಮಾತನಾಡಿದರೆ ಕೆಲಸಕ್ಕೆ ಹೋಗದೆ ಇರುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಆಗ ಒಂದು ಹೊತ್ತಿನ ಊಟಕ್ಕೂ ಕಷ್ಟಪಡಬೇಕಾಗುತ್ತದೆ. ಈ ಜಮೀನ್ದಾರನ್ನೇ ನಂಬಿಕೊಂಡು ಬದುಕುತ್ತಿರುವ ಪಾತ್ರಗಳಿವೆ. ಆರ್ಥಿಕ ಭದ್ರತೆಯಿಲ್ಲದೆ ಇರುವುದರಿಂದ ಮತ್ತು ಸಾಮಾಜಿಕವಾಗಿ ಜಾತಿಯಲ್ಲಿ ಕೀಳು ಎಂದು ಭಾವಿಸುವುದರಿಂದ ಮೇಲ್ಜಾತಿ ಪಾತ್ರಗಳು ಇವರನ್ನು ನೋಡುವ, ಬೈಯ್ಯುವ ಮಾನದಂಡಗಳೇ ಇತರರಿಗಿಂತ ಬೇರೆಯಾಗಿರುತ್ತವೆ ಎಂದು ಹೇಳಬಹುದು.

ಅನಂತಮೂರ್ತಿ ಯು.ಆರ್, ಅವರ ಸಂಸ್ಕಾರ ಕಾದಂಬರಿಯಲ್ಲಿ ಮೇಲ್ಜಾತಿ ಮಹಿಳೆ ಕೆಳಜಾತಿ ಮಹಿಳೆಗೆ ಬೈಯ್ಯುವ ಸಂದರ್ಭವನ್ನು ಗಮನಿಸಬಹುದು. ಮೇಲ್ಜಾತಿ ಅನಸೂಯ ಎಂಬ ಬ್ರಾಹ್ಮಣ ಮಹಿಳೆ, ಕೆಳಜಾತಿ ಚಂದ್ರಿ ಎಂಬ ಮಹಿಳೆಗೆ ಮನಸ್ಸಿನಲ್ಲಿರುವ ಕೋಪಕ್ಕೆ ಚಂದ್ರಿಯೇ ಕಾರಣ ಎಂಬ ಉದ್ದೇಶದಿಂದ ಬೈಯ್ಯುತ್ತಿರುವ ಸಂದರ್ಭ ಈ ಕೆಳಗಿನಂತಿದೆ.

"ತನ್ನ ಗಂಡ ಲಾಯಕ್ಕಾಗಿ ಹೇಳಿದನೆಂದು ಒಳಗಿನಿಂದ ಆಲಿಸುತ್ತಿದ್ದಾ ಅವರ ಹೆಂಡತಿ ಅನಸೂಯಳಿಗೆ ಆನಂದವಾಯಿತು. ಕಂಬಕ್ಕೊರಗಿ ಕೂತಿದ್ದ ಚಂದ್ರಿ ಕಣ್ಣಿಗೆ ಬಿದ್ದು, ಮನಸಾರೆ

ಶಪಿಸಿದಳು : ಅಪರಾತ್ರಿಯಲ್ಲಿ ಅವಳನ್ನು ಹುಲಿ ಮೆಟ್ಟಲಿ. ಹಾವು ಕಡಿಯಲಿ, ಈ ರಂಡೆ, ಈ ರಂಭೆ ಅವನ ತಲೆಗೆ ಮದ್ದು ಹಾಕಿಲ್ಲದಿದ್ದರೆ ತನ್ನ ಸ್ವಂತ ಸೋದರಮಾವನ ಮಗನಾದ ಅವ ಯಾಕೆ ತನ್ನ ಕುಟುಂಬದ ಹೆಣ್ಣನ್ನು ಖಾಯಿಲೆ ಹಿಡಿದಿಂತ ದೂಕಿ, ಆಸ್ತೀನ ಪರಭಾದೆ ಮಾಡಿ, ಈ ಮುಂಡೇಯ ಕೊರಳಿಗೆ ಪಿತ್ರಾರ್ಜಿತ ಬಂಗಾರನ್ನೆಲ್ಲ ಹಾಕಿ.... ಚಂದ್ರಿಯ ಕೊರಳಿನಲ್ಲಿದ್ದ ನಾಲ್ಕೆಳೆಯ ಚಿನ್ನದಸರ, ಕೈಯ ಕಡಗ ನೋಡಿ ಅನಸೂಯಗಳಿಗೆ ದುಃಖ ತಡೆಯಲಾರದೆ ಗೋಳೋ ಎಂದು ಅತ್ತು ಬಿಟ್ಟಳು. ಈಗ ತನ್ನ ತಂಗಿ ಬದುಕಿದ್ದರೆ ಇಂದು ಅವಳ ಕೊರಳಿನಲ್ಲಿರಬೇಕಿತ್ತು. ತನ್ನ ರಕ್ತಸಂಬಂಧಿಯ ಶವ ಹೀಗೆ ಸಂಸ್ಕಾರವಿಲ್ಲದೆ ಕಾಯಬೇಕಾಗಿ ಬರುತ್ತಿತ್ತೆ? ಎಲ್ಲ ಈ ದರಿದ್ರ ರಂಡೆಯಿಂದ ಆಯಿತಲ್ಲ, ಅವಳ ಮುಖಕ್ಕೆ ಬೆಂಕಿಯಿಡಲಿ ಎಂದು ಕುದಿದು ಕುದಿದು ಗೋಳಾಡಿದರು(ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ-೧೨). ಈ ಮೇಲಿನ ಉದಾಹರಣೆಯಲ್ಲಿ ಬ್ರಾಹ್ಮಣ ಮಹಿಳೆ ತನ್ನ ಮನಸ್ಸಿನಲ್ಲಿದ್ದ ಕೋಪ, ಅಸಹನೆ, ಅಸೂಯೆಗಳನ್ನು ಕೆಳಜಾತಿ ಮಹಿಳೆಯನ್ನು ಬೈಯ್ಯುವುದರ ಮೂಲಕ ಹೊರಹಾಕುತ್ತಾಳೆ. ರಂಡೆ, ಮುಂಡೆ ಎಂಬಂತಹ ಪದಗಳನ್ನು ಹೆಚ್ಚಾಗಿ ಬ್ರಾಹ್ಮಣ ಸಮುದಾಯದವರು ಬಳಸುತ್ತಾರೆ. ಸಾಮಾನ್ಯವಾಗಿ ಸಮಾಜದಲ್ಲಿ ಗಂಡ ಸತ್ತ ಮಹಿಳೆಗೆ ರಂಡೆ, ಮುಂಡೆ, ವಿಧವೆ ಎಂಬ ಪದಗಳನ್ನು ಬಳಸುತ್ತಾರೆ. ಆದರೆ ಈ ಪದಗಳು ಸಮಾಜದಲ್ಲಿ ಬೈಗುಳಗಳಾಗಿ ಬಳಕೆಯಲ್ಲಿವೆ. ಆದರೆ ಗಂಡ ಇದ್ದರೂ, ಮದುವೆಯಾಗದಿದ್ದ ಮಹಿಳೆಗೂ ಕೂಡ ರಂಡೆ, ಎಂಬ ಪದಗಳನ್ನು ಬಳಸಿ ಬೈಯ್ಯುವುದು ಬಳಕೆಯಲ್ಲಿದೆ. ಇಲ್ಲಿ ಚಂದ್ರಿಯು ವಿಧವೆಯಲ್ಲ ಏಕೆಂದರೆ ನಾರಾಣಪ್ಪ ಇವಳನ್ನು ಮದುವೆಯಾಗಿರುವುದಿಲ್ಲ. ಆದರೂ ಈ ರೀತಿಯ ಬೈಗುಳುಗಳನ್ನು ಬಳಸಿ ಬ್ರಾಹ್ಮಣ ಮಹಿಳೆ ಬೈಯ್ಯುತ್ತಾಳೆ. ಎಲ್ಲ ವರ್ಗದವರಲ್ಲೂ ಈ ಬೈಗುಳ ಬಳಕೆಯಲ್ಲಿದೆ ಎಂದು ಹೇಳಬಹುದು ಶಾಪರೂಪದ ಬೈಗುಳಗಳನ್ನು ಸಹ ಇಲ್ಲಿ ಕೆಳಜಾತಿ ಮಹಿಳೆಗೆ ಮೇಲ್ಜಾತಿ ಮಹಿಳೆ ಬಳಸಿರುವುದು ಗಮನಿಸಬಹುದು. 'ಅವಳನ್ನು ಹುಲಿ ಮೆಟ್ಟಲಿ' 'ಹಾವು ಕಡಿಯಲಿ' 'ಅವಳ ಮುಖಕ್ಕೆ ಬೆಂಕಿಯಿಡಲಿ' ಎಂಬ ಶಾಪರೂಪದ ಬೈಗಳಗಳನ್ನು ಬಳಸುತ್ತಾಳೆ. ಸಂಪತ್ತು ಎಲ್ಲಿ ಕೈತಪ್ಪಿ ಹೋಗುತ್ತದೆ. ಮತ್ತು ತನ್ನ ಸೋದರ ಮಾವನ ಮಗನಾದ ನಾರಾಣಪ್ಪ ಈ ಕೆಳಜಾತಿ ಚಂದ್ರಿಯ ಜೊತೆ ಸಂಪರ್ಕ ಇಟ್ಟುಕೊಂಡಿದ್ದರಿಂದ ಅವನ ಶವ ಸಂಸ್ಕಾರವಿಲ್ಲದೆ ಕೊಳೆಯುತ್ತಿರುವುದು ಇದಕ್ಕೆ ಒಂದು ಕಾರಣವಾಗಿದೆ. ಈ ಕಾರಣಗಳಿಂದ ಅವಳ ಮನಸ್ಸಿನಲ್ಲಿದ್ದ ಕೋಪ, ಅಸಹನೆ, ಅಸೂಯೆಗಳೆಲ್ಲವೂ ಚಂದ್ರಿಯನ್ನು ಬೈಯ್ಯುವ ಮೂಲಕ ಹೊರಹಾಕುತ್ತಾಳೆ. ಈ ಬೈಗುಳಗಳ ಮೂಲಕ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ತಿಳಿದುಕೊಳ್ಳಬಹುದು.

ಚದುರಂಗ ಅವರ 'ವೈಶಾಖ' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬೈಯ್ಯುವ ಸಂದರ್ಭ.

"ಏನಪ್ಪ ಲಕ್ಕ, ಈಗ ನಿನ್ನ ಮೇಲೆ ಬಂದಿರೋ ಆಪಾದನೆ ವಿಷಯದಲ್ಲಿ ನೀನು ಏನು ಹೇಳಿಯಾ? ಎಂದು ಕೇಳಿದರು. ಅದಕ್ಕೆ ಲಕ್ಕನಿಂದ ಯಾವ ಪ್ರಕ್ರಿಯೆಯೂ ಬರಲಿಲ್ಲ.

"ಊರು ಬಿಟ್ಟು ಗಾಡೀಲಿ ನೀವಿಬ್ಬರೇ ಕಾಡುಹಾದಿ ಹಿಡಿದಿದ್ದಾಗ, ಏನು ನಡೀತು?" ಲಕ್ಕ ಮತ್ತೆ ನಿರುತ್ತರ.

"ತಪ್ಪ ನಿನ್ನದೊ? – ರುಕ್ಮಣಮ್ಮಂದೊ"?

ಲಕ್ಕ ಈ ಪ್ರಶ್ನೆಗೆ ಯಾವ ಉತ್ತರ ಕೊಡುವನೊ ಎಂದು ಸಭಿಕರ ಜೀವ ತುದಿಗಾಲ ನಿರೀಕ್ಷೆ ತವಕಗೊಂಡಿತ್ತು.

ಲಕ್ಕನಿಂದ ಇದಕ್ಕೂ ಉತ್ತರ ಬರಲಿಲ್ಲ. ನಂಜೇಗೌಡ ಎದ್ದು,

"ಈ ಹೇತಲಂಡಿ ಬಡ್ಡಿ ಹೈದ ರುಕ್ಮಿಣಿವ್ವನ ಇರುದ್ಧವಾಗಿ ಯೋಳಿದರೆ, ನಿಮ್ಮ ಬ್ರಾಂಬರ ತ್ವಾಟಗಳಲ್ಲೆ ಅಲ್ವ ಅವುನು ಇಸೇಸ್ವಾಗಿ ಕೂಲಿಗೆ ದುಡಿಯೋದು. ಆಗ ನೀವು ಅವುನ್ಗೆ ಕೂಲಿ ಕಂಬಳಕ್ಕೆ ಕರೆದೀರಾ? ಅದ್ಕೇ ಅವುನು ಎದರಿ ನಿಜಸ್ತಿತ್ಯ ಬಾಯಿಬುಡ್ತಾಯಿಲ್ಲಾ...." ಎಂದು ಕೆಣಕಿದ.(ಚದುರಂಗ, ವೈಶಾಖ, ಪುಟ–೨೫೪). ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ನಂಜೇಗೌಡ ಕೆಳಜಾತಿ ಲಕ್ಕನಿಗೆ 'ಹೇತಲಂಡಿ ಬಡ್ಡಿ ಹೈದ' ಎಂದು ಬೈಯ್ಯುತ್ತಾನೆ. ಈ ಕಾದಂಬರಿಯಲ್ಲಿ ಲಕ್ಕ ತಾನಾಗಿಯೇ ಮೊದಲು ತಪ್ಪು ಮಾಡದಿದ್ದರು ರುಕ್ಮಿಣಿಯ ಮಾನ ಹೋಗಬಾರದು ಎಂಬ ಉದ್ದೇಶದಿಂದ ಯಾವುದೇ ಪ್ರಶ್ನೆಗಳಿಗೂ ಉತ್ತರ ನೀಡುವುದಿಲ್ಲ. ಆದರೆ ಮೇಲ್ಜಾತಿಯ ನಂಜೇಗೌಡ ಕೆಳಜಾತಿ ಲಕ್ಕನನ್ನು ಕೈಲಾಗದ ಸೂಳೆ ಮಗ ಎಂಬ ಅರ್ಥ ಸೂಚಿಸುವ ಅಲ್ಲಿನ ಪ್ರಾದೇಶಿಕ ಬೈಗುಳವಾದ ಹೇತಲಂಡಿ ಬಡ್ಡಿ ಹೈದ ಎಂಬ ಬೈಗುಳವನ್ನು ಬಳಸುತ್ತಾನೆ. ಮೇಲ್ಜಾತಿಯವರ ವಿರುದ್ಧ ಸಾಕ್ಷಿ ಹೇಳಿದರೆ ಅಥವಾ ಮೇಲ್ಜಾತಿಯವರಿಗೆ ಕೆಳಜಾತಿಯವರು ಬೈದರೆ ಅವರ ತೋಟಗಳಲ್ಲಿ ಕೆಲಸ ಕೊಡುವುದಿಲ್ಲ. ದಿನಗೂಲಿಗೆ ಕರೆಯುವುದಿಲ್ಲ ಎಂಬ ಭಯವು ಕೂಡ ಕಾಡುತಿರುತ್ತದೆ. ನಂಜೇಗೌಡನಿಗೆ ರುಕ್ಮಿಣಿಯ ಮೇಲೆ ಅವನ ಮನಸ್ಸಿನ ಕೋಪ, ಅಸೂಯೆಗಳು ಬೈಗುಳಗಳಾಗಿ ಹೊರಹೊಮ್ಮುತ್ತವೆ ಎಂದು ಹೇಳಬಹುದು.

ವೈಶಾಖ ಕಾದಂಬರಿಯಲ್ಲೇ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬೈಯ್ಯುವ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಅದು ಈ ರೀತಿಯಾಗಿದೆ.

"ತ್ವಾಟದಲ್ಲಿ ತೆಂಗಿನಮರ ಅತ್ತಿದ ಗಂಗಪ್ಪ ಆಳು ಸುದ್ದ ಪಾನೆಂಗತ ಅವ್ನ ಅಯ್ಯ ಯಾರೋ ಅವ್ವ ಯಾರೋ ಊರ್ನಲ್ಲಿ ಯಾರೂ ಅರೀರು. ಕೊಡಗಿನ ಸನಿವಾರ ಸಂತೇಲಿ ವೊಟ್ಟೆಗಿಲ್ದೆ ಬೀದಿ ಬೀದಿ ಅಲೀತಿದ್ನಂತೆ. ಆಳಿಲ್ಲದೆ ಪಜೀತಿ ಪಡ್ತಿದ್ದ ಗಂಗಪ್ನಗೊಳು ನ್ವಾಡನಾರ್ದೆ

ಅವ್ನ ಕೊಡಗಿನ ಭಾವ, ಇಲ್ದೇ ಇಲ್ಲದ್ಕೆ ಅಲ್ಲು ಬೀರನೆ ಗಂಡಾಂತ, ಆ ಗೆಣೆಯನ್ನೇ ಸಾಕಾಗಿದ್ದ.... " ಮುಟ್ಟಿಸಿಕೊಂಡು ಬಿಟ್ಟೆಯಲ್ಲೋ ರಂಡೆಗಂಡ?... ಮತ್ತೆ ಬಾವಿ ನೀರು ಸೇದಿ, ಮೈಮೇಲೆ ಸುರಿದು, ಮಡಿ ಉಡೋ ಹಾಗೆ ಮಾಡಿದ್ಯಲ್ಲೋ, ಪಾಪಿ!"(ಅದೇ, ಪುಟ-೨) ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರವನ್ನು ಬೈಯ್ಯುತ್ತಿರುವ ಸಂದರ್ಭ. ಮೇಲ್ಜಾತಿ ವ್ಯಕ್ತಿಯನ್ನು ಕೆಳಜಾತಿ ವ್ಯಕ್ತಿ ಆಕಸ್ಮಿಕವಾಗಿ ಮುಟ್ಟಿದ್ದರಿಂದ ಕೋಪದಿಂದ ರಂಡೆಗಂಡ, ಪಾಪಿ ಎಂದು ಬೈಯ್ಯುತ್ತಾನೆ. ರಂಡೆಗಂಡ ಎಂದರೆ ವಿಧವೆಯನ್ನು ಮದುವೆಯಾದವನು ಎಂದು ಅರ್ಥಬರುತ್ತದೆ. ಮೇಲ್ಜಾತಿಯ ಪಾತ್ರದಲ್ಲಿ ಈ ಬೈಗುಳ ಬರುವುದಕ್ಕೆ ಕಾರಣ ಅಸ್ಪೃಶ್ಯತೆ, ಕೆಳಜಾತಿಯವರು ಮೇಲ್ಜಾತಿಯವರನ್ನು ಮುಟ್ಟುವಂತಿಲ್ಲ ಎಂಬ ಸಾಮಾಜಿಕ ನಿಯಮವನ್ನು ಸೃಷ್ಟಿಸಿಕೊಂಡಿದ್ದಾರೆ. ಆದ್ದರಿಂದ ಆಕಸ್ಮಿಕವಾಗಿ ಕೆಳಜಾತಿ ವ್ಯಕ್ತಿ ಮುಟ್ಟಿದ್ದರಿಂದ ಕೋಪಬಂದು ರಂಡೆಗಂಡ, ಪಾಪಿ ಎಂದೆಲ್ಲ ಬೈಯ್ಯುತ್ತಾನೆ. ರಂಡೆ, ಮುಂಡೆ ಎಂಬಂತಹ ಪದಗಳನ್ನು ಬ್ರಾಹ್ಮಣ ಸಮುದಾಯದವರೆ ಹೆಚ್ಚು ಬಳಸುತ್ತಿರುವುದು ಕಂಡುಬರುತ್ತದೆ ಎಂದು ಹೇಳಬಹುದು.

ಭೈರಪ್ಪ ಎಸ್.ಎಲ್, ಅವರ ದಾಟು ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಬೈಗುಳಗಳಲ್ಲಿ ಸಾಮಾಜಿಕ ಚಹರೆಗಳ ಅಭಿವ್ಯಕ್ತಿಯ ಕ್ರಮವನ್ನು ಕಾಣಬಹುದು. ಉದಾಹರಣೆಗೆ,

"ಚಂಡಾಲ ನನ್ಮಗುನ್ನ ತಂದು ಕುತ್ತಿಗೆ ಚೆಂಡಮ್ಯಾಲೆ ಮಿದ್ದು ಎಳ್ಕಂಡು ಬಾ ಹೋಗ್ರುಲಾ..... ಅವನ ಬುಲ್ಡೆ ಚಚ್ಚಿ ಹಾಕುಸ್ತೀನಿ. ಊರಿನ ಧಣಿಗಳು ಗರ್ಜಿಸಿದರು." (ಭೈರಪ್ಪ ಎಸ್.ಎಲ್, ದಾಟು, ಪುಟ-೨೦೫)

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿಯ ತಿರುಮಲೇಗೌಡರು, ಕೆಳಜಾತಿಯ ಬೆಟ್ಟಯ್ಯನ ಮಗ ಮೋಹನದಾಸನಿಗೆ 'ಚಂಡಾಲ ನನ್ಮಗ' ಎಂದು ಬೈಯ್ಯುತ್ತಾನೆ. 'ಚಂಡಾಲ' ಎಂದರೆ ಬ್ರಾಹ್ಮಣ ಸ್ತ್ರೀಯರಲ್ಲಿ ಶೂದ್ರನಿಂದ ಹುಟ್ಟುವವನು. ಚಂಡಾಲ ಜಾತಿಗೆ ಸೇರಿದವನು, ಅಸ್ಪೃಶ್ಯ, ದುಷ್ಟ ಮತ್ತು ಕ್ರೂರ ಕೆಲಸ ಮಾಡುವವನು ಎಂಬ ಅರ್ಥಗಳು ಬರುತ್ತವೆ. ಆದರೆ ತಿರುಮಲೇಗೌಡರು ಮೋಹನದಾಸರನ್ನು ಬೈಯ್ಯುತ್ತಿರುವುದು ಅವನ ಜಾತಿ ಕೀಳೆಂಬ ಮನೋಭಾವನೆ ಇರುವುದರಿಂದ 'ಚಂಡಾಲ' ಎಂಬ ಪದವನ್ನು ಬಳಸಿ ಬೈಯ್ಯುತ್ತಾನೆ. ಏಕೆಂದರೆ ಮೋಹನದಾಸ ಬ್ರಾಹ್ಮಣ ವ್ಯಕ್ತಿಯಾದ ವೆಂಕಟರಮಣ್ಣಯ್ಯನ ಹೊಟ್ಟೆಗೆ ಕಲ್ಲುಕಟ್ಟಿ ನೀರಲ್ಲಿ ಮುಳುಗಿಸಿ ಸಾಯಿಸಿದ ಎಂಬ ಆರೋಪ ಬಂದಿದ್ದರಿಂದ ಊರಿನಗೌಡ ಅವನ ಜಾತಿಯನ್ನು ಹಿಡಿದು ಬಯ್ಯುತ್ತಾನೆ. ಮೇಲ್ಜಾತಿಯವರು ಕೀಳು ಕೆಲಸ ಮಾಡಿದಾಗ 'ಚಂಡಾಲ' ಎಂದು ಬೈಯ್ಯುವ ಸಂದರ್ಭಗಳಿವೆ. ಈ ಬೈಗುಳದ ಮೂಲಕ ಮೇಲ್ಜಾತಿಯ ಮನೋಧೋರಣೆ ಮತ್ತು ಸಾಂಸ್ಕೃತಿಕ ಆಯಾಮಗಳು ಕಂಡುಬರುತ್ತವೆ.

ಭೈರಪ್ಪ ಎಸ್.ಎಲ್, ಅವರ ದಾಟು ಕಾದಂಬರಿಯಲ್ಲೇ ಅಸ್ಪೃಶ್ಯತೆಯನ್ನು ಸೂಚಿಸುವ ಜಾತಿ ಸೂಚಕ ಬೈಗುಳನ್ನು ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಕ್ಕೆ ಬಳಸುವ ಉದಾರಣೆಯನ್ನು ನೋಡಬಹುದು.

"ಒಂದು ದಿನ ನಾನು ನಿಮ್ಮೂರಲ್ಲಿ ನಿಮ್ಮಣ್ಣನೋರ ಹೋಟೆಲಿಗೆ ನುಗ್ಗಿ, ನನಗ್ಯಾಕೆ ಕಾಫಿ ಕೊಡುಲ್ಲ ಅಂತ ಕೇಳಿದೆ. ಕೂತು ಕಾಫಿ ಕುಡೀತಿದ್ದೋರೇ, ಮಾದಿಗ ಸೂಳೆ ಮಗ ಒಳಗೆ ಬಂದ ಅಂತ ಎದ್ದು ಬಂದು ಹೊಡೆದರು."(ಅದೇ ಪುಟ-೨೬೦)

ಈ ಮೇಲಿನ ಉದಾಹರಣೆಯಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಕ್ಕೆ 'ಮಾದಿಗ ಸೂಳೆಮಗ' ಎಂಬ ಬೈಗುಳವನ್ನು ಬಳಸುತ್ತಾರೆ. ಇದು ಜಾತಿಸೂಚಕ ಬೈಗುಳವಾಗಿದೆ. ಮೋಹನದಾಸ ಮಾದಿಗ ಸಮುದಾಯಕ್ಕೆ ಸೇರಿದವನಾಗಿದ್ದಾನೆ. ಆದ್ದರಿಂದ ಜಾತಿಯನ್ನು ಹಿಡಿದು ಬೈಯ್ಯುತ್ತಾರೆ. ಏಕೆ ಈ ರೀತಿಯ ಬೈಗುಳ ಬಳಸಿದ್ದಾರೆ ಎಂದರೆ ಕೆಳಜಾತಿಗೆ ಸೇರಿದ ವ್ಯಕ್ತಿ ಹೋಟೆಲ್ ಒಳಗೆ ಬರುವುದನ್ನು ಕಂಡು 'ಮಾದಿಗ ಸೂಳೆಮಗ' ಒಳಗೆ ಬಂದ ಎಂದು ಮೇಲ್ಜಾತಿ ವ್ಯಕ್ತಿಗಳೆಲ್ಲಾ ಸೇರಿ ಹೊಡೆಯುತ್ತಾರೆ. ಇಲ್ಲಿ ಅಸ್ಪೃಶ್ಯತೆ ಮತ್ತು ಜಾತಿಯ ಕಾರಣಕ್ಕಾಗಿ ಅವನ ಸಮುದಾಯ ಮತ್ತು ತಾಯಿಯನ್ನು ಕುರಿತು ಬೈಯ್ಯುತ್ತಿರುವುದು ಕಂಡುಬರುತ್ತದೆ. ಈ ರೀತಿಯಾದ ಬೈಗುಳದ ಮೂಲಕ ಸಾಮಾಜಿಕ ಚಹರೆ ಅಭಿವ್ಯಕ್ತಿಗೊಂಡಿರುವುದನ್ನು ಗಮನಿಸಬಹುದು.

ದಾಟು ಕಾದಂಬರಿಯಲ್ಲಿ ಅಸ್ಪೃಶ್ಯತೆ ಮತ್ತು ಬೈಯ್ಯುವ ಬೈಗುಳದ ಸನ್ನಿವೇಶ ಮುಳ್ಳೂರು ನಾಗರಾಜ್ ಅವರ 'ಮರಣ ಮಂಡಲ ಮಧ್ಯದೊಳಗೆ' ಎಂಬ ಕಾದಂಬರಿಯಲ್ಲಿಯೂ ಕಂಡುಬರುತ್ತದೆ. ಉದಾಹರಣೆ ಮೂಲಕ ನೋಡಬಹುದು.

"ಲೋಕಾರೂಢಿ ಜಾತಿ ನೀತಿಗಳ ಪಾಲಿಸಿಕೊಂಡು ಬಂದವರಾದ ಮೇಲ್ ಜಾತ್ಗಳ ಹೊಟ್ಟಾವಳಕ ಕುಂಟಾಲುಗಟ್ಲ ಸುಣ್ಣವ್ವ ಸುರಿದಂಗಾಯ್ತು. "ಟೀ ಕುಡುದ್ರ ಕುಡೀಲಿ ಅನ್ನೋದು. ಈ ನನ್ಮಗ ನಮ್ಮ ಹರಕು ಎಕ್ಡದಯೋಗ್ತಿ ಇಲ್ದವ ಬಂದು ತಮ್ಮ ಸರೀಕನಂಗ ಕೂತು ತಾವು ಕುಡಿಯಾ ಗಳಾಸ್‌ನಲ್ಲಿಯೂ ತಾನೂವಿ ಟೀ ಕುಡೀಬೇಕಾರ ಈ ಹೊಲ ಬಡ್ಡೆತ್ತುದಕ ಅದೆಷ್ಟು ಕೊಬಿದ್ದದು?" ಎಂಬ ಪ್ರಶ್ನಾವು ಅಲಿ ಕೂತ ಆ ಮೇಲ್ಜಾತಿ ಸಂಬಂಧ ಪಟ್ಟವರಾದ ಪ್ರತಿಯೊಬ್ಬರ ಎದೆಯಲ್ಲೂವಿ, ಕುದೀತಾಯಿತ್ತು. ಒಳಗಲ ಸಂಕ್ಟವ ಒಬ್ರೂ ಆಡರು. ಆ ಸಂಕಟವು ಕುದೀತಾಯಿರಲು" (ಮುಳ್ಳುರು ನಾಗರಾಜ್, ಮರಣ ಮಂಡಲ ಮಧ್ಯದೊಳಗೆ, ಪುಟ-೪೨).

ಈ ಮೇಲಿನ ಉಲ್ಲೇಖದಲ್ಲಿ ಮೇಲ್ಜಾತಿಯ ಜನರು ಕೆಳಜಾತಿ ವ್ಯಕ್ತಿ ಹೋಟೆಲ್‌ಗೆ ಬಂದು ಟೀ ಕುಡಿದ ಎಂಬ ಕಾರಣಕ್ಕಾಗಿ ಈ 'ಹೊಲ ಒಡ್ಡೆತ್ತುದಕ ಅದೆಷ್ಟು ಕೊಬ್ಬಿದ್ದದು"

ಎಂದು ಜಾತಿ ಹಿಡಿದು ಬೈಯ್ಯುತ್ತಾರೆ. ಈ ಬೈಗುಳ ವ್ಯಕ್ತಿಯನ್ನು ಮಾತ್ರ ಅಲ್ಲ ಇಡೀ ಸಮುದಾಯವನ್ನೇ ಸೂಚಿಸುತ್ತಿರುತ್ತದೆ. ಒಬ್ಬ ವ್ಯಕ್ತಿಗೆ ಸಮುದಾಯ ಅಥವಾ ಜಾತಿಯನ್ನು ಆರೋಪಿಸಿ ಬೈದರೆ ಇಡೀ ಸಮುದಾಯವನ್ನು ಅವಮಾನಮಾಡಿದಂತೆ ಆಗುತ್ತದೆ. ಕೆಳಜಾತಿಯವರು ಮೇಲ್ಜಾತಿಯವರ ಮನೆಗಳಿಗೆ ಪ್ರವೇಶಿಸುವಂತಿಲ್ಲ, ಹೊಟೇಲ್‌ಗಳಿಗೆ, ದೇವಸ್ಥಾನಗಳಿಗೆ ಪ್ರವೇಶಿಸುವಂತಿಲ್ಲ ಎಂಬ ಕಟ್ಟುಪಾಡುಗಳನ್ನು ಹಾಕಿಕೊಂಡಿರುವ ಸಂದರ್ಭದಲ್ಲಿ ಕೆಳಜಾತಿ ವ್ಯಕ್ತಿ, ಹೋಟೆಲ್‌ಗೆ ಹೋಗಿ ಟೀ ಕುಡಿದಿದ್ದರಿಂದ ಮೇಲ್ಜಾತಿಯವರ ಮನಸ್ಸಿನಲ್ಲಿದ್ದ ಕೋಪ, ಸಂಕಟ, ವೇದನೆ ಎಲ್ಲವೂ ಸೇರಿ ಬೈಗುಳಗಳಾಗಿ ರೂಪಗೊಂಡು ಹೊರಬರುತ್ತದೆ. ಈ ಜಾತಿಸೂಚಕ ಬೈಗುಳದಿಂದ ಕೆಳಜಾತಿ ವ್ಯಕ್ತಿಗಳ/ದಲಿತ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸ ಕಂಡುಬರುತ್ತದೆ.

ಚಲನಚಿತ್ರಗಳಲ್ಲಿ ಬೈಗುಳಗಳು ಅಭಿವ್ಯಕ್ತಿಗೊಂಡಿರುವ ಕ್ರಮ ಯಾವುದೆಂದು ನೋಡಬಹುದಾಗಿದೆ. ಏಕೆಂದರೆ ಸಮಾಜದ ವಾಸ್ತವವನ್ನು ಸಹ ಚಲನಚಿತ್ರಗಳು ಪ್ರತಿಬಿಂಭಿಸುತ್ತಿರುತ್ತವೆ. ಜನರ ಮಾತಿನಲ್ಲಿ ಕಂಡುಬರುವ ಬೈಗುಳಗಳನ್ನು ಚಲನಚಿತ್ರದಲ್ಲಿ ಪಾತ್ರಗಳ ಮೂಲಕ ಬಳಸಲಾಗುತ್ತದೆ. ಇಲ್ಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವಾಗ ಬಳಸಿರುವ ಬೈಗುಳಗಳು ಯಾವುವು ಎಂಬುದನ್ನು ನೋಡಬಹುದಾಗಿದೆ. ಸಿದ್ದಲಿಂಗಯ್ಯ ಅವರು ನಿರ್ದೇಶಿಸಿದ 'ಹೇಮಾವತಿ' ಚಲನಚಿತ್ರದಲ್ಲಿ ಕೆಳಜಾತಿ ಪಾತ್ರಗಳಿಗೆ ಮೇಲ್ಜಾತಿ ಪಾತ್ರಗಳು ಬಳಸಿರುವ ಬೈಗುಳಗಳನ್ನು ಕಾಣಬಹುದು. ಉದಾಹರಣೆಗೆ,

ಭಟ್ಟ : ಯಾರು ಚೆನ್ನಿನೇನೆ ಅಯ್ಯೋ ಹೊಲುಮುಂಡೇದೆ,
ಹೊಲುಮುಂಡೇದೆ ವೈಶಾಖ ಮಾಸ, ನದಿಲಿ ಸ್ನಾನ ಮಾಡ್ಕೊಂಡು
ಮಡಿಯಾಗಿ...... ಬರ್ತ ಇದೀನಿ, ನೆರಳು ಬೀಳಿಸಿ ಮೈಲಿಗೆ
ಮಾಡಿಬಿಟ್ಟಲ್ಲೇ...... ಪ್ರಾರಬ್ಧವೇ, ಪ್ರಾರಬ್ಧವೇ......

ಚೆನ್ನಿ : ನೀವ್ ಇತ್ಲಾಗ್ ಬತ್ತ ಇದ್ದುದ್ನ ನಾನ್ ನೋಡ್ಲಿಲ್ ಬುದ್ಧಿ
ಭಟ್ಟ : ಅಯ್ಯೋ ಅಯ್ಯೋ ಮಾತೂ ಆಡುಬಿಟ್ಯಾ ನಿನ್ ನಾಲಿಗೆ
ಸೇದು ಹೋಗಾ, ದರಿದ್ರುವೆ, ದರಿದ್ರುವೆ....(ಚಲನಚಿತ್ರ, ಹೇಮಾವತಿ)

ಈ ಮೇಲಿನ ಉದಾಹರಣೆಯಲ್ಲಿ ಬ್ರಾಹ್ಮಣ ಸಮುದಾಯದ ಹಿರಿಯ ಪುರುಷ ಕೆಳಜಾತಿ ಮಹಿಳೆಯನ್ನು ಬೈಯ್ಯುತ್ತಿದ್ದಾನೆ. ಯಾಕೆಂದರೆ ಕೆಳಜಾತಿ ಮಹಿಳೆಯ ದರ್ಶನವಾಯ್ತು, ಅವಳ ನೆರಳು ತಾಗಿ ಮೈಲಿಗೆ ಆಯ್ತು, ಮತ್ತೆ ಸ್ನಾನ ಮಾಡಬೇಕು ಎಂಬ ಕಾರಣಕ್ಕೆ ಅವಳ ಜಾತಿಯನ್ನು ಹಿಡಿದು ಹೊಲುಮುಂಡೆದೆ ಎಂದು ಜಾತಿಸೂಚಕ ಬೈಗುಳವನ್ನು ಬಳಸುತ್ತಾನೆ.

ಕೆಳಜಾತಿಯ ಮಹಿಳೆ ಆದ್ದುದರಿಂದ ಹೊಲುಮುಂಡೆದೆ ಎಂದು ಬಳಸುತ್ತಾರೆ. ವಿಧವೆ ಆಗದಿದ್ದರೂ ಅದು ಅಪಶಕುನದ ಭಾಗವಾಗಿ ಈ ಬೈಗುಳವನ್ನು ಬಳಸುತ್ತಾನೆ. ಅದರ ಜೊತೆಗೆ ಪ್ರಾರಬ್ಧವೇ, ದರಿದ್ರುವೇ ಎಂಬಂತಹ ಬೈಗುಳಗಳನ್ನು ಸಹ ಬಳಸುತ್ತಾನೆ. ಬ್ರಾಹ್ಮಣ ಪಾತ್ರಗಳು ಹೆಚ್ಚಾಗಿ 'ಪ್ರಾರಬ್ಧವೇ' ಎಂಬ ಪದವನ್ನು ಬಳಸಿ ಬೈಯ್ಯುತ್ತಾರೆ. ಇನ್ನಿತರೆ ಸಮುದಾಯದ ಪಾತ್ರಗಳು ಈ ಪದವನ್ನು ಹೆಚ್ಚಾಗಿ ಬಳಸುವುದು ಕಂಡುಬರುವುದಿಲ್ಲ. ಕೆಳಜಾತಿ ಪಾತ್ರಗಳಿಗೆ ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. 'ಪ್ರಾರಬ್ದವೇ' ಎಂಬ ಪದದ ಅರ್ಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನ, ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಈ ರೀತಿಯಾಗಿ ಕೊಟ್ಟಿದ್ದಾರೆ. ಹಿಂದೆ ಮಾಡಿದ ಪಾಪದ ಫಲ; ಕರ್ಮ, ವಿಧಿ, ಆರಂಭಿಸಿದ, ಮೊದಲು ಮಾಡಿದ (ಸಂಕ್ಷಿಪ್ತ ಕನ್ನಡ ನಿಘಂಟು, ಪುಟ-೪೮೦). ಇಲ್ಲಿ ಈ ರೀತಿಯ ಅರ್ಥಗಳನ್ನು ಕೊಟ್ಟಿದ್ದಾರೆ. ಚಲನಚಿತ್ರದಲ್ಲಿ ಬ್ರಾಹ್ಮಣ ವ್ಯಕ್ತಿ ಕೆಳಜಾತಿ ಮಹಿಳೆಗೆ ಪ್ರಾರಬ್ಧವೇ ಎಂಬ ಪದ ಬಳಸಿರುವುದು ಹಿಂದಿನ ಜನ್ಮದಲ್ಲಿ ಮಾಡಿದ್ದ ಪಾಪದ ಫಲವಾಗಿ ಹೀನಕುಲದಲ್ಲಿ ಹುಟ್ಟಿದ್ದಿಯಾ ಎಂಬ ಕಾರಣಕ್ಕಾಗಿ ಬಳಸಿದ್ದಾರೆ ಎಂದು ಹೇಳಬಹುದು. ದರಿದ್ರುವೆ ಎಂದು ಸಹ ಬೈಯ್ಯುತ್ತಿರುವುದು ಕಂಡುಬರುತ್ತದೆ. ಹೀನವಾದ, ಬಡವರು, ಗತಿಯಿಲ್ಲದವರು ಎಂದು ಅರ್ಥಗಳು ಬರುತ್ತವೆ. ಇಲ್ಲಿ ಹೀನವಾದವಳು ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ ಎಂದು ಹೇಳಬಹುದು. ಈ ಬೈಗುಳದಿಂದ ಕೆಳಜಾತಿ ಪಾತ್ರದ ಸಾಮಾಜಿಕ ಚಹರೆ ಕಂಡುಕೊಳ್ಳಬಹುದಾಗಿದೆ. ಈ ರೀತಿಯಾಗಿ ಮೇಲ್ಜಾತಿಯವರು ಬೈಗುಳಗಳನ್ನು ಅಭಿವ್ಯಕ್ತಿಸಿರುವ ಕ್ರಮಕಂಡುಬರುತ್ತದೆ.

ಪುಟ್ಟಣ್ಣ ಕಣಗಾಲ್ ಎಸ್.ಆರ್. ಅವರ ನಿರ್ದೇಶನದ 'ಪಡುವಾರಳ್ಳಿ ಪಾಂಡವರು' ಚಲನಚಿತ್ರದಲ್ಲಿ ಬೈಗುಳಗಳ ಅಭಿವ್ಯಕ್ತಿಯ ಕ್ರಮವನ್ನು ನೋಡಬಹುದಾಗಿದೆ. ಉದಾಹರಣೆಗೆ,

ಕರಿಯ : ಸಾಹುಕಾರ್ರೆ..... ಅಲ್ನೋಡಿ ಸುಂದ್ರಕ್ಕ ಬತ್ತವಳೆ.

ಸಾಹುಕಾರ ಸಂಗಪ್ಪ : ಅವ್ಳು ಬಂದ್ರೆ ನೀನ್ಯಾಕೆ ಗಾಡಿ ನಿಲ್ಲುಸ್ಬೇಕೊ ಗುಲಾಮ ಬಡ್ಡಿಮಗನೆ"(ಚಲನಚಿತ್ರ; ಪಡುವಾರಳ್ಳಿ ಪಾಂಡವರು).

ಈ ಮೇಲಿನ ಉದಾಹರಣೆಯಲ್ಲಿ ಊರಿನಗೌಡ ತನ್ನ ಆಳು ಕರಿಯನಿಗೆ 'ಗುಲಾಮ ಬಡ್ಡಿಮಗನೆ ಎಂದು ಬಯ್ಯುತ್ತಾನೆ. ಕೆಳಜಾತಿ ವ್ಯಕ್ತಿಯಾದ ಕರಿಯನಿಗೆ ಆರ್ಥಿಕವಾಗಿ ಯಾವುದೇ ರೀತಿಯ ಅನುಕೂಲಗಳಿಲ್ಲದೆ ಇರುವ ಕಾರಣಕ್ಕೆ ಗೌಡನ ಹತ್ತಿರ ಜೀತದಾಳಾಗಿ ಕೆಲಸ ಮಾಡುತ್ತಿದ್ದಾನೆ. ಗುಲಾಮ ಎಂದರೆ ಅಡಿಯಾಳು ಸೇವಕ ದಾಸ ಕೀಳುಮಟ್ಟದವನು ಬೆಲೆಯಿಲ್ಲದವನು ಎಂಬ ಅರ್ಥಗಳನ್ನು ಸೂಚಿಸುತ್ತದೆ. ಕರಿಯ ಸಾಮಾಜಿಕವಾಗಿ ಕೆಳಮಟ್ಟದವನು ಎಂದು ಗುರುತಿಸಲಾಗಿದೆ. ಆರ್ಥಿಕವಾಗಿ ಯಾವುದೇ ಅನುಕೂಲಗಳಿಲ್ಲದವನಾಗಿದ್ದಾನೆ. ಆದ್ದರಿಂದ ಗೌಡನ ಹತ್ತಿರ ಜೀತಮಾಡುತ್ತ ಅವರ ಅಡಿಯಾಳು ಸೇವಕನಾಗಿದ್ದಾನೆ. ಆದ್ದರಿಂದ ಮೇಲ್ಜಾತಿ

ವ್ಯಕ್ತಿಗಳು ಯಾವುದೇ ರೀತಿಯ ಗೌರವಗಳನ್ನು ನೀಡುವುದಿಲ್ಲ. ಈ ಬೈಗುಳ ಜಮೀನ್ದಾರನ ಮತ್ತು ಮೇಲ್ಜಾತಿ ವ್ಯಕ್ತಿಯ ಮನೋಧೋರಣೆಯನ್ನು ತೋರಿಸುತ್ತಿದೆ. ಗೌಡ ಕರಿಯನ ಒಡೆಯನಾಗಿದ್ದಾನೆ. ಕರಿಯ ಅವರ ಸೇವಕನಾಗಿದ್ದಾನೆ. ಆದ್ದರಿಂದ ಈ ರೀತಿಯ ಬೈಗುಳಗಳು ಜಮೀನ್ದಾರ, ಗೌಡರ ಬಾಯಲ್ಲಿ ಬಳಕೆಯಾಗುತ್ತಿರುತ್ತವೆ. ಈ ಗುಲಾಮ ಬಡ್ಡಿಮಗನೆ ಎಂಬ ಬೈಗುಳ ಆರ್ಥಿಕ ಮತ್ತು ಸಾಮಾಜಿಕ ಚಹರೆಗಳನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಮೇಲ್ಜಾತಿಯ ಪುರುಷ ಕೆಳಜಾತಿಯ ಮಹಿಳೆಯನ್ನು ಬೈಯ್ಯುವ ಕ್ರಮವನ್ನು ಈ ಚಲನಚಿತ್ರದಲ್ಲಿನ ಇನ್ನೊಂದು ಉದಾಹರಣೆಯಲ್ಲಿ ನೋಡಬಹುದು.

ಸುಂದ್ರಿ : ನಿಮ್ಮ ಮಾತು ಅಂದ್ರೆ ಸಾವುಕಾರ್ರು ತೆಗೆದು ಹಾಕಕಿಲ್ಲ.

ಕನೆಕ್ಷನ್ ಕಾಳಪ್ಪ : ಅದ್ಕೆ ಏನು ಮಾಡ್ಬೇಕು ಅಂತೀಯ

ಸುಂದ್ರಿ : ಅವರಿಗೆ ನೀವ್ ಒಂದು ಮಾತು ಹೇಳಿ, ನನ್ನ ಬದುಕಿಗೆ ಒಂದು ದಾರಿ ತೋರ್ಸಿಕೊಡಿ ಅಣ್ಣ.

ಕನೆಕ್ಷನ್ ಕಾಳಪ್ಪ : ಏಯ್ ಚಿನಾಲಿ ನಿನ್ನಾಟ ಎಲ್ಲಾ ನನ್ಗೆ ಗೊತ್ತು ಕಣೆ, ಸಾಹುಕಾರ್ರಿಗೆ ಬೇಕಾದಷ್ಟು ಆಸ್ತಿ ಐತೆ, ಬೇಕಾದಷ್ಟು ಹಣ ಐತೆ, ಎಲ್ಲಾನು ಲಪಟಾಯಿಸಿಕೊಂಡು ದೊಡ್ಡ ಗೌಡತಿ ಆಗಿಬಿಡಬೇಕು ಅಂತ ವಂಚು ಹಾಕ್ಕೊಂಡಿಯೇನೆ. ಏಯ್ ನಡಿಯೇ, ನಡಿಯೇ ಹಾದರಗಿತ್ತಿ ಮುಂಡೆ"(ಚಲನಚಿತ್ರ; ಪಡುವಾರಳ್ಳಿ ಪಾಂಡವರು).

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿಯ ಪುರುಷ ಕೆಳಜಾತಿಯ ಮಹಿಳೆಯನ್ನು ಬೈಯ್ಯುತ್ತಿರುವುದು ಗಮನಿಸಬಹುದು. ಗೌಡ, ಸುಂದ್ರಿಯನ್ನು ಕೂಡಾವಳಿ ಮಾಡಿಕೊಳ್ಳುತ್ತೇನೆ ಎಂದು ನಂಬಿಸಿ ಮೋಸ ಮಾಡಿರುತ್ತಾನೆ. ಅದಕ್ಕಾಗಿ ಗೌಡನ ಆಪ್ತನಾದ ಕನೆಕ್ಷನ್ ಕಾಳಪ್ಪನ ಹತ್ತಿರ ಹೇಳಿಸಿ ನೋಡಬೇಕು ಎಂದು ಬಂದಿರುತ್ತಾಳೆ. ಆಗ ಕಾಳಪ್ಪ ಸುಂದ್ರಿಯನ್ನು ಚಿನಾಲಿ, 'ಹಾದರಗಿತ್ತಿ', 'ಮುಂಡೆ' ಎಂಬ ಪದಗಳನ್ನು ಬಳಸಿ ಬೈಯ್ಯುತ್ತಾನೆ. ಹಾದರಗಿತ್ತಿ ಎಂದರೆ ವ್ಯಭಿಚಾರ ಮಾಡುವವಳು ಎಂಬ ಅರ್ಥಬರುತ್ತದೆ. ಗೌಡನೆ ಇವಳನ್ನು ಬಳಸಿಕೊಂಡು ಮೋಸ ಮಾಡಿದ್ದರೂ, ಗೌಡ ಹಾದರ ಮಾಡಿದ್ದರೂ ಸಹ ಗೌಡನಿಗೆ ಈ ರೀತಿಯ ಬೈಗುಳಗಳನ್ನು ಬಳಸುವುದಿಲ್ಲ. ಕೆಳಜಾತಿ ಮಹಿಳೆಯಾದ ಸುಂದ್ರಿಗೆ ಈ ರೀತಿ ಬೈಯ್ಯುವುದನ್ನು ಗಮನಿಸಬಹುದು. ಗೌಡ ತಪ್ಪು ಮಾಡಿದ್ದರೂ ಸಹ ಕೆಳಜಾತಿ ಮಹಿಳೆ ಸುಂದ್ರಿ ಅವಮಾನ, ಅಪಮಾನ, ಆರೋಪಗಳು, ಅಗೌರವಗಳಿಗೆ ಒಳಗಾಗುತ್ತಿದ್ದಾಳೆ. ಇಲ್ಲಿ ಪುರುಷ ಪ್ರಧಾನ ವ್ಯವಸ್ಥೆ, ಜಮೀನ್ದಾರ ವ್ಯವಸ್ಥೆ, ಜಾತಿ ಕೆಲಸ ಮಾಡುವುದನ್ನು ನೋಡಬಹುದಾಗಿದೆ. ಇಲ್ಲಿಯೂ ಸಹ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳು ಮುಖ್ಯವಾಗುತ್ತವೆ ಎಂದು ಹೇಳಬಹುದು.

ಅಶ್ವತ್ಥ ಅವರ ಕಾದಂಬರಿ ಆಧಾರಿತ, ದೊರೆ-ಭಗವಾನ್ ನಿರ್ದೇಶನದ ಮುನಿಯನ ಮಾದರಿ ಚಲನಚಿತ್ರದಲ್ಲಿಯೂ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬೈಯ್ಯುವ ಬೈಗುಳದಲ್ಲಿ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ಕಾಣಬಹುದಾಗಿದೆ.

ದೊಡ್ಡೇಗೌಡ : ಲೇಯ್ ಮುನಿಯ, ಏನೋ ಅದು, ಗಾಡಿ ನಿಲ್ಸಿ ಬುಟ್ಟು ಹರಟೆ ಹೊಡಿತೀದಿಯ

ಸ್ವಲ್ಪನಾದ್ರು ಜ್ಞಾನ ಇದಿಯೋನೋ ನಿನ್ಗೆ "ಗುಲಾಮ್‌ಬಡ್ಡಿ ಮಗ್ನೆ"

ಇನ್ನೂ ಹಾಲು ಕರ್ದಿಲ್ಲ, ಹಸುಗಳನ್ನು ಬಿಟ್ಟಿಲ್ಲ, ಹಾಸಿಗೆ ಎತ್ತಿಲ್ಲ,

ಕಸಗುಡ್ಸಿಲ್ಲ, ಖಂಡ್ಗಕೆಲ್ಸ ನಾರ್ತಾಬಿದ್ದಿದೆ. ಇದ್ರ ಗಮನ ಇಲ್ದೆ

ನಿಧಾನ್ವಾಗಿ ಬರ್ತಾ ಇದೀಯ"(ಚಲನಚಿತ್ರ, ಮುನಿಯನ ಮಾದರಿ)

ಈ ಮೇಲಿನ ಉದಾಹರಣೆಯಲ್ಲಿ ಗೌಡ ಮನೆಯ ಆಳಾದ ಮುನಿಯನನ್ನು 'ಗುಲಾಮ ಬಡ್ಡಿಮಗನೆ' ಎಂದು ಬೈಯ್ಯುತ್ತಾನೆ. ಪಡುವಾರಳ್ಳಿ ಪಾಂಡವರು ಚಲನಚಿತ್ರದಲ್ಲಿ ಸಾಹುಕಾರ ಸಂಗಪ್ಪ ಅವರ ಮನೆಯ ಆಳಾದ ಕರಿಯನನ್ನು 'ಗುಲಾಮ ಬಡ್ಡಿಮಗನೆ' ಎಂದು ಬೈಯ್ಯುತ್ತಾನೆ. ಅದೇ ರೀತಿಯಾಗಿ ಇಲ್ಲಿಯೂ ಬಳಕೆಯಾಗಿದೆ. ಜಮೀನ್ದಾರರು, ಗೌಡರು ತಮ್ಮ ಆಳುಗಳಿಗೆ ಹೆಚ್ಚಾಗಿ ಈ ಬೈಗುಳುಗಳನ್ನು ಬಳಸುತ್ತಾರೆ. ಈ ಉದಾಹರಣೆಯ ಮೂಲಕ ಮತ್ತಷ್ಟು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ಗುಲಾಮ ಎಂದರೆ ಸೇವಕ, ಅಡಿಯಾಳು, ದಾಸ, ಬೆಲೆಯಿಲ್ಲದವನು ಎಂಬಂತಹ ಅರ್ಥಗಳನ್ನು ನೀಡುತ್ತವೆ. ಇಲ್ಲಿ ಮುನಿಯ ದೊಡ್ಡೇಗೌಡನ ಮನೆಯಲ್ಲಿ ಜೀತದಾಳಾಗಿ ಕೆಲಸ ಮಾಡುತ್ತಿದ್ದಾನೆ. ಈ ಬೈಗುಳದ ಮೂಲಕ ಜಮೀನ್ದಾರರ ಮನೋಧೋರಣೆಯನ್ನು ತಿಳಿಯಬಹುದಾಗಿದೆ. ಇದು ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಮುನಿಯನ ಮಾದರಿ ಚಲನಚಿತ್ರದಲ್ಲಿಯೇ ಮೇಲ್ಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗೆ ಬೈಯ್ಯುವ ಇನ್ನೊಂದು ಉದಾಹರಣೆಯನ್ನು ನೋಡಬಹುದು.

ದೊಡ್ಡೇಗೌಡ : ಇದ್ರಲ್ಲಿ ಒಂದು ರೂಪಾಯಿ ಕಡಿಮೆ ಇದ್ರು ನಿನ್ ಚರ್ಮ ಸುಲ್ದು

ಬಿಡ್ತಿನಿ ತೊಲ್ಗು, ಹೋಗು ನಿನ್ ಮುಖದರ್ಶನ

ಮಾಡಿಸ್ಬೇಡ, ತಿರ್ಬೋಕಿ ಬಡ್ಡಿಮಕ್ಕಳ್ನ ತಗೋ ಬಂದು"(ಚಲನಚಿತ್ರ, ಮುನಿಯನ ಮಾದರಿ).

ಈ ಉದಾಹರಣೆಯಲ್ಲಿ ಮುನಿಯ ಮತ್ತು ಕೆಂಚಕ್ಕ ಅಡ ಇಟ್ಟಿದ್ದ ತಮ್ಮ ಹೊಲವನ್ನು ದುಡ್ಡುಕೊಟ್ಟು ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಬೈಯ್ಯುವಂತ ಬೈಗುಳ. ಗೌಡನ ಮನೆಯ

ಆಳಾಗಿದ್ದ ಮುನಿಯ ತನ್ನ ಸ್ವಂತ ಜಮೀನಿನಲ್ಲಿ ಉಳುಮೆ ಮಾಡುತ್ತಾನೆ ಎಂಬ ಅಸೂಯೆಯಿಂದ ಅಡ ಇಟ್ಟಿದ ಹೊಲವನ್ನು ಬಿಡಿಸಿಕೊಳ್ಳುತ್ತಾರೆ ಎಂಬ ಕೋಪದಿಂದ ಮನೆಯಲ್ಲಿದ್ದ ಒಬ್ಬ ಆಳು ಕಡಿಮೆ ಆಗುತ್ತಾನೆ ಎಂಬ ಆತಂಕ ಇವೆಲ್ಲವೂ ಒಟ್ಟಿಗೆ ಸೇರಿ ಗೌಡನ ಮನಸ್ಸಿನಲ್ಲಿ ಬೈಗುಳ ಹೊರಹೊಮ್ಮುತ್ತದೆ. ತಿನ್ನಕ್ಕೆ ಗತಿಯಿಲ್ಲದವರು ಇನ್ನು ಉಳುಮೆ ಮಾಡುತ್ತಾರೆ ಎಂಬ ಭಾವನೆಯಿಂದ 'ತಿರ್ಬೋಕಿ ಬಡ್ಡಿಮಕ್ಕಳು' ಎಂಬ ಬೈಗುಳವನ್ನು ಬಳಸುತ್ತಾನೆ. ಜಮೀನ್ದಾರನ ಮನೋಧೋರಣೆ ಮತ್ತು ಕೆಳಜಾತಿ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ನೆಲೆಯ ಚಹರೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ರೆಡ್ಡಿ ಎಚ್.ಎನ್ ನಿರ್ದೇಶನದ 'ಕಾವೇರಿ' ಚಲನಚಿತ್ರದಲ್ಲಿ ಬೈಗುಳ ಅಭಿವ್ಯಕ್ತಗೊಂಡಿರುವ ಕ್ರಮವನ್ನು ನೋಡಬಹುದಾಗಿದೆ. ಬ್ರಾಹ್ಮಣ ಪುರುಷ ಸಂಧ್ಯಾವಂದನೆ ಮಾಡುವಾಗ ಮೂರ್ಚೆರೋಗ ಬಂದು ನೀರಲ್ಲಿ ಬೀಳುತ್ತಾನೆ. ಆ ಸಮಯಕ್ಕೆ ಬಂದ ಕೆಳಜಾತಿ ಮಹಿಳೆ ಕಾವೇರಿ ಆ ವ್ಯಕ್ತಿಯನ್ನು ನೀರಿನಿಂದ ಹೊರಗೆ ತಂದು ಕೈಗೆ ಭೀಗದ ಕೈ ಕೊಡುತ್ತಾಳೆ. ಆ ಸಂದರ್ಭದಲ್ಲಿ ಬ್ರಾಹ್ಮಣ ವ್ಯಕ್ತಿ ಬೈಯ್ಯುವ ಸಂದರ್ಭ ಈ ಕೆಳಗಿನಂತಿದೆ.

ಬ್ರಾಹ್ಮಣ ಪುರುಷ – ೧ : ಅಯ್ಯಯ್ಯೋ, ಅಯ್ಯಯೋ

ಬ್ರಾಹ್ಮಣ ಪುರುಷ – ೨ : (ನದಿಯಿಂದ ದಡಕ್ಕೆ ಬಂದು) ಏನಾಯ್ತೋ ಏನಾಯ್ತೋ

ಬ್ರಾಹ್ಮಣ ಪುರುಷ – ೧ : ಮುಟ್ಟುಬಿಟ್ಟಲ್ಲವ್ವ..... ಮುಟ್ಟುಬಿಟ್ಲು

ಬ್ರಾಹ್ಮಣ ಪುರುಷ – ೨ : ಏನೇ ಕಾವೇರಿ ಅಷ್ಟು ಜ್ಞಾನಬೇಡ್ವೆ ನಿನಗೆ

ಬ್ರಾಹ್ಮಣ ಪುರುಷ – ೧ : ದರಿದ್ರ ಮುಂಡೇದೆ, ಶೂದ್ರ ಮುಂಡೇದೆ ಈಗ ನಾನು ನಿನ್ನಿಂದ ಮಠಕ್ಕೆ ಹೋಗಿ ಪ್ರಾಯಶ್ಚಿತ ಮಾಡ್ಕೋಬೇಕಲ್ಲೆ(ಚಲನಚಿತ್ರ, ಕಾವೇರಿ)

ಈ ಮೇಲಿನ ಉದಾಹರಣೆಯಲ್ಲಿ ಬ್ರಾಹ್ಮಣ ಪಾತ್ರ ಕೆಳಜಾತಿ ಮಹಿಳೆಗೆ ದರಿದ್ರು ಮುಂಡೆದೆ, ಶೂದ್ರು ಮುಂಡೆದೆ ಎಂದು ಬೈಯ್ಯುತ್ತಾನೆ. ಈ ರೀತಿಯ ಬೈಗುಳಗಳನ್ನು ಬ್ರಾಹ್ಮಣ ಸಮುದಾಯ ವ್ಯಕ್ತಿಗಳು ಹೆಚ್ಚಾಗಿ ಬಳಸುತ್ತಾರೆ. ಹೇಮಾವತಿ ಚಲನಚಿತ್ರದಲ್ಲಿ 'ಭಟ್ಟ' ಎಂಬ ಬ್ರಾಹ್ಮಣ ವ್ಯಕ್ತಿ 'ಚೆನ್ನಿ' ಎಂಬ ಕೆಳಜಾತಿ ಮಹಿಳೆಗೆ 'ದರಿದ್ರವೆ' ಎಂಬ ಬೈಗುಳವನ್ನು ಬಳಸುತ್ತಾನೆ. ಬ್ರಾಹ್ಮಣ ಸಮುದಾಯದ ವ್ಯಕ್ತಿಗಳು, ಶೂದ್ರ, ದರಿದ್ರು, ಮುಂಡೆ, ರಂಡೆ ಎಂಬಂತಹ ಪದಗಳನ್ನು ಬಳಸಿ ಹೆಚ್ಚಾಗಿ ಬೈಯ್ಯುತ್ತಾರೆ ಎಂದು ಹೇಳಬಹುದು. ಇವು ಕೆಳಜಾತಿ ವ್ಯಕ್ತಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಸೂಚಿಸುವ ಬೈಗುಳಗಳಾವೆ ಎಂದು ಹೇಳಬಹುದು.

ಮೊಗ್ಗಳ್ಳಿ ಗಣೇಶ್ ಅವರ 'ಬುಗುರಿ' ಕಥೆಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಗಳಿಗೆ ಬಳಸುವ ಬೈಗುಳ ಈ ಕೆಳಗಿನಂತೆ ನೋಡಬಹುದು. "ಆ ಹೊಲ್ ಮಾದುಗ ನನ್ ಮಕ್ಕಳು'

ಬೇಕಂತೆ ಕೋಣುನ್ನ ಏಲ್ ಗುಂಡಿಗೆ ಬೀಳ್ಸಿ ತಿನ್ನುಕೆ ಈ ಕರಾಮತ್ ಮಾಡವರೆ(ಮೊಗ್ಗಳ್ಳಿ ಗಣೇಶ್, ಮೊಗಳ್ಳಿ ಕಥೆಗಳು, ಪುಟ-೨೩೦). ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗಳಿಗೆ ಬೈಯ್ಯುವ ಬೈಗುಳವಾಗಿದೆ. 'ಹೊಲ್ ಮಾದುಗ ನನ್ ಮಕ್ಕಳು' ಎಂದು ಕೆಳಜಾತಿಯ ಸಮುದಾಯಗಳ ಹೆಸರನ್ನು ಹಿಡಿದು ಬೈಯ್ಯಲಾಗುತ್ತದೆ. 'ಹೊಲೆಯ' ಮತ್ತು 'ಮಾದಿಗ' ಎಂಬ ಎರಡು ಕೆಳಜಾತಿ ಸಮುದಾಯಗಳನ್ನು ಹೆಸರಿಸಿ ಆ ಸಮುದಾಯದ ಜನರಿಗೆ ಬೈಯಲಾಗುತ್ತಿದೆ. ಗೌಡರ ಕೋಣ ಗುಂಜಾರಯ್ಯ ಅವರ ಕಕ್ಕಸಗುಂಡಿಗೆ ಬಿದ್ದು ಸತ್ತಿದೆ. ಅದನ್ನು ಆ ಕೆಳಜಾತಿ ಜನರೆ ಬೇಂಕಂತ್ಲೆ ಸಾಯಿಸಿದ್ದಾರೆ. ಎಂಬ ಕಾರಣಕ್ಕೆ ಆ ಸಮುದಾಯದವರನ್ನು ಮೇಲ್ಜಾತಿಯವರು ಬೈಯ್ಯುವುದನ್ನು ಕಾಣಬಹುದಾಗಿದೆ. ಈ ಸಮುದಾಯ ಕೇಂದ್ರಿತ ಬೈಗುಳ ಆ ಸಮುದಾಯದ ಸಾಮಾಜಿಕ ಚಹರೆಗಳನ್ನು ಸೂಚಿಸುವ ಬೈಗುಳಗಳಾಗಿವೆ.

ಮೊಗ್ಗಳ್ಳಿ ಗಣೇಶ್ ಅವರ 'ಪ್ರಾಣಿಗಳು' ಎಂಬ ಕಥೆಯಲ್ಲಿ ಸಮುದಾಯ ಕೇಂದ್ರಿತ ಬೈಗುಳವನ್ನು ಬಳಸಿರುವ ಉದಾಹರಣೆಯನ್ನು ಕಾಣಬಹುದಾಗಿದೆ.

"ಈ ಹಲ್ಕಟ್ ದೊಂಬ್ ನನ್ ಮಕ್ಳು ಇದೂ ಒಂದು ವರೆಸ ಸರ್ಕಸ್ಸುಂತಾ ಮಾಡಿದ್ರೂ ಮಾಡಿರ್‌ಬೋದು" (ಮೊಗ್ಗಳ್ಳಿ ಗಣೇಶ್, ಮೊಗಳ್ಳಿ ಕಥೆಗಳು, ಪುಟ-೧೮೩)

ಈ ಮೇಲಿನ ಉದಾಹರಣೆಯಲ್ಲಿ ಜನರು ಸರ್ಕಸ್ಸು ಮಾಡುವ ಜನರಿಗೆ ಅವರ ಅನೇಕ ಸಮುದಾಯಗಳನ್ನು ಹೆಸರಿಸಿ ಬೈಯ್ಯುವುದು ಹೆಚ್ಚು ರೂಢಿಯಲ್ಲಿದೆ ಎಂದು ಹೇಳಬಹುದು. ಒಬ್ಬ ವ್ಯಕ್ತಿಯನ್ನು ಬೈಯ್ಯುವಾಗ ಸಮುದಾಯವನ್ನು ಬಳಸುತ್ತಾರೆ. ಇಡೀ ಸಮುದಾಯವನ್ನು ಬೈಯ್ಯುವಾಗಲೂ ಸಮುದಾಯವನ್ನು ಉಲ್ಲೇಖಿಸಿ ಬೈಯ್ಯುವುದನ್ನು ಕಾಣಬಹುದಾಗಿದೆ. ಈ ರೀತಿಯ ಸಮುದಾಯ ಕೇಂದ್ರಿತ ಬೈಗುಳಗಳಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ.

ಶಾಂತರಸರ ಗೋದಾನ ಕಥೆಯಲ್ಲಿ ಮೇಲ್ಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗೆ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದು.

"ಆಕಳ ದಾನ ಮಾಡಿದ್ರೆ ಮನೆ ಬುಳಂಗಿಲ್ಲೇನು ದೇವ್ರೆ?

ಥೂ ಬುದ್ದಿಗೇಡಿ ಲೋಡಿ ಮಗ್ನೆ, ಎಂಥಾ ಮಾತ್ ಕೇಳ್ತಿ? ಗೋದಾನ ಅಂದ್ರೆ ಏನ್ ತಿಳಕಂಡಿದ್ದೀ? ಬರಾ ಸಾವನ್ನ ದೂರ್ ಮಾಡ್ತದ, ಬುಳಾಮನೆನ್ನ ಎತ್ತಿ ಹಿಡಿತ್ಯದ. ಕಷ್ಟನ್ನ ಹಂಗ ಸರಿಸಿ ಬಿಡ್ತದ. ಏನ್ ತಿಳ್ದಿದ್ದಿ?"(ನಾಯಕ ಡಿ.ಬಿ, (ಪ್ರ.ಸಂ), ಕಥಾಸಂಗಮ, ಪುಟ-೨೧). ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಶಾಸ್ತ್ರೀ ಕೆಳಜಾತಿಯವನಿಗೆ 'ಬುದ್ಧಗೇಡಿ ಲೋಡಿ ಮಗ್ನೆ' ಎಂದು ಬೈಯ್ಯುತ್ತಿದ್ದಾನೆ. ನಿನ್ ಹಸುವನ್ನು ದಾನ ಮಾಡಿದರೆ ನಿನ್ನ ಮನೆಯ ಕಷ್ಟಗಳೆಲ್ಲಾ ಪರಿಹಾರ ಆಗುತ್ತವೆ. ಆದ್ದರಿಂದ ನಿನ್ನ ಹಸು ನನಗೆ ದಾನಮಾಡು

ಎಂದು ಹೇಳಿದಾಗ ಗಂಗ್ಯ ಅನುಮಾನವನ್ನು ವ್ಯಕ್ತಪಡಿಸುತ್ತಾನೆ. ಆಕಳ ದಾನ ಮಾಡಿದ್ರೆ ಮನೆ ಬುಳಂಗಿಲ್ಲೆನು ದೇವ್ರೆ? ಎಂದು ಅನುಮಾನ ವ್ಯಕ್ತಪಡಿಸುತ್ತಿದ್ದರಿಂದ 'ಬುದ್ಧಿಗೇಡಿ ಲೋಡಿ ಮಗನೆ' ಎಂಬ ಬೈಗುಳವನ್ನು ಬಳಸುತ್ತಾನೆ. ಮೇಲ್ಜಾತಿ ವ್ಯಕ್ತಿ ಬಳಸುವ ಬೈಗುಳಗಳಿಗಿಂತ ಬೈಯ್ಯುವ ಸಂದರ್ಭದ ಈ ಎರಡು ಸಮುದಾಯಗಳ ಸಾಮಾಜಿಕತೆ, ಮನೋಭಾವ, ಸಾಂಸ್ಕೃತಿಕ ಆಯಾಮಗಳನ್ನು ತಿಳಿಸುತ್ತದೆ ಎಂದು ಹೇಳಬಹುದು.

ಹುಯಿಲಗೋಳ ನಾರಾಯಣರಾಯರ 'ಪತಿತೋದ್ಧಾರ' ನಾಟಕದಲ್ಲಿ ಬ್ರಾಹ್ಮಣ ವ್ಯಕ್ತಿ ಕೆಳಜಾತಿ ವ್ಯಕ್ತಿಗೆ ಬೈಯ್ಯುವ ಸಂದರ್ಭ ಈ ಕೆಳಗಿನಂತಿದೆ.

"ಕನಕರಾಯ : ಥೂ! ಹೊಲೆಮುಂಡೆ ಮಗ್ನೆ ಹೊತ್ತಿಲ್ಲ, ವ್ಯಾಳ್ಯಾ ಇಲ್ಲ. ಮಟ ಮಟ ಮಧ್ಯಾಹ್ನದಾಗ ಬಂದು ತನ್ನ ಧ್ವನಿಕೇಳಿಸಿ ಮೈಲಿಗೆ ಮಾಡ್ಬಿಟ್ಟ, ಮತ್ತೆ ಹೋಗಿ ಇನ್ನ ನೀರ ಬಸಿಬೇಕಾಯ್ತು(ಹುಯಿಲಗೋಳ ನಾರಾಯಣರಾಯ, ಸಮಗ್ರ ಸಾಹಿತ್ಯ ಸಂಪುಟ-೨, ನಾಟಕ ಭಾಗ-೨, ಪುಟ-೬೫೪) ಈ ಮೇಲಿನ ಉಲ್ಲೇಖದಲ್ಲಿ ಬ್ರಾಹ್ಮಣ ಸಮುದಾಯದ ಕನಕರಾಯ ಎಂಬ ವ್ಯಕ್ತಿ ಕೆಳಜಾತಿ ಶಾಂತಣ್ಣ ಎಂಬ ವ್ಯಕ್ತಿಗೆ 'ಹೊಲೆ ಮುಂಡೆಮಗ' ಎಂದು ಬೈಯ್ಯುತ್ತಾನೆ. ಏಕೆಂದರೆ ಶಾಂತಣ್ಣ ಹಾಡು ಹೇಳಿಕೊಂಡು ಬರುತ್ತಿದ್ದರಿಂದ ಅವನ ಧ್ವನಿ ಕನಕರಾಯರಿಗೆ ಕೇಳಿಸಿ ಮೈಲಿಗೆ ಆಯ್ತು ಎಂಬ ಕಾರಣದಿಂದ ಕನಕರಾಯರು 'ಹೊಲೆಮುಂಡೆಮಗ' ಎಂದು ಅವನ ಜಾತಿಯನ್ನು ಹಿಡಿದು ಬಯ್ಯುತ್ತಾರೆ. ಹೇಮಾವತಿ ಚಲನಚಿತ್ರದಲ್ಲಿಯೂ ಸಹ ಬ್ರಾಹ್ಮಣ ವ್ಯಕ್ತಿ ಕೆಳಜಾತಿ ಚೆನ್ನಿಗೆ ಹೊಲೆಮುಂಡೆದೆ ಎಂದು ಮೈಲಿಗೆ ಆದ ಕಾರಣಕ್ಕೆ ಬೈಯ್ಯುತ್ತಾನೆ. ಇಲ್ಲಿ ಜಾತಿ ಅಸಮಾನತೆಯಿಂದ ಈ ರೀತಿಯ ಬೈಗುಳಗಳನ್ನು ಬಳಸುವುದು ಕಾಣಬಹುದಾಗಿದೆ. ಭಾರತದಂತಹ ಶ್ರೇಣಿಕೃತ ಸಮಾಜದಲ್ಲಿ ಈ ರೀತಿಯ ಅಸಮಾನತೆಗಳು ಬೈಗುಳಗಳಲ್ಲಿಯೂ ಕಂಡುಬರುತ್ತವೆ. ಹೊಲೆಮುಂಡೆಮಗ, ಹೊಲೆಮುಂಡೆದೆ, ರಂಡೆ, ಮುಂಡೆ ಎಂಬ ಬೈಗುಳಗಳನ್ನು ಬ್ರಾಹ್ಮಣ ಸಮುದಾಯದ ಪಾತ್ರಗಳೆ ಹೆಚ್ಚಾಗಿ ಬಳಸುವುದು ಮೇಲಿನ ಎಲ್ಲ ಉದಾಹರಣೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಸೂಳೆಮಗ, ಬಡ್ಡಿಮಗ, ಗುಲಾಮಬಡ್ಡಿಮಗ, ಬಡ್ಡಿಹೈದ, ಕತ್ತೆಬಡವ ಎಂಬಂತಹ ಬೈಗುಳಗಳನ್ನು ಜಮೀನ್ದಾರರು, ಗೌಡರು ಬಳಸಿರುವುದನ್ನು ಕಾಣಬಹುದಾಗಿದೆ.

ಶ್ರೀರಂಗರ 'ಹರಿಜನ್ವಾರ' ನಾಟಕದಲ್ಲಿಯೂ ಬ್ರಾಹ್ಮಣ ಪಾತ್ರ ಕೆಳಜಾತಿ ಪಾತ್ರಗಳನ್ನು ಬೈಯ್ಯುವ ಸಂದರ್ಭವನ್ನು ನೋಡಬಹುದು. ಉದಾಹರಣೆಗೆ,

"ತಾತ್ಯಾಚಾರಿ : ರಾಯರೇ ಹರಿಜನ ಅನ್ನಬೇಡಿರಿ ಆ ಹೊಲೆಯ ಮುಂಡೆ ಮಕ್ಕಳಿಗೆ ಬೇಕಾದರ 'ಹರಿಜನ' ಅನ್ನಿ. ಆ ಸ್ಮಾರ್ತರಿಗೆ ಧರ್ಮ ಇದ್ದುದು ಅಷ್ಟರೊಳಗೆ ಅದೆ"(ಅಮೂರ ಜಿ.ಎಸ್.(ಸಂ), ಶ್ರೀರಂಗ ಸಾರಸ್ವತ-೩, ಸಂಪುಟ-೩, ನಾಟಕ, ಪುಟ-೩೯೬)

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗಳನ್ನು ಸಮುದಾಯ ಸೂಚಕ ಬೈಗುಳವನ್ನು ಬಳಸಿ ಬೈಯ್ಯುತ್ತಾನೆ. 'ಹೊಲೆಯ' ಎಂಬ ನಾಮಪದ ಒಂದು ಸಮುದಾಯದ ಹೆಸರಾಗಿದೆ. ಆ ಸಮುದಾಯದ ಹೆಸರು ಬೈಗುಳವಾಗಿಯೂ ಬಳಕೆಯಾಗುತ್ತಿದೆ ಎಂದು ಹೇಳಬಹುದು. ಈ ಬೈಗುಳಗಳಿಂದ ಕೆಳಜಾತಿ ವ್ಯಕ್ತಿಗಳ ಸಾಮಾಜಿಕ ಚಹರೆಯನ್ನು ತಿಳಿದುಕೊಳ್ಳಬಹುದಾಗಿದೆ.

ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ಎಂಬ ನಾಟಕದಲ್ಲಿ ಮೇಲ್ಜಾತಿ ಮಹಿಳೆ ಕೆಳಜಾತಿ ಹುಡುಗನಿಗೆ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದು.

"ಗುಂಡಮ್ಮ ಗೌಡ್ತಿ : ಓಡ್ಯಾ ಹ್ವಾದಾ ಹೋಗ್ಲಿ ಮಗಾ. ಸರ್ಕಾರ್ದ್ಹೋರ್

ಏರ್ಸಿಟ್ಟದ್ಕ ಈ 'ಹೊಲಿಸೂಳಿಮಕ್ಳೀಗ್ಯ' ಈಟ್ ಸೊಕ್ ಬಂದಾದ್

ಇದೆಲ್ಲ ಮಾಡ್ದಾಂವ ಆ ಗಾಂಜಿ ಮುದುಕಂತ್ ಹೌದೇನ್ಲೊ ಬಾಬ್ಯಾ!(ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ-೬೧)

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿಯ ಮಹಿಳೆ ಕೆಳಜಾತಿಯ ಹುಡುಗನನ್ನು ಬೈಯ್ಯುವ ಸಂದರ್ಭ ಇಡೀ ಕೆಳಜಾತಿಯ ಸಮುದಾಯವನ್ನು ಕುರಿತು ಬೈಯ್ಯುವುದಾಗಿದೆ. ಹೊಲೆಸೂಳೆಮಕ್ಕಳು ಎಂದು ಬೈಯ್ಯುತ್ತಾಳೆ. ಬ್ರಾಹ್ಮಣ ಸಮುದಾಯದವರು ಹೊಲೆಮುಂಡೆಮಗ' ಎಂದು ಬೈಯ್ಯುತ್ತಿದ್ದರೆ, ಜಮೀನ್ದಾರು, ಗೌಡರು, ಹೊಲೆಸೂಳೆಮಗ, ಹೊಲೆಬಡ್ಡಿಮಗ, ಮಾದಿಗ ಸೂಳೆಮಗ ಎಂದು ಹೆಚ್ಚಾಗಿ ಬಳಸುತ್ತಾರೆ ಎಂಬುದಕ್ಕೆ ಈ ಉದಾಹರಣೆ ಸ್ಪಷ್ಟಪಡಿಸುತ್ತದೆ. ಈ ಬೈಗುಳ ಕೆಳಸಮುದಾಯದ ಜನರ ಸಾಮಾಜಿಕ ಚಹರೆಯನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ತಿಳಿಯುವ ಅಂಶವೆಂದರೆ ಕಾದಂಬರಿ, ಕಥೆ, ಚಲನಚಿತ್ರ ಮತ್ತು ನಾಟಕಗಳಲ್ಲಿ ಬರುವ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವಾಗ ಜಾತಿ, ಲಿಂಗ, ವರ್ಗ ಮತ್ತು ಆರ್ಥಿಕತೆಯ ಆಧಾರದ ಮೇಲೆ ಬೈಗುಳಗಳು ನಿರ್ಧಾರವಾಗಿವೆ. ಜಾತಿಯ ಕಾರಣದಿಂದ ಬೈಯ್ಯುವುದಾದರೆ ಹೊಲೆಸೂಳೆಮಗ, ಮಾದಿಗ ಸೂಳೆಮಗ, ಚಾಂಡಲ, ಹೊಲೆಮುಂಡೇ ಮಗ, ಹೊಲೆಮಾದಿಗ ನನ್ ಮಕ್ಕಳು, ಹಲ್ಕಟ್ ದೊಂಬರ್ ನನ್ನಮಕ್ಕ್ಳ ಮಾದರ್ ಚೋದ್ ಎಂಬ ಸಮುದಾಯ/ಜಾತಿಸೂಚಕಬೈಗಳಗಳನ್ನು ಬಳಸಲಾಗಿದೆ. ಮೇಲ್ಜಾತಿಯವರು ಕೆಳಜಾತಿಯವರಿಗೆ ಲಿಂಗಾಧಾರಿತ ಬೈಗುಳಗಳನ್ನು ಈ ರೀತಿಯಾಗಿ ಬಳಸಿದ್ದಾರೆ. ದರಿದ್ರರಂಡೆ, ಮುಂಡೆ, ಚಿನಾಲಿ, ಹಾದರಗಿತ್ತಿಮುಂಡೆ, ನಾಯಿಮುಂಡೆ, ದರಿದ್ರುಮುಂಡೆದೆ, ಶೂದ್ರು ಮುಂಡೆದೇ, ಬೋಸುಡಿಸೂಳೆ ಮುಂತಾದ ಬೈಗುಳಗಳನ್ನು ಬಳಸಿರುವುದನ್ನು ಕಾಣಬಹುದು. ಸೂಳೆಮಗ್ನೆ, ಮಿಂಡ್ರಿಮಗ್ನೆ, ಮುಂಡೆಮಗನೆ, ಲೌಡಿಮಕ್ಕಳ್ರ,

ಸುವ್ವರ್‌ಸೂಳೆಮಗನೆ ಇನ್ನೂ ಮುಂತಾದ ಬೈಗುಳಗಳು ಪುರುಷರಿಗೆ ಬೈದರೂ ಸಹ ಈ ಬೈಗುಳಗಳು ಹೆಣ್ಣನ್ನು ಕೇಂದ್ರಿಕರಿಸಿ ಬೈಯ್ಯುವ ಬೈಗುಳಗಳಾಗಿವೆ. ವರ್ಗಾಧಾರಿತ ಬೈಗುಳಗಳೆಂದರೆ ಕತ್ತೆಬಡವ, ತಿರ್ರೋಕಿ ನನ್ಮಗ, ಗುಲಾಮ ನನ್ಮಗ, ಬಡವ ರಾಸ್ಕಲ್, ಗುಲಾಮ ಮತ್ತು ಬಡವ ಇನ್ನೂ ಮುಂತಾದ ಬೈಗುಳಗಳು ವರ್ಗ ಮತ್ತು ಆರ್ಥಿಕತೆಯನ್ನು ಸೂಚಿಸುವಂತೆ ಬೈಗುಳಗಳಾಗಿವೆ ಎಂದು ಹೇಳಬಹುದು.

ಈ ಮೇಲೆ ಉಲ್ಲೇಖಿಸಿದ ಬೈಗುಳಗಳಲ್ಲಿ ರಂಡೆ, ಮುಂಡೆ, ಶೂದ್ರ, ಪ್ರಾರಬ್ಧ, ದರಿದ್ರ ಎಂಬ ಪದಗಳನ್ನು ಬಳಸಿ ರಂಡೆಗಂಡ, ರಂಡೆಮುಂಡೆ, ಹೊಲೆಮುಂಡೆಮಗ, ದರಿದ್ರಮುಂಡೇದೆ, ಶೂದ್ರಮುಂಡೇದೆ, ಪ್ರಾರಬ್ಧವೇ ಎಂಬಂತಹ ಬೈಗುಳಗಳನ್ನು ಕೆಳಜಾತಿಯವರಿಗೆ ಬ್ರಾಹ್ಮಣ ಸಮುದಾಯ ಪಾತ್ರಗಳು ಹೆಚ್ಚಾಗಿ ಬಳಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಇತರೇ ಸಮುದಾಯದವರು ರಂಡೆ, ಮುಂಡೆ ಎಂಬ ಪದಗಳನ್ನು ಬಳಸುತ್ತಾರೆ. ಆದರೆ ಬ್ರಾಹ್ಮಣ ಸಮುದಾಯದ ಪಾತ್ರಗಳು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಪ್ರಾರಬ್ಧವೇ ಎಂಬುದು ಬ್ರಾಹ್ಮಣ ಸಮುದಾಯದರು ಮಾತ್ರ ಬಳಸಿರುವುದು ಇಲ್ಲಿ ಕಂಡುಬರುತ್ತದೆ.

ಜಮೀನ್ದಾರರು, ಗೌಡಸಮುದಾಯದವರು ಕೆಳಜಾತಿ ಪಾತ್ರಗಳಿಗೆ ಸೂಳೆಮಗ, ಬೋಳಿಮಗ, ಗುಲಾಮ, ಬಡವ, ಬಡ್ಡಿಮಗ, ಹೊಲೆಸೂಳೆಮಗ, ಮಾದಿಗ ಸೂಳೆಮಗ ಎಂಬಂತಹ ಬೈಗುಳಗಳನ್ನು ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. ಇವರು ಸಹ ಹೊಲೆಮುಂಡೆಮಗ, ರಂಡೆ ಎಂಬಂತಹ ಬೈಗುಳಗಳನ್ನು ಬಳಸಿದ್ದಾರೆ. ಆದರೆ ಬಳಕೆಯ ಪ್ರಮಾಣ ಕಡಿಮೆ ಎಂದೇ ಹೇಳಬಹುದು. ಇಲ್ಲಿ ಆರ್ಥಿಕ ಮತ್ತು ಸಾಮಾಜಿಕ ಆಯಾಮಗಳು ಬೈಗುಳಗಳಲ್ಲಿ ಕಂಡುಬರುತ್ತವೆ.

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಬೈಗುಳಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ.

೫.೧.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಸಂದರ್ಭದಲ್ಲಿ ಪ್ರತ್ಯಕ್ಷ ಬೈಗುಳಗಳಿಗಿಂತ ಪರೋಕ್ಷ ಬೈಗುಳಗಳು ಹೆಚ್ಚಾಗಿ ಕಂಡುಬರುತ್ತವೆ. ಮೇಲ್ಜಾತಿ ಪಾತ್ರಗಳ ಸಮುದಾಯದ ಹೆಸರಿಡಿದು ಬೈಯ್ಯುವುದು ಕೂಡ ವಿರಳ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ವಿರುದ್ಧ ಮಾತನಾಡುವ, ಪ್ರತಿಭಟಿಸುವ ಸಂದರ್ಭಗಳೇ ವಿರಳ. ಬೈಯ್ಯುವುದೆಂದರೆ ಇನ್ನೂ ವಿರಳವೆಂದೆ ಹೇಳಬಹುದು. ಅಧ್ಯಯನಕ್ಕೆ ಆಯ್ದುಕೊಂಡ ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವಾಗ ಬಳಸಿರುವ ಬೈಗುಳಗಳ ಪ್ರಮಾಣ ತುಂಬಾ ಕಡಿಮೆ ಎಂದು ಹೇಳಬಹುದು. ಕೆಲವೇ ಕೆಲವು

ಉದಾಹರಣೆಗಳು ಮಾತ್ರ ದೊರೆತಿವೆ ಎಂದು ಹೇಳಬಹುದು. ಕೆಲವು ಸಂದರ್ಭದಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ನೆವದಿಂದ ಬೈಯ್ದಿರುವ ಸಂದರ್ಭಗಳನ್ನೂ ಕಾಣಬಹುದು. ಆ ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

'ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳಜಾತಿ ಮಹಿಳೆ ಲಕ್ಕಿ ನೆವದಿಂದ ಮೇಲ್ಜಾತಿಯವರನ್ನು ಬೈಯ್ಯುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು.

"ಸಣ್ಣ ಬೀರನನ್ನು ತನ್ನ ಮಾವನನ್ನು ಅತ್ತೆಯೂ ಮೆಲ್ಲಗೆ ನಡೆಸಿಕೊಂಡು ಬಂದು ಬಿಡಾರದಲ್ಲಿ ಚಾಪೆಯ ಮೇಲೆ ಮಲಗಿಸಿದಾಗ ಗಾಯಾಳನ್ನು ಅದಕ್ಕೆ ಹಚ್ಚಿದ ತೆಂಗಿನೆಣ್ಣೆಯನ್ನು ಮೀರಿ ಹರಿಯುತ್ತಿದ್ದ ನೆತ್ತರವನ್ನೂ, ಅಲ್ಲಲ್ಲಿ ಬೆಳಗಿದ್ದ ಔಷಧಿಯ ಬಿಳಿಪುಡಿಯ ರಂಪವನ್ನು ನೋಡಿ, ಲಬಲಬನೆ ಬಾಯಿ ಬಡಿದುಕೊಂಡೂ ಎದೆಗುದ್ದಿಕೊಂಡೂ ಕೇರಿಯೆಲ್ಲಾ ನೆರೆಯುವಂತೆ ಗೋಳು ಹೊಯ್ದುಕೊಂಡಿದ್ದಳು. ಇಜಾರದ ಸಾಬಿಯನ್ನು ಬೈಯ್ಯುವ ನೆವದಿಂದ ಎಲ್ಲರಿಗೂ ಸಹಸ್ರನಾಮಾರ್ಚನೆ ಮಾಡಿದ್ದಳು: "ಪಾಪಿ ಮುಂಡೆಗಂಡ! ಅವನ ಯದಿಗೆ ರಣ ಹೊಡಿಯಾ! ಅವನಿಗೆ ದೊಡ್ಡರೋಗ ಬರಾ! ಅವನ ಬಾಯಿಗೆ ಹುಳಾ ಬೀಳಾ! ಅವನ ರಟ್ಟೆ ಸೇದಿ ಹೋಗಾ! ಅವನ ಹೆಂಡ್ತಿ....!" ಎಂದು ಮೊದಲಾಗಿ ತನಗೆ ಗೊತ್ತಿದ್ದ ನಿಘಂಟನೆಲ್ಲ ಬರಿದು ಮಾಡಿದ್ದಳು" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–೨೪೨)

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಕೆಳಜಾತಿಯ ಲಕ್ಕಿ ಮೇಲ್ಜಾತಿ ವ್ಯಕ್ತಿಗಳಿಗೆ ನೆವದಿಂದ ಬೈಯ್ಯುತ್ತಿರುವುದು ಕಾಣುತ್ತಿದೆ. ಏಕೆಂದರೆ ಲಕ್ಕಿಯ ಗಂಡ ಮತ್ತು ಮಾವನಿಗೆ ತಿಮ್ಮಿ ಗುತ್ತಿಯ ಜೊತೆ ಹೋಗಿದ್ದರಿಂದ ತೋಟಕ್ಕೆ ಒಂದು ಆಳು ಕಡಿಮೆ ಆದರು ಎಂಬ ಕೋಪಕ್ಕೆ ಬೆಟ್ಟಳ್ಳಿಯ ಕಲ್ಲಯ್ಯಗೌಡರು ಇಜಾರದ ಸಾಬಿಯಿಂದ ಕೈಕಾಲುಗಳಲ್ಲಿ ರಕ್ತ ಸುರಿಯುವಂತೆ ಹೊಡೆಸುತ್ತಾರೆ. ಗಂಡ ಮತ್ತು ಮಾವ ಮನೆಗೆ ಬಂದಾಗ ಅದನ್ನು ಕಂಡು ಇಜಾರದ ಸಾಬಿಯನ್ನು ಬೈಯ್ಯುವ ನೆಪದಲ್ಲಿ ಆ ಘಟನೆಗೆ ಕಾರಣವಾದವರೆಲ್ಲರನ್ನೂ ಬೈಯ್ಯುತ್ತಾಳೆ. ಕೆಳಜಾತಿಯವರು ಮೇಲ್ಜಾತಿಯ ಹತ್ತಿರ ಮಾತನಾಡುವುದಕ್ಕೆ ಹೆದರಿಕೊಳ್ಳುತ್ತಾರೆ. ಅಂತದರಲ್ಲಿ ಬೈಯ್ಯುವ ಸಂದರ್ಭ ದೂರದ ಮಾತು ಎಂದೇ ಹೇಳಬಹುದು. ಗೌಡರ ಹೆಸರನ್ನು ಹಿಡಿದು ನೇರವಾಗಿ ಬೈಯ್ಯುವುದಿಲ್ಲ. ನೆವದಿಂದ ಎಲ್ಲರಿಗೂ ಶಾಪ ಹಾಕುತ್ತಾಳೆ. ಕೆಳಜಾತಿ ಪಾತ್ರಗಳು ಬೈಗುಳಗಳನ್ನು ಅಭಿವ್ಯಕ್ತಿಸಿರುವ ಕ್ರಮ ಈ ರೀತಿಯಾಗಿದೆ. ಅವರಿಗೆ ಕೋಪ, ಸಂಕಟ, ದುಃಖ, ದ್ವೇಷ ಇದ್ದರೂ ಸಹ ಧೈರ್ಯವಾಗಿ ಬೈಗುಳದ ಮೂಲಕ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಬೈಯುವುದಿಲ್ಲ. ತಮ್ಮ ಅಸಹನೆಯನ್ನು ಈ ರೀತಿ ಅಭಿವ್ಯಕ್ತಿ ಪಡಿಸುವಂತಹ ಸಂದರ್ಭವನ್ನು ಇಲ್ಲಿ ಕಾಣಬಹುದಾಗಿದೆ.

ಭೈರಪ್ಪ ಎಸ್.ಎಲ್, ಅವರ 'ದಾಟು' ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಕ್ಕೆ ಬಳಸಿರುವ ಬೈಗುಳವನ್ನು ಉದಾಹರಣೆಯ ಮೂಲಕ ನೋಡಬಹುದು. ಕೆಳಜಾತಿಯ ಹೊನ್ನೇಶ ಮತ್ತು ಅವನ ಸಂಗಡಿಗರು ಮೇಲಗಿರಿಗೌಡನ ಮಗನಿಗೆ ಈ ರೀತಿಯಾಗಿ ಬೈಯ್ಯುತ್ತಾರೆ.

"ಶಿಖಂಡಿ ಸೂಳೆ ಮಗ, ಶಿಖಂಡಿ ಸೂಳೆ ಮಗ"(ಭೈರಪ್ಪ ಎಸ್.ಎಲ್, ದಾಟು, ಪುಟ-೩೯೧). ಈ ಮೇಲಿನ ಉದಾಹರಣೆಯಲ್ಲಿ ಶ್ರೀನಿವಾಸನಿಗೆ ಕೆಳಜಾತಿಯ ಹುಡುಗರು 'ಶಿಖಂಡಿ ಸೂಳೆಮಗ' ಎಂದು ಬೈಯ್ಯುತ್ತಾರೆ. ಏಕೆಂದರೆ ಶ್ರೀನಿವಾಸ ಈ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥನಾಗಿರುತ್ತಾನೆ. ಹುಚ್ಚು ಹಿಡಿದು ತಿರುಗುತ್ತಿರುತ್ತಾನೆ. ಈ ಸಂದರ್ಭದಲ್ಲಿ ಹೊನ್ನೇಶ ಮತ್ತು ಅವನ ಸಂಗಡಿಗರು ಶಿಖಂಡಿ ಸೂಳೆಮಗ, ಶಿಖಂಡಿ ಸೂಳೆಮಗ ಎಂದು ಬೈಯ್ಯುತ್ತಾರೆ. ಹುಚ್ಚು ಹಿಡಿದ ಸಂದರ್ಭ ಆಗಿದ್ದರಿಂದ ಕೆಳಜಾತಿ ಪಾತ್ರಗಳು ಈ ರೀತಿಯಾಗಿ ತಮ್ಮ ಮನಸ್ಸಿನಲ್ಲಿರುವ ವೇದನೆಯನ್ನು ಅಭಿವ್ಯಕ್ತಿಸುತ್ತಾರೆ. ಆದರೆ ಸಾಮಾನ್ಯ ಸಂದರ್ಭದಲ್ಲಿ ಈ ರೀತಿಯಾಗಿ ಬೈಯ್ಯುವುದು ಸಾಧ್ಯವಾಗುವುದಿಲ್ಲ ಎಂದು ಹೇಳಬಹುದು. ಈ ಕಾದಂಬರಿಯಲ್ಲಿ ಪ್ರತ್ಯಕ್ಷವಾಗಿ ಮೇಲ್ಜಾತಿ ವ್ಯಕ್ತಿಗಳಿಗೆ ಕೆಳಜಾತಿ ವ್ಯಕ್ತಿಗಳು ಬೈಯ್ಯುವ ಸಂದರ್ಭ ಕಂಡುಬರುವುದಿಲ್ಲ. ಸಾಮಾನ್ಯ ಸಂದರ್ಭಗಳಲ್ಲಿ ನೇರವಾಗಿ ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವುದು ಕೂಡ ವಿರಳ ಎಂದೇ ಹೇಳಬಹುದು.

ದೊರೆ-ಭಗವಾನ್ ನಿರ್ದೇಶನದ 'ಮುನಿಯನ ಮಾದರಿ' ಚಲನಚಿತ್ರದಲ್ಲಿ ಕೆಳಜಾತಿ ಪಾತ್ರ ಮೇಲ್ಜಾತಿ ಪಾತ್ರಕ್ಕೆ ಬೈಯ್ಯುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು. "ಹಲ್ಕಬಡ್ಡಿಮಗನೆ ಗೌಡ-ಗೌಡ ನಿನ್ಗೆ ಸರಿಯಾಗಿ ಬುದ್ಧಿ ಕಲಿಸ್ತೀನಿ"(ಚಲನಚಿತ್ರ, ಮುನಿಯನ ಮಾದರಿ) ಈ ಚಲನಚಿತ್ರದಲ್ಲಿ ಮಾರ ಎಂಬ ಕೆಳಜಾತಿ ವ್ಯಕ್ತಿ ಗೌಡನನ್ನು ಪರೋಕ್ಷವಾಗಿ ಬೈಯ್ಯುತ್ತಾನೆ. ಗೌಡ ಮುನಿಯನ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಹೇಳಿ ಮಾರನ ತಲೆಯನ್ನು ಕೆಡಿಸಿರುತ್ತಾನೆ. ಸತ್ಯ ತಿಳಿದ ಮೇಲೆ ಗೌಡನನ್ನು 'ಹಲ್ಕಬಡ್ಡಿಮಗನೆ' ಎಂದು ಬೈಯ್ಯುದ್ಕೊಳ್ಳುತ್ತಾನೆ. ಈ ರೀತಿಯಾಗಿ ಕೆಳಜಾತಿ ಪಾತ್ರಗಳು ಎದುರು ಬಿದ್ದು, ಪ್ರತಿಭಟಿಸುವ ಸಂದರ್ಭಗಳು ವಿರಳ. ಇಲ್ಲಿ ಮಾರ ಎಂಬ ಕೆಳಜಾತಿ ವ್ಯಕ್ತಿ ಆಧುನಿಕ ಶಿಕ್ಷಣವನ್ನು ಪಡೆದಿರುತ್ತಾನೆ. ಈ ರೀತಿ ಗೌಡನನ್ನು ಬೈಯ್ಯುವ ಧೈರ್ಯ ಮತ್ತು ಪ್ರತಿಭಟಿಸುವ ಧೈರ್ಯ ಶಿಕ್ಷಣದ ಪ್ರಭಾವದಿಂದಲೂ ಬಂದಿರಬಹುದು ಎಂದು ಹೇಳಬಹುದು.

ಗೌಡ ಹೇಳಿದ ಮಾತನ್ನು ಕೇಳಿಕೊಂಡು ತನ್ನ ಅಣ್ಣನಾದ ಮುನಿಯನನ್ನು ಕೊಲೆ ಮಾಡಲು ಹೋಗುತ್ತಾನೆ. ಅಲ್ಲಿ ತನ್ನ ಅಣ್ಣ ಮತ್ತು ಹೆಂಡತಿ ಚೆನ್ನಿ ಮಾತನಾಡುವ ಸಂದರ್ಭವನ್ನು ಕಂಡು ಗೌಡ ಹೇಳಿದ ಮಾತುಗಳು ಸುಳ್ಳು ಎಂದು ತಿಳಿದು ನೇರವಾಗಿ ಗೌಡನ ಹತ್ತಿರ ಹೋಗುತ್ತಾನೆ. ಅಲಿ ಗೌಡನನ್ನು ಈ ರೀತಿಯಾಗಿ ಬೈಯ್ಯುತ್ತಾನೆ.

"ಲೇ ಕೊರಮ" ನಿನ್ ಮಾತ್ ಕೇಳ್ಕೊಂಡು ದೇವ್ರಂತ ನಮ್ಮಣ್ಣನ್ನ ಕೊಲೆ ಮಾಡಿಬಿಡ್ತಿದ್ದಿನಲ್ಲೊ" (ಚಲನಚಿತ್ರ, ಮುನಿಯನ ಮಾದರಿ) ಎಂದು ಮಾರ ಗೌಡನನ್ನು ಬೈಯ್ಯುವುದನ್ನು ಕಾಣಬಹುದು. 'ಕೊರಮ' ಎಂಬ ಸಮುದಾಯವನ್ನು ಆರೋಪಿಸಿ ಗೌಡನಿಗೆ ಬೈಯ್ಯಲಾಗುತ್ತಿದೆ. ಆ ಸಮುದಾಯವನ್ನು ಸಹ ಕೆಳ ಸಮುದಾಯ ಎಂದು ಕರೆಯಲಾಗುತ್ತಿದೆ.

ಒಬ್ಬ ಕೆಳಜಾತಿಯ ವ್ಯಕ್ತಿಯೇ ಒಂದು ಕೆಳಸಮುದಾಯವನ್ನು ಆರೋಪಿಸಿ ಮೇಲ್ಜಾತಿ ವ್ಯಕ್ತಿಗೆ ಬೈಯ್ಯುತ್ತಿದ್ದಾನೆ. ಸಮಾಜದಲ್ಲಿ ಮೇಲ್ಜಾತಿ ವ್ಯಕ್ತಿಗಳು ಕೆಟ್ಟ ಕೆಲಸ ಮಾಡಿದಾಗ, ಇನ್ನಿತರೆ ಸಂದರ್ಭಗಳಲ್ಲಿ ಕೆಲವು ಸಮುದಾಯಗಳನ್ನು ಬಳಸಿ ಬೈಯ್ಯುತ್ತಿದ್ದಾರೆ. ಹೊಲೆಯ, ಮಾದಿಗ, ಮಾದಗಿತಿ, ಹೊಲತಿ, ಕೊರಮ, ವಡ್ಡ ಎಂಬಂತಹ ಸಮುದಾಯಗಳನ್ನು ಹೆಸರಿಸಿ ಬೈಯ್ಯುತ್ತಾರೆ. ದಾಟು ಕಾದಂಬರಿಯಲ್ಲಿ ವೆಂಕಟರಮಣ್ಣಯ್ಯ ಎಂಬ ವ್ಯಕ್ತಿ ತನ್ನ ಮಗಳಿಗೆ 'ಹೊಲೆಮುಂಡೆ', 'ಮಾದಗಿತ್ತಿ' ಎಂಬ ಪದಗಳನ್ನು ಬಳಸಿ ಬೈಯ್ಯುತ್ತಾನೆ. ಏಕೆಂದರೆ ಬ್ರಾಹ್ಮಣಳಾದ ಇವಳು ಶೂದ್ರನನ್ನು ಮದುವೆಯಾಗುತ್ತಾಳೆ ಎಂಬ ಸುದ್ದಿ ತಿಳಿದಾಗ ಈ ರೀತಿಯಾಗಿ ಒಂದು ಸಮುದಾಯವನ್ನು ಹೆಸರಿಸಿ ಬೈಯ್ಯುತ್ತಾರೆ. ಕೆಳಜಾತಿ ವ್ಯಕ್ತಿಗಳನ್ನು ಕುರಿತು ಬೈಯ್ಯುವಾಗ ಮೇಲ್ಜಾತಿಗಳನ್ನು ಹೆಸರಿಸಿ ಬೈಯ್ಯುವುದಿಲ್ಲ. ಸಮಾಜದಲ್ಲಿ ಕೆಲವು ಸಮುದಾಯಗಳನ್ನು ಆರೋಪಿ ಬೈಯ್ಯುವುದನ್ನು ಕಾಣಬಹುದು. ಈ ಚಲನಚಿತ್ರದಲ್ಲಿ ಒಬ್ಬ ಕೆಳಜಾತಿ ಪಾತ್ರ ಒಂದು ಸಮುದಾಯವನ್ನು ಹೆಸರಿಸಿ ಮೇಲ್ಜಾತಿ ವ್ಯಕ್ತಿಗೆ ಬೈಯ್ಯುತ್ತಾನೆ. ಅಂದರೆ ಅವರಿಗಿಂತ ಕೆಳಗಿನ ಸಮುದಾಯ ಅದು ಎಂದು ಭಾವಿಸುತ್ತಿದ್ದಾನೆಂದು ತಿಳಿಯಬಹುದು. ಗೌಡನಿಗೆ ನೇರವಾಗಿ ಈ ರೀತಿಯಾಗಿ ಬೈಯ್ಯುವುದಕ್ಕೆ ಅವನಿಗೆ ಶಿಕ್ಷಣದ ಪ್ರಭಾವವೂ ಇರಬಹುದೆಂದು ಭಾವಿಸಬಹುದು.

ಇದೇ ರೀತಿಯಾಗಿ ಕೆಳಜಾತಿ ವ್ಯಕ್ತಿ ಮೇಲ್ಜಾತಿ ವ್ಯಕ್ತಿಗೆ ಬೈಯ್ದಿರುವ ಸಂದರ್ಭವನ್ನು ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ಎಂಬ ನಾಟಕದಲ್ಲಿ ಕಾಣಬಹುದು. ಕೆಳಜಾತಿಯ ಶಿವಣ್ಣ, ಗುಂಡಮ್ಮ ಗೌಡತಿ ಎಂಬ ಮೇಲ್ಜಾತಿ ಮಹಿಳೆಗೆ ಪರೋಕ್ಷವಾಗಿ ಬೈಯ್ಯುವುದನ್ನು ಉದಾಹರಣೆಯಾಗಿ ನೋಡಬಹುದು.

'ಆಹಾ ರೆ ನಿನ್ ತಾಯಿನ್ ಹಡಾ ನಮ್ ತಮ್ಮನ್ ಹೊಡ್ದ ನಿನ್ ಬಿಡ್ಯೇನ್ಯಾ ನಿನ್ ಕಲಾಸ್ ಮಾಡ್ಯ ಆ ಕಲ್ಯಾನ್ ಕಲಾಸ್ ಮಾಡ್ಯ ಆ ಭೋಸಡೀನ್ ಕಲಾಸ್ ಮಾಡ್ತೀನ್ಸ್(ಚನ್ನಣ್ಣ ವಾಲಿಕಾರ, ಇಪ್ಪತ್ತಾಂಶಗಳು, ಪುಟ-೧೦೪) ಈ ನಾಟಕದಲ್ಲಿ ಕೆಳಜಾತಿಯ ನಿಂಗ್ಯಾ, ಕಲ್ಯಾ ಎಂಬ ವ್ಯಕ್ತಿಗಳು ಗೌಡ್ತಿಯ ಮಾತು ಕೇಳಿ ಶಿವಣ್ಣನ ತಮ್ಮನಾದ ನವಲ್ಯಾನನ್ನು ಸಾಯಿಸಿರುತ್ತಾರೆ. ಇವರ ತಪ್ಪನ್ನು ಒಪ್ಪಿಕೊಂಡಾಗ ಶಿವಣ್ಣ ಇವರನ್ನು ಬೈಯ್ಯುತ್ತಾ ಆ ಗೌಡ್ತಿಯನ್ನು ಸಹ ಭೋಸುಡಿ ಎಂಬ ಪದ ಬಳಸಿ ಬೈಯ್ಯುತ್ತಾನೆ. ಪ್ರತ್ಯೇಕವಾಗಿ ಅಲ್ಲ ಪರೋಕ್ಷವಾಗಿ ತಮ್ಮ ತಮ್ಮನನ್ನು ಸಾಯಿಸಿದ್ದಕ್ಕೆ ಕೋಪದಿಂದ ಶಿವಣ್ಣ ಗೌಡ್ತಿಯನ್ನು ಬೈಯ್ಯುವುದನ್ನು ಕಾಣಬಹುದು.

ಈ ನಾಟಕದಲ್ಲಿ ಮೇಲ್ಜಾತಿ ವ್ಯಕ್ತಿಗೆ ಬೈಯ್ಯು ಇನ್ನೊಂದು ಸಂದರ್ಭವನ್ನು ನೋಡಬಹುದು. "ಈ ಮ್ಯಾಲಿನ್ಮಂದಿ ಕಾಲ್ಕಾಲ್ದಿಂದ ಹಿಂಗೆ ಮಾಡ್ಕೋತ್ ಬಂದಾರ್ಲೆ ಆ ಗೌಡ್ತಿ ಮಿಂಡರ್ನ ಹಡಾ ಆಕಿಗೆ ಸುಮ್ ಬಿಡ್‌ಬಾರ್ದಲೆ"(ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ-೧೦೮). ಕೆಳಜಾತಿ ಶಿವಣ್ಣ ತನ್ನ ತಮ್ಮನನ್ನು ಕಳೆದುಕೊಂಡ ದುಃಖದಿಂದಾಗಿ ಆ ಗೌಡ್ತಿಯನ್ನು ಈ ರೀತಿಯಾಗಿ ಬೈಯ್ಯುತ್ತಾನೆ. 'ಆ ಗೌಡ್ತಿ ಮಿಂಡರ್ನ ಹಡಾ' ಎಂಬ ಬೈಗುಳವನ್ನು ಬಳಸಿ ಬೈಯ್ಯುತ್ತಾನೆ. ಪ್ರತ್ಯೇಕ್ಷವಾಗಿ ಬೈಯ್ಯುವುದಿಲ್ಲ. ಆ ದುಃಖದ ಸಂದರ್ಭ ಅವನು ಈ ರೀತಿಯಾಗಿ ಬೈಯ್ಯಲು ಕಾರಣವಾಗುತ್ತದೆ. ಸಾಮಾನ್ಯವಾಗಿ ಜಗಳದ ಸಂದರ್ಭದಲ್ಲಿ ಈ ರೀತಿಯ ಬೈಗುಳಗಳು ದೃಶ್ಯಮಾಧ್ಯಮದಲ್ಲಿ ನೇರವಾಗಿ ಬಳಕೆಯಾಗುವುದು ವಿರಳ. ಈ ರೀತಿ ಬೈಯ್ಯುವುದನ್ನು ಕಾಣಲು ಸಾಧ್ಯವಿಲ್ಲ ಎನಿಸುತ್ತದೆ.

ಚಂದ್ರಶೇಖರ ಕಂಬಾರ ಅವರ 'ಭಾರತಾಂಬೆ' ಎಂಬ ನಾಟಕದಲ್ಲಿ ಕೆಳಜಾತಿ ಮಹಿಳೆ ಮೇಲ್ಜಾತಿ ಪುರುಷರಿಗೆ ಬೈಯ್ದಿರುವ ಸಂದರ್ಭವನ್ನು ಉದಾಹರಣೆಯ ಮೂಲಕ ನೋಡಬಹುದು. ಉದಾಹರಣೆ,

"ರಾಮಕ್ಕ : ಎಲಾ ನನ್ನ ಹಾಟ್ಯಾ ಶೆಟ್ಟಿ, ಇವರ್ನೆಲ್ಲಾ ಸಾಮೀಲ ಮಾಡಿಕೊಂಡ ಬಂದಿದ್ದೇನೋ.."(ಚಂದ್ರಶೇಖರ ಕಂಬಾರ, ನೆಲಸಂಪಿಗೆ ಭಾಗ-೨, ಪುಟ-೪೨೨) ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿಯ ರಾಮಕ್ಕ ಮೇಲ್ಜಾತಿ ರಾಮಶೆಟ್ಟಿಗೆ 'ನನ್ನ ಹಾಟ್ಯಾ ಶೆಟ್ಟಿ' ಎಂದು ಬೈಯ್ಯುತ್ತಾಳೆ. ಏಕೆಂದರೆ ಇವನು ರಾಮಕ್ಕನ ಹತ್ತಿರ ಮೋಸದಿಂದ ಪತ್ರಕ್ಕೆ ಸಹಿ ಮಾಡಿಸಲು ಬಂದಿರುತ್ತಾನೆ. ರಾಮಕ್ಕ ಒಪ್ಪದಿದ್ದಕ್ಕೆ ಇವಳು ಸೂಳೆಗಾರಿಕೆ ಮಾಡುತಿದ್ದಾಳೆ. ಇಲ್ಲಿ ನಾನು ಖಾಯಂ ಗಿರಾಕಿ ಅಂತ ಪೋಲಿಸರಿಗೆ ಸುಳ್ಳು ಹೇಳಿದ್ದಕ್ಕೆ ರಾಮಕ್ಕನಿಗೆ ಕೋಪಬಂದು, ಇದು ತನ್ನ ಮರ್ಯಾದೆಯ ಪ್ರಶ್ನೆ ಆಗಿದ್ದರಿಂದ ಅವನನ್ನು ಈ ರೀತಿಯಾಗಿ ಬೈಯ್ಯುತ್ತಾಳೆ.

ರಾಮಕ್ಕನ ಮಗಳು ಬಂಗಾರಿಯನ್ನು ಮಂತ್ರಿಯ ಮಗ ಅತ್ಯಾಚಾರ ಮಾಡಿದ ಸಂದರ್ಭ, ತನ್ನ ತಮ್ಮನನ್ನು ಹೊಡೆಯಲು ಬಂದ ಸಂದರ್ಭದಲ್ಲೂ ಸಹ ಯಾರನ್ನು ಬೈಯ್ಯದೆ ದುಃಖ ಪಡುತ್ತ ಶೋಷಣೆಯನ್ನು ಅನುಭವಿಸುತ್ತಿರುತ್ತಾಳೆ. ಯಾವಾಗ ತನ್ನ ಸ್ವಾಭಿಮಾನಕ್ಕೆ, ಮರ್ಯಾದೆಗೆ ಧಕ್ಕೆ ಉಂಟಾಗುತ್ತದೋ ಮತ್ತು ಪೋಲಿಸರ ಭಯಕ್ಕೆ ರಾಮಶೆಟ್ಟಿ ಸುಳ್ಳು ಹೇಳಿದ್ದರಿಂದ ಅವಳು 'ಎಲಾ ನನ್ನ ಹಾಟ್ಯಾ ಶೆಟ್ಟಿ' ಸುಳ್ಳು ಹೇಳುತ್ತಿಯ ಎಂದು ಬೈಯ್ಯುತ್ತಾಳೆ. ಈ ರೀತಿಯಾಗಿ ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ ಬೈಯ್ಯುವ ಸಂದರ್ಭವನ್ನು ಇಲ್ಲಿ ಕಾಣಬಹುದಾಗಿದೆ.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮೇಲ್ಜಾತಿಯ ಪಾತ್ರಗಳಿಗೆ ಕೆಳಜಾತಿ ಪಾತ್ರಗಳು ಬೈಯ್ಯುವಾಗ ನೇರವಾಗಿ ಬೈಯ್ಯುವ ಪ್ರಸಂಗಗಳು ಕಂಡುಬರುವುದು ವಿರಳ. ನೇರವಾಗಿ ಬೈಯ್ದಿರುವ ಸಂದರ್ಭಗಳಿವೆ. ಆದರೆ ಸಾಮಾನ್ಯ ಸಂದರ್ಭದಲ್ಲಿ ಬೈಯ್ದಿರುವುದಾಗಿಲ್ಲ.

ಕೆಳಜಾತಿ ಪಾತ್ರಗಳು ಸ್ವಾಭಿಮಾನಕ್ಕೆ, ಮರ್ಯಾದೆಗೆ ಧಕ್ಕೆಯುಂಟಾದಾಗ, ಶೋಷಣೆಯ ತೀವ್ರತೆಗೆ ಒಳಗಾದಾಗ ಪ್ರತಿಭಟಿಸಿ ಮೇಲ್ಜಾತಿ ಪಾತ್ರಗಳಿಗೆ ಬೈಯ್ದಿರುವ ಸಂದರ್ಭಗಳಾಗಿವೆ. ಮುನಿಯನ ಮಾದರಿ ಚಲನಚಿತ್ರದಲ್ಲಿ ಕೆಳಜಾತಿ ಮಾರ ಮೇಲ್ಜಾತಿಯ ಗೌಡನಿಗೆ ಲೇ ಕೊರಮ ಎಂದು ಬೈಯ್ಯುತ್ತಾನೆ. ಏಕೆಂದರೆ ಮಾರನ ಅಣ್ಣನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಮುನಿಯನನ್ನು ಕೊಲ್ಲುವಂತೆ ಗೌಡ ಮಾರನಿಗೆ ಆದೇಶ ಮಾಡಿರುತ್ತಾನೆ. ಆರೋಪಗಳೆಲ್ಲ ಸುಳ್ಳು ಎಂದು ತಿಳಿದಾಗ ದೇವ್ರಂತ ಅಣ್ಣನನ್ನು ಸುಮ್ಮನೆ ಕೊಂದು ಬಿಡುತ್ತಿದ್ದೆ ಎಂದು ಕೋಪದಲ್ಲಿ ಬಂದು ಗೌಡನ್ನು 'ಲೇ ಕೊರಮ ನಿನ್ ಮಾತ್ ಕೇಳಿ ದೇವ್ರಂತ ನಮ್ಮಣ್ಣನ್ನ ಕೊಂದ ಬಿಡತ್ತಿದ್ನಲ್ಲೋ ಎಂದು ಹೊಡೆಯಲು ಹೋಗುತ್ತಾನೆ. ಈ ಕೋಪ, ಆವೇಶ ಅವನನ್ನು ಬೈಯ್ಯುವಂತೆ ಮಾಡುವ ಸಂದರ್ಭವಾಗಿದೆ. ತೀವ್ರ ಆಕ್ರೋಶದ ಸಂದರ್ಭವಾಗಿದೆ. ಭಾರತಾಂಬೆ ನಾಟಕದಲ್ಲಿ ಕೆಳಜಾತಿ ರಾಮಕ್ಕ ಮೇಲ್ಜಾತಿ ರಾಮಶೆಟ್ಟಿಯನ್ನು ತನ್ನ ಮರ್ಯಾದೆ ಮತ್ತು ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ 'ಎಲಾ ನನ್ನ ಹಾಟ್ಯಾ ಶೆಟ್ಟಿ' ಎಂದು ಬೈಯ್ಯುತ್ತಾಳೆ. ಸ್ವಾಭಿಮಾನಕ್ಕೆ, ಮರ್ಯಾದೆಗೆ ಧಕ್ಕೆಯುಂಟಾದಾಗ ಮಾತ್ರ ಬೈಯ್ಯುವ ಸಂದರ್ಭವನ್ನು ಇಲ್ಲಿ ಕಾಣಬಹುದು. ಇನ್ನೂ ಉಳಿದಂತೆ ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಸಂದರ್ಭಗಳನ್ನು ನೋಡಿದರೆ ಅವು ನೆವದಿಂದ, ಪರೋಕ್ಷದಲ್ಲಿ ಬೈಯ್ಯುವ ಬೈಗುಳಗಳಾಗಿವೆ. ಅಶ್ಲೀಲ ಬೈಗುಳಗಳಿಂದ, ಸಮುದಾಯ ಕೇಂದ್ರಿತ ಬೈಗುಳಗಳಿಂದ ಕೆಳಜಾತಿಯವರನ್ನು ಬೈಯ್ಯುವಂತೆ ಮೇಲ್ಜಾತಿಯವರನ್ನು ಬೈಯ್ಯುವುದು ಕಡಿಮೆಯೆಂದೇ ಹೇಳಬಹುದಾಗಿದೆ. ಇಲ್ಲಿ ಕೆಳಜಾತಿ ಪಾತ್ರಗಳ ಮನೋಧೋರಣೆ ಕಂಡುಬರುತ್ತದೆ.

೫.೧.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

ಯಾವುದೇ ಸಮುದಾಯದ ವ್ಯಕ್ತಿಗಳಾಗಲಿ ಇನ್ನೊಬ್ಬರಿಗೆ ಬೈಯ್ಯುವಾಗ ತಮ್ಮ ಸಮುದಾಯದ ಹೆಸರನ್ನು ಆರೋಪಿಸಿ ಬೈಗುಳಗಳಲ್ಲಿ ಬಳಸುವುದು ಕಂಡುಬರುವುದಿಲ್ಲ. ತಮ್ಮ ಜಾತಿಗಿಂತ ಕೀಳೆಂದು ಭಾವಿಸಿದ ಸಮುದಾಯಗಳನ್ನು ಉಲ್ಲೇಖಿಸಿ ಅವರು ಬೈಯ್ಯುತ್ತಾರೆ. ಮೇಲ್ಜಾತಿಯ ವ್ಯಕ್ತಿಗಳಾಗಲಿ ಕೆಳಜಾತಿ ವ್ಯಕ್ತಿಗಳಾಗಲಿ ಬೈಗುಳಗಳಲ್ಲಿ ತಮ್ಮ ಸಮುದಾಯಗಳನ್ನು ಆರೋಪಿಸಿಕೊಳ್ಳುವುದಿಲ್ಲ. ತಮ್ಮ ಸಮುದಾಯಕ್ಕಿಂತ ಮೇಲು ಎಂದು ಭಾವಿಸಿರುವ ಜಾತಿಗಳನ್ನು ಸಹ ಬೈಗುಳಗಳಲ್ಲಿ ಆರೋಪಿಸಿ ಬೈಯ್ಯುವುದು ಕಂಡುಬರುವುದಿಲ್ಲ. ಏಕೆ ಈ ರೀತಿಯ ಮನೋಧೋರಣೆ ಕಂಡುಬರುತ್ತದೆ ಎಂಬುದನ್ನು ನೋಡುವ ಅವಶ್ಯಕತೆಯಿದೆ. ತಮ್ಮ ಮಕ್ಕಳಿಗೆ ಅಥವಾ ಬೇರೆ ಸಮುದಾಯದವರಿಗೆ ಬೈಯ್ಯುವಾಗ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳಜಾತಿಯವರು ಎಂದು ಭಾವಿಸಿರುವ ಜಾತಿಗಳನ್ನು ಬೈಗುಳಗಳಲ್ಲಿ ಸೇರಿಸಿ ಬೈಯ್ಯುತ್ತಾರೆ. ಕೆಟ್ಟಕೆಲಸ ಮಾಡಿದಾಗ, ಹೇಳಿದ ಮಾತು ಕೇಳದಿದ್ದ ಸಂದರ್ಭದಲ್ಲಿ ಇನ್ನೂ ಮುಂತಾದ ಪ್ರಸಂಗಗಳಲ್ಲಿ ಈ ರೀತಿಯಾಗಿ ಬೈಯ್ಯುವುದನ್ನು ಕಾಣಬಹುದುದಾಗಿದೆ. ಇಲ್ಲಿ ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಸಂದರ್ಭದಲ್ಲಿ ಬಳಸಿರುವಂತಹ ಬೈಗುಳಗಳಾವುವು

ಎಂಬುದನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯನ್ನು ಅನುಲಕ್ಷಿಸಿ ವಿವರಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವ ಸಂದರ್ಭವನ್ನು ನೋಡಬಹುದು. ಸುಬ್ಬಣ್ಣಹೆಗ್ಗಡೆ ತನ್ನ ಮಗನಾದ ತಿಮ್ಮಪ್ಪ ಹೆಗ್ಗಡೆಗೆ ಬೈಯ್ಯುವ ಪ್ರಸಂಗ ಈ ರೀತಿಯಾಗಿದೆ.

"ನಾವೇನು ಕಡಿಮೆ ಅವನಿಗೆ? ಕ್ವಿವ ಮನೀಗೆ ಹೆಂಚು ಹಾಕಿಸೋವಾಗ ನಾವು ಸೋಂಗೆ ಹಾಕಿಸಿಕೊಂಡು ಕಾಲಮಾಡೋದು ಹ್ಯಾಂಗೆ?" ಎಂದು ತಮ್ಮ ಗೌರವಕ್ಕಾಗಿಯಾದರೂ ತಾವೂ ಹೆಂಚು ಹಾಕಿಸಬೇಕೆಂದು ಕೇಳಿಕೊಂಡನು. ಸುಬ್ಬಣ್ಣಹೆಗ್ಗಡೆಯವರ ಹುಟ್ಟು ಜಿಪುಣತೆಗೆ ಒದೆ ಬಿದ್ದಂತಾಗಿ, ಹಣೆ ಬಡೆದುಕೊಳ್ಳುತ್ತಾ "ಅಯ್ಯಯ್ಯಯ್ಯಯ್ಯೋ ನೀ ಎಲ್ ಕಲಿತಪ್ಪಾ ಈ ಮನೆಹಾಳ್ ಬುದ್ದೀನಾ? ನಮ್ಮ ಅಪ್ಪ, ಅಜ್ಜ, ಮುತ್ತಜ್ಜ ಎಲ್ಲಾ ಸೋಂಗೆ ಮನೇಲೆ ಕಾಲ ಹಾಕಲಿಲ್ಲೆನೋ? ಅವರಿಗಿಲ್ದೇ ಇದ್ದ ಬಹುಮಾನಾ ನಿಮಗೆಲ್ಲ ಈಗ ಬಂದುಬಿಡ್ತಲ್ಲೇ? ಅಯ್ಯೋ, ಮನೆಹಾಳ್ ಮುಂಡೆಮಕ್ಕಳ್ರಾ, ನೀವು ಬಾಳಿರೇನೋ? ಬೂದಿ ಹುಯ್ಕೊಂಡು ಹೋಗ್ತಿರೋ!" ಎಂದು ಮೊದಲಾಗಿ ಆಶೀರ್ವಾದ ಮಾಡಿ ಕಳುಹಿಸಿದ್ದರು(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೩೦). ಸುಬ್ಬಣ್ಣಹೆಗ್ಗಡೆ ತನ್ನ ಮಗನಿಗೆ ಬೈಯ್ಯುವಾಗ ಬಳಸುವ ಬೈಗುಳ ಶಾಪರೂಪದ ಬೈಗುಳಗಳಾಗಿವೆ. 'ಮುಂಡೆ ಮಕ್ಕಳು', 'ಬೂದಿ ಹುಯ್ಕೊಂಡು ಹೋಗು' ಎಂಬಂತಹ ಬೈಗುಳಗಳನ್ನು ಬಳಸುತ್ತಾನೆ. ತನ್ನ ಮಗನಾದರೂ ಮುಂಡೆಮಗ ಎಂದು ಬೈಯ್ಯುತ್ತಾನೆ. ಒಂದು ಹೆಣ್ಣನ್ನು ಕೇಂದ್ರಿಕರಿಸಿ ಪುರುಷನಿಗೆ ಬೈಯ್ಯುವ ಬೈಗುಳವಾಗಿದೆ. ಇನ್ನೊಂದು ಶಾಪರೂಪದ ಬೈಗುಳವಾಗಿದೆ. ಬೂದಿ ಹುಯ್ಕೊಂಡು ಹೋಗ್ತಿರೋ ಅಂದ್ರೆ ಸತ್ತು ಹೋಗ್ತಿರೋ ಎಂಬ ಅರ್ಥವನ್ನು ಪಡೆಯುತ್ತದೆ. ಈ ಬೈಗುಳಗಳಲ್ಲಿ ಜಾತಿಸೂಚಕ ಬೈಗುಳಗಳು ಕಂಡುಬರುವುದಿಲ್ಲ ಎಂದು ಹೇಳಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೇ ಮೇಲ್ಜಾತಿ ಮಹಿಳಾ ಪಾತ್ರಗಳು ಪರಸ್ಪರ ಬೈಯ್ದುಕೊಳ್ಳುವ ಸಂದರ್ಭವನ್ನು ನೋಡಬಹುದು. ಮೇಲ್ಜಾತಿ ಮಹಿಳೆಯಾದ ಜಟ್ಟಮ್ಮ-ಲಕ್ಕಮ್ಮ ಜಗಳವಾಡುವ ಸಂದರ್ಭದಲ್ಲಿ ಬಳಸುವ ಬೈಗುಳ ಈ ಕೆಳಗಿನಂತಿವೆ. ಉದಾಹರಣೆಗೆ,

"ಹಳೇಮನೆ ಜಟ್ಟಮ್ಮ ಲಕ್ಕಮ್ಮನಿಗೆ ನಿನ್ನ ಕೊಡ್ತಾರಲ್ಲಾ ಹಂದಿ ಒಡ್ಡಿಗೆ!"

ಅಂದರಂತೆ. ಅದಕ್ಕೆ ಲಕ್ಕಮ್ಮ 'ಬರ್ತಾಳಲ್ಲಾ ನಿನ್ನ ಸವ್ತಿ ಹಂದಿ ಒಡ್ಡಿಯಿಂದ!

ಅಂದರಂತೆ. ಅದಕ್ಕಿವ್ರು 'ನನ್ನ ಹೆಣ ಬೀಳ್ಬೇಕು ಆ ತಾಟಗಿತ್ತಿ ಈ ಮನೆಗೆ

ಕಾಲಿಡಬೇಕಾದ್ರೆ ನಾನು ಮಾಡಾದ್ನೆಲ್ಲಾ ಮಾಡೀನಲ್ಲ; ಇನ್ನೆಲ್ಲಿ ಬಾರ್ತಾಳೆ

ಅವ್ಳು? ಅಂದರಂತೆ. ಬರದಿದ್ರೇ.... ಈ ಬಂಜೆಮುಂಡೇನ ಕಟ್ಟಿಕೊಂಡೂ...

ಗುಂಡಿ ಹಾರ್ತಾನೇನು ಅಣ್ಣಯ್ಯ?' ಅಂದೇ ಬಿಟ್ರಂತೆ ನಮ್ಮ ಹೆಗ್ಗೇರ ತಂಗಿ ಲಕ್ಕಮ್ಮೋರು! 'ನಿನ್ನ ಮಿಂಡನ ತಂಗಿ ಅಲ್ಲದಿದ್ರೆ ಇನ್ಯಾರೂ ಇಲ್ಲೇನು-ಹೆಣ್ಣು? ನಿನ್ನ ಮಂಜಿ ಏನು ರತಿ ಅಂತಾ ಮಾಡ್ತಿಯಾ? ನಿನ್ನ ಗಂಡ ಅಗಾಂವ್ನ ಕರೀ ಹಂದಿ ಮುಸುಡಿಗೂ ಅವನ ತಂಗಿ ಅವಳ ಮುಸುಡಿಗೂ ಏನೂ ಇಲ್ಲ ಯತ್ಯಾಸ? ಆ ಹೂವಳ್ಳಿ ಹೆಣ್ಣು, ಚಿನ್ನದಂಥಾ ಹೆಣ್ಣು, ಚಿನ್ನಮ್ಮನ್ನೇ ತರ್ತೀನಿ? ಅಂದರಂತೆ. ಹಳೇಮನೆ ಅಮ್ಮ. ಅದಕ್ಕೆ ಲಕ್ಕಮ್ಮ 'ತಂದ್ಕಾ ಆ ದದ್ದು ಹಿಡುಕ ಕುನ್ನೀನೆ! ಯಾರು ಬ್ಯಾಡ ಅಂತಾರೆ?' ಅಂದ್ರಂತೆ. 'ಥೂ ನಿನ್ನ ಬಾಯಲ್ಲಿ ಹುಳು ಬಿದ್ದುಹೋಗ! ಅವಳು ಹೇತು ಬಂದಲ್ಲಿ ನಿಂಗೆ ಕೂತು ಬರಾ ಯೋಗ್ತೇ ಇದ್ಯೇನೆ?' ಅಂತ ಏನೇನೋ ಬಯ್ದು, ಉಗ್ದು ಬಿಟ್ರಂತೆ ಜಟ್ಟಮ್ಮ" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೩೧)

ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಮಹಿಳೆಯರು ಬೈಯ್ದಾಡುಕೊಳ್ಳುವ ಸಂದರ್ಭದಲ್ಲಿ ಮೇಲ್ಜಾತಿಯವರನ್ನು ಉಲ್ಲೇಖಿಸುತ್ತ ಬೈಯ್ಯುತ್ತಿರುವುದನ್ನು ಕಾಣಬಹುದು. ಬೈಯ್ಯುವ ಸಂದರ್ಭದಲ್ಲಿ, ಸವ್ತಿ, ತಾಟಗಿತ್ತಿ, ಬಂಜೆ ಮುಂಡೆ, ಮಿಂಡ, ಕರೀ ಹಂದಿ ಮುಸೂಡಿ, ದಡ್ಡಹಿಡುಕಕುನ್ನಿ, ಬಾಯಲ್ಲಿ ಹುಳ ಬಿದ್ದು ಹೋಗ ಎಂಬ ಪದ ಮತ್ತು ವಾಕ್ಯರೂಪದ ಬೈಗುಳಗಳನ್ನು ಬಳಸಿ ಬೈಯ್ಯಲಾಗುತ್ತಿದೆ. ಇಲ್ಲಿ ಮೇಲ್ಜಾತಿ ವ್ಯಕ್ತಿಗಳನ್ನು ಬೈಯ್ಯುವಾಗ ನ್ಯೂನತೆ, ಗುಣಗಳನ್ನು ಆಧಾರಿಸಿ ಬೈಯಲಾಗುತ್ತಿದೆ. ದ್ವೇಷ, ಸಿಟ್ಟು, ಕೋಪ, ಅಸೂಯೆಗಳು ಬೈಗುಳಗಳಾಗಿ ರೂಪಗೊಂಡಿವೆ. ಪ್ರಾಣಿಗೆ ಹೋಲಿಸಿ, ನ್ಯೂನತೆಗಳನ್ನು ಆಧಾರಿಸಿ ಶಾಪರೂಪದ ಬೈಗುಳಗಳನ್ನು ಬೈಯ್ಯುತ್ತಿರುವುದು ಕಂಡುಬರುತ್ತದೆ. ಇಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳು ಬೈಗುಳಗಳಲ್ಲಿ ಕಾಣಿಸುವುದಕ್ಕಿಂತ ವೈಯಕ್ತಿಕ ದ್ವೇಷ, ಅಸೂಯೆಗಳು ಬೈಗುಳಗಳಿಗೆ ಕಾರಣವಾಗಿವೆ ಎಂದು ಹೇಳಬಹುದಾಗಿದೆ.

ಅನಂತಮೂರ್ತಿ ಯು.ಆರ್. ಅವರ ಸಂಸ್ಕಾರ ಕಾದಂಬರಿಯಲ್ಲಿ ಮೇಲ್ಜಾತಿ ಮಹಿಳೆ ಮೇಲ್ಜಾತಿ ಪುರುಷನಿಗೆ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದು.

"ಲಕ್ಷ್ಮೀದೇವಮ್ಮ ತೇಗುತ್ತ ಗರುಡಾಚಾರ್ಯನ ಮನೆಯ ಮುಂದೆ ನಿಂತು ನಿಯಮದಂತೆ ತನ್ನ ಬೈಗುಳಗಳನ್ನು ಪ್ರಾರಂಭಿಸಿದಳು; ನಿನ್ನ ಮನೆ ಹಾಳಾಗ; ನಿನ್ನ ಕಣ್ಣು ಹೊಟ್ಟಿಹೋಗ; ಊರು ಹಾಳುಮಾಡಿದವನೆ, ನಾರಾಣಪ್ಪನ ತಂದೆಯ ಬಡಮುಂಡೆಯ ನಗನಾಣ್ಯವನ್ನು ನುಂಗಿದೆಯಲ್ಲ? ದಕ್ಕುತೆಂದು ತಿಳಿದ್ಯಾ? ಸತ್ಮೇಲೆ ಭೂತವಾಗಿ ನಿನ್ನ ಮನೆ ಮಕ್ಕಳನ್ನು ಕಾಡುವವಳು ನಾನು ತಿಳೀತ?

ಉಸಿರೆಳೆದು ತೇಗಿ ಮತ್ತೆ ಪ್ರಾರಂಭಿಸಿದರು:

'ನಿನ್ನ ಕೃತ್ರಿಮದಿಂದ ಬಂಗಾರದಂಥ ನಾರಾಣಪ್ಪ ಚಾಂಡಾಲನಾದ. ಸೂಳೇನ ಕಟ್ಟಿಕೊಂಡ. ನಾವು ಬ್ರಾಹ್ಮಣರು ನಾವು ಬ್ರಾಹ್ಮಣರು ಅಂತ ಹೇಳತಿರೋರೆಲ್ಲ ಈಗ ಅವನ ಹೆಣಾನ್ನಾ ತೆಗೀದೇ ಕೂತಿದೀರಲ್ಲೋ. ಎಲ್ಲಿಗೆ ಹೋಯಿತೋ ನಿಮ್ಮ ಬ್ರಾಹ್ಮಣ್ಯ? ಚಾಂಡಾಲರ-ರೌರವ ನರಕಕ್ಕೆ ನೀವು ಬಿದ್ದು ಸಾಯ್ತೀರಿ, ತಿಳೀತ? (ಅನಂತಮೂರ್ತಿ ಯು.ಆರ್, ಸಂಸ್ಕಾರ, ಪುಟ-೩೯-೪೦)

ಈ ಮೇಲೆ ನೀಡಿದ ಉಲ್ಲೇಖದಲ್ಲಿ ಬ್ರಾಹ್ಮಣ ಮಹಿಳೆ ಬ್ರಾಹ್ಮಣನಾದ ಗರುಡಾಚಾರ್ಯನನ್ನು ಬೈಯ್ಯುತ್ತ ನಂತರ ಇಡೀ ಬ್ರಾಹ್ಮಣರನ್ನೇ ಬೈಯ್ಯುತ್ತಾಳೆ. ಲಕ್ಷ್ಮೀದೇವಮ್ಮನಲ್ಲಿರುವ ದ್ವೇಷ ಕೋಪಕ್ಕೆ ಕಾರಣ ಗರುಡಾಚಾರ್ಯ ಆಸ್ತಿ-ಸಂಪತ್ತಿನ ವಿಚಾರದಲ್ಲಿ ಲಕ್ಷ್ಮೀದೇವಮ್ಮನಿಗೆ ಮೋಸ ಮಾಡಿರುತ್ತಾನೆ. ಆದ್ದರಿಂದ ಗರುಡಾಚಾರ್ಯನಿಗೆ 'ನಿನ್ನ ಮನೆ ಹಾಳಾಗ'; 'ನಿನ್ನಕಣ್ಣು ಹೊಟ್ಟಿಹೋಗ;' ಎಂದು ಶಾಪ ಹಾಕುತ್ತಾ ಊರ ಹಾಳು ಮಾಡಿದವನೆ, ನಾರಾಣಪ್ಪನ ತಂದೆಯ ಮೇಲೆ ಮಾಟ ಮಾಡಿಸಿದ ಮುಂಡೆ ಗಂಡ ಎಂದು ಬೈಯ್ಯುತ್ತಾಳೆ. ಆ ಮಹಿಳೆಯ ಮನಸ್ಸಿನಲ್ಲಿದ್ದ ವೈಯಕ್ತಿಕ ದ್ವೇಷ, ಕೋಪಗಳೆಲ್ಲವೂ ಬೈಗುಳಗಳಾಗಿ ಹೊರಹೊಮ್ಮುತ್ತಿವೆ. 'ಮುಂಡೆಗಂಡ', 'ರಂಡೆ' ಎಂಬಂತಹ ಬೈಗುಳಗಳು ಬ್ರಾಹ್ಮಣಸಮುದಾಯದವರಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿವೆ ಎಂಬುದಕ್ಕೆ ಈ ಉದಾಹರಣೆ ಸಹ ಸ್ಪಷ್ಟಪಡಿಸುತ್ತಿದೆ ಎಂದು ಹೇಳಬಹುದು. ಅವರು ಮಾಡುವ ನಾಟಕಕ್ಕೆ, ಕುತಂತ್ರಕ್ಕೆ 'ಚಾಂಡಾಲ'ರ ಎಂಬ ಪದ ಬಳಸಿ ಬೈಯ್ಯುತ್ತಿದ್ದಾಳೆ. ಚಂಡಾಲ ಎಂದರೆ ಬ್ರಾಹ್ಮಣ ಸ್ತ್ರೀಯರಲ್ಲಿ ಶೂದ್ರನಿಂದ ಹುಟ್ಟಿದವನು, ಚಂಡಾಲ ಜಾತಿಗೆ ಸೇರಿದವನು, ಅಸ್ಪೃಶ್ಯ, ಶೂದ್ರ ಕೆಲಸ ಮಾಡುವವನು ದುಷ್ಟ ಎಂಬಂತಹ ಅರ್ಥಗಳು ಬರುತ್ತವೆ. ಇಲ್ಲಿ ಬ್ರಾಹ್ಮಣ ಮಹಿಳೆ ಇವರು ಮಾಡುವ ಕೆಲಸಕ್ಕೆ ಅವರ ದುಷ್ಟತನವನ್ನು ಕಂಡು ಚಾಂಡಾಲ ಎಂದು ಬೈಯ್ಯುತ್ತಿರುವುದನ್ನು ಗಮನಿಸಬಹುದು. ಶೂದ್ರ ಮತ್ತು ಚಾಂಡಾಲ ಎಂಬ ಪದಗಳನ್ನು ಸಹ ಬ್ರಾಹ್ಮಣ ಸಮುದಾಯದವರು ಹೆಚ್ಚಾಗಿ ಬಳಸುತ್ತಾರೆ ಎಂದು ಹೇಳಬಹುದಾಗಿದೆ.

ಭೈರಪ್ಪ ಎಸ್.ಎಲ್. ಅವರು ದಾಟು ಕಾದಂಬರಿಯಲ್ಲಿ ಮೇಲ್ಜಾತಿ ಬ್ರಾಹ್ಮಣ ಪುರುಷ ಮಗಳಿಗೆ ಬೈಯ್ಯುವ ಸಂದರ್ಭವನ್ನು ಇಲ್ಲಿ ಗಮನಿಸಬಹುದು. ವೆಂಕಟರಮಣಯ್ಯ ತನ್ನ ಮಗಳು ಸತ್ಯಭಾಮೆಗೆ ಈ ರೀತಿಯಾಗಿ ಬೈಯ್ಯುತ್ತಾನೆ. ಉದಾಹರಣೆಗೆ "ಅಪ್ಪ ಆಡೂ ಮಾತನ್ನ ಮೆಲ್ಲಗೆ ಆಡು ಪಟ್ಟಣವಾಸದಲ್ಲಿ ಎಲ್ಲ ಹತ್ತಿರ ಹತ್ತಿರ ಮನೆಗಳು ಈ ಮಹಡಿ ಮೇಲೆ ಇನ್ನೊಂದು ಸಂಸಾರ ಇದೆ. 'ನೀನು ಮಾಡೂ ಕೆಲಸಕ್ಕೆ ಮರ್ಯಾದೆಯೊಂದು ಕೇಡು 'ಹೊಲೆಮುಂಡೆ' ಎಂದು ಭಾಗಿ ಒಳಬಾಲಿನಲ್ಲಿಟ್ಟಿದ್ದ ತಮ್ಮ ಎಕ್ಕಡಗಳಲ್ಲಿ ಒಂದನ್ನು ತೆಗೆದುಕೊಂಡು ಅವಳ ನೆತ್ತಿ ಮೇಲೆ, ಬೆನ್ನು ಭುಜಗಳ ಮೇಲೆ ಎತ್ತಿ ಎತ್ತಿ ಬಾರಿಸಿಬಿಟ್ಟರು.

ಸ್ವಾಮಿಗಳೇ, ಶಾಂತಿ ಶಾಂತಿ ನಿಮ್ಮಂತೋರು ಅಹಿಂಸೆ ಮಾಡಬೇಕು. ಅಂತದನ್ನು ಕೈಯಾಗೆ ಮುಟ್ಟಬ್ಯಾಡ್ ಎಂದರೆ ಅವರು ಮತ್ತೆ ಮತ್ತೆ ಹೊಡೆಯುತ್ತಾ ನೀನು ಸುಮ್ನಿರಯ್ಯಾ ಎಕ್ಕಡದೇಟು ಬೀಳದೆ ಬಧ್ಧಿ ಬರುಲ್ಲ 'ಈ ಮಾದಗಿತ್ತಿಗೆ' ಎಂದು ತಮ್ಮ ತೋಳ ಶಕ್ತಿಯನ್ನು ಹೆಚ್ಚು ಮಾಡಿದರು.(ಭೈರಪ್ಪ ಎಸ್.ಎಲ್, ದಾಟು, ಪುಟ–೩೩) ಈ ಮೇಲೆ ಉಲ್ಲೇಖಿಸಿರುವ ದಾಟು ಕಾದಂಬರಿಯಲ್ಲಿ ಬರುವ ಸನ್ನಿವೇಶವನ್ನು ಗಮನಿಸಿದರೆ ಬ್ರಾಹ್ಮಣ ವ್ಯಕ್ತಿ ತನ್ನ ಮಗಳಿಗೆ ಜಾತಿಸೂಚಕಗಳನ್ನು ಬಳಸಿ ಬೈಯ್ಯುತ್ತಿರುವುದು ತಿಳಿಯುತ್ತದೆ. 'ಹೊಲೆಮುಂಡೆ', 'ಮಾದಗಿತ್ತಿ' ಎಂಬ ಪದಗಳನ್ನು ಬಳಸಿ ಬೈಯ್ಯುತ್ತಿದ್ದಾನೆ. ಏಕೆ ಈ ರೀತಿಯ ಬೈಗುಳಗಳನ್ನು ಬಳಸುತ್ತಿದ್ದಾನೆ ಎಂದರೆ ಶೂದ್ರ ವ್ಯಕ್ತಿಯಾದ ವೆಂಕಟರಮಣನನ್ನು ಪ್ರೀತಿಸುತ್ತಿದ್ದಾಳೆ. ಕೀಳು ಕೆಲಸ ಮಾಡುತ್ತಿದ್ದಾನೆ ಎಂಬ ಕಾರಣಕ್ಕೆ 'ಹೊಲೆಮುಂಡೆ', 'ಮಾದಿಗಿತ್ತಿ' ಎಂದು ಬೈಯ್ಯುತ್ತಿದ್ದಾನೆ. ಬೈಯ್ಯುವಾಗ ಮಾದಿಗ ಸಮುದಾಯದ ಬೆಟ್ಟಯ್ಯ ಕೂಡ ಅಲ್ಲೇ ನಿಂತಿದ್ದಾನೆ. ಆದರೂ ಅವರ ಸಮುದಾಯದ ಹೆಸರನ್ನು ಆರೋಪಿಸಿ ಬೈಗುಳವಾಗಿ ಬಳಸಿ ಬೈಯ್ಯುತ್ತಾನೆ. ಮೇಲ್ಜಾತಿಯವರು ಹೇಳಿದ ಮಾತು ಕೇಳದಿದ್ದಾಗ, ಕೆಟ್ಟ ಕೆಲಸ ಏನಾದರೂ ಮಾಡಿದಾಗ, ಅವರ ಸಮುದಾಯದ ಸಂಸ್ಕೃತಿಗೆ ವಿರುದ್ಧವಾಗಿ ನಡೆದುಕೊಂಡಾಗ ಈ ರೀತಿಯ ಹೊಲೆಮುಂಡೆ, ಮಾದಿಗಿತ್ತಿ, ಚಾಂಡಾಲ ಎಂಬಂತಹ ಪದಗಳನ್ನು ಬಳಸಿ ಬೈಯ್ಯುವುದನ್ನು ಕಾಣಬಹುದಾಗಿದೆ.

ಸಿದ್ದಲಿಂಗಯ್ಯ ನಿರ್ದೇಶನದ ಹೇಮಾವತಿ ಚಲನಚಿತ್ರಲ್ಲಿ ಮೇಲ್ಜಾತಿಯ ವ್ಯಕ್ತಿ ಮೇಲ್ಜಾತಿ ವ್ಯಕ್ತಿಗೆ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದು.

ಬ್ರಾಹ್ಮಣ ವ್ಯಕ್ತಿ – ೧ : ಶಟ್ಟರೆ, ಭಟ್ಟರೆ, ಲಿಂಗಾಯತರೇ...

ಬ್ರಾಹ್ಮಣ ವ್ಯಕ್ತಿ – ೨ : ಹೇಯ್ ಅದೇನ್ ಆಯ್ತು ಅಂತಾ ಹೇಳಿ ಬಾಯಿ ಬಡಕೊಳ್ಳೋ

ಬ್ರಾಹ್ಮಣ ವ್ಯಕ್ತಿ – ೧ : ಪೆರಮಾಳ್ರ ತಮ್ಮ ಆನಂದ ಹೊಲೇರ ಚನ್ನಿಯ ಹೊತ್ಕೊಂಡು ಹೊಂಟೋದ

ಬ್ರಾಹ್ಮಣ ವ್ಯಕ್ತಿ – ೨ : ಅಯ್ಯೋ ಗಾದರ್ಭ ಶಿಖಾಮಣಿ, ಬೊಗಳುವವನು ಬೊಗಳ್ದೇ, ಸ್ನಾನಕ್ಕೆ ಮುಂಚೇನಾದ್ರು ಬೊಗಳಬಾರದಿತ್ತೇನೋ ಈ ಆಳು ಸುದ್ದಿ ಕೇಳಿ ಮತ್ತೆ ಸ್ನಾನ ಮಾಡಬೇಕಾಯ್ತು(ಹೇಮಾವತಿ, ಚಲನಚಿತ್ರ). ಈ ಮೇಲಿನ ಉದಾಹರಣೆಯಲ್ಲಿ ಬ್ರಾಹ್ಮಣ ವ್ಯಕ್ತಿ ಬ್ರಾಹ್ಮಣ ವ್ಯಕ್ತಿಗೆ ಬೈಯ್ಯುವಾಗ 'ಗಾದರ್ಭ ಶಿಖಾಮಣಿ' ಎಂದು ಬೈಯ್ಯುತ್ತಾನೆ. ಈ ರೀತಿ ಬೈಗುಳವನ್ನು ಬೇರೆ ಸಮುದಾಯದವರು ಬಳಸುವುದು ವಿರಳ ಎಂದೇ ಹೇಳಬಹುದು. ಹೊಲೆಯರ ಸುದ್ದಿ ಕೇಳಿದ್ದು ಅವನಿಗೆ ಕೆಟ್ಟಸುದ್ದಿಯಾಗಿತ್ತು. ಆದ್ದರಿಂದ ಮೈಲಿಗೆ ಆಯ್ತು ಎಂದು ಬ್ರಾಹ್ಮಣ ವ್ಯಕ್ತಿಗೆ ಬೈಯ್ಯುತ್ತಾನೆ.

ದತ್ತರಾಜ್ ಬಿ. ನಿರ್ದೇಶನದ 'ಕಾಮನಬಿಲ್ಲು' ಚಲನಚಿತ್ರದಲ್ಲಿ ಮೇಲ್ಜಾತಿ ಬ್ರಾಹ್ಮಣ ವ್ಯಕ್ತಿ ಒಕ್ಕಲಿಗ ಸಮುದಾಯದ ವ್ಯಕ್ತಿಗೆ ಬೈಯ್ಯುವ ಸಂದರ್ಭ ಈ ಕೆಳಗಿನಂತಿದೆ.

"ಬ್ರಾಹ್ಮಣ ವ್ಯಕ್ತಿ : ಪಾಪಿ ಮುಂಡೆದೆ ಹೀಗೇನೋ ಸೈಕಲ್ಲು ಬಿಡೋದು

ರಂಗ : ಲೇ ಮುದಿಯ ನನ್ ಸೈಕಲ್ಲಿಗೆ ಅಡ್ಡ ಬಂದ್ಬಿಟ್ಟು ನನ್ ಬಿಳ್ಸಿ ನನ್ಗೆ
ರೋಪ್ ಆಗ್ತೀಯ ನಿನ್ಗೇನು ಗ್ಯಾನಗೀನ ನೆಟ್ಟುಗೈತೋ ಇಲ್ಲೊ
ನಿನ್ನ ಜುಟ್ಟನ್ನು ಪಟಕ್ಕಂತ ಕಿತ್ತು ಬುಡ್ತೀನಿ ಹುಸಾರ್..

ಬ್ರಾಹ್ಮಣ ವ್ಯಕ್ತಿ : ಅಯ್ಯಯ್ಯೋ ಪಾಪಿ ಮುಂಡೇದೆ ನಿನ್ ತಾತನ್ಗೆ ಆಗೋ
ಅಷ್ಟು ವಯಸ್ಸಾಗಿದೆ ನನ್ನನ್ನೆ ಏಕವಚನದಿಂದ ಮಾತಾಡಿಸ್ತೀಯ
ನಿನ್ ನಾಲಗೆ ಹುಳಾ ಬಿದ್ದು ಹೋಗ!

ಸೂರಿ : ಏನಲೇ ಗಡವ ದೊಡ್ಡವ್ರ್ನ ಹಾಗೇನೋ ಮಾತಾಡ್ಸೋದು
ಕತ್ತೆ ಬಡವನ್ನ ತಗೊಂಡು ಬಂದು" (ಚಲನಚಿತ್ರ, ಕಾಮನಬಿಲ್ಲು) ಈ ಮೇಲಿನ ಕಾಮನಬಿಲ್ಲು ಚಲನಚಿತ್ರದಲ್ಲಿ ಸಂಭಾಷಣೆಯನ್ನು ಗಮನಿಸಿದರೆ ಬ್ರಾಹ್ಮಣ ವ್ಯಕ್ತಿ ಗೌಡನ ಮಗನಾದ ರುದ್ರನಿಗೆ ಪಾಪಿ ಮುಂಡೇದೆ ಎಂದು ಬೈಯ್ಯುತ್ತಾನೆ. ಬ್ರಾಹ್ಮಣ ಸಮುದಾಯ ವ್ಯಕ್ತಿಗಳಲ್ಲಿ 'ಮುಂಡೆ' ಎಂಬ ಪದ ಬೈಗುಳವಾಗಿ ಹೆಚ್ಚು ಬಳಕೆಯಾಗುತ್ತದೆ ಎಂದು ಹೇಳಬಹುದು. ಸೂರಿ ಎಂಬ ಬಡಬ್ರಾಹ್ಮಣ ಗೌಡನ ಮಗನನ್ನು ಗಡವ, ಕತ್ತೆಬಡವ ಎಂದು ಬೈಯ್ಯುತ್ತಾನೆ. ಆರ್ಥಿಕವಾಗಿ ಸೂರಿಗಿಂತ, ರಂಗನೇ ಸಬಲನಾಗಿದ್ದಾನೆ. ಆದರೂ ಕತ್ತೆಬಡವ ಎಂದು ಬೈಯ್ಯುತ್ತಾನೆ. 'ಬಡವ' ಎಂಬ ವರ್ಗಸೂಚಕ ಪದ ಬೈಗುಳವಾಗಿ ಬಳಕೆಯಾಗಿದೆ ಎಂದು ಹೇಳಬಹುದು. ಈ ರೀತಿಯಾಗಿ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬೈಯ್ಯುವಾಗ ಅಭಿವ್ಯಕ್ತಿಸುವ ಕ್ರಮ ಈ ರೀತಿಯಾಗಿದೆ ಎಂದು ಹೇಳಬಹುದು.

ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿ ಆಧಾರಿತ, ಗಿರೀಶ ಕಾರ್ನಾಡ ಅವರ ನಿರ್ದೇಶನದ ಕಾಡು ಚಲನಚಿತ್ರದಲ್ಲಿ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬೈಯ್ಯುವ ಸಂದರ್ಭವನ್ನು ಒಂದು ಸನ್ನಿವೇಶದ ಮೂಲಕ ನೋಡಬಹುದು. ಕೆಳಜಾತಿ ಹನುಮನ ಜೊತೆ ಮೇಲ್ಜಾತಿ ಕಲ್ಯಾಣಿ ಮನೆಬಿಟ್ಟು ಅವನ ಹಿಂದೆ ಓಡಿಹೋಗಿದ್ದರಿಂದ ಈ ರೀತಿಯಾಗಿ ಬೈಯ್ಯುತ್ತಾರೆ.

ಕಮಲಕ್ಕ : ಥೂ......ಕುಲಗೆಟ್ಟವಳಾದ್ಲು ತಾನ್ ಕೆಡೋದು ಅಲ್ದೆ ಊರಿಗೂ ಹೆಸ್ರುತಂದ್ಲು
ಮೈಸೂರ್ಗೆ ಓಡಿ ಹೋಗಿ ನಮ್ಮ ಮರ್ಯಾದೆ ಎಲ್ಲಾ ಬೀದಿಗೆಳೆದ್ಲು

'ಹಾದರಗಿತ್ತಿ' ಎಂದು ಕಮಲಕ್ಕ ಬೈಯ್ಯುತ್ತಾಳೆ.

ಚಂದ್ರೇಗೌಡ : 'ಕುಲಗೆಟ್ಟರಂಡಿ' ಹೋದ್ರೆ ಹೋಗ್ಲಿ ಬುಡಣ್ಣ ಇನ್ನೊಬ್ಬಳನ್ನ ತಂದ್ರೆ ಆಯ್ತು"(ಚಲನಚಿತ್ರ, ಕಾಡು). ಈ ಚಲನಚಿತ್ರದಲ್ಲಿ ಕಲ್ಯಾಣಿ ಎಂಬ ಮೇಲ್ಜಾತಿ ಮಹಿಳೆ ಕೆಳಜಾತಿ ಹನುಮನ ಜೊತೆ ಸಂಪರ್ಕ ಇಟ್ಟುಕೊಂಡಿರುತ್ತಾಳೆ. ಒಂದು ದಿನ ಇಬ್ಬರು ಊರ ಬಿಟ್ಟು ಹೋಗುತ್ತಾರೆ. ಈ ಸುದ್ದಿ ತಿಳಿದಾಗ ಕಲ್ಯಾಣಿಯನ್ನು ಮೇಲ್ಜಾತಿ ವ್ಯಕ್ತಿಗಳು ಕುಲಗೆಟ್ಟ ರಂಡಿ, 'ಹಾದರಗಿತ್ತಿ', 'ಕುಲಗೆಟ್ಟವಳು' ಎಂದು ಬೈಯ್ಯುತ್ತಾರೆ. ಚಂದ್ರೆಗೌಡ ಸಹ ವಿಧವೆಯಾದ ಬಸಕ್ಕನ ಜೊತೆ ಸಂಬಂಧ ಬೆಳೆಸಿದ್ದಾನೆ. ಹೊಸೂರು ಹನುಮನ ಜೊತೆ ಕಲ್ಯಾಣಿಯೂ ಸಂಬಂಧ ಬೆಳೆಸಿದ್ದಾಳೆ. ಆದರೆ ಕಲ್ಯಾಣಿ ಓಡಿಹೋಗಿದ್ದಾಳೆ ಎಂದು ಚಂದ್ರೆಗೌಡ ಕುಲಗೆಟ್ಟರಂಡಿ ಎಂದು ಬೈಯ್ಯುತ್ತಿದ್ದಾನೆ. ಚಂದ್ರೆಗೌಡ-ಬಸಕ್ಕ, ಹನುಮ-ಕಲ್ಯಾಣಿ ಇವರಿಬ್ಬರು ಮಾಡಿರುವ ಕೆಲಸ ಒಂದೆ ಆದರು ಕಲ್ಯಾಣಿ ಮಾಡುವುದು ಮಾತ್ರ ಹಾದರವಾಗುತ್ತದೆ. ಚಂದ್ರೆಗೌಡ ಮಾಡುವುದು ಹಾದರವಾಗುದಿಲ್ಲ. ಇಲ್ಲಿ ಲಿಂಗ ಅಸಮಾನತೆಯ ಜೊತೆಗೆ ಜಾತಿಯ ಅಸಮಾನತೆಯೂ ಕೂಡ ಇದೆ. ಕೆಳಜಾತಿ ಹನುಮನ ಜೊತೆ ಕಲ್ಯಾಣಿ ಸಂಪರ್ಕ ಇಟ್ಟುಕೊಂಡಿರುವುದು ಕಾರಣವಾಗಿದೆ ಎಂದು ಹೇಳಬಹುದು.

ದೇವಕಿ ಎಂ. ಶೆಟ್ಟಿ ಅವರ ಜಾತಿಭೂತಕ್ಕೆ ಬಲಿ ಎಂಬ ಕಥೆಯಲ್ಲಿ ಮೇಲ್ಜಾತಿ ಪುರುಷ ತನ್ನ ಮಗಳಿಗೆ ಬೈಯ್ಯುವ ಸಂದರ್ಭವನ್ನು ನೋಡುವುದಾದರೆ,

"ಏ ಎಲ್ಲಿಗೆ ಹೋಗಿದ್ದೆ? ಗಂಡುಬೀರಿ! ಮಾನಮರ್ಯಾದೆ ಒಂದೂ ಇಲ್ಲ. ಒಕ್ಕಲಿನವರ ಮನೆಯಲ್ಲಿ ನಿನ್ನ ಚಕ್ಕಂದವೇನು? ತಾವು ಮೇಲಾದವರು ಕೀಳು ಜನರೊಂದಿಗೆ ಸಲಿಗೆಯಿಂದ ವರ್ತಿಸುವುದು ತಪ್ಪು ಎಂಬುದು ಗೊತ್ತಿಲ್ಲ. ಜಾತಿನೀತಿ ಎಲ್ಲವನ್ನು ಬಿಟ್ಟಿರುವೆ; ಕುಲಕೆಟ್ಟವಳು ತಲೆ ಮೇಲೆ ನೀರು ಹೊಯ್ದುಕೊಂಡು ಬಾ" ಎಂದು ಬೈಗುಳದ ಮಳೆಯನ್ನು, ತಮ್ಮ ಆಜ್ಞೆಯನ್ನು ಒಟ್ಟೊಟ್ಟಿಗೆ ತಿಳಿಸಿಬಿಟ್ಟರು.

"ಮಾದಿಗರ ಕೇರಿಯಲ್ಲಿ ಹೋದರೆ ತಲೆಗೆ ಯಾಕಪ್ಪಾ ಸ್ನಾನ?(ಒಳಗೆ ಹೊಕ್ಕಳು)

ಅಯ್ಯೋ ಕುಲಕೆಟ್ಟವಳೇ! ಎದುರು ಮಾತನಾಡದೆ ಇರಲು ನಿನಗೆ ಸಾಧ್ಯವಿಲ್ಲವೋ? ಮಾದಿಗರ ಕೇರಿಯಲ್ಲಿ ಹೋಗಿದ್ದರೆ ಸ್ನಾನ ಮಾಡಿಕೊಂಡು ಬಾ ಎಂದರೆ ಒಳಗೇ ಬಂದೆಯಲ್ಲಾ ನಿನ್ಯಾಕಾಗಿ ನನ್ ಹೊಟ್ಟೆಯಲ್ಲಿ ಹುಟ್ಟಿದೆಯೋ ಹೋಗು ಹಾಳು..... ಡೆ! ಹೊರಗೆ(ಉಷಾ ಪಿ.ರೈ (ಪ್ರಸಂ) ಲೇಖಕಿಯರ ಸಣ್ಣಕಥೆಗಳು-ಭಾಗ-೨, ಪುಟ-೧೪೯) ಈ ಮೇಲಿನ ಕಥೆಯಲ್ಲಿ ಮೇಲ್ಜಾತಿ ಪುರುಷ ತನ್ನ ಮಗಳು ಮಾದಿಗರ ಮನೆಗೆ ಹೋಗಿ ಬಂದಿದ್ದಾಳೆ ಎಂಬುದನ್ನು ತಿಳಿದು ಗಂಡುಬೀರಿ, ಕುಲಕೆಟ್ಟವಳೆ ಹಾಳು.... ಡೆ ಎಂದು ಬೈಯ್ಯುತ್ತಾನೆ. ಮುಂಡೆ ಎನ್ನುವ ಪದವನ್ನು ಪೂರ್ಣವಾಗಿ ಇಲ್ಲಿ ಬಳಸಲಾಗಿಲ್ಲ ಎಂಬುದನ್ನು ಗಮನಿಸಬಹುದು. ಕೆಳಜಾತಿಯವರ

ಮನೆಗೆ ಹೋಗುತ್ತಿದ್ದಾಳೆ ಎಂಬ ಕಾರಣಕ್ಕೆ ಈ ರೀತಿಯಾದ ಬೈಗುಳಗಳನ್ನು ಬಳಸಿರುವುದನ್ನು ಕಾಣಬಹುದು. 'ಕುಲಕೆಟ್ಟವಳೆ' ಎಂಬ ಪದವನ್ನು ಬೈಗುಳ ರೂಪದಲ್ಲಿ ಬಳಸುತ್ತಾನೆ. ಕೆಳಜಾತಿಯವರ ಮನೆಗೆ ಹೋಗಿದ್ದರಿಂದ ಮೇಲ್ಜಾತಿಯ ಕುಲವನ್ನು ಕೆಡಿಸಿದ್ದಿಯ ಎಂದು ಬೈಯ್ಯುತ್ತಾನೆ. ಈ ಬೈಗುಳಗಳು ಸಮಾಜದ ಶ್ರೇಣಿಕರಣವನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಶಿವರಾಮ ಕಾರಂತರ 'ಗರ್ಭಗುಡಿ' ನಾಟಕದಲ್ಲಿ ಮೇಲ್ಜಾತಿಯ ವ್ಯಕ್ತಿ ಮೇಲ್ಜಾತಿ ವ್ಯಕ್ತಿಗೆ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದು.

"ಸಣ್ಣಪ್ಪಭಟ್ಟ (ಕಾಶ್ಯಪನ ಕರೆಯನ್ನು ಕೇಳಿ) ಯಾರಿಗೆ, ನಿನಗೇನು ನೀರು?

ನದಿಯವರೆಗೆ ಹೋಗಲು ಏನು ದಾಡಿ? ನಿನಗೇನು ಸಾವಿನ ಸಂಕಟ ಬಂದಿದೆ?

ಏ ಮೈ ಸೊಕ್ಕಿನವನೆ!

ಕಾಶ್ಯಪ : ದಯಾಳುವೆ, ನನಗೇನು ನೀರು ಬೇಕಾಗಿಲ್ಲ. ಇಲ್ಲಿ ನೋಡಿರಿ ಈ ಮಗುವಿನ ತಲೆಯೊಡೆದು ಹೋಗಿದೆ. ಯಾರು ಹೊಡೆದರೋ ಏನೋ. ಇವನ ಮುಖಕ್ಕೆ ಸ್ವಲ್ಪ ನೀರನ್ನು ಹಾಕಿರಿ, ಸ್ಮೃತಿ ಬರಲಿ.

ಸಣ್ಣಪ್ಪಭಟ್ಟ : ಯಾರಿಗೆ? ಅವನಿಗೇನು? ಅಯ್ಯೋ, ಥೂ ನಿನ್ ಕುಲ ಹಾಳಾಗಲಿ ಹೊಲೆಯನ ಪಿಳ್ಳೆಯನ್ನು ಹಿಡಿದು ಕರೆಯುತ್ತಾನೆ ನನನ್ನು, ತಿರುಗಿ ಸ್ನಾನ ಮಾಡುವಂತೆ ಮಾಡಿದನು.

ಕಾಶ್ಯಪ : ಸ್ನಾನವೇಸ್ವಾಮಿ? ಅವನು ನಮ್ಮಂತೆ ಮನುಷ್ಯನಲ್ಲವೇ? ಸ್ವಲ್ಪನೀರನ್ನು ಬಾಯಿಗೆ ಹಾಕಿರಿ. ನಿಮ್ಮ ಕುಲ ಉದ್ಧಾರವಾದೀತು.

ಸಣ್ಣಪ್ಪಭಟ್ಟ : ಕರ್ಮ ಚಾಂಡಾಲ, ನಿನ್ನಂತೆ ನಾನು ಹೊಲೆಯರನ್ನು ಮುಟ್ಟುತ್ತೇನೆ ಎಂದು ತಿಳಿದಿಯೋ? (ಶಿವರಾಮ ಕಾರಂತ, ಶಿವರಾಮ ಕಾರಂತರ ಸಾಹಿತ್ಯಶ್ರೇಣಿ ಸಾಹಿತ್ಯ-೨೩, ನಾಟಕಗಳು, ಪುಟ-೧೧೯). ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಸಣ್ಣಪ್ಪಭಟ್ಟ ಎಂಬ ವ್ಯಕ್ತಿ ಮೇಲ್ಜಾತಿ ಕಾಶ್ಯಪ ಎಂಬ ವ್ಯಕ್ತಿಗೆ ನಿನ್ನ ಕುಲ ಹಾಳಾಗಲಿ, ಕರ್ಮ, ಚಾಂಡಾಲ ಎಂಬ ಬೈಗುಳವನ್ನು ಬಳಸಿ ಬೈಯ್ಯುತ್ತಾರೆ. ಏಕೆಂದರೆ ಮೇಲ್ಜಾತಿಯ ವ್ಯಕ್ತಿ ಕೆಳಜಾತಿ ವ್ಯಕ್ತಿಯನ್ನು ಮುಟ್ಟಿದ್ದಾನೆ. ಅವನಿಗಾಗಿ ನೀರು ಕೇಳುತಿದ್ದಾನೆ ಎಂದು ಸಣ್ಣಪ್ಪಭಟ್ಟರಿಗೆ ಕೋಪ ಬಂದು ಈ ರೀತಿಯಾಗಿ ಬೈಯ್ಯುತ್ತಾನೆ. ಕೆಳಜಾತಿ ವ್ಯಕ್ತಿಗಳನ್ನು 'ಚಾಂಡಾಲರು' ಎಂದು ಭಾವಿಸಲಾಗಿದೆ. ಆದ್ದರಿಂದ ಚಾಂಡಾಲರನ್ನು ಮುಟ್ಟಿದ ವ್ಯಕ್ತಿಗೆ ಕೂಡ 'ಕರ್ಮಚಾಂಡಾಲ' ಎಂಬ ಪದವನ್ನು ಬಳಸಿ ಬೈಯ್ಯುತ್ತಾನೆ. ಮೇಲ್ಜಾತಿ ವ್ಯಕಿಯ ಮನೋಧೋರಣೆ ತಿಳಿಯುತ್ತದೆ. 'ಚಾಂಡಾಲ' ಎಂಬ ಪದವನ್ನು ಬ್ರಾಹ್ಮಣ ಸಮುದಾಯದ ವ್ಯಕ್ತಿಗಳು ಹೆಚ್ಚಾಗಿ ಬಳಸುತ್ತಾರೆ

ಎಂಬುದಕ್ಕೆ ಈ ಉದಾಹರಣೆ ಕೂಡ ಸ್ಪಷ್ಟಪಡಿಸುತ್ತದೆ ಎಂದು ಹೇಳಬಹುದು. ಕೆಟ್ಟಕೆಲಸ ಮಾಡಿದರೆ, ಮೇಲ್ಜಾತಿಯವರು ಸಮುದಾಯದಲ್ಲಿ ಸೃಷ್ಟಿಸಿಕೊಂಡಿರುವ ನಿಯಮಗಳನ್ನು ಮೀರಿದರೆ ಕೆಳಜಾತಿಯವರ ಸಂಪರ್ಕ ಇಟ್ಟುಕೊಂಡರೆ 'ಚಾಂಡಾಲ' ಎಂಬ ಪದವನ್ನು ಬಳಸಿ ಬೈಯ್ಯುವುದು ಗಮನಿಸಬಹುದು. ಈ ರೀತಿಯಾಗಿ ಮೇಲ್ಜಾತಿ ವ್ಯಕ್ತಿ ಮೇಲ್ಜಾತಿಯ ವ್ಯಕ್ತಿಗೆ ಬೈಯ್ಯುವ ಸಂದರ್ಭದಲ್ಲಿ ಅಭಿವ್ಯಕ್ತಿಗೊಂಡಿರುವ ಕ್ರಮ ಇದಾಗಿದೆ ಎಂದು ಹೇಳಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬೈಯ್ಯುವ ಸಂದರ್ಭದಲ್ಲಿ ಬಳಸಲಾಗಿರುವ ಬೈಗುಳಗಳನ್ನು ನೋಡಿದರೆ ಶಾಪರೂಪದ ಬೈಗುಳಗಳು, ಪ್ರಾಣಿಕೇಂದ್ರಿತ ಬೈಗುಳಗಳು, ವ್ಯಕ್ತಿಕೇಂದ್ರಿತ ಬೈಗುಳಗಳು ಬಳಸಿ ಬೈಯ್ಯುತ್ತಿರುವುದು ಕಂಡುಬರುತ್ತದೆ. ಮೇಲ್ಜಾತಿ ಪಾತ್ರಗಳನ್ನು ಮೇಲ್ಜಾತಿ ಪಾತ್ರಗಳೇ ಬೈಯ್ದರು ಸಹ ಕೆಳಜಾತಿಯನ್ನು ಕೇಂದ್ರವಾಗಿಟ್ಟುಕೊಂಡು ಬೈಯ್ದಿರುವ ಉದಾಹರಣೆಗಳಿವೆ. ಉದಾಹರಣೆಗೆ ಹೊಲೆಯ ಮುಂಡೆ, ಮಾದಗಿತ್ತಿ, ಚಾಂಡಾಲ, ಕರ್ಮಚಾಂಡಾಲ ಎಂಬಂತಹ ಬೈಗುಳಗಳನ್ನು ಬಳಸಿರುವುದನ್ನು ಕಾಣಬಹುದು. ಈ ಬೈಗುಳಗಳನ್ನು ಬ್ರಾಹ್ಮಣ ಸಮುದಾಯದ ಪಾತ್ರಗಳು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಬ್ರಾಹ್ಮಣರಲ್ಲದ, ಕೆಳಜಾತಿಯರಲ್ಲದ ಇತರೆ ಸಮುದಾಯಗಳು ಅಂದರೆ ಹೆಗ್ಗಡೆ, ಗೌಡ, ಒಕ್ಕಲಿಗ ಮುಂತಾದ ಸಮುದಾಯಗಳಲ್ಲಿ ಮುಟ್ಠಾಳ, ಸವ್ತಿ, ತಾಟಗಿತ್ತಿ, ಬಂಜೆಮುಂಡೆ, ಹಾದರಗಿತ್ತಿ, ಬಡವ, ಕತ್ತೆಬಡವ, ಮಾದರ್ ಚೋದ್, ದರವೇಸಿ ಮುಂತಾದ ಬೈಗುಳಗಳನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಗುಣ, ಲಿಂಗ, ವರ್ಗ, ಜಾತಿ ಸೂಚಿಸಿರುವಂತಹ ಬೈಗುಳಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ರೀತಿಯಾಗಿ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬಳಸಿರುವ ಬೈಗುಳಗಳನ್ನು ನೋಡಬಹುದು.

೫.೧.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವ ಬೈಗುಳ

ಒಂದೇ ಸಮುದಾಯದ ವ್ಯಕ್ತಿಗಳು ಬೈದಾಡುವ ಸಂದರ್ಭದಲ್ಲಿ ಹೆಚ್ಚಾಗಿ ಲಿಂಗಕೇಂದ್ರಿತ, ವರ್ಗಕೇಂದ್ರಿತ ಮತ್ತು ಶಾಪರೂಪದ ಬೈಗುಳಗಳನ್ನು ಬಳಸುವುದು ಸಾಮಾನ್ಯ. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬೈಯ್ಯುವಾಗ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಬೈಯ್ಯುವ ಬೈಗುಳಗಳೇ ಹೆಚ್ಚಾಗಿ ಕಂಡುಬರುತ್ತವೆ. ಹಾದರಸೂಳೆಮಗ, ಶನಿಮುಂಡೆ, ಬೊಡ್ಡಿಮಗಳು, ಬೋಸುಡಿನನ್ಮಕ್ಕಳ, ಹಾದರಗಿತ್ತಿ, ಕತ್ತಲವುಡಿ, ಅವುನೆಂಣ್ತೆನಾ ಕೇಯ, ನಿನ್ ತಾಯಿನ್ ಹಡಾ ಮುಂತಾದ ಹೆಣ್ಣು ಕೇಂದ್ರಿತ ಬೈಗುಳಗಳನ್ನು ಹೆಚ್ಚಾಗಿ ಬಳಸುತ್ತಾರೆ. ಕೆಳಜಾತಿ ಪಾತ್ರಗಳು ಬೈಗುಳಗಳನ್ನು ಬಳಸುವಾಗ ಜಾತಿ ಕೇಂದ್ರಿತ ಬೈಗಳುಗಳನ್ನು ಬಳಸುವುದು ವಿರಳ ಎಂದು ಹೇಳಬಹುದು. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಬೈಗುಳಗಳನ್ನೂ

ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಬೈಗುಳಗಳನ್ನು ಕುರಿತು ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳಾದ ಗುತ್ತಿ-ತಿಮ್ಮಿ ಈ ಎರಡು ಪಾತ್ರಗಳು ಪರಸ್ಪರ ಬೈಯ್ಯುವ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು.

ತನ್ನ ನೆಚ್ಚಿನ ನಾಯಿಗೆ ಆ ಗತಿ ಒದಗಿದುದಕ್ಕಾಗಿ! ಭಾವಾಂಧನಾಗಿ ಗುತ್ತಿ ತಿಮ್ಮಿಯ ಕಡೆಗೆ ತಿರುಗಿ "ಸನಿಮುಂಡೆ, ನಿನ್ನ ದೆಸಿಂದ ನನ್ನ ನಾಯಿನೂ ಹೋಯ್ತಲ್ಲೇ! ಯಾವ ಇಸಗಳಿಗೇಲಿ ಹುಟ್ಟಿದ್ಯೋ ನೀನು, ಹುಲಿಯನ ತಿನ್ನಾಕೆ!" ಎಂದು ಸಿಡುಕಿದನು. ಅವನ ಕಣ್ಣು ಆಗಲೆ ನೀರು ತುಂಬಿಕೊಂಡಿತ್ತು.

ತಿಮ್ಮಿಗೆ ಏನೂ ತೋಚಲಿಲ್ಲ. ತಾನು ಏನು ತಪ್ಪು ಮಾಡಿದುದಕ್ಕಾಗಿ ಬಾವ ಬೈಯ್ಯುತ್ತಿದ್ದಾನೆ ಎಂದು ನಿಂದೆಯ ಆಘಾತಕ್ಕೆ ಮೊದಲು ತಟಕ್ಕನೆ ಬೆಚ್ಚು ಬೆರಗಾದಳು. ಒಡನೆಯೆ, ಬಂಡೆಯಬೆಟ್ಟ ದನಿಗೆ ಮರುದನಿಕೊಡುವಂತೆ, ನಿಸರ್ಗ ಸಹಜವಾದ ಪ್ರಕ್ರತಿಯಿಂದಲೊ ಎಂಬಂತೆ ಪಡಿನುಡಿದೆ ಬಿಟ್ಟಳು; "ನಾನ್ಯಾಕೆ ಆದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆಗಂಡ!" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೩೨೧) ಈ ಮೇಲಿನ ಸಂಭಾಷಣೆಯಲ್ಲಿ ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಪರಸ್ಪರ ಬೈಯ್ದುಕೊಳ್ಳುತ್ತಾರೆ. ಕೆಳಜಾತಿ ಪುರುಷ ಕೆಳಜಾತಿ ಮಹಿಳೆಯನ್ನು ಸನಿಮುಂಡೆ ಎಂದು ಬೈಯ್ಯುತ್ತಾನೆ. ಮೇಲ್ಜಾತಿ ಪಾತ್ರಗಳು 'ಶನಿ' ಎಂದು ಬಳಸಿದರೆ ಕೆಳಜಾತಿ ಪಾತ್ರಗಳು 'ಸನಿ' ಎಂದು ಬಳಸಲಾಗುತ್ತದೆ ಎಂದು ಹೇಳಬಹುದು. ಉದಾಹರಣೆಗೆ ತಿಮ್ಮಪ್ಪಹೆಗ್ಗಡೆ ತನ್ನ ಅತ್ತಿಗೆ ರಂಗಮ್ಮನನ್ನು "ಮುಂಡೆಯಾದ್ರೂ ಮುತ್ತೈದೆ ಹಾಂಗೆ ಮಾಡಿಕೊಂಡು ಮನೇಗೆಲ್ಲಾ ಅನಿಷ್ಟ ತರ್ತದೆ, ಹಾಳು ಶನಿ!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೨೭೩) ಎಂದು ಬೈಯ್ಯುತ್ತಾನೆ. ಇಲ್ಲಿ ಮೇಲ್ಜಾತಿ ಪಾತ್ರದಲ್ಲಿ 'ಶ' ಕಾರ ಬಳಕೆಯಾಗಿದೆ. ಕೆಳಜಾತಿ ಪಾತ್ರ ಬೈಯ್ಯುವಾಗ 'ಸ' ಕಾರ ಬಳಕೆಯಾಗಿರುವುದನ್ನು ಗಮನಿಸಬಹುದು. ಗುತ್ತಿಯ ನಾಯಿ ಕಾಡು ಪ್ರಾಣಿಯಿಂದ ಅಪಘಾತಕ್ಕೆ ಒಳಗಾದಾಗ ಆ ನಾಯಿಯ ದೇಹದಿಂದ ರಕ್ತ ಸುರಿಯುತ್ತಿರುತ್ತದೆ. ಅದನ್ನು ಕಂಡು ಗುತ್ತಿಯ ಮನಸ್ಸಿಗೆ ನೋವಾಗುತ್ತದೆ. ಆ ನೋವನೆಲ್ಲ ತಿಮ್ಮಿಯ ಮೇಲೆ ಹಾಕಿ ನಿನ್ನಿಂದಲೇ ಎಲ್ಲಾ ಆಗಿದ್ದು, ಶನಿಮುಂಡೆ ಎಂದು ಬೈಯ್ಯುತ್ತಿದ್ದಾನೆ. ತಿಮ್ಮಿ ನಾನು ಏನು ತಪ್ಪು ಮಾಡದಿದ್ದರು ನನ್ನನ್ನು ಬೈಯ್ಯುತ್ತಿದ್ದಾನೆ ಎಂದು ಅವಳು ಪ್ರತಿಕ್ರಿಯೆ ಎಂಬಂತೆ ನನ್ಯಾಕೆ ಆದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆಗಂಡ ಎಂದು ಬೈಯ್ಯುತ್ತಾಳೆ. ಈ ರೀತಿಯಾಗಿ ಮೇಲ್ಜಾತಿ ಮಹಿಳೆಯರು ತನ್ನ ಗಂಡಂದಿರಿಗೆ, ಪುರುಷರಿಗೆ ತಿರುಗಿ ಬಿದ್ದು ಬೈಯ್ಯುವ ಪ್ರಸಂಗಗಳು ಕಡಿಮೆ. ಕೆಳಜಾತಿ ಮಹಿಳೆಯರು ತಮ್ಮ ಗಂಡಂದಿರಿಗೆ ತಿರುಗಿ ಬೈಯ್ಯುವ ಅನೇಕ ಪ್ರಸಂಗಗಳು

ಕಂಡುಬರುತ್ತವೆ. ಉದಾಹರಣೆಗೆ ದೇವನೂರು ಮಹಾದೇವ ಅವರ ಕುಸುಮಬಾಲೆ ಕಾದಂಬರಿಯಲ್ಲಿ ಕೆಳಜಾತಿ ಮಹಿಳೆ ತನ್ನ ಗಂಡನಿಗೆ ಬೈಯ್ಯುವ ಪ್ರಸಂಗವನ್ನು ನೋಡಬಹುದು.

"ಅವ್ವೆ, ಇವ ಎಂತಾ ಕೇಪ್ ಮಾರಿ ಅಂತ ಗೊತ್ತವ್ವ

ಅಷ್ಟು ಊರುರು ತಿರ್ಗತನಲ್ಲ......

ಅಷ್ಟು ಓಟ್ಲು ರುಚ್ಯ ಕಂಡಿದ್ದಾನಲ್ಲ!

ಆ ಣ್ಣ! ಓಂಜಿನಾರು ನಂಗ ತಕ್ಕ ಬಂದು

'ಅಮ್ಮೇ ತಕ್ಕ

ಮಸಾಲದೋಸ ತಂದಿನಿಕನ ತಿಂದ್ಕ' ಅಂದಿಲ್ಲ

ಹೆಂಡ್ತೆಂತ ಹೆಂಡ್ತಿ.." ಎಂದೂ ಸಾಲದೆ

ಅವನ, ಗಂಡನ ಮೊಕ್ಕ ಕಯ್ಯೆಟ್ಟಿ

"ಥು ನಿನ್ ಯಾಸ್ಗ ಬೆಂಕಿ ಹಾಕ" ಅಂದಳು, (ದೇವನೂರು ಮಹಾದೇವ, ಕುಸುಮಬಾಲೆ, ಪುಟ-೪೨) ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಕೆಳಜಾತಿ ಮಹಿಳೆ ತನ್ನ ಗಂಡನಿಗೆ ಬೈಯ್ಯುವ ಪ್ರಸಂಗವನ್ನು ಕಾಣಬಹುದು. ಮೇಲ್ಜಾತಿ ಮಹಿಳೆಯರು ತನ್ನ ಗಂಡನಿಗೆ ಬೈಯ್ಯುವುದಿಲ್ಲವೆಂದಲ್ಲ. ಅವರು ಸಹ ಬೈಯ್ಯುತ್ತಾರೆ ಪ್ರಸಂಗಗಳು ಕಂಡುಬರುವುದು ವಿರಳ. ಆದರೆ ಅಂತಹ ಕೆಳಜಾತಿ ಮಹಿಳೆಯರಿಗೆ ಹೋಲಿಸಿಕೊಂಡರೆ ಮೇಲ್ಜಾತಿ ಮಹಿಳೆಯರು ತಮ್ಮ ಗಂಡಂದರಿಗೆ ಬೈಯ್ಯುವ ಪ್ರಮಾಣ ಕಡಿಮೆ ಎಂದು ಹೇಳಬಹುದು. ಹಾಗೆ ತಿಮ್ಮಿಯೂ ಕೂಡ ತನಗೆ ಬೈಯ್ದ ಗುತ್ತಿಯನ್ನು ತಿರುಗಿಸಿ ಬೈಯ್ಯುತ್ತಾಳೆ. ಈ ರೀತಿಯಾಗಿ ಕೆಳಜಾತಿ ಪಾತ್ರಗಳು ಪರಸ್ಪರ ಬೈಯ್ಯುಕೊಂಡ ಪ್ರಸಂಗವನ್ನು ಕಾಣಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೆಳಜಾತಿ ಪುರುಷರು ಪರಸ್ಪರ ಬೈಯ್ಯುವ ಸಂದರ್ಭವನ್ನು ಈ ಕೆಳಗಿನಂತೆ ಕಾಣಬಹುದು. ಉದಾಹರಣೆಗೆ,

"ಹಸಲೋರು ಅಲ್ಲಿ ಕೂರಬೇಕು; ಇಲ್ಲಲ್ಲಾ!

ಏಳಿ ಹೆಂಗಸ್ರೆಲ್ಲಾ!....."

'ಹಸಲೋರೇನು ಬಿಲ್ಲೋರಿಗಿಂತ ಕೀಳಲ್ಲ ಜಾತೀಲಿ. ನೀನೆ ಬೇಕಾದರೆ

ಎದ್ದು ಹೋಗು!" ಚೀಂಕ್ರ ಪ್ರತಿಭಟಿಸಿದನು.

"ಹಾದರದ ಸೂಳೆಮಗನಿಗೆ ಏನು ದೌಲತ್ತು?" ಕೂಗಿತು ಎದುರುತ್ತರ!

"ಯಾವನೋ ಸೂಳೇಮಗ? ನಿನ್ನ ಹೆಂಡ್ತೀನಾ.....ಯ!"

"ಹೆಂಡ್ತಿ ತಿಂದುಕೊಂಡ ಲೌಡೀ ಮಗನೆ, ಕಂಡೋರ ಹೆಂಡ್ತಿರನ್ನೆಲ್ಲಾ ಕೆಡಿಸಿ,

ಬಾಯಿಗೆ ಬಂದಹಾಂಗೆ ಮಾತಾಡ್ತೀಯಾ ದವಡೇಲಿ ಹಲ್ಲೊಂದು

ಇಲ್ಲದ್ಹಾಂಗೆ ಮಾಡೇನು?ಹುಸಾರ್, ಷಂಡ ಮುಂಡೇಗಂಡ!"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೫೮೦) ಎಂದು ಕೆಳಜಾತಿ ಪುರುಷರು ಪರಸ್ಪರ ಬೈಯ್ದುಕೊಳ್ಳುತ್ತಾರೆ. ಇಲ್ಲಿ ಬ್ರಾಹ್ಮಣರು, ಹೆಗ್ಗಡೆ, ಗೌಡರು ಮುಂತಾದ ಮೇಲ್ಜಾತಿಯವರು ಹಸಲೋರು ಮತ್ತು ಬಿಲ್ಲೋರರನ್ನು ಅಸ್ಪೃಶ್ಯ ಸಮುದಾಯದವರೆಂದೆ ಭಾವಿಸಿದ್ದಾರೆ. ಇವರಲ್ಲಿಯೂ ಕೂಡ ಮೇಲು-ಕೀಳು ಎಂಬ ಭಾವನೆ ಇದೆ. ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಈ ರೀತಿಯ ಸಮಸ್ಯೆಗಳು ಎಲ್ಲಾ ಸಮುದಾಯಗಳಲ್ಲಿಯೂ ಇವೆ ಎಂದು ಹೇಳಬಹುದು. ಇಲ್ಲಿ ಜಾತಿ ಕಾರಣಕ್ಕಾಗಿಯೇ ಕೆಳಜಾತಿ ಪುರುಷರು ಹಾದರದ ಸೂಳೆಮಗ, ಲೌಡಿಮಗ, ಷಂಡಮುಂಡೆಗಂಡ ಎಂಬಂತಹ ಬೈಗುಳಗಳನ್ನು ಬಳಸುತ್ತಾರೆ. ಇಲ್ಲಿ ಲೇಖಕರು ಒಂದು ಬೈಗುಳನ್ನು ಪೂರ್ಣಗೊಳಿಸಿಲ್ಲ. ಅದು ಯಾವುದೆಂದರೆ ನಿನ್ನ ಹೆಂಡ್ತಿನಾ....ಯ ಎಂದು ಅಪೂರ್ಣವಾಗಿ ನೀಡಿದ್ದಾರೆ. ಅಶ್ಲೀಲ ಎನಿಸಿಕೊಳ್ಳುವ ಬೈಗುಳಗಳನ್ನು ಇಲ್ಲಿ ಲೇಖಕರು ಅಪೂರ್ಣವಾಗಿ ಕೊಟ್ಟಿದ್ದಾರೆ. ಈ ಕಾದಂಬರಿಯಲ್ಲಿ ಅನೇಕ ಕಡೆ ಈ ರೀತಿಯಾಗಿ ಬಳಸುತ್ತಾರೆ. ಉದಾಹರಣೆಗೆ ಕೆಳಜಾತಿ ಮಹಿಳೆ ಲಕ್ಕಿ ಇಜಾರ ಸಾಬಿಯನ್ನು ಬೈಯ್ಯುವ ನೆಪದಲ್ಲಿ ಎಲ್ಲರನ್ನು ಬೈಯ್ಯುವಾಗ ಅವನ ಬಾಯಿಗೆ ಹುಳಾಬೀಳಾ, ರಟ್ಟೆಸೇದು ಹೋಗಾ, ಅವನ ಹೆಂಡ್ತಿ....(ಅದೇ ಪುಟ-೨೪೨) ಎಂದು ಇಲ್ಲಿ ಬೈಗುಳಗಳನ್ನು ಅಪೂರ್ಣಗೊಳಿಸಿದ್ದಾರೆ ಮತ್ತು ಚೀಂಕ್ರ ಅವನ ಬಗ್ಗೆ ಮಾತನಾಡಿದವರನ್ನು ಕುರಿತು ಒಂದು ಸಂದರ್ಭದಲ್ಲಿ ಈ ರೀತಿ ಬೈಯ್ಯುತ್ತಾನೆ.

"ಯಾರಂತೋ ಕಳ್ಳಸೂಳೆ ಮಕ್ಳು, ಹಂಗೆ ಹೇಳ್ದೊರು? ಅವರ ಬಾಯಿಗೆ ನನ್ನ..ನ ಹಾಕ!" (ಅದೇ ಪುಟ-೪೦೧) ಎಂದು ಬೈಯ್ಯುತ್ತಾನೆ. ಈ ರೀತಿ ಅಶ್ಲೀಲ ಎಂದು ಭಾವಿಸಲಾಗಿರುವ ಬೈಗುಳಗಳನ್ನು ಲೇಖಕರು ಅಪೂರ್ಣಗೊಳಿಸಿದ್ದಾರೆ. ಈ ರೀತಿ ಬೈಗುಳಗಳನ್ನು ಹೆಚ್ಚು ಕೆಳಜಾತಿ ಪಾತ್ರಗಳೇ ಬಳಸಿದ್ದಾರೆ ಎಂದು ಹೇಳಬಹುದು. ಮೇಲ್ಜಾತಿ ಪಾತ್ರಗಳು ಅಶ್ಲೀಲ ಎಂದು ಭಾವಿಸಿರುವಂತಹ ಬೈಗುಳಗಳನ್ನು ಬಳಸಿರುವುದು ವಿರಳ ಎಂದು ಹೇಳಬಹುದು.

ದಲಿತ ಬಂಡಾಯ ಕಥೆ, ಕಾದಂಬರಿಗಳಲ್ಲಿ ಅಶ್ಲೀಲ ಎಂದು ಭಾವಿಸಲಾಗಿರುವ ಬೈಗುಳಗಳನ್ನು ಪೂರ್ಣವಾಗಿಯೇ ಬಳಸಿದ್ದಾರೆ. ಉದಾಹರಣೆಗೆ, ಮೊಗ್ಗಳ್ಳಿ ಗಣೇಶ ಅವರ ಬುಗುರಿ ಕಥೆಯಲ್ಲಿ ಈ ರೀತಿಯಾಗಿ ಬಳಸಿದ್ದಾರೆ. ಚಿಕ್ಕಣ್ಣ ಎಂಬ ಕೆಳಜಾತಿ ಪಾತ್ರ ತನ್ನ ತಂದೆ ಗುಂಜಾರಯ್ಯನಿಗೆ "ಅವುನೆಂಣ್ತಿನಾ ಕೇಯುತಾರಿಯಾ ತೋಳ್ನೋ, ತೋಡಿಯೋ ಮುರಿದೆ ನಾ ಬಿಡುದಿಲ್ಲ"(ಮೊಗ್ಗಳ್ಳಿ ಗಣೇಶ, ಮೊಗಳ್ಳಿ ಕಥೆಗಳು, ಪುಟ-೨೪೩) ಎಂದು ಬೈಯ್ದಿರುವ ಸಂದರ್ಭ ಮತ್ತೇ ಚಿಕ್ಕಣ

ಊರಿನ ಜನರಿಗೆ ಕುಡಿದ ಅಮಲಿನಲ್ಲಿ ಈ ರೀತಿ ಬೈಯ್ಯುತಾನೆ. "ಯಾವ ಸೂಳೆ ಮಕ್ಕಳಿದ್ರೂ ಬನ್ರೋ ನಿಮ್ಮೆಡ್ತಿರ್ ನಾ ಕೆಯ್ಯಾ" (ಅದೇ ಪುಟ-೨೪೪) ಎಂದು ಬೈಯ್ಯುವುದನ್ನು ಕಾಣಬಹುದು. ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ನಾಟಕದಲ್ಲಿಯೂ ಕೆಳಜಾತಿ ಪಾತ್ರಗಳು ಅಶ್ಲೀಲ ಎಂದು ಭಾವಿಸಲಾಗಿರುವ ಬೈಗುಳಗಳನ್ನು ಬಳಸಿದ್ದಾರೆ. ಉದಾಹರಣೆಗೆ, "ಥೂ ನಿಮ್ಮವ್ನ ಮಿಂಡರ್ನ ಹಡಾ, ನಾ ಕಿಸ್ಗೊಂಡ್ ಹಡದಾಳ್ರಿ ಅಂತ್ ಹಡಸ್ಗೊತಿದ್ದಿರಲ್ಲಲೆ" (ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ-೧೦೬) ಎಂದು ಕೆಳಜಾತಿ ಭೀಮಣ್ಣ, ಕಲ್ಯಾ, ನಿಂಗ್ಯಾನಿಗೆ ಬೈಯ್ಯುತ್ತಾನೆ. ವಾಸ್ತವದಲ್ಲಿ ಬಳಸುವಂತೆಯೇ ಕೆಲವು ಬೈಗುಳಗಳನ್ನು ದಲಿತ-ಬಂಡಾಯದ ಲೇಖಕರು ಬಳಸಿರುವುದು ಕಂಡುಬರುತ್ತದೆ. ಈ ರೀತಿಯ ಬೈಗುಳಗಳನ್ನು ಇಲ್ಲಿಯೂ ಸಹ ಕೆಳಜಾತಿ ಪಾತ್ರಗಳೇ ಬಳಸಿರುವುದು ಕಂಡುಬರುತ್ತದೆ. ಈ ಕೆಳಜಾತಿ ಪಾತ್ರಗಳು ಈ ರೀತಿಯ ಬೈಗುಳಗಳನ್ನು ಹೆಚ್ಚಾಗಿ ಬಳಸಿದ್ದಾರೆ ಎಂದು ಹೇಳಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳು ಹಾದರದ ಸೂಳೆಮಗ, ಷಂಡ ಮುಂಡೆಗಂಡ, ಲೌಡಿಮಗ ಎಂಬಂತಹ ಬೈಗುಳಗಳನ್ನು ಪರಸ್ಪರ ಬೈಯ್ದುಕೊಂಡಿರುವುದನ್ನು ಕಂಡುಬರುತ್ತದೆ.

ಮುಳ್ಳೂರು ನಾಗರಾಜ್ ಅವರ ಮರಣ ಮಂಡಲ ಮಧ್ಯದೊಳಗೆ ಕಾದಂಬರಿಯಲ್ಲಿ ಕೆಳಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬೈಯ್ಯುವ ಪ್ರಸಂಗ ಈ ರೀತಿಯಾಗಿದೆ. "ಆ ಮೂರ್ಜನ ಐನಾತಿ ಹೆಂಗ್ಸುಗಳು ಹುಲ್ಕಡ್ಡಿ ತರವಾದ್ರು, ಆದ್ರೂ ಆ ಮುದ್ಕಿ ನಿಧಾನದಲ್ಲಿಯೂ; "ಅದ್ಯಾನವ್ವಾ ಗನರ್ತಿ ನಿನ್ನ ಕುಂಡಿಗಿ ಅರುಸಿನ ಬಾಳಣ್ಣು ಸಾಸ್ತ್ರದ ಮಾಡ್ರಿ, ಧಾರಾ ಎರಿ, ತಾಳಿಕಟ್ಟಿ, ವಾಲಗಾ ಊದಿ ಒಂದತ್ತು ಸಾವು ರೂಪಾಯ್ನು ವರದಕ್ಸನವ ತಕ್ಕಂಡು ನಮ್ಮ ರಂಗುನುಗ ಮಾಡ್ಕ ಬಂದೀವಿ ನೋಡು ನಿನ್ನ ಕುಂಡಿಗಿ ಈಗ ಯಾನ ಕೂಸು ಯತ್ತ ಕೂಸು ಅಂತಾ ಆಳಸ್ದಿಯ ಬುಟ್ಟಾಕಿವಿ ನೋಡು ಅದ್ಕ ಬಂದಿದ್ದಯ ಕತ್ತಲೌಡಿ'!(ನಾಗರಾಜ್ ಮುಳ್ಳೂರು, ಮರಣ ಮಂಡಲ ಮಧ್ಯದೊಳಗೆ, ಪುಟ-೫೬). ಈ ಕಾದಂಬರಿಯಲ್ಲಿ ಕೆಳಜಾತಿ ಮಹಿಳೆ ಅದೇ ಸಮುದಾಯದ ಮಹಿಳೆಗೆ 'ಕತ್ತಲೌಡಿ' ಎಂಬ ಪದ ಬಳಸಿ ಬೈಯ್ಯುತ್ತಾಳೆ. ಇದು ಪ್ರಾಣಿ ರೂಪದ ಬೈಗುಳವಾಗಿದೆ. ಹಾಗೆ ಮುಂದುವರೆದು ಇನ್ನೊಂದು ಬೈಗುಳವನ್ನು ನೋಡಬಹುದಾಗಿದೆ. ಉದಾಹರಣೆಗೆ "ಆ ಪಾಪವ ನಮ್ಮ ರಂಗನೊಬ್ಬನ ತಲೆಗೆ ಕಟ್ಟಕ ಬಂದಿದ್ದಯ ಹಾದರಗಿತ್ತಿ ಮಗಳ" (ಅದೇ ಪುಟ- ೫೭) ಎಂದು ಬೈಯ್ಯುವುದು ಕಂಡುಬರುತ್ತದೆ. ಇಲ್ಲಿ ಕೆಳಜಾತಿ ಮಹಿಳೆ ಕತ್ತಲೌಡಿ, ಹಾದರಗಿತ್ತಿ ಮಗಳ ಎಂಬ ಬೈಗುಳಗಳನ್ನು ಬಳಸಿದ್ದಾಳೆ.

ಮೊಗ್ಗಳ್ಳಿ ಗಣೇಶ ಅವರ 'ಬುಗುರಿ' ಕಥೆಯಲ್ಲಿ ಕೆಳಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬೈಯ್ಯುವ ಸಂದರ್ಭ ಈ ರೀತಿಯಾಗಿದೆ. ಚಿಕ್ಕಣ್ಣ ತನ್ನ ತಂದೆ ಗುಂಜಾರಯ್ಯನಿಗೆ "ಲೋ

ಎಲ್ಲೋಗಿದ್ದಾನ್ಲಾ ನಿಮ್ಮಯ್ಯ ಅನಿಸ್ಕೊ ಸೂಳೆಮಗಾ ಆ ನನಗುಟ್ಟಿರೋ ಅಪ್ಪ ಅನ್ನಿಸ್ಕೋನೆಲ್ಲಿದ್ದಾನು. ಕರ್ಕಬರೋಗು ತನ್ನ ಮಗನನ್ನು ರಟ್ಟೆ ಹಿಡಿದು ಎಳೆದು ತಳ್ಳಿದ. ನಂಗೊತಿಲ್ಲ ಯತ್ತಾಗೋಗಿದ್ದಾನೋ. "ಅವುನೆಂಗ್ತಿನಾ ಕೇಯುತಾರಿಯಾ ತೋಳ್ನೋ, ತೋಡಿಯೋ ಮುರಿದೆ ನಾ ಬಿಡುದಿಲ್ಲ"(ಮೊಗ್ಗಳ್ಳಿ ಗಣೇಶ, ಮೊಗಳ್ಳಿಯ ಕಥೆಗಳು, ಪುಟ–೨೪೩) ಎಂದು ಬೈಯ್ಯುತ್ತಾನೆ. ತನ್ನ ತಂದೆಯನ್ನೇ ಈ ರೀತಿ ಬೈಗುಳಗಳಿಂದ ಬೈಯ್ಯುತ್ತಿರುವುದು ಕಂಡುಬರುತ್ತದೆ. ಚಿಕ್ಕಣ್ಣ ತನ್ನ ಹೆಂಡತಿಯನ್ನು ಬೈಯ್ಯುವ ಸಂದರ್ಭ ಈ ರೀತಿಯಾಗಿದೆ. ಉದಾಹರಣೆಗೆ 'ಲೇಯ್ ಬೊಡ್ಡ, ವೊಂಟೋಗು ಮಾನ್ವಾಗೆವೊಳಕೆ. "ನಿನ್ನವ್ವನ್ನಾ ಕೇಯುಳೆ, ನನ್ಗೆ ಬುದ್ದಿಯೊಳುಕೆ ಬಂದಿಯಾ"(ಅದೇ ಪುಟ–೨೪೩) ಎಂದು ಕೆಳಜಾತಿ ಪುರುಷ ತನ್ನ ಹೆಂಡತಿಗೆ 'ನಿನ್ನವ್ವನ್ನಾ ಕೇಯುಳೆ' ಎಂಬ ಪದವನ್ನು ಬಳಸಿ ಬೈಯ್ಯುತ್ತಾನೆ. ಸಮಾಜದಲ್ಲಿ ಜನರು ವಾಸ್ತವವಾಗಿ ಬಳಸುವ ಬೈಗುಳವನ್ನೇ ಇಲ್ಲಿ ಬಳಸಿರುವುದು ಕಂಡುಬರುತ್ತದೆ. ಅಶ್ಲೀಲ ಎಂದು ಭಾವಿಸುವ ಬೈಗುಳಗಳನ್ನು ಕೆಲವು ಲೇಖಕರು ಬಳಸುವುದಿಲ್ಲ. ಬಳಸಿದರೂ ಪೂರ್ಣ ಬೈಗುಳಗಳನ್ನು ಬಳಸುವುದಿಲ್ಲ. ಇಲ್ಲಿ ವಾಸ್ತವವಾಗಿ ಬಳಸುವ ಬೈಗುಳವನ್ನೇ ಲೇಖಕರು ಬಳಸಿರುವುದು ಕಂಡುಬರುತ್ತದೆ.

ಚನ್ನಣ್ಣ ವಾಲಿಕಾರ ಅವರ 'ಇಪ್ಪತ್ತಾಂಶಗಳು' ನಾಟಕದಲ್ಲಿ ಕೆಳಜಾತಿಯವರು ಕೆಳಜಾತಿಯವರಿಗೆ ಬಳಸಿರುವ ಬೈಗುಳಗಳನ್ನು ಉದಾಹರಣೆಯಾಗಿ ನೋಡುವುದಾದರೆ,

"ಥೂ ನಿಮ್ಮವ್ನ ಮಿಂಡರ್ನ ಹಡಾ. ನಾ ಇದಕ ಮೊದ್ಲ ಏಟ್ ಸಾರ್‍ಯಾ ಹೇಳಿದ್ರೂ ಅಕಿ ನಮ್ಮವ್ ಹಾಳ್ರಿ ಕಿಸ್ಗೊಂಡ್ ಹಡದಾಳ್ರಿ ಅಂತ್ ಹಡಸ್ಗೊತಿದ್ದಿರಲ್ಲಲೆ 'ಕಳ್‌ಸೂಳೆಮಕ್ಳಾ' ಈಗ ಹ್ಯಾಂಗಾಯ್ತು ಅಕಿ ಆಡೋ ಆಟಾ ಗೊತ್ತಾಯ್ತೇನ್ಲೆ ದನಕ್ ಹುಟ್ದೋರ್‍ಯ" (ಚನ್ನಣ್ಣ ವಾಲಿಕಾರ, ಸಮಗ್ರ ನಾಟಕ ಸಂಪುಟ, ಪುಟ–೧೦೬) ಈ ರೀತಿಯ ಬೈಗುಳವನ್ನು ಕೆಳಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗೆ ಬಳಸಿರುವುದು ಕಂಡುಬರುತ್ತದೆ. ನಿಮ್ಮವ್ನ ಮಿಂಡರ್ನ ಹಡಾ, ಕಳ್ ಸೂಳೆ ಮಕ್ಳಾ, ದನಕ್ ಹುಟ್ದೋರ್‍ಯ ಎಂಬಂತಹ ಬೈಗುಳಗಳನ್ನು ಕೆಳಜಾತಿ ವ್ಯಕ್ತಿಗೆ ಬೈಯ್ಯುತ್ತಾನೆ. ಏಕೆಂದರೆ ಗೌಡ್ತಿಯ ಮಾತು ಕೇಳಿ ಕಲ್ಯಾ, ನಿಂಗ್ಯಾ ಇಬ್ಬರು ಕೆಳಜಾತಿ ವ್ಯಕ್ತಿಯಾದ ನವಲ್ಯಾನನ್ನು ಕೊಲೆ ಮಾಡುತ್ತಾರೆ. ಕಲ್ಯಾನ ಮಗಳನ್ನು ಗೌಡ್ತಿ ಮಗ ಮತ್ತು ಅವನ ಸ್ನೇಹಿತರು ಅತ್ಯಾಚಾರ ಮಾಡಿ ಕೊಲೆ ಮಾಡಿದ ಸುದ್ದಿ ತಿಳಿದಾಗ ಕಲ್ಯಾ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಭೀಮಣ್ಣ ನಿಮ್ಮವ್ನ ಹಡಾ, ದನಕ್ ಹುಟ್ದೋರ್‍ಯ ಎಂಬ ಬೈಗುಳಗಳನ್ನು ಬಳಸಿ ಬೈಯ್ಯುವುದು ಕಂಡುಬರುತ್ತದೆ.

ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಬೈಯ್ಯುವಾಗ ಜಾತಿಕೇಂದ್ರಿತ, ವರ್ಗಕೇಂದ್ರಿತ ಬೈಗುಳಗಳು ಕಂಡುಬರುವುದು ವಿರಳ. ಏಕೆಂದರೆ ಜಾತಿಯಲ್ಲಿ ಇವರನ್ನು ಸಮಾಜದಲ್ಲಿ ಕೆಳಗಿನವರು ಎಂದು ಭಾವಿಸಿದ್ದಾರೆ. ಮತ್ತು ಇವರಿಗೆ ಆರ್ಥಿಕ ಪ್ರಾಬಲ್ಯವಿಲ್ಲ. ಆದ್ದರಿಂದ

ಇವರಲ್ಲಿ ಜಾತಿಕೇಂದ್ರಿತ ಸಂದರ್ಭದಲ್ಲಿ ವರ್ಗಕ್ಕೆ ಸಂಬಂಧಿಸಿದಂತೆ ಗುಲಾಮ, ಬಡವ, ಕತ್ತೆಬಡವ ಎಂಬಂತಹ ಬೈಗುಳಗಳು ಕಂಡುಬರಬಹುದು. ಆದರೆ ಪ್ರಮಾಣವನ್ನು ಗಮನಿಸಿದರೆ ಕಡಿಮೆಯೆಂದೇ ಹೇಳಬಹುದು. ಲಿಂಗ ಕೇಂದ್ರಿತ ಬೈಗುಳಗಳು ಹೆಚ್ಚಾಗಿ ಕಂಡುಬಂದಿವೆ. ಪುರುಷರಿಗೆ ಬೈಯ್ದರು ಸಹ ಅವು ಹೆಣ್ಣನ್ನು ಕುರಿತ ಬೈಗುಳಗಳೇ ಆಗಿರುತ್ತವೆ. ಉದಾಹರಣೆ ನೋಡುವುದಾದರೆ ಹಾದರರದ ಸೂಳೆಮಗ, ಹಾದರರದಳೆ, ಲೌಡಿ, ಬೊಡ್ಡಿ ಮಗಳು, ಚಿನಾಲಿ, ಹಾದರಗಿತ್ತಿಮಗಳ್, ಕತ್ತಲವುಡಿ, ತಾಯಿಗಂಡ, ತಾಟಗಿತ್ತಿ, ನಿನ್ ತಾಯಿನ್ ಹಡಾ, ಹಡಾಣೆನಿನ್ನ ಮಗನೆ ಎಂಬಂತಹ ಬೈಗಳು ಹೆಚ್ಚಾಗಿ ಕಂಡುಬರುತ್ತವೆ. ಅಶ್ಲೀಲ ಎಂದು ಭಾವಿಸಲಾಗಿರುವ ಬೈಗುಳಗಳು ಕೆಳಜಾತಿ ಪಾತ್ರಗಳಲ್ಲೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ.

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಬೈಯ್ಯುವಾಗ ಜಾತಿಕೇಂದ್ರಿತ, ವರ್ಗಕೇಂದ್ರಿತ ಬೈಗುಳಗಳನ್ನು ಬಳಸಿ ಬೈಯ್ಯುತ್ತಾರೆ. ಕೆಳಜಾತಿಯವರ ಸಮುದಾಯಗಳನ್ನು ಹೆಸರಿಸಿ ಬೈಯ್ಯುವುದು ಕಂಡುಬರುತ್ತದೆ. ಉದಾಹರಣೆಗೆ ಹೊಲೆಮುಂಡೆಗಂಡ, ಹೊಲೆಲೌಡಿಮಗ, ಹೊಲೆಸೂಳೆಮಕ್ಳು, ಚಾಂಡಾಲ ನನ್ಮಗ, ಮಾದಿಗಸೂಳೆಮಗ, ಮಾದರ್‌ಚೋದ್, ಹೊಲ್ ಮಾದಿಗ ನನ್ ಮಕ್ಕಳು, ಹಲ್ಕಟ್‌ದೊಂಬ್ ನನ್‌ಮಕ್ಳು ಎಂದು ಕೆಳಜಾತಿಯವರ ಸಮುದಾಯಗಳ ಜೊತೆಗೆ ಹೆಣ್ಣುಕೇಂದ್ರಿತ ಬೈಗುಳಗಳನ್ನು ಬಳಸಿ ಬೈಯ್ಯುವುದನ್ನು ಗಮನಿಸಬಹುದು.

ಬ್ರಾಹ್ಮಣ ಪಾತ್ರಗಳು ರಂಡೆ, ಮುಂಡೆ, ಚಾಂಡಾಲ, ಶೂದ್ರ, ಪ್ರಾರಬ್ಧ, ದರಿದ್ರ ಎಂಬ ಪದಗಳನ್ನು ಹೆಚ್ಚಾಗಿ ಬಳಸಿ ಬೈಯ್ಯುತ್ತಾರೆ. ಉದಾಹರಣೆಗೆ ಮುಂಡೆಗಂಡ, ಚಾಂಡಾಲನನ್ಮಗ, ಶೂದ್ರಮುಂಡೇದು, ಪ್ರಾರಬ್ಧಮುಂಡೇದು, ದರಿದ್ರ ಮುಂಡೇದು ಎಂಬಂತಹ ಬೈಗುಳಗಳನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ರಂಡೆ, ಮುಂಡೆ, ಚಾಂಡಾಲ ಎಂಬ ಪದಗಳನ್ನು ಇತರೆ ಸಮುದಾಯಗಳು ಬಳಸಿವೆ. ಆದರೆ ಹೆಚ್ಚಾಗಿ ಬ್ರಾಹ್ಮಣ ಸಮುದಾಯದ ಪಾತ್ರಗಳು ಬಳಸಿರುವುದು ಕಂಡುಬರುತ್ತದೆ.

ಜಮೀನ್ದಾರರು, ಒಕ್ಕಲಿಗರು, ಗೌಡರು, ಗುಲಾಮ, ಬಡವ, ಸೂಳೆಮಗ, ಬಡ್ಡಿಮಗ, ಬಡ್ಡಿಹೈದ, ಬೋಳಿಮಗ ಎಂಬಂತಹ ಬೈಗುಳಗಳನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಇವರು ಜಾತಿ, ಲಿಂಗ, ವರ್ಗ ಕೇಂದ್ರಿತ ಬೈಗುಳಗಳನ್ನು ಬಳಸುತ್ತಾರೆ. ಜಮೀನ್ದಾರು ಆರ್ಥಿಕವಾಗಿ ಪ್ರಾಬಲ್ಯರಾಗಿರುವುದರಿಂದ ಸಾಮಾನ್ಯವಾಗಿ ಬಡವರನ್ನು ಕತ್ತೆಬಡವ, ಬಡ್ಡಿಸೂಳೆಮಗ, ಗುಲಾಮನನ್ಮಗ ಎಂಬಂತಹ ಬೈಗುಳಗಳಿಂದ ಬೈಯ್ಯುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ನೆಲೆಗಳಿಗೆ ಅನುಗುಣವಾಗಿ ಬೈಗುಳಗಳನ್ನು ಬಳಸಿರುವುದು ಕಂಡುಬರುತ್ತದೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಬೈಗುಳಗಳ ಮೂಲಕ ಈ ರೀತಿಯಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ದಲಿತ ಬಂಡಾಯದ ಲೇಖಕರು ಸೃಜನಶೀಲ ಕೃತಿಗಳಲ್ಲಿ ಅಶ್ಲೀಲ ಬೈಗುಳಗಳನ್ನು

ಸಹಜವಾಗಿ ಬಳಸಿದ್ದಾರೆ. ನವೋದಯದ ಕೆಲವು ಲೇಖಕರು ಅಶ್ಲೀಲ ಬೈಗುಳವನ್ನು ಬೈಯ್ಯುವ ಸಂದರ್ಭದಲ್ಲಿ ಬೈಗುಳಗಳನ್ನು ಪೂರ್ಣಗೊಳಿಸಿದ್ದಿಲ್ಲ. ಅದರಂತೆಯೇ ದೃಶ್ಯಮಾಧ್ಯಮಗಳಲ್ಲೂ ಅಶ್ಲೀಲ ಬೈಗುಳಗಳನ್ನು ಬಳಸುವುದಿಲ್ಲ ಸಮಾಜದಲ್ಲಿ ಬಳಸುವಂತಹ ಕೆಲವು ಬೈಗುಳಗಳನ್ನು ಚಲನಚಿತ್ರಗಳಲ್ಲಿ ಬಳಕೆ ಮಾಡುವುದಿಲ್ಲ ಸಮಾಜದಲ್ಲಿ ಬಳಕೆಯಾಗುವಂತಹ ಅಶ್ಲೀಲ ಬೈಗುಳಗಳನ್ನು ದಲಿತ ಬಂಡಾಯದ ಸೃಜನಶೀಲ ಕೃತಿಗಳಲ್ಲಿ ಪ್ರತಿಫಲನಗೊಂಡಿದೆ.

೫.೨. ಗಾದೆಗಳು: ಅಭಿವ್ಯಕ್ತಿಯ ಕ್ರಮ

ಸಮಾಜದಲ್ಲಿ ಜನರು ಮಾತನಾಡುವಾಗ ಸಂದರ್ಭಕ್ಕೆ ಅನುಗುಣವಾಗಿ ಗಾದೆಗಳನ್ನು ಬಳಸುತ್ತಾರೆ. ಸಾಮಾಜಿಕ, ಧಾರ್ಮಿಕ ಮತ್ತು ಜನಾಂಗಿಕ ಇನ್ನು ಮುಂತಾದ ವಿಷಯಕ್ಕೆ ಸಂಬಂಧಪಟ್ಟ ಗಾದೆಗಳಿರಬಹುದು. ಈ ವಿಷಯಕ್ಕೆ ಸಂಬಂಧಪಟ್ಟ ಗಾದೆಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಬಳಸಲಾಗುತ್ತದೆ. ಗಾದೆ ಸರಳತೆ, ಸಂಕ್ಷಿಪ್ತತೆ, ಧ್ವನಿಪೂರ್ಣತೆ ಹಾಗೂ ಕಲಾತ್ಮಕ ಅಭಿವ್ಯಕ್ತಿಯಿಂದಾಗಿ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ.

ಶ್ರೇಣಿಕೃತ ಸಮಾಜದಲ್ಲಿ ಗಾದೆಗಳು ಸಾಮಾಜಿಕ ಸೂಚಕಗಳಾಗಿಯೂ ಕೆಲಸ ಮಾಡುತ್ತವೆ. ಸಮಾಜದ ಮತ್ತು ಸಂಸ್ಕೃತಿಯ ಅನೇಕ ಸ್ತರಗಳನ್ನು ಈ ಗಾದೆಗಳ ಮೂಲಕ ಗುರುತಿಸಬಹುದಾಗಿದೆ. ಜಾತಿ, ಲಿಂಗ, ವರ್ಗ ಮುಂತಾದ ಸಾಮಾಜಿಕ ಭಿನ್ನಾಂಶಗಳ ಮೂಲಕ ಗಾದೆಗಳಲ್ಲಿ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದು. ಗಾದೆಗಳಲ್ಲಿ ನಿರ್ಮಿತವಾಗಿರುವ ಮೌಲ್ಯಗಳು ಕೇವಲ ವ್ಯಕ್ತಿ ನಿಷ್ಠವಾಗಿರದೆ, ಇಡೀ ಸಮಾಜ ನಿಷ್ಠವಾಗಿರುತ್ತವೆ. ಉದಾಹರಣೆಗೆ 'ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ದಾಂಗೆ ಆದಾತು' ಎಂಬ ಗಾದೆ ಒಬ್ಬ ವ್ಯಕ್ತಿಯ ಕುರಿತು ಹೇಳಿರಬಹುದು. ಆದರೆ ಅದು ಸಮಾಜದಲ್ಲಿರುವ ಬಡವರ ಆರ್ಥಿಕತೆ ಮತ್ತು ಸಾಮಾಜಿಕತೆಯನ್ನು ಸೂಚಿಸುತ್ತದೆ. ಹೀಗೆ ಗಾದೆಗಳು ಸಾಮಾಜಿಕ ಸೂಚಕಗಳಾಗಿ ಕೆಲಸ ಮಾಡುತ್ತವೆ.

ಗಾದೆಗಳ ನಿಷ್ಪತ್ತಿಯನ್ನು ತ್ರಿವೇಣಿ ಅವರ 'ಕನ್ನಡ ಗಾದೆಗಳಲ್ಲಿ ಸ್ತ್ರೀ' ಎಂಬ ಪುಸ್ತಕದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

"ಅಚ್ಚ ಗನ್ನಡದ ಈ ನಾಣ್ನುಡಿ ಶಬ್ದವು ಮೊದಮೊದಲು ಬಳಕೆಯಲ್ಲಿದ್ದು ಕ್ರಮೇಣ ಗಾದೆ ಎಂಬ ಪದದ ಪ್ರಾಚುರ್ಯದಿಂದ ಹಿಂದಕ್ಕೆ ಸರಿದಿದೆ. ಗಾದೆ ಶಬ್ದಕ್ಕೆ ಸಂಸ್ಕೃತದ 'ಗಾಥಾ' ಶಬ್ದವು ಮೂಲವಾಗಿದ್ದು, ಕನ್ನಡ ಸಾಹಿತ್ಯ ಮತ್ತು ಜನಜೀವನಕ್ಕೆ ಸಂಸ್ಕೃತ ಮತ್ತು ಪ್ರಾಕೃತಗಳ ಸಾಂಸ್ಕೃತಿಕ ಸಂಪರ್ಕವೇರ್ಪಟ್ಟ ಮೇಲೆ ಈ ಪದವು ಕನ್ನಡ ಭಾಷೆಯಲ್ಲಿ ಸೇರಿರಬೇಕು. ಕನ್ನಡಕ್ಕೆ ಸಂಸ್ಕೃತದ ಸಂಪರ್ಕದಿಂದ ಹಲವಾರು ಪದಗಳು ನೇರವಾಗಿ ಸಂಸ್ಕೃತದಿಂದ ಕನ್ನಡಕ್ಕೆ ತದ್ಭವವಾಗಿ ಬರುತ್ತಿದ್ದವು. ಮತ್ತೆ ಕೆಲವು ಪದಗಳು ಸಂಸ್ಕೃತದಿಂದ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದು ಸೇರಿದ್ದವು. ಹೀಗಾಗಿ 'ಗಾದೆ' ಪದವು ಸಂಸ್ಕೃತದ 'ಗಾಥಾ', 'ಗಾಹೆ'ಯಾಗಿ

ನಂತರ ಕನ್ನಡದಲ್ಲಿ ಗಾದೆಯಾಗಿ ರೂಪಾಂತರಗೊಂಡಿರಬಹುದು. ಒಟ್ಟಾರೆಯಾಗಿ ಕನ್ನಡದ ಗಾದೆ ಪದಕ್ಕೆ ಸಂಸ್ಕೃತದ 'ಗಾಥಾ'ಶಬ್ಧವೇ ಮೂಲವೆಂಬುದಂತು ಖಚಿತವಾದ ವಿಚಾರವಾಗಿದೆ. (ತ್ರಿವೇಣಿ, ಕನ್ನಡ ಗಾದೆಗಳಲ್ಲಿ ಸ್ತ್ರೀ, ಪುಟ, ೧೯). ಇವರು ಸಂಸ್ಕೃತದಲ್ಲಿ ಗಾಥಾ, ಪ್ರಾಕೃತದಲ್ಲಿ ಗಾಹೆ, ಕನ್ನಡದಲ್ಲಿ ಗಾದೆಯಾಗಿ ರೂಪಾಂತರಗೊಂಡಿರಬಹುದು ಎಂದು ಹೇಳಿದ್ದಾರೆ.

ಕನ್ನಡದಲ್ಲಿ ಹಲವಾರು ಜಾನಪದ ತಜ್ಞರು ತಮ್ಮ ಅಭಿಪ್ರಾಯಗಳ ಮೂಲಕ ಗಾದೆಯನ್ನು ಕುರಿತು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ.

೧. ಎಂ.ಮರಿಯಪ್ಪಭಟ್ಟರು: 'ಗಾದೆಯಮಾತು' ಎಂದರೆ ಸಾವಿರಕ್ಕೊಂದು ಮಾತು. ಕಿರಿದರಲ್ಲಿ ಹಿರಿದಾದ ಅರ್ಥವನ್ನು ತುಂಬಿಕೊಂಡಿದೆ.....ಬಿಂದಿಗೆಯಲ್ಲಿ ಕಡಲನ್ನು ತುಂಬಿದಂತೆ ಲೋಕಾನುಭವ, ಸಂಸ್ಕೃತಿ, ನೀತಿ ಇವುಗಳ ತ್ರಿವೇಣಿ ಸಂಗಮವನನ್ನು ಅಲ್ಲಿ ಕಾಣಬಹುದು ಎಂದಿದ್ದಾರೆ.

೨. ದೇವುಡು ನರಸಿಂಹಶಾಸ್ತ್ರಿ ಅವರು ಹೇಳುವಂತೆ: "ತಲೆತಲಾಂತರದಿಂದ ಶೇಖರವಾಗಿರುವ ಅನುಭವವು ಯಾವನಾದರೊಬ್ಬನ ಬಾಯಲ್ಲಿ ಮಾತಾಗಿ ಹೊರಬೀಳುವುದು. ಜನತೆಯು ಆ ಮಾತಿನ ಸೊಬಗಿಗೂ ಅದರ ಹಿದಿರುವ ಅನುಭವಕ್ಕೂ ಮೆಚ್ಚಿ ಅದನ್ನು ನಾಣ್ಯವಾಗಿ ಸಂಗ್ರಹಿಸುವುದು. ಜ್ಞಾತಜ್ಞಾತವಾಗಿ ಅದನ್ನು ಸಾಧ್ಯವಾದಂತೆಲ್ಲಾ ಅವರಿವರೆನ್ನದೆ ತಿದ್ದಿ ಹೊಳಪಿಕ್ಕುವರು" ಹೀಗೆ ಸಿದ್ಧವಾದ ಆ ಮೊಹರೆ ವಾಕ್ಯವೇ ಗಾದೆ.

೩. ಸುಧಾಕರ ಅವರು: ಗಾದೆಗಳು ಒಂದು ರಾಷ್ಟ್ರದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರಣವನ್ನೊಳಗೊಂಡ ಅಲಿಖಿತ ಇತಿಹಾಸ; ರಾಷ್ಟ್ರದ ಅಂತರಂಗವನ್ನು ಪ್ರತಿಬಿಂಬಿಸುವ ಕನ್ನಡಿ. ಇನ್ನೊಂದು ದೃಷ್ಟಿಯಿಂದ ಜನಸಾಮಾನ್ಯರ ಬಾಳನ್ನು ರೂಪಿಸುವ, ನಿಯಂತ್ರಿಸುವ, ವಿಧಿ; ಶಿಕ್ಷಿಸುವ, ರಕ್ಷಿಸುವ, ಧೈರ್ಯ ತುಂಬುವ, ದಾರಿತೋರಿಸುವ, ಕೈ ಕೈಹಿಡಿದು ನಡೆಸುವ ಗುರು; ತೊಂದರೆಗೆ ಸಿಕ್ಕಿದಾಗ ಸಮಾಧಾನ ಹೇಳುವ, ಸಾಂತ್ವಾನಗೊಳಿಸುವ ವಾತ್ಸಲ್ಯಮಯಿ ತಾಯಿ; ನೋವಿನ ಗಾಯವನ್ನು ಮಾಯಿಸುವ ಮದ್ದು; ಮನಸ್ಸಿನ ಮ್ಲಾನತೆಯನ್ನು ಕಳೆಯುವ, ತೊಳೆಯುವ ಮಲಾಪಹಾರಿ ಎಂದಿದ್ದಾರೆ

೪. ರಾಮೇಗೌಡ ಅವರು: ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾದ, ಕಿರಿದರಲ್ಲಿ ಹಿರಿದಾದ ಅರ್ಥ ತುಂಬಿದ ಗಾದೆಗಳು ಜನಾನುಭವದ ಸರ್ವಾದರಣೀಯ ಸಣ್ಣ ಹರಳುಗಳಂತೆ ಕಾಣಿಸಿಕೊಳ್ಳುತ್ತವೆ. ಒಟ್ಟಿನಲ್ಲಿ ಗಾದೆಗಳು ಜನಸಾಮಾನ್ಯರ ಬಿಡಿ ಕವಿತೆಗಳು: ಅವರ ಜೀವನದ ಮಂದಾರದ ಸಂಸ್ಕೃತಿ ಪುರಾಣಗಳು ಎಂದಿದ್ದಾರೆ. (ತ್ರಿವೇಣಿ, ಕನ್ನಡ ಗಾದೆಗಳಲ್ಲಿ ಸ್ತ್ರೀ, ಪುಟ, ೨೪-೨೫). ಹೀಗೆ ಗಾದೆಗಳನ್ನು ಕುರಿತು ಕನ್ನಡದಲ್ಲಿ ಹಲವಾರು ಜಾನಪದ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಆದರೂ ಇದುವರೆಗೂ ಗಾದೆ ಎಂದರೇನು ಎಂಬುದಕ್ಕೆ 'ಇದಮಿತ್ಥಂ' ಎಂದು ಹೇಳುವುದು ಅಸಾಧ್ಯ.

ಗಾದೆಗಳನ್ನು ಮೊದಲಿಗೆ ಸೃಷ್ಟಿಸಿದವರು ಯಾರು ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಸಂದರ್ಭಕ್ಕೆ ಅನುಗುಣವಾಗಿ ಹೇಳಿದ ಮಾತು ಗಾದೆಯಾಗಿ ರೂಪುಗೊಂಡಿರಬೇಕು. ಯಾರನ್ನೋ ಅಥವಾ ಯಾವುದನ್ನೋ ನೋಡಿ ಒಂದು ಸಂದರ್ಭಕ್ಕೆ ಹೇಳಿರುವಂತಹ ಮಾತು; ಆ ರೀತಿಯ ಇನ್ನೊಂದು ಸಂದರ್ಭಕ್ಕೆ ಅದೇ ಮಾತನ್ನು ಉದಾಹರಣೆಯಾಗಿ ನೀಡುವ ಮಾತಾಗಿದೆ. ಕೇಳುವವರಿಗೆ ಆ ಮಾತು ಸತ್ಯವೆನಿಸಬೇಕು, ತಮ್ಮದೇ ಆದ ಅನುಭವ ಎನಿಸಬೇಕು. ಹಾಗೆಯೇ ಜನರಿಂದ ಜನರಿಗೆ ಈ ರೀತಿಯ ಮಾತುಗಳು ಹರಡಿಕೊಂಡಿವೆ. ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಕೆಳಜಾತಿ ಪಾತ್ರಗಳು ಮತ್ತು ಮೇಲ್ಜಾತಿ ಪಾತ್ರಗಳು ಕನ್ನಡ ಗಾದೆಗಳ ಮೂಲಕ ಅಭಿವ್ಯಕ್ತಗೊಂಡಿರುವ ಬಗೆ ಯಾವುದು? ಏಕೆ ಸಮುದಾಯ ಕೇಂದ್ರಿತ ಗಾದೆಗಳು ರೂಪುಗೊಂಡಿವೆ? ಆ ರೀತಿಯ ಗಾದೆಗಳ್ನು ಬಳಸುವವರ ಮನೋಧೋರಣೆ ಏನಾಗಿದೆ? ಆ ಗಾದೆಗಳ್ನು ಬಳಸುವ ಸಂದರ್ಭ ಯಾವುದು? ಎಂಬುದನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಬಳಸಿರುವ ಗಾದೆಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಸ್ತರವಿನ್ಯಾಸವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕೆಲವೊಮ್ಮೆ ಗಾದೆಗಳು ಆರೋಪಗಳಾಗಿಯೂ ಬಳಕೆಯಾಗಿರುತ್ತವೆ. ಏಕೆಂದರೆ ಗಾದೆಗಳು ಎಲ್ಲಾ ಕಾಲಕ್ಕೂ ಒಂದೆ ಅರ್ಥವನ್ನು ಕೊಡುತ್ತವೆ ಎಂದು ಹೇಳಲಾಗದು. ಹಾಗೆ ಎಲ್ಲಾ ಸಂದರ್ಭಕ್ಕೂ ಆ ಗಾದೆಗಳು ಅನ್ವಯವಾಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ದನಾ ತಿನ್ನೊನಿಗೆ ಗೊಬ್ಬರದ ಆಣೆ, ಮಾದಿಗ ಮಾಡುವುದು ಹೆಂಡಕ್ಕೆ, ಒಕ್ಕಲಿಗ ಮಾಡುವುದು ದಂಡಕ್ಕೆ, ಹಾರುವರು ಹೆಚ್ಚಿದ್ರೆ ಊರಾಳು, ಏಡಿ ಹೆಚ್ಚಿದ್ರೆ ಕೆರೆಹಾಳು ಎಂಬುವಂತಹ ಗಾದೆಗಳು ಯಾರೋ ಯಾವುದೋ ಒಂದು ಸಂದರ್ಭಕ್ಕೆ ಸೃಷ್ಟಿಸಿರುವಂತಹ ಮಾತು. ಪ್ರಸ್ತುತ ಸಂದರ್ಭದಲ್ಲೂ ಈ ಮಾತುಗಳು ಆ ಸಮುದಾಯಗಳಿಗೆ ಅನ್ವಯವಾಗುತ್ತವೆಯೇ ಎಂದು ನೋಡಬೇಕಾಗಿದೆ.? ಪ್ರಸ್ತುತ ಸಂದರ್ಭದಲ್ಲಿ ಬಳಸಿದರೂ ಯಾರು ಬಳಸಿದ್ದಾರೆ? ಯಾವ ಸಂದರ್ಭದಲ್ಲಿ ಬಳಸಿದ್ದಾರೆ? ಏಕೆ ಬಳಸಿದ್ದಾರೆ? ಬಳಸಿರವವರ ಮನೋಧೋರಣೆ ಏನಾಗಿದೆ? ಎಂಬುದನ್ನು ನೋಡಬೇಕಾಗುತ್ತದೆ.

ಕನ್ನಡ ಗಾದೆಗಳಲ್ಲಿ ಕೆಳಜಾತಿ ಪಾತ್ರಗಳು ಮತ್ತು ಮೇಲ್ಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ಕೆಲವು ಉದಾಹರಣೆಗಳ ಮೂಲಕ ನೋಡಲಾಗಿದೆ. ಇಲ್ಲಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ, ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ; ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ, ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳನ್ನು ಕುರಿತು ಚರ್ಚಿಸಲಾಗಿದೆ.

೫.೨.೧. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಗಾದೆಯ ಅರ್ಥ ಏನನ್ನು ಸೂಚಿಸುತ್ತದೆ ಎನ್ನುವುದರ ಜೊತೆಗೆ ಗಾದೆಯನ್ನು ಯಾರು ಯಾರಿಗೆ ಬಳಸುತ್ತಿದ್ದಾರೆ, ಹೀಗೆ ಬಳಸಲು ಕಾರಣವೇನು? ಬಳಸುವ ಸಂದರ್ಭ ಯಾವುದು? ಎಂಬಂತಹ ಅಂಶಗಳು ಬಹಳ ಮುಖ್ಯವಾಗುತ್ತವೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಕುರಿತು ಬಳಸಿರುವ ಅನೇಕ ಗಾದೆಗಳು ದೊರೆಯುತ್ತವೆ. ಆ ಗಾದೆಗಳನ್ನು ಯಾವ ಕಾರಣಕ್ಕಾಗಿ, ಯಾವ ಸಂದರ್ಭದಲ್ಲಿ ಬಳಸುತ್ತಾರೆ, ಬಳಸುವವರ ಮನೋಧೋರಣೆ ಯಾವುದು ಎಂಬುದರ ಮೂಲಕ ಸಾಮಾಜಿಕ ಚಹರೆಗಳನ್ನು ಗುರುತಿಸಬಹುದಾಗಿದೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಲಿಂಗ, ವರ್ಗ ಮುಂತಾದ ಅಂಶಗಳನ್ನೊಳಗೊಂಡಂತೆ ಗಾದೆಗಳು ಬಳಕೆಯಾಗಿವೆ. ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಗಾದೆಗಳ ಮೂಲಕ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬಳಸಿರುವ ಗಾದೆಯನ್ನು ಕುರಿತು ಚರ್ಚಿಸಬಹುದು.

"ನೋಡೋ, ಗುತ್ತಿ ಈ ಆಟಾನೆಲ್ಲ ತೆಗೀಬ್ಯಾಡ ನನ್ನತ್ರ" ಎಂದು ಗುತ್ತಿಯ ಕಣ್ಣನ್ನೆ ನೇರವಾಗಿ ನೋಡುತ್ತಾ ಹೇಳಿದನು: "ನಿನ್ನ ಗುಟ್ಟೆಲ್ಲಾ ನಮಗೆ ಗೊತ್ತಿಲ್ಲಾ ಅಂತಾ ಮಾಡೀಯೇನು?.

ಗುತ್ತಿ ತಾನು ಬೆಟ್ಟಳ್ಳಿಗೆ ಹೋಗಿ ದೊಡ್ಡ ಬೀರನ ಮಗಳು ತಿಮ್ಮಿಯನ್ನು ಹಾರಿಸಿಕೊಂಡು ಹೋಗುವ ಗುಟ್ಟನ್ನೇ ಕುರಿತು ತಿಮ್ಮಪ್ಪ ಹೆಗ್ಗಡೆ ಸೂಚಿಸುತ್ತಿದ್ದಾನೆ ಎಂದು ಹೆದರಿ, ಹೇಗಾದರೂ ಮಾಡಿ ಅವನ ಕೈಯಿಂದ ನುಣುಚಿಕೊಂಡು ಹೋಗಿ ಸುಬ್ಬಣ್ಣಹೆಗ್ಗಡೆಯವರಿಗೆ ಕಾಗದ ತಲುಪುವಂತೆ ಮಾಡಿದರೆ ಸಾಕು ಎಂದು ಹಿಂದು ಮುಂದು ನೋಡದೆ "ಇಲ್ಲ ನನ್ನೊಡ್ಯಾ ಸತ್ಯವಾಗಿ ದೇವರಾಣೆ!" ಎಂದುಬಿಟ್ಟನು.

"ದನಾ ತಿನ್ನುವನಿಗೆ ಗೊಬ್ಬರದ ಆಣೆ!.....ನೋಡು" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೧೦೬-೧೦೭) ಎಂದು ತಿಮ್ಮಪ್ಪ ಹೆಗ್ಗಡೆ ಗುತ್ತಿಗೆ ಬಳಸುವಂತ ಗಾದೆ 'ದನಾ ತಿನ್ನುವವನಿಗೆ ಗೊಬ್ಬರದ ಆಣೆ' ಎಂದರೆ ದನದ ಆಹಾರ ಕನಿಷ್ಟ ಆಹಾರ. ಅದನ್ನು ತಿನ್ನುವವರು ಕನಿಷ್ಟದವರು. ಗೊಬ್ಬರದಂತಹ ಶ್ರೇಷ್ಠ ವಸ್ತುವಿನ ಮೇಲೆ ಆಣೆ ಮಾಡುವುದು ಎಷ್ಟರ ಮಟ್ಟಿಗೆ ಸತ್ಯ. ಅವರಿಂದ ಎಷ್ಟರ ಮಟ್ಟಿಗೆ ಸತ್ಯವನ್ನು ನಿರೀಕ್ಷೆ ಮಾಡಬಹುದು ಎಂಬ ಅರ್ಥವನ್ನು ಸೂಚಿಸುತ್ತದೆ. ದನದ ಮಾಂಸ ಕನಿಷ್ಟ, ಗೊಬ್ಬರ ಶ್ರೇಷ್ಠ ಎಂದು ಸಮಾಜದಲ್ಲಿ ಭಾವಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸತ್ಯವಾದ ಮಾತು ಎಂಬುದಕ್ಕೆ ವೀಳ್ಯದೆಲೆ ಮತ್ತು ಗೊಬ್ಬರದ ಮೇಲೆ ಆಣೆ, ಪ್ರಮಾಣ ಮಾಡಿಸುವ ಪದ್ಧತಿಯಿದೆ. ಹಾಗೆಯೇ ಇಲ್ಲಿ ದನಾ

ತಿನ್ನುವ ಕೆಳಜಾತಿ ವ್ಯಕ್ತಿ ಗೊಬ್ಬರದ ಮೇಲೆ ಆಣೆ ಮಾಡಿದರೆ ನಂಬಲು ಸಾಧ್ಯವಿಲ್ಲ ಎಂಬ ಅರ್ಥವನ್ನು ನೀಡುತ್ತಿದೆ. ಈ ಗಾದೆ ಮೇಲ್ಜಾತಿಯವರೇ ಹೆಚ್ಚಾಗಿ ಬಳಸುತ್ತಾರೆ ಎಂದು ಹೇಳಬಹುದು. ಕೆಳಜಾತಿಯವರು ಈ ಗಾದೆಯನ್ನು ಬಳಸುವುದು ಕಂಡುಬರುವುದಿಲ್ಲ. ಏಕೆಂದರೆ ದನದ ಮಾಂಸವನ್ನು ತಿನ್ನುವವರು ಕೆಳಜಾತಿಯವರೇ ಎಂದು ಭಾವಿಸಲಾಗಿದೆ. ಆದ್ದರಿಂದ ಮೇಲ್ಜಾತಿಯವರು ಕೆಳಜಾತಿ ವ್ಯಕ್ತಿಗಳಿಗೆ ಈ ಗಾದೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಮೇಲ್ಜಾತಿ ವ್ಯಕ್ತಿಗಳು ಸುಳ್ಳು ಹೇಳಿದ ಸಂದರ್ಭದಲ್ಲಿ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬಳಸುತ್ತಾರೆ. ಆದರೆ ಇದು ಕೆಳಜಾತಿ ವ್ಯಕ್ತಿಗಳನ್ನು ಕೇಂದ್ರವಾಗಿಸಿಕೊಂಡು ಹೇಳುವಂತಹ ಗಾದೆಯಾಗಿದೆ. ಅಂದರೆ ದನಾ ತಿನ್ನುವ ಕೆಳಜಾತಿ ವ್ಯಕ್ತಿ ಹೇಗೆ ಸತ್ಯ ಹೇಳುತ್ತಾನೆ ಎಂದು ನಿರೀಕ್ಷೆ ಮಾಡಲು ಸಾಧ್ಯವಿಲ್ಲವೋ ಹಾಗೆ ನಿನ್ನನ್ನು ನಂಬಲು ಸಾಧ್ಯವಿಲ್ಲ ಎಂಬ ಮಾತನ್ನು ಸ್ಪಷ್ಟಪಡಿಸಲು ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ವ್ಯಕ್ತಿಗಳಿಗೆ ಸಂದರ್ಭಾನುಸಾರ ಇಂತಹ ಗಾದೆಗಳನ್ನು ಬಳಸುತ್ತಿದ್ದುದು ಕಂಡುಬರುತ್ತದೆ. ಕೆಲವೊಮ್ಮೆ ಮೇಲ್ಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ವ್ಯಕ್ತಿಗಳಿಗೆ ಈ ಗಾದೆಯನ್ನು ಬಳಸುತ್ತಿರುವುದು ಕಂಡುಬರುತ್ತದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ತಿಮ್ಮಪ್ಪ ಹೆಗ್ಗಡೆ ಈ ಗಾದೆಯನ್ನು ಬಳಸುವುದಕ್ಕೆ ಕಾರಣವೆಂದರೆ ಸಿಂಭಾವಿ ಭರಮಯ್ಯ ಹೆಗ್ಗಡೆಯವರು ಗುತ್ತಿಯ ಕೈಯಲ್ಲಿ ಕಾಗದ ಕಳುಯಿಸಿದ್ದರೂ ಯಾವುದೇ ಕಾಗದ ಕೊಟ್ಟಿಲ್ಲ ಎಂದು ದೇವರ ಆಣೆಮಾಡಿ ಸುಳ್ಳು ಹೇಳುತ್ತಾನೆ. ಆಗ ತಿಮ್ಮಪ್ಪ ಹೆಗ್ಗಡೆ 'ದನಾ ತಿನ್ನುವವನಿಗೆ ಗೊಬ್ಬರದ ಆಣೆ' ನೋಡು ಎಂಬ ಗಾದೆಯನ್ನು ಬಳಸುತ್ತಾನೆ. ಅಂದರೆ ದನಾ ತಿನ್ನುವ ಕೆಳಜಾತಿ ವ್ಯಕ್ತಿಯಾದ ಗುತ್ತಿ ದೇವರ ಮೇಲೆ ಆಣೆ ಮಾಡಿದರೂ ಸಹ ಸುಳ್ಳು ಹೇಳುತ್ತಿದ್ದಾನೆ. ಅದನ್ನು ನಂಬಲು ಸಾಧ್ಯವಿಲ್ಲ. ದನಾ ತಿನ್ನುವ ವ್ಯಕ್ತಿ ದೇವರ ಮೇಲೆ ಆಣೆ ಮಾಡಿದರೂ ಸಹ ಅದು ಸತ್ಯಕ್ಕೆ ದೂರವಾದ ಮಾತು ಎಂಬುದನ್ನು ಸೂಚಿಸುತ್ತದೆ. ಅಂದರೆ ಇಲ್ಲಿ ಇನ್ನೊಂದು ಪ್ರಶ್ನೆ ಹುಟ್ಟುತ್ತದೆ. ದನಾ ತಿನ್ನುವವರು ಮಾತ್ರ ಸುಳ್ಳು ಹೇಳುತ್ತಾರಾ? ಬೇರೆ ಯಾರು ಸುಳ್ಳು ಹೇಳುವುದಿಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಗುತ್ತಿ ಸುಳ್ಳು ಹೇಳುತ್ತಾನೆ ನಿಜ. ಆದರೆ ದನಾ ತಿನ್ನುವ ಜಾತಿಯವರು ಹೇಳುವುದೆಲ್ಲ ಸುಳ್ಳು ಎಂಬ ಮಾತು ಆ ಸಮುದಾಯದವರಿಗೆ ಮಾಡಿದ ಆರೋಪ ಎಂದೆನಿಸುತ್ತದೆ.

ಇಲ್ಲಿ ಗುತ್ತಿ ಸುಳ್ಳು ಹೇಳುವುದು ತನ್ನ ವೈಯಕ್ತಿಕ ಕೆಲಸವನ್ನು ಸಾಧಿಸಿಕೊಳ್ಳುವ ಸಲುವಾಗಿ ಅಲ್ಲ. ತನ್ನ ಒಡೆಯರು ಹೇಳಿದ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳನ್ನು ಹೇಳುತ್ತಾನೆ. ಗುತ್ತಿಯ ಒಡೆಯರು ನಾನು ಕೊಟ್ಟ ಕಾಗದವನ್ನು ಗುಟ್ಟಾಗಿ ಸುಬ್ಬಣ್ಣ ಹೆಗ್ಗಡೆಯವರಿಗೆ ಕೊಡಬೇಕು. ಬೇರೆ ಯಾರಾದರೂ ಕೈಯಲ್ಲಿ ಕೊಟ್ಟುಬಿಟ್ಟಿಯಾ? ಎಂದು ಹೆದರಿಸಿರುತ್ತಾರೆ. ಈ ಕಾಗದ ಕೊಟ್ಟ ವಿಚಾರ ತಿಮ್ಮಪ್ಪ ಹೆಗ್ಗಡೆಗೆ ತಿಳಿದರೆ ಎಲ್ಲಿ? ಕೊಡು, ನೋಡಿಕೊಡುತ್ತೇನೆ

ಎಂದು ಕೇಳಿದರೆ ಏನು ಮಾಡುವುದು? ಎಂಬ ಪಜೀತಿ ಸೃಷ್ಟಿಯಾಗುತ್ತದೆ. ಕಾಗದ ಕೊಟ್ಟರೆ ಒಡೆಯನ ಮಾತಿಗೆ ತಪ್ಪಿದಂತಾಗುತ್ತದೆ. ಕೊಡದಿದ್ದರೆ ತಿಮ್ಮಪ್ಪ ಹೆಗ್ಗಡೆಗೆ ಸುಳ್ಳು ಹೇಳಿದಂತಾಗುತ್ತದೆ. ಈ ರೀತಿಯ ದ್ವಂದ್ವ ಪರಿಸ್ಥಿತಿಯಲ್ಲಿ ಗುತ್ತಿ ಸಿಕ್ಕಿಹಾಕಿಕೊಂಡಿರುತ್ತಾನೆ. ಇಲ್ಲಿ ಗುತ್ತಿ ಗೂಢಾಚಾರದ ಕೆಲಸವನ್ನು ಮಾಡುತ್ತಿದ್ದಾನೆ. ಈ ಪರಿಸ್ಥಿತಿಯಲ್ಲಿ ಯಾರೆ ಇದ್ದರೂ ಸಹ ಸುಳ್ಳು ಹೇಳುವ ಪರಿಸ್ಥಿತಿ ಬರುತ್ತಿತ್ತು. ಈ ಗಾದೆ ಒಂದು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಸೂಚಿಸುತ್ತದೆ. ದನವನ್ನು ಆಹಾರವಾಗಿ ಸ್ವೀಕರಿಸುವುದು ಕೆಳಜಾತಿ ಸಮುದಾಯ, ದನದ ಆಹಾರ ಅವರ ಸಮುದಾಯದ ಆಹಾರ ಪದ್ಧತಿಯಾಗಿದೆ. ಈ ಎರಡು ಅಂಶಗಳು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಸೂಚಿಸುತ್ತದೆ.

ದನಾ ತಿನ್ನುವವರು ಗೊಬ್ಬರದಂತಹ ಶ್ರೇಷ್ಠ ವಸ್ತುವಿನ ಮೇಲೆ ಆಣೆ ಮಾಡಿದರೂ ಅದು ಸುಳ್ಳೆ ಆಗಿರುತ್ತದೆ ಎನ್ನುವುದಾದರೆ ದನವನ್ನು ತಿನ್ನದೆ ಇರುವವರು ಗೊಬ್ಬರದ ಮೇಲೆ ಆಣೆ ಮಾಡದಿದ್ದರೂ ಅವರು ಹೇಳುವುದೆಲ್ಲ ಸತ್ಯವೇ? ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ. ಈ ಗಾದೆಯನ್ನು ಹೆಚ್ಚಾಗಿ ಬಳಸುವವರು ಮೇಲ್ಜಾತಿ ಪಾತ್ರಗಳೇ ಬಳಸುವವರ ಮನೋಧೋರಣೆಯನ್ನು ಕೂಡ ಇದು ಸೂಚಿಸುತ್ತದೆ ಎಂದು ಹೇಳಬಹುದು.

ರಾವ್‌ಬಹದ್ದೂರ್ ಅವರ 'ಗ್ರಾಮಾಯಣ' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರ ಕೆಳಜಾತಿ ಪಾತ್ರಕ್ಕೆ ಬಳಸಿರುವ ಗಾದೆಯನ್ನು ಉದಾಹರಣೆಯಾಗಿ ನೋಡಬಹುದು.

"ಪಡದಪ್ಪನವರಿಲ್ಲದ್ದರಿಂದ ಗಾಂಜೀ ಮಿದ್ದುವ ಕೆಲಸವಿಲ್ಲದೆ ಕರಿಯಪ್ಪ ಅಡ್ಡಾಗಿ ಬಿಟ್ಟಿದ್ದ. ತೀರ್ಥಪ್ರಾಶನದ ಆಸೆಗಾಗಿಯೇ ಅಲ್ಲಿ ನೆರೆಯುವ ಭಕ್ತ ಪರಿವಾರವೆಲ್ಲ ನೋಣಜಾಡಿಸುತ್ತ, ತೇಲುಗಣ್ಣು ಮೇಲುಗಣ್ಣು ಹಾಕುತ್ತ ಕುಳಿತಲ್ಲಿಯೇ ಕುಳಿತಿತ್ತು. ಯಾರೊಬ್ಬರ ಮುಖದ ಮೇಲೂ ಚಿವುಟಿದರೆ ಒಂದು ಹನಿ ರಕ್ತ ಕೂಡ ಚಿಮ್ಮುವಂತಿರಲಿಲ್ಲ. ಲಿಂಗಪ್ಪಗೌಡನ ಬಾಯುಪಚಾರದಿಂದ 'ತೀರ್ಥಭಕ್ತ'ರ ಜಾತಕ ಹೃದಯ ಹೇಗೆ ತಣಿಯಬೇಕು?

ಅಷ್ಟರಲ್ಲಿ ಹೊಲೆಯರ ರುದ್ರ ತಡೆಯಲಾರದೆ ಬಾಯ್ತೆರೆದ: ಯಪ್ಪಾ ಮದ್ಯಾನದಿಂದ ಓಡಾಡಿ ಜನಾ ಕೈಗಾಲು ಸರವುಗಟ್ಟಿ ಕುಂತೈತಿ. ಸೊಲಪ ತೀರ್ಥಾ ಮಂಜೂರಿ ಮಾಡಿಸಿಬಿಟ್ಟರ ಮಜಾ ಆದೀತ ಯಪ್ಪಾ" ಎಂದು ನೆನಪು ಮಾಡಿಕೊಟ್ಟ.

'ಅಪ್ಪನವರು ಇಲ್ಲದಾಗ ತೀರ್ತದ ನೆನಪು ತಗೂದಂದರೇನಲೆ ರುದ್ರ್ಯಾ? ಆಸ್ಯಾಡ(ಆಷಾಢ)ದಾಗ ಹೊಲ್ಯಾ ಸೀ ತೆನಿ ಬೇಡಿ ಅತ್ತನಂತ, ಕೇಳೀದಿಲ್ಲೋ?"(ರಾವ್‌ಬಹದ್ದೂರ್, ಗ್ರಾಮಾಯಣ, ಪುಟ, ೪೨೪) ಈ ಗಾದೆಯನ್ನು ಮೇಲ್ಜಾತಿ ವ್ಯಕ್ತಿ ಮಾಯಪ್ಪ ಕೆಳಜಾತಿ ವ್ಯಕ್ತಿ ರುದ್ರನಿಗೆ ಹೇಳುವ ಗಾದೆ. ಆಷಾಢಮಾಸದಲ್ಲಿ ಮಳೆ-ಬೆಳೆಯಿಲ್ಲದ ಕಾರಣ ಜನರ ಹತ್ತಿರ

ಕಾಳುಕಡಿ ಹಣ ಸಿಗುವುದು ಕಷ್ಟ. ಆದ್ದರಿಂದ ಒಂದು ಹೊತ್ತಿನ ಊಟಕ್ಕೆ ಆಸರೆ ಸಾಕು ಎಂಬ ಸ್ಥಿತಿ ಇರುವಂತಹ ಸಂದರ್ಭದಲ್ಲಿ ಹೊಲೆಯರವನು ಸಿಹಿ ತೆನಿ ಬಯಸಿದರೆ ಎಲ್ಲಿಂದ ದೊರಕೀತು ಎಂಬ ಅರ್ಥ ಸೂಚಿಸುತ್ತದೆ. ಮಳೆ-ಬೆಳೆಯಿಲ್ಲದಂತಹ ಪರಿಸ್ಥಿತಿಯಲ್ಲೂ ಸಿಹಿ ತೆನೆ ಬೇಡುತ್ತಾನಲ್ಲ; ಬೇಡಿದರೆ ದೊರೆತೀತೆ? ಹಾಗೆ ಹಠ ಹಿಡಿದು ಕೂತರೆ ವ್ಯರ್ಥ ಎಂದು ಈ ಗಾದೆ ಸೂಚಿಸುತ್ತದೆ. ಆದರೆ 'ಹೊಲ್ಯಾ'ಎಂದು ಕೆಳಜಾತಿ ವ್ಯಕ್ತಿಯನ್ನು ಹೆಸರಿಡಿದಿರುವುದಕ್ಕೆ ಕಾರಣವೇನು? ಆ ಸಂದರ್ಭದಲ್ಲಿ ಯಾವ ಸಮುದಾಯದ ವ್ಯಕ್ತಿ ಬೇಡಿದರೂ ಅದೇ ಅರ್ಥ ಬರುತ್ತದೆ. ಆದರೆ ಹೊಲೆಯ ಎಂದು ಹೆಸರಿಡಿದಿರುವುದರಿಂದ ಇಡೀ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಚಹರೆಗಳು ಕಂಡುಬರುತ್ತವೆ. ಕೆಳಜಾತಿಗೆ ಸೇರಿದ ವ್ಯಕ್ತಿಯಾಗಿರುವುದರಿಂದ ಅವರ ಹತ್ತಿರ ಭೂಮಿಯ ಒಡೆತನವಿಲ್ಲ. ಆರ್ಥಿಕ ಪ್ರಾಬಲ್ಯವಿಲ್ಲ. ಆದ್ದರಿಂದ ಭೂಮಾಲೀಕರ ಹತ್ತಿರ ಧಾನ್ಯಗಳನ್ನು ಬೇಡುವ ಪರಿಸ್ಥಿತಿಯಿದೆ ಎಂಬುದು ತಿಳಿಯುತ್ತದೆ. ಭೂಮಿಯ ಒಡೆತನವಿರುವ, ಆರ್ಥಿಕ ಪ್ರಾಬಲ್ಯವಿರುವ ಬೇರೆ ಯಾವ ಸದಮುದಾಯದವರಿಗೂ ಈ ರೀತಿಯಾಗಿ ಬೇಡುವ ಪರಿಸ್ಥಿತಿ ಬರುವುದಿಲ್ಲ. ಅವರಿಗೆ ಬೇಕಾದ ಧಾನ್ಯಸಂಪತ್ತನ್ನು ಶೇಖರಿಸಿರುತ್ತಾರೆ. ಆದ್ದರಿಂದ 'ಹೊಲೆಯ'ಎಂದು ಗಾದೆಯಲ್ಲಿ ಹೆಸರಿಸಿರಬಹುದು ಎಂದೆನಿಸುತ್ತದೆ.

ಗ್ರಾಮಾಯಣ ಕಾದಂಬರಿಯಲ್ಲಿ ಮಠಾಧೀಶರಾದ ಪಡದಯ್ಯನವರು ಇಲ್ಲದ ಸಂದರ್ಭದಲ್ಲಿ ಹೆಂಡವನ್ನು ಬಯಸಿದ್ದರಿಂದ ಮೇಲ್ಜಾತಿಯ ವ್ಯಕ್ತಿ ಮಾಯಪ್ಪ 'ಆಸ್ಯಾಡದಾಗ ಹೊಲ್ಯಾ ಸೀ ತೆನಿ ಬೇಡಿ ಅತ್ತನಂತ' ಎಂಬ ಗಾದೆಯನ್ನು ಬಳಸುತ್ತಾನೆ. ಈ ಗಾದೆ ಕೆಳಜಾತಿ ವ್ಯಕ್ತಿಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ತಿಳಿಸುತ್ತದೆ.

ಎಸ್.ಎಲ್. ಬೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಮೇಲ್ಜಾತಿ ಪುರುಷ ಕೆಳಜಾತಿ ಮಹಿಳೆಗೆ ಬಳಸಿರುವ ಗಾದೆಯ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು. "ಪ್ರತಿದಿನ ಒಂದೊಂದು ಜನಿವಾರವನ್ನು ಬದಲು ಮಾಡಲು ಸಾಧ್ಯವಿಲ್ಲ. ಜನಿವಾರಕ್ಕೆ ಮೈಲಿಗೆ ಯಾಗದ ಹಾಗೆ ಏನು ಮಾಡುವುದು? ದಿನಾ ಹೊಸ ಜನಿವಾರವನ್ನು ಹೊಂದಿಸುವುದಂತೂ ಸಾಧ್ಯವಿಲ್ಲ. ಯೋಚಿಸಿ ಯೋಚಿಸಿ ಯೋಚಿಸಿದ ನಂತರ ಒಂದು ಉಪಾಯ ಹೊಳೆಯಿತು; ಮನೇಲಿ ಹ್ಯಾಗೂ ರೇಶ್ಮೆಯ ಉತ್ತರೀಯ ಇದೆ. ಅದನ್ನ ಹೆಗಲಮೇಲೆ ಹಾಕಿಕೊಂಡು ಹೋಗೋದು. 'ರೇಶ್ಮಿಗೆ ಮುಟ್ಟಿಲ್ಲ, ಗಂಗೆಗೆ ಕಟ್ಟಿಲ್ಲ' ಅಂತ ಗಾದೆಯೇ ಇದೆ. ಅವಳನ್ನ ಮುಟ್ಟಿಸಿಕೊಳ್ಳುವಾಗ ಜನಿವಾರವನ್ನು ಸೊಂಟಕ್ಕೆ ಸುತ್ತುಹಾಕಿ ಅದರ ಮೇಲೆ ರೇಶ್ಮೆ ಚೌಕಬರೂಹಾಗೆ ಮಾಡಿದರೆ ಸರಿ. ಆ ಮೇಲೆ ಚೌಕಾನೂ ಒಗೆಯದಿದ್ದರೂ ಆಗುತ್ತೆ. ನಾನು ಹ್ಯಾಗೂ ಸ್ನಾನ ಮಾಡ್ತೀನಿ ಜೊತೆ ಜೊತೆಗೆ ಜನಿವಾರವನ್ನೂ ನೆನಸೂದು. ಅಲ್ಲಿಗೆ ಸಮಸ್ಯೆ ಬಗೆಹರಿಯಿತು"(ಭೈರಪ್ಪ. ಎಸ್.ಎಸ್, ದಾಟು, ಪುಟ-೧೧೫) ಎಂದು ಮೇಲ್ಜಾತಿ ವ್ಯಕ್ತಿ ವೆಂಕಟರಮಣಯ್ಯನವರು

ಕೆಳಜಾತಿ ಮಾತಂಗಿ ಜೊತೆ ತಮ್ಮ ದೇಹ ಸುಖವನ್ನು ಹಂಚಿಕೊಳ್ಳುವಾಗ ನೆನಪಿಸಿಕೊಳ್ಳುವಂತ ಗಾದೆ. ಕೆಳಜಾತಿ ವ್ಯಕ್ತಿಗಳನ್ನು ಮುಟ್ಟುವುದಿರಲಿ ಅವವರ ದರ್ಶನವಾದರೆ ಅವರ ನೆರಳುಬಿದ್ದರೆ ಮೈಲಿಗೆ ಆಗುತ್ತದೆ ಎಂಬ ಮನಸುಳ್ಳ ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ಮಹಿಳೆಯರನ್ನು ತಮ್ಮ ದೈಹಿಕ ಸುಖಕ್ಕೆ ಬಳಸಿಕೊಂಡಾಗ ಅಸ್ಪೃಶ್ಯತೆ ಕಾಡುವುದಿಲ್ಲ. ಅದಕ್ಕೆ ಬೇರೆ ರೀತಿಯಾದ ಪರಿಹಾರಗಳನ್ನು ಹುಡುಕುತ್ತಾರೆ. 'ರೇಶ್ಮೆಗೆ ಮುಟ್ಟಿಲ್ಲ, ಗಂಗೆಗೆ ಕಟ್ಟಿಲ್ಲ' ಎಂಬ ಗಾದೆಯನ್ನು ತಮಗೆ ಅನುಕೂಲವಾಗುವಂತೆ ಬಳಸಿಕೊಳ್ಳುತ್ತಾರೆ. ಈ ಗಾದೆಯನ್ನು ಯಾರು ಯಾವ ಸಂದರ್ಭಕ್ಕೆ ಬಳಸಿದ್ದಾರೋ ತಿಳಿದಿಲ್ಲ. ಆದರೆ ಈ ಕಾದಂಬರಿಯಲ್ಲಿ ವೆಂಕಟರಮಣಯ್ಯನವರು ಮಾತ್ರ ತಮಗೆ ಆದ ಮೈಲಿಗೆಗೆ ಈ ಗಾದೆಯನ್ನು ಬಳಸಿಕೊಂಡಿದ್ದಾರೆ. ಕೆಳಜಾತಿ ಹೆಣ್ಣನ್ನು ಮುಟ್ಟಿದ್ದರಿಂದ ಪೂಜೆ ಮಾಡುವ ಸಂದರ್ಭದಲ್ಲಿ ವೆಂಕಟರಮಣಯ್ಯ ಅವರಿಗೆ ಭಯವಾಗುತ್ತೆ. ಆಗ ತಮಗೆ ತಾವೇ ಈ ಮಾತನ್ನು ನೆನಪಿಸಿಕೊಂಡು ತಮಗೆ ತಾವೆ ಸಮಾಧಾನ ಮಾಡಿಕೊಳ್ಳುವ ಸಂದರ್ಭ ಈ ರೀತಿಯಾಗಿದೆ. ಉದಾಹರಣೆಗೆ: "ಸ್ನಾನ ಮಾಡಿ ಶುದ್ಧಚಯನ ಮಾಡಿದ ಮೇಲೆ ಎಂತಹ ಮೈಲಿಗೆ ಉಳಿಯುತ್ತೆ? ಆಕಸ್ಮಾತ್ ನಾಯಿಮುಟ್ಟಿದರೆ ಏನು ಮಾಡುತ್ತೀವಿ ಸ್ನಾನ ಮಾಡಿ ಆಚಮನ, ಮಾತಂಗಿ ಮುಟ್ಟಿದರೂ ಅಷ್ಟೆ. ಇಷ್ಟಕ್ಕೂ ಜನಿವಾರ ಸ್ಪರ್ಶವಾಗದ ಹಾಗೆ ಇರ್ತಿನಿ. ಹೆದ್ರಕೊಳ್ಳೋ ಕಾರಣ ಏನಿದೆ?" (ಭೈರಪ್ಪ. ಎಸ್.ಎಲ್, ದಾಟು, ಪುಟ-೧೧೬) ಎಂದು ವೆಂಕಟರಮಣಯ್ಯನವರು ತಮಗೆ ತಾವೆ ಸಮಾಧಾನ ಮಾಡಿಕೊಳ್ಳುತ್ತಾರೆ. ಅಸ್ಪೃಶ್ಯತೆ, ಮೈಲಿಗೆಯ ಹಿನ್ನೆಲೆಗೆ ಈ ಗಾದೆಯನ್ನು ಬಳಕೆ ಮಾಡಿದ್ದಾರೆ. ಮೇಲ್ಜಾತಿಯವರ ಆಲೋಚನಾಕ್ರಮ, ಮನೋಧೋರಣೆ ಮತ್ತು ಕೆಳಜಾತಿಯವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಈ ಗಾದೆಯ ಮೂಲಕ ಕಂಡುಬರುತ್ತವೆ.

ದೊರೆ-ಭಗವಾನ್ ಅವರ ನಿರ್ದೇಶನದ 'ಮುನಿಯನ ಮಾದರಿ' ಚಲನಚಿತ್ರದಲ್ಲಿ ಮೇಲ್ಜಾತಿಯ ವ್ಯಕ್ತಿ ಮರುಳಪ್ಪ ಕೆಳಜಾತಿ ಮುನಿಯನನ್ನು ಕುರಿತು ಹೇಳುವ ಗಾದೆಯ ಸಂದರ್ಭವನ್ನು ಉದಾಹರಣೆಯೊಂದಿಗೆ ನೋಡಬಹುದು. 'ಬೇಲಿಗೆ ಬೆಲ ಭಿತ್ತಿದ್ರೆ ಕಾಲಿಗೆ ಮೂಲ ಅಂತ ಅವಾಗ ಗೊತ್ತಿರ್ಲಿಲ್ಲ ಅಪ್ಪ' (ಚಲನಚಿತ್ರ: ಮುನಿಯನ ಮಾದರಿ) ಎಂದು ಮೇಲ್ಜಾತಿಯ ವ್ಯಕ್ತಿ ಮರುಳಪ್ಪ ತನ್ನ ತಂದೆ ಹತ್ತಿರ ಕೆಳಜಾತಿ ಮುನಿಯನನ್ನು ಉದ್ದೇಶಿಸಿ ಹೇಳುತ್ತಾನೆ. ಯಾಕೆಂದರೆ ಮರುಳಪ್ಪ ಮುನಿಯನಿಗೆ ಜೀತ ಪದ್ಧತಿ ನಾಶ, ಸಮಾನತೆ, ಮಾನವಹಕ್ಕುಗಳು, ಸ್ವತಂತ್ರ ಬದುಕು ಎಂಬ ಆಲೋಚನೆಗಳನ್ನು ಅವನ ತಲೆಯಲ್ಲಿ ಬಿತ್ತುತ್ತಾನೆ. ಈ ಮಾತಿನ ಪ್ರಭಾವದಿಂದ ಮುನಿಯ ಸ್ವತಂತ್ರವಾಗಿ, ಜೀತಬಿಟ್ಟು, ಹೊಲಬಿಡಿಸಿಕೊಂಡು ಸ್ವತಂತ್ರವಾಗಿ ಬದುಕುವುದಲ್ಲದೇ ಇದೇ ರೀತಿಯ ಬದುಕನ್ನು ಊರಿನವರಿಗೆಲ್ಲ ಕಲಿಸುತ್ತಾನೆ. ಊರಿನ ಬಡ ಜನರೆಲ್ಲರೂ ಸ್ವತಂತ್ರವಾಗಿ ಬದುಕುತ್ತಾರೆ. ಆಗ ಗೌಡನ ಹೊಲದಲ್ಲಿ ಕೆಲಸ ಮಾಡಲು

ಆಳುಗಳು ಯಾರೂ ಹೋಗುವುದಿಲ್ಲ. ಆಗ ಗೌಡನ ಆದಾಯ ಕಡಿಮೆಯಾಗುತ್ತದೆ. ಬಡಜನರಿಂದಲೇ ವ್ಯವಸ್ಥಿತವಾಗಿ ಸಾಗುತ್ತಿದ್ದ ಅವನ ಜೀವನ ಅಸ್ತವ್ಯಸ್ಥವಾಗುತ್ತದೆ. ಈ ಸ್ಥಿತಿಯನ್ನು ಗೌಡ ತನ್ನ ಮಗ ಮರುಳಪ್ಪನಿಗೆ ಹೇಳಿದಾಗ 'ಬೇಲಿಗೆ ಬೆಲ ಬಿತ್ತಿದ್ರೆ ಕಾಲಿಗೆ ಮೂಲ ಅಂತ ಗೊತ್ತಿರ್ಲಿಲ್ಲ' ಎನ್ನುವ ಗಾದೆ ಮಾತನ್ನು ಹೇಳುತ್ತಾನೆ. ಅಂದರೆ ದಲಿತರು, ಬಡವರು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದದೆ ಯತಾಸ್ಥಿತಿಯಲ್ಲಿಯೇ ಇರಬೇಕು. ಇಲ್ಲ ಅಂದರೆ ಜಮೀನ್ದಾರರು, ಭೂ ಮಾಲೀಕರು ಬದುಕುವುದಕ್ಕೆ ಸಾಧ್ಯವಿಲ್ಲ. ಕೆಳಜಾತಿಯವರಿಗೆ, ಬಡವರಿಗೆ ವ್ಯವಸಾಯ ಮಾಡುವುದಕ್ಕೆ ಭೂಮಿಯನ್ನು ಕೊಟ್ಟರೆ ಜಮೀನ್ದಾರರ ಹೊಲ-ಗದ್ದೆಗಳಲ್ಲಿ ಕೆಲಸ ಮಾಡಲು ಯಾರು ಬರುವುದಿಲ್ಲ. ಆಗ ಭೂ ಮಾಲೀಕರಿಗೆ ಅಸ್ತಿತ್ವ ಇರುವುದಿಲ್ಲ ಎಂಬ ಉಳಿಗಮಾನ್ಯ ಪದ್ಧತಿಯ ಆಲೋಚನಾಕ್ರಮ ಈ ಗಾದೆಯ ಅಭಿವ್ಯಕ್ತಿಯಾಗಿದೆ ಎನಿಸುತ್ತದೆ.

ಚೋಮನದುಡಿ ಚಲನಚಿತ್ರದಲ್ಲೂ ಸಹ ಚೋಮನಿಗೆ ಸಂಕಪ್ಪಯ್ಯ ಭೂಮಿ ಕೊಡದೆ ಇರುವುದಕ್ಕೆ ಮೂಲ ಕಾರಣ ದಲಿತರಿಗೆ ಭೂಮಿ ಕೊಟ್ಟರೆ ಭೂ ಮಾಲೀಕರ ಅಸ್ತಿತ್ವ ಕಳೆದುಹೋಗುತ್ತದೆ. ಎಂಬುದು ದಲಿತರು ಆರ್ಥಿಕವಾಗಿ ಪ್ರಾಬಲ್ಯಹೊಂದಿದರೆ ಜಮೀನ್ದಾರರ ಹೊಲ ಗದ್ದೆಗಳಲ್ಲಿ ಕೆಲಸಮಾಡುವವರು ಯಾರು? ಎಂಬ ಪ್ರಶ್ನೆ ಇರುವುದರಿಂದಲೇ ಉಳಿಗಮಾನ್ಯ ಪದ್ಧತಿ ಆಲೋಚನಾ ಕ್ರಮ ಇಲ್ಲಿ ಕೆಲಸ ಮಾಡುತ್ತದೆ.

ಬಡವ ನೀ ಮಡಗಿದಂಗೆ ಇರು, ಹಾಸಿಗೆ ಇದ್ದಷ್ಟು ಕಾಲು ಚಾಚು, ಬಡವನ ಕೋಪ ದವಡೆಗೆ ಮೂಲ ಎಂಬಂತಹ ಗಾದೆಗಳು ಸಹ ಬಡವರ ಮತ್ತು ಕೆಳಜಾತಿಯವರ ಬದುಕನ್ನು ಯತಾಸ್ಥಿತಿಯಲ್ಲಿ ಕಾಪಾಡಿಕೊಂಡಿರಲು ರೂಪಿಸಿರುವಂತ ಗಾದೆಗಳೆನಿಸುತ್ತವೆ. ಈ ಗಾದೆಗಳನ್ನು ಮೇಲ್ಜಾತಿಯವರಾಗಲೀ, ಶ್ರೀಮಂತರಾಗಲೀ ಅಥವಾ ಕೆಳಜಾತಿಯರಾಗಲೀ, ಬಡವರು ಯಾರೇ ಬಳಕೆ ಮಾಡಿದರು ಸಹ ಅದರ ಮೂಲ ಆಶಯ ಬದಲಾಗುವುದಿಲ್ಲ. ಕೆಳಜಾತಿಯವರು, ಬಡವರು ಬಳಕೆ ಮಾಡಿದರೂ ಸಹ ಅವರಿಗೆ ಬದುಕಿನಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಬಿಕ್ಕಟ್ಟುಗಳನ್ನು ಸೃಷ್ಟಿ ಮಾಡಿ ಆ ರೀತಿ ಆಲೋಚನೆ ಮಾಡುವಂತಹ ಪರಿಸ್ಥಿತಿಯನ್ನು ವ್ಯವಸ್ಥೆ ಸೃಷ್ಟಿ ಮಾಡಿರುತ್ತದೆ.

ಮುನಿಯನ ಮಾದರಿ ಚಲನಚಿತ್ರದಲ್ಲಿ 'ಬೇಲಿಗೆ ಬೆಲ ಬಿತ್ತಿದ್ರೆ ಕಾಲಿಗೆ ಮೂಲ' ಎಂಬ ಗಾದೆ ಉಳಿಗಮಾನ್ಯ ಪದ್ಧತಿಯ ಆಲೋಚನಾ ಕ್ರಮದ ಆಶಯವನ್ನು ಹೊಂದಿರುವ ಗಾದೆಯಾಗಿದೆ. ಈ ಗಾದೆಯ ಮೂಲಕ ಕೆಳಜಾತಿ, ಬಡವರ ಸಾಮಾಜಿಕ ಸ್ತರವಿನ್ಯಾಸ ಕಂಡುಬರುತ್ತದೆ.

ರೆಡ್ಡಿ ಹೆಚ್.ಎನ್, ನಿರ್ದೇಶನದ 'ಕಾವೇರಿ' ಚಲನಚಿತ್ರದಲ್ಲಿ ಮೇಲ್ಜಾತಿ ಮಹಿಳೆ ಕೆಳಜಾತಿ ಮಹಿಳೆಗೆ ಬಳಸುವ ಗಾದೆಯ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು.

"ಮೇಲ್ಜಾತಿ ಮಹಿಳೆ ೧.: 'ಏನೆಲೇ ಕಾವೇರಿ ಹ್ಯಾಗಿದೆ ನಿನ್ ಮೈಗೆ ನಾವು ಇಲ್ಲಿ ನೀರು ತುಂಬ್ತಾ ಇದ್ರೆ, ಎಂಜಲು ಮಾಡ್ತೀಯ ಎಂಜಲು.

ಮೇಲ್ಜಾತಿ ಮಹಿಳೆ ೨.: 'ಎಷ್ಟೆ ಕೊಬ್ಬು ನಿನ್ಗೆ ಎಲ್ಲಿರಬೇಕೋ ಅಲ್ಲಿರದು ಬಿಟ್ಟು ಅದೇನೋ ನಡುಮನೆಗೆ ಬಂದಂತಾಯ್ತು'

ಮೇಲ್ಜಾತಿ ಮಹಿಳೆ ೩.: "ಅಂಬುಜಮ್ಮನವರೆ ಇವರನ್ನೆಲ್ಲ ಊರಲಲ್ಲ ಕಾಡ್ನಲ್ಲಿಟ್ರು ಪಾಪಬರಲ್ಲ" (ಚಲನಚಿತ್ರ: ಕಾವೇರಿ). ಎಂದು ಮೇಲ್ಜಾತಿ ಮಹಿಳೆ ಕೆಳಜಾತಿ ಮಹಿಳೆಯನ್ನು ಉದ್ದೇಶಿಸಿ ಹೇಳುತ್ತಾಳೆ. ಮೇಲ್ಜಾತಿಯ ಮಹಿಳೆಯರು ನದಿಯಲ್ಲಿ ಕೆಲವರು ಸ್ನಾನಮಾಡುತ್ತಿದ್ದರೆ ಕೆಲವರು ಬಟ್ಟೆ ಒಗೆಯುತ್ತಿದ್ದಾರೆ ಮತ್ತು ಕೆಲವರು ಬಿಂದಿಗೆಗೆ ನೀರು ತುಂಬುತ್ತಿದ್ದಾರೆ. ಆಗ ಕೆಳಜಾತಿಯ ಮಹಿಳೆ ಕಾವೇರಿ ನದಿಯ ನೀರನ್ನು ಕುಡಿಯುವ ಸಂದರ್ಭದಲ್ಲಿ ಮೇಲ್ಜಾತಿ ಮಹಿಳೆಯರು ಕಾವೇರಿಗೆ ನಾವು ನೀರು ತುಂಬ್ತಾ ಇದ್ರೆ ಎಂಜಲು ಮಾಡ್ತೀಯಾ. ಏನು ಕೊಬ್ಬು ನಿನ್ಗೆ. ಎಲ್ಲಿರ್ಬೇಕೋ ಅಲ್ಲಿರೋದು ಬಿಟ್ಟು ಅದೇನೋ ನಡುಮನೆಗೆ ಬಂದಾಂತಾಯ್ತು' ಎಂದು ಬೈಯುತ್ತಾ ಈ ಗಾದೆಯನ್ನು ಬಳಸುತ್ತಾರೆ.

ಎಲ್ಲಿರಬೇಕೋ ಅಲ್ಲಿರೋದು ಬಿಟ್ಟು ಅದೇನೋ ನಡುಮನೆಗೆ ಬಂದಂಥಾಯ್ತು ಅಂದರೆ ಸಾಮಾನ್ಯವಾಗಿ ಚಪ್ಪಲಿಗಳನ್ನು ಹೊರಗೆ ಅಥವಾ ಮೂಲೆಯಲ್ಲಿ ಬಿಡುತ್ತಾರೆ. ಹಾಗೆಯೇ ಕೆಳಜಾತಿಯವರಿಗೆ ಕೂಡ ಮೇಲ್ಜಾತಿಯವರು ಮನೆಯ ಒಳಗೆ ಪ್ರವೇಶ ಕೊಡುವುದಿಲ್ಲ. ಮೇಲ್ಜಾತಿಯವರನ್ನು ಮುಟ್ಟುವಂತಿಲ್ಲ. ಕೆರೆ, ಬಾವಿ, ನದಿಯಲ್ಲಿ ನೀರು ಮುಟ್ಟುವಂತಿಲ್ಲ ಎಂಬ ನಿಷೇಧಗಳನ್ನು ಕೆಳಜಾತಿಯವರ ಮೇಲೆ ಹೇರಲಾಗಿದೆ. ಆದ್ದರಿಂದ ಕಾವೇರಿ ನದಿಯ ನೀರನ್ನು ಮುಟ್ಟಿದ್ದರಿಂದ ಮೇಲ್ಜಾತಿ ಮಹಿಳೆಯರಿಗೆ ಸಹಿಸಲು ಸಾಧ್ಯವಾಗುವುದಿಲ್ಲ. ಆಗ ಈ ಗಾದೆಯನ್ನು ಬಳಸುತ್ತಾರೆ. ಅಸ್ಪೃಶ್ಯತೆ, ಮೈಲಿಗೆ ಎಂಬ ಪುರೋಹಿತಶಾಹಿ ಮನೋಧೋರಣೆಯಿಂದ ಈ ಗಾದೆಯನ್ನು ಬಳಸಲಾಗಿದೆ. ಇಲ್ಲಿ ಮೇಲ್ಜಾತಿ ಪಾತ್ರಗಳ ಮನೋಧೋರಣೆ ಮತ್ತು ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆ ಕಂಡುಬರುತ್ತದೆ.

ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ವ್ಯಕ್ತಿಗಳಿಗೆ ಬಳಸಿರುವ ಗಾದೆಗಳಲ್ಲಿ ಜಾತಿ, ಸಾಮಾಜಿಕತೆ, ವರ್ಗ, ಅಸ್ಪೃಶ್ಯತೆ, ಆರ್ಥಿಕ ಅಂಶಗಳು ಕಂಡುಬರುತ್ತವೆ. ಪುರೋಹಿತಶಾಹಿ ಮನೋಧೋರಣೆ, ಉಳಿಗಮಾನ್ಯ ಪದ್ಧತಿಯ ಆಲೋಚನೆ ಗಾದೆಗಳಲ್ಲಿ ಅಭಿವ್ಯಕ್ತಗೊಂಡಿರುವುದು ಕಂಡುಬರುತ್ತದೆ. ಗಾದೆಗಳನ್ನು ಬಳಸುವುವವರು ಅವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ಆಲೋಚನೆಗಳು ಅವರ ಮನಸ್ಸಿನಲ್ಲಿ ಅಡಕಗೊಂಡಿರುತ್ತವೆ. ಈ ಹಿನ್ನೆಲೆಯಿಂದ ಗಾದೆಗಳನ್ನು ಬಳಸುತ್ತಾರೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಿನ್ನೆಲೆಗಳನ್ನು ಕಂಡುಕೊಳ್ಳಲಾಗಿದೆ.

೫.೨.೨. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಸಮಾಜದಲ್ಲಿ ಸಮುದಾಯಗಳಿಗೊಂದೊಂದು ಗಾದೆಗಳು ಸೃಷ್ಟಿಯಾಗಿವೆ. ವೃತ್ತಿ, ಆಚರಣೆ, ಪದ್ಧತಿ, ಸಂಸ್ಕೃತಿಗನುಗುಣವಾಗಿ ಸಮುದಾಯಕ್ಕೆ ಒಂದೊಂದು ಗಾದೆಗಳು ಹುಟ್ಟಿಕೊಂಡಿವೆ. ಉದಾಹರಣೆಗೆ ಅಕ್ಕಸಾಲಿಗರು ಸ್ವತಃ ಅಕ್ಕನ ಬಂಗಾರವನ್ನೇ ಕರಿತಾನಂತೆ ಶೆಟ್ಟರ ಬುದ್ಧಿ ಸುಟ್ರು ಹೋಗಲ್ಲ, ಗೊಲ್ಲ ಗೆಳೆಯನಲ್ಲ, ತುರುಕ ದಾಸನಲ್ಲ, ಮಾದಿಗ ಮಾಡಿದ್ದು ಹೆಂಡಕ್ಕೆ ಒಕ್ಕಲಿಗ ಮಾಡಿದ್ದು ದಂಡಕ್ಕೆ, ಹಾರವರು ಹೆಚ್ಚಿದ್ರೆ ಊರುಹಾಳು, ಏಡಿ ಹೆಚ್ಚಿದ್ರೆ ಕೆರೆಹಾಳು, ದನಾ ತಿನ್ನೋನಿಗೆ ಗೊಬ್ಬರದ ಆಣೆ. ಹೀಗೆ ಸಮುದಾಯಕ್ಕೆ ಅನುಗುಣವಾಗಿ ಗಾದೆಗಳು ಹುಟ್ಟಿಕೊಂಡಿವೆ ಎಂದು ಹೇಳಬಹುದು. ಯಾಕೆ ಈ ರೀತಿಯ ಗಾದೆಗಳು ಸೃಷ್ಟಿಯಾಗಿವೆ ಎಂದರೆ ಒಂದು ಗಾದೆಯ ಮೂಲಕ ಆ ಸಮುದಾಯದ ಸಾಮಾಜಿಕತೆ, ಸಂಸ್ಕೃತಿ, ವೃತ್ತಿ ವ್ಯಕ್ತಿಗುಣಗಳನ್ನು ತಿಳಿಯಬಹುದಾಗಿದೆ. ಕೆಲವು ಸಂದರ್ಭದಲ್ಲಿ ಆ ಸಮುದಾಯದ ವ್ಯಕ್ತಿಗಳ ಮೇಲಿನ ದ್ವೇಷದ ಕಾರಣಕ್ಕಾಗಿಯೂ ಗಾದೆಗಳು ರೂಪುಗೊಂಡಿರುತ್ತವೆ. ಮೇಲ್ಜಾತಿಯವರು ಕೆಳಜಾತಿಯವರಿಗೆ ಹೇಗೆ ಸಮುದಾಯ ಕೇಂದ್ರಿತ ಗಾದೆಗಳನ್ನು ಬಳಸಿದ್ದಾರೆಯೋ ಹಾಗೆ ಕೆಳಜಾತಿಯವರು ಕೂಡ ಸಮುದಾಯ ಕೇಂದ್ರಿತ ಗಾದೆಗಳನ್ನು ಬಳಸಿದ್ದಾರೆ.

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳಲ್ಲಿ ಅಭಿವ್ಯಕ್ತಗೊಂಡಿರುವ ಅಂಶಗಳು ಯಾವುವು? ಸಂದರ್ಭ ಯಾವುದು ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಬಹುದು.

ರಾವಬಹದ್ದೂರ ಅವರ 'ಗ್ರಾಮಾಯಣ' ಕಾದಂಬರಿಯಲ್ಲಿ ಕೆಳಜಾತಿ ಪಾತ್ರ ಮೇಲ್ಜಾತಿ ಪಾತ್ರಕ್ಕೆ ಬಳಸಿರುವ ಗಾದೆಯ ಸಂದರ್ಭ ಈ ರೀತಿಯಾಗಿದೆ.

"ಯಪ್ಪಾ, ಬಡವರ ನಶೀಬನ ಕೆಟ್ಟದರೀ ಯಪ್ಪಾ; ಕರೇ ಹೇಳಿದರೂ ಕೇಳತೀರಿ, ಸುಳ್ಳು ಹೇಳಿದರೂ ಕೇಳತೀರಿ; ಯಪ್ಪಾ ನೀವು ಕೊಟ್ಟ ಜ್ವಾಳಾ ಗಾಳ್ಯಾಗ ಬಂತು ಧೂಳ್ಯಾಗ ಹೋತು, ಹಾಗ ಆತರಿ" ಎಂದು ಕಣ್ಣೀರೊರಸಿಕೊಂಡ ಚನ್ನ". (ರಾವಬಹದ್ದೂರ, ಗ್ರಾಮಾಯಣ, ಪುಟ, ೧೦೦). ಕೆಳಜಾತಿ ವ್ಯಕ್ತಿ ಮೇಲ್ಜಾತಿ ವ್ಯಕ್ತಿಯ ಜೊತೆ ಮಾತನಾಡುವಾಗ ಅವನಿಗಾದ ನಷ್ಟವನ್ನು ಗಾದೆಯ ಮೂಲಕ ವಿವರಿಸಿದನು. ಏಕೆ ಈ ಗಾದೆಯನ್ನು ಬಳಸಿದನೆಂದರೆ ಗೌಡ ಕೊಟ್ಟ ಜ್ವಾಳವನ್ನು ಪಡೆದಯ್ಯನವರು ಕಸಿದುಕೊಂಡಿದ್ದರಿಂದ ಈ ಗಾದೆಯನ್ನು ಬಳಸಿದ್ದಾನೆ. ಕೆಳಜಾತಿ ವ್ಯಕ್ತಿ ಮೇಲ್ಜಾತಿ ವ್ಯಕ್ತಿಗೆ ಬಳಸಿದ್ದರು ಇದು ಕೆಳಜಾತಿ ಪಾತ್ರದ ಸಾಮಾಜಿಕತೆಯನ್ನು ಸೂಚಿಸುವ ಗಾದೆಯಾಗಿದೆ.

ವೈಶಾಖ ಕಾದಂಬರಿಯಲ್ಲಿ ಕೆಳಜಾತಿ ಪಾತ್ರ ಮೇಲ್ಜಾತಿ ಪಾತ್ರವನ್ನು ಕುರಿತು ಹೇಳುವ ಗಾದೆ ಈ ರೀತಿಯಾಗಿದೆ. "ಅವರೆಸರ್ನಲ್ಲಿ ನಂಜೇಗೌಡ್ರು ನಡೆಸ್ತಿರೋ ಕರಾಮತ್ತು ಇದು. ಪಾಪ

ಈ ಪರಿಪಾಟ್ಲ ಒಂದೂ ತಿಳೀದ ಆ ಅಯ್ಯನೋರ್ಗೆ ಸುಮ್ಮಸುಮ್ಕೆ ಅಪಾದ, ಕೆಟ್ಟೆಸರು..." ಕುಡಿದ ಗ್ಯಾನದಲ್ಲಿ ಈಟೆಲ್ಲ ಇವರಿಸಿ ಬೈಲಿಗ ರಂಗ ಮಾರಿ ಗುಡಿದಿಕ್ಕೆ ವೊಳ್ಳಿದ. ಅಂಗೆ ವೊಳ್ವಾಗ ಲಾಟೀನ ಈ ಕಯ್ಯಿಂದ ಈ ಕಯ್ಯಿಗೆ ಬದ್ಲಾಯಿಸ್ದ. ಆಗ ಅವ್ನ ಕಂಕುಳಲ್ಲಿ ಇರುಕಿಸಿದ್ದ ಬಾಟ್ಲಿಗಳ ಇನ್ನೊಂದು ಹೊದೆ ಲಕ್ಕನ ಕಣ್ಣಿಗೂ ಬಿತ್ತು...." ಈ ನಮ್ಮ ಊರಾಗೆ ಯಾರ್ದ್ರೋ ಹೆಸರು, ಇನ್ಯಾರ್ದ್ರೋ ಬೊಸರು" ಇಸ್ಮಯಪಡ್ತ, ಆ ಮಾಲ ಗುಟ್ಟಾಗಿ ಕ್ವಂಡೋಗಿ ಗೌಡ್ರಿಗೆ ತಲುಪಿದ್ದ ಲಕ್ಕ" (ಚದುರಂಗ, ವೈಶಾಖ, ಪುಟ, ೧೬). ಕೆಳಜಾತಿ ಲಕ್ಕ ಮೇಲ್ಜಾತಿ ವ್ಯಕ್ತಿ ನಂಜೇಗೌಡ ಮಾಡುವ ಕೆಲಸವನ್ನು ನೋಡಿ ಹೇಳುವ ಗಾದೆಯಾಗಿದೆ. ನಂಜೇಗೌಡ ಮಠದ ಅಯ್ಯನವರಿಗೆ ಸರಾಯಿ ಬೇಕು ಎಂದು ಹೇಳಿ ಬಾಟ್ಲಿಗಳನ್ನು ತರಿಸುತ್ತಿರುತ್ತಾನೆ. ಅದನ್ನು ಇವನೆ ಬಳಸಿಕೊಳ್ಳುತ್ತಿರುತ್ತಾನೆ. ಇದನ್ನು ಲಕ್ಕ ಈ ರೀತಿಯಾಗಿ ಬಳಸುತ್ತಾನೆ. ಮೇಲ್ಜಾತಿ ವ್ಯಕ್ತಿಯ ಗುಣಕ್ಕೆ ಬಳಸಿರುವ ಗಾದೆಯಾಗಿದೆ.

ಚದುರಂಗ 'ವೈಶಾಖ' ಕಾದಂಬರಿಯಲ್ಲಿಯೇ ಕೆಳಜಾತಿ ಮಹಿಳೆ ಮೇಲ್ಜಾತಿ ವ್ಯಕ್ತಿಯನ್ನು ಉದ್ದೇಶಿಸಿ ಹೇಳುವ ಗಾದೆ "ಸಿವಪೂಜೇಲಿ ಕರಡಿ ಬುಟ್ಟಂಗೆ ಈ ವಯ್ಯ ಯಾತಾವ್ನಿಂದ ಬಂದ?" (ಚದುರಂಗ, ವೈಶಾಖ, ಪುಟ, ೧೩೪)ಎಂದು ಬೇಸರ ವ್ಯಕ್ತಪಡಿಸುತ್ತಾಳೆ. ಕೆಳಜಾತಿ ಮಹಿಳೆಯಾದ ಸಿವುನಿ ಪಟ್ಟಣಕ್ಕೆ ಹೋಗಿ ಸೀರೆ ತೆಗೆದುಕೊಳ್ಳುತ್ತಾಳೆ ಆಗ ಕೇಶವಯ್ಯ ಅವರು ನೀನು ಒಂದು ಸೀರೆ ತಗೋ ಎಂದು ಕಣ್ಣಿನಲ್ಲೆ ನಗುತ್ತ ಹೇಳಿದಾಗ ಸಿವಪೂಜೇಲಿ ಕರಡಿ ಬುಟ್ಟಂಗೆ ಬಂದ ಎಂದು ಬೈಯ್ದುಕೊಳ್ಳುತ್ತಾಳೆ. ತಾವು ಸೀರೆ ವ್ಯಾಪಾರ ಮಡುವ ಸಂದರ್ಭದಲ್ಲಿ ಬಂದು ಅಡ್ಡಬಾಯಿ ಹಾಕಿದ್ದಕ್ಕೆ ಸಿವುನಿ ಗಾದೆಯ ಮೂಲಕ ಬೈಯ್ದುಕೊಳ್ಳುತ್ತಾಳೆ.

ವೈಶಾಖ ಕಾದಂಬರಿಯಲ್ಲಿ ಕೆಳಜಾತಿಪಾತ್ರ ಮೇಲ್ಜಾತಿ ಪಾತ್ರವನ್ನು ಕುರಿತು ಬಳಸಿದ ಗಾದೆ "ಮತ್ತೆ ಆ ಪಾಟಿ ಗ್ಯಾನಗೆಟ್ಟು ಆಟ ಆಡಿದರೆ ಯಾರ ಪುರಸತ್ವ ತಾನೆ ಅದೇಟು ಜಿನ ಉಳುದಾತು? ಮೊದ್ಲೆ ಯೋಳಕ್ಕಿಲ್ವಾ ಗಾದ್ಯ-ಅನ್ನ ಅದೆ ಅಂತ ಉಂಡೋನು ಕೆಟ್ಟ, ಎಣ್ಣು ಅವಳ ಅಂತ ವೋದೋನು ಕೆಟ್ಟ" (ಅದೇ ಪುಟ-೧೭೯) ಎಂದು ಲಕ್ಕನ ತಂದೆ ಕೆಂಗಣ್ಣಪ್ಪಗೌಡನ ಲೈಂಗಿಕ ಚಪಲ ಕುರಿತು ಈ ಗಾದೆಯನ್ನು ಬಳಸುತ್ತಾನೆ. ಕೆಂಗಣಪ್ಪ ಕಂಡ ಕಂಡವರ ಹತ್ತಿರ ತನ್ನ ಚಪಲವನ್ನು ತೋರಿಸುತ್ತಿದ್ದರಿಂದ ಲಕ್ಕನ ತಂದೆ ತನ್ನ ಮನಸ್ಸಿನಲ್ಲಿರುವದನ್ನು ಗಾದೆಯ ಮೂಲಕ ಅಭಿವ್ಯಕ್ತಿಸುತ್ತಾನೆ. ಇಲ್ಲಿ ಮೇಲ್ಜಾತಿ ವ್ಯಕ್ತಿಯ ಗುಣ ಕುರಿತು ಹೇಳುತ್ತಾನೆ. ಈ ರೀತಿಯ ಗುಣವನ್ನು ಹೊಂದಿದ ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುವ ಗಾದೆ ಇದಾಗಿದೆ.

ಲಂಕೇಶ್ ಅವರ 'ಸಂಕ್ರಾಂತಿ' ನಾಟಕದಲ್ಲಿ ಸಮುದಾಯ ಸೂಚಕ ಗಾದೆಯನ್ನು ಕೆಳಜಾತಿ ಪಾತ್ರ ಮೇಲ್ಜಾತಿ ಪಾತ್ರಕ್ಕೆ ಬಳಸುವ ಸಂದರ್ಭವನ್ನು ನೋಡಬಹುದು.

“ಉಜ್ಜ: ಏನವ್ವ, ಏನು ಸಮಚಾರ? ನೀರು ತರ್ತ ಅಡುಗೆ ಮಾಡ್ತಾ, ಜಗಳ ಕಾಯ್ತ ಹೀಗೆ ಇದ್ದು ಬಿಡ್ತಿರೋ, ಏನಾರ ಮದುವಿ ಗಿದುವಿ?

ಉಮಾ: ಮುದಿಯಾ, ನಿನ್ನ ದಾರಿ ನೀನು ನೋಡಿಕೋ,

ರಮಾ: ನಮ್ಮ ಮದುವೆ ತಂಟೆ ಯಾಕೆ ಇವನಿಗೆ?

ಸುಮಾ: ಉಷಾ?

ಉಜ್ಜ: ಅದೇನವ್ವ ನಾನಂತಿರೋದು, ಅದೇನೋ ಅಂತಾರಲ್ಲ, ಹೊಲೇರ ಕೈಗೆ ಮೈ ಕೊಡಬ್ಯಾಡ, ಬ್ರಾಂಬ್ರ ಕೈಗೆ ಮನಸ್ ಕೊಡಬ್ಯಾಡ ಅಂತ” (ಶ್ರೀನಿವಾಸರಾಜು. ಬಿ, ದಾಮೋದರಶೆಟ್ಟಿ (ಸಂ), ಸುವರ್ಣ ನಾಟಕ, ಭಾಗ–೧, ಪುಟ, ೭೯೨) ಕೆಳಜಾತಿ ವ್ಯಕ್ತಿ ಮೇಲ್ಜಾತಿ ವ್ಯಕ್ತಿಗಳಿಗೆ ಬಳಸುವ ಗಾದೆಯಲ್ಲಿ ಎರಡು ಸಮುದಾಯಗಳನ್ನು ಹೆಸರಿಸಲಾಗಿದೆ. ‘ಹೊಲೇರಿಗೆ ಮೈ ಕೊಡಬಾರದು ಬ್ರಾಹ್ಮಣರಿಗೆ ಮನಸ್ಸು ಕೊಡಬಾರದು’ ಎಂದು ಹೇಳುತ್ತಿರುವುದಕ್ಕೆ ಕಾರಣ ತನ್ನ ಮಗ ಮತ್ತು ಬ್ರಾಹ್ಮಣ ಸಮುದಾಯದ ಉಷಾ ಇಬ್ಬರು ಸಹ ಪ್ರೀತಿ ಮಾಡುತ್ತಿರುವುದನ್ನು ನೋಡುತ್ತಾನೆ. ಉಷಾಳ ಜೊತೆಗೆ ಬಂದ ಗೆಳತಿಯರಿಗೆ ಈ ಉದ್ದೇಶ ತಿಳಿಯಲಿ ಎಂದು ಹೇಳುತ್ತಿದ್ದಾನೆ ಎಂದೆನಿಸುತ್ತದೆ. ಈ ಗಾದೆಯ ಮೂಲಕ ಈ ಎರಡು ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಯನ್ನು ಕಾಣಬಹುದಾಗಿದೆ.

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಉದ್ದೇಶಿಸಿ ಬಳಸಿರುವ ಗಾದೆಗಳು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳನ್ನು ಅನುಲಕ್ಷಿಸಿದಾಗ ದೊರೆತಿರುವುದು ವಿರಳ ಎಂದೇ ಹೇಳಬಹುದು. ಕೆಲವೇ ಕೆಲವು ಗಾದೆಗಳು ಮಾತ್ರ ದೊರೆತಿವೆ. ಮೇಲ್ಜಾತಿ ಪಾತ್ರಗಳ ಗುಣಕ್ಕೆ ಅನುಗುಣವಾಗಿ ಬಳಸಿರುವ ಗಾದೆಗಳು ಕಂಡುಬರುತ್ತವೆ. ಸಮುದಾಯಕೇಂದ್ರಿತ ಗಾದೆಗಳು ಕಂಡುಬಂದಿರುವುದು ಸಹ ವಿರಳ. ಈ ರೀತಿಯಾಗಿ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಮೂಲಕ ಗಾದೆಯಲ್ಲಿ ಅಭಿವ್ಯಕ್ತಗೊಂಡಿರುವ ಕ್ರಮವನ್ನು ತಿಳಿಯಬಹುದಾಗಿದೆ.

೫.೨.೩. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಗಾದೆ ಬಳಸಿದ ಸಂದರ್ಭ, ಉದ್ದೇಶ ಮತ್ತು ಯಾರು ಯಾರಿಗೆ ಬಳಸಿದ್ದಾರೆ ಎಂಬುದು ಬಹಳ ಮುಖ್ಯವಾಗಿರುತ್ತದೆ. ಗಾದೆಯ ಮೂಲ ಅರ್ಥದ ಜೊತೆಗೆ ಬಳಸುವ ಸಂದರ್ಭ ಮತ್ತು ಉದ್ದೇಶ ಮುಖ್ಯವಾಗಿರುತ್ತದೆ. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸುವ ಗಾದೆಗಳಲ್ಲಿ ಜಾತಿಕೇಂದ್ರಿತ, ವ್ಯಕ್ತಿಗುಣಕ್ಕೆ ಅನುಗುಣವಾಗಿ ಗಾದೆಗಳನ್ನು ಬಳಕೆ ಮಾಡಿದ್ದಾರೆ. ಆ ಸಂದರ್ಭಕ್ಕೆ ಅನುಗುಣವಾಗಿ ಜಾತಿಕೇಂದ್ರಿತ ಗಾದೆಗಳನ್ನು ಬಳಸಿದರೂ ಅವರಿಗಿಂತ ಕನಿಷ್ಠ

ಎಂದೂ ಭಾವಿಸಲಾಗಿರುವ ಸಮುದಾಯಗಳ ಗಾದೆಗಳನ್ನೇ ಬಳಸಿರುವುದು ಹೆಚ್ಚಾ ಕಂಡು ಬರುತ್ತದೆ. ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸುವಾದದರೆ,

'ಚದುರಂಗ' ಅವರ 'ವೈಶಾಖ' ಕಾದಂಬರಿಯಲ್ಲಿ ಮೇಲ್ಜಾತಿ ಮಹಿಳೆ ಮೇಲ್ಜಾತಿ ಮಹಿಳೆಗೆ ಬಳಸಿದ ಗಾದೆಯ ಸಂದರ್ಭವನ್ನು ನೋಡಬಹುದು.

"ಇಲ್ಲ, ನಾನು ನಿನಗೆ ಹೇಳಿದ್ದರಲ್ಲಿ ರವೆಯಷ್ಟೂ ಸುಳ್ಳಿಲ್ಲ. ಬೇಕಾದರೆ ಗೋಡೆಗೆ ನೇತು ಹಾಕಿರುವ ಆ ಕೊದಂಡರಾಮನ ಪಟ ತಗೋ, ಅದನ್ನು ಮುಟ್ಟಿ ಪ್ರಮಾಣ ಮಾಡ್ತೀನಿ? ಎಂದೆ. "ಹೋಗೆ, ಹೋಗೆ. ದನ ತಿನ್ನೋನಿಗೆ ಗೊಬ್ಬರದ ಆಣೆ ಅನ್ನೋ ಹಾಗೆ ನಿನ್ನ ಪ್ರಮಾಣ ಒಂದು ಕೇಡು" (ಚದುರಂಗ, ವೈಶಾಖ, ಪುಟ, ೫೮) ಎಂದು ರುಕ್ಮಿಣಿಯ ಅಣ್ಣನ ಹೆಂಡತಿ 'ಸಾತು' ರುಕ್ಮಿಣಿಯನ್ನು ಉದ್ದೇಶಿಸಿ ಬಳಸುತ್ತಾಳೆ. ದನ ತಿನ್ನೋನಿಗೆ ಗೊಬ್ಬರದ ಆಣೆ ಎಂದರೆ ದನದ ಆಹಾರವನ್ನು ತಿನ್ನುವವನು ಕನಿಷ್ಟದವನು, ಪ್ರಮಾಣಕ್ಕೆ ಯೋಗ್ಯವಾದಂತಹ ಗೊಬ್ಬರದ ಮೇಲೆ ಆಣೆ ಮಾಡುವುದು ಎಷ್ಟರ ಮಟ್ಟಿಗೆ ಸತ್ಯ. ಅವನಿಂದ ಸತ್ಯವನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಹಾಗೆಯೇ ನಿನ್ನ ಮಾತನ್ನು ನಂಬಲು ಸಾಧ್ಯವಿಲ್ಲ ಎಂಬ ಮಾತನ್ನು ಹೇಳಲು ಮೇಲ್ಜಾತಿ ಮಹಿಳೆಗೆ ಬಳಸುತ್ತಾಳೆ. ಏಕೆಂದರೆ ಒಂದು ಸಂಜೆ ರವೆ ಉಂಡೆ, ಕೋಡುಬಳೆ ತಯಾರಿಸಿ ಬುಟ್ಟಿಯಲ್ಲಿ ತುಂಬಿ ರುಕ್ಮಿಣಿಯ ಅತ್ತಿಗೆ ಎಲ್ಲೋ ಹೊರಗೆ ಹೋಗಿರುತ್ತಾಳೆ. ಆಗ ಶೇಷ ಬಂದು ಆ ತಿಂಡಿ ತುಂಬಿದ ಬಿದುರುಬುಟ್ಟಿಗೆ ಕೈಯಿಡಲು ಯತ್ನಿಸಿದ್ದ. ಅವನು ಅಲ್ಲೆ ಕುಳಿತು ತಾನೊಬ್ಬನೆ ತನಗೆ ಸಾಕಾಗುವಷ್ಟು ತಿಂದಿದ್ದರೆ ರುಕ್ಮಿಣಿ ಬೇಡವೆನ್ನುತ್ತಿರಲಿಲ್ಲ. ಆದರೆ ಅವನು ಒಂದು ಬಟ್ಟೆ ಕೈಚೀಲ ತಂದು, ಬುಟ್ಟಿಯಲ್ಲಿದ್ದ ತಿನಿಸನ್ನೆಲ್ಲ ಅದರೊಳಗೆ ಸುರಿದು ತನ್ನ ಸ್ನೇಹಿತರಿಗೆಂದು ತೆಗೆದುಕೊಂಡು ಹೊಗುತ್ತಿರುವಾಗ ರುಕ್ಮಿಣಿ ಅಡ್ಡನಿಂತು ಹೀಗೆ ಮಾಡಬೇಡವೋ ಶೇಷ, ನೀನಿದ್ದೂ ಈ ದಾಂದಲೆಗೆ ಹೇಗೆ ಅವಕಾಶ ಕೊಟ್ಟೆ? ಎಂದು ಅಮ್ಮ ಕೇಳಿದರೆ ಆಗ ನಾನೇನು ಹೇಳಬೇಕು ಎಂದೆಲ್ಲಾ ಬೇಡುತ್ತಾಳೆ. ಆದರೆ ಶೇಷ ಅಡ್ಡನಿಂತ ರುಕ್ಮಿಣಿಯನ್ನು ಜೋರಾಗಿ ತಳ್ಳಿ ಹೊರ ಹೋಗಿದ್ದ. ತನ್ನ ಅತ್ತಿಗೆ ಸಾತು ಬಂದಾಗ ನಡೆದುದನ್ನೆಲ್ಲ ವಿವರಿಸಿದಳು. ಆಗ ಸಾತು 'ಏನೇ, ನನ್ನ ಮಗನ ಮೇಲೆ ಚಾಡಿ ಹೇಳಲಿಕ್ಕೆ ಶುರುಮಾಡಿ ಬಿಟ್ಟೆಯೇನೆ? ಅವನೆಲ್ಲೋ ತನ್ನ ಸ್ನೇಹಿತರಿಗೆಂದು ಕೊಂಚ ತೆಗೆದುಕೊಂಡು ಹೋಗಿರಬಹುದು. ನಾ ಇಲ್ಲ ಅನ್ನಲ್ಲ. ಆದರೆ ಆ ನೆಪದಲ್ಲಿ ನೀನೆ ಎಷ್ಟು ಸ್ವಾಹಾ ಮಾಡಿರಬಹುದು? ಅದನ್ನೇಕೆ ಹೇಳಲ್ಲ?" ಎಂದು ಸಾತು ಕೇಳಿದಳು. ಆಗ ರುಕ್ಮಿಣಿ 'ಇಲ್ಲ, ಸಾತು. ನಾನು ನಿನಗೆ ಹೇಳಿದ್ದರಲ್ಲಿ ರವೆಯಷ್ಟು ಸುಳ್ಳಿಲ್ಲ. ಬೇಕಾದರೆ ದೋದಂಡರಾಮ ಪೋಟದ ಮೇಲೆ ಪ್ರಮಾಣ ಮಾಡ್ತೀನಿ ಎಂದಾಗ ಹೋಗೆ ಹೋಗೆ 'ದನಾ ತಿನ್ನೋನಿಗೆ ಗೊಬ್ಬರದ ಆಣೆ' ಅನ್ನೋ ಹಾಗೆ

ನಿನ್ನ ಪ್ರಮಾಣ ಒಂದು ಕೇಡು" ಎಂದು ಬೈಯ್ಯುತ್ತಾಳೆ. ಅಂದರೆ ರುಕ್ಮಿಣಿ ಸುಳ್ಳು ಹೇಳುತ್ತಿದ್ದಾಳೆ ಎಂಬುದಕ್ಕೆ ಈ ಗಾದೆಯನ್ನು ಬಳಸಿದ್ದಾಳೆ. ಏಕೆ ಈ ಗಾದೆಯನ್ನು ಬಳಸಿದ್ದಾರೆ. ಅದು ಮೇಲ್ಜಾತಿಯವರಿಗೆ ಬಳಸಲಾಗಿದೆ. ಇದರ ಮೂಲಕ ತಿಳಿಯುವುದೇನೆಂದರೆ ಈ ಗಾದೆಯನ್ನು ಕೆಳಜಾತಿಯವರಿಗೆ ಬಳಸಿದರೆ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ. ಆದರೆ ಈ ಗಾದೆಯುನ್ನು ಮೇಲ್ಜಾತಿಯುವರಿಗೆ ಬಳಸಿದಾಗಲೂ ಕೆಳಜಾತಿಯುನ್ನೇ ಕೇಂದ್ರವಾಗಿಟ್ಟುಕೊಂಡು ಬಳಸುತ್ತಾರೆ. ಅವರನ್ನು ನಂಬಲು ಹೇಗೆ ಸಾಧ್ಯವಿಲ್ಲವೋ ಹಾಗೆ ನಿನ್ನನ್ನು ನಂಬಲು ಸಾಧ್ಯವಿಲ್ಲ ಎಂಬ ಅರ್ಥವನ್ನೇ ಇದು ಸೂಚಿಸುತ್ತದೆ. ಮೇಲ್ಜಾತಿ ಪಾತ್ರಗಳು ಬಳಸಿದಾಗ ಅವರ ಸಾಮಾಜಿಕ ಚಹರೆ ಕಂಡುಬರುವುದಿಲ್ಲ. ಅದು ಕೆಳಜಾತಿಯವರ ಸಾಮಾಜಿಕ ಚಹರೆಯನ್ನೇ ಸೂಚಿಸುತ್ತಿರುತ್ತದೆ.

ಭೈರಪ್ಪ ಎಸ್.ಎಲ್. ಅವರ 'ದಾಟು' ಕಾದಂಬರಿಯಲ್ಲಿ ಮೇಲ್ಜಾತಿಯ ಪಾತ್ರವಾದ ವೆಂಕಟೇಶ ತನ್ನ ತಂದೆಗೆ ಹೇಳುವ ಗಾದೆಯನ್ನು ಉದಾಹರಣೆಯಾಗಿ ನೋಡಬಹುದು. "ನಮ್ಮನೆ ಚಿನ್ನಾನ ನ್ಯಾರ ಮಾಡದೆ ಆಚಾರೀನ ಬೈಯಬಾರದು' ನಾಳೆ ಬೆಳಗ್ಗೆ ನಾನೇ ಬೆಂಗಳೂರಿಗೆ ಹೋಗಿ ಬುದ್ಧಿ ಹೇಳಲೆ?" (ಭೈರಪ್ಪ. ಎಸ್.ಎಲ್, ದಾಟು, ಪುಟ–೨೯) ಎಂದು ತನ್ನ ತಂದೆಗೆ ಹೇಳುತ್ತಾನೆ. ವೆಂಕಟೇಶನ ತಂಗಿ ಸತ್ಯಭಾಮೆ ಅಂತರ್‌ಜಾತಿಯ ಹುಡುಗನನ್ನು ಪ್ರೀತಿ ಮಾಡುತ್ತಿದ್ದಾಳೆ ಎಂದು ತಿಳಿದಾಗ ವೆಂಕಟರಮಣಯ್ಯ ಆ ಹುಡುಗನ್ನ ಬೈಯ್ಯುತ್ತಿರುತ್ತಾನೆ. ಆಗ ವೆಂಕಟೇಶ ಅಪ್ಪ 'ನಮ್ಮನೆ ಚಿನ್ನಾನ ನ್ಯಾರ ಮಾಡದೆ ಆಚಾರಿನ ಬೈಯಬಾರದು' ಎಂದು ಹೇಳಿದ್ದಾನೆ. ಅಂದರೆ ಮೊದಲು ನಾವು ನಮ್ಮ ಸತ್ಯಭಾಮೆಗೆ ಬುದ್ಧಿ ಹೇಳಬೇಕು. ಆ ನಂತರ ಅವನಿಗೆ ಬುದ್ಧಿಹೇಳಬೇಕು ಎಂಬುದನ್ನು ಹೇಳುವುದಕ್ಕಾಗಿ ಈ ಗಾದೆಯನ್ನು ಬಳಸಿದ್ದಾರೆ. ಈ ಗಾದೆಯೂ ಕೂಡ ಒಂದು ಸಮುದಾಯದ ವೃತ್ತಿಯನ್ನು ಸೂಚಿಸುವ ಗಾದೆಯಾಗಿದೆ.

ದಾಟು ಕಾದಂಬರಿಯಲ್ಲಿಯೇ ಇನ್ನೊಂದು ಸಮುದಾಯ ಕೇಂದ್ರಿತ ಗಾದೆಯನ್ನು ಮೇಲ್ಜಾತಿ ವ್ಯಕ್ತಿ ಬಳಸಿರುವುದನ್ನು ಕಾಣಬಹುದು. ತಿರುಮಲೆಗೌಡ ಎಂಬ ವ್ಯಕ್ತಿ ಎರಡು ಸಮುದಾಯದವರನ್ನು ಕುರಿತು ಹೇಳುವ ಗಾದೆ ಇದು. "ಬಿಳಿಯ ಮಾದಿಗ, ಕರಿ ಬ್ರಾಹ್ಮಣ ಜಾತಿಯನ್ನು ನಂಬಬಾರದು" (ಭೈರಪ್ಪ. ಎಸ್.ಎಲ್, ದಾಟು, ಪುಟ–೨೯)ಎಂದು ಹೇಳುತ್ತಾನೆ. ಅಂದರೆ ಕೆಳಜಾತಿಯವರು ಎಂದರೆ ಮಾದಿಗ ಸಮುದಾಯದವರು. ಬಣ್ಣದಲ್ಲಿ ಕಪ್ಪು ಇರುತ್ತಾರೆ. ಬ್ರಾಹ್ಮಣ ಸಮುದಾಯದವರು ಬಣ್ಣದಲ್ಲಿ ಬಿಳಿ ಇರುತ್ತಾರೆ ಎಂಬ ಕಲ್ಪನೆ. ಇದೊಂದು ರೀತಿಯ ಆರೋಪವಾಗಿದೆ. ಬಿಳಿ ಮಾದಿಗ ಮತ್ತು ಕರಿ ಬ್ರಾಹ್ಮಣ ಇಬ್ಬರು ಅಪಾಯಕಾರಿ ಎಂದು ಹೇಳುವಂತಿದೆ. ಈ ಗಾದೆ ಎರಡು ಸಮುದಾಯಗಳನ್ನು ಆರೋಪಿಸುವಂತಿದೆ ಇದು ಕೂಡ ಸಮುದಾಯ ಕೇಂದ್ರಿತ ಗಾದೆಯಾಗಿದೆ.

ಅನಂತಮೂರ್ತಿ ಯು.ಆರ್ ಅವರ 'ಭಾರತೀಪುರ' ಕಾದಂಬರಿಯಲ್ಲಿ ಮೇಲ್ಜಾತಿ ಮಹಿಳೆ ತನ್ನ ಗಂಡನನ್ನು ಕುರಿತು ಹೇಳುವ ಗಾದೆ ಈ ರೀತಿಯಾಗಿದೆ.

"ತಿನ್ನಲಿಕ್ಕೆ ಗತಿ ಇಲ್ಲದವನು ಧಿಮಾಕು ಮಾಡಿದರೆ ಯಾರು ಕೇಳ್ತಾರೆ? ಬಡವನ ಸಿಟ್ಟು ದವಡೆಗೆ ಮೂಲ ಅಂತ"(ಅನಂತಮೂರ್ತಿ,.ಯು.ಆರ್, ಭಾರತೀಪುರ, ಪುಟ-೧೯) ಮೇಲ್ಜಾತಿ ಮಹಿಳೆ ಭಾಗ್ಯಮ್ಮ ತನ್ನ ಗಂಡನನ್ನು ಉದ್ದೇಶಿಸಿ ಈ ಗಾದೆಯನ್ನು ಹೇಳುತ್ತಾಳೆ. ಏಕೆಂದರೆ ಶ್ರೀಪತಿರಾಯರು ಜಗನ್ನಾಥನ ಹತ್ತಿರ ಲಂಚಕೊಡದೆ ಡಿ.ಇ.ಓ ಹತ್ತಿರ ಆಗಲ್ಲ. ಐದಾರು ವರ್ಷ ಇದ್ದವರನ್ನ ವರ್ಗ ಮಾಡಬೇಕು ಅಂತ ಇರೋ ಸರ್ಕಾರಿ ಆರ್ಡರನ್ನ ತೋರಿಸಿದ್ರೆ ನಾನೇನು ಹೇಳ್ಲಿ ಹೇಳು ಎಂದಾಗ ಶ್ರೀಪತಿರಾಯರ ಹೆಂಡತಿ ಭಾಗ್ಯಮ್ಮ ಸಿಟ್ಟಿನಿಂದ ಬೆಳೆದು ನಿಂತ ಮಗಳಿಗೆ ಮದುವೆ ಮಾಡ್ಲಿಲ್ಲ. ಇವರು ಜೈಲಿಗೆ ಹೋದ್ರು ಅಂತಲೋ ಮನೇಲಿ ನೇಮನಿಷ್ಠೆ ಇಲ್ಲ ಅಂತಲೋ. ಅಂತೂ ಯಾರೂ ಮದ್ವೆಯಾಗಕ್ಕೆ ಬರ್ಲಿಲ್ಲ. ಅವಳು ದುಡಿದೇ ಇದ್ರೆ ಇಲ್ಲ ಪಥ ಸಾಗಬೇಕಲ್ಲ. ಹೇಳಿ ಲಂಚ ಕೊಡಬೇಕಾಗಿ ಬಂದ್ರೆ ಕೊಡ್ಲೇಬೇಕು. ಮಗಳ ಹತ್ರ ದುಡಿಸಿಕೊಂಡು ತಿನ್ನಕೆ ನಾಚಿಕೆಯಾಗಲ್ವ? ಎಂದು ಬೈಯ್ಯುತ್ತಾಳೆ. ನೀತಿ, ನಿಷ್ಠೆ, ನಿಯಮ, ಪ್ರಮಾಣಿಕತೆ ಅಂತ ಹೋದ್ರೆ ಬದುಕೋಕೆ ಆಗಲ್ಲ. ತಿನ್ನಲಿಕೆ ಗತಿ ಇಲ್ಲದವನು ಧಿಮಾಕು ಮಾಡಿದ್ರೆ ಯಾರು ಕೇಳ್ತಾರೆ? ಬಡವನ ಸಿಟ್ಟು ದವಡೆಗೆ ಮೂಲ ಅನ್ನೋ ಹಾಗೆ ನಮಗೆ ನಷ್ಟ ಆಗೋದು ಎಂದು ತನ್ನ ಗಂಡನನ್ನು ಉದ್ದೇಶಿಸಿ ಬೈಯ್ಯುತ್ತಾಳೆ. ಇದು ವರ್ಗವನ್ನು ಆಧರಿಸದ ಗಾದೆಯಾಗಿದೆ. ಬಡವ-ಶ್ರೀಮಂತರ ನಡುವಿನ ಅಂತರವನ್ನು ಹೇಳುತ್ತಿದೆ.

ಭಾರತೀಪುರ ಕಾದಂಬರಿಯಲ್ಲಿಯೇ ಇನ್ನೊಂದು ಗಾದೆಯನ್ನು ಉದಾಹರಣೆಯಾಗಿ ನೋಡಬಹುದು. ಮೇಲ್ಜಾತಿ ಪುರುಷ ಮೇಲ್ಜಾತಿ ಪುರುಷನನ್ನು ಕುರಿತು ಹೇಳುವ ಗಾದೆ ಹೀಗಿದೆ.

"ಯಾಕೋ ರಾಘವ ಪುರಾಣಿಕರು ಹೇಳಿ ಕಳಿಸಿದ್ದಾರೆ. ನೋಡಿ ಬರೋಣ ಬರ್ತಿಯಾ? ಎಂದರು.

'ಆಗಲಿ' ಎಂದ ಜಗನ್ನಾಥ

'ಪುರಾಣಿಕರನ್ನ ನೋಡಿದೀಯೇನು?'

'ಹುಡುಗನಾಗಿದ್ದಾಗ ಅಮ್ಮನ ಜೊತೆ ಅವರ ಮನೆಗೆ ಹೋಗಿದ್ದ ನೆನಪು. ಅವರು ಯಾರನ್ನೂ ನೋಡಲ್ವಂತಲ್ಲ.'

ರಾಯರು ಮುಗುಳ್ನಕ್ಕರು. ಏನಾದರೂ ಮಾತಾಡಬೇಕೆಂದು ಜಗನ್ನಾಥ ಹೇಳಿದ.

ಅವರ ಕಥೆ ಕೇಳಿದೇನೆ. ೧೯೨೦ನೇ ಇಸವೀಲಿ ವಿಧವಾ ವಿವಾಹ ಮಾಡಿಕೊಂಡ್ರಂತಲ್ಲ?

'ಅವರ ಮದುವೆಗೆ ಹೋಗಿದ್ದವರಲ್ಲಿ ನಾನೂ ಒಬ್ಬ. ಮದುವೆ ಹಿಂದಿನ ರಾತ್ರೆ ಒಂದು ಘಟನೆಯಾಯ್ತು. ದಾರೀಲಿ ಕೆಲವರು ಮದ್ವೇಗೇಂತ ಬರ್ತಾ ಇದ್ರು. ಅವರಲ್ಲಿ ಒಬ್ಬ ಹಿಂದೆ ಕೂತಿದ್ದವ ಜೊಂಪು ಹತ್ತಿ ಕೆಳಿಗೆ ಬಿದ್ದು ಸತ್ತುಹೋದ. ಎಲ್ಲ ಏನು ಮಾತಾಡಿಕೊಂಡ್ರು ಗೊತ್ತ? ಮುಂಡೇ ಮದುವೇಗೆ ಮುನ್ನೂರು ವಿಘ್ನ ಅಂತ" (ಅನಂತಮೂರ್ತಿ ಯು.ಆರ್, ಭಾರತೀಪುರ, ಪುಟ, ೬೯-೭೦)ಮಾತಾಡಿಕೊಂಡ್ರು ಎಂದು ಶ್ರೀಪತಿರಾಯರು ಜಗನ್ನಾಥನಿಗೆ ಹೇಳುತ್ತಾನೆ.

ಸಾಮಾನ್ಯವಾಗಿ ಹಿಂದೆ ವಿಧವೆಯನ್ನು ಮದುವೆ ಮಾಡಿಕೊಳ್ಳವುದು ನಿಷೇಧ ಎಂದು ಕಟ್ಟುಪಾಡುಗಳನ್ನು ಹಾಕಲಾಗಿತ್ತು. ವಿಧವಾ ಪುನರ್ ವಿವಾಹಕ್ಕೆ ಭಾರತದಲ್ಲಿ ಅನೇಕ ಸಮಾಜ ಸುಧಾರಕರು ಹೋರಾಡಿದ್ದಾರೆ. ಜಾಗೃತಿ ಮೂಡಿಸಿದ್ದಾರೆ. ಹಾಗೆಯೇ ಬ್ರಿಟೀಷ್ ಅಧಿಕಾರಿಗಳು ಸಹ ವಿಧವಾ ಪುನರ್ ವಿವಾಹ ಹೋರಾಟಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಹೀಗೆ ಭಾರತದಲ್ಲಿ ವೈಚಾರಿಕತೆ ಮೂಡುತ್ತಾ ಬಂತು.

ಅಂದರೆ ನಮ್ಮ ಭಾರತೀಯ ಸಮಾಜದಲ್ಲಿ ವಿಧವೆಯನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಮುಂದೆ ಬಂದರೆ ಅವರಿಗೆ ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತಿದ್ದರು. ಆಚರಣೆ, ಪದ್ಧತಿ, ಸಂಸ್ಕೃತಿ ಹೆಸರಲ್ಲಿ ಅನೇಕ ತೊಂದರೆಗಳನ್ನು ಒಬ್ಬರಲ್ಲ ಒಬ್ಬರು ನೀಡುತ್ತಿದ್ದರು. ಆದ್ದರಿಂದ ಮುಂಡೇ ಮದುವೆಗೆ ಮುನ್ನೂರು ವಿಘ್ನ ಎಂಬ ಗಾದೆಯೂ ಹುಟ್ಟಿಕೊಂಡಿರಬೇಕು. ಈ ಕಾದಂಬರಿಯಲ್ಲಿ ರಾಘವ ಪುರಾಣಿಕರು ಒಬ್ಬ ವಿಧವೆಯನ್ನು ಮದುವೆಯಾಗುವ ಸಂದರ್ಭದಲ್ಲಿ ಮದುವೆಗೆ ಬರುತ್ತಿದ್ದ ವ್ಯಕ್ತಿ ಆಕಸ್ಮಿಕ ಎನ್ನುವಂತೆ ಜೋಂಪು ಬಂದು ಕೆಳಗೆ ಬಿದ್ದು ಸತ್ತುಹೋಗುತ್ತಾನೆ. ಆಕಸ್ಮಿಕವಾಗಿ ನಡೆದ ಘಟನೆಯನ್ನು ವಿಧವೆಯನ್ನು ಮದುವೆ ಆಗುತ್ತಿರುವುದರಿಂದಲೇ ಈ ಘಟನೆ ನಡೆದಿದೆ ಎಂದು ಜನರು ಮಾತನಾಡಿಕೊಳ್ಳುತ್ತಾರೆ. 'ಕಾಗೆ ಬಂದು ಕೂರಕ್ಕೂ, ಕೊಂಬೆ ಮುರಿಯದ್ಕೂ ಸರಿ ಆಯ್ತು' ಎಂಬ ಗಾದೆ ಈ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ. ಈ ರೀತಿಯ ಅನುಭವಗಳೇ ಗಾದೆಗಳಾಗಿ ರೂಪುಗೊಂಡಿರಬೇಕು.

ದತ್ತರಾಜ್ ಚಿ. ನಿರ್ದೇಶನದ 'ಕಾಮನ ಬಿಲ್ಲು' ಕಾದಂಬರಿಯಲ್ಲಿ ಮೇಲ್ಜಾತಿಯ ವ್ಯಕ್ತಿ ಮೇಲ್ಜಾತಿ ವ್ಯಕ್ತಿಯನ್ನು ಉದ್ದೇಶಿಸಿ ಹೇಳುವಾಗ ಬಳಸುವ ಗಾದೆ ಈ ರೀತಿಯಾಗಿದೆ. ಕರಿಗೌಡ ಸೂರ್ಯನಾರಾಯಣರಾವ್‌ಗೆ ಹೇಳುವ ಮಾತು. ಸಮಾಜದಲ್ಲಿ ಒಂದೊಂದು ಸಮುದಾಯಕ್ಕೂ ಒಂದೊಂದು ಗಾದೆಗಳು ಹುಟ್ಟಿಕೊಂಡಿವೆ ಎನಿಸುತ್ತದೆ. ಅನೇಕ ಸಮುದಾಯಗಳಿಗೆ ಅವರ ವೃತ್ತಿ, ಆಚರಣೆ, ಪದ್ಧತಿ, ಸಂಸ್ಕೃತಿಗೆ ಅವರ ಜೀವನ ಕ್ರಮಕ್ಕೆ ಅನುಗುಣವಾಗಿ ಗಾದೆಗಳು ಸೃಷ್ಟಿಯಾಗಿವೆ. ಇಲ್ಲಿಯೂ ಸಹ ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಒಂದು ಗಾದೆ

ಹುಟ್ಟಿಕೊಂಡಿದೆ. ಅದು ಈ ರೀತಿಯಾಗಿದೆ. 'ಹಾರವ್ರು ಹೆಚ್ಚಿದ್ರೆ ಹಳ್ಳಿ ಹಾಳು, ಏಡಿ ಹೆಚ್ಚಿದ್ರೆ ಕೆರೆ ಹಾಳು'(ಚಲನಚಿತ್ರ, ಕಾಮನಬಿಲ್ಲು) ಎಂದು ಕಿರಿಗೌಡ ಹೇಳುತ್ತಾನೆ. ಏಕೆ ಈ ಮಾತನ್ನು ಹೇಳುತ್ತಾನೆ ಎಂದರೆ ಸೂರ್ಯನಾರಾಯಣರಾವ್ ಕಿರಿಗೌಡನಿಗೆ ಬುದ್ಧಿ ಹೇಳುತ್ತಾನೆ. ಆಗ ಈ ಗಾದೆಯನ್ನು ಬಳಸುತ್ತಾನೆ. ಕಿರಿಗೌಡ ಹೊಲೆಯರ ಕೆಂಚನ್ನ ಮೇಲ್ಜಾತಿ ಹುಡಗರ ಜೊತೆ ಆಟ ಆಡಿದ ಎಂಬ ಕಾರಣಕ್ಕೆ ಕಟ್ಟಿಗೆ ತಗೊಂಡು ಬಾಸುಂಡೆ ಬರೋ ಹಾಗೆ ಹೊಡೆದಿರುತ್ತಾನೆ. ಇದು ಗೊತ್ತಾಗಿ ಸೂರ್ಯನಾರಾಯಣರಾವ್ ಕಿರಿಗೌಡನನ್ನು ವಿಚಾರಿಸುತ್ತಾನೆ. ಹೌದು ನಮ್ಮ ಮೇಲ್ಜಾತಿ ಹುಡುಗರ ಜೊತೆ ಆಟ ಆಡಿದಕ್ಕೆ ಹೊಡ್ದೆ. ಏನಿವಾಗ ನೀ ಯಾವನಯ್ಯ ಅದುನೆಲ್ಲ ಕೇಳೋದಿಕ್ಕೆ. ನಾವು ಈ ಊರಿಗೆ ದೊಡ್ಡವ್ರು, ಜಾತಿ, ನೀತಿ, ಕಟ್ಟು, ಕಟ್ಲೆ ಅಂತ ಇನ್ನೂ ಉಳಿಸ್ಕೊಂಡಿದೀವಿ ಅಂತ ಹೇಳುತ್ತಾನೆ. ಆಗ ಜಾತಿ ಎಂದರೆ ಯಾವುದು ಎಂಬುದನ್ನು ವೈಚಾರಿಕವಾಗಿ ಹೇಳುತ್ತಾನೆ. ಹೀಗೆ ಇಬ್ಬರ ನಡುವೆ ಮಾತುಕತೆ ಜಗಳದ ಸ್ವರೂಪ ಪಡೆಯುತ್ತೆ. ಸೂರ್ಯನಾರಾಯಣರಾವ್ ಹುಷಾರಾಗಿರಿ ಎಂದು ಎಚ್ಚರಿಸುತ್ತಾನೆ. ಕಂಡಿದೀವಿ ಕಣ್ ಹೋಗಯ್ಯ ಹುಸಾರ್ ಅಂತ ಹುಸಾರ್ ನನ್ ಮುಂದೆ ಚೊಣ್ಣ ಹಾಕ್ಕೊಂಡು ತಿರುಗ್ತಿದ್ದ ಮಗ, ನಿನಗಿಷ್ಟೊಂದು ಪೊಗರು ಬಂತ, ಅಪ್ಪಲ್ದೆ ಹೇಳವ್ರ ಹಿರಿಯರು ಗಾದೆನಾ. 'ಹಾರವ್ರು ಹೆಚ್ಚಾದ್ರೆ ಹಳ್ಳಿ ಹಾಳು, ಏಡಿ ಹೆಚ್ಚಿದ್ರೆ ಕೆರೆ ಹಾಳು' ಅಂತ. ಬಂದು ಬಿಟ್ಟ ನನಗೆ ಬುದ್ಧಿ ಹೇಳೋಕೆ ಎಂದು ಕಿರಿಗೌಡ ಹೇಳುತ್ತಾನೆ. ನನಗಿಂತ ಚಿಕ್ಕವನಾಗಿದ್ದರೂ ನನಗೆ ಬುದ್ಧಿ ಹೇಳೋಕೆ ಬರ್ತಾನಲ್ಲ ಎಂಬ ಕಾರಣಕ್ಕೆ ಅವನ ಸಮುದಾಯವನ್ನು ಕುರಿತು ಇರುವ ಗಾದೆಯನ್ನು ಈ ಸಂದರ್ಭಕ್ಕೆ ಬಳಸಿಕೊಳ್ಳುತ್ತಾನೆ. ಈ ಗಾದೆಯ ಮೂಲಕ ಬ್ರಾಹ್ಮಣ ಸಮುದಾಯದ ಸಾಮಾಜಿಕ ಚಹರೆ ತಿಳಿಯುತ್ತದೆ.

ಕಾಮನಬಿಲ್ಲು ಚಲನಚಿತ್ರದಲ್ಲಿಯೇ ಕಿರಿಗೌಡ ಸೂರ್ಯನಾರಾಯಣರಾವ್‌ನನ್ನು ಕುರಿತು ಇನ್ನೊಂದು ಗಾದೆಯನ್ನು ಬಳಸುತ್ತಾನೆ. ಆ ಗಾದೆ ಈ ರೀತಿಯಿದೆ. "ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನಯ್ಯ ಸಂಬಂಧ" (ಚಲನಚಿತ್ರ; ಕಾಮನಬಿಲ್ಲು) ಎಂದು ಕಿರಿಗೌಡ ಹೇಳುತ್ತಾನೆ. ಏಕೆಂದರೆ ಸೂರಿ ನಿಮ್ಮ ಹತ್ತಿರ ಅಡ ಇಟ್ಟಿದ್ದ ಜಮೀನನ್ನು ಬಿಡಿಸಿಕೊಂಡು ವ್ಯವಸಾಯ ಮಾಡುತ್ತಾನೆ ಅಂತ ಹೇಳಿದ್ದಕ್ಕೆ ಕಿರಿಗೌಡ ಈ ಗಾದೆಯನ್ನು ಬಳಸುತ್ತಾನೆ. ಏಕೆಂದರೆ ಸೂರಿ ಬ್ರಾಹ್ಮಣ ವ್ಯಕ್ತಿ ಪೌರಹಿತ್ಯ ಮಾಡಿಕೊಂಡು ಇರ್ಬೇಕು. ಭೂಮಿ, ಜಮೀನು ಇದೆಲ್ಲ ಒಕ್ಕಲಿಗ ಸಮುದಾಯ ಮಾತ್ರ ಮಾಡ್ಬೇಕು ಎಂಬ ಉಳಿಗಮಾನ್ಯ ಪದ್ಧತಿಯ ಆಲೋಚನೆ ಇರುವುದು ಕಾಣಿಸುತ್ತದೆ. ದ್ಯಾವ್ರಿಗೆ ಮಂಗಳಾರತಿ ಮಾಡ್ಕೊಂಡು, ತೀರ್ಥ, ಪ್ರಸಾದ ಕೊಡೊದನ್ನು ಬಿಟ್ಟು, ವ್ಯವಸಾಯ ಮಾಡುತ್ತಾನಂತೆ ವ್ಯವಸಾಯ. ಅವತ್ತು ಅಪ್ನು ಹೊಲೆಯರನ್ನೆಲ್ಲ ಬ್ರಾಹ್ಮಣ್ರನ್ನ ಮಾಡ್ತಿನಿ ಅಂತ ಜಾತಿ ಕೆಡ್ಸಕ್ಕೆ ಹೊಂಟಿದ್ದ. ಇವತ್ತು ನೀನು ಈ ಹಾರವಯ್ಯನ್ನ ಶೂದ್ರನನ್ನಾಗಿ

ಜಾತಿ ಕೆಡ್ಸಕೆ ಹೊಂಟದಿಯಾ ಎಂದು ಕಿರಿಗೌಡ ಅಭಿವ್ಯಕ್ತಿಸುತ್ತಾನೆ. ಇಲ್ಲಿ ಜಾತಿ ಮಾತ್ರ ಮುಖ್ಯ ಎನಿಸುವುದಿಲ್ಲ. ಜಾತಿಯೂ ಕಾರಣ ಆಗಿದ್ರೂ ಈ ಬ್ರಾಹ್ಮಣ ವ್ಯಕ್ತಿ ಅಡ ಇಟ್ಟ ಜಮೀನು ಬಿಡ್ಸುಕೊಂಡ್ರೆ, ಜಮೀನು ಕೈತಪ್ಪಿ ಹೋಗುತ್ತಲ್ಲ ಎಂಬ ಇನ್ನೊಂದು ಕಾರಣವೂ ಇದೆ. ಆದ್ದರಿಂದ 'ಕಿರಿಗೌಡ 'ಗೋಕುಲಾಷ್ಟಮಿಗೂ ಇಮಾಮ್‌ಸಾಬಿಗೂ ಏನು ಸಂಬಂಧ, ಎಂಬ ಗಾದೆಯನ್ನು ಈ ಕಾರಣಕ್ಕಾಗಿ ಬಳಸಿಕೊಂಡಿದ್ದಾನೆ. ಯಾರು ಯಾವ ವೃತ್ತಿಯನ್ನು ಪಾರಂಪರಿಕವಾಗಿ ಮಾಡಿಕೊಂಡು ಬಂದಿದ್ದಾರೋ ಹಾಗೆಯೇ ಮುಂದುವರಿಸಿಕೊಂಡು ಬರಬೇಕು ಎಂಬ ಆಶಯ ಇಲ್ಲಿದೆ. ವ್ಯವಸ್ಥೆಯ ಯತಾಸ್ಥಿತಿ ಮನೋಧೋರಣೆ ಈ ಉಳಿಗಮಾನ್ಯ ಪದ್ಧತಿಯ ಆಶಯವಾಗಿದೆ. ಚೋಮನದುಡಿ ಚಲನಚಿತ್ರದಲ್ಲಿ ಒಂದು ಸನ್ನಿವೇಶ ಇದೇ ರೀತಿಯಲ್ಲಿದೆ. ಸಂಕಪ್ಪಯ್ಯನ ಹತ್ತಿರ ಉಳುಮೆ ಮಾಡುವುದಕ್ಕೆ ಚೋಮ ಭೂಮಿಯನ್ನು ಕೇಳಿದಾಗ ಅಲ್ಲಿ ಚೋಮ ನಿನಗ್ಯಾಕೆ ಈ ಗೇಣಿ ಗದ್ದೆ ಆಸೆ ಸುಮ್ಮನೆ ಬಿರುಮನ ಅಂಗಡಿಗೆ ಹೋಗಿ ನಾಲ್ಕು ಗ್ಲಾಸ್ ಕುಡುಕೊಂಡು ಬಿದ್ದಿರೋದು ಬಿಟ್ಟು ಈ ಬೇಸಾಯ ಗೀನಾಯಿ ಅಂತ". ಸಂಕಪ್ಪಯ್ಯ ಹೇಳುತ್ತಾನೆ. ದಲಿತರು ಎಂದರೆ ಕುಡಿಯುವ ಸಂಕೇತವಾಗಿ ಅವರನ್ನು ಸೂಚಿಸುತ್ತಾರೆ. ಅವರು ದುಡಿಯುವುದು ಕೂಡ ಮಾಂಸ ಮಜ್ಜನಕ್ಕೆ ಎಂಬ ಅಭಿಪ್ರಾಯವಿದೆ. ಈ ರೀತಿಯ ಅಭಿಪ್ರಾಯಕ್ಕೆ ಒಂದು ಗಾದೆಯನ್ನು ಉಲ್ಲೇಖಿಸಬಹುದು. 'ಮಾದಿಗ ಮಾಡುವುದು ಹೆಂಡಕ್ಕೆ ಒಕ್ಕಲಿಗ ಮಾಡುವುದು ದಂಡಕ್ಕೆ" ಎಂಬ ಗಾದೆಯಿದೆ. ಕೆಳಜಾತಿಯವರು ಹೆಂಡಕ್ಕೆ ದಾಸರಾಗಿರುತ್ತಾರೆ ಎಂಬುದನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು. ಹೀಗೆ ಸಮಾಜದಲ್ಲಿ ವ್ಯವಸ್ಥೆಯ ಯತಾಸ್ಥಿತಿಯನ್ನು ಉಳಿಗಮಾನ್ಯ ಪದ್ಧತಿ ಕಾಪಾಡಿಕೊಂಡು ಬರುತ್ತಿರುವುದು ಕಾಣುತ್ತದೆ. ಮುನಿಯನ ಮಾದರಿ ಚಲನಚಿತ್ರದಲ್ಲಿಯೂ ಸಹ ಮುನಿಯ ಅಡ ಇಟ್ಟ ಜಮೀನನನ್ನು ಗೌಡನ ಹತ್ತಿರ ಬಿಡಸಿಕೊಳ್ಳಲು ಹೋದಾಗ ಇದೇ ರೀತಿ ಸನ್ನಿವೇಶ ಸೃಷ್ಟಿಯಾಗುತ್ತದೆ. ನೀನು ಆರಾಮಾಗಿ ಜೀತ ಮಾಡಿಕೊಂಡು ಇರು. ಮಳೆ-ಬೆಳೆ ನಂಬಿಕೊಂಡು ವ್ಯವಸಾಯ ಮಾಡಿದ್ರೆ ಇರೋ ತುತ್ತು ಅನ್ನಕ್ಕೂ ಕಲ್ಲು ಹಾಕಿಕೊಳ್ಳಬೇಕಾಗುತ್ತೆ ಎಂದು ಗೌಡ ಹೇಳುತ್ತಾನೆ. ಇದರ ಮೂಲಕ ಜಮೀನ್ದಾರರ ಮನೋಧೋರಣೆ ಏನಾಗಿದೆ ಎಂಬುದು ತಿಳಿಯುತ್ತದೆ. ಇಲ್ಲಿಯೂ ಕೂಡ ಸಮಾಜದ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಯತಾಸ್ಥಿತಿಯನ್ನು ಕಾಪಾಡಿಕೊಳ್ಳುವುದನ್ನು ಬಯಸುತ್ತಿರುವುದು ಕಾಣುತ್ತೇವೆ.

ಕಾಮನಬಿಲ್ಲು ಚಲನಚಿತ್ರದಲ್ಲಿ ಕಿರಿಗೌಡ ಆ ರೀತಿ ಹೇಳುವುದಕ್ಕೆ ಕಾರಣ ಅವರ ಮನಸ್ಸಿನಲ್ಲಿರುವ ಉಳಿಗಮಾನ್ಯ ಪದ್ಧತಿಯ ಮನೋಧೋರಣೆ ಮತ್ತು ಸಮಾಜದಲ್ಲಿರುವ ಶ್ರೇಣಿಕೃತ ಸಮಾಜವನ್ನು ಕಾಪಾಡುವುದಾಗಿದೆ. ಜಮೀನ್ದಾರರಲ್ಲಿ ಅಡ ಇಟ್ಟ ಜಮೀನನ್ನು ವಾಪಸ್ಸು ಕೊಟ್ಟರೆ ಜಮೀನ್ದಾರರಿಗೆ ಅಸ್ತಿತ್ವ ಉಳಿಯುವುದಿಲ್ಲ ಎಂಬ ಕಾರಣಕ್ಕೆ

ಸೂರ್ಯನಾರಾಯಣರಾವ್‌ಗೆ ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎಂಬ ಗಾದೆಯನ್ನು ಬಳಸುತ್ತಾನೆ. ಈ ಗಾದೆಯು ಜಮೀನ್ದಾರರ ಮನಸ್ಥಿತಿ, ಮನೋಧೋರಣೆಯನ್ನು ಸೂಚಿಸುತ್ತದೆ.

ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯಮಗಳನ್ನು ಕಂಡುಕೊಳ್ಳುವಂತಹ ಅಂಶಗಳು ಕಂಡುಬರುತ್ತವೆ. ಮೇಲ್ಜಾತಿ ವ್ಯಕ್ತಿಗೆ ಸಂಬಂಧಿಸಿದಂತೆ ಗಾದೆಯನ್ನು ಹೇಳಿದರೂ ಸಹ ಕೆಳಜಾತಿ ಕೇಂದ್ರಿತ ಗಾದೆಗಳನ್ನು ಬಳಸಿರುವುದು ಕಾಣಬಹುದು. ಉಳಿಗಮಾನ್ಯ ಪದ್ಧತಿ ಆಶಯವಿರುವ ಗಾದೆಗಳು, ಮೇಲ್ಜಾತಿ ಪಾತ್ರಗಳ ಆಚಾರ, ವಿಚಾರ, ಪದ್ಧತಿ, ಸಾಂಸ್ಕೃತಿಕ ಅಂಶಗಳು ಗಾದೆಗಳ ಮೂಲಕ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತಿ, ಲಿಂಗ, ವರ್ಗ ಮತ್ತು ಸಾಮಾಜಿಕ ಸೂಚಕಗಳು ಗಾದೆಗಳಲ್ಲಿ ಅಭಿವ್ಯಕ್ತಿಗೊಂಡಿವೆ.

೫.೨.೪. ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆಗಳು

ಜೀವನದಲ್ಲಿ ನಡೆಯುವ ಘಟನೆಗಳು, ಸನ್ನಿವೇಶಕ್ಕೆ ಸಂಬಂಧಿಸಿದಂತೆ ಅನೇಕ ಗಾದೆಗಳು ಕನ್ನಡ ಸಮಾಜದಲ್ಲಿ ರೂಪುಗೊಂಡಿವೆ. ಜಾತಿ, ವೃತ್ತಿ, ವರ್ಗ, ಲಿಂಗ, ಗುಣ, ಬಡತನ, ನಿಸರ್ಗ, ಆಚರಣೆ, ಸಂಸ್ಕೃತಿ ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಗಾದೆಗಳು ಹುಟ್ಟಿಕೊಂಡಿವೆ. ಒಂದು ಗಾದೆ ಹಲವು ಸಂದರ್ಭಗಳಿಗೆ ಬಳಕೆಯಾಗುತ್ತದೆ. ಆದ್ದರಿಂದ ಗಾದೆ ಬಳಕೆಯಾಗುವ ಸಂದರ್ಭ ಬಹಳ ಮುಖ್ಯವಾಗಿರುತ್ತದೆ. ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳಲ್ಲಿ ಬಡತನ, ಗುಣ, ನಿಸರ್ಗ, ಕುಟುಂಬ, ಮಹಿಳೆಗೆ ಸಂಬಂಧಿಸಿದ ಗಾದೆಗಳು ಹೆಚ್ಚಾಗಿ ಬಳಕೆಯಾಗಿವೆ. ಇಲ್ಲಿ ಸಮುದಾಯ ಕೇಂದ್ರಿತ ಗಾದೆಗಳು ಕಂಡುಬರುವುದಿಲ್ಲ. ಈ ಗಾದೆಗಳು ಬಳಕೆಯಾಗಿರುವ ಸಂದರ್ಭವನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ದೊಡ್ಡಬೀರ ತನ್ನ ಮಗ ಸಣ್ಣಬೀರನನ್ನು ಉದ್ದೇಶಿಸಿ ಹೇಳುವ ಗಾದೆಯನ್ನು ಹೇಳುವ ಮತ್ತು ಕೇಳುವ ಎರಡೂ ಈ ಕಾದಂಬರಿಯಲ್ಲಿ ಬರುವ ಕೆಳಜಾತಿ ಪಾತ್ರಗಳೇ ಆಗಿವೆ. ದೊಡ್ಡಬೀರೆ ಗಾದೆಯನ್ನು ಬಳಸಿದ ಗಾದೆಯಾಗಿದೆ ಸಂದರ್ಭ ಹೀಗಿದೆ.

"ಈ ಸೊಕ್ಕಿನ ಮಾತೆಲ್ಲ ಕಟ್ಟಿಡು! 'ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ಹಾಂಗೆ ಆದಾತು'. ತೂದೂರು ಕಟ್ಟೇಲಿ ಮಾರಾಜರ ದಂಡಿನೋರು ಸುಮಾರು ಜನ ಗೌಡ್ರನ್ನೆ ಕುತ್ತಿಗಿಗೆ ನೇಣುಹಾಕಿ

ಮರಕ್ಕೆ ನೇತಾಕಿದ್ರಂತಲ್ಲಾ ಹಾಂಗೇ ಆಗ್ತದೆ ನಿನ್ಗೂ, ಗೊತ್ತಾತೇನು? ಕಡೀಗೆ ನಿನ್ನ ದೆಸಿಂದ ನಮ್ಮನ್ನೂ ಎಲ್ಲ ತೀರ್ಥೊಳ್ಳಿ ಕಚೇರಿಗೆ ಎಳಕೊಂಡು ಹೋದಾರು ಕರೀಪೇಟದೋರು ಗೊತ್ತಾತೇನು? (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೩೫೮) ಎಂದು ದೊಡ್ಡಬೀರ ತನ್ನ ಮಗನನ್ನು ಉದ್ದೇಶಿಸಿ ಹೇಳುತ್ತಾನೆ.

'ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ಹಾಂಗೆ' ಆದೀತು ಎಂಬ ಗಾದೆ ಬಡತನವನ್ನು ಸೂಚಿಸುವಂತ ಗಾದೆಯಾಗಿದೆ. ಅಂಬಲಿ ಎಂಬ ಆಹಾರವನ್ನು ತಿನ್ನುವವರು ಬಡವರು. ಆದ್ದರಿಂದ ಬಡತನವನ್ನು ಸೂಚಿಸುವುದಕ್ಕೆ ಅಂಬಲಿ ಪದ ಬಳಕೆಯಾಗಿದೆ. ಬಡವ ತನ್ನ ಶಕ್ತಿಗೆ ಮೀರಿ ಆಲೋಚನೆ ಮಾಡಬಾರದು ಎಂಬ ಅರ್ಥವನ್ನು ಇದು ವ್ಯಕ್ತಪಡಿಸುತ್ತದೆ. ಬಡವ ಆಕಾಶಕ್ಕೆ ಹಾರುವ ಕನಸು ಕನಸಾಗಿಯೇ ಉಳಿಯುತ್ತದೆ. ಅದು ಸಾಧ್ಯವಿಲ್ಲ ಎಂಬುದು ಈ ಗಾದೆಯ ಅರ್ಥದ ನೆಲೆಯಾಗಿದೆ. ಈ ಕಾದಂಬರಿಯಲ್ಲಿ ದೊಡ್ಡಬೀರ ಏಕೆ ತನ್ನ ಮಗನನ್ನು ಉದ್ದೇಶಿಸಿ ಈ ಗಾದೆಯನ್ನು ಬಳಕೆ ಮಾಡುತ್ತಾನೆ ಎಂದರೆ ಸಣ್ಣಬೀರನನ್ನು ಇಜಾರದ ಸಾಬಿ ಕಲ್ಲಯ್ಯಗೌಡರ ಆಜ್ಞೆಯಂತೆ ಬೆನ್ನ ಮೇಲೆ ಬಾಸುಂಡೆ ಮೂಡುವ ಹಾಗೆ ಹೊಡೆದಿರುತ್ತಾನೆ. ಅದನ್ನು ನೆನಸಿಕೊಂಡು "ಆ ದುಣ್ಣಮುಂಡೇ ಗಂಡ! ಇಜಾರದ ಸಾಬಿ! ಅಂವನ್ನ ಯಾರಾದರೂ ಕಡಿದು ಹಾಕಿದ್ರೆ ಒಂದು ಹಂಡೇ ಹಾಲು ಕುಡಿತಿದ್ದೆ!" ಅಂತ ತನ್ನ ಮನಸಿನಲ್ಲಿದ್ದ ಕೋಪವನ್ನು ವ್ಯಕ್ತಪಡಿಸುತ್ತಾ ಆ ಮಾಕೀಮನೆ ಈರಣ್ಣನ್ನ ಕಡ್ದು ರಕ್ತ ಕುಡಿದ್ರಂತಲ್ಲಾ ಹಾಂಗೇ ಅವನ ರಕ್ತ ಕುಡೀದೆ ಇದ್ರೆ ನಾನು ಅಪ್ಪಗೆ ಹುಟ್ಟಿದಾಂವ ಅಲ್ಲಾ! ನೋಡ್ತಿರು! ನನ್ನ ಬೆನ್ನಿನ ಬಾಸುಂಡೆ ಇನ್ನೂ ಮಾದಿಲ್ಲ....ಬಗನೇ ಕತ್ತೀನ ಮಸೆದು ಇಟ್ಟುಕೊಂಡ್ಹಾಂಗೆ ಇಟ್ಟುಕೊಂಡೀನಿ, ನನ್ನ ಕೆಲಸದ ಕತ್ತೀನ! ಒಂದೇ ಕೊಚ್ಚಿಗೆ ಅವನ ಆನೆಗಾತ್ರದ ಕುತ್ತಿಗೆ ಕತ್ತರಿಸಿ ಬೀಳಬೇಕು, ಹಾಂಗೆ ಹೊಡೀತೀನಿ ಆ ಇಜಾರದ ಸಾಬಿಯನ್ನು ಎಂದು ಸಣ್ಣಬೀರ ಹೇಳಿದಾಗ, ದೊಡ್ಡಬೀರ ಈ ಗಾದೆಯನ್ನು ಹೇಳುತ್ತಾನೆ. ಈ ಸೊಕ್ಕಿನ ಮಾತೆಲ್ಲ ಕಟ್ಟಿಡು! ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ಹಾಂಗೆ ಆದಾತು ನಮ್ಮ ಕತೆ ಎಂದು ತಮ್ಮ ಮಿತಿ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾನೆ. ಒಂದು ಹೊತ್ತಿನ ಊಟಕ್ಕೂ ಪರದಾಡುವಂತ ಸ್ಥಿತಿ ನಮ್ಮದು ಆವೇಷದಲ್ಲಿ ಅವನನ್ನು ಕೊಂದರೆ ಕೋರ್ಟ್, ಕಛೇರಿ ಎಂದು ಅಲೆದಾಡುವ ಪರಿಸ್ಥಿತಿ ಉಂಟಾಗುತ್ತದೆ. ಆ ಸಮಸ್ಯೆಯನ್ನು ನಿಭಾಯಿಸುವ ಶಕ್ತಿ ನಮ್ಮಲಿಲ್ಲ. ಆದ್ದರಿಂದ ನಮ್ಮ ಮಿತಿಯನ್ನು ಅರ್ಥಮಾಡಿಕೊಂಡು ಇರಬೇಕಾಗುತ್ತದೆ ಎಂದು ಅಸಹಾಯಕತೆಯಿಂದ ನುಡಿಯುತ್ತಾನೆ. ಈ ಗಾದೆ ಕೆಳಜಾತಿ ವ್ಯಕ್ತಿಯಾದ ದೊಡ್ಡಬೀರನ ಆರ್ಥಿಕತೆ ಮತ್ತು ಸಾಮಾಜಿಕತೆಯನ್ನು ಅಭಿವ್ಯಕ್ತಪಡಿಸುತ್ತದೆ.

ಚದುರಂಗ ಅವರ 'ವೈಶಾಖ" ಕಾದಂಬರಿಯಲ್ಲಿ ಕೆಳಜಾತಿ ವ್ಯಕ್ತಿ ನಿಂಗಯ್ಯ ತನ್ನ ಹೆಂಡತಿ ಕಲ್ಯಾಣಿಯನ್ನು ಉದ್ದೇಶಿಸಿ ಹೇಳುವ ಗಾದೆಯ ಸಂದರ್ಭವನ್ನು ಉದಾಹರಣೆಯಾಗಿ ನೋಡಬಹುದು. ಇವಳು ಮಾತು ಒಂದು ಮಂತ್ರ ಅಂತ ಕ್ಯಾಳಿಕಂಡು ಕುಂತುಗವ್ವ

ನೇರ್ಪಾರ್ಯದ್ದದೆ!....ಮೊದ್ಲೆ ಕ್ವಾಳಿಲ್ವ ಗಾದ್ಯ-ಕುಟುಗಲು ಮಳೆ ಬ್ಯಾಡ, ಲೋಟಗಾಲೆ ಎಡತಿ ಬ್ಯಾಡ, ಅಂತಾವ?...(ಚದುರಂಗ, ವೈಶಾಖ, ಪುಟ, ೯೩) ಎಂದು ನಿಂಗಯ್ಯ ತನ್ನ ಹೆಂಡತಿಯನ್ನು ಉದ್ದೇಶಿಸಿ ಹೇಳುತ್ತಾನೆ. ಇಲ್ಲಿ ಒಬ್ಬ ಮಹಿಳೆಯ ಗುಣವನ್ನು ಕುರಿತು ಹೇಳುವುದಕ್ಕೆ ನಿಸರ್ಗದ ಗುಣವನ್ನು ರೂಪಕವಾಗಿ ಈ ಗಾದೆಯಲ್ಲಿ ಬಳಸಿಕೊಳ್ಳಲಾಗಿದೆ. ನಿಂಗಯ್ಯನು ಕೆಲಸಕ್ಕೆ ಹೋಗುವುದಿಲ್ಲ. ಹೊಟ್ಟೆ ತುಂಬು ಎಂದರೆ ಹೇಗೆ ತುಂಬುತ್ತದೆ. ಮನಸ್ಸಿಗೆ ಬಂದ್ರೆ ಕೆಲಸಕ್ಕೆ ಹೋಗ್ತಾನೆ ಇಲ್ಲಂದ್ರ ಊರು ತಿರುಗ್ತಾ ನನ್ನತ್ರ ಇದ್ದಬದ್ದ ದುಡ್ಡನ್ನೆಲ್ಲ ಕಿತ್ಕೊಂಡು ಹೋಗಿ ಸರಾಯಿ ಅಂಗಡಿಗೆ ಸುರಿತಾನೆ. ಹಿಂಗೆ ಮಾಡಿದ್ರೆ ಹೊಟ್ಟೆ ತುಂಬು ಎಂದರೆ ಹೆಂಗೆ ತುಂಬುತ್ತದೆ ಎಂದು ಮಾತನಾಡುತ್ತಿರುತ್ತಾಳೆ. ಈ ರೀತಿ ತಮ್ಮನ್ನು ಕುರಿತು ಮಾತನಾಡಿದರೆ 'ಲೊಟಗುವುದು' ಎಂದು ಕರೆಯುತ್ತಾರೆ. ಈ ರೀತಿ ಕಲ್ಯಾಣಿ ಲೊಟಗುತ್ತಿದ್ದರಿಂದ ನಿಂಗಯ್ಯ ಈ ಗಾದೆಯನ್ನು ಹೇಳುತ್ತಾನೆ. ಕಲ್ಯಾಣಿ ತನ್ನ ಮನೆಯ ಪರಿಸ್ಥಿತಿಯನ್ನು ಹೇಳುತ್ತಿದ್ದಾಳೆ. ಜೀವನವನ್ನು ಕುರಿತು ಯೋಚಿಸುತ್ತಿದ್ದಾಳೆ. ಜವಬ್ದಾರಿಯುತ ಗೃಹಿಣಿ ಮಾತನಾಡುವ ರೀತಿಯಲ್ಲಿಯೇ ಇಲ್ಲಿ ಕಲ್ಯಾಣಿಯೂ ಮಾತನಾಡಿದ್ದಾಳೆ. ಇದು ಒಬ್ಬ ಮಹಿಳೆಯ ಗುಣವನ್ನು ಸೂಚಿಸುವ ಗಾದೆಯಾಗಿದೆ ಎಂದು ಹೇಳಬಹುದು.

ರೆಡ್ಡಿ ಹೆಚ್.ಎನ್, ನಿರ್ದೇಶನದ 'ಕಾವೇರಿ' ಚಲನಚಿತ್ರದಲ್ಲಿ ಕೆಳಜಾತಿ ವ್ಯಕ್ತಿ ದೊಡ್ಡನರಸ ತನ್ನ ಮಗನನ್ನು ಉದ್ದೇಶಿಸಿ ಹೇಳುವ ಗಾದೆಯನ್ನು ಉದಾಹರಣೆಯಾಗಿ ನೋಡಬಹುದು. "ತಲೆ ಗಟ್ಟಿ ಆಗೈತೆ ಅಂತ ಬಂಡೆಗೆ ಗುದಿದ್ರೆ ನಮ್ಮ ತಲೆನೆ ವಡಿಯಾದು" (ಚಲನಚಿತ್ರ: ಕಾವೇರಿ) ಎಂದು ದೊಡ್ಡನರಸ ಹೇಳುತ್ತಾನೆ. ಯಾಕೆ ಈ ಗಾದೆಯನ್ನು ಹೇಳುತ್ತಾನೆ ಎಂದರೆ ಬ್ರಾಹ್ಮಣ ವ್ಯಕ್ತಿ ವೇದಾಂತಚಾರ್ ಕೆಳಜಾತಿ ವ್ಯಕ್ತಿಯಾದ ಕಾವೇರಿ ದೇವಸ್ಥಾನವನ್ನು ಪ್ರವೇಶಿಸಿದಳು ಎಂಬ ಕಾರಣಕ್ಕೆ ಹೊರಗೆ ನೂಕಿದ್ದರಿಂದ ಕಾವೇರಿ ತಲೆ ಗೋಡೆಗೆ ಬಿದ್ದು ಪ್ರಜ್ಞೆ ತಪ್ಪುತ್ತಾಳೆ. ಈ ಘಟನೆಯಿಂದ ಕೋಪಗೊಂಡ ಕಾವೇರಿಯ ತಮ್ಮ ಚಿಕ್ಕನರಸ ಕಲ್ಲು ತಗೊಂಡು ದೊಡ್ಡುಬುದ್ದ್ಯೋರ ತಲೆಚಚ್ಚಾಕಿ ಬಿಡ್ಲ ಅನ್ನಿಸುತ್ತಿದೆ ಎಂದಾಗ ದೊಡ್ಡನರಸ ಈ ಗಾದೆಯನ್ನು ಹೇಳುತ್ತಾನೆ. ಮೇಲ್ಜಾತಿ ವ್ಯಕ್ತಿಗಳಾದ ವೇದಾಂತಚಾರ್ ಆರ್ಥಿಕವಾಗಿ, ಸಾಮಾಜಿಕವಾಗಿ ಬಲಿಷ್ಠರಾಗಿದ್ದಾರೆ ಅವರ ಸಹವಾಸಕ್ಕೆ ಹೋದರೆ ನಾವೂ ಇನ್ನೂ ಹಾಳಾಗುತ್ತೇವೆ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾನೆ. ಅವರ ವಿರುದ್ಧ ನಾವು ಏನಾದರೂ ತಿರುಗಿ ಬಿದ್ದರೆ ಊರಲ್ಲಿ ಸಂತೋಷದಿಂದ ಬದುಕಲು ಸಾಧ್ಯವಿಲ್ಲ. ಎಲ್ಲಾ ರೀತಿಯಿಂದಲೂ ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎಂಬ ಆತಂಕ ದೊಡ್ಡನರಸಯ್ಯನದಾಗಿದೆ. ನಾವು ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಾಬಲ್ಯರಲ್ಲ ಆದ್ದರಿಂದ ಅವರ ದೌರ್ಜನ್ಯವನ್ನು ಅನುಭವಿಸಲೇ ಬೇಕಾಗುತ್ತದೆ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾನೆ. ಈ ಗಾದೆಯ ಮೂಲಕ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ವಿಜಯ್ ನಿರ್ದೇಶನದ 'ಸನಾದಿ ಅಪ್ಪಣ್ಣ' ಚಲನಚಿತ್ರದಲ್ಲಿ ಕೆಳಜಾತಿ ವ್ಯಕ್ತಿ ಅಪ್ಪಣ್ಣ ತನ್ನ ಹೆಂಡ್ತಿಗೆ ಹೇಳುವ ಗಾದೆ ಮಾತು ಈ ರೀತಿಯಾಗಿದೆ.

"ಬಡವ ನೀನು ಮಡಗಿದಂಗೆ ಇರು" ಅಂತ ನನ್ನ ಜಾಗದಲ್ಲಿ ನಾನು ಇದ್ದಿದ್ರೆ ಅವ್ರುಯಾಕೆ ನನ್ನ ಅಂತಾ ಇದ್ರು"(ಚಲನಚಿತ್ರ: ಸನಾದಿ ಅಪ್ಪಣ್ಣ) ಎಂದು ತನ್ನ ಹೆಂಡತಿಗೆ ಹೇಳುತ್ತಾನೆ. ಈ ಗಾದೆಯನ್ನು ಬಳಸುವ ಕಾರಣವೇನೆಂದರೆ ಮದುವೆ ಊಟದ ಪಂಕ್ತಿಯಿಂದ ತನ್ನ ಗಂಡನನ್ನು ಮೇಲೆಬ್ಬಿಸಿ ಅವಮಾನ ಮಾಡಿದರು ಎಂದು ಅಪ್ಪಣ್ಣನ ಹೆಂಡತಿ ಬಸಂತಿ ಬೇಸರ ಮಾಡಿಕೊಂಡಿರುತ್ತಾಳೆ. ಆಗ ಈ ಗಾದೆಯನ್ನು ಬಳಸುತ್ತಾನೆ. ಇಲ್ಲಿ ಜಾತಿ ಮತ್ತು ಪ್ರತಿಷ್ಠೆಯ ಎರಡು ವೈರುಧ್ಯಗಳು ಕಾಣುತ್ತವೆ. ಅಪ್ಪಣ್ಣ ಕೊರವ ಜಾತಿಗೆ ಸೇರಿದ ವ್ಯಕ್ತಿ ಆದ್ದರಿಂದ ಮನೆಯ ಒಳಗೆ ಪ್ರವೇಶ ಮತ್ತು ಒಳಗೆ ಬಂದು ಎಲ್ಲರೊಡನೆ ಊಟ ಮಾಡುವ ಅವಕಾಶವಿಲ್ಲ. ಆದರೆ ಅದೇ ಸಮುದಾಯಕ್ಕೆ ಸೇರಿದ ಇನ್ನೊಬ್ಬ ವ್ಯಕ್ತಿ ಆಧುನಿಕ ಶಿಕ್ಷಣ ಪಡೆದು ದೊಡ್ಡ ಸಾಹೇಬನಾಗಿದ್ದಾನೆ. ತನ್ನ ಸಮುದಾಯದ ವಿದ್ಯೆಯನ್ನು ಕಲಿತ ಅಪ್ಪಣ್ಣನನ್ನು ಮದುವೆಯಲ್ಲಿ ಶಹನಾಯಿ ನುಡಿಸಲು ಆಹ್ವಾನಿಸಿದ್ದಾರೆ. ಹಾಗೆಯೇ ಸಾಹೇಬನನ್ನು ಅತಿಥಿಯಾಗಿ ಆಹ್ವಾನಿಸಿದ್ದಾರೆ. ಇಲ್ಲಿ ಇಬ್ಬರು ಒಂದೇ ಜಾತಿಗೆ ಸೇರಿದವರು. ಬ್ರಾಹ್ಮಣ ಸಮುದಾಯದ ವ್ಯಕ್ತಿಗಳು ಅಲ್ಲಿ ಸಾಹೇಬರಿಗೆ ಕೊಡುವ ಗೌರವ ಮತ್ತು ಸಾಮಾಜಿಕ ಸ್ಥಾನಮಾನ ಅಪ್ಪಣ್ಣನಿಗೆ ನೀಡುವುದಿಲ್ಲ. ಸಕಲ ಗೌರವ ಮರ್ಯಾದೆಗಳನ್ನು ಕೊಟ್ಟು ಮನೆಯ ಒಳಗೆ ಎಲ್ಲಾ ಮೇಲ್ಜಾತಿ ವ್ಯಕ್ತಿಗಳ ಜೊತೆ ಊಟದ ಪಂಕ್ತಿಯಲ್ಲಿ ಆ ಸಾಹೇಬರನ್ನು ಕೂಡಿಸಿ ಊಟ ಮಾಡುವ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಆ ಸಾಹೇಬರ ಸಮುದಾಯಕ್ಕೆ ಸೇರಿದ ಅಪ್ಪಣ್ಣನಿಗೆ ಇದು ನಿಷಿದ್ಧ. ಸಾಹೇಬ್ರು ಬಲವಂತ ಮಾಡಿ ಅವನನ್ನು ಊಟಕ್ಕೆ ಮನೆಯ ಒಳಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಬ್ರಾಹ್ಮಣ ಹಿರಿಯ ವ್ಯಕ್ತಿ ಅಂದರೆ ಮದುವೆ ಗಂಡಿನ ತಂದೆ ಬಂದು ಅಪ್ಪಣ್ಣನನ್ನು ಅವಮಾನಿಸುತ್ತಾನೆ. 'ಏನಯ್ಯ ಇಲ್ಲಿ ಬಂದು ಕುಳ್ತುಬಿಟ್ಟೆ ಇದೇನು ಕೊರವರ ಕೇರಿ ಸಮಾರಾಧನೆ ಅಂದ್ಕೊಂಡು ಬಿಟ್ಯ. ನಿನ್ನ್ಯಾರು ಇಲ್ಲಿ ಕರ್ಕೊಂಡು ಬಂದು ಕೂರುಸ್ದೋರು ಎದ್ದೇಳಯ್ಯ ಮೇಲೆ. ಯಾವ ಧೈರ್ಯದ ಮೇಲೆ ಬಂದು ಕುಳ್ತುಕೊಂಡ್ಯೆ ಅಂತ' ಅಪ್ಪಣ್ಣನನ್ನು ಅವಮಾನಿಸುತ್ತಾನೆ. ಇದರಿಂದ ಅಪ್ಪಣ್ಣನ ಹೆಂಡತಿಗೆ ಬೇಸರವಾಗುತ್ತದೆ. ಆಗ ಮನೆಯಲ್ಲಿ ಈ ಗಾದೆಯನ್ನು ಹೇಳುತ್ತಾನೆ. ಆ ಬ್ರಾಹ್ಮಣ ವ್ಯಕ್ತಿಗೆ ಜಾತಿ ಮುಖ್ಯವಾಗುತ್ತದೆಯೋ? ಅಥವಾ ಪ್ರತಿಷ್ಠೆ ಮುಖ್ಯವಾಗುತ್ತದೆಯೋ?. ಇಲ್ಲಿ ಜಾತಿನೇ ಮುಖ್ಯವಾಗಿದ್ದರೆ ಅದೇ ಸಮುದಾಯದ ಆ ಸಾಹೇಬರನ್ನು ಮದುವೆಗೆ ಆಹ್ವಾನಿಸುತ್ತಿರಲಿಲ್ಲ. ಆಧುನಿಕ ಶಿಕ್ಷಣ ಪಡೆದು ದೊಡ್ಡ ಹುದ್ದೆಯಲ್ಲಿದ್ದಾನೆ ಆದ್ದರಿಂದ ಸಮಾಜದಲ್ಲಿ ಒಂದು ಉತ್ತಮವಾದ ಸ್ಥಾನಮಾನ ಪಡೆದಿದ್ದಾನೆ ಎಂಬ ಕಾರಣಕ್ಕೆ ಅವರನ್ನು ಆಹ್ವಾನಿಸಿದ್ದಾನೆ. ಹಾಗಾಗಿ ಅವರಿಗೆ ಮುಟ್ಟಿಸಿಕೊಳ್ಳುವ ಮತ್ತು ಜೊತೆಗೆ ಊಟ ಮಾಡುವವರಿಗೆ ಅಸ್ಪೃಶ್ಯತೆ ಎಂಬುದು

ಇಲ್ಲ. ಶಿಕ್ಷಣ, ಆರ್ಥಿಕ ಸ್ಥಿತಿ ಮತ್ತು ಸಮಾಜದಲ್ಲಿ ಉತ್ತಮ ಸ್ಥಾನಮಾನ ಇಲ್ಲದೆ ಇದ್ದರೆ ಅಲ್ಲಿಯವರೆಗೂ ಕೂಡ ಅವಕಾಶವಿಲ್ಲ ಎಂಬುದು ತಿಳಿಯುತ್ತದೆ. ಈ ರೀತಿಯಾ ಯಾವ ಅಂಶಗಳು ಅಪ್ಪಣ್ಣನಲ್ಲಿ ಇಲ್ಲದಿದ್ದುದರಿಂದ ಅವನನ್ನು ಊಟದ ಪಂಕ್ತಿಯಿಂದ ಮೇಲೆಬ್ಬಿಸಿ ಅವಮಾನ ಮಾಡಿ ಕಳಿಸುತ್ತಾರೆ. ಅವರ ಮನೆಯ ಒಳಗೆ ಹೋಗಿದ್ದು ನನ್ನದೆ ತಪ್ಪು 'ಬಡವ ನೀನು ಮಡಿಗಿದಾಂಗೆ ಇರು' ಅಂತ ನಾನಿದ್ದಿದ್ದರೆ ಈ ರೀತಿಯ ಅವಮಾನವನ್ನು ಎದುರಿಸಬೇಕಾಗಿರಲಿಲ್ಲ ಎಂಬ ಮಾತನ್ನು ಹೇಳುವುದು ಕಾಣುತ್ತದೆ. ಈ ಗಾದೆ ಸೃಷ್ಟಿಸಿರುವವರ ಮನೋಧೋರಣೆ ಏನು ಎಂಬುದು ಇಲ್ಲಿ ತಿಳಿಯುತ್ತದೆ. ಅಂದರೆ ಬಡವ ಯಾವಾಗಲೂ ಅವನ ಮಿತಿಯನ್ನು ಅರ್ಥಮಾಡಿಕೊಂಡು ಇರಬೇಕು ಯಾವುದೇ ರೀತಿಯ ಗೌರವಕ್ಕೆ, ಸಮಾನತೆಗೆ ಅರ್ಹನಲ್ಲ ಎಂದು ವ್ಯವಸ್ಥೆಯ ಯತಾಸ್ಥಿತಿಯನ್ನು ಹಾಗೆ ಕಾಪಾಡಿಕೊಂಡಿರಲು ಮೇಲ್ವರ್ಗದವರು ಸೃಷ್ಟಿಸಿರುವಂತ ಗಾದೆ ಎನಿಸುತ್ತದೆ. ಬಡವರೆಲ್ಲರೂ ಶ್ರೀಮಂತರಾದರೆ, ಜಮೀನ್ದಾರರು, ಶ್ರೀಮಂತರಿಗೆ ಅಸ್ತಿತ್ವವಿರುವುದಿಲ್ಲ ಎಂಬ ಕಾರಣಕ್ಕೆ ಈ ಗಾದೆಯನ್ನು ಸೃಷ್ಟಿಸಿದ್ದಾರೆ ಎಂದು ಅನಿಸುತ್ತದೆ. ಅಂದರೆ ಅವನ ಮಿತಿಯನ್ನು ಮೀರುವ ಪ್ರಯತ್ನವನ್ನು ಮಾಡಬಾರದು ಎಂಬ ಆಶಯ ಈ ಗಾದೆಯಲ್ಲಿದೆ. ಇದರ ಮೂಲಕ ಅಪ್ಪಣ್ಣನ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಕಂಡುಬರುತ್ತವೆ.

ಹೀಗೆ ಕೆಳಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನೇ ಉದ್ದೇಶಿಸಿ ಹೇಳಿರುವ ಗಾದೆಗಳಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ. ಗಾದೆಗಳಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿರುವ ಕ್ರಮ ಇದಾಗಿದೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಬಳಸಿರುವ ಗಾದೆಗಳಲ್ಲಿ ಜಾತಿ, ಲಿಂಗ, ವರ್ಗಕ್ಕೆ ಸಂಬಂಧಿಸಿದ ಗಾದೆಗಳು ಹೆಚ್ಚಾಗಿ ಕಂಡುಬರುತ್ತವೆ. ಅದರಲ್ಲಿಯೂ ಬ್ರಾಹ್ಮಣರು ಜಾತಿಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿದರೆ, ಒಕ್ಕಲಿಗ, ಗೌಡ ಇನ್ನಿತರೆ ಮೇಲ್ಜಾತಿ ಸಮುದಾಯಗಳು ವರ್ಗ, ಅಂತಸ್ತು, ಆರ್ಥಿಕತೆಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಕೆಳಜಾತಿ ವ್ಯಕ್ತಿಗಳು ಮೇಲ್ಜಾತಿ ವ್ಯಕ್ತಿಗಳಿಗೆ ಬಳಸಿರುವ ಗಾದೆಗಳಲ್ಲಿ ಗುಣ, ನಿಸರ್ಗ, ವರ್ಗಕ್ಕೆ ಸಂಬಂಧಿಸಿದ ಗಾದೆಗಳನ್ನು ಬಳಸಿರುವುದು ಕಂಡುಬರುತ್ತದೆ. ಮೇಲ್ಜಾತಿ ವ್ಯಕ್ತಿಗಳನ್ನು ಕುರಿತು ಬಳಸಿರುವ ಗಾದೆಗಳು ಕಂಡುಬರುವುದು ವಿರಳ ಎಂದೇ ಹೇಳಬಹುದು. ಈ ರೀತಿಯಾಗಿ ಗಾದೆಗಳಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಅಭಿವ್ಯಕ್ತಗೊಂಡಿವೆ. ಈ ಗಾದೆಗಳ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲಾಗಿದೆ.

ಈ ಅಧ್ಯಾಯದಲ್ಲಿ ಬೈಗುಳ ಮತ್ತು ಗಾದೆಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಅಭಿವ್ಯಕ್ತಿಗೊಂಡಿರುವ ಬಗೆಯನ್ನು ಕುರಿತು ಚರ್ಚಿಸಲಾಗಿದೆ. ಜಾತಿ, ಲಿಂಗ, ವರ್ಗ, ಆರ್ಥಿಕತೆ, ಬಡತನ, ಗುಣ ಮುಂತಾದ ಅಂಶಗಳನ್ನು ಕುರಿತು ಬೈಗುಳ ಮತ್ತು ಗಾದೆಗಳು ಬಳಕೆಗೊಂಡಿವೆ. ಈ ಸಂಕಥನಗಳನ್ನು ಮೇಲ್ಜಾತಿಯವರು ಕೆಳಜಾತಿಯವರಿಗೆ ಬಳಸಿದ ಬೈಗುಳ ಮತ್ತು ಗಾದೆಗಳಲ್ಲಿ

ಕೆಳಜಾತಿಯವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳು ಕಂಡುಬರುತ್ತವೆ. ಕೆಳಜಾತಿಯವರು ಮೇಲ್ಜಾತಿಯವರನ್ನು ಕುರಿತು ಬೈಗುಳ ಮತ್ತು ಗಾದೆಗಳನ್ನು ಬಳಸಿದಾಗ ವರ್ಗದ ಅಂತರ ಮತ್ತು ಅಸಹಾಯಕತೆಯ ಚಹರೆಗಳು ಕಂಡುಬರುತ್ತವೆ. ಬೈಗುಳ ಮತ್ತು ಗಾದೆಗಳ ಮೂಲಕ ಬಳಸಿರುವವರ ಮನೋಧೋರಣೆ ಏನೆಂಬುದು ತಿಳಿಯುತ್ತದೆ. ಅವರ ಜಾತಿ, ಸಾಮಾಜಿಕ ಅಂತಸ್ತು, ಲಿಂಗ ಅಸಮಾನತೆಗಳು, ವರ್ಗಗಳು ಅಲ್ಲಿ ಕೆಲಸ ಮಾಡುತ್ತಿರುತ್ತವೆ. ಜಾತಿಯಲ್ಲಿ ಮೇಲೆಂದು ಭಾವಿಸಿರುವವರು ಕೆಳಜಾತಿಯವರ ಸಮುದಾಯವನ್ನು ಉಲ್ಲೇಖಿಸಿ ಬೈಗುಳ ಮತ್ತು ಗಾದೆಗಳ್ನು ಬಳಸಿದರೆ, ಜಮೀನ್ದಾರ ಮತ್ತು ಶ್ರೀಮಂತರು ಕೆಳಜಾತಿ ಬಡವರ ಆರ್ಥಿಕತೆ ಮತ್ತು ಸಾಮಾಜಿಕತೆಯ ಆಧಾರದ ಮೇಲೆ ಭಾಷಿಕ ಸಂಕಥನಗಳಾದ ಬೈಗುಳ ಮತ್ತು ಗಾದೆಗಳ ಮೂಲಕ ಅವರ ಮನೋಧೋರಣೆಯನ್ನು ಅಭಿವ್ಯಕ್ತಿಸುತ್ತಾರೆ. ಈ ರೀತಿಯಾಗಿ ಸಂಕಥನಗಳಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಅಭಿವ್ಯಕ್ತಿಗೊಂಡಿರುವುದರ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಕಂಡುಕೊಳ್ಳಲಾಗಿದೆ. ಗಾದೆ ಮತ್ತು ಬೈಗುಳಗಳ ವಸ್ತು ವಿಷಯದ ಸ್ವರೂಪಕ್ಕೆ ಬಳಸುವವರ ಮತ್ತು ಬಳಸಲ್ಪಡುವವರ ಸಾಮಾಜಿಕ ನೆಲೆಗಳಲ್ಲಿ ಇರುವ ಸಂಬಂಧಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

* * *


ಕೋಷ್ಟಕ–೧

ಬ್ರಾಹ್ಮಣ ಮತ್ತು ಜಮೀನ್ದಾರ/ಒಕ್ಕಲಿಗ ಪಾತ್ರಗಳು ಹೆಚ್ಚಾಗಿ ಬಳಸಿರುವ ಬೈಗುಳಗಳ ಪಟ್ಟಿ

ಕ್ರ.ಸಂ	ಬ್ರಾಹ್ಮಣ ಪಾತ್ರಗಳು	ಜಮೀನ್ದಾರ/ಒಕ್ಕಲಿಗ ಪಾತ್ರಗಳು
೧.	ಮುಂಡೆಗಂಡ	ಕತ್ತೆಬಡವ
೨.	ಚಾಂಡಾಲನನ್ಮಗ	ತಿರ್ಬೋಕಿಬಡ್ಡಿಮಕ್ಳ
೩.	ಶೂದ್ರಮುಂಡೆದೆ	ಗುಲಾಮಬಡ್ಡಿಮಗನೆ
೪.	ಪ್ರಾರಬ್ಧಮುಂಡೆದು	ಬಡವರಾಸ್ಕಲ್
೫.	ದರಿದ್ರ ಮುಂಡೆ	ಸುವ್ವರ್‌ಸೂಳೆಮಕ್ಳ
೬.	ಹೊಲೆಮುಂಡೆಮಗ	ಲೌಡಿಮಕ್ಳ

ಕೋಷ್ಟಕ–೨

ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳಲ್ಲಿ ಹೆಚ್ಚಾಗಿ ಬಳಕೆಯಾಗಿರುವ ಗಾದೆಗಳು



ಬ್ರಾಹ್ಮಣ ಸಮುದಾಯದ ಪಾತ್ರಗಳು ಜಾತಿಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಜಮೀನ್ದಾರ ಮತ್ತು ಒಕ್ಕಲಿಗ ಪಾತ್ರಗಳು ವರ್ಗ, ಅಂತಸ್ತು ಮತ್ತು ಆರ್ಥಿಕತೆಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಕೆಳಜಾತಿ ಪಾತ್ರಗಳು ಗುಣ, ವರ್ಗ ಮತ್ತು ಪ್ರಕೃತಿಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿದ್ದಾರೆ.

ಅಧ್ಯಾಯ: ಆರು

ಅಶಾಬ್ದಿಕ ಸಂವಹನ: ಸಾಮಾಜಿಕ ಚಹರೆಗಳು

ಅಧ್ಯಾಯ: ಆರು

ಅಶಾಬ್ದಿಕ ಸಂವಹನ: ಸಾಮಾಜಿಕ ಚಹರೆಗಳು

೬.೧. ಆಂಗಿಕ ಭಾಷೆ : ಸಾಮಾಜಿಕ ಚಹರೆಗಳು

೬.೧.೧. ಆಂಗಿಕ ಭಾಷೆ ಕೆಳಜಾತಿ ಪಾತ್ರಗಳು

೬.೧.೨. ಆಂಗಿಕ ಭಾಷೆ : ಮೇಲ್ಜಾತಿ ಪಾತ್ರಗಳು

೬.೨. ಸಂಕೇತ ಭಾಷೆ : ಸಾಮಾಜಿಕ ಚಹರೆಗಳು

೬.೨.೧. ಸಂಕೇತ ಭಾಷೆ : ಕೆಳಜಾತಿ ಪಾತ್ರಗಳು

೬.೨.೨. ಸಂಕೇತ ಭಾಷೆ : ಮೇಲ್ಜಾತಿ ಪಾತ್ರಗಳು

ಅಧ್ಯಾಯ: ಆರು

ಅಶಾಬ್ದಿಕ ಸಂವಹನ: ಸಾಮಾಜಿಕ ಚಹರೆಗಳು

ಭಾಷೆ ಮನುಷ್ಯರ ನಡುವೆ ಸಂವಹನ ಮಾಧ್ಯಮವಾಗಿ ಕೆಲಸ ನಿರ್ವಹಿಸುತ್ತಿದೆ. ಸಂವಹನ ಎರಡು ರೀತಿಯಾಗಿರುತ್ತದೆ. ಒಂದು ಮಾತು, ಇನ್ನೊಂದು ಬರಹ. ಇದು ಶಾಬ್ದಿಕ ಸಂವಹನ ಪ್ರಕ್ರಿಯೆ. ಮಾತು ಮತ್ತು ಬರಹ ಭಾಷೆಯ ಪ್ರಕ್ರಿಯೆಯಿಲ್ಲದೆ ಮನುಷ್ಯರು ತಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ಸಂಕೇತಗಳು ಮತ್ತು ಆಂಗಿಕ ಅಭಿನಯದ ಮೂಲಕ ಅಭಿವ್ಯಕ್ತಿಸುತ್ತಾರೆ. ಈ ಪ್ರಕ್ರಿಯೆಯನ್ನು ಅಶಾಬ್ದಿಕ ಸಂವಹನ ಎಂದು ಹೇಳಬಹುದು.

ಅಶಾಬ್ದಿಕ ಸಂವಹನ ಭಾಷೆಯ ಪ್ರಕ್ರಿಯೆಯಲ್ಲಿ ಒಂದು. ಜಗತ್ತಿನಲ್ಲಿ ಪ್ರತಿಯೊಬ್ಬರು ಒಂದಲ್ಲ ಒಂದು ಸಂದರ್ಭದಲ್ಲಿ ಅಶಾಬ್ದಿಕ ಸಂವಹನ ಪ್ರಕ್ರಿಯೆಗೆ ಒಳಗಾಗಿರುತ್ತಾರೆ. ಮಾತಿನ ಜೊತೆ ಅಶಾಬ್ದಿಕ ಸಂವಹನಗಳನ್ನು ಕೂಡ ಕೆಲವು ಸಂದರ್ಭದಲ್ಲಿ ಬಳಸಲಾಗುತ್ತದೆ ಎಂದು ಹೇಳಬಹುದು. ಸಾಂಬಮೂರ್ತಿ ಅವರ ಭಾಷೆ ಮತ್ತು ಅಶಾಬ್ದಿಕ ಸಂವಹನ ಪುಸ್ತಕದಲ್ಲಿ ಅಶಾಬ್ದಿಕ ಸಂವಹನ ಕುರಿತು ಹೇಳಿರುವ ಮಾತುಗಳನ್ನು ನೋಡಬಹುದು. "ಅಶಾಬ್ದಿಕ ಸಂವಹನ ಎಂದರೆ, ಇಬ್ಬರು ವ್ಯಕ್ತಿಗಳ ಸಮಕ್ಷಮದಲ್ಲಿ ಶಾಬ್ದಿಕವಲ್ಲದ ಅಥವಾ ಪದಗಳ ಬಳಕೆಯಿಲ್ಲದೆ ಆಗುವ ಸಂವಹನ. ಅನೇಕ ವಿದ್ವಾಂಸರು ಅಶಾಬ್ದಿಕ ಸಂವಹನವನ್ನು ತಮ್ಮದೇ ಆದ ರೀತಿಯಲ್ಲಿ ಹೇಳಿದ್ದಾರೆ. "ಪದರಹಿತವಾದ/ಶಬ್ದರಹಿತವಾದ ಸಂವಹನ"(ಮೈಯರ್ಸ್ ಮತ್ತು ಮೈಯರ್ಸ್, ೧೯೭೩). "ಪದವಲ್ಲದ ಪ್ರತಿಯೊಂದು ಸನ್ನೆ/ಸೂಚನೆ"(ವೆನ್‌ಬರ್ಗ್ ಮತ್ತು ವೆಲ್‌ಮಟ್, ೧೯೭೩). "ಭಾಷೆಯಲ್ಲಿ/ಶಬ್ದಗಳಲ್ಲಿ ವ್ಯಕ್ತಪಡದ ಮಾನವನ ಪ್ರತಿಯೊಂದು ಪ್ರತಿಕ್ರಿಯೆ"(ನ್ಯಾಪ್, ೧೯೭೨). "ಮಾತಿಗಿಂತ ಭಿನ್ನವಾದ ಸಂವಹನ"(ತಿರುಮಲೈ, ೧೯೮೭) (ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಪುಟ-೬೪) ಈ ರೀತಿಯಾಗಿ ಅಶಾಬ್ದಿಕ ಸಂವಹನದ ಬಗ್ಗೆ ಕುರಿತು ಅನೇಕ ವಿದ್ವಾಂಸರು ಹೇಳಿರುವುದನ್ನು ಗಮನಿಸಬಹುದು.

ಪದಗಳಲ್ಲಿ ಹೇಳುವುದಕ್ಕೆ ಆಗದಿರುವ ಸಂದರ್ಭದಲ್ಲಿ ಅಥವಾ ಮಾತಿನ ಜೊತೆ ಜೊತೆಗೆ ಅಭಿನಯದ ಮೂಲಕ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುತ್ತಾರೆ. ಉದಾಹರಣೆಗೆ, ಬೈಯ್ಯುವ ಅಥವಾ ಗದರಿಸುವ ಬದಲು ಕಣ್ಣಿನಿಂದ ದುರುಗುಟ್ಟಿ ನೋಡುವುದು' ತಪ್ಪನ್ನು ಮಾಡಿದ ವ್ಯಕ್ತಿ ತಲೆ ಬಗ್ಗಿಸಿ, ಕೈಕಟ್ಟಿ ನಿಲ್ಲುವುದು. ಇನ್ನೂ ಮುಂತಾದ ರೀತಿಯಲ್ಲಿ ಭಾವನೆಗಳನ್ನು ಆಂಗಿಕವಾಗಿ ಅಭಿವ್ಯಕ್ತಿಸಬಹುದು. ಈ ಪ್ರಕ್ರಿಯೆ ಅಶಾಬ್ದಿಕ ಸಂವಹನದ ಪ್ರಕ್ರಿಯೆ.

ಹಾಗೆಯೇ ಸಂಕೇತಗಳು ಸಹ ಹಲವು ಸಂದರ್ಭದಲ್ಲಿ ಅಶಾಬ್ದಿಕ ಸಂವಹನದಲ್ಲಿ ಕಾರ್ಯನಿರ್ವಹಿಸುತ್ತದೆ. ಸಂಕೇತಗಳ ಮೂಲಕವೂ ವ್ಯಕ್ತಿಗಳ ಮನೋಧೋರಣೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಸಂಕೇತ ಭಾಷೆಯಲ್ಲಿ ವ್ಯಕ್ತಿಗಳು ಕೈಗಳನ್ನು ಬಳಸಿ ಅನೇಕ ಆಕೃತಿಗಳನ್ನು ರಚಿಸುವುದರ ಮೂಲಕ ಸಂವಹನ ನಡೆಯುತ್ತದೆ. 'ಸಾಂಬಮೂರ್ತಿ' ಅವರ 'ಭಾಷೆ ಮತ್ತು ಅಶಾಬ್ದಿಕ ಸಂವಹನ' ಎಂಬ ಪುಸ್ತಕದಲ್ಲಿ ಸಂಕೇತ ಭಾಷೆ ಕುರಿತು ಈ ರೀತಿಯಾಗಿ ಹೇಳಿದ್ದಾರೆ. "ಸಂವಹನಕ್ಕಾಗಿ ಎಲ್ಲರೂ ಭಾಷೆಯನ್ನು ಬಳಸುತ್ತೇವೆ. ಆದರೆ ಶ್ರವಣದೋಷವಿರುವವರಿಗೆ ಭಾಷೆಯ ಬಳಕೆ ಸಾಧ್ಯವಾಗುವುದಿಲ್ಲ. ಅವರು ಭಾಷೆಗೆ ಬದಲಾಗಿ ಸಂಕೇತಗಳನ್ನು ಬಳಸುತ್ತಾರೆ. ಅಂದರೆ ಅವರ ಅನಿಸಿಕೆಗಳೆಲ್ಲವೂ ಸಂಕೇತಗಳ ಮೂಲಕವೇ ವ್ಯಕ್ತವಾಗಬಹುದು. ಆದರೆ ಇವು ಕೇವಲ ಭಾವಾಭಿಯನ(ಜೆಸ್ಟರ್) ಮಾತ್ರ ಅಲ್ಲ. ಭಾಷೆ ಯಾವ ರೀತಿ ವ್ಯಾಕರಣಬದ್ಧವಾಗಿರುತ್ತದೋ ಅದೇ ರೀತಿಯಲ್ಲಿ ಈ ಸಂಕೇತಗಳ ಬಳಕೆಗೂ ನಿಯಮಗಳಿರುತ್ತವೆ. ಆದ್ದರಿಂದಲೇ ಇವುಗಳನ್ನು 'ಸಂಕೇತಭಾಷೆ' ಎಂದು ಕರೆಯುತ್ತೇವೆ.

ಸಂವಹನದ ಉದ್ದೇಶಕ್ಕಾಗಿ ಭಾಷೆಗೆ ಬದಲಾಗಿ ಶರೀರದ ಅಂಗಗಳನ್ನು ಬಳಸಿ ಮಾಡಲಾಗುವ ಭಾವಾಭಿನಯವೇ ಸಂಕೇತ ಭಾಷೆ. ಹಲವಾರು ಸಂದರ್ಭಗಳಲ್ಲಿ ಭಾಷೆಗೆ ಬದಲಾಗಿ ಸಂಕೇತಗಳನ್ನು ಮಾಹಿತಿ ಸಂವಹನಕ್ಕಾಗಿ ಬಳಸುತ್ತೇವೆ. ಎಲ್ಲೆಲ್ಲಿ ಸಂವಹನಕ್ಕಾಗಿ ಭಾಷೆಯ ಬಳಕೆ ಸಾಧ್ಯವಿಲ್ಲವೋ, ಬೇರೆ ಭಾಷೆಯನ್ನು ಬಳಸುತ್ತಾರೋ, ಎಲ್ಲೆಲ್ಲಿ ಮಾತಿನ ಮೂಲಕ ನಿರ್ದೇಶನ ನೀಡಲು ಸಾಧ್ಯವಿಲ್ಲವೋ ಅಲ್ಲೆಲ್ಲಾ ಸಂಕೇತ ಭಾಷೆಯು ಬಳಕೆಯಾಗುತ್ತದೆ. ಇಷ್ಟೇ ಅಲ್ಲದೆ ಶ್ರವಣದೋಷವುಳ್ಳವರು, ಕೆಲವೊಂದು ಧಾರ್ಮಿಕಾಚರಣೆಗಳಲ್ಲಿ(ಸಿಸ್ಟರ್ಶಿನ್ ಸನ್ಯಾಸಿಗಳು) ಮತ್ತು ಕೆಲವೊಂದು ಬುಡಕಟ್ಟು ಜನರು ಈ ಸಂಕೇತ ವ್ಯವಸ್ಥೆಯನ್ನು ಬಳಸುತ್ತಾರೆ." (ಸಾಂಬವಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಪುಟ-೭೬) ಎಂದು ಹೇಳಲಾಗಿದೆ. ಆದರೆ ಈ ಅಧ್ಯಾಯದಲ್ಲಿ ಸಂಕೇತ ಭಾಷೆ ಎಂದರೆ ಮಾತು ಮತ್ತು ಬರಹದ ಭಾಷೆಗೆ ಬದಲಾಗಿ ಶರೀರದ ಅಂಗಗಳನ್ನು ಬಳಸಿ ಮಾಡಲಾಗುವ ಭಾವಾಭಿನಯವನ್ನು ಸಂಕೇತ ಭಾಷೆ ಎಂದು ಪರಿಗಣಿಸಿಲ್ಲ. ಇಲ್ಲಿ ಜಾತಿಯ ಸಂಕೇತಗಳಾದ ಜನಿವಾರ, ವಿಭೂತಿ, ಶಿವದಾರ, ತಮಟೆ, ಉಡುಪು ಮುಂತಾದ ಸಂಕೇತಗಳ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿಯ

ಪಾತ್ರಗಳ ಸಾಮಾಜಿಕ ಚಹರೆಯನ್ನು ಗುರುತಿಸಲಾಗುತ್ತದೆ. ಈ ಪ್ರಕ್ರಿಯೆಯನ್ನು ಇಲ್ಲಿ 'ಸಂಕೇತ ಭಾಷೆ' ಎಂದು ಪರಿಗಣಿಸಲಾಗಿದೆ.

ಈ ಅಧ್ಯಾಯದಲ್ಲಿ ಶಾಬ್ದಿಕ ಭಾಷೆಗೆ ಬದಲಾಗಿ ಶರೀರದ ಅಂಗಗಳನ್ನು ಬಳಸಿ ಮಾಡಲಾಗುವ ಭಾವಾಭಿನಯವನ್ನು 'ಆಂಗಿಕ ಭಾಷೆ' ಎಂದು ಕರೆಯಲಾಗಿದೆ. ಆಂಗಿಕ ಭಾಷೆಯ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿಯ ಪಾತ್ರಗಳ ಸಾಮಾಜಿಕ ಚಹರೆಯನ್ನು ಗುರುತಿಸುವ ಉದ್ದೇಶವನ್ನು ಈ ಅಧ್ಯಾಯ ಒಳಗೊಂಡಿದೆ.

ಸೃಜನಶೀಲ ಕೃತಿಗಳು ಮತ್ತು ದೃಶ್ಯಮಾಧ್ಯಮದಲ್ಲಿ ಆಂಗಿಕ ಭಾಷೆಯ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿಯ ಪಾತ್ರಗಳು ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ನೋಡಬಹುದಾಗಿದೆ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಮುಂದೆ ಸಂಕೋಚದಿಂದ, ಭಯದಿಂದ ದೂರ ನಿಲ್ಲುವುದು, ತಲೆಕೆರೆದುಕೊಳ್ಳುವುದು, ಸೊಂಟಬಾಗಿ ನಮಸ್ಕರಿಸುವುದು ಮಾಡಿದರೆ, ಮೇಲ್ಜಾತಿಯ ಪಾತ್ರಗಳು ಎದೆ ಸೆಟೆದು ನಿಂತು, ರೋಷದಿಂದ, ಗರ್ವದಿಂದ ಆದೇಶಿಸುವ ರೀತಿ ಕೈಗಳನ್ನು ಕೆಳಜಾತಿ ಪಾತ್ರಗಳಿಗೆ ತೋರಿಸುವುದು ಇನ್ನೂ ಮುಂತಾದ ರೀತಿಯ ಆಂಗಿಕ ಭಾಷೆಯನ್ನು ಕೆಲವು ಪ್ರಾತಿನಿಧಿಕ ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದೊರೆತಿರುವ ಮಾಹಿತಿಯ ಆಧಾರದ ಮೇಲೆ ಚರ್ಚಿಸಲಾಗಿದೆ.

ಜಾತಿಸೂಚಕ ಸಂಕೇತಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿಯ ಪಾತ್ರಗಳ ಸಾಮಾಜಿಕ ಚಹರೆಯನ್ನು ಗುರುತಿಸುವುದಾದರೆ, ಉಡುಪಿನಲ್ಲಿ ಮೇಲ್ಜಾತಿಯ ಪಾತ್ರಗಳು ಉತ್ತಮ ಉಡುಪು ಧರಿಸಿದರೆ ಕೆಳಜಾತಿ ಪಾತ್ರಗಳು ಹರಿದ, ಕೊಳಕು ಬಟ್ಟೆಯನ್ನು ತೊಟ್ಟಿರುತ್ತಾರೆ. ಮತ್ತು ಕೆಲವು ಸಮುದಾಯಗಳು, ಜನಿವಾರ ಮತ್ತು ಶಿವದಾರ ಹಾಗೂ ವಿಭೂತಿ ನಾಮಗಳನ್ನು ಧರಿಸುತ್ತಾರೆ. ಕೆಳಜಾತಿ ಪಾತ್ರಗಳು ವಿಭೂತಿ ನಾಮಗಳನ್ನು ಧರಿಸುವುದು ಕಂಡುಬರುವುದಿಲ್ಲ. ಈ ರೀತಿಯ ಜಾತಿಸೂಚಕ ಸಂಕೇತಗಳ ಭಾಷೆಯಲ್ಲಿ ಸಾಮಾಜಿಕ ಚಹರೆಯನ್ನು ಚರ್ಚಿಸಲಾಗಿದೆ. ಆಂಗಿಕ ಭಾಷೆ ಮತ್ತು ಸಂಕೇತಭಾಷೆಯ ಸಾಮಾಜಿಕ ಚಹರೆಗಳನ್ನು ಕೆಲವು ಸೃಜನಶೀಲ ಕೃತಿಗಳ ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಮೂಲಕ ಚರ್ಚಿಸಲಾಗಿದೆ.

೬.೧. ಆಂಗಿಕ ಭಾಷೆಯ : ಸಾಮಾಜಿಕ ಚಹರೆಗಳು

ಭಾಷೆಯಲ್ಲಿ ಆಂಗಿಕವೂ ಭಾಷೆಯ ಒಂದು ಘಟಕ. ಮಾತು ಮತ್ತು ಬರಹದ ಮೂಲಕ ವ್ಯಕ್ತಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಹಾಗೇ ಆಂಗಿಕ ಅಭಿನಯದ ಮೂಲಕವೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಈ ಪ್ರಕ್ರಿಯೆಗೆ ಅಶಾಬ್ದಿಕ ಸಂವಹನ ಎಂದು ಹೇಳಬಹುದು. ಹಲವು ಸಂದರ್ಭದಲ್ಲಿ ಮಾತಿನ ಜೊತೆ ಜೊತೆಗೆ ಆಂಗಿಕ ಅಭಿನಯ ನಡೆಯುತ್ತಿರುತ್ತದೆ. ಅಶಾಬ್ದಿಕ ಸಂವಹನಕ್ಕೆ ಸಂಬಂಧಿಸಿದಂತ ವಿವರ 'ಸಾಂಬಮೂರ್ತಿ, ಭಾಷೆ

ಮತ್ತು ಅಶಾಬ್ದಿಕ ಸಂವಹನ' ಎಂಬ ಪುಸ್ತಕದಲ್ಲಿ ಈ ರೀತಿಯಾಗಿದೆ. "ಅಶಾಬ್ದಿಕ ಸಂವಹನದ ಅಧ್ಯಯನ ಇತೀಚೆಗಷ್ಟೇ ಆರಂಭವಾಗಿದ್ದರೂ, ಇದರ ಎಳೆಯನ್ನು ಡಾರ್ವಿನ್ನನ "ದಿ ಎಕ್ಸ್‌ಪ್ರೆಶನ್ ಆಫ್ ದಿ ಎಮೋಶನ್ಸ್ ಇನ್ ಮ್ಯಾನ್ ಅಂಡ್ ಅನಿಮಲ್ಸ್"(೧೮೭೨) ಕೃತಿಯಲ್ಲಿ ಕಾಣಬಹುದು. ಅತ್ಯಂತ ಪ್ರಭಾವಶಾಲಿ ಕೃತಿಯೂ ಆದ ಇದರಲ್ಲಿ ಅಶಾಬ್ದಿಕ ಸಂವಹನದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಾಗುತ್ತದೆ. ಅಂದಿನಿಂದ ಪ್ರಾರಂಭವಾದ ಈ ಅಧ್ಯಯನ ಇಂದು ಅನೇಕರ ಪರಿಶ್ರಮದಿಂದ ಮುಂದುವರೆಯುತ್ತಿದೆ.

ಮ್ಯಾಲೆರಿ(೧೮೮೦) ತಮ್ಮ ಕೃತಿಯಲ್ಲಿ ಉತ್ತರ ಅಮೇರಿಕಾದ ಬಯಲಿನ ಸಂಕೇತ ಭಾಷೆ ಮತ್ತು ಇನ್ನಿತರ ಸಂಕೇತ ಭಾಷೆಗಳ ತೌಲನಿಕ ಅಧ್ಯಯನ ನಡೆಸಿದರು. ಈ ಕೃತಿ ನಂತರದ ಎಲ್ಲಾ ಅಧ್ಯಯನಗಳಿಗೂ ಮಾದರಿಯಾಯಿತು. ಅನಂತರ ಬಂದ ಇ.ಟಿ.ಹಾಲ್, ಆರ್.ಎಲ್. ಬರ್ಡ್‌ವಿಸೆಲ್, ಮೆಹ್ರಾಬಿಯನ್, ಪರ್ಡಿನಾಂಡ್ ಪೊಯಟೋಸ್, ಎಕ್‌ಮನ್ ಮತ್ತು ಫ್ರೀಸನ್ ಮೊದಲಾದ ಹಲವಾರು ವಿದ್ವಾಂಸರು ಅಧ್ಯಯನ ನಡೆಸಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಹ್ಯಾರಿಸನ್, ನ್ಯಾಪ್, ಆರ್ಜೈಲ್ ಮೊದಲಾದವರು ಪರಿಚಯಾತ್ಮಕ ಪುಸ್ತಕಗಳನ್ನು ಬರೆದಿದ್ದಾರೆ.

ಅಶಾಬ್ದಿಕ ಸಂವಹನದ ವ್ಯಾಪ್ತಿಯ ಬಗ್ಗೆ ಹೇಳುವುದಾದರೆ, ಆರ್ಜೈಲ್(೧೯೬೯) ಎಂಬುವವರು ದೈಹಿಕ ಸಂಪರ್ಕ ನಿಲುವು, ದೃಷ್ಟಿ/ನೋಟ, ಮುಖ ಹಾಗೂ ಅಂಗಗಳ ಚಲನೆ, ಧ್ವನಿ ಒಳಗೊಳ್ಳುತ್ತದೆಂದು ಹೇಳಿದರೆ, ನ್ಯಾಪ್(೧೯೭೨) ರವರು ದೈಹಿಕ ಚಲನೆ, ಮುಖಭಾವ, ದೃಷ್ಟಿ, ಮುಟ್ಟುವಿಕೆ, ಅಂತರ-ಸಾಮೀಪ್ಯ ಮನುಷ್ಯ ನಿರ್ಮಿತ ವಸ್ತುಗಳು ಮತ್ತು ಪರಿಸರ ಸೇರುತ್ತದೆಂದು ಹೇಳಿದ್ದಾರೆ. ಹ್ಯಾರಿಸನ್(೧೯೭೩) ರು ಸ್ವಲ್ಪ ಭಿನ್ನವಾಗಿ ಅಂದರೆ ಅಶಾಬ್ದಿಕವಾಗಿ ಬರುವ ಎಲ್ಲಾ ಕ್ರಿಯೆಗಳನ್ನು ನಾಲ್ಕು ಸೂತ್ರಗಳಲ್ಲಿ ಹೇಳುತ್ತಾರೆ. ೧. ಪ್ರದರ್ಶಕ(ದೈಹಿಕ ಕ್ರಿಯೆಗಳು), ೨. ಮಾನವ ನಿರ್ಮಿತ ವಸ್ತುಗಳು, ೩. ಮಾಧ್ಯಮ ಮತ್ತು ೪. ಸಾಂದರ್ಭಿಕ.

ಮಾತನಾಡುವಾಗ ಕೈಗಳು ಮಾತಿನೊಂದಿಗೆ ಚಲಿಸುತ್ತಲೇ ಇರುತ್ತವೆ. ಇವುಗಳಲ್ಲಿ ಕೆಲವು ಅರ್ಥಪೂರ್ಣವಾಗಿಲ್ಲದಿದ್ದರೂ, ಇವು ಸಂವಹನ ಕ್ರಿಯೆಗೆ ಪೂರಕವಾಗಿರುತ್ತವೆ. ಕೇವಲ ಭಾಷೆಯನ್ನು ಬಳಸಿಯೇ ಮಾಹಿತಿ ನೀಡುವುದು ನಿರ್ಜೀವವಾಗಿ ಕಾಣಬಹುದು. ಭಾವರಹಿತ ಸಂವಹನ ನೀರಸವಾಗಿರುತ್ತದೆ. ಈ ಅಶಾಬ್ದಿಕ ಕ್ರಿಯೆ ಹುಟ್ಟಿನಿಂದ ವಾಂಶಿಕವೇ ಅಥವಾ ಕಲಿತು ಬರುವುದೇ? ಇದರ ಬಗ್ಗೆ ಅನೇಕ ಅಧ್ಯಯನಗಳು ನಡೆದು ಈ ಕ್ರಿಯೆಗಳು ಮೂರು ವರ್ಗಕ್ಕೆ ಸೇರಬಹುದೆಂದು ಅಭಿಪ್ರಾಯಪಡುತ್ತಾರೆ. ಹಾಲು ಕುಡಿಯುವ ಮಗು ತನಗೆ ಸಾಕೆನಿಸಿದಾಗ ತಲೆಯನ್ನು ಅಡ್ಡ ಹೊರಳಿಸುವುದು. ಇದು ತನ್ನಿಂತಾನೇ ಬಂದಿರುವ ಕ್ರಿಯೆ. ಹಾಗೆಯೇ ಎಷ್ಟೋ ಕ್ರಿಯೆಗಳು ಆಯಾ ಸಂಸ್ಕೃತಿಯ ಫಲವಾಗಿ ಬಂದಿರುವಂತಹುದು, ಅದನ್ನು ಕಲಿತು ಉಪಯೋಗಿಸಬೇಕಾಗುತ್ತದೆ. ಸಾಮಾನ್ಯವಾಗಿ ಮೂಲ ಅಶಾಬ್ದಿಕ ಕ್ರಿಯೆಗಳೆಲ್ಲವೂ ಕಲಿತು ಉಪಯೋಗಿಸುವುದೇ ಆಗಿದೆ(ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಪುಟ-೬೪-೬೫).

ಈ ರೀತಿಯಾಗಿ ಅಶಾಬ್ದಿಕ ಸಂವಹನವನ್ನು ಕುರಿತು ಹೇಳಲಾಗಿದೆ. ಕನ್ನಡದಲ್ಲಿ ಅಶಾಬ್ದಿಕ ಸಂವಹನ ಕುರಿತು ಅಧ್ಯಯನ ಆಗಿರುವುದು ವಿರಳ. ಕನ್ನಡದಲ್ಲಿ ಅಶಾಬ್ದಿಕ ಸಂವಹನದ ಬಗ್ಗೆ ಅಧ್ಯಯನಗಳು ನಡೆಯುವ ಅವಶ್ಯಕತೆಯಿದೆ. ಇಲ್ಲಿ ಆಂಗಿಕ ಭಾಷೆಯಲ್ಲಿ ಸಾಮಾಜಿಕ ಚಹರೆಗಳನ್ನು ಕುರಿತು ಚರ್ಚಿಸಲಾಗಿದೆ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಮುಂದೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವಾಗ ಯಾವ ರೀತಿಯಲ್ಲಿ ಆಂಗಿಕಾಭಿವ್ಯಕ್ತಿ ಇರುತ್ತದೆ ಮತ್ತು ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಮುಂದೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದಾಗ ಯಾವ ರೀತಿಯಲ್ಲಿ ಆಂಗಿಕಾಭಿವ್ಯಕ್ತಿ ಇರುತ್ತದೆ ಎಂಬುದನ್ನು ನೋಡಲಾಗಿದೆ.

ಆಂಗಿಕ ಭಾಷೆಯೂ ವ್ಯಕ್ತಿಗಳ ಸಾಮಾಜಿಕತೆಯನ್ನು ಸೂಚಿಸುತ್ತದೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ವಯಸ್ಸು, ಲಿಂಗ, ಶಿಕ್ಷಣ ಇನ್ನೂ ಮುಂತಾದ ಅಂಶಗಳು ಆಂಗಿಕ ಭಾಷೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಮೇಲ್ಜಾತಿ ಪಾತ್ರಗಳ ಜೊತೆ ಕೆಳಜಾತಿ ಪಾತ್ರಗಳು ಮಾತನಾಡುವಾಗ ಕೈಕಟ್ಟಿಕೊಂಡು, ತಲೆಕೆರೆದುಕೊಳ್ಳುತ್ತ, ಕೈಮುಗಿದು ಸೊಂಟಬಗ್ಗಿಸಿ, ಹೆಗಲ ಮೇಲಿರುವ ಟವಲನ್ನು ತೆಗೆದು, ಮೇಲೆ ಕಟ್ಟಿದ ಲುಂಗಿಯನ್ನು ಕೆಳಗೆ ಬಿಟ್ಟು, ತಮ್ಮ ಧ್ವನಿಯನ್ನು ಸಣ್ಣಗೆ ಮಾಡಿ, ಸಂಕೋಚ ಮತ್ತು ಭಯದಿಂದ ಮಾತನಾಡುತ್ತೇವೆ.

ತಮ್ಮ ಧಣಿಗಳೆಂದು ಗೌರವವಿರಬಹುದು, ಜಾತಿಯಿಂದ ಮೇಲಾದವರು ಎಂಬ ಭಾವನೆಯಿರಬಹುದು, ಅಥವಾ ತಮಗಿಂತ ದೊಡ್ಡವರು ಎಂಬ ಭಾವನೆಯೂ ಇರಬಹುದು. ಈ ರೀತಿಯ ಆಂಗಿಕ ಚಲನೆಯ ಮೂಲಕ ಈ ಪಾತ್ರಗಳು ಕೆಳಜಾತಿ ಪಾತ್ರಗಳು ಮತ್ತು ಬಡವರು ಎಂದು ಗುರುತಿಸಬಹುದಾಗಿದೆ. ಹಾಗೆಯೇ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಜೊತೆಗೆ ಮಾತನಾಡುವಾಗ ಗಡಸು ಧ್ವನಿಯಲ್ಲಿ, ಅಧಿಕಾರವಾಣಿಯಿಂದ, ಕೈತೋರಿಸಿ, ತಪ್ಪು ಮಾಡಿದ್ದರೆ ಅಥವಾ ಹೇಳಿದ ಕೆಲಸ ಕೆಳಜಾತಿ ಪಾತ್ರಗಳು ಮಾಡಿರದಿದ್ದರೆ ಕಣ್ಣನ್ನು ಕೆಂಪಾಗಿ ಮಾಡಿ, ಹುಬ್ಬೇರಿಸುತ್ತ ಆದೇಶಿಸುವ ರೀತಿಯಲ್ಲಿ ಅವರ ಆಂಗಿಕ ಅಭಿವ್ಯಕ್ತಿ ಇರುತ್ತದೆ. ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಆಂಗಿಕಾಭಿವ್ಯಕ್ತಿಯನ್ನು ಗಮನಿಸಿದರೆ ಸಾಮಾಜಿಕ ಸ್ತರವಿನ್ಯಾಸವನ್ನು ಗುರುತಿಸಬಹುದು. ಆಂಗಿಕ ಭಾಷೆಯೂ ಜಾತಿಸೂಚಕವಾಗಿ ಕೆಲಸ ಮಾಡುತ್ತಿರುತ್ತದೆ ಎಂದೆ ಹೇಳಬಹುದು.

ಲಕ್ಷ್ಮೀಪತಿ ಸಿ.ಜಿ. ಅವರು 'ಕ್ಯಾಸ್ಟ್ ಕೆಮಿಸ್ಟ್ರಿ' ಎಂಬ ಪುಸ್ತಕದಲ್ಲಿ ಆಂಗಿಕ ಭಾಷೆ ಕುರಿತು ಹೇಳಿರುವುದನ್ನು ಈ ಕೆಳಗಿನಂತೆ ಗಮನಿಸಬಹುದು.

ಆಂಗಿಕ ಭಾಷೆಯೂ ಕೂಡ ಜಾತಿಯಿಂದ ರೂಪಗೊಂಡೇ ಪ್ರಕಟವಾಗುತ್ತದೆ. ಕಣ್ಣಿನ ನಡುವಿನ ಸಂಪರ್ಕ, ಆಕ್ರಮಣಕಾರಿ ಅಥವಾ ಆದೇಶಿಸುವ ಶೈಲಿಯ, ಕೈಕಾಲುಗಳ ಚಲನೆಯ

ಶೈಲಿ, ಬೆರಳು ತೋರಿಸುವ, ಹೆಗಲ ಮೇಲೆ ಕೈ ಹಾಕಿ ಸ್ಪರ್ಶಿಸುವ, ಮೆಚ್ಚುವ ಶೈಲಿಯಲ್ಲಿ ಬೆನ್ನು ತಟ್ಟುವ ಶೈಲಿ, ಹಾಗೆಯೇ ಹೇಳಬೇಕಾದುದನ್ನು ಹೇಳಲಾಗದೇ ಮತ್ತೇನನ್ನೋ ಹೇಳುವ, ಸಂಕೋಚದ ನಗೆ ಬೀರುವುದನ್ನು ಸೂಕ್ಷ್ಮವಾಗಿ ನೋಡಿದರೆ ಜಾತಿಯ ಅಭಿವ್ಯಕ್ತಿಯೇ ಆಗಿರುತ್ತಾರೆ. ಈ ಅಭಿವ್ಯಕ್ತಿಯ ಕ್ರಮ ತಿರುವು ಮುರುವು ಆಗಬಹುದು, ಅದು ಕೆಳಜಾತಿಗಳೆಂದು ಕರೆಯಲ್ಪಟ್ಟ ಸಮುದಾಯಗಳು ಮೇಲ್ಜಾತಿಯ ನಿರಂತರ ಒತ್ತಾಯಕ್ಕೆ ಒಳಗಾಗಿ ಅದರಂತೆ ವರ್ತಿಸಬಹುದು. ಅಪಹರಣಕ್ಕೊಳಗಾದವನು ಅಪಹರಣಕಾರರನನ್ನೇ ಅಭಿಮಾನಿಸುವಂತೆ, ಅನುಸರಿಸುವಂತಿರುತ್ತದೆ. ಅದನ್ನು ಶ್ರೀನಿವಾಸ ಎಂ.ಎನ್, 'ಸಂಸ್ಕೃತಾನುಕರಣ' ವೆಂಬ ಕಲ್ಪನೆಯನ್ನು ಮಂಡಿಸುವ ಮೂಲಕ ತಮ್ಮ ಜಾತಿಯನ್ನು ಅಭಿವ್ಯಕ್ತಿಸುತ್ತಾರೆ.(ಲಕ್ಷ್ಮೀಪತಿ ಸಿ.ಜಿ. ಕ್ಯಾಸ್ಟ್ ಕೆಮಿಸ್ಟ್ರಿ, ಪುಟ-೬-೭)

ಈ ಮೇಲಿನ ಉಲ್ಲೇಖದಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿಗಳ ಆಂಗಿಕ ಭಾಷೆಯನ್ನು ಗುರುತಿಸಲಾಗಿದೆ. ಆದೇಶಿಸುವ ಶೈಲಿ, ಬೆರಳು ತೋರಿಸುವ ಶೈಲಿಗಳು ಮೇಲ್ಜಾತಿಯ ವ್ಯಕ್ತಿಗಳ ಆಂಗಿಕ ಭಾಷೆಯಾಗಿರುತ್ತದೆ. ಮಾತನಾಡುವಾಗ ತಲೆಕೆರೆದುಕೊಳ್ಳುವ, ದೇಹವನ್ನು ಸಂಕೋಚದಿಂದ ಕುಬ್ಜಗೊಳಿಸುವ, ಉಗ್ಗುವ, ಹೇಳಬೇಕಾಗಿದದ್ದನ್ನು ಹೇಳದೆ ಮತ್ತೇನನ್ನೋ ಹೇಳುವುದು ಈ ಪ್ರಕ್ರಿಯೆಗಳು ಕೆಳಜಾತಿ ವ್ಯಕ್ತಿಗಳ ಆಂಗಿಕ ಭಾಷೆಯಾಗಿರುತ್ತದೆ ಎಂದು ಹೇಳಬಹುದು. ಈ ಆಂಗಿಕಭಾಷೆ ಏಕಮುಖವಾಗಿರುವುದಿಲ್ಲ. ಮೇಲ್ಜಾತಿ ಪಾತ್ರಗಳಲ್ಲಿ ಸಹ ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲುವ, ತಲೆಕೆರೆದುಕೊಳ್ಳುವ, ದೇಹವನ್ನು ಸಂಕೋಚದಿಂದ ಕುಬ್ಜಗೊಳಿಸುವ ಪ್ರಕ್ರಿಯೆ ನಡೆಯುತ್ತವೆ. ಆದರೆ ಇಲ್ಲಿ ಜಾತಿ ಕಾರಣಕ್ಕಾಗಿ ಆಗುವ ಅಪಮಾನಗಳು, ಅವಮಾನಗಳು ಆಗುವುದಿಲ್ಲ. ಅಧಿಕಾರಿಗಳಿಗೆ ಗೌರವ ಮತ್ತು ಅತಿವಿನಯವನ್ನು ತೋರಿಸುವ ಸಲುವಾಗಿ ಈ ಆಂಗಿಕ ಪ್ರಕ್ರಿಯೆಗಳು ನಡೆಯುತ್ತಿರುತ್ತವೆ. ಕೆಳಜಾತಿ ವ್ಯಕ್ತಿಗಳು ಸಹ ಅವರ ಜಾತಿಯ ವ್ಯಕ್ತಿಗಳ ನಡುವೆ ಅಥವಾ ಕುಟುಂಬದ ವ್ಯಕ್ತಿಗಳ ನಡುವೆ ಮಾತನಾಡುವ ಸಂದರ್ಭದಲ್ಲಿ ಆದೇಶಿಸುವ ಶೈಲಿಯ ಬೆರಳು ತೋರಿಸುವ ಶೈಲಿಯಲ್ಲಿ ಮಾತನಾಡುವ ಸಂದರ್ಭಗಳು ಇರುತ್ತವೆ. ಆದರೆ ಇವುಗಳು ಸಾಮಾಜಿಕ ಅಪಮಾನಗಳನ್ನು ಉಂಟುಮಾಡುವ ಸಂದರ್ಭಗಳಾಗಿರುವುದಿಲ್ಲ. ಇಲ್ಲಿ ಜಾತಿಯ ಕಾರಣಕ್ಕಾಗಿ ಆಂಗಿಕಭಾಷೆಯಲ್ಲಿ ನಡೆಯುವ ಸಾಮಾಜಿಕ ಅವಮಾನ, ಅಪಮಾನಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ಮೇಲಿನ ಪ್ರಕ್ರಿಯೆಯನ್ನು ಇಟ್ಟುಕೊಂಡು ಕೆಲವು ಪ್ರಾತಿನಿಧಿಕ ಸೃಜನಶೀಲ ಕೃತಿಗಳು ಮತು ಚಲನಚಿತ್ರಗಳಲ್ಲಿ ದೊರೆತಿರುವ ಮಾಹಿತಿಯನ್ನು ಇಟ್ಟುಕೊಂಡು ಆಂಗಿಕಭಾಷೆಯಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸಾಮಾಜಿಕ ಚಹರೆಗಳನ್ನು ಚರ್ಚಿಸಲಾಗಿದೆ.

೬.೧.೧. ಆಂಗಿಕ ಭಾಷೆ : ಕೆಳಜಾತಿ ಪಾತ್ರಗಳು

ಆಂಗಿಕ ಭಾಷೆಯ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸಾಮಾಜಿಕ ಚಹರೆಗಳನ್ನು ಗುರುತಿಸಬಹುದಾಗಿದೆ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಮುಂದೆ ಕೈಕಟ್ಟಿ ನಿಲ್ಲುವುದು, ಸೊಂಟವನ್ನು ಬಗ್ಗಿಸಿ ಕೈಮುಗಿಯುವ, ಹೆಗಲು ಅಥವಾ ತಲೆಯಲ್ಲಿ ಟವಲ್ ಇದ್ದರೆ ತೆಗೆದು ಕೈಯಲ್ಲಿಟ್ಟುಕೊಳ್ಳುವುದು, ತೊದಲುವ ರೀತಿಯಲ್ಲಿ ಮಾತನಾಡುವುದು, ಸಂಕೋಚದಿಂದ ದೇಹವನ್ನು ಕುಬ್ಜಗೊಳಿಸುವುದು ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಯಲ್ಲಿ ನಡೆಯುತ್ತಿರುತ್ತದೆ. ಉದಾಹರಣೆಗೆ 'ಚೋಮನದುಡಿ' ಚಲನಚಿತ್ರದಲ್ಲಿ ಮೇಲ್ಜಾತಿ ಪಾತ್ರವಾದ 'ಸಂಕಪ್ಪಯ್ಯ'ನ ಹತ್ತಿರ ಕೆಳಜಾತಿ ಪಾತ್ರ 'ಚೋಮ' ಮಾತನಾಡುವಾಗ ತಲೆಯಲ್ಲಿದ್ದ ಅಡಿಕೆ ಪಟ್ಟೆಯ ಟೋಪಿಯನ್ನು ತೆಗೆದು ಕೈಯಲ್ಲಿರಿಸಿಕೊಂಡು ಬೇಡುವ ಧ್ವನಿಯನ್ನು ಮಾತನಾಡುವುದನ್ನು ಕಾಣಬಹುದು. ಹಾಗೆಯೇ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಸುಬ್ಬಣ್ಣಹೆಗ್ಗಡೆ ಜೊತೆ ಮಾತನಾಡುವಾಗ ಕೆಳಜಾತಿ ಗುತ್ತಿ ತನ್ನ ಸೊಂಟವನ್ನು ಬಗ್ಗಿಸಿ ಎರಡು ಕೈಗಳನ್ನು ಮುಂದೆ ಮಾಡಿ ವಿನಯದಿಂದ ಪತ್ರವನ್ನು ನೀಡುವುದನ್ನು ಗಮನಿಸಬಹುದು. ಹೀಗೆ ಮೇಲ್ಜಾತಿ ಪಾತ್ರಗಳ ಮುಂದೆ ಕೆಳಜಾತಿ ಪಾತ್ರಗಳು ಆಂಗಿಕ ಭಾಷೆಯಲ್ಲಿ ಅಭಿವ್ಯಕ್ತಿಸುವುದನ್ನು ಕಾಣಬಹುದು.

ಆದರೆ ಕೆಲವು ಸಂದರ್ಭದಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಎದುರಿಗೆ ಪ್ರತಿಭಟಿಸಿ ನಿಂತಿರುವ ಸಂದರ್ಭಗಳು ಇವೆ. ಆದರೆ ಆ ಸಂದರ್ಭಗಳು ಬೇರೆಯಾಗಿರುತ್ತವೆ. ಅಂದರೆ ಕೆಳಜಾತಿ ಪಾತ್ರಗಳು ಶೋಷಣೆಗೆ, ಅನ್ಯಾಯಕ್ಕೆ ಒಳಗಾದಾಗ ಮತ್ತು ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ ಮೇಲ್ಜಾತಿಯ ಪಾತ್ರಗಳನ್ನು ಪ್ರತಿಭಟಿಸಿ ನಿಂತಿರುವ ಸಂದರ್ಭಗಳು ಸಹ ಇರುವುದನ್ನು ಕಾಣಬಹುದು. ಆದರೆ ಈ ರೀತಿಯ ಉದಾಹರಣೆಗಳು ಸಿಗುವುದು ವಿರಳ ಎಂದೇ ಹೇಳಬಹುದು.

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಜೊತೆ ಮಾತನಾಡುವಾಗ ಆದೇಶಿಸುವ ರೀತಿಯಲ್ಲಿ, ಕೈಬೆರಳು ತೋರಿಸುವ, ಆಕ್ರಮಣ ನೀತಿ, ಎದೆಯುಬ್ಬಿಸಿ ಗಾಂಭಿರ್ಯದಿಂದ ಮಾತನಾಡುವ ಆಂಗಿಕ ಭಾಷೆಯನ್ನು ಕಾಣಬಹುದು. ಕೆಳಜಾತಿ ಪಾತ್ರಗಳ ಮುಂದೆ ಕೈಮುಗಿದು, ಸೊಂಟ ಬಗ್ಗಿಸಿ, ಟವಲ್ ಕೈಯಲ್ಲಿಡಿದು ಮಾತನಾಡುವ ಸಂದರ್ಭಗಳು ಮೇಲ್ಜಾತಿ ಪಾತ್ರಗಳಲ್ಲಿ ಕಂಡುಬರುವುದಿಲ್ಲ ಎಂದು ಹೇಳಬಹುದು. ಒಂದು ವೇಳೆ ಕಂಡುಬಂದರು ಅಧಿಕಾರಿಗಳ ಮುಂದೆ ಕೈಮುಗಿದುಕೊಂಡು ನಿಂತುಕೊಳ್ಳುವ ಭಂಗಿ, ಸೊಂಟಬಗ್ಗಿಸಿ ಮಾತನಾಡುವ ಸಂದರ್ಭಗಳು ಕಂಡುಬರುತ್ತವೆ. ಆದರೆ ಇಲ್ಲಿ ಜಾತಿ ಅಸಮಾನತೆಗಳು ಕಂಡುಬರುವುದಿಲ್ಲ. ಗೌರವ ಮತ್ತು ಅತಿ ವಿನಯವನ್ನು ತೋರಿಸುತ್ತವೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಜೊತೆ

ಮಾತನಾಡುವಾಗ ಹೆಚ್ಚಾಗಿ ಆದೇಶಿಸುವ, ಅಧಿಕಾರವಾಣಿ, ಗಾಂಭೀರ್ಯದಿಂದ ಮಾತನಾಡುವ ಸಂದರ್ಭಗಳೇ ಹೆಚ್ಚಾಗಿ ಕಂಡುಬರುತ್ತವೆ ಎಂದು ಹೇಳಬಹುದು.

ಮೇಲ್ಜಾತಿ ಪಾತ್ರಗಳ ಮತ್ತು ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಯನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತಿರುವ ಉದಾಹರಣೆಗಳ ಮೂಲಕ ಚರ್ಚಿಸಬಹುದು. ಉದಾಹರಣೆಗೆ 'ಕುವೆಂಪು' ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಸುಬ್ಬಣ್ಣ ಹೆಗ್ಗಡೆ ಜೊತೆ ಕೆಳಜಾತಿ ಗುತ್ತಿ ಮಾತನಾಡುವ ಸಂದರ್ಭದಲ್ಲಿ ಆಂಗಿಕ ಭಾಷೆಯನ್ನು ಗಮನಿಸಬಹುದು. "ಅವನು ಕಣ್ಮರೆಯಾದುದನ್ನು ಅರಿತು ಸುಬ್ಬಣ್ಣ ಹೆಗ್ಗಡೆ ತಲೆಯೆತ್ತಿ ಗುತ್ತಿಯ ಕಡೆ ನೋಡಿ ನಗುತ್ತಾ ಕೆಮ್ಮಿದರು. ತಾನು ಹೇಳಿದ ಸಾಕ್ಷಿಯಿಂದ ಒಡೆಯರು ಪ್ರೀತರಾಗಿದ್ದಾರೆಂದು ತಿಳಿದ ಗುತ್ತಿ ದಗಲೆಯೊಳಗಿಂದ ಕಾಗದ ತೆಗೆದು ಕೈಗಳನ್ನೂ ಒಟ್ಟು ಮಾಡಿ ಸೊಂಟ ಬಗ್ಗಿಸಿ ನೀಡಿದನು"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೧೧೯)

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಯನ್ನು ಗಮನಿಸಬಹುದು. ವೆಂಕಟಪ್ಪನಾಯಕ ಕಣ್ಮರೆಯಾದುದನ್ನು ಅರಿತ ಸುಬ್ಬಣ್ಣ ಹೆಗ್ಗಡೆ, ಗುತ್ತಿ ಕಡೆ ತಿರುಗಿ ನಗುತ್ತಾ ಕೆಮ್ಮಿದರು. ನಗುತ್ತಾ ಕೆಮ್ಮಿದ್ದನ್ನು ಅರ್ಥಮಾಡಿಕೊಂಡ ಗುತ್ತಿ ತಾನು ಹೇಳಿದ ಸಾಕ್ಷಿಯಿಂದ ಒಡೆಯರಿಗೆ ಸಂತೋಷವಾಗಿದೆ ಎಂದುಕೊಂಡು ಸಿಂಭಾವಿ ಹೆಗ್ಗಡೆಯವರಿಂದ ತಂದಿದ್ದ ಕಾಗದವನ್ನು ದಗಲೆಯೊಳಗಿಂದ ತೆಗೆದು ತನ್ನ ಎರಡು ಕೈಗಳನ್ನು ಒಟ್ಟು ಮಾಡಿ ಸೊಂಟವನ್ನು ಬಗ್ಗಿಸಿ ಕೊಡುತ್ತಾನೆ. ಇದರಿಂದ ಗುತ್ತಿಯ ಮತ್ತು ಸುಬ್ಬಣ್ಣ ಹೆಗ್ಗಡೆಯವರ ಸಾಮಾಜಿಕತೆ ತಿಳಿಯುತ್ತದೆ. ಗುತ್ತಿ ಸುಬ್ಬಣ್ಣಹೆಗ್ಗಡೆಯವರ ಜೀತದಾಳೆನಲ್ಲ. ಆದರೂ 'ಒಡೆಯರೆ' ಎಂದು ಸಂಬೋಧಿಸಿ ಗೌರವವನ್ನು ನೀಡುತ್ತಾನೆ. ಸ್ವಲ್ಪದೂರದಿಂದಲೇ ತನ್ನ ಎರಡು ಕೈಗಳನ್ನು ಜೊಡಿಸಿ ಸೊಂಟವನ್ನು ಬಗ್ಗಿಸಿ ಪತ್ರವನ್ನು ಕೊಡುತ್ತಾನೆ. ಕೆಳಜಾತಿಯ ಪಾತ್ರವಾದ ಕಾರಣಕ್ಕೆ ಹತ್ತಿರದಲ್ಲಿ ನಿಲ್ಲುವಂತಿಲ್ಲ. ಎದೆಯುಬ್ಬಿಸಿ ನಿಲ್ಲುವಂತಿಲ್ಲ ಎಂಬ ಸಾಮಾಜಿಕ ನಿಯಮಗಳನ್ನು ಹಾಕಿಕೊಳ್ಳಲಾಗಿದೆ ಎಂದು ಹೇಳಬಹುದು. ಈ ಆಂಗಿಕ ಅನುಭವದಿಂದ ಈ ಪಾತ್ರಗಳ ಸಾಮಾಜಿಕ ಚಹರೆಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಆಂಗಿಕ ಭಾಷೆಗೆ ಸಂಬಂಧಿಸಿದ ಇನ್ನೊಂದು ಉದಾಹರಣೆಯನ್ನು ನೋಡಬಹುದು.

"ಮೇಗರವಳ್ಳಿಯನ್ನು ಸಮೀಪಿಸುತ್ತಿದ್ದಾಗ ಎದುರಿನಿಂದ ಒಂದು ಹೊಲೆಯರ ಗುಂಪು ಸಾಲಾಗಿ ಕಾಡುದಾರಿಯಲ್ಲಿ ಬರುತಿದ್ದುದು ಕಾಣಿಸಿತು. ಹತ್ತಿರಕ್ಕೆ ಬಂದಾಗ ಮಗಳಿಗೆ ಗೊತ್ತಾಯಿತು, ಅವರೆಲ್ಲ ಬೆಟ್ಟಳ್ಳಿ ಹೊಲಗೇರಿಯವರು ಎಂದು. ಒಬ್ಬಿಬ್ಬರನ್ನು ಗುರುತಿಸಿಯೂ ಬಿಟ್ಟರು:

ಬರುತ್ತಿದ್ದ ಗಂಡಸರಲ್ಲಿ ದೊಡ್ಡಬೀರ, ಅವನ ಹಿರಿಯ ಮಗ ಸಣ್ಣಬೀರ, ಅವನ ತಮ್ಮ ಪುಟ್ಟಬೀರ ಇದ್ದರು; ಹೆಂಗಸರಲ್ಲಿ ದೊಡ್ಡಬೀರನ ಹೆಂಡತಿ ಸೇಸಿ, ಅವಳ ಮಗಳು ತಿಮ್ಮಿ, ಪುಟ್ಟಬೀರನ ಹೆಂಡತಿ ಚಿಕ್ಕಪುಟ್ಟಿ ಇದ್ದರು.

ಹಳೆಮನೆ ದೊಡ್ಡಹೆಗ್ಗಡೆಯವರನ್ನು ಗುರುತಿಸಿದೊಡನೆ ಗಂಡಾಳುಗಳೆಲ್ಲ ಹೊಟ್ಟೆ ಅಡಿಯಾಗಿ ಮಣ್ಣು ಹಣೆಮುಟ್ಟುವಂತೆ ಎಲ್ಲಿ ಅಂದರಲ್ಲಿ ನಿಂತಿದ್ದ ಎಡೆಯಲ್ಲಿಯೇ ಮುಳ್ಳುಪೊದೆ ಒಂದನ್ನು ಲೆಕ್ಕಿಸದೆ 'ಅಡ್ಡಬಿದ್ದೆ ಒಡೆಯರಿಗೆ!' ಎಂದು ಪದ್ಧತಿಯ ಗೌರವವನ್ನು ಯಾಂತ್ರಿಕವಾಗಿ ಉಚ್ಚರಿಸುತ್ತಾ ಉದ್ದುದ್ದವಾಗಿ ಅಡ್ಡಬಿದ್ದು ದೀರ್ಘದಂಡ ನಮಸ್ಕಾರ ಮಾಡಿದರು! ಹೆಣ್ಣಾಳುಗಳೆಲ್ಲ ಒಡೆಯರ ಕಣ್ಣಿಗೆ ನೇರವಾಗಿ ಬಿದ್ದರೆ ಅವರಿಗೆ ಮೈಲಿಗೆ ಸೋಕುವುದೋ ಎಂದು ಹೆದರಿದಂತೆ ಹಳುವಿನಲ್ಲಿ ಅಲ್ಲಲ್ಲಿಯೆ ಮರೆಹೊಕ್ಕರು. ಹೆಗ್ಗಡೆಯವರು ಒಂದು ಮಾತನ್ನೂ ಆಡಲಿಲ್ಲ. ಐಗಳು "ಎಲ್ಲಿಂದ ಬರ್ತಿದ್ದಿರೋ? ಎಂದು ಕೇಳಿದರು. ಅವರೆಲ್ಲ ಎದ್ದು ಕೈಮುಗಿದುಕೊಂಡು ಸೊಂಟಬಾಗಿ ದೂರ ಪಕ್ಕಕ್ಕೆ ಸರಿದು ನಿಂತಮೇಲೆ" (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೨೯೨)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಕಂಡಾಗ ಹೊಟ್ಟೆ ಅಡಿಯಾಗಿ ಮಣ್ಣು ಹಣೆ ಮುಟ್ಟುವಂತೆ ದೂರದಿಂದಲೇ ಎಲ್ಲಿ ಅಂದರಲ್ಲಿ ನಿಂತಿದ್ದು ಎಡೆಯಲ್ಲಿಯೇ ಮುಳ್ಳುಪೊದೆ ಒಂದನ್ನೂ ಲೆಕ್ಕಿಸದೆ ಉದ್ದವಾಗಿ ಅಡ್ಡಬಿದ್ದು ದೀರ್ಘದಂಡ ನಮಸ್ಕಾರ ಮಾಡಿ ಗೌರವವನ್ನು ಸೂಚಿಸಿದರು. ಕೆಳಜಾತಿಯ ಹೆಣ್ಣುಮಕ್ಕಳು ಒಡೆಯರ ಕಣ್ಣಿಗೆ ನೇರವಾಗಿ ಬಿದ್ದರೆ ಅವರಿಗೆ ಸೂತಕವಾಗುತ್ತದೆ ಎಂದು ಮರೆಗೆ ಹೋಗುತ್ತಾರೆ. ಐಗಳು ಎಲ್ಲಿಂದ ಬರ್ತಿದ್ದಿರೋ ಎಂದು ಕೇಳಿದಾಗ ಅಡ್ಡಬಿದ್ದು ಕೆಳಜಾತಿ ಪಾತ್ರಗಳೆಲ್ಲ ಎದ್ದು ಕೈಮುಗಿದುಕೊಂಡು ಸೊಂಟಬಾಗಿ ದೂರ ಪಕ್ಕಕ್ಕೆ ಸರಿದು ನಿಲ್ಲುತ್ತಾರೆ.

ಮೇಲ್ಜಾತಿ ವ್ಯಕ್ತಿ ಮತ್ತು ಒಡೆಯ ಎನ್ನುವ ಕಾರಣಕ್ಕಾಗಿ ಅಡ್ಡಬಿದ್ದು ದೀರ್ಘದಂಡ ನಮಸ್ಕಾರ ಮಾಡಿ ಗೌರವವನ್ನು ಸೂಚಿಸುತ್ತಾರೆ. ಅವರನ್ನು ಮುಟ್ಟುವಾಗಿಲ್ಲ, ದೂರದಿಂದಲೇ ನಮಸ್ಕರಿಸಬೇಕು. ಕೆಳಜಾತಿ ಹೆಣ್ಣುಮಕ್ಕಳು ನೇರವಾಗಿ ಒಡೆಯರ ಕಣ್ಣಿಗೆ ಬಿದ್ದರೆ ಮೇಲ್ಜಾತಿ ಪುರುಷ ಪಾತ್ರಗಳಿಗೆ ಮೈಲಿಗೆ ಆಗುತ್ತದೆ ಎಂದು ಮರೆಗೆ ಹೋಗುತ್ತಾರೆ. ಈ ಎಲ್ಲಾ ಆಂಗಿಕ ಅಭಿನಯವನ್ನು ಕಂಡರೆ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ನಡುವೆ ಇರುವ ಜಾತಿ ಮತ್ತು ಆರ್ಥಿಕತೆಗಳ ಅಂತರ ತಿಳಿದುಬರುತ್ತದೆ. ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಗೌರವ, ಮರ್ಯಾದೆಗಳನ್ನು ಆಂಗಿಕಾಭಿವ್ಯಕ್ತಿ ಮೂಲಕ ವ್ಯಕ್ತಪಡಿಸುತ್ತಾರೆ. ಆದರೆ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಗೌರವವನ್ನು ಸೂಚಿಸುವುದು ಕಂಡುಬರುವುದಿಲ್ಲ. ಇದೊಂದು ಪದ್ಧತಿ ಎಂಬ ರೀತಿಯಲ್ಲಿ ನಡೆದುಕೊಂಡು ಬಂದಿರುವುದನ್ನು ಕಾಣಬಹುದು.

ಕೆಳಜಾತಿಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಅಡ್ಡಬಿದ್ದು ನಮಸ್ಕಾರಿಸುವುದು, ಕೆಳಜಾತಿ ಮಹಿಳಾ ಪಾತ್ರಗಳು ಕಣ್ಣಿಗೆ ಕಾಣದಂತೆ ಮರೆಯಾಗುವುದು, ಸೊಂಟ ಬಗ್ಗಿಸಿ ಕೈಮುಗಿದುಕೊಂಡು ದೂರ ನಿಲ್ಲುವ ಸನ್ನಿವೇಷವನ್ನು ಗಮನಿಸಿದಾಗ ಜಾತಿ, ಆರ್ಥಿಕ ಅಸಮಾನತೆ ಮತ್ತು ಅಸ್ಪೃಶ್ಯತೆ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ನಡುವೆ ಇರುವ ಸಾಮಾಜಿಕ ಅಂತರಗಳನ್ನು ಈ ಆಂಗಿಕ ಭಾಷೆಯ ಮೂಲಕ ತಿಳಿದುಕೊಳ್ಳಬಹುದಾಗಿದೆ. ಈ ರೀತಿಯಾಗಿ ಆಂಗಿಕ ಅಭಿವ್ಯಕ್ತಿಯ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಗಳು ಕಂಡುಬರುತ್ತವೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೇ ಆಂಗಿಕ ಭಾಷೆಗೆ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಗುತ್ತಿ ತನ್ನ ಒಡೆಯರಾದ ಭರಮೈ ಹೆಗ್ಗಡೆಯವರ ಜೊತೆ ಮಾತನಾಡುತ್ತಿರುವ ಸಂದರ್ಭದ ಆಂಗಿಕ ಭಾಷೆಯನ್ನು ಗಮನಿಸಬಹುದು.

"ಗುತ್ತಿ ಮೈ ಮೇಲೆ ಬಂದವನಂತೆ ಮುಖ ಊದಿಸಿ ಕೆಂಪಗೆ ಮಾಡಿಕೊಂಡು ಕಣ್ಣೀರು ಸುರಿಸುತ್ತಾ, ಕೈ ಕೈ ಮುಗಿಯುತ್ತ, ಸೊಂಟ ಬಗ್ಗಿಸಿ ಬಾಗಿ ತಣೆಯ ಕೆಳಗೆ ಅಂಗಳದಲ್ಲಿ ಹೆಗ್ಗಡೆಯವರಿಗೆ ನೇರ ಇದಿರಿನಲ್ಲಿ ಬಡಿಗೆ ಬೀಳುವಂತೆ ಬೀಳುತ್ತಾ..."ಅಯ್ಯ ನಿಮ್ಮದಮ್ಮಯ್ಯ ನನ್ನ ಕೈ ಬಿಡಬ್ಯಾಡಿ ಸಾಯೋವರೆಗೂ ನಿಮ್ಮ ಗುಲಾಮನಾಗಿ ದುಡಿದು ರುಣ ತೀರಿಸ್ತೀನಿ" ಎಂದು ಗದ್ಗದಿಸುತ್ತಾ ಉದ್ದಂಡ ನಮಸ್ಕಾರ ಮಾಡಿದ್ದಾನೆ"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೩೨೭)

ಈ ಮೇಲಿನ ಉದಾಹರಣೆಯಲ್ಲಿ ಆಂಗಿಕ ಅಭಿನಯವನ್ನು ಗಮನಿಸಿದರೆ ಕೆಳಜಾತಿ ಪಾತ್ರವಾದ ಗುತ್ತಿ ಅಸಹಾಯಕನಾಗಿ ನಿಂತಿದ್ದಾನೆ. ಮೇಲ್ಜಾತಿ ಪಾತ್ರವಾದ ಭರಮೈಹೆಗ್ಗಡೆಯವರ ಹತ್ತಿರ ಮದುವೆಗೆ ಆರ್ಥಿಕ ಸಹಾಯವನ್ನು ಮತ್ತು ನೈತಿಕ ಬೆಂಬಲವನ್ನು ಬೇಡುತ್ತಿದ್ದಾನೆ. ಅವರು ಸಾಧ್ಯವಿಲ್ಲ ಎಂದಾಗ ಅಸಹಾಯಕನಾಗಿ ಅವರಿಗೆ ಸೊಂಟ ಬಾಗಿಸಿ, ಕೈಮುಗಿಯುತ್ತಾ, ಕೆಳಗೆ ಅಡ್ಡಬಿದ್ದು ನಮಸ್ಕಾರಿಸುತ್ತಾನೆ. ಇಲ್ಲಿ ಗುತ್ತಿ ಪಾತ್ರದ ಸಾಮಾಜಿಕತೆ ಯಾವ ನೆಲೆಯಲ್ಲಿದೆ ಎಂಬುದು ತಿಳಿಯುತ್ತದೆ. ಕೆಳಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಭೂಮಿಯ ಒಡೆತನವಿಲ್ಲ. ಭೂಮಿಯ ಒಡೆತನವಿಲ್ಲದ ಕಾರಣಕ್ಕಾಗಿ ಬಡತನವನ್ನು ಅನುಭವಿಸುತ್ತಾ ಮೇಲ್ಜಾತಿ ಪಾತ್ರಗಳ ಹತ್ತಿರ ಜೀತದಾಳಾಗಿ ದುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣಕ್ಕಾಗಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಹತ್ತಿರ ಕೈಮುಗಿಯುತ್ತ ಸೊಂಟ ಬಾಗಿಸಿ ಕಾಲಿಗೆ ಅಡ್ಡಬಿದ್ದು ಗೌರವವನ್ನು ನೀಡಬೇಕಾಗಿದೆ. ಇಲ್ಲಿ ಅಭಿವ್ಯಕ್ತಗೊಂಡಿರುವ ಆಂಗಿಕಾಭಿವ್ಯಕ್ತಿಯಿಂದ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಯನ್ನು ಕಾಣಬಹುದಾಗಿದೆ.

ಅನಂತಮೂರ್ತಿ ಯು.ಆರ್. ಅವರ 'ಭಾರತೀಪುರ' ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಗೆ ಸಂಬಂಧಿಸಿದ ಉದಾಹರಣೆಯನ್ನು ನೋಡಬಹುದು. ಕೆಳಜಾತಿಯ ಪಿಳ್ಳ

ಮತ್ತು ಮೇಲ್ಜಾತಿಯ ಪಾತ್ರವಾದ ಜಗನ್ನಾಥ ಇವರ ನಡುವೆ ನಡೆಯುವ ಸಂಭಾಷಣೆಯ ಆಂಗಿಕ ಭಾಷೆ ಈ ಕೆಳಗಿನಂತಿದೆ.

"ಏ ಪಿಳ್ಳ ಏನಾದ್ರೂ ಕೇಳೋ' ಎಂದ. ಬೇರೆಯಾರಾದರೂ ಕಂಡರೆ ನಾಚಿಕೆ ಪಡಬೇಕಾದಂಥ ಸನ್ನಿವೇಶ; ಏನೋ ಕಳ್ಳತನ ಮಾಡುತ್ತಿರುವ ಹಾಗೆ ಈ ಹೊಲೆಯರ ಜೊತೆ ಆಪ್ತವಾಗಿ ಮಾತಾಡುವ ತನ್ನ ಪ್ರಯತ್ನ ಎನ್ನಿಸಿತು. ಪಿಳ್ಳ ನಾಚುತ್ತ ತಲೆ ಕೆರೆದುಕೊಂಡ; ನನ್ನಪ್ಪ ಹೇಳ್ತು, ಹೊಲತೀನ್ನ ನಂಗೆ ತರಬೇಕೆಂತೆ. ಐವತ್ತು ರೂಪಾಯಿ ತೆರಕೊಡ್ಬೇಕಂತೆ." (ಅನಂತಮೂರ್ತಿ ಯು.ಆರ್, ಭಾರತೀಪುರ, ಪುಟ, ೧೧೦)

ಈ ಮೇಲಿನ ಉದಾಹರಣೆಯಲ್ಲಿ ಆಂಗಿಕ ಭಾಷೆಯನ್ನು ಗಮನಿಸಿದರೆ ಕೆಳಜಾತಿ ಪಿಳ್ಳ ಮೇಲ್ಜಾತಿ ಜಗನ್ನಾಥನ ಹತ್ತಿರ ದುಡ್ಡನ್ನು ಕೇಳಬೇಕಾದ ಸಂದರ್ಭದಲ್ಲಿ ಸಂಕೋಚದಿಂದ ಕೆಳಲೋ ಬೇಡವೋ ಎಂಬ ಅಂಜಿಕೆಯಿಂದ ತಲೆ ಕೆರೆದುಕೊಳ್ಳುತ್ತಾ ಕೇಳುತ್ತಾನೆ. ಈ ರೀತಿಯಾಗಿ ಮೇಲ್ಜಾತಿ ಪಾತ್ರಗಳ ಜೊತೆ ಮಾತನಾಡುವ ಸಂದರ್ಭದಲ್ಲಿ ತಮಗೆ ಗೊತ್ತಿದ್ದು ಗೊತ್ತಿಲ್ಲದೆಯೋ ಅವರ ಕೈಗಳು ತಲೆಕೆರೆದುಕೊಳ್ಳಲು ಆರಂಭಿಸುತ್ತವೆ, ಬೆನ್ನುಬಾಗುತ್ತದೆ. ಈ ರೀತಿ ಆಂಗಿಕ ಅಭಿನಯಗಳು ನಡೆಯುತ್ತಿರುತ್ತವೆ. ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಈ ಆಂಗಿಕ ಅಭಿನಯದ ಪ್ರಕ್ರಿಯೆ ನಡೆಯುವುದನ್ನು ಕಾಣಬಹುದು.

ಮುಳ್ಳೂರು ನಾಗರಾಜ್ ಅವರ 'ಮರಣ ಮಂಡಲ ಮಧ್ಯದೊಳಗೆ' ಎಂಬ ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಯನ್ನು ಗಮನಿಸಬಹುದು. ಆಂಗಿಕ ಭಾಷೆಗೆ ಸಂಬಂಧಿಸಿದ ಒಂದು ಸನ್ನಿವೇಶವನ್ನು ಉದಾಹರಣೆಯಾಗಿ ನೋಡಬಹುದು.

"ಆ ಬಡ್ಡಿ ಐದ ಬಸವರಾಜುನಾಟವು ಮಿತಿ ಮಿರದ, ಏನೂ ಎತ್ತ ಅನ್ನದ ನೀವೇ ಕಣ್ಣಾರ ಕಂಡಿದ್ದರಿ. ನಾವು ಬ್ಯಾರೆ ಆಡ್ಬೇಕ? ಅದಿಯಾಕುಡ ಅವ್ನು ಓಟ್ಲುಗ ಬಂದ. ಒಳಕೇ ಬಂದ. ನಾವೇನಾರು ಬ್ಯಾಡಾ ಅಂದ್ವಾ?.

"ಇಲ್ಲಕನ್ನಿ ಬುದ್ದಿ"

"ನನ್ದುಡ್ಡು, ನಿನ್ಕಾಸು, ನಿನ್ನಿಷ್ಟ ಮಜಾಮಾಡು ಅಂದೊ. ಅದೂ ಆಯ್ತು. ಆ ಮೇಲೆ ನಾವು ಕುಡಿಯಾ ಗಳಾಸ್‌ನಲ್ಲಿಯಾ ಕುಡುದ. ನಮ್ಮೆದುರುಗಿಯ ಕಾಲಮೇಲ ಕಾಲಾಕೆಂದು ಕೂತ್ಕಂಡು ದವಲತ್ತು ಮಾಡ್ಕಂಡು ಕುಡುದ, ನಾವು ದುಸ್ರಾ ಮಾತಾಡಿದ್ರ ಕೇಳು".

ಅದ್ಯಾನ ನಂಗೊಂದೂ ತಿಳೀದು. ನಮಗ ತಿಳುದಂಗ ಮಾಡಿ ನನ್ನೊಡ್ಯ" ಅಂದ ನಂಜನಾದಿಯಾಗಿ ಉಳುದ ಹೊಲಾರೆ ಯಜಮಾನರುಗಳು ಗೌಡರ ಕಾಲುಗ ಅಡ್ಡಬಿದ್ದು ಅವರಾಸೀರ್ವಾದವ ಪಡೆದವರಾಗಿ, ಹಿಂದ್ಕ ಹೋಗಲು ಅಪ್ಪಣಾವ ಕೇಳುವ ಹೊತ್ತಲಿ ಗೌಡರು"

(ನಾಗರಾಜ ಮುಳ್ಳೂರು, ಮರಣ ಮಂಡಲ ಮಧ್ಯದೊಳಗೆ, ಪುಟ-೫೨-೫೩)

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಕೆಳಜಾತಿಯ ಬಸವರಾಜು ಎನ್ನುವ ಪಾತ್ರ, ಮೇಲ್ಜಾತಿಯವರ ಹೋಟೆಲ್‌ಗೆ ಹೋಗಿ, ಮೇಲ್ಜಾತಿಯವರು ಕುಡಿದ ಗ್ಲಾಸ್‌ನಲ್ಲಿ ಬಸವರಾಜು ಕುಡಿದು, ಅವರ ಎದುರಿಗೆ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತುಕೊಂಡಿದ್ದಕ್ಕೆ ಮೇಲ್ಜಾತಿ ಪಾತ್ರಗಳಿಗೆ ಸಹಿಸಲು ಸಾಧ್ಯವಾಗಲಿಲ್ಲ ಎಂಬುದು ಕಂಡುಬರುತ್ತದೆ. ಈ ಮೇಲಿನ ಉದಾಹರಣೆಯಲ್ಲಿ ಅಸ್ಪೃಶ್ಯತೆಯ ಚಹರೆಯೂ ಕೂಡ ಕಂಡು ಬರುತ್ತದೆ. ಅಲ್ಲಿನ ಕೆಳಜಾತಿ ಪಾತ್ರಗಳು ಹೋಟೆಲ್ ಒಳಗೆ ಹೋಗುವುದನ್ನು ನಿಷೇಧಿಸಲಾಗಿದೆ. ಆದರೂ ಬಸವರಾಜು ಎನ್ನುವ ಕೆಳಜಾತಿ ಪಾತ್ರ ಪ್ರತಿಭಟಿಸಿ ಒಳಗೆ ಪ್ರವೇಶಿಸುತ್ತದೆ. ಇದು ಮೇಲ್ಜಾತಿಯವರು ಕೆಳಜಾತಿ ವ್ಯಕ್ತಿಗಳು ತಮ್ಮ ಎದುರಿಗೆ ಕಾಲುಮೇಲೆ ಕಾಲು ಹಾಕಿಕೊಂಡು ಕುಳಿತುಕೊಳ್ಳಬಾರದು ಎಂದು ಹೇರಿದ ಸಾಮಾಜಿಕ ನಿಯಮವಾಗಿದೆ. ಆದ್ದರಿಂದ ಆ ಊರಿನ ಗೌಡ ಕೆಳಜಾತಿ ಯಜಮಾನರುಗಳನ್ನು ಕರೆಸಿ ಬುದ್ಧಿ ಹೇಳುತ್ತಿದ್ದಾನೆ. ಅದಕ್ಕೆ ಕೆಳಜಾತಿಯ ಯಜಮಾನರುಗಳು ಕ್ಷಮಾಪಣೆ ಕೇಳುವ ರೀತಿಯಲ್ಲಿ ಗೌಡರಿಗೆ ಅಡ್ಡಬಿದ್ದು ನಮಸ್ಕರಿಸುತ್ತಾರೆ. ಈ ರೀತಿಯ ಪದ್ಧತಿ ಆಚರಣೆಯಲ್ಲಿ ಇರಬೇಕೆಂದು ಮೇಲ್ಜಾತಿಯವರು ಇಲ್ಲಿ ಬಯಸುತ್ತಾರೆ ಎಂದು ಹೇಳಬಹುದು. ಕೆಳಜಾತಿಯ ಹಿರಿಯರು ಗೌಡನ ಕಾಲಿಗೆ ಬಿದ್ದು ಅವರ ಮನಸ್ಸಿನಲ್ಲಿರುವ ಕ್ಷಮಾಪಣಾ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಸಾಮಾಜಿಕ ಸಂದರ್ಭಗಳಲ್ಲಿ ಎದುರುಗೊಳ್ಳುವ ಸನ್ನಿವೇಶಗಳಲ್ಲಿ ಮೇಲ್ಜಾತಿ ಹಾಗೂ ಕೆಳಜಾತಿ ಪಾತ್ರಗಳ ನಡುವೆ ನಡೆಯುವ ಆಂಗಿಕ ಭಾಷೆಯ ಮೂಲಕ ತಮ್ಮ ಅಭಿವ್ಯಕ್ತಿಯನ್ನು ಸೂಚಿಸಿರುವ ಚಹರೆಗಳು ಕಾದಂಬರಿಗಳಲ್ಲಿ ಕಂಡುಬರುತ್ತವೆ.

ಕನ್ನಡದ ಚಲನಚಿತ್ರಗಳಲ್ಲಿಯೂ ಸಹ ಆಂಗಿಕ ಭಾಷೆಯಲ್ಲಿ ಸಾಮಾಜಿಕ ಚಹರೆಗಳನ್ನು ಕಾಣಬಹುದಾಗಿದೆ. ಕೆಲವು ಕನ್ನಡ ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಆಂಗಿಕ ಭಾಷೆಯಲ್ಲಿ ಸಾಮಾಜಿಕ ಚಹರೆಗಳನ್ನು ಚರ್ಚಿಸಲಾಗಿದೆ. ಶಿವರಾಮ ಕಾರಾಂತರ ಕಾದಂಬರಿ ಆಧಾರಿತ, ಕಾರಂತ ಬಿ.ವಿ. ಅವರು ನಿರ್ದೇಶಿಸಿರುವ 'ಚೋಮನ ದುಡಿ' ಚಲನಚಿತ್ರದಲ್ಲಿ ಮೇಲ್ಜಾತಿಯ ಸಂಕಪ್ಪಯ್ಯ, ಕೆಳಜಾತಿಯ ಚೋಮನ ನಡುವಿನ ಸಂಭಾಷಣೆಯಲ್ಲಿ ಆಂಗಿಕಾಭಿವ್ಯಕ್ತಿಯನ್ನು ನೋಡಬಹುದು.

"ಸಂಕಪ್ಪಯ್ಯ: ಏನು ಇವತ್ತು ಚೋಮನ ಸವಾರಿ ಬಿರುಮನ ಅಂಗಡಿಗೆ ಹೋಗಲಿಲ್ಲವೋ, ಹೌದು ಚೋಮ, ನಿನ್ನ ಎತ್ತುಗಳನ್ನು ದೇವರಿಗೆ ಬಿಟ್ಟಿದ್ದಿಯೇನೋ ಬೇಕಾದ್ರೆ ನಗದು ದುಡ್ಡು ತಗೋ, ಎಷ್ಟು ಅಂತ ಹೇಳು.

ಚೋಮ: "ತಲೇ ಮೇಲಿನ ಅಡಿಕೆ ಟೋಪಿ ತೆಗೆದುಕೊಂಡು ಕೈಯಲ್ಲಿ ಹಿಡಿದು ಕೆಳಗೆ ಕುಳಿತುಕೊಳ್ಳುತ್ತಾ" "ಒಡೆಯ ನನ್ದೊಂದು ಭ್ರಮೆ ಕಳ್ದು ವರ್ಸವು ಬೇಡ್ಕೊಂಡಿದ್ದೆ ಈ ವರ್ಸವು ಬೇಡಿಕೊಳ್ಳುತ್ತಿದ್ದೀನಿ ಧಣಿಗಳು ನಡ್ಸಿಕೊಟ್ರೆ" (ಚಲನಚಿತ್ರ: ಚೋಮನ ದುಡಿ)

ಈ ಮೇಲಿನ ಸಂಭಾಷಣೆಯಲ್ಲಿ ಆಂಗಿಕ ಭಾಷೆಯನ್ನು ಗಮನಿಸಬಹುದು. ಚೋಮ ಅವರ ಧಣಿಗಳ ಜೊತೆಗೆ ಮಾತನಾಡುವಾಗ ತಾನು ಧರಿಸಿದ್ದ ತಲೆಯ ಮೇಲಿನ ಟೋಪಿಯನ್ನು ತೆಗೆದುಕೊಂಡು ಕೈಯಲ್ಲಿಡಿದುಕೊಳ್ಳುತ್ತಾನೆ. ಆನಂತರ ಕೆಳಗೆ ಕುಳಿತುಕೊಂಡು ತನಗೆ ಗೇಣಿಗೆ ಭೂಮಿಬೇಕೆಂದು ಮೆಲುಧ್ವನಿಯಲ್ಲಿ ಬೇಡಿಕೊಳ್ಳುತ್ತಾನೆ. ಒಡೆಯರಿಗೆ ಗೌರವ ನೀಡುವ ಸಲುವಾಗಿ ತಲೆಯ ಮೇಲಿನ ಟೋಪಿಯನ್ನು ತೆಗೆದು ಮಾತನಾಡಿಸುತ್ತಾನೆ. ಈ ಆಂಗಿಕ ಚಲನೆಯಿಂದಲೂ ಸಹ ಸಾಮಾಜಿಕ ಚಹರೆಯನ್ನು ಕಾಣಬಹುದು.

ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿ ಆಧಾರಿತ, ಗಿರೀಶ ಕಾರ್ನಾಡ ಅವರ ನಿರ್ದೇಶನದ 'ಕಾಡು' ಚಲನಚಿತ್ರದಲ್ಲಿ ಮೇಲ್ಜಾತಿ ಪಾತ್ರದ ಜೊತೆ ಕೆಳಜಾತಿ ಪಾತ್ರ ಮಾತನಾಡುವ ಸಂದರ್ಭದಲ್ಲಿ ಆಂಗಿಕ ಭಾಷೆಯನ್ನು ಗಮನಿಸಬಹುದು. ಉದಾಹರಣೆ ಈ ಕೆಳಗಿನಂತಿದೆ.

"ಚಂದ್ರೇಗೌಡ: ಲೋಂಪಿ, ಚಾಮ

ಚಾಮ: (ಹೆಗಲ ಮೇಲಿದ್ದ ಟವಲನ್ನು ತೆಗೆದು, ಬಗಲಲ್ಲಿಟ್ಟುಕೊಂಡು ಮಾತನಾಡುತ್ತಾನೆ.) ಈಗ ತಾನೆ ಕೆರೆಕೋಡಿ ತಮ್ಮಣ್ಣ ಸಿಕ್ಕಿ ಹೇಳ್ದ ಮೊನ್ನೆ ತಾನೆ ವಡ್ರು ಗುಡಿಗೆ ಹೋಗಿದ್ನಂತೆ ಗದ್ದೆಗೆ ಆನೆ ಹಿಂಡು ಬಂದು ಬಿಟ್ಟವಂತೆ ಸೂಳೆಕೆರಿ ಹೊನ್ನೆಲ್ಲ ಲೂಟಿ ಮಾಡಿವಂತೆ. ಏನೋ ಈ ಸಲ ಫಸಲು ಚನ್ನಾಗಿ ಬಂತು ಅಂತ ಅಂದ್ಕೊಂಡಿದ್ರೆ ಆನೆ ಹಿಂಡು ಬಂದು ಎಲ್ಲಾ ಹಾಳುಮಾಡಿಬಿಟ್ಟವೆ?.(ಚಲನಚಿತ್ರ: ಕಾಡು)

ಈ ಚಲನಚಿತ್ರದಲ್ಲಿ ಚಂದ್ರೇಗೌಡನ ಹತ್ತಿರ ಚಾಮ ಮಾತನಾಡುವಾಗ ತನ್ನ ಹೆಗಲ ಮೇಲಿದ್ದ ಟವಲನ್ನು ತೆಗೆದುಕೊಂಡು ಬಗಲಲ್ಲಿ ಇಟ್ಟುಕೊಂಡು ಮಾತನಾಡುತ್ತಾನೆ. ಇದು ತನ್ನ ಒಡೆಯನಿಗೆ ತೋರಿಸುವ ಗೌರವದ ಸೂಚನೆಯಾಗಿದೆ. ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಕೆಳಜಾತಿ ಪಾತ್ರಗಳಲ್ಲಿ ಈ ಆಂಗಿಕ ಪ್ರಕ್ರಿಯೆ ನಡೆಯುತ್ತಿರುತ್ತದೆ. ಮೇಲ್ಜಾತಿ ಪಾತ್ರಗಳ ಜೊತೆ ಮಾತನಾಡುವಾಗ ಹೆಗಲಮೇಲೆ ಟವಲ್ ತೆಗೆದು ಕೈಯಲ್ಲಿಟ್ಟುಕೊಳ್ಳುವುದು ಅಥವಾ ಬಗಲಲ್ಲಿಟ್ಟುಕೊಳ್ಳುವುದು, ಪಂಚೆ ಮೇಲಕ್ಕೆ ಕಟ್ಟಿದ್ದರೆ ಕೆಳಗೆ ಬಿಡುವುದು. ಕುಳಿತಿದ್ದರೆ ಮೇಲಕ್ಕೆ ಎದ್ದು ನಿಲ್ಲುವ ಕ್ರಿಯೆಗಳ ಮೂಲಕ ಗೌರವವನ್ನು ಕೆಳಜಾತಿ ಪಾತ್ರಗಳು ಆಂಗಿಕ ಅಭಿನಯದ ಮೂಲಕ ನೀಡುತ್ತಾರೆ ಎಂದು ಹೇಳಬಹುದು. ಆದರೆ ಕೆಳಜಾತಿ ಪಾತ್ರಗಳಿಗೆ ಮೇಲ್ಜಾತಿ ಪಾತ್ರಗಳು ಈ ರೀತಿಯಾಗಿ ಗೌರವವನ್ನು ನೀಡುವುದು ಕಂಡುಬರುವುದಿಲ್ಲ.

ಪುಟ್ಟಣ್ಣ ಕಣಗಾಲ್, ಎಸ್.ಆರ್. ನಿರ್ದೇಶನದ 'ಪಡುವಾರಹಳ್ಳಿ ಪಾಂಡವರು' ಎಂಬ ಚಲನಚಿತ್ರದಲ್ಲಿ ಮೇಲ್ಜಾತಿಯ ಪಾತ್ರಕ್ಕೆ ಕೈಮುಗಿಯುವ, ಕೈಕಟ್ಟಿ ನಿಲ್ಲುವ ಕೆಳಜಾತಿ ಪಾತ್ರಗಳು ಇವೆ. ಜೊತೆಗೆ ತಿರುಗಿಬಿದ್ದು, ಪ್ರತಿಭಟಿಸಿರುವ ಆಂಗಿಕ ಅಭಿವ್ಯಕ್ತಿಯನ್ನು ಕಾಣಬಹುದು. ಈ

ರೀತಿಯ ಕೆಲವು ಉದಾಹರಣೆಗಳನ್ನು ಈ ಚಲನಚಿತ್ರದಲ್ಲಿ ನೋಡಬಹುದು. ಉದಾಹರಣೆಗೆ ಸಾಹುಕಾರ ಸಂಗಪ್ಪ ಮತ್ತು ಮಾಚ, ಕೆಂಚ ಮಾತನಾಡುವ ಸಂದರ್ಭದಲ್ಲಿ ಆಂಗಿಕಾಭಿವ್ಯಕ್ತಿಯನ್ನು ಗಮನಿಸಬಹುದು.

"ಮಾಚ: ಸಾವುಕಾರ್ರೇ...ಎಂದು ಬಗ್ಗಿ ನಮಸ್ಕರಿಸುತ್ತಾನೆ.

ಸಾಹುಕಾರ ಸಂಗಪ್ಪ: ಏಲ್ಲಾ ಬಂದ್ರಿ...

ಮಾಚ: ನಮ್ಮ ಅಕ್ಕನ ಗತಿ ಏನು? ಸಾವುಕಾರ್ರೇ..(ವಿನಯದಿಂದ ಬೇಡಿಕೊಳ್ಳುತ್ತಾನೆ)

ಸಾಹುಕಾರ ಸಂಗಪ್ಪ: ನನ್ನ ಏನ್ಲ ಕೇಳ್ತಿರೋ

ಕೆಂಚ: ಅಂಗಂದ್ರೆ ಎಂಗೆ ಸಾವುಕಾರ್ರೇ...

ಮಾಚ: ಅವ್ಳು ಒಟ್ಟೆಯಲ್ಲಿರೋ ಕೂಸು ನಿಮ್ಮದಲ್ಲುವ್ರ

ಸಾಹುಕಾರ ಸಂಗಪ್ಪ: ಯಾವ್ ನನ್ ಮಗನೋ ಹಂಗ್ ಹೇಳಿದ್ದು, ಊರು ಮುಂದ್ಲು ಹಾದಿ ಅಂದ ಮ್ಯಾಲೆ ಊರವರೆಲ್ಲ ತಿರುಗಾಡಿರುತ್ತಾರೆ. ಹಂಗೆ ನಾನು ತಿರುಗಾಡಿರುಬೋದು ಹಾದಿಯಲ್ಲಿರೋ ಹೆಜ್ಜೆ ಗುರುತ್ತುಪೂರ ನಿಮ್ದೆ ಅಂದ್ರೆ, ಯಾರಾರು ಒಪ್ತಾರ. ಇಡುಕೊಂಡು ಹೊದಿತ್ತಾರೆ, ಹೋಗ್ರೋ...ಹೋಗ್ರೋ...

ಮಾಚ: ಸಾವವುಕಾರ್ರೇ...ಬಂದು ಮುಖವನ್ನು ಕೆಂಪಗೆ ಮಾಡಿ, ಕೋಪದಿಂದ ಹೇಳೂತ್ತಾನೆ."(ಚಲನಚಿತ್ರ: ಪಡುವಾರಹಳ್ಳಿ ಪಾಂಡವರು)

ಈ ಮೇಲಿನ ಸಂಭಾಷಣೆಯಲ್ಲಿ ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳು ಮಾತನಾಡುವ ಸಂದರ್ಭದಲ್ಲಿ ಆಂಗಿಕ ಭಾಷೆಯನ್ನು ಗಮನಿಸಬಹುದು. ಕೆಳಜಾತಿ ವ್ಯಕ್ತಿ ಮಾಚನ ಅಕ್ಕಳಾದ ಸುಂದ್ರಿಯನ್ನು ಸಾಹುಕಾರ ಸಂಗಪ್ಪ ಕೂಡಾವಳಿ ಮಾಡಿಕೊಳ್ಳುತ್ತೇನೆ ಎಂದು ನಂಬಿಸಿ ಮೋಸ ಮಾಡಿರುತ್ತಾನೆ. ಆದ್ದರಿಂದ ಸಾಹುಕಾರ ಸಂಗಪ್ಪನ ಮನೆ ಹತ್ತಿರ ನ್ಯಾಯ ಕೇಳಲು ಬಂದಾಗ ನಡೆಯುವಂತ ಸಂಭಾಷಣೆ ಇದು. ಆರಂಭದಲ್ಲಿ ಮಾಚ ಸಂಕೋಚ ಮತ್ತು ಭಯದಿಂದ ಬಂದು ಸಾವುಕಾರ್ರೇ.....ಎಂದು ವಿನಯದಿಂದ ಬಗ್ಗಿ ನಮಸ್ಕರಿಸುತ್ತಾನೆ. ಮೇಲ್ಜಾತಿ ವ್ಯಕ್ತಿಗಳಿಗೆ ಕೆಳಜಾತಿ ವ್ಯಕ್ತಿಗಳು ಸೊಂಟ ಬಗ್ಗಿಸಿ ನಮಸ್ಕರಿಸಬೇಕು ಎಂಬ ನಿಯಮಕ್ಕೆ ಇದು ಬದ್ಧವಾಗಿದೆ. ತಾನು ಕೇಳಬೇಕು ಎಂದು ಬಂದಿರುವ ವಿಷಯವನ್ನು ಹೇಳಲೋ ಬೇಡವೋ ಎಂಬ ದ್ವಂದ್ವ ಮನಸ್ಸಿನಿಂದ ಇರುವ ಆಂಗಿಕ ಅಭಿವ್ಯಕ್ತಿಯನ್ನು ಗಮನಿಸಬಹುದು. ನಮ್ಮ ಅಕ್ಕನ ಗತಿ ಏನು? ಸಾಹುಕಾರ್ರೇ ಎಂದು ವಿನಯದಿಂದ, ಬೇಡಿಕೊಳ್ಳುವ ಧ್ವನಿಯಲ್ಲಿ ಕೇಳುತ್ತಾನೆ. ಸಂಗಪ್ಪ ಸುಂದ್ರಿಯ ನಡತೆ ಬಗ್ಗೆ ಕೆಟ್ಟದಾಗಿ ಮಾತನಾಡಿದಾಗ ಮಾಚ ಸಾವುಕಾರ್ರೇ......ಎಂದು ತನ್ನ ಕೋಪವನ್ನು ಅಭಿವ್ಯಕ್ತಿಸುತ್ತಾನೆ.

ಸುಂದ್ರಿಯ ವಿಚಾರವಾಗಿಯೇ ಶಂಕರ, ರಾಮಣ್ಣ, ಮಾದ, ಕೆಂಚ ಇವರೆಲ್ಲ ಊರಿನ ಮಠಾಧೀಶರ ಹತ್ತಿರ ಸಾವುಕಾರ ಸಂಗಪ್ಪನ ವಿರುದ್ಧ ದೂರು ನೀಡಿದಾಗ, ಸಾಹುಕಾರ ಸಂಗಪ್ಪ ಬಂದ ತಕ್ಷಣ ಮಠದ ಹತ್ತಿರ ಸೇರಿರುವ ಶಂಕರ, ರಾಮಣ್ಣ, ಮಾಚ, ಕೆಂಚ, ಸುಂದ್ರಿ ಇವರಲ್ಲಿ ಕೆಳಜಾತಿಯವರಾದ ಮಾಚ, ಕೆಂಚ, ಸುಂದ್ರಿ ಇವರು ಮಾತ್ರ ಮೇಲೆದ್ದು ನಿಲ್ಲುತ್ತಾರೆ. ಮೇಲ್ಜಾತಿಯವರಾದ ಶಂಕರ ಮತ್ತು ರಾಮಣ್ಣ ಅಲ್ಲೇ ಕುಳಿತುಕೊಳ್ಳುತ್ತಾರೆ. ರಾಮಣ್ಣ ಹೇಯ್ ಕೂತುಕೊಳ್ರೋ ಕೂತುಕೊಳ್ಳಿ ಎಂದು ಮಾಚ, ಕೆಂಚನಿಗೆ ಹೇಳುತ್ತಾನೆ. ಹಾಗೆಯೇ ಸುಂದ್ರಿಗೂ ಹೇಯ್ ಸುಂದ್ರಕ್ಕ ನೀನ್ಯಾಕೆ ನಿಂತುಕೊಂಡಿದಿಯಾ ಕೂತ್ಕೊ ಎಂದು ಬಲವಂತವಾಗಿ ಕೂರಿಸುತ್ತಾನೆ. ಇಲ್ಲಿ ಸಾಹುಕಾರ ಸಂಗಪ್ಪ ಕೆಳಜಾತಿ ಪಾತ್ರಗಳಿಗೆ ಅನ್ಯಾಯ ಮಾಡಿದ್ದರೂ ಸಹ ಸಾಹುಕಾರ ಬಂದ ತಕ್ಷಣ ಎದ್ದುನಿಂತು ಗೌರವ ನೀಡುತ್ತಾರೆ. ಇದು ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಪೂರ್ವಕವಾಗಿಯೋ ಕೆಲಸ ಮಾಡುತ್ತದೆಯೋ ತಿಳಿಯುವುದಿಲ್ಲ. ಸಾಹುಕಾರ ಬಂದ ಕೂಡಲೇ ಎದ್ದು ನಿಲ್ಲುತ್ತಾರೆ. ಆದರೆ ಮೇಲ್ಜಾತಿ ಪಾತ್ರಗಳು ಎದ್ದು ನಿಲ್ಲುವುದಿಲ್ಲ. ಮೇಲ್ಜಾತಿಯ ಶಂಕರ ಮತ್ತು ರಾಮಣ್ಣ ಶಿಕ್ಷಣ ಪಡೆದ ಪಾತ್ರಗಳಾಗಿವೆ. ಸುಂದ್ರಿ, ಮಾಚ, ಕೆಂಚರನ್ನು ಬಲವಂತವಾಗಿ ಕೂರಿಸುತ್ತಾರೆ. ಆದರೂ ಆ ಕೆಳಜಾತಿ ಪಾತ್ರಗಳಿಗೆ ಮನಸ್ಸಿನಲ್ಲಿ ತಳಮಳ ಉಂಟಾಗಿರುತ್ತದೆ.

ಸಾಹುಕಾರ ಒಡೆಯರ ಎದುರಿಗೆ ಆಳುಗಳು ಅಥವಾ ಕೆಳಜಾತಿಯವರು ಕುಳಿತುಕೊಳ್ಳುವುದು ಅಪರಾಧ ಎಂಬ ಭಾವನೆ ಕೆಳಜಾತಿ ಪಾತ್ರಗಳಲ್ಲಿ ಮೂಢಿಸಲಾಗಿರುತ್ತದೆ. ಇದು ಅವರ ಮನಸ್ಸಿನಲ್ಲಿ ಅಪ್ರಜ್ಞಪೂರ್ವಕವಾಗಿಯೂ ಕೆಲಸ ಮಾಡುತ್ತಿರುತ್ತದೆ. ಈ ಉದಾಹರಣೆಯ ಮೂಲಕ ಆಂಗಿಕ ಭಾಷೆಯಲ್ಲಿನ ಸಾಮಾಜಿಕ ಚಹರೆಗಳನ್ನು ಗುರುತಿಸಬಹುದಾಗಿದೆ.

ಅಶ್ವತ್ಥ ಅವರ ಕಾದಂಬರಿ ಆಧಾರಿತ, ದೊರೆ-ಭಗವಾನ್ ಅವರ ನಿರ್ದೇಶನದ ಮುನಿಯನ ಮಾದರಿ' ಚಲನಚಿತ್ರದಲ್ಲಿ ಕೆಳಜಾತಿ ಪಾತ್ರಗಳ ಆಂಗಿಕ ಭಾಷೆಗೆ ಸಂಬಂಧಿಸಿದ ಉದಾಹರಣೆಗಳನ್ನು ನೋಡಬಹುದು.

"ಗೌಡ ಕುರ್ಚಿ ಮೇಲೆ ಕುಳಿತು ಆಳಿನ ಕೈಯಲ್ಲಿ ಕಾಲು ಒತ್ತಿಸಿಕೊಳ್ಳುತ್ತಿರುತ್ತಾನೆ. ಎಲೆ ಅಡಿಕೆ ಹಾಕಿಕೊಳ್ಳುತ್ತ ಕುಳಿತಿರುತ್ತಾನೆ. ಆಗ ಮುನಿಯ ಬಂದು ಕೈಮುಗಿದು ನಿಲ್ಲುತ್ತಾನೆ.

ಕೊಡ್ಡೇಗೌಡ: ಲೇ ಮುನಿಯ ಯಾಕೋ ಇಲ್ಲಿ ಬಂದು ನಿಂತ್ಕೊಂಡೆ, ಮಾಡಕೆ ಏನು ಕೆಲ್ಸ ಇಲ್ವ ನಿನ್ಗೆ.

ಮುನಿಯ: (ಬೇಡುವ ಧ್ವನಿಯಲ್ಲಿ ಕೈಮುಗಿದು ನಿಂತ್ಕೊಂಡು) ಧಣಿ ಅಪ್ಪನಿಗೆ ತುಂಬಾ ಕಾಯಿಲೆ ಅಂತೆ ಅದ್ಕೆ ನಿಮ್ಮುನ್ನ ಸ್ವಲ್ಪ ಕೇಳ್ಕೊಂಡು ಹೋಗೋಣ ಅಂತ ಬಂದೆ" (ಚಲನಚಿತ್ರ: ಮುನಿಯನ ಮಾದರಿ)

ಈ ಮೇಲಿನ ಸಂಭಾಷಣೆಯಲ್ಲಿ ಆಂಗಿಕ ಭಾಷೆ ಇರುವುದನ್ನು ಗಮನಿಸಬಹುದು. ಗೌಡ ಕುರ್ಚಿಯ ಮೇಲೆ ಆಯಾಗಿ ಕುಳಿತು ಆಳಿನ ಹತ್ತಿರ ಕೈಕಾಲು ಒತ್ತಿಸಿಕೊಳ್ಳುತ್ತಿದ್ದಾನೆ. ಆ ಮನೆಯ ಜೀತದಾಳು ಮುನಿಯ ಬಂದು ಧಣಿಗಳಿಗೆ ಕೈಮುಗಿದು ನಿಲ್ಲುತ್ತಾನೆ. ತನ್ನ ತಂದೆಗೆ ತುಂಬಾ ಕಾಯಿಲೆ ಆಗಿದೆ ಆಸ್ಪತ್ರೆಗೆ ಹೋಗಬೇಕಾದ ಸಂದರ್ಭ ಬಂದರೂ ಕೇಳಲೋ ಬೇಡವೋ ಎಂಬ ದ್ವಂದ್ವ ಮನಸ್ಸಿನಿಂದ, ಭಯದಿಂದ ಕೇಳುತ್ತಾನೆ. ಬೇಡುವ ಧ್ವನಿಯಲ್ಲಿಯೇ ಕೈಮುಗಿದು ಕೇಳುತ್ತಾನೆ. ಮುನಿಯ ಅವರ ಮನೆಯ ಜೀತದಾಳು ಆಗಿರುವುದರಿಂದ, ಅವರ ಒಡೆತನದಲ್ಲಿರುವುದರಿಂದ ಒಡೆಯನ ಮುಂದೆ ಕೈಮುಗಿದು ಬಾಗಿ ನಿಂತುಕೊಂಡು ಗೌರವಿಸಬೇಕಾಗಿದೆ. ಗೌಡ ಮತ್ತು ಆಳಿನ ಆಂಗಿಕ ಚಲನೆಯಿಂದ ಸಾಮಾಜಿಕ ಚಹರೆಯನ್ನು ಗುರುತಿಸಬಹುದು.

ಶ್ರೀನಿವಾಸರಾವ್ ಕೊರಡ್ಕಲ್ ಅವರ 'ಧನಿಯರ ಸತ್ಯನಾರಾಯಣ' ಕಥೆಯಲ್ಲಿ ಮೇಲ್ಜಾತಿಯ ನಾಗಪ್ಪಯ್ಯ ಮತ್ತು ಕೆಳಜಾತಿಯ ತೌಡ ಮಾತನಾಡುವ ಸಂದರ್ಭದಲ್ಲಿ ಕೆಳಜಾತಿ ಪಾತ್ರದ ಆಂಗಿಕ ಭಾಷೆಯನ್ನು ಗಮನಿಸಬಹುದು. ಉದಾಹರಣೆಗೆ

"ತೌಡ ಆ ಗೇಣಿ ಬಾಕಿ ಎರಡು ರೂಪಾಯಿ ಯಾವಾಗ ಕೊಡುವದೋ?

ಅದೇನು ನಿನ್ನ ವರ್ಗದ ತೋಟವೆಂದು ತಿಳಿದೆಯಾ? ಎಂದು ಗುಡುಗುಡಿಸಿ ನುಡಿದರು ನಾಗಪ್ಪಯ್ಯ.

ತೌಡನು ಅವರ ಮೋರೆ ನೋಡದೆ ಕತ್ತು ತಗ್ಗಿಸಿಕೊಂಡು ದೀನತೆಯ ಬೀಳು ದನಿಯಲ್ಲಿ ಈ'ಮಳೆಗಾಲ ಸಾಗಲಿ! ಕಬ್ಬು ಹೂಡುವ ಆಲಿಯ ಕಾಲದಲ್ಲಿ ಹೇಗಾದರೂ ದುಡಿದು ಉಳಿಸಿ ತೀರಿಸುತ್ತೇನೆ' ಎಂದ.

ಯಾವಾಗ 'ಕೇಳಿದರೂ ಇಂದಿಲ್ಲ ಮುಂದೆ ಎಂದೆನ್ನುವ ನಿನ್ನ ರೋಗ ಇದ್ದೇ ಇದೆ! ಆಗಲಿ ಆಲಿಯ ಕಾಲದವರೆಗೂ ಕಾದು ಬಿಡುತ್ತೇನೆ ಎಂದು ಸಮಾಧಾನಕ್ಕೆ ಬಂದು ಆಗ ತೋಟದ ಕಡೆಯಿಂದ ಬರುತ್ತಿದ್ದಾಗ ಆ ಬಾಳೆಯ ಗೊನೆಯನ್ನು ನೋಡಿದ. ನಾಡದು ಹುಣ್ಣಿಮೆ ನಮ್ಮಲ್ಲೊಂದು ಸತ್ಯನಾರಾಯಣ ಪೂಜೆ ಇದೆ. ನಾಳೆಯೇ ಕಡಿದಿಟ್ಟರೆ ಅಂದಿಗೆ ಹಣ್ಣಾದೀತು, ಹುಣ್ಣಿಮೆಯ ಬೆಳಿಗ್ಗೆ ತಂದುಕೊಟ್ಟುಬಿಡು! ತಿಳಿಯಿತೆ! ಎಂದರು.

'ಏನು ಹೇಳಿದ್ದು ಕೇಳಿತೆ? ಎಂದರು ತುಸು ಬಿರುಸಿನ ದನಿಯಲ್ಲಿ ನುಡಿದರು.

'ತೌಡ ಅಂಜುತ್ತಂಜುತ್ತ ನಾಲಿಗೆ ತಡವರಿಸುತ್ತಾ ಮಕ್ಕಳು ಬಹಳ ಆಸೆಯಿಂದ ಬೆಳೆಸಿದ್ದು, ಕೆಳಗಿನ ಒಂದೆರಡು ಸಣ್ಣ ಹಣಿಗೆಯಾದರೂ ಆ ಮಕ್ಕಳಿಗೆ...ಎನ್ನುವಷ್ಟರಲ್ಲಿಯೇ ಧನಿಯರು"(ಪಕೀರ್ ಮಹಮದ್ ಕಟ್ಪಾಡಿ ಕೃಷ್ಣಮೂರ್ತಿ ಹನೂರು (ಸಂ) ಕನ್ನಡದ ಮೂವತ್ತು ಕಥೆಗಳು, ಪುಟ–೩೦)

ಈ ಮೇಲಿನ ಕಥೆಯಲ್ಲಿನ ಸಂಭಾಷಣೆಯನ್ನು ಗಮನಿಸಿದಾಗ ಕೆಳಜಾತಿ ಪಾತ್ರದ ಆಂಗಿಕ ಭಾಷೆಯನ್ನು ನೋಡಿದಾಗ ಆ ಪಾತ್ರದ ಸಾಮಾಜಿಕ ಚಹರೆ ತಿಳಿಯುತ್ತದೆ. ತೌಡ ಗೇಣಿ ಬಾಕಿಯನ್ನು ನಾಗಪ್ಪಯ್ಯನಿಗೆ ಕೊಡುವುದಕ್ಕೆ ಆಗದೆ ಅಸಾಹಾಯಕನಾಗಿ ನಿಂತಿದ್ದಾನೆ. ಆದ್ದರಿಂದಲೇ ತೌಡನು ನಾಗಪ್ಪಯ್ಯನ ಮುಖವನ್ನು ನೋಡುವುದಕ್ಕೆ ಆಗದೆ ಕುತ್ತಿಗೆಯನ್ನು ತಗ್ಗಿಸಿಕೊಂಡು ಧೀನತೆಯ ಧ್ವನಿಯಲ್ಲಿ ಮಾತನಾಡುತ್ತಿದ್ದಾನೆ. ಆನಂತರ ತೌಡನ ಮಕ್ಕಳು ಬೆಳೆಸಿದ ಬಾಳೆಯ ಗೊನೆಯನ್ನು ಗೌಡರು ಕೇಳಿದಾಗ ತೌಡನ ಬಾಯಲ್ಲಿ ಮಾತುಗಳೆ ಹೊರಡುತ್ತಿಲ್ಲ. ಅವನ ಮಕ್ಕಳು ತುಂಬಾ ಆಸೆಯಿಂದ ಬೆಳೆಸಿದ ಬಾಳೆಗೊನೆಯನ್ನು ನಾಪ್ಪಯ್ಯನವರು ಕೇಳಿದಾಗ ತೌಡನು ಅಂಜುತ್ತಾಂಜುತ್ತ ಮಾತನಾಡಲು ಹೋಗುತ್ತಿದ್ದಾನೆ, ನಾಲಿಗೆಯನ್ನು ತಡವರಿಸುತ್ತ, ಮಕ್ಕಳು ಬಹಳ ಆಸೆಯಿಂದ ಬೆಳಸಿದ್ದು, ಕೆಳಗಿನ ಒಂದೆರಡು ಹಸಿಯಾದರೂ ಆ ಮಕ್ಕಳಿಗೆ....ಎಂದು ಕೇಳಲೋ ಬೇಡವೋ ಎಂಬ ಭಯ ಮತ್ತು ಅಂಜಿಕೆಯಿಂದ ಹೇಳುತ್ತಾನೆ. ಅದು ತನ್ನ ಸ್ವತ್ತಾದರೂ ಸಹ ಇಲ್ಲ ಕೊಡಲಾಗುವುದಿಲ್ಲ ಎಂದು ತೌಡನಿಗೆ ಹೇಳಲು ಸಾಧ್ಯವಾಗುವುದಿಲ್ಲ. ಹೇಳುವುದಕ್ಕೆ ಭಯಪಡುತ್ತಾನೆ. ಧಣಿಯ ಹಂಗಿನಲ್ಲಿರುವುದರಿಂದ ಅವರಿಗೂ ಕೊಡಬೇಕಾದ ಬಾಕಿ ಕೊಡದೆ ಇರುವುದರಿಂದ ಮತ್ತು ತನ್ನ ಒಡೆಯನಾಗಿರುವುದರಿಂದ ನಾಗಪ್ಪಯ್ಯನ ಹತ್ತಿರ ಧೈರ್ಯವಾಗಿ ಮಾತನಾಡಲು ಸಾಧ್ಯವಾಗಲಿಲ್ಲ ಎಂದು ಹೇಳಬಹುದು. ಇಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆಗಳು ಈ ಆಂಗಿಕ ಭಾಷೆಯಲ್ಲಿ ಕಂಡುಬರುತ್ತವೆ.

ಲಲಿತಾನಾಯಕ್ ಬಿ.ಟಿ. ಅವರ 'ಹಬ್ಬ ಮತ್ತು ಬಲಿ' ಎಂಬ ಕಥೆಯಲ್ಲಿ ಆಂಗಿಕ ಭಾಷೆಗೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೋಡಬಹುದು. ಕೆಳಜಾತಿಯ ಸಣ್ಣು ಮತ್ತು ಮೇಲ್ಜಾತಿಯ ಮಲ್ಲೇಶಪ್ಪ ಮಾತನಾಡುವ ಸಂದರ್ಭದಲ್ಲಿ ಆಂಗಿಕ ಭಾಷೆಯನ್ನು ನೋಡಬಹುದು.

"ಅಡ್ಡ ಬಿದ್ದೆ ಧಣಿ!

ಏನ್ಲಾ ಬಂದಿದ್ದು?

ಹಬ್ಬ ಬಂದೈತಲ್ಲಾ ಧಣಿ ಒಂದೆಲ್ಡು ನೂರು ರೂಪಾಯಿ ಕೈಗಡ ಕೇಳಾನಾಂತ ಬಂದೆ?. ಆರಡಿ ದೇಹವನ್ನು ಮೂರಡಿಗೆ ಕುಗ್ಗಿಸಿ ತಲೆಕೆರೆದುಕೊಳ್ಳುತ್ತಾ ನಿವೇದಿಸಿಕೊಂಡ ಸಣ್ಣು.(ಪಕೀರ್ ಮಹಮದ್ ಕಟ್ಪಾಡಿ ಕೃಷ್ಣಮೂರ್ತಿ ಹನೂರು (ಸಂ) ಕನ್ನಡದ ಮೂವತ್ತು ಕಥೆಗಳು, ಪುಟ, ೧೨೯)

ಈ ಮೇಲಿನ ಸಂಭಾಷಣೆಯ ಜೊತೆಗೆ ಕೆಳಜಾತಿ ಪಾತ್ರದ ಆಂಗಿಕ ಅಭಿನಯವನ್ನು ಗಮನಿಸಬಹುದು. ಒಡೆಯ ಅಥವಾ ಮೇಲ್ಜಾತಿ ವ್ಯಕ್ತಿಯ ಹತ್ತಿರ ಏನಾದರೂ ಕೇಳಲು ಹೋದಾಗ ಕೆಳಜಾತಿ ವ್ಯಕ್ತಿಗಳು ಕೈಮುಗಿದು, ತಮ್ಮ ದೇಹವನ್ನು ಕುಬ್ಜಗೊಳಿಸಿಕೊಂಡು ಮಾತನಾಡುತ್ತಾರೆ. ಇಲ್ಲಿಯೂ ಹಾಗೆ ಸಣ್ಣು ಎಂಬ ಕೆಳಜಾತಿ ವ್ಯಕ್ತಿ ಮಲ್ಲೇಶಪ್ಪ ಎಂಬ

ಮೇಲ್ಜಾತಿ ವ್ಯಕ್ತಿಯ ಜೊತೆ ಮಾತನಾಡುವಾಗ ತನ್ನ ಆರಡಿ ದೇಹವನ್ನು ಮೂರಡಿಗೆ ಕುಗ್ಗಿಸಿಕೊಂಡು, ತಲೆಯನ್ನು ಕೆರೆದುಕೊಳ್ಳುತ್ತಾ ಬೇಡಿಕೊಳ್ಳುತ್ತಾನೆ. ಧಣಿಗಳನ್ನು ಏನನ್ನಾದರೂ ಬೇಡುವಾಗ ಸಂಕೋಚದಿಂದ ಕೈಗಳಿಂದ ತಲೆಯನ್ನು ಕೆರೆದುಕೊಳ್ಳುವುದು ಅನೇಕ ದಲಿತ ಪಾತ್ರಗಳಲ್ಲಿ ಈ ರೀತಿಯ ಉದಾಹರಣೆಯನ್ನು ಗಮನಿಸಬಹುದು. ಇದು ಅವರ ಅಸಹಾಯಕತೆ, ಸಾಮಾಜಿಕತೆಯನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಭಾಸ್ಕರ ಟಿ.ಎಂ. ಅವರ 'ಭೂಮಿ' ಎಂಬ ನಾಟಕದಲ್ಲಿ ಕೆಳಜಾತಿ ಪಾತ್ರದ ಆಂಗಿಕ ಭಾಷೆಯನ್ನು ಗಮನಿಸಬಹುದು. ಕಲ್ಯಾ ಎಂಬ ವ್ಯಕ್ತಿ ಗೌಡರ ಹತ್ತಿರ ಮಾತನಾಡುವಾಗಿನ ಆಂಗಿಕ ಅಭಿವ್ಯಕ್ತಿಯನ್ನು ಗಮನಿಸಬಹುದು.

"ಕಲ್ಯಾ: (ಗೌಡರ ಮುಂದೆ ಕೈ ಕಟ್ಟಿಕೊಂಡು ಸಲಾಮು ಮಾಡುತ್ತ ನಿಂತು) ಎಪ್ಪಾ ಗೌಡ್ರೆ ನಮ್ಮೂರಾಚೆಗಿನ ಊರಾಗ, ನದ್ಯಾವ್ರು, ಮೆದ್ಯಾವ್ರು ಅದಾರಲ್ರಿ ಅವರ ಓಣಿಗೆ ಹೋಗಾಕ ಅಂತ ಜಾಥಾ ಹೊಂಟಾವ ಅಂತ್ರಿ.

ಗೌಡ: ಅದ್ಯಾವ ಜಾತಿಯೋ ಈ ನನ್ನ ಮಕ್ಕಳುದು"

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿ ವ್ಯಕ್ತಿ ಕಲ್ಯಾ ಗೌಡರನ್ನು ಮಾತನಾಡಿಸುವುದಕ್ಕೂ ಮುಂಚೆ ಕೈಕಟ್ಟಿಕೊಂಡು ಕೈಮುಗಿಯುತ್ತ ನಿಂತು ಮಾತನ್ನು ಮುಂದುವರೆಸುತ್ತಾನೆ. ಗೌಡರ ಹತ್ತಿರ ಮಾತನಾಡುವಾಗ ಕೈಕಟ್ಟಿಕೊಂಡು ಹೆಗಲಮೇಲೆ ಟವಲ್ ತೆಗೆದು ಕೈಯಲ್ಲಿಟ್ಟುಕೊಂಡು ಮಾತನಾಡುವುದು ಒಡೆಯರಿಗೆ ಗೌರವಕೊಡುವುದಾಗಿದೆ.

ಸಿದ್ದಲಿಂಗಯ್ಯ ಅವರ 'ಪಂಚಮ' ನಾಟಕದಲ್ಲಿ ಮೇಲ್ಜಾತಿಯ ಅಧಿಕಾರಿ ಪಾತ್ರ ಮತ್ತು ಕೆಳಜಾತಿ ಶಿಕ್ಷಣ ಪಡೆದ ಪಾತ್ರ ಮಾತನಾಡುವ ಸಂದರ್ಭದಲ್ಲಿ ಆಂಗಿಕ ಭಾಷೆಯನ್ನು ಗಮನಿಸಬಹುದು.

ಶೇಷಾದ್ರಿ: (ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಾನೆ)

ಹಯವದನರಾವ್: ಎಲ್ರೀ ಇಡೋದು? ಎಲ್ರಿಗೂ ಕಾಣೋ ಹಂಗೆ? ಎಜುಕೇಟೆಡ್ ಆಗಿದ್ದಿರಾ ಅಷ್ಟು ಗೊತ್ತಾಗಲ್ಲ. ಮನೆಗೆ ತಂದು ಕೊಡೋಕೆ ಏನಾಗಿತ್ತುರೀ...

ಶೇಷಾದ್ರಿ: (ಮೇಜಿನ ಮುಂದುಗಡೆ ಬಂದು ಭಕ್ತಿಯಿಂದ) ನಮಸ್ಕಾರ ಸಾ....

ಹಯವದನರಾವ್: ಕೂತ್ಕೊಳ್ರೀ..

ಶೇಷಾದ್ರಿ: ಪರವಾಗಿಲ್ಲ ಹಂಗೇನೇ ಇಂಟ್ರ್ಯೂ ಮಾಡಿ ಸಾ.(ನಮ್ರತೆ ಮತ್ತು ಅತಿ ವಿಧೇಯತೆಯನ್ನು ತೋರಿಸುವವನು)

ಹಯವದನರಾವ್: ರೀ ನೀವು ಕುತ್ಕೋಬೇಕು ಅನ್ನೋದು ಗೌರ್ನಮೆಂಟ್ ರೂಲ್ಸ್ ಕೂತ್ಕೋಳ್ರೀ.

ಶೇಷಾದ್ರಿ: ಅದ್ ಹೆಂಗ್ ಸಾ...ಇಂಥ ದೊಡ್ಡೋರ್ ಎದುರ್ ಬದುರ್ಗೆ ಕುಂತು ಮಾತಾಡೋದು.

ಹಯವದನರಾವ್: ರೀ ನೀವು ನಿಂತಿರೋದು, ನಾನು ಕುಂತಿರೋದು ಇಬ್ಬರಿಗೂ ಇಷ್ಟ ಇರಬಹುದು. ಆದ್ರೆ ಗೌರ್ನಮೆಂಟ್ ರೂಲ್ಸ್‌ಗೆ ಮೋಸ ಮಾಡಕ್ ಆಗಲ್ಲ. ಕೂತ್ಕೋಳ್ತಿರೋ ಇಲ್ಲಾ..." (ಚಂದ್ರಶೇಖರ ಪಾಟೀಲ್, ಮಾಲತಿ ಎಸ್, (ಸಂ), ಸುವರ್ಣನಾಟಕ (ಏಕಾಂತ) ಭಾಗ-೧, ಪುಟ, ೫೭೮-೫೭೯)

ಈ ಮೇಲಿನ ಸಂಭಾಷಣೆಯನ್ನು ಗಮನಸಿದಾಗ ಮೇಲ್ಜಾತಿಯ ಅಧಿಕಾರಿ ಪಾತ್ರ ಮತ್ತು ಕೆಳಜಾತಿ ಶಿಕ್ಷಣ ಪಡೆದ ಪಾತ್ರ ಇಬ್ಬರು ಸಹ ಆಧುನಿಕ ಶಿಕ್ಷಣ ಪಡೆದ ಪಾತ್ರಗಳಾಗಿವೆ. ಪದ್ಧತಿಯಂತೆ ದೊಡ್ಡವರಿಗೆ ಚಿಕ್ಕವರು ನಮಸ್ಕರಿಸುವುದು ಸಹಜವಾದದ್ದು. ಆದರೆ ಇಲ್ಲಿ ಶಿಕ್ಷಣ ಪಡೆದ ಶೇಷಾದ್ರಿ ಅಧಿಕಾರಿಗಳ ಮುಂದೆ ಹೋಗುವಾಗ ಭಕ್ತಿಯಿಂದ ಮತ್ತು ಭಯದಿಂದ ಕೈಮುಗಿದುಕೊಂಡು ಒಳಗೆ ಹೋಗುತ್ತಾನೆ. ಮೇಲ್ಜಾತಿ ವ್ಯಕ್ತಿ ಹಯವದನರಾವ್ ಸರ್ಕಾರದ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಕಛೇರಿಗೆ ಯಾರೇ ಬರಲಿ ಕೂತ್ಕೋಳ್ಳಿ ಎಂದು ಹೇಳುವುದು ಸರ್ಕಾರಿ ಅಧಿಕಾರಿಯಾಗಿ ಸಾರ್ವಜನಿಕರಿಗೆ ಕೊಡುವ ಗೌರವ. ಆದರೂ ಶೇಷಾದ್ರಿ ಪರವಾಗಿಲ್ಲ ಸಾರ್ ಎಂದು ಸಂಕೋಚಪಡುತ್ತಾನೆ. ಕೂತ್ಕೊಳ್ಳಿ ಎಂದು ಬಲವಂತ ಮಾಡಿದರೂ ಕುಳಿತುಕೊಳ್ಳುವುದಿಲ್ಲ. ಈ ಆಂಗಿಕ ಅಭಿವ್ಯಕ್ತಿಯಿಂದ ಅಧಿಕಾರಿಗಳಿಗೆ ಅತಿಯಾದ ವಿನಯ ಮತ್ತು ವಿಧೇಯತೆ ತೋರಿಸುತ್ತಿರುವುದು ಕಂಡುಬರುತ್ತದೆ. ಆದರೆ ಅಧಿಕಾರಿ ಒಂದು ಮಾತನ್ನು ಹೇಳುತ್ತಾನೆ. ನೀನು ನಿಂತಿರುವುದು ನಾನು ಕುಳಿತಿರುವುದು ಇಬ್ಬರಿಗೂ ಇಷ್ಟ ಇರಬಹುದು ಆದರೆ ನೀನು ಕುಳಿತುಕೊಳ್ಳಬೇಕು ಎನ್ನುವುದು ಗೌರ್ನಮೆಂಟ್ ರೂಲ್ಸ್ ಎಂಬ ಮಾತನ್ನು ಹೇಳುತ್ತಾನೆ. ಈ ಮಾತು ಏನನ್ನು ಸೂಚಿಸುತ್ತದೆ ಎಂದರೆ ಮೇಲ್ಜಾತಿ ವ್ಯಕ್ತಿ ಪಾರಂಪರಿಕ ಪದ್ಧತಿಯ ಯತಾಸ್ಥಿತಿಯ ಮನೋಧೋರಣೆಯನ್ನು ಸೂಚಿಸುತ್ತದೆ. ಕೆಳಜಾತಿ ವ್ಯಕ್ತಿಗಳು ನಿಂತುಕೊಂಡು ಕೈಮುಗಿದುಕೊಂಡು ಮೇಲ್ಜಾತಿ ವ್ಯಕ್ತಿಗಳ ಮುಂದೆ ನಿಲ್ಲಬೇಕು ಎಂಬ ಮನೋಧೋರಣೆಯನ್ನು ಇದು ಸೂಚಿಸುತ್ತದೆ ಎಂದು ಹೇಳಬಹುದು.

ಆಧುನಿಕ ಶಿಕ್ಷಣ ಪಡೆದಿದ್ದರೂ ಶೇಷಾದ್ರಿ ಪ್ರಜ್ಞಾಪೂರ್ವಕವಾಗಿಯೇ ಅಧಿಕಾರಿಗೆ ಅತಿಯಾದ ವಿನಯ ಮತ್ತು ವಿಧೇಯತೆಯನ್ನು ತೋರಿಸುತ್ತಾನೆ. ಇದು ಸಮಾಜದ ವಾಸ್ತವವನ್ನು ಪ್ರತಿಬಿಂಬಿಸುತ್ತದೆ. ಈ ಆಂಗಿಕ ಅಭಿವ್ಯಕ್ತಿಯ ಮೂಲಕವೂ ಸಹ ಸಾಮಾಜಿಕ ಚಹರೆಯನ್ನು ಕಾಣಬಹುದಾಗಿದೆ.

ಆಂಗಿಕ ಭಾಷೆಗೆ ಸಂಬಂಧಿಸಿದ ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ನೋಡಿದಾಗ ತಿಳಿಯುವುದೇನೆಂದರೆ ಕೆಳಜಾತಿ ಪಾತ್ರಗಳು ಗುಲಾಮರಾಗಿಯೇ ಇರಬೇಕು, ನಮ್ಮ ಮುಂದೆ

ಕೈಕಟ್ಟಿಕೊಂಡು ನಿಲ್ಲಬೇಕು, ಎದುರು ಮಾತನಾಡಬಾರದು ಎಂಬ ಮನಸ್ಥಿತಿ ಮೇಲ್ಜಾತಿ ಪಾತ್ರಗಳಲ್ಲಿ ಇರುವುದು ಕಾಣಬಹುದು. ಇದನ್ನು ಮೀರಿ ಮೇಲ್ಜಾತಿ ಪಾತ್ರಗಳಿಗೆ ಎದುರಾಗಿ ಮಾತನಾಡಿರುವ ಪಾತ್ರಗಳನ್ನು ಸಹ ಕಾಣಬಹುದು. ಹೆಚ್ಚಾಗಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಎದುರಿಗೆ ಸೊಂಟ ಬಾಗಿಸಿ, ಕೈಮುಗಿದುಕೊಂಡು, ತಲೆಕೆರೆದುಕೊಳ್ಳುತ್ತಾ ಮಾತನಾಡುವುದಕ್ಕೆ ಸಂಕೋಚ ಪಡುತ್ತಾ ಎದರುತ್ತ ಇರುವದನ್ನು ಕಾಣಬಹುದು. ಈ ರೀತಿಯಾಗಿ ಆಂಗಿಕ ಅಭಿವ್ಯಕ್ತಿಯ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಗಳು ಕಂಡುಬರುತ್ತವೆ.

೬.೧.೨. ಆಂಗಿಕ ಭಾಷೆ: ಮೇಲ್ಜಾತಿ ಪಾತ್ರಗಳು

ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಜೊತೆ ಮಾತನಾಡುವಾಗ ಮಾಡುವ ಚಲನೆಯನ್ನು ಗಮನಿಸಬಹುದು. ಆದೇಶಿಸುವ ರೀತಿಯಲ್ಲಿ, ಕೈ ಬೆರಳು ತೋರಿಸುವ, ಮೀಸೆ ತಿರುವಿ ಮಾತನಾಡುವ ಎದೆಯುಬ್ಬಿಸಿ ಗಾಂಭೀರ್ಯದಿಂದ ಇರುವ ಆಂಗಿಕ ಅಭಿವ್ಯಕ್ತಿಯನ್ನು ಕಾಣಬಹುದು. ಕೆಳಜಾತಿ ಪಾತ್ರಗಳಂತೆ ಅಂಜುವುದು, ಕೈಮುಗಿಯುವುದು, ಸೊಂಟ ಬಗ್ಗಿಸಿ ನಮಸ್ಕರಿಸುವ ಶೈಲಿಗಳು ಕಂಡುಬರುವುದಿಲ್ಲ ಎಂದು ಹೇಳಬಹುದು. ಅಧಿಕಾರಿಗಳ ಮುಂದೆ ಮಾತ್ರ ಈ ರೀತಿಯ ಆಂಗಿಕ ಚಲನೆಯನ್ನು ಮೇಲ್ಜಾತಿ ಪಾತ್ರಗಳು ಮಾಡುವುದನ್ನು ಕಾಣಬಹುದು.

ಮೇಲ್ಜಾತಿ ಪಾತ್ರಗಳು ಹೆಚ್ಚಾಗಿ ಆದೇಶಿಸುವ, ಕೈತೋರಿಸುವ ರೀತಿಯಲ್ಲಿ ಇರುವ ಆಂಗಿಕ ಅಭಿವ್ಯಕ್ತಿಯನ್ನು ಕಾಣಬಹುದು. ಆದರೆ ಕೆಳಜಾತಿಪಾತ್ರಗಳಲ್ಲಿ ಈ ರೀತಿಯಾಗಿ ಮೇಲ್ಜಾತಿ ಪಾತ್ರಗಳಿಗೆ ಆದೇಶಿಸುವ, ಮೀಸೆ ತಿರುವಿ ಮಾತನಾಡುವ, ಕೈಬೆರಳು ತೋರಿಸಿ ಮಾತನಾಡುವ ಆಂಗಿಕ ಅಭಿವ್ಯಕ್ತಿ ಕಂಡುಬರುವುದಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಈ ರೀತಿಯ ಆಂಗಿಕ ಅಭಿವ್ಯಕ್ತಿಯಲ್ಲಿ ಭಿನ್ನತೆಗಳು ಕಂಡುಬರುವುದಕ್ಕೆ ಕಾರಣವಾಗಿರಬಹುದು. ಮೇಲ್ಜಾತಿ ಪಾತ್ರಗಳ ಆಂಗಿಕ ಭಾಷೆಯನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಉದಾಹರಣೆಗಳ ಮೂಲಕ ನೋಡಬಹುದು. ಉದಾಹರಣೆಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರದ ಆಂಗಿಕ ಭಾಷೆಯನ್ನು ನೋಡಬಹುದು. ಉದಾಹರಣೆ ಈ ಕೆಳಗಿನಂತಿದೆ.

"ಒಂದರ್ಧ ಮೈಲಿ ಹೋಗುವುದರಲ್ಲಿಯೆ ಹೆಗ್ಗಡೆಯವರ ಕಾಲು ತತ್ತರಿಸತೊಡಗಿತು. ಏನನ್ನೋ ಹೇಳಲು ಪ್ರಯತ್ನಪಟ್ಟರು ಆಗಲಿಲ್ಲ. ತಮ್ಮ ಭಾರವನ್ನೆಲ್ಲ ಐಗಳ ಮೇಲೆ ಬಿಟ್ಟು ವಾಲಿದರು. ಕುಳ್ಳಿನಲ್ಲಿ ಸಮಾನವಾಗಿದ್ದರೂ ಆಳುತನದಲ್ಲಿ ಹೆಗ್ಗಡೆಯವರಿಗಿಂತಲೂ ಬಹಳ ಮಟ್ಟಿಗೆ ಕಡಿಮೆಯಾಗಿದ್ದ ಐಗಳ ನಿತ್ತರಿಸಲಾರದೆ ಅವರನ್ನು ಹೇಗೋ ಪ್ರಯತ್ನಪೂರ್ವಕ ಆತುನಿಂತು ಹಿಂದೆ ಬರುತ್ತಿದ್ದವರನ್ನು ನೆರವಿಗೆ ಕರೆದರು. ಹೊಲೆಯರಿಬ್ಬರೂ ಓಡಿ ಬಳಿ ಸಾರಿದರು. ಆದರೆ ಮುಟ್ಟಲು ಹಿಂಜರಿದು ನಿಂತರು. ಮಗಳು ಹುಬ್ಬಗಂಟಿಕ್ಕಿ ಸೂಚಿಸಿದ

ಮೇಲೆಯೇ ಅವರಿಬ್ಬರು ಹೆದರಿ ಹೆದರಿ ವಿಷಸರ್ಪ ನುಂಗಿದ ಗರ್ಭಗುಡಿಗೆ ಬ್ರಾಹ್ಮಣ ಪೂಜಾರಿ ಹಾವನ್ನು ಹೊಡೆದು ತನ್ನನ್ನು ಕಾಪಾಡಿ ಎಂದು ಆರ್ತನಾದದಿಂದ ಆಹ್ವಾನಿಸಲು ಅಂಜಿ ಅಂಜಿ ಒಳನುಗ್ಗುವ ದಂಡಧಾರಿ ಶೂದ್ರರಂತೆ, ಹೆಗ್ಗಡೆಯವರನ್ನು ಬೀಳದಂತೆ ಆತುಹಿಡಿದು, ಮೆಲ್ಲಗೆ ನಡೆಸಿಕೊಂಡು ಹೋಗಿ ಬಿದ್ದಿದ್ದ ಒಂದು ಮರದ ದಿಂಡಿನ ಮೇಲೆ ಕೂರಿಸಿದರು. (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೨೯೩)

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ಪಾತ್ರವಾದ ಅನಂತಯ್ಯ ಐಗಳು ಹೊಲೆಯರಿಬ್ಬರಿಗೆ ಸುಸ್ತಾದ ಸುಬ್ಬಣ್ಣ ಹೆಗ್ಗಡೆಯವರನ್ನು ಹಿಡಿದುಕೊಳ್ಳಲು ಸಹಾಯ ಕೇಳುತ್ತಾಳೆ. ಮೇಲ್ಜಾತಿಯ ಸುಬ್ಬಣ್ಣ ಹೆಗ್ಗಡೆಯವರನ್ನು ಕೆಳಜಾತಿಯವರು ಮುಟ್ಟಲು ಹಿಂಜರಿಯುತ್ತಾರೆ. ಏಕೆಂದರೆ ಕೆಳಜಾತಿಯವರನ್ನು ಮೇಲ್ಜಾತಿಯವರು ಮುಟ್ಟಿಸಿಕೊಳ್ಳುತ್ತಿರುವುದಿಲ್ಲ. ಆದ್ದರಿಂದ ಅವರನ್ನು ಮುಟ್ಟಲು ಹಿಂಜರಿಯುತ್ತಾರೆ. ಆನಂತರ ಅನಂತಯ್ಯ ಐಗಳು ಹುಬ್ಬುಗಂಟಿಕ್ಕಿಕೊಂಡು ಕೋಪವನ್ನು ಆಂಗಿಕ ಅಭಿನಯದ ಮೂಲಕ ವ್ಯಕ್ತಪಡಿಸಿದಾಗ ಕೆಳಜಾತಿ ಪಾತ್ರಗಳು ಹೆದರಿಕೊಂಡು ಅಂಜಿಕೆಯಿಂದಲೇ ಸುಬ್ಬಣ್ಣಹೆಗ್ಗಡೆಯವರನ್ನು ಹಿಡಿದುಕೊಂಡು ಕೂರಿಸುತ್ತಾರೆ.

ಮೇಲ್ಜಾತಿ ಪಾತ್ರಗಳು ಕಣ್ಣು ಕೆಂಪಾಗಿ ಮಾಡಿಕೊಂಡು ದುರುಗುಟ್ಟಿ ನೋಡುವುದರ ಮೂಲಕ ಹುಬ್ಬನ್ನು ಗಂಟಿಕ್ಕಿಕೊಳ್ಳುವುದರ ಮೂಲಕವೂ ಸೂಚನೆಗಳನ್ನು ಕೊಡುತ್ತಿರುತ್ತಾರೆ. ಅದರ ಮೂಲಕ ಕೆಳಜಾತಿ ಪಾತ್ರಗಳ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅನಂತಯ್ಯ ಐಗಳು ಹೊಲೆಯರಿಬ್ಬರು ಹೇಳಿದ ಮಾತನ್ನು ಕೇಳದಿದ್ದಕಾರಣಕ್ಕೆ ಹುಬ್ಬುಗಂಟಿಕ್ಕಿಕೊಳ್ಳುತ್ತಾಳೆ ಈ ರೀತಿಯಾಗಿ ಮೇಲ್ಜಾತಿ ಪಾತ್ರಗಳ ಆಂಗಿಕ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

ಅಶ್ವಿನಿಯವರ 'ಮೃಗತೃಷ್ಣ' ಕಾದಂಬರಿ ಆಧಾರಿತ, ದತ್ತರಾಜ್ ಜಿ. ಅವರ ನಿರ್ದೇಶನದ ಕಾಮನಬಿಲ್ಲು ಚಲಚಿತ್ರದಲ್ಲಿ ಮೇಲ್ಜಾತಿ ಪಾತ್ರ ಕಿರಿಗೌಡನ ಆಂಗಿಕ ಭಾಷೆಯನ್ನು ಉದಾಹರಣೆಯಾಗಿ ನೋಡಬಹುದು. ಅಧಿಕಾರಿ ಪಾತ್ರದ ಮುಂದೆ ಕರಿಗೌಡನ ಆಂಗಿಕ ಅಭಿವ್ಯಕ್ತಿ ಈ ಕೆಳಗಿನಂತಿದೆ.

"ಕೆಳಜಾತಿಯ ಕೆಂಚ ಎಂಬ ಹುಡುಗ ಮೇಲ್ಜಾತಿ ಹುಡುಗರ ಜೊತೆ ಆಟ ಆಡಿದ್ದಕ್ಕೆ 'ಊರು ಹೊಲೇರಿ ಎಲ್ಲಾ ಒಂದು ಮಾಡ್ತಿರೇನೋ ಬೋಳಿ ಮಕ್ಕಳ್ರ' ಎಂದು ಕಟ್ಟಿಗೆ ತೆಗೆದುಕೊಂಡು ಬಾಸುಂಡೆ ಬರುವಾಗೆ ಹೊಡೆದಿರುತ್ತಾನೆ. ಈ ವಿಷಯ ತಿಳಿದ ಮೇಲ್ಜಾತಿ ವ್ಯಕ್ತಿ ಸೂರ್ಯನಾರಾಯಣರಾವ್ ಕಿರಿಗೌಡನ ಸೊಕ್ಕು ಮುರಿಬೇಕು, ಅವನು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಬೇಕು ಎಂದು ತನ್ನ ಸ್ನೇಹಿತ ಚಂದ್ರುಗೆ ಪೋಲಿಸ್ ವೇಷ ಹಾಕಿಕೊಂಡು ಪೋಲಿಸ್ ಅಧಿಕಾರಿಯಾಗಿ ನಾಟಕ ಮಾಡಲು ತಿಳಿಸುತ್ತಾನೆ. ಆಗ ಕಿರಿಗೌಡ ನಿಜವಾದ ಪೋಲಿಸ್ ಅಧಿಕಾರಿ ಎಂದುಕೊಂಡು ಆ ಅಧಿಕಾರಿಯ ಮುಂದೆ ಮಾಡುವ ಆಂಗಿಕ ಅಭಿವ್ಯಕ್ತಿಯನ್ನು ಕಾಣಬಹುದು.

ಪೋಲಿಸ್ ಅಧಿಕಾರಿಗಳು ಮನೆಯ ಮುಂದೆ ಬಂದಿರುವುದನ್ನು ಕಂಡು ಕಿರಿಗೌಡ ಅವಸರ ಅವಸರವಾಗಿ ಸಾಹುಕಾರರ ಮುಂದೆ, ಗೌಡರ ಮುಂದೆ, ಧಣಿಗಳ ಮುಂದೆ ಹೇಗೆ ದಲಿತರು ತಮ್ಮ ಹೆಗಲ ಮೇಲಿರುವ ಟವಲ್‌ನ್ನು ತೆಗೆದು ಬಗಲಲ್ಲಿ ಇಟ್ಟುಕೊಳ್ಳುತ್ತಾರೋ ಹಾಗೆ ಪೋಲಿಸರು ಬಂದಿರುವುದನ್ನು ನೋಡಿ ಕಿರಿಗೌಡ ಕೂಡ ಹಾಗೆಯೇ ಟವಲ್‌ನ್ನು ತೆಗೆದು ಬಗಲಲ್ಲಿ ಇಟ್ಟುಕೊಂಡು ಮುಂದಕ್ಕೆ ಬಾಗಿ, ಭಯದಿಂದ ನಡುಗುತ್ತಾ ಕೈಮುಗಿಯುತ್ತಾನೆ."(ಚಲನಚಿತ್ರ: ಕಾಮನಬಿಲ್ಲು)

ಮೇಲ್ಜಾತಿ ಪಾತ್ರಗಳ ಮುಂದೆ ಕೆಳಜಾತಿ ಪಾತ್ರಗಳು ಹೇಗೆ ಭಯ, ಭಕ್ತಿಯಿಂದ ತಮ್ಮ ಹೆಗಲಮೇಲಿರುವ ಟವಲನ್ನು ತೆಗೆದು ಬಗಲಲ್ಲಿಟ್ಟುಕೊಂಡು ಕೈಮುಗಿಯುತ್ತಾರೋ ಹಾಗೆ ಇಲ್ಲಿ ಕಿರಿಗೌಡ ಕೂಡ ಅಧಿಕಾರಿಗಳ ಮುಂದೆ ಮಾಡುತ್ತಾನೆ. ಏಕೆಂದರೆ ಕಿರಿಗೌಡ ದಲಿತ ಹುಡುಗನಿಗೆ ಹೊಡೆದು ತಪ್ಪು ಮಾಡಿರುತ್ತಾನೆ. ಕಾನೂನಿನ ಪ್ರಕಾರ ತಾನು ಜೈಲಿಗೆ ಹೋಗಬೇಕಾಗುತ್ತದೆ ಎಂಬ ಭಯದಿಂದ ಅಧಿಕಾರಿಗಳ ಮುಂದೆ ಅತಿವಿನಯದಿಂದ ನಡೆದುಕೊಳ್ಳುತ್ತಾನೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಈ ರೀತಿಯಾಗಿ ಕೈಮುಗಿಯುವ ಉದಾಹರಣೆಗಳು ಕಂಡುಬರುವುದಿಲ್ಲ. ತಪ್ಪು ಮಾಡಿದವರು ಕೆಳಜಾತಿಯವರಾಗಲೀ ಮೇಲ್ಜಾತಿಯವರಾಗಲೀ ಅಧಿಕಾರಿಗಳ ಮುಂದೆ ಈ ರೀತಿಯಾಗಿ ಆಂಗಿಕ ಅಭಿನಯ ಮಾಡುವುದು ಸಹಜವಾಗಿರುತ್ತದೆ.

ಇಲ್ಲಿ ಜಾತಿ ಮುಖ್ಯವಾಗುವುದಿಲ್ಲ. ಕಾನೂನು ಸರ್ಕಾರದ ಮುಂದೆ ಎಲ್ಲರೂ ಸಮಾನರು. ಕೆಳಜಾತಿ ಪಾತ್ರಗಳಿಗೆ ಜಾತಿಯ ಕಾರಣಕ್ಕಾಗಿ ಆಗುವ ಅವಮಾನಗಳು ಮೇಲ್ಜಾತಿ ಪಾತ್ರಗಳಲ್ಲಿ ಕಂಡುಬರುವುದಿಲ್ಲ ಎಂದು ಹೇಳಬಹುದು. ಆದ್ದರಿಂದ ಇಲ್ಲಿ ಜಾತಿಯ ಕಾರಣಕ್ಕಾಗಿ ಸಾಮಾಜಿಕ ಚಹರೆಗಳು ಕಂಡುಬರುವುದಿಲ್ಲ ಎಂದು ಹೇಳಬಹುದು.

ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಾದಂಬರಿ ಆಧಾರಿತ, ಸಿದ್ಧಲಿಂಗಯ್ಯ ಅವರ ನಿರ್ದೇಶನದ 'ಹೇಮಾವತಿ' ಚಲನಚಿತ್ರದಲ್ಲಿಯೂ ಅಧಿಕಾರಿಗಳ ಮುಂದೆ ಮೇಲ್ಜಾತಿ ಪಾತ್ರಗಳು ಅತಿ ವಿನಯದಿಂದ, ವಿಧೇಯತೆಯಿಂದ ಕೈಮುಗಿದು ಗೌರವ ತೋರಿಸುವ ಆಂಗಿಕ ಅಭಿನಯವನ್ನು ಉದಾಹರಣೆಯ ಮೂಲಕ ನೋಡಬಹುದು.

ಭಟ್ಟ ಎಂಬ ಮೇಲ್ಜಾತಿ ವ್ಯಕ್ತಿ ತಮ್ಮ ಊರಿಗೆ ಬಂದ ಸರ್ಕಾರಿ ಅಧಿಕಾರಿಯಾದ ಡಿ.ಸಿ ಸಾಹೇಬರನ್ನು ಬರಮಾಡಿಕೊಳ್ಳುವ ವಿಧಾನವನ್ನು ನೋಡಬಹುದು.

"ಡಿ.ಸಿ ಸಾಹೇಬರು ಬರುವುದನ್ನು ಕಂಡು ಮುಂದೆ ಓಡಿಹೋಗಿ ಕೈ ಮುಗಿಯುತ್ತಾ ಡಿ.ಸಿ ಸಾಹೇಬ್ರು ದಯುಮಾಡಿಸಬೇಕು ಎಂದು ಅತಿ ವಿನಯುದಿಂದ ಅವರನ್ನು ಬರಮಾಡಿಕೊಳ್ಳುತ್ತಾನೆ". (ಚಲನಚಿತ್ರ: ಹೇಮಾವತಿ)

ಈ ಮೇಲಿನ ಉದಾಹರಣೆಯಲ್ಲಿ ಭಟ್ಟ ಎಂಬ ಮೇಲ್ಜಾತಿ ವ್ಯಕ್ತಿ ಸರ್ಕಾರಿ ಅಧಿಕಾರಿ ಬರುವುದನ್ನು ಕಂಡು ಓಡೋಡಿ ಹೋಗಿ ಕೈ ಮುಗಿಯುತ್ತ ಸೊಂಟ ಬಾಗಿಸಿ ಅವರನ್ನು ಬರಮಾಡಿಕೊಳ್ಳುತ್ತಾನೆ. ಅಲ್ಲಿ ಅಧಿಕಾರಿಗಳಿಗೆ ಗೌರವ ತೋರಿಸುವ ಸಲುವಾಗಿ ಈ ರೀತಿಯ ಆಂಗಿಕ ಅಭಿನಯ ಮಾಡುವುದನ್ನು ಕಾಣಬಹುದು. ಈ ಆಂಗಿಕ ಭಾಷೆಯ ಮೂಲಕ ಒಬ್ಬ ವ್ಯಕ್ತಿ ಅಧಿಕಾರಿಗಳಿಗೆ ಹೇಗೆ ಗೌರವವನ್ನು ಅತಿ ವಿಧೇಯತೆಯನ್ನು ತೋರಿಸುತ್ತಾನೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಆದರೆ ಈ ಮೇಲ್ಜಾತಿ ವ್ಯಕ್ತಿಗೆ ಸಾಮಾಜಿಕ ಕಾರಣಕ್ಕಾಗಿ ಯಾವುದೇ ರೀತಿಯ ಅವಮಾನಗಳು ಆಗುವುದಿಲ್ಲ. ಈ ಆಂಗಿಕ ಅಭಿವ್ಯಕ್ತಿಯಿಂದ ಅವನ ಸಾಮಾಜಿಕ ಸ್ಥಾನವೇನು ಕಡಿಮೆಯಾಗುವುದಿಲ್ಲ ಎಂದು ಹೇಳಬಹುದು.

ಭಾಸ್ಕರ ಟಿ.ಎಂ. ಅವರ 'ಭೂಮಿ' ಎಂಬ ನಾಟಕದಲ್ಲಿ ಗೌಡನ ಆಂಗಿಕ ಅಭಿವ್ಯಕ್ತಿಯನ್ನು ಈ ಕೆಳಗಿನಂತೆ ನೋಡಬಹುದು.

"ಬಿಳಿ ಪಂಚೆ ನಿಲುವಂಗಿಯ ಜೊತೆಗೆ ಹೆಗಲ ಮೇಲೆ ಕರಿ ಕಂಬಳಿ ಹಾಕಿಕೊಂಡು ಬೈಯ್ದಾಡುತ್ತಾ ಪರದೆಯ ಹಿಂದಿನಿಂದ ಬರುವನು. ಮೀಸೆಯ ಮೇಲೆ ಕೈ ಹಾಕುತ್ತಾ..."(ಭಾಸ್ಕರ. ಟಿ.ಎಂ, ಭೂಮಿ, ಪುಟ-೨೧)

ಈ ಮೇಲಿನ ಉದಾಹರಣೆಯಲ್ಲಿ ಗೌಡ ಎಂಬ ವ್ಯಕ್ತಿಯ ಆಂಗಿಕ ಅಭಿನಯವನ್ನು ನೋಡಿದಾಗ ಅವನ ಗತ್ತು, ದರ್ಪ ಗೋಚರಿಸುತ್ತದೆ. ಇದೇ ರೀತಿ ಕೆಳಜಾತಿ ವ್ಯಕ್ತಿ ಮಾಡಿದ್ದರೆ ಅದು ಸಮುದಾಯದಲ್ಲಿ ದವಲತ್ತು ಎನಿಸಿಕೊಳ್ಳುತ್ತದೆ.

'ಮರಣಮಂಡಲ ಮಧ್ಯದೊಳಗೆ' ಎಂಬ ಕಾದಂಬರಿಯಲ್ಲಿ ಬಸವರಾಜು ಎಂಬ ಕೆಳಜಾತಿ ವ್ಯಕ್ತಿ ಹೋಟೆಲ್‌ನಲ್ಲಿ ಕಾಲುಮೇಲೆ ಕಾಲು ಹಾಕಿಕೊಂಡು ಕುಳಿತುಕೊಂಡಿದ್ದಕ್ಕೆ ಮೇಲ್ಜಾತಿ ವ್ಯಕ್ತಿಗಳು ಅವನ ದವಲತ್ತುನೋಡು ಎಂದು ಮಾತಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಗೌಡ ತನ್ನ ಮೀಸೆ ಮೇಲೆ ಕೈ ಹಾಕುತ್ತ ಬರುತ್ತಿರುವುದು ಅವನ ಸಾಮಜಿಕತೆಯನ್ನು ಸೂಚಿಸುತ್ತದೆ. ಅಧಿಕಾರ, ದರ್ಪ ಇವೆಲ್ಲವನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಮೇಲ್ಜಾತಿಯ ಪಾತ್ರಗಳು ದಲಿತ ಪಾತ್ರಗಳ ಮುಂದೆ ಗಾಂಭಿರ್ಯತೆ, ದರ್ಪ, ಅಧಿಕಾರವಾಣಿ, ಆದೇಶಿಸುವ ರೀತಿಯ ಆಂಗಿಕ ಭಾಷೆಯನ್ನು ಕಾಣಬಹುದು. ಅಧಿಕಾರಿಗಳ ಮುಂದೆ ಕೈಕಟ್ಟಿಕೊಂಡು, ಕೈಮುಗಿಯುತ್ತ ಅವರನ್ನು ಸ್ವಾಗತಿಸುವ, ಗೌರವಸೂಚಿಸುವ ರೀತಿಯಲ್ಲಿ ಕೆಳಜಾತಿ ಪಾತ್ರಗಳಿಗೆ ಗೌರವ ಸೂಚಿಸುವ ನಮಸ್ಕರಿಸುವ ಭಂಗಿಗಳು ಮೇಲ್ಜಾತಿ ಪಾತ್ರಗಳ ಆಂಗಿಕ ಭಾಷೆಯಲ್ಲಿ ಕಂಡುಬರುವುದಿಲ್ಲ. ಈ ಆಂಗಿಕ ಭಾಷೆ ಏಕಮುಖವಾಗಿರುವುದಿಲ್ಲ. ವ್ಯಕ್ತಿಗಳ ಸಾಮಾಜಿಕತೆಗೆ ಅನುಗುಣವಾಗಿ ಅವರ ಸಾಮಾಜಿಕ ಸ್ಥಾನಮಾನಗಳು ನಿಂತಿರುತ್ತವೆ. ಮೇಲ್ಜಾತಿ ಪಾತ್ರಗಳು ಅಧಿಕಾರಿಗಳಿಗೆ ಕೆಳಜಾತಿ

ಪಾತ್ರಗಳ ಹಾಗೆ ಸೊಂಟ ಬಗ್ಗಿಸಿ, ಅತಿವಿನಯ, ವಿಧೇಯತೆಯಿಂದ, ಕೈಮುಗಿಯುವುದರಿಂದ ಅವರ ಸಾಮಾಜಿಕ ಸ್ಥಾನಮಾನವೇನು ಕಡಿಮೆಯಾಗುವುದಿಲ್ಲ ಆದರೆ ಕೆಳಜಾತಿ ಪಾತ್ರಗಳು ಟವಲ್ ಕೈಯಲ್ಲಿಡಿದುಕೊಂಡು ಸೊಂಟ ಬಗ್ಗಿಸಿ ದೂರದಿಂದಲೇ ನೆಲ ಮುಟ್ಟಿ ನಮಸ್ಕರಿಸುವ ಬಂಗಿಗಳು ಅವರ ಸಾಮಾಜಿಕ ಸ್ತರವಿನ್ಯಾಸಗಳನ್ನು ಸೂಚಿಸುತ್ತಿರುತ್ತದೆ ಎಂದು ಹೇಳಬಹುದಾಗಿದೆ. ಈ ರೀತಿಯ ಆಂಗಿಕ ಭಾಷೆಯ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸಾಮಾಜಿಕ ಚಹರೆಗಳು ಕಂಡುಬರುತ್ತವೆ.

೬.೨. ಸಂಕೇತ ಭಾಷೆ: ಸಾಮಾಜಿಕ ಚಹರೆಗಳು

ಮಾತು ಮತ್ತು ಬರಹಗಳು ಎಂಬ ಭಾಷಿಕ ಘಟಕಗಳಲ್ಲಿ ಪದ, ವಾಕ್ಯಗಳು ಹೇಗೆ ಅರ್ಥಗ್ರಹಿಕೆಯ ನೆಲೆಗಳನ್ನು ಸೂಚಿಸುತ್ತಿರುತ್ತವೆಯೋ ಹಾಗೆಯೇ ಸಂಕೇತಗಳು ಸಹ ಅರ್ಥ ಗ್ರಹಿಕೆಯ ನೆಲೆಗಳನ್ನು ಸೂಚಿಸುತ್ತಿರುತ್ತವೆ. ವಸ್ತು ಮತ್ತು ಭಾವಾಭಿವ್ಯಕ್ತಿಯ ಸಂಕೇತಗಳ ಮೂಲಕ ಅರ್ಥಗ್ರಹಿಕೆಯ ನೆಲೆಗಳನ್ನು ಕಂಡುಕೊಳ್ಳಬಹುದಾಗಿದೆ.

ಮಾತು ಮತ್ತು ಬರಹದಂತೆ ಸಂಕೇತಗಳು ಸಹ ಆ ಸಂಕೇತದ ಅರ್ಥವನ್ನು ಸೂಚಿಸುತ್ತಿರುತ್ತವೆ. ಉದಾಹರಣೆಗೆ ಬಟ್ಟೆಗೆ ಸಂಬಂಧಪಟ್ಟ ಸಂಕೇತವನ್ನು ನೋಡುವುದಾದರೆ ಕಪ್ಪು ಕೋಟು ಧರಿಸಿದರೆ ವಕೀಲರು, ಬಿಳಿ ಕೋಟು ಧರಿಸಿದರೆ ವೈದ್ಯರು, ಖಾಕಿ ಪ್ಯಾಂಟು, ಶರ್ಟ್ ಮತ್ತು ಟೋಪಿಯನ್ನು ಹಾಕಿಕೊಂಡಿದ್ದರೆ ಪೋಲಿಸ್ ಎಂದು ಸುಲಭವಾಗಿ ಗುರುತಿಸಬಹುದು. ಈ ಉಡುಪುಗಳು ವೃತ್ತಿಗೆ ಸಂಬಂಧಿಸಿದ ಉಡುಪುಗಾಳಾಗಿವೆ. ಈ ರೀತಿಯಾಗಿ ಉಡುಪುಗಳ ಸಂಕೇತದ ಮೂಲಕ ಅರ್ಥದ ನೆಲೆಗಳು ಮನದಟ್ಟಾಗುತ್ತವೆ.

ಸಾಂಬಮೂರ್ತಿ ಅವರ ಭಾಷೆ ಮತ್ತು ಅಶಾಬ್ಧಿಕ ಸಂವಹನ ಎಂಬ ಪುಸ್ತಕದಲ್ಲಿ ಸಂಕೇತ ಭಾಷೆ ಕುರಿತು ಹೇಳಿರುವ ಮಾಹಿತಿಯನ್ನು ಉದಾಹರಣೆಯಾಗಿ ನೋಡಬಹುದು.

"ಪಾಶ್ಚಿಮಾತ್ಯರಲ್ಲಿ ಕ್ರಿಸ್ತಶಕದ ಆರಂಭದಿಂದಲೇ ಸಂಕೇತ ಭಾಷೆಯ ಬಳಕೆಯಿತ್ತೆಂದು ತಿಳಿದುಬರುತ್ತದೆ. ಎರಡನೆಯ ಶತಮಾನದ ಉತ್ತರಾರ್ಧದ 'ಮಿಶ್ನಾ'(ಮಿಶ್ನಾಹ್) ಎಂದು ಕರೆಯಲಾಗುವ ಯಹೂದಿಗಳ ವಿಧಿಗಳು ಆಗಲೇ ಕಿವುಡರು ಕಾನೂನಿನ ಉದ್ದೇಶಗಳಿಗಾಗಿ ಸಂಕೇತಗಳನ್ನು ಬಳಸುತ್ತಿದ್ದುದನ್ನು ತಿಳಿಸುತ್ತದೆ. ಒಬ್ಬ ಕಿವುಡ-ಮೂಕ ಸಂಕೇತಗಳ ಮೂಲಕ ವ್ಯವಹರಿಸಬಹುದು ಎಂದು ಅದರಲ್ಲಿ ತಿಳಿಸಲಾಗಿದೆ. ಮೂಗರು ತಮ್ಮ ದೇಹದ ಅಂಗಗಳ ಮೂಲಕ ಮಾಡುತ್ತಿದ್ದ ಕೆಲವು ಚಲನೆಗಳ ಬಗ್ಗೆ ಪ್ಲೇಟೋ ತನ್ನ ಕೃತಿ ಕ್ರೆಟಿಲಸ್‌ನಲ್ಲಿ ಉಲ್ಲೇಖಿಸಿದ್ದಾನೆ.

ಆದರೂ ಇದರ ಒಂದು ವ್ಯವಸ್ಥಿತವಾದ ಅಧ್ಯಯನ ೧೯೬೦ರ ವರೆಗೂ ಬಂದಿರಲಿಲ್ಲ. ವೆಸ್ಟ್ ಅಮೆರಿಕನ್ ಪ್ಲೈನ್ಸ್ ಇಂಡಿಯನ್ ಸಂಕೇತ ಭಾಷೆಯ ಬಗ್ಗೆ ೧೯೬೦ರಲ್ಲಿ ಅಧ್ಯಯನವನ್ನು ನಡೆಸಿದ್ದು ತಿಳಿದುಬರುತ್ತದೆ. ಸ್ಟೋಕೋ (೧೯೬೨) ಅಮೇರಿಕನ್ ಸಂಕೇತ ಭಾಷೆಯ ಬಗ್ಗೆ

ಒಂದು ಪುಸ್ತಕವನ್ನು ಹೊರತಂದನು. ಅವನು ಪ್ರಯತ್ನಪೂರ್ವಕವಾಗಿ ಮಾಡುವ ಎಲ್ಲಾ ಸಂಕೇತಗಳಿಗೂ ಒಂದು ಗೊತ್ತಾದ ಚಲನೆ, ಸ್ಥಳ, ಕೈ ಆಕೃತಿ ಇರುತ್ತದೆಂದೂ, ಇದು ಭಾಷೆಯಲ್ಲಿನ ವ್ಯಾಕರಣದ ಉಪಘಟಕಗಳಂತೆ ಕೆಲಸ ಮಾಡುತ್ತದೆಂದೂ ತಿಳಿಸಿದ. ಅನಂತರದಲ್ಲಿ ಎಲ್ಲಾ ಅಧ್ಯಯನಗಳಿಗೂ ಇದು ಮಾದರಿಯಾಯಿತು.

ಪ್ರಾರಂಭದಲ್ಲಿ ಸಂಕೇತಭಾಷೆಗೆ ಭಾಷೆಯ ನಂತರದ ಸ್ಥಾನವನ್ನು ನೀಡಲಾಗಿತ್ತು. ಟೈಲರ್(೧೮೭೮) ಎಂಬುವವರು ಸಂಕೇತ ಭಾಷೆಯ ರಚನೆ ಹಾಗೂ ಕಿವುಡರ ಶಿಕ್ಷಣದಲ್ಲಿ ಅದರ ಪಾತ್ರದ ಬಗ್ಗೆ ಅಧ್ಯಯನ ನಡೆಸಿದರು. ಕಿವುಡರನ್ನು ಸಾಕಷ್ಟು ಅಧ್ಯಯನ ಮಾಡಿದ ಸೌಟ್(೧೮೯೯) ಎಂಬುವವರು ಸಂಕೇತದ ಮೂಲಕವೇ ಭಾಷೆ ಹುಟ್ಟಿರಬಹುದೆಂಬ ತಮ್ಮ ಸಿದ್ಧಾಂತವನ್ನು ಮಂಡಿಸಿದರು.

ಅನಂತರದ ಕೆಲವು ಸಿದ್ಧಾಂತಗಳು (ಸಸ್ಸೂರ್) ಸಂವಹನದಲ್ಲಿ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರಿಂದ ಈ 'ಸಂಕೇತ ಭಾಷೆಯ ಅಧ್ಯಯನಕ್ಕೆ ಸ್ವಲ್ಪ ಹಿನ್ನೆಡೆಯಾಯಿತು. ಅದೂ ಅಲ್ಲದೆ ಶಿಕ್ಷಣ ತಜ್ಞರು ಮತ್ತು ಇದನ್ನು ಉಪಯೋಗಿಸುವವರು ಸಂಕೇತ ಭಾಷೆಗೆ ಭಾಷೆಯ ಸ್ಥಾನಮಾನ ಸಾಧ್ಯವಿಲ್ಲವೆಂಬ ದೃಷ್ಟಿ ತಾಳಿದುದೂ ಇದರ ಹಿನ್ನಡೆಗೆ ಕಾರಣವಾಯಿತು. ಇತ್ತೀಚೆಗೆ ಅಂದರೆ ಸುಮಾರು ಮೂವತ್ತು ವರ್ಷಗಳಿಂದೀಚೆಗೆ ಪುನಃ ಅಧ್ಯಯನಗಳು ನಡೆಯುತ್ತಿದ್ದು ಅನೇಕರು ಈ ಬಗ್ಗೆ ಕಾರ್ಯಪ್ರವೃತ್ತರಾಗಿದ್ದಾರೆ.

ಎಷ್ಟೋ ಜನರಲ್ಲಿ ಸಂಕೇತ ಭಾಷೆ ಮತ್ತು ಭಾವಾಭಿನಯ ಎರಡೂ ಒಂದೇ ಎಂಬ ತಪ್ಪು ಅಭಿಪ್ರಾಯವಿದೆ. ಅಂದರೆ ಸಂಕೇತಭಾಷೆ ಎಂದರೆ ಒಂದು ಭಾಷೆಯಲ್ಲ ಕೇವಲ ಉನ್ನತೀಕರಿಸಿದ ಭಾವಾಭಿನಯ ಎಂಬುದಾಗಿ ಭಾವಿಸಲಾಗಿದೆ. ಆದರೆ ಇದು ತಪ್ಪು ಎಂಬುದು ಇತ್ತೀಚಿನ ಅಧ್ಯಯನಗಳಿಂದ ತಿಳಿದು ಬಂದಿದೆ. ಭಾಷೆಯಲ್ಲಿ ಯಾವ ರೀತಿ ಅಭಿವ್ಯಕ್ತಗೊಳಿಸಲು ಸಾಧ್ಯವೋ ಅದೇ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಸಂಕೇತಗಳನ್ನು ಹೊರಹೊಮ್ಮಿಸಿ ಸಂವಹನ ಮಾಡಲಾಗುತ್ತದೆ. ಭಾವಾಭಿನಯ ವ್ಯವಸ್ಥಿತವಾದುದಲ್ಲ. ಮತ್ತು ಭಾಷೆಯಲ್ಲಿ ದೊರೆಯುವ ಅರ್ಥದಷ್ಟು ಗ್ರಹಿಕೆ ಸಾಧ್ಯವಾಗುವುದಿಲ್ಲ. ಆದರೆ ಸಂಕೇತ ಭಾಷೆಯಲ್ಲಿ ಇದು ಸಾಧ್ಯ. (ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಪುಟ, ೭೬-೭೭)

ಈ ರೀತಿಯಾಗಿ ಕನ್ನಡದಲ್ಲಿ ಸಂಕೇತ ಭಾಷೆಯ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ ಎಂದು ಹೇಳಬಹುದು. ಸಂಕೇತ ಭಾಷೆಗಳು ಮೂರು ರೀತಿಯಲ್ಲಿವೆ ಎಂದು ಹೇಳಲಾಗಿದೆ. ಶ್ರವಣದೋಷವುಳ್ಳವರು ಮತ್ತು ಅವರ ಜೊತೆ ಸಂವಹನಕ್ಕಾಗಿ ಸಾಮಾನ್ಯರು ಉಪಯೋಗಿಸುವ ಸಂಕೇತಭಾಷೆ; ಭಾಷೆ ತಿಳಿದಿದ್ದರೂ ಮತ್ತು ಮಾತನಾಡಲು ಬರುತ್ತಿದ್ದರೂ ಕೆಲವೊಂದು ಧಾರ್ಮಿಕ ಸಂಸ್ಥೆಗಳ ಶಿಸ್ತನ್ನು ಕಾಪಾಡುವ ಸಲುವಾಗಿ ಭಾಷಾಬಳಕೆಯನ್ನು ಕೆಲವು ಸಂದರ್ಭಗಳಲ್ಲಿ

ನಿಷೇಧಿಸಿದ ಸಂದರ್ಭದಲ್ಲಿ ಬಳಸುವ ಸಂಕೇತಭಾಷೆ; ಮತ್ತು ಬಹುಭಾಷಾ ಸಂದರ್ಭದಲ್ಲಿ ಬಳಸುವ ಸಂಕೇತಭಾಷೆ ಎಂದು ಮೂರು ರೀತಿಯಾಗಿ ವರ್ಗೀಕರಿಸಿರುವುದನ್ನು ಕಾಣಬಹುದು.

ಇಷ್ಟೇ ಅಲ್ಲದೆ ಸಂಕೇತ ಭಾಷೆಯ ವ್ಯಾಪ್ತಿಯನ್ನು ಅಧ್ಯಯನಕ್ಕೆ ತಕ್ಕಂತೆ ವಿಸ್ತರಿಸಿಕೊಳ್ಳಬಹುದು. ಪಾಶ್ಚಿಮಾತ್ಯರಲ್ಲಿ ಕ್ರಿಸ್ತಶಕದ ಆರಂಭದಿಂದಲೇ ಈ ಸಂಕೇತಭಾಷೆಯ ಕುರಿತು ಅಧ್ಯಯನಗಳು ನಡೆದಿವೆ. ಕನ್ನಡದಲ್ಲಿ ಇತ್ತೀಚೆಗಷ್ಟೆ ಸಂಕೇತ ಭಾಷೆಯ ಅಧ್ಯಯನಗಳು ನಡೆಯುತ್ತಿವೆ. ಆದರೆ ಇಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿಗಳ ಉಡುಗೆ-ತೊಡುಗೆ ಮತ್ತು ಅವರು ಬಳಸುವ ವಸ್ತುಗಳು ಹೇಗೆ ಜಾತಿಸೂಚಕವಾಗಿ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಚರ್ಚಿಸಲಾಗಿದೆ. ಈ ಸಂಕೇತಗಳ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿ ವ್ಯಕ್ತಿಗಳ ಸಾಮಾಜಿಕ ಚಹರೆಗಳು ಕಂಡುಬರುತ್ತವೆ.

ಲಕ್ಷ್ಮೀಪತಿ ಸಿ.ಜಿ. ಅವರು 'ಕ್ಯಾಸ್ಟ್ ಕೆಮಿಸ್ಟ್ರಿ' ಪುಸ್ತಕದಲ್ಲಿ ಸಂಕೇತಭಾಷೆ ಕುರಿತು ಹೇಳಿರುವುದನ್ನು ನೋಡಬಹುದು. "ಜಾತಿಯ ಸಂಕೇತಗಳಾದ ಕಿವಿಯಲ್ಲಿ ಧರಿಸುವ ಓಲೆ, ಕೈಕಡಗ, ನಾಮ, ಮುದ್ರೆ, ಶಿವಧಾರ, ಜನಿವಾರ ಮೊದಲಾದವು ಜಾತಿಯ ಸಂಕೇತಗಳಾಗಿ ವ್ಯಕ್ತವಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಬ್ರಾಹ್ಮಣ, ಬನಿಯಾ, ಲಿಂಗಾಯತ, ವೈಶ್ಯರು ಮೊದಲಾದ ಜಾತಿಗಳಲ್ಲಿ ಶೇ. ೯೫ರಷ್ಟು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಏಕಪ್ರಕಾರದಲ್ಲಿ ಕಾಣಿಸಿಕೊಳ್ಳುತ್ತವೆ. ಬ್ರಾಹ್ಮಣ ಮತ್ತು ಲಿಂಗಾಯತ, ದಾರದ ಜಾತಿಗಳು ಏಕಕಾಲದಲ್ಲಿ ಜಾತಿ ಮತ್ತು ಧರ್ಮದ ಸ್ವರೂಪವನ್ನು ಪಡೆದಿವೆ. ಆದುದರಿಂದ ಯಾವುದೇ ಸಂಕೋಚವಿಲ್ಲದೆ ಈ ಜಾತಿಗಳ ಜನ ತಮ್ಮ ಜಾತಿಯನ್ನು ಸಂಕೇತದ ಮೂಲಕ ಅಭಿವ್ಯಕ್ತಿಸುತ್ತಾರೆ. ಆದುದರಿಂದ ಅವರಿಗೆ 'ಇತರ'ಗಿಂತ ಹೆಚ್ಚಿನ ಸಾಮಾಜಿಕ ಸ್ಥಾನಮಾನವೂ ಲಭ್ಯವಾಗುತ್ತದೆ. ಆದರೆ ಅಸ್ಪೃಶ್ಯರೆಂದು ಕರೆಯಲ್ಪಟ್ಟಿರುವ ಜಾತಿಗಳು, ಬುಡಕಟ್ಟುಗಳು ನಗರೀಕರಣಗೊಂಡ, ಅಥವಾ ಮೇಲ್ಜಾತಿಗಳ ಜೊತೆಗೆ ಸಾಮಾಜಿಕ ಸ್ಥಾನಮಾನಕ್ಕಾಗಿ ಸ್ಪರ್ಧೆಗಿಳಿದಾಗ ಕೀಳರಿಮೆಯ ಭಯದಿಂದ ಈ ಸಂಕೇತಗಳನ್ನು ತ್ಯಜಿಸಿದ ಉದಾಹರಣೆಗಳಿವೆ. ಬ್ರಾಹ್ಮಣರು, ಲಿಂಗಾಯತರು ಆಧುನಿಕ ಕಾಸ್ಮೋಪಾಲಿಟನ್ ಜಗತ್ತಿನಲ್ಲಿ ತಮ್ಮ ಬಾಹ್ಯ ಸಂಕೇತಗಳನ್ನು ಮರೆಮಾಚಿರಬಹುದು, ತ್ಯಜಿಸಿರಬಹುದು. ಆದರೆ ತಮ್ಮ ಆಚರಣೆಗಳ ಮೂಲಕ ಹೊರಡಿಸುವ ಸಂಕೇತಗಳನ್ನು ಮಾತ್ರ ಮರೆಮಾಚುವುದಿಲ್ಲ. ಬೆಂಗಳೂರಿನ ಐಟಿ ಕಂಪನಿಗಳಲ್ಲಿ ನಡೆಯುವ ಅಧಿಕೃತ ಭೋಜನ ಕೂಟಗಳಲ್ಲಿ ಸಸ್ಯಹಾರವನ್ನು ಕಡ್ಡಾಯಮಾಡಿ, ಮಾಂಸಹಾರವನ್ನು ಭೋಜನದ ಭಾಗವಾಗದಂತೆ ನಿರಾಕರಿಸಲಾಗುತ್ತದೆ. ಇಲ್ಲಿ ಮೇಲ್ನೋಟಕ್ಕೆ ಜಾತಿ ರಹಿತವಾಗಿ ಕಾಣಿಸಿಕೊಳ್ಳುವ ಸಸ್ಯಹಾರಿ ಜಾತಿಗಳು ಅಭಿವ್ಯಕ್ತಿಸುವುದಾದರೂ ಸಂಕೇತವಾದರೂ ಜಾತಿಯ ಮೇಲರಿಮೆ ಕೀಳರಿಮೆಯೇ ಆಗಿದೆ. (ಲಕ್ಷ್ಮೀಪತಿ. ಸಿ.ಜಿ, ಕ್ಯಾಸ್ಟ್ ಕೆಮಿಸ್ಟ್ರಿ, ಪುಟ-೬)

ವ್ಯಕ್ತಿಗಳ ಉಡುಗೆ-ತೊಡುಗೆ ಮತ್ತು ಆಚರಣೆಗಳ ಮೂಲಕ ಹೊರಡುವ ಸಂಕೇತಗಳು ಜಾತಿ ಸೂಚಕಗಳಾಗಿಯೂ ಅಭಿವ್ಯಕ್ತಗೊಳ್ಳುತ್ತವೆ. ಈ ರೀತಿಯ ಸಂಕೇತಗಳು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು.

ವ್ಯಕ್ತಿಗಳು ಧರಿಸುವ ಜನಿವಾರ, ವಿಭೂತಿ, ನಾಮ, ಬಟ್ಟೆ ಹಾಗೂ ತಮಟೆ, ಸನಾದಿ ಮುಂತಾದ ಸಂಕೇತಗಳು ಜಾತಿಸೂಚಕವಾಗಿ ಕೆಲಸ ಮಾಡುವುದಲ್ಲದೆ, ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತವೆ. ಜನಿವಾರ ಹಾಕಿಕೊಂಡಿರುವವರನ್ನು ಗೌರವವಾಗಿ ಕಾಣುವುದು ತಮಟೆ ಬಾರಿಸುವವರನ್ನು ಅಗೌರವವಾಗಿ ಕಾಣುವುದು, ನಡೆಯುತ್ತದೆ. ಈ ರೀತಿಯಾಗಿ ಸಾಮಾಜಿಕ ಅಸಮಾನತೆಗಳಿಗೆ ಈ ಸಂಕೇತಗಳು ಕಾರಣವಾಗುತ್ತವೆ ಎಂದು ಹೇಳಬಹುದು. ಕೆಳಜಾತಿ ಪಾತ್ರಗಳು ಮತ್ತು ಮೇಲ್ಜಾತಿ ಪಾತ್ರಗಳು ಸಂಕೇತಗಳ ಮೂಲಕ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಚರ್ಚಿಸಲಾಗಿದೆ.

೬.೨.೧. ಸಂಕೇತಭಾಷೆ: ಕೆಳಜಾತಿ ಪಾತ್ರಗಳು

ಸಂಕೇತಭಾಷೆಯ ಮೂಲಕ ವ್ಯಕ್ತಿಗಳ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನು ತಿಳಿದುಕೊಳ್ಳಬಹುದಾಗಿದೆ. ಅವರು ಬಳಸುವ ವಸ್ತು, ಧರಿಸುವ ಉಡುಗೆ-ತೊಡುಗೆಗಳು, ಆಚರಿಸುವ ಸಾಂಪ್ರದಾಯಿಕ ಆಚರಣೆಯ ಸಂಕೇತಗಳು ಅವರ ಸಾಮಾಜಿಕತೆ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಸೂಚಿಸುತ್ತಿರುತ್ತವೆ. ದಿನನಿತ್ಯ ಬಳಸುವ ವಸ್ತುಗಳು, ಸಂಪ್ರದಾಯಿಕ ಆಚರಣೆಯ ಸಂಕೇತಗಳು ಅವರ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತಿರುತ್ತವೆ. ಇಲ್ಲಿ ಮುಖ್ಯವಾಗಿ ದಲಿತ ಪಾತ್ರಗಳನ್ನು/ ಕೆಳಜಾತಿ ಪಾತ್ರಗಳನ್ನು ಸೂಚಿಸುವಂತಹ ಸಂಕೇತಗಳನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಕೆಲವು ಉದಾಹರಣೆಗಳನ್ನು ನೀಡಿ ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಉಡುಪಿಗೆ ಸಂಬಂಧಪಟ್ಟ ಉದಾಹರಣೆಯನ್ನು ನೋಡಬಹುದು. ಬಟ್ಟೆಯ ಮೂಲಕವೂ ಸಾಮಾಜಿಕ ಚಹರೆಯನ್ನು ಗುರುತಿಸಬಹುದು ಎನ್ನುವುದಕ್ಕೆ ಉದಾಹರಣೆ ಇಲ್ಲಿದೆ.

"ಮತ್ತೊಂದು ವಿಷಯವೆಂದರೆ ಅವನ ಉಡುಪು! ಮಂಜನು ಅವನನ್ನು ಕಂಡೊಡನೆ "ಒಳ್ಳೇ ದರೋಬಸ್ತಾಗಿದ್ದೀರಯಲ್ಲಾ" ಎಂದುದಕ್ಕೆ ಕಾರಣ, ಅವನ ಉಡುಪಿನಲ್ಲಾಗಿದ್ದ ಮಾರ್ಪಾಡು. ಸೊಂಟಕ್ಕೆ ಸುತ್ತಿದ್ದ ಮೋಟು ಪಂಚೆ ವಿನಾ ಬತ್ತಲೆಯಾಗಿದ್ದ ಮರಾಟಿಯವನ ಮುಂದೆ

ಹೊಲೆಯನು, ಕೊಳೆ ಸರ್ವವ್ಯಾಪಿಯಾಗಿದ್ದರೂ ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದನು. ಮೈಗೊಂದು ಕಸೆ ಅಂಗಿ ಹಾಕಿದ್ದನು. ಪಂಚೆಯ ತುದಿ ಮೊಳಕಾಲನ್ನು ದಾಟಿತ್ತು. ಕಿವಿಗೆ ಬೇರೆ ಒಂಟಿ! ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖಕ್ಷೌರ. ಹೊಲೆಯನಾದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ ಅವನು ಮಳೆಗೆ ತಯಾರಾಗಿ ಹೊರಟಿದ್ದನ್ನೂ, ಬಗಲಲ್ಲಿ ಇರುಕಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಕೂಡ ಅವನು ಸಿದ್ಧನಾಗಿದ್ದಾನೆ ಎಂಬುದನ್ನೂ ಸೂಚಿಸುತ್ತಿದ್ದುವು(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–೨).

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಕೆಳಜಾತಿವ್ಯಕ್ತಿ ಗುತ್ತಿಯ ಉಡುಪಿನಲ್ಲಿ ಆಗಿರುವ ಬದಲಾವಣೆ ಕಂಡುಬರುತ್ತದೆ. ಗುತ್ತಿ ಉಟ್ಟಿರುವ, ತೊಟ್ಟಿರುವ ಬಾಹ್ಯ ಸಂಕೇತಗಳು ಅವನ ಸಾಮಾಜಿಕ ಚಹರೆಗಳನ್ನು ಸೂಚಿಸುತ್ತವೆ. ಮೇಲ್ಜಾತಿ ವ್ಯಕ್ತಿ ಮರಾಟಿ ಮಂಜನಿಗೆ ಗುತ್ತಿ ತೊಟ್ಟಿರುವ ಉಡುಗೆಯನ್ನು ನೋಡಿ ಆಶ್ಚರ್ಯವಾಗುತ್ತದೆ. ಯಾಕೆಂದರೆ ಕೆಳಜಾತಿ ವ್ಯಕ್ತಿಗಳು ದೇಹಕ್ಕೆ ಪೂರ್ತಿ ಬಟ್ಟೆಯನ್ನು ತೊಡುವುದಿಲ್ಲ. ಮತ್ತು ವ್ಯವಸ್ಥಿತವಾಗಿರುವ, ಚೆನ್ನಾಗಿರುವ ಬಟ್ಟೆಗಳನ್ನು ತೊಡುವುದಿಲ್ಲ. ಕಾರಣ ಆರ್ಥಿಕವಾಗಿ ಪ್ರಾಬಲ್ಯವನ್ನು ಹೊಂದಿರುವುದಿಲ್ಲ. ಆದ್ದರಿಂದ ವ್ಯವಸ್ಥಿತವಾಗಿರುವ ಗುತ್ತಿಯ ಉಡುಪನ್ನು ನೋಡಿ ಮಂಜನಿಗೆ ಆಶ್ಚರ್ಯವಾಗುತ್ತದೆ. ಕೆಳಜಾತಿ ಪುರುಷ ಪಾತ್ರಗಳು ಈ ಕಾದಂಬರಿಗಳಲ್ಲಿ ಮೈಗೆ ಅಂಗಿ, ಪಂಚೆಯನ್ನು ತೊಡುವುದೇ ವಿರಳ. ಬರಿಮೈ ಅಥವಾ ಹರಿದ ಅಂಗಿಯನ್ನು ತೊಡುತ್ತಾರೆ. ಲಂಗೋಟಿ ಅಥವಾ ಮೊಣಕಾಲಿಗಿಂತ ಮೇಲೆ ಲುಂಗಿಯನ್ನು ಉಡುತ್ತಾರೆ. ಗುತ್ತಿ ಕಸೆ ಅಂಗಿ ಮತ್ತು ಮೊಣಕಾಲಿನವರೆಗೂ ಪಂಚೆ ತೊಟ್ಟಿದ್ದರಿಂದ ಷೋಕಿಯಾಗಿ ಕಾಣುತ್ತಿದ್ದ. ಆದ್ದರಿಂದ ಮರಾಟಿ ಮಂಜನಿಗೆ ಆಶ್ಚರ್ಯವಾಗುತ್ತದೆ. ಈ ರೀತಿಯ ಉಡುಪಿನ ಸಂಕೇತಗಳಿಂದಲೂ ಸಹ ಪಾತ್ರಗಳ ಸಾಮಾಜಿಕ ಚಹರೆಯನ್ನು ಕಾಣಬಹುದು. ಇದಕ್ಕೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಮುಖ್ಯವಾಗಿರುತ್ತವೆ ಎಂದು ಹೇಳಬಹುದು.

ಅರವಿಂದ ಮಾಲಗತ್ತಿ ಅವರ 'ಕಾರ್ಯ' ಕಾದಂಬರಿಯಲ್ಲಿ ಜಾತಿಸೂಚಕವನ್ನು ಸೂಚಿಸುವಂತಹ ಸಂಕೇತ ಭಾಷೆಯನ್ನು ಗಮನಿಸಬಹುದು. ವೃತ್ತಿಯಿಂದಲೂ ಸಹ ಸಾಮಾಜಿಕ ಚಹರೆಯನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ,

"ಚನ್ನಪ್ಪ ತನ್ನ ಯೌವ್ವನದ ಕಾಲದಲ್ಲಿ ಮೆರೆದ ವ್ಯಕ್ತಿ. ಒಮ್ಮೆ ಕುಡಿದು ರೆಪ್ಪಿಗೆ ಇಂದ ತೊಗಲು ಕೊಯ್ಯುತ್ತ ಮನೆ ಅಂಗಳದಲ್ಲಿ ಕುಳಿತಿದ್ದ. ತೊಗಲಿನ ವ್ಯಾಪಾರ ಮಾಡುವ ಡೋರ

ಅಮ್ಮಣ್ಣ ತನ್ನ ಕುರುಮ ತೊಗಲಿನ ಹಣ ಕೇಳುವುದಕ್ಕಾಗಿ ಬಂದಿದ್ದ. ಚನ್ನಪ್ಪನ ತಂದೆ ಚರ್ಮ ಹದ ಮಾಡುವ ದೋಣಿಗೆ ಚಕ್ಕಿ ಹಾಕುವುದಕ್ಕೆ ಮುಂಗಲಿಯಿಂದ ಅಂಬರಿ ಕಟ್ಟಿಗೆ ಬಡಿಯುತ್ತಿದ್ದ ಚನ್ನಪ್ಪನ ತಂದೆಯೊಂದಿಗೆ ಮಾತನಾಡುತಿದ್ದ"(ಅರವಿಂದ ಮಾಲಗತ್ತಿ, ಕಾರ್ಯ, ಪುಟ, ೫೧).

ಈ ಮೇಲಿನ ಉದಾಹರಣೆಯಲ್ಲಿ ಚರ್ಮ ಹದ ಮಾಡುತ್ತಿರುವ ಸಂಕೇತ ಕಂಡುಬರುತ್ತದೆ. ಚರ್ಮ ಹದ ಮಾಡುವ ಕೆಲಸ ಮಾಡುವುದು ಒಂದು ವರ್ಗಕ್ಕೆ ಅದರಲ್ಲೂ ಕೆಳಜಾತಿಗೆ ಮಾತ್ರ ಸೀಮಿತ ಎನ್ನುವ ನಿಲುವಿದೆ. ಈ ಮೊದಲು ಕೆಲಸವನ್ನು ಕೆಳಜಾತಿಯವರೆ ಮಾಡುತ್ತಿದ್ದರು. ಇದರಿಂದ ಈ ಕೆಲಸ ಮಾಡುವ ಸಮುದಾಯದ ಜನರನ್ನು ಗುರುತಿಸಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಸಮುದಾಯದವರು ಈ ಕೆಲಸ ಮಾಡುತ್ತಿದ್ದಾರೆ. ಇದು ಒಂದು ವ್ಯಾಪರವಾಗಿದೆ. ಹಿಂದೆ ಈ ಚರ್ಮದ ವೃತ್ತಿಯನ್ನು ಮಾಡುವ ವ್ಯಕ್ತಿಗಳನ್ನು ಕೀಳಾಗಿ ಕಾಣಲಾಗುತ್ತಿತ್ತು. ಆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಇಳಿಮುಖಗೊಳ್ಳುತ್ತಿತ್ತು. ಅಗೌರವದಿಂದ ಕಾಣಲಾಗುತ್ತಿತ್ತು. ಈಗ ವ್ಯಾಪಾರೀಕರಣವಾದ ನಂತರ ಬೇರೆ ಬೇರೆ ಸಮುದಾಯದವರೂ ಈ ಕೆಲಸದಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

ಬಂಡವಾಳಶಾಹಿಗಳು ಈ ಕೆಲಸವನ್ನು ಆಧುನಿಕ ಯಂತ್ರಗಳನ್ನು ಬಳಸಿ ಚರ್ಮದಿಂದ ಅನೇಕ ಸಿದ್ದವಸ್ತುಗಳನ್ನು ಮಾಡುತ್ತಿದ್ದಾರೆ. ವಾಣಿಜ್ಯೀಕರಣಗೊಂಡನಂತರ ಬಂಡವಾಳಶಾಹಿಗಳನ್ನು ಕೆಳಜಾತಿಯವರನ್ನು ಕಾಣುವಂತೆ ಕೀಳಾಗಿ ಕಾಣುವುದಿಲ್ಲ. ಕೆಳಜಾತಿ ವ್ಯಕ್ತಿಗಳು ಈಗಲೂ ಈ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ಸಾಮಾಜಿಕವಾಗಿ ಕೀಳಾಗಿಯೇ ಕಾಣಲಾಗುತ್ತದೆ ಎಂದು ಹೇಳಬಹುದು. ಈ ರೀತಿಯ ಸಂಕೇತಗಳು ವ್ಯಕ್ತಿಗಳ ಸಾಮಾಜಿಕ ಚಹರೆಗಳನ್ನು ಸೂಚಿಸುತ್ತವೆ.

ಅನಂತಮೂರ್ತಿ ಯು.ಆರ್. ಅವರ 'ಭಾರತೀಪುರ' ಕಾದಂಬರಿಯಲ್ಲಿ ಕೆಳಜಾತಿ ಪಾತ್ರಗಳ ಉಡುಪಿಗೆ ಸಂಬಂಧಿಸಿದ ಸಂಕೇತಭಾಷೆಯ ಉದಾಹರಣೆಗಳನ್ನು ನೋಡಬಹುದು. ಕೆಳಜಾತಿಪುರುಷ ಪಾತ್ರಗಳು ಮೈಮೇಲೆ ಅಂಗಿಯಿಲ್ಲದೆ ಲಂಗೋಟಿಯನ್ನು ಧರಿಸುವುದೇ ಹೆಚ್ಚು, ಮೇಲ್ಜಾತಿಯ ಶಿಕ್ಷಣಪಡೆದ ಪ್ರಜ್ಞಾವಂತ ವ್ಯಕ್ತಿ ಈ ಕೆಳಜಾತಿ ವ್ಯಕ್ತಿಗಳಿಗೆ ಉತ್ತಮವಾದ ಬಟ್ಟೆಗಳನ್ನು ಕೊಡಿಸಿದಾಗ ಈ ಕೆಳಜಾತಿ ಪಾತ್ರಗಳಿಗೆ ಆಗುವ ಸಂಕೋಚ, ಮುಜುಗರ ಪಡುವುದನ್ನು ಕಾಣಬಹುದು. ಹಾಗೆಯೇ ಮೇಲ್ಜಾತಿ ಪಾತ್ರಗಳ ಕಣ್ಣಿಗೆ ಹಾಸ್ಯಾಸ್ಪದವಾಗಿ ಕಾಣುವುದನ್ನು ಉದಾಹರಣೆಗಳ ಮೂಲಕ ನೋಡಬಹುದು.

"ದೂರದಿಂದ ಬರುವುದು ಕಾಣಿಸಿತು. ಜಡೆಗಟ್ಟಿದ ಕಪ್ಪು ಕೂದಲಿನಲ್ಲಿ ಕೆಂಪು ದೂಳು; ಬರಿಮೈಮೇಲೆ ಕಪ್ಪುಕಂಬಳಿ, ಸೊಂಟದಲ್ಲಿ ಲಂಗೋಟಿ ಮಾತ್ರ. ಸಿಕ್ಕಿಸಿದ ಕತ್ತಿ"(ಅನಂತಮೂರ್ತಿ ಯು.ಆರ್, ಭಾರತೀಪುರ, ಪುಟ-೧೧೯)

ಈ ಮೇಲಿನ ಉದಾಹರಣೆಗಳಲ್ಲಿ ಕೆಳಜಾತಿ ಪಾತ್ರಗಳ ಬಾಹ್ಯಚಹರೆಯನ್ನು ಕುರಿತು ಹೇಳಲಾಗುತ್ತಿದೆ. ಮೇಲ್ಜಾತಿಯ ಜಗನ್ನಾಥ ಕೆಳಜಾತಿ ಪಾತ್ರಗಳ ಬರುವಿಕೆಗಾಗಿ ಕಾಯುತ್ತಿರುತ್ತಾನೆ.

ಆಗ ಅವರು ಬರುವುದನ್ನು ಲೇಖಕರು ಅವರ ಬಾಹ್ಯ ಚಹರೆ ಕುರಿತು ವರ್ಣಿಸುತ್ತಾರೆ. ಕೆಳಜಾತಿಯ ಪಾತ್ರಗಳು ಮಾತ್ರ ಈ ಕಾದಂಬರಿಯಲ್ಲಿ ಈ ರೀತಿ ಬರಿ ಮೈಯಲ್ಲಿ ಮತ್ತು ಲಂಗೋಟಿಯನ್ನು ಮಾತ್ರ ತೊಡುವುದು. ಈ ಚಿತ್ರಣವನ್ನು ಕಂಡರೆ ಸುಲಭವಾಗಿ ಇವರು ದಲಿತರು/ಕೆಳಜಾತಿಯವರು ಎಂದು ಹೇಳಬಹುದು. ಯಾಕೆಂದರೆ ಮೇಲ್ಜಾತಿಯ ಯಾವ ಪಾತ್ರಗಳು ಸಹ ಈ ರೀತಿ ಅಂಗಿಯಿಲ್ಲದೆ, ಲಂಗೋಟಿ ಮಾತ್ರ ತೊಟ್ಟಿರುವ ಪಾತ್ರಗಳು ಕಂಡುಬರುವುದಿಲ್ಲ. ಹೀಗೆ ಕಾದಂಬರಿ, ನಾಟಕ ಹಾಗೂ ಚಲನಚಿತ್ರಗಳಲ್ಲಿ ಕಂಡುಬರುವ ಪಾತ್ರಗಳ ಉಡುಪುಗಳನ್ನಾಧರಿಸಿ ನಿರ್ವಹಿಸಿರುವ ಪಾತ್ರಗಳು ಹಾಗೂ ಅವು ಧರಿಸಿರುವ ಉಡುಪುಗಳನ್ನು ನೋಡಿದಾಗ ಆ ಜಾತಿಗಳು ಸಮಾಜದಲ್ಲಿ ಹೇಗೆ ತಮ್ಮ ಸ್ಥಾನಮಾನವನ್ನು ಸಂಕೇತಿಸುತ್ತವೆ ಮತ್ತು ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಏನೆಂಬುದನ್ನು ಇವುಗಳ ಮೂಲಕ ಕಂಡುಕೊಳ್ಳಬಹುದಾಗಿದೆ.

ಈ ಕಾದಂಬರಿಯಲ್ಲಿ ಜಗನ್ನಾಥ ಎಂಬ ಮೇಲ್ಜಾತಿ ವ್ಯಕ್ತಿ ಕೆಳಜಾತಿ ವ್ಯಕ್ತಿಗಳ ಮೈಮೇಲೆ ಬಟ್ಟೆಯಿಲ್ಲದ್ದನ್ನು ಕಂಡು ಇವರು ತಮ್ಮ ಅಂತಸ್ತಿನ ಜನರಂತೆಯೇ ಕಾಣಬೇಕು ಎಂದು ಅವರಿಗೂ ಬಟ್ಟೆಗಳನ್ನು ತಂದುಕೊಡುತ್ತಾನೆ. ಆ ಉದಾಹರಣೆಯನ್ನು ನೋಡಬಹುದು. ದೂರದಿಂದ ಹೊಲೆಯರು ಬರುತ್ತಿರುವುದು ಕಾಣಿಸಿತು. ಕೆಲಸಕ್ಕೆ ಬರುವವರಂತೆ ನಡೆಯುತ್ತಿದ್ದಾರೆ. ಉತ್ಸಾಹವಿಲ್ಲ. ಪಿಳ್ಳನಿಗೆ ತಾನು ಚಲುವನೆಂಬ ಅರಿವೇ ಇರಲಿಕ್ಕಿಲ್ಲ. ಇವತ್ತು ಅವರಿಗೇನೂ ತಾನು ಹೇಳಕೂಡದೆಂದು ನಿರ್ಧರಿಸಿ 'ಇರಿ ಬಂದೆ' ಎಂದು ರೂಮಿಗೆ ಹೋಗಿ ಪಂಚೆ ಶರ್ಟುಗಳನ್ನು ತಂದ. ಜೊತೆಗೆ ಈ ಬಟ್ಟೆಗಳನ್ನು ಒಗೆಯಲು ಸೋಪಿನ ತುಂಡುಗಳನ್ನು ತಂದ ಆರು ಜನ ಮಾತ್ರ ಬಂದಿದ್ದರು. ಬರಲೇಬೇಕೆಂದು ಕಡ್ಡಾಯ ಮಾಡುವುದು ಅವನಿಗೆ ಇಷ್ಟವಿಲ್ಲದ್ದರಿಂದ ಒಬ್ಬಬ್ಬನಿಗೂ ಒಂದೊಂದು ಬಿಳಿಶರ್ಟ್, ಒಂದೊಂದು ಪಂಚೆ ಮತ್ತು ಸೋಪಿನ ಚೂರುಗಳನ್ನು ಕೊಟ್ಟು ತಾನು ತೊಡುತ್ತಿದ್ದ ಬಟ್ಟೆಗಳ ಹಾಗೇ ಅವು ಇದ್ದವು. ಜೇಬು, ಕಾಲರು, ಮುಂಡುತೋಳು, ಅಂಚಿನ ಪಂಚೆ ತೊಟ್ಟಾಗ ತನ್ನ ಅಂತಸ್ತಿನ ಜನರಂತೆಯೇ ಅವರು ಕಾಣಬೇಕು.

'ಎಲ್ಲಿ ಅಂಗಿಗಳನ್ನು ಹಾಕಿಕೊಳ್ಳಿ, ನೋಡುವ, ಎಂದ. ಕೆಲವರಿಗೆ ಬಿಗಿ, ಕೆಲವರಿಗೆ ದೊಗಳೆ ಪಂಚೆಯನ್ನುಡಿ ಎಂದಾಗ ಮಾತ್ರ ಎಲ್ಲರೂ ಹಿಂಜರಿದರು. ಒತ್ತಾಯ ಮಾಡಿದ ಮೇಲೆ ಉಟ್ಟರು. ಇಡೀ ಜನ್ಮದಲ್ಲಿ ಅವರು ಮಂಡಿಯ ಕೆಳಗೆ ಪಂಚೆ ಉಟ್ಟಿದ್ದಿರಲಿಕ್ಕಿಲ್ಲ. ಮುಜುಗರವಾಗಿ ಬೆಚ್ಚಿದರು. ಮಡಿಸಿ ಕಂಕುಳದಲ್ಲಿ ಸಿಕ್ಕಿಸಿಕೊಂಡರು"(ಅನಂತಮೂರ್ತಿ.ಯು.ಆರ್, ಭಾರತೀಪುರ, ಪುಟ, ೧೧೭)

ಈ ಮೇಲಿನ ಉದಾಹರಣೆಯಲ್ಲಿ ಕೆಳಜಾತಿ ಪಾತ್ರಗಳ ಉಡುಗೆ ಬಗ್ಗೆ ನಿರೂಪಣೆಯಲ್ಲಿ ಚಿತ್ರಿಸಲಾಗಿದೆ. ಈ ನಿರೂಪಣೆಯಲ್ಲಿ ಬಂದ ಚಿತ್ರಣದ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕತೆ

ತಿಳಿಯುತ್ತದೆ. ಈ ಕಾದಂಬರಿಯಲ್ಲಿ ಬರುವ ಕೆಳಜಾತಿ ಪಾತ್ರಗಳು ಯಾವತ್ತು ಕೂಡ ಮೇಲ್ಜಾತಿ ಪಾತ್ರಗಳಂತೆ ಬಳಿ ಅಂಗಿ, ಬಿಳಿ ಪಂಚೆಯನ್ನು ತೊಟ್ಟವರಲ್ಲ. ಮೇಲ್ಜಾತಿಯ ಜನರಂತೆ ಇವರು ಕಾಣಬೇಕು ಎಂದು ಜಗನ್ನಾಥ ಅಂಗಿ, ಪಂಚೆಗಳನ್ನು ತಂದು ಕೊಡುತ್ತಾನೆ. ಇಡೀ ಜನ್ಮದಲ್ಲಿಯೇ ಅವರು ಮಂಡಿಯ ಕೆಳಗೆ ಪಂಚೆ ಉಟ್ಟಿರಲಿಕ್ಕಿಲ್ಲ ಎಂಬ ಮಾತು ಬರುತ್ತದೆ. ಈ ಮಾತು ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಸೂಚಿಸುತ್ತದೆ. ಈ ಹೊಸ ರೀತಿಯ ಉಡುಪನ್ನು ಧರಿಸಿದ್ದರಿಂದ ಅವರಿಗೆ ಒಂದು ರೀತಿ ಸಂಕೋಚ ಮತ್ತು ಮುಜುಗರ ಉಂಟಾಗುತ್ತದೆ. ಆನಂತರ ಮುಜುಗರವಾಗಿ ಬಟ್ಟೆಯನ್ನು ಬಿಚ್ಚುತ್ತಾರೆ. ಈ ಸಂಕೇತದ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಯನ್ನು ಕಾಣಬಹುದು.

ಈ ಕಾದಂಬರಿಯಲ್ಲಿ ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು. ಉಡುಪು ಕೂಡ ಜಾತಿಸೂಚಕವಾಗಿ ಕೆಲಸ ಮಾಡುತ್ತದೆ ಎಂಬುದಕ್ಕೆ ಒಂದು ಉದಾಹರಣೆ "ಈ ಹೊಲೇರ ದುರ್ದೆಗಳು ಅಯ್ಯನವರಂತೆ ಬಿಳಿಯಂಗಿ ತೊಟ್ಟು ಬಿಳಿ ಪಂಚೆಯುಟ್ಟದ್ದು ಅವಳಿಗೆ ಹಾಸ್ಯಾಸ್ಪದವಾಗಿ ಕಂಡಿರಬೇಕು; ಕಿಸಕ್ಕೆಂದು ನಕ್ಕಳು(ಅನಂತಮೂರ್ತಿ. ಯು.ಆರ್, ಭಾರತೀಪುರ, ಪುಟ-೧೨೭) ಈ ಉದಾಹರಣೆಯಲ್ಲಿ ಕೆಳಜಾತಿ ಪಾತ್ರಗಳು ಬಿಳಿ ಅಂಗಿ, ಬಿಳಿ ಪಂಚೆ ಉಟ್ಟಿರುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಏಕೆಂದರೆ ಯಾವತ್ತು ಕೂಡ ಈ ರೀತಿ ಇಷ್ಟು ಶುದ್ಧವಾದ ಬಟ್ಟೆಗಳನ್ನು ಮೈತುಂಬಾ ತೊಟ್ಟವರಲ್ಲ. ಈ ಬಟ್ಟೆ ತೊಟ್ಟ ಕೆಳಜಾತಿ ಪಾತ್ರಗಳಿಗೂ ಒಂದು ರೀತಿಯ ಸಂಕೋಚ ಉಂಟಾಗುತ್ತದೆ. ಒಂದು ರೀತಿ ಅಸಹಜ ಸ್ಥಿತಿ ನಿರ್ಮಾಣವಾದಂತೆ ಆ ಪಾತ್ರಗಳಿಗೂ ಅನಿಸುತ್ತದೆ. ಅಂದರೆ ಈ ಸಂಕೇತ ಅಲ್ಲಿನ ವಾಸ್ತವ ಸ್ಥಿತಿಯನ್ನು ಹೇಳುತ್ತದೆ. ಕೆಳಜಾತಿ ಪಾತ್ರಗಳು ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಯಾವತ್ತೂ ಈ ರೀತಿ ಬಟ್ಟೆಗಳನ್ನು ತೊಟ್ಟವರಲ್ಲ. ಈ ಸಂಕೇತ ಭಾಷೆಯಿಂದ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಗಳು ತಿಳಿಯುತ್ತವೆ ಎಂದು ಹೇಳಬಹುದು.

ಭೈರಪ್ಪ ಎಸ್.ಎಲ್. ಅವರ 'ದಾಟು' ಕಾದಂಬರಿಯಲ್ಲಿ ಸಂಕೇತ ಭಾಷೆಗೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೋಡಬಹುದು. ಕೆಳಜಾತಿ ವ್ಯಕ್ತಿ ಮೀಸೆ ಬೆಳೆಸಿದ್ದರಿಂದ ಅವಮಾನಕ್ಕೆ, ಶೋಷಣೆಗೆ ಒಳಗಾಗುವ ಸನ್ನಿವೇಶ ಈ ಕೆಳಗಿನಂತಿವೆ.

"ಮಾದಿಗ ಮಾದಿಗನಿಗೆ ತಕ್ಕ ಹಾಗಿರದೆ ತನಗೆ ಹೆಂಚಿನ ಮನೆ ಮೂರೆಕೆರೆ ಹೊಲ, ಇಪ್ಪತ್ತು ತೆಂಗಿನ ಮರವಿದೆ ಅನ್ನುವ ಹಮ್ಮಿನಿಂದ ಮೀಸೆ ಬೆಳಸಿದ. ಬೆಳೆಸಿದರೂ ಚಿಂತೆಯಿಲ್ಲ. ತುದಿಯ ಕೆಳಭಾಗಕ್ಕೆ ಇಳಿಬಿದ್ದಿರುವಂತೆ ಮಾಡಿಕೊಳ್ಳದೆ ಎರಡು ಕಡೆಯೂ ಮೇಲಕ್ಕೆ ಏರಿರುವ ಹಾಗೆ ಮಾಡಿಸಿಕೊಂಡ. ಅವನು ಹೊಸದಾಗಿ ಬೆಳಸಿಕೊಂಡನೋ ಯಾವ ಆಕಾರಕ್ಕೆ ಬಿಡಿಸಿಕೊಂಡನೋ ವೆಂಕಟರಮಣಯ್ಯನವರಿಗೆ ಗೊತ್ತಿಲ್ಲ. ಆದರೆ ಅದು ಊರನ್ನೇ ಆಳುವ

ಧಣಿ, ಪಟೇಲ ತಿರುಮಲೇಗೌಡರಿಗೆ ತಿಳಿಯಿತು. ಅವನನ್ನು ಕರೆಸಿ ಕೇಳಿದರೆ ಅವನವನಿಗೆ ಖುಸಿ ಬಂದ್ಹಂಗೆ ಬಿಟ್ರೆ ಏನಯ್ಯ ತೆಪ್ಪು? ಎಂದನಂತೆ.

ದೊಡ್ಡ ಮೀಸೆ ಬೆಳೆಸುವುದೂ, ಮೇಲೆ ತಿರುಗಿಸಿ ನೀವಿಕೊಳ್ಳುವುದೂ, ಊರು ಆಳುವ ಪಟೇಲ ಮನೆತನದ ಗುರುತು. ಈ ಮಾದಿಗನಿಗೆ ಇಷ್ಟು ಹಮ್ಮು ಬಂದದ್ದನ್ನು ದೊಡ್ಡಗೌಡರು ಸಹಿಸಿಯಾರೇ? ತಮ್ಮ ಮನೆಯಲ್ಲಿ ಜೀತಮಾಡುವ ಇಬ್ಬರು ಹೊಲೆಯರನ್ನು ಕರೆದು ಬೆಟ್ಟನನ್ನು ಕಂಬಕ್ಕೆ ಕಟ್ಟಿ ಬಾರುಕೋಲಿನಲ್ಲಿ ಶೆಣೆಯುವಂತೆ ಹುಕುಂ ಮಾಡಿದರು. ಮಾದಿಗ ಆಳುಗಳಾಗಿದ್ದರೆ ತಮ್ಮ ಕೇರಿಯ ಮೇಟಿ ಕುಳವನ್ನು ಮುಟ್ಟಿ ಹೊಡೆಯುತ್ತಿದ್ದರೋ ಇಲ್ಲವೋ. ಆದರೆ ಇವರು ಹೊಲೆಯರು ಮಾದಿಗರಿಗಿಂತ ಶ್ರೇಷ್ಠರು. ತಮಗಿಲ್ಲದ ಮೀಸೆಯನ್ನು ಅವನು ಬೆಳೆಸಿಕೊಂಡನಲ್ಲ ಅಂತ ಹೊಟ್ಟೆಕಿಚ್ಚೂ ಇತ್ತು. ಪಟೇಲರು, 'ಅಲ್ಲೇನು ಮಕಾ ನೋಡ್ತೀಯಾ ಹಿಡ್‌ಕಂಡು ಜಡಿಲಾ' ಎಂದು ಎರಡನೆಯ ಸಲ ಅಂದದ್ದೆ ಹಿಡಿದು ಬೆಟ್ಟನನ್ನು ಈಚಲು ಶಬ್ಬೆಯಿಂದ ಕಂಬಕ್ಕೆ ಕಟ್ಟಿ ಬಾರುಕೋಲಿನಿಂದ ಬಾರಿಸಿಬಿಟ್ಟರು. ತೋಳು ತೊಡೆಗಳ ಮೇಲೆಲ್ಲ ಬಾಸುಂಡೆ ಊದಿಕೊಂಡಿತು. ಇವತ್ ಸಂಜೇ ವಳಗೆ ತೆಗುಸ್ದೆ ಇದ್ರೆ ನಾಳೀಕೆ ಕ್ವಾಟೆಬಾಗ್ಲ ಮುಂದೆ ಕುಂಡ್ರಿಸಿ ನನ್ನ ಉಚ್ಚೇಲಿ ನಿನ್ನ ಮೀಸೆ ಬೋಳುಸ್ತೀನಿ ನನ್ನಮಗನೆ ಎಂದು ಹೇಳಿ ಕಟ್ಟುಬಿಚ್ಚಿ ಕಳುಹಿಸಿದರು(ಭೈರಪ್ಪ. ಎಸ್.ಎಲ್, ದಾಟು, ಪುಟ–೧೧೬)

ಭೈರಪ್ಪ ಎಸ್.ಎಲ್. ಅವರ 'ದಾಟು' ಕಾದಂಬರಿಯಲ್ಲಿ ಈ ಉದಾಹರಣೆಯನ್ನು ಗಮನಿಸಿದಾಗ ಕೆಳಜಾತಿ ವ್ಯಕ್ತಿ ಮೀಸೆ ದೊಡ್ಡದಾಗಿ ಬೆಳಸಿ ಮೇಲಕ್ಕೆ ತಿರುವಿದ್ದರಿಂದ ಮೇಲ್ಜಾತಿ ಜನರಿಗೆ ಅದನ್ನು ಸಹಿಸಲು ಆಗುವುದಿಲ್ಲ. ಅದು ಏನಿದ್ದರೂ ಊರನ್ನು ಆಳುವ ಧಣಿ ಮಾತ್ರ ಹಾಗೆ ಬೆಳಸಬೇಕು. ಕೆಳಜಾತಿ ವ್ಯಕ್ತಿಗಳು ಬೆಳಸಿದರೆ ಅವನನ್ನು ಕಂಬಕ್ಕೆ ಕಟ್ಟಿ ಹೊಡೆದು ಶಿಕ್ಷಿಸುತ್ತಾರೆ. ದೊಡ್ಡ ಮೀಸೆ ಇಲ್ಲಿ ಸಹ ಒಂದು ವರ್ಗದವರಿಗೆ ಮಾತ್ರ ಸೀಮಿತ ಎಂಬ ಸಂಕೇತವನ್ನು ಸೂಚಿಸುತ್ತಿದೆ.

ಬೇರೆ ಯಾವ ಮೇಲ್ಜಾತಿ ಸಮುದಾಯದವರು ಹೀಗೆ ಮೀಸೆ ಬೆಳೆಸಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಕೆಳಜಾತಿಯ ವ್ಯಕ್ತಿ ಬೆಳೆಸಿದ್ದರಿಂದ ಈ ಸಮಸ್ಯೆ ಉಂಟಾಗಿದೆ ಎಂದೆನಿಸುತ್ತದೆ. ಕೆಳಜಾತಿ ವ್ಯಕ್ತಿ ಈ ರೀತಿ ಮೀಸೆ ಬೆಳೆಸಿದರೆ ಮೇಲ್ಜಾತಿ ವ್ಯಕ್ತಿಗಳಿಗೆ ಅದು ಹಮ್ಮು, ಅಹಂಕಾರ, ದವಲತ್ತಾಗಿ ಕಾಣುತ್ತದೆ. ಈ ಮೀಸೆ ಬೆಳೆಸಿದ್ದರಿಂದ ಬೆಟ್ಟಯ್ಯ ಎಂಬ ಕೆಳಜಾತಿ ವ್ಯಕ್ತಿ ಶೋಷಣೆ ಮತ್ತು ಅವಮಾನಕ್ಕೆ ಒಳಗಾಗುತ್ತಾನೆ. ಚಲನಚಿತ್ರಗಳಲ್ಲಿ ಹಿಂದೆ ದೊಡ್ಡದಾಗಿ ಮೀಸೆಯನ್ನು ರೌಡಿಗಳಿಗೆ ಮಾತ್ರ ಇರುವಂತೆ ಮೇಕಪ್ ಮಾಡುತ್ತಿದ್ದರು. ದೊಡ್ಡದಾಗಿ ಮೀಸೆ ಇರುವವರನ್ನು ರೌಡಿಗಳೆಂದು ಚಿತ್ರಿಸಲಾಗುತ್ತಿತ್ತು. ಆದರೆ ಇತ್ತೀಚಿನ ಸಂದರ್ಭಗಳಲ್ಲಿ ನಾಯಕ ನಟರೂ ದೊಡ್ಡದಾಗಿ ಮೀಸೆಯನ್ನು ಬೀಡುತ್ತಿದ್ದಾರೆ. ದೊಡ್ಡ ಮೀಸೆಯ ಸಂಕೇತದ ಅರ್ಥ ಪಲ್ಲಟಗೊಂಡಿದೆ.

ಆದರೆ ಈ ಕಾದಂಬರಿಯಲ್ಲಿ ದೊಡ್ಡದಾಗಿ ಮೀಸೆ ಬಿಡುವುದು ಗೌಡ, ಪಟೇಲರು ಪ್ರತಿಷ್ಠೆಯ ಸಂಕೇತವಾಗಿದೆ. ಈ ರೀತಿಯ ಸಂಕೇತವೂ ಸಹ ಸಾಮಾಜಿಕ ಚಹರೆಗಳನ್ನು ಸೂಚಿಸುತ್ತದೆ ಎಂದು ಹೇಳಬಹುದು.

ದತ್ತರಾಜ್ ಚಿ. ನಿರ್ದೇಶನದ 'ಕಾಮನಬಿಲ್ಲು' ಚಲನಚಿತ್ರದಲ್ಲಿ ಕೆಳಜಾತಿ ಪಾತ್ರಗಳ ಸಂಕೇತಭಾಷೆಗೆ ಸಂಬಂಧಿಸಿದಂತೆ ಒಂದು ಉದಾಹರಣೆಯನ್ನು ನೋಡಬಹುದು.

"ಹೊಲೆಯರ ಹುಡುಗ ಕೆಂಚನ ಮೈಮೇಲೆ ಅಂಗಿ ಇಲ್ಲ. ಒಂದು ಚಡ್ಡಿ ಮಾತ್ರ ಇದೆ. ಗೌಡರ ಹುಡುಗ ಕೆಂಪೇಗೌಡನ ಮೈಮೇಲೆ ಶುದ್ಧವಾದ ಅಂಗಿ, ಚಡ್ಡಿ ಇದೆ"(ಚಲನಚಿತ್ರ: ಕಾಮನಬಿಲ್ಲು). ಇಲ್ಲಿ ನಿರ್ದೇಶಕರು ವಾಸ್ತವ ಸ್ಥಿತಿಯನ್ನು ತೋರಿಸಲು ಯತ್ನಿಸಿದ್ದಾರೆ. ದಲಿತರು ಒಂದು ಹೊತ್ತಿನ ಊಟಕ್ಕೂ ಕಷ್ಟಪಡಬೇಕಾದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಬಟ್ಟೆಯ ಕಡೆಗೆ ಹೆಚ್ಚಿನ ಗಮನ ಹರಿಸುವುದಿಲ್ಲ. ಅದನ್ನು ನಿರ್ದೇಶಕರು ಇಲ್ಲಿ ತೋರಿಸಿದ್ದಾರೆ. ಮೇಲ್ಜಾತಿಯ ಹುಡುಗ ಮೈತುಂಬ ಬಟ್ಟೆಯನ್ನು ಹಾಕಿಕೊಂಡಿದ್ದಾನೆ. ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಯನ್ನು ಸೂಕ್ಷ್ಮವಾಗಿ ತೋರಿಸಿದ್ದಾರೆ. ಇದು ಆ ಕಾಲದ ಶ್ರೇಣೀಕರಣ ವ್ಯವಸ್ಥೆಯ ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತದೆ.

ದೊರೆ-ಭಗವಾನ್ ಅವರ ನಿರ್ದೇಶನದ 'ಮುನಿಯನ ಮಾದರಿ' ಚಲನಚಿತ್ರದಲ್ಲಿ ಉಡುಪುಗಳಿಗೆ ಸಂಬಂಧಿಸಿದ ಸಂಕೇತ ಭಾಷೆಯನ್ನು ಗಮನಿಸಬಹುದು.

"ಕೆಳಜಾತಿ ವ್ಯಕ್ತಿ ಮುನಿಯ ದೊಡ್ಡೇಗೌಡರ ಮನೆಯ ಜೀತದಾಳು. ಅವನು ದೊಡ್ಡೇಗೌಡರ ಮಗ ಮರುಳಪ್ಪನನ್ನು ಕರೆತರಲು ರೈಲ್ವೇಸ್ಟೇಷನ್‌ಗೆ ಹೋಗಿರುತ್ತಾನೆ. ಆಗ ಮರುಳಪ್ಪನ ಮತ್ತು ಮುನಿಯನ ಉಡುಪನ್ನು ನೋಡುವುದಾದರೆ ಮುನಿಯ ತಲೆಗೆ ಟವಲ್ ಕಟ್ಟಿ, ಹಳೆ ಅಂಗಿ ಹಾಕಿಕೊಂಡಿದ್ದಾನೆ. ಜುಟ್ಟುಬಿಟ್ಟುಕೊಂಡು ಕಚ್ಚೆ ಹಾಕಿಕೊಂಡಿದ್ದಾನೆ. ಅಂಗಿ ಮತ್ತು ಕಚ್ಚೆ ಅಲ್ಲಲ್ಲಿ ಹರಿದು ಹೋಗಿವೆ. ಮೇಲ್ಜಾತಿ ಶಿಕ್ಷಣದಿಂದ ಮರುಳಪ್ಪ ಜುಬ್ಬ, ಪೈಜಾಮು ಹಾಕಿಕೊಂಡಿದ್ದಾನೆ (ಚಲನಚಿತ್ರ: ಮುನಿಯನ ಮಾದರಿ). ನಿರ್ದೇಶಕರು ಈ ಚಲನಚಿತ್ರದಲ್ಲಿ ಈ ಎರಡು ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸವನ್ನು ಸೂಚಿಸಲು ಮತ್ತು ಸಮಾಜದ ವಾಸ್ತವ ಸ್ಥಿತಿಯನ್ನು ತೋರಿಸಲು ವಸ್ತ್ರಾಲಂಕಾರದಲ್ಲಿ ಈ ರೀತಿಯ ಬಟ್ಟೆಯನ್ನು ಬಳಸಿದ್ದಾರೆ. ಈ ಸಂಕೇತ ಆ ಪಾತ್ರಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಮುನಿಯ ತಲೆಗೆ ಟವಲ್, ಹರಿದ ಅಂಗಿ, ಮತ್ತು ಪಂಚೆ ಕಟ್ಟಿಕೊಂಡಿದ್ದಾನೆ. ತಲೆಯಲ್ಲಿ ಜುಟ್ಟು ಬಿಟ್ಟಿದ್ದಾನೆ. ಈ ಸಂಕೇತಗಳು ಅವನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಹೇಳುತ್ತವೆ. ಜುಟ್ಟು ಮೇಲ್ಜಾತಿಯ ಕೆಲವು ಸಮುದಾಯಗಳಲ್ಲೂ ಬಿಡುತ್ತಾರೆ. ಉದಾಹರಣೆಗೆ ಈ ಚಲನಚಿತ್ರದಲ್ಲಿಯೇ ಮುನಿಯನ ಧಣಿ ದೊಡ್ಡೇಗೌಡ ಕೂಡ ಜುಟ್ಟನ್ನು ಬಿಟ್ಟಿದ್ದಾನೆ. ಆದರೆ ಇಬ್ಬರ ಸಾಮಾಜಿಕ ಸ್ಥಿತಿ ಒಂದೆಯಾಗಿಲ್ಲ.

ಜುಟ್ಟು ಬಿಟ್ಟ ಕಾರಣಕ್ಕೆ ಕೆಲವು ಮೇಲ್ಜಾತಿ ಸಮುದಾಯಗಳಿಗೆ ಗೌರವ ಸ್ಥಾನಮಾನಗಳು ದೊರೆಯುತ್ತವೆ. ಆದರೆ ಕೆಳಜಾತಿ ಪಾತ್ರಗಳಿಗೆ ಗೌರವ ದೊರೆಯುವುದಿಲ್ಲ. ಕಾವೇರಿ ಚಲನಚಿತ್ರದಲ್ಲಿ ಕೆಳಜಾತಿ ಪಾತ್ರಗಳಾದ ದೊಡ್ಡನರಸ ಮತ್ತು ಚಿಕ್ಕನರಸ ತಲೆಯ ಹಿಂದೆ ಜುಟ್ಟನ್ನು ಬಿಟ್ಟಿರುತ್ತಾರೆ. ಅದೇ ಚಲನಚಿತ್ರದಲ್ಲಿ ಮೇಲ್ಜಾತಿ ಬ್ರಾಹ್ಮಣ ಪಾತ್ರಗಳು ಸಹ ತಲೆಯ ಹಿಂದೆ ಜುಟ್ಟನ್ನು ಬಿಟ್ಟಿದ್ದಾರೆ. ಆದರೆ ಇಬ್ಬರಿಗೂ ಬೇರೆ ಬೇರೆ ಸಾಮಾಜಿಕ ಸ್ಥಾನಮಾನಗಳು ಇವೆ. ಜುಟ್ಟನ್ನು ಬಿಟ್ಟ ಮಾತ್ರಕ್ಕೆ ಮೇಲ್ಜಾತಿಯವರಾಗುವುದಿಲ್ಲ. ಮೇಲ್ಜಾತಿಯವರು ಎಂದು ನೋಡುವುದಕ್ಕೆ ಇನ್ನೂ ಬೇರೆ ಬೇರೆ ಸಂಕೇತಗಳು ಇರುತ್ತವೆ. ಅವರು ಉಡುವ ಬಟ್ಟೆ, ಹಾಕುವ ವಿಭೂತಿ, ನಾಮಗಳು, ಜನಿವಾರ ಮುಂತಾದವುಗಳು ಮೇಲ್ಜಾತಿಯವರ ಸಂಕೇತಗಳಾಗಿ ಕೆಲಸ ಮಾಡುತ್ತಿರುತ್ತವೆ ಎಂದು ಹೇಳಬಹುದು. ಮುನಿಯನ ಮಾದರಿ ಚಲನಚಿತ್ರದಲ್ಲಿ ಮುನಿಯ ಮತ್ತು ಮರುಳಪ್ಪನ ಉಡುಪಿನ ಸಂಕೇತದ ಮೂಲಕ ಅವರ ಸಾಮಾಜಿಕ ಸ್ಥಾನಮಾನಗಳು ತಿಳಿಯುತ್ತವೆ ಎಂದು ಹೇಳಬಹುದು.

ಕೃಷ್ಣಮೂರ್ತಿ ಪುರಾಣಿಕ ಅವರ ಕಾದಂಬರಿ ಆಧಾರಿತ, ವಿಜಯ್ ನಿರ್ದೇಶನದ 'ಸನಾದಿ ಅಪ್ಪಣ್ಣ' ಚಲನಚಿತ್ರದಲ್ಲಿ 'ಶಹನಾಯಿ' ಜಾತಿ ಸೂಚಕವಾಗಿ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಉದಾಹರಣೆ ಮೂಲಕ ನೋಡಬಹುದು. ಅಪ್ಪ ಮಗನ ನಡುವೆ ನಡೆಯುವ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು.

ಕೆ.ಎಚ್.ರಾವ್: ಇದೇನ್ ಮನೇನ ಸ್ಮಶಾನನಾ?

ಅಪ್ಪಣ್ಣ: ಯಾಕಪ್ಪ ಏನಾಯ್ತು ಇವಾಗ

ಕೆ.ಎಚ್.ರಾವ್: ಯಾರನ್ನ ಕೇಳಿ ಈ ಅನಿಷ್ಟನ ಬಾರಿಸುತ್ತಿದ್ದೀಯಾ?

ಅಪ್ಪಣ್ಣ: ಅನಿಷ್ಟ, ಏನಪ್ಪ ಅಂದೆ ಈವಾದ್ಯ ಇವತ್ತು ನಿನ್ನ ಭಾಗಕ್ಕೆ ಅನಿಷ್ಟ ಆಗೋಯ್ತಾ

ಕೆ.ಎಚ್.ರಾವ್: ಹೌದು ನನಗೆ ಇದನ್ನು ಕೇಳಿದ್ರೆ ಆಗಲ್ಲ. ಇದಕ್ಕೆ ಈ ಮನೇಲಿ ಜಾಗ ಇಲ್ಲ. ಇದನ್ನು ಬಾರಿಸೋನು ಕೆಳಜಾತಿ ಮನುಷ್ಯ.

ಅಪ್ಪಣ್ಣ: ನೀನು ಕೀಳು ದರ್ಜೆ ಮನುಷ್ಯನ ಮಗನೆ ಅನ್ನೋದನ್ನ ಮರಿಬೇಡ. ಕೊರವರ ಹನುಮನಾಗಿದ್ದ ನಿನ್ನ ಇಲ್ಲಿತನಕ ಓದ್ಸಿ ದೊಡ್ಡ ಸಾಹೇಬನ್ನ ಮಾಡಿದ್ದೇ ಈ ನನ್ನ ತಾಯಿ. ಅನ್ನ ಹಾಕಿದ್ದ ದೇವ್ರುನ ತುಚ್ಛವಾಗಿ ನೋಡುವನು ಮನುಷ್ಯ ಅಲ್ಲ.

ಕೆ.ಎಚ್.ರಾವ್: ರಾಕ್ಷಸ ಅಂತಿಯಾ, ಹೌದು. ಇವತ್ತೆ ಕೊನೆ ಇನ್ನೊಂದು ದಿನ ಇಲ್ಲಿ ಶಹನಾಯಿ ಏನಾದ್ರು ಮುಟ್ಟಿದ್ರೆ ನಾನು ಸುಮ್ಮನಿರಲ್ಲ.

ಅಪ್ಪಣ್ಣ: ಏನ್ ಮಾಡ್ತಿಯ, ಏನ್ ಮಾಡ್ತಿಯಾ,. ಇದು ನನ್ನ ಜೀವ. ಇದುನ್ನ ಮುಟ್ಟಬೇಡ ಅನ್ನೋ ಹಕ್ಕು ಯಾರ್ರೂ ಇಲ್ಲ ಇಲ್ಲ. ನನಗಿಷ್ಟ ಬಂದಾಗ ನುಡಿಸ್ತೀನಿ ತೃಪ್ತಿ ಆಗೋವಷ್ಟು ನುಡಿಸ್ತೀನಿ.

ಕೆ.ಎಚ್.ರಾವ್: ಹಾಗಾದ್ರೆ ಗಂಗನಹಳ್ಳಿಗೆ ಇವತ್ತೆ ಒಂದು ಟಿಕೇಟು ತಂದು ಕೊಡ್ತೀನಿ ಆ ಕೊರವರ ಕೇರಿಗೆ ಹೋಗಿ ಗಂಟಲು ಹರಿಯುವವರೆಗೂ ಬಾರಿಸ್ಕೋ. ನಿನಗೂ ಆತಂಕ ಇರಲ್ಲ. ತಾಪತ್ರೆ ಇರೊಲ್ಲ. (ಚಲನಚಿತ್ರ: ಸನಾದಿ ಅಪ್ಪಣ್ಣ)

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ 'ಶಹನಾಯಿ' ಒಂದು ಸಮುದಾಯದ ವೃತ್ತಿ ಮತ್ತು ಸಾಂಸ್ಕೃತಿಕ ಅಸ್ಮಿತೆಯಾಗಿದೆ. ಅದು ಸಮಾಜದಲ್ಲಿ ಜಾತಿ ಸೂಚಕವಾಗಿಯೂ ಕೆಲಸಮಾಡುತ್ತಿದೆ. ಕೆಳಜಾತಿಯ ಶಿಕ್ಷಣ ಪಡೆದ ಪಾತ್ರ ಯಾಕೆ ಶಹನಾಯಿಯನ್ನು ವಿರೋಧಿಸುತ್ತದೆ. ಎಂದು ಸೂಕ್ಷ್ಮವಾಗಿ ಗಮನಿಸಿದರೆ ಆ ಒಂದು ವಸ್ತು ಸಮಾಜದಲ್ಲಿ ಒಂದು ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಶಹನಾಯಿಯನ್ನು ನುಡಿಸುವವರು ಕೆಳಜಾತಿಯವರೆಂದು ತಕ್ಷಣ ಗುರುತಿಸುವ ಸೂಚಕವಾಗಿದೆ. ಇದರಿಂದ ಸಮಾಜದಲ್ಲಿ ಆವ್ಯಕ್ತಿಗಳು ಅನೇಕ ಸಂದರ್ಭದಲ್ಲಿ ಅವಮಾನಕ್ಕೆ ಒಳಗಾಗಿರುತ್ತಾರೆ. ಸಾಂಸ್ಕೃತಿಕವಾಗಿ ಆ ವಾದ್ಯ ಶ್ರೇಷ್ಠ ಎನಿಸಿದರೂ ಆ ವಾದ್ಯ ನುಡಿಸುವವರನ್ನು ಸಮಾಜದಲ್ಲಿ ಕೀಳಾಗಿ ಕಾಣಲಾಗುತ್ತದೆ. ಸಾಮಾಜಿಕವಾಗಿ ಅಗೌರವಕ್ಕೆ ಒಳಗಾಗುತ್ತಾರೆ.

ಶಿಕ್ಷಣಪಡೆದ ಕೆಳಜಾತಿ ವ್ಯಕ್ತಿಗಳಿಗೆ ಈ ವಾದ್ಯ ಕೀಳರಿಮೆಯ ಸೂಚಕವಾಗಿ ಕಂಡರೆ, ಆ ಸಮುದಾಯದ ಹಿರಿಯರಿಗೆ ಈ ವಾದ್ಯ ಸಮುದಾಯದ ಅಸ್ಮಿತೆಯಾಗಿ ಕಂಡುಬರುತ್ತದೆ.

ಈ ವಾದ್ಯ ನುಡಿಸುವವರನ್ನು ಅಸ್ಪೃಶ್ಯರನ್ನಾಗಿ ಸಮಾಜದಲ್ಲಿ ಕಾಣಲಾಗುತ್ತಿದೆ. ಸನಾದಿ ಅಪ್ಪಣ್ಣ ಚಲನಚಿತ್ರದಲ್ಲಿ ಅಪ್ಪಣ್ಣ ಕೂಡ ಅಸ್ಪೃಶ್ಯತೆಗೆ ಒಳಗಾಗುತ್ತಾನೆ. ಊಟದ ಪಂಕ್ತಿಯಲ್ಲಿ ಅಸ್ಪೃಶ್ಯನೆಂದು ಅವಮಾನ ಮಾಡುತ್ತಾರೆ. ಅಪ್ಪಣ್ಣನ ಹೆಂಡತಿ ಬಸಂತಿ ಅಪ್ಪಣ್ಣನಿಗೆ ಆದ ಅವಮಾನದಿಂದ ಒಂದು ನಿರ್ಧಾರಕ್ಕೆ ಬರುತ್ತಾಳೆ. ಈ ಅವಮಾನ ನಿಂದನೆ ಎಲ್ಲ ನಮ್ಮ ತಲೆಮಾರಿಗೆ ನಿಂತುಹೋಗ್ಬೇಕು. ಅದಕ್ಕಾಗಿ ನಮ್ಗೆ ಗಂಡು ಮಗು ಆದ್ರೆ ಚೆನ್ನಾಗಿ ಓದ್ಸಿ ದೊಡ್ಡ ಸಾಹೇಬನನ್ನಾಗಿ ಮಾಡ್ಬೇಕು. ಇದು ನನ್ನ ಆಸೆ. ನೆರವೇರಿಸಿಕೊಡ್ಬೇಕು ಎಂದು ಅಪ್ಪಣ್ಣನ ಹತ್ತಿರ ಭಾಷೆ ತೆಗೆದುಕೊಳ್ಳುತ್ತಾಳೆ. ಆದ್ರೆ ಯಾವುದೇ ಕಾರಣಕ್ಕೂ ಶಹನಾಯಿ ಅವನ ಕೈಯಲ್ಲಿ ಮಟ್ಟಿಸಬಾರದು ಎಂಬ ಮಾತನ್ನು ಹೇಳುತ್ತಾಳೆ. ಯಾಕೆಂದ್ರೆ ಶಹನಾಯಿ ಇಲ್ಲಿ ಜಾತಿಸೂಚಕವಾಗಿ ನಿಲ್ಲುತ್ತದೆ. ಶಹನಾಯಿ ನುಡಿಸುವವರು ಕೊರವರ ಸಮುದಾಯದವರು ಮಾತ್ರ. ಆದ್ದರಿಂದ ಶಹನಾಯಿ ನುಡಿಸುವುದನ್ನು ಕಲಿತರೆ ಶಿಕ್ಷಣದಿಂದ ವಂಚಿತನಾಗುತ್ತಾನೆ. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ದೊರಕುವುದಿಲ್ಲ ಎಂಬ ಕಾರಣಕ್ಕೆ ಶಹನಾಯಿ ಮುಟ್ಟಬೇಡಿ ಎಂದು ಹೇಳುತ್ತಾಳೆ. ಶಹನಾಯಿ ಎಂಬ ವಾದ್ಯ ಕೂಡ ಜಾತಿ ಸೂಚಕವಾಗಿ ಕೆಲಸಮಾಡುತ್ತದೆ. ಕೊರವರ ಹನುಮಂತು ಆಧುನಿಕ ಶಿಕ್ಷಣದ ಪ್ರಭಾವದಿಂದ ಕೆಳಜಾತಿ ಜಾತಿಸೂಚಕವಾದ ತನ್ನ ಹೆಸರನ್ನು ತೆಗೆದು ಕೆ.ಎಚ್.ರಾವ್ ಎಂದು ಮೇಲ್ಜಾತಿ ಸೂಚಕ ಹೆಸರನ್ನು ಇಟ್ಟುಕೊಳ್ಳುತ್ತಾನೆ. ಹಾಗೆಯೇ ತನ್ನ ಸಮುದಾಯವನ್ನು ಸೂಚಿಸುವಂತಹ ಶಹನಾಯಿ ಕೂಡ ಜಾತಿಯನ್ನು ಸೂಚಿಸುತ್ತದೆ ಎಂದು

ಇಷ್ಟಪಡುವುದಿಲ್ಲ. ಅದರ ಶಬ್ದ ಕೇಳಿದರೂ ಸಹ ಕೋಪ ಬರುತ್ತದೆ. ಈ ವಾದ್ಯ ಅವನ ಪಾಲಿಗೆ ಅನಿಷ್ಟವಾಗಿರುತ್ತದೆ. ತಾನು ಕೂಡ ಕೆಳಜಾತಿ ಮನುಷ್ಯನ ಮಗ ಎನ್ನುವುದನ್ನು ಮರೆತು ಇದನ್ನು ಬಾರಿಸುವವರು ಕೀಳುಜಾತಿಯವರು ಎಂದು ಹೇಳುತ್ತಾನೆ. ಆ ಶಹನಾಯಿಯನ್ನು ಕೆ.ಎಚ್.ರಾವ್ ಯಾವತ್ತು ಮುಟ್ಟುವುದಿಲ್ಲ. ತನ್ನ ಮಗನಿಗೂ ಸಹ ಅದನ್ನು ಮುಟ್ಟಲು ಬಿಡುವುದಿಲ್ಲ. ಅದು ತನ್ನ ಜಾತಿಯನ್ನು ಸಮಾಜಕ್ಕೆ ಗೊತ್ತಾಗುವಂತೆ ಮಾಡುತ್ತದೆ ಎಂದು ಆ ವಾದ್ಯವನ್ನು ದ್ವೇಷಿಸುತ್ತಾನೆ. ಅದನ್ನು ಕಂಡರೆ ಸಾಕು ಸಿಡಿಮಿಡಿಗೊಳ್ಳುತ್ತಿರುತ್ತಾನೆ. ಈ ರೀತಿಯಾಗಿ ವರ್ತಿಸಲು ಕಾರಣಗಳೇನು ಎಂದರೆ ಅವನು ಸಮಾಜದಲ್ಲಿ ಜಾತಿಯಿಂದ ಅನುಭವಿಸಿದ ಅವಮಾನಗಳು, ನಿಂದನೆಗಳು, ಸಾಮಾಜಿಕ ಒತ್ತಡಗಳೇ ಕಾರಣಗಳಾಗಿವೆ. ಸಮಾಜ ಮತ್ತು ಸಂದರ್ಭ ಇವನನ್ನು ಈ ರೀತಿಯಾಗಿ ವರ್ತಿಸುವಂತೆ ಮಾಡುತ್ತದೆ.

ಈಗಾಗಲೇ ಕೆ.ಎಚ್.ರಾವ್‌ಗೆ ಸಮಾಜದಲ್ಲಿ ಒಂದು ಪ್ರತಿಷ್ಠೆಯಿದೆ. ಅದು ಶಿಕ್ಷಣ, ಅಧಿಕಾರ ಮತ್ತು ಅವನ ಹೆಸರಿನಿಂದಲೂ ಸಿಕ್ಕಿರಬಹುದು. ಈ ಶಹನಾಯಿ ಅವನ ಮನೆಯಲ್ಲಿರುವುದು ಸಮಾಜಕ್ಕೆ ತಿಳಿದರೆ ನಾನೊಬ್ಬ ಕೆಳಜಾತಿಗೆ ಸೇರಿದ ವ್ಯಕ್ತಿ ಎಂದು ತಿಳಿದರೆ ಸಮಾಜದಲ್ಲಿ ನನಗೆ ಮಾನ್ಯತೆ ಸಿಗುವುದಿಲ್ಲ, ಗೌರವ ಸಿಗುವುದಿಲ್ಲ ಎಂಬ ಸಾಮಾಜಿಕ ಬಿಕ್ಕಟ್ಟುಗಳಿಂದಾಗಿ ಈ ರೀತಿ ವರ್ತಿಸುತ್ತಾನೆ. ಸಮಾಜ, ಶಿಕ್ಷಣ, ಪ್ರತಿಷ್ಠೆ ಇವುಗಳು ಒಬ್ಬ ಕೆಳಜಾತಿ ವ್ಯಕ್ತಿಯ ಮೇಲೆ ಹೇಗೆ ಪ್ರಭಾವವನ್ನು ಬೀರಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಇದು ಹೇಗೆ ಅವನನ್ನು ಮೇಲ್ಮುಖ ಚಲನೆಗೆ ತೆರೆದುಕೊಳ್ಳುವಂತೆ ಮಾಡುತ್ತದೆ ಎಂದರೆ ನಿನ್ನ ಸಮುದಾಯ, ಸಮುದಾಯದ ವೃತ್ತಿ, ಕೀಳು, ನಿನ್ನ ಹೆಸರು ಜಾತಿಯನ್ನು ಸೂಚಿಸುತ್ತದೆ. ಶಹನಾಯಿ ಸಮುದಾಯದ ಗುರುತು ಮತ್ತು ಅಸ್ಮಿತೆ. ನಿನ್ನ ಸಂಸ್ಕೃತಿ ಕೀಳಾದದ್ದು ಎಂಬ ಕೀಳರಿಮೆಯ ಮನೋಧೋರಣೆಯನ್ನು ಸೃಷ್ಟಿಸಿರುವ ಸಾಮಾಜಿಕ ಒತ್ತಡಗಳಿಗೆ ಕೊರವರ ಹನುಮಂತು ಬಲಿಯಾಗಿ, ಕೆ.ಎಚ್.ರಾವ್ ಆಗುತ್ತಾನೆ. ತನ್ನ ಮೂಲ ಬಾಹ್ಯಗುರುತುಗಳನ್ನು ಒಂದೊಂದಾಗಿ ಕಳಚಿಕೊಳ್ಳುತ್ತಾ ಮೇಲ್ಮುಖ ಚಲನೆಗೆ ಹಂಬಲಿಸುತ್ತಾನೆ. ಇದನ್ನು ಸಮಾಜೋ ಸಾಂಸ್ಕೃತಿಕ ರಾಜಕಾರಣಕ್ಕೆ ಉದಾಹರಣೆ ಎಂದು ಹೇಳಬಹುದು. ಕೆಳಜಾತಿಯ ವ್ಯಕ್ತಿ ತನ್ನ ಜಾತಿಸೂಚಕ ಸಂಕೇತಗಳನ್ನು ತಿರಸ್ಕರಿಸುತ್ತ, ದ್ವೇಷಿಸುತ್ತ ಬರುತ್ತಾನೆ ಎಂದು ಆರೋಪಗಳನ್ನು ಮಾಡುವುದಕ್ಕಿಂತ ಆ ವ್ಯಕ್ತಿ ಸಮಾಜದಲ್ಲಿ ಈ ರೀತಿಯಾಗಿ ವರ್ತಿಸುವುದಕ್ಕೆ ಕಾರಣಗಳೇನು? ಎಂಬುದೇ ಬಹಳ ಮುಖ್ಯ ಎನಿಸುತ್ತದೆ. ಜಾತಿ, ವೃತ್ತಿ, ಪ್ರತಿಷ್ಠೆ, ಅಸ್ಮಿತೆ, ಶಿಕ್ಷಣ, ಆರ್ಥಿಕತೆ, ಸಾಮಾಜಿಕ ಸಂದರ್ಭ ಈ ಎಲ್ಲ ಅಂಶಗಳು ಒಬ್ಬ ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರಿರುತ್ತವೆ. ಶಹನಾಯಿ ಒಂದು ಸಂದರ್ಭಕ್ಕೆ ಒಂದು ಸಮುದಾಯದ ಅಸ್ಮಿತೆ, ಸಂಸ್ಕೃತಿ ಮತ್ತು ಬದುಕಾಗಿತ್ತು. ಆದರೆ ಒಂದು ತಲೆಮಾರಿನ ನಂತರ ಅಗೌರವ ಸೂಚಕ, ಜಾತಿಸೂಚಕ ಮತ್ತು ಅಸ್ಪೃಶ್ಯ ಸೂಚಕವಾಗಿ ಕೆಲಸ ಮಾಡುತ್ತದೆ. ಆಧುನಿಕ ಸಂದರ್ಭದಲ್ಲಿ ವಾದ್ಯಗಳು ಸಾಂಸ್ಕೃತಿಕವಾಗಿ

ಒಂದು ವೇದಿಕೆಯ ಸಂದರ್ಭದಲ್ಲಿ ಸಾಮಾಜಿಕ ಗೌರವಕ್ಕೆ ಪಾತ್ರವಾಗುತ್ತವೆ. ಬಂಡವಾಳಶಾಹಿಗಳ ಕೈಯಲ್ಲಿ ಅದು ಉದ್ಯಮವಾಗಿ ಬೆಳೆಯುತ್ತದೆ. ಇಲ್ಲಿ ಜಾತಿಸೂಚಕವಾಗಿ ಕೆಲಸಮಾಡುವುದಿಲ್ಲ. ಇಲ್ಲಿ ಆರ್ಥಿಕ ದೃಷ್ಟಿಕೋನ ಮಾತ್ರ ಮುಖ್ಯವಾಗಿರುತ್ತದೆ. ಅದೇ ವಾದ್ಯ ಕೆಳಜಾತಿಯವರ ಕೈಯಲ್ಲಿದ್ದರೆ ಮಾತ್ರ ಜಾತಿಸೂಚಕವಾಗಿ ಕೆಲಸಮಾಡುತ್ತಿರುತ್ತದೆ ಎಂದು ಹೇಳಬಹುದು.

ಸಿದ್ದಲಿಂಗಯ್ಯ ಅವರ ನಿರ್ದೇಶನದ 'ಭೂತಯ್ಯನ ಮಗ ಅಯ್ಯು' ಎಂಬ ಚಲನಚಿತ್ರದಲ್ಲಿ ಒಬ್ಬ ಕೆಳಜಾತಿಯ ವ್ಯಕ್ತಿ ಚಪ್ಪಲಿ ಹೊಲೆಯುವ ಚಿತ್ರಣ ಕಂಡುಬರುತ್ತದೆ. ಅದು ಹೀಗಿದೆ. "ಭೂತಯ್ಯ ತನ್ನ ಹರಿದ ಚಪ್ಪಲಿಗಳನ್ನು ಆ ಕೆಳಜಾತಿ ವ್ಯಕ್ತಿಗೆ ಹೊಲಿಯುವುದಕ್ಕೆ ಕೊಡುತ್ತಾನೆ. ತುಂಬಾಕಡೆ ಹರಿದು ಹೋಗಿದ್ದ ಚಪ್ಪಲಿಗಳಿಗೆ ಹೆಚ್ಚಿನ ಹೊಲಿಗೆಗಳನ್ನು ಹಾಕಿ ಹೊಲೆದು ಕೊಡುತ್ತಾನೆ. ಆ ಕೆಳಜಾತಿ ವ್ಯಕ್ತಿ ಮೈಗೆ ಬಟ್ಟೆಯನ್ನು ಹಾಕಿಕೊಂಡಿರುವುದಿಲ್ಲ. ಒಂದು ಹಳೆ ಪಂಚೆಯನ್ನು ಮಾತ್ರ ತೊಟ್ಟಿರುತ್ತಾನೆ. ಭೂತಯ್ಯ ಹೊಲಿದ ಚಪ್ಪಲಿಗಳಿಗೆ ದುಡ್ಡು ಕೊಡದೆ ಹಾಗೆ ಹೋಗುತ್ತಾನೆ"(ಚಲನಚಿತ್ರ: ಭೂತಯ್ಯನ ಮಗ ಅಯ್ಯು). ಈ ಚಿತ್ರಣ ಕಣ್ಣಮುಂದೆ ಬಂದಾಗ ಚಪ್ಪಲಿ ಹೊಲೆಯುವ ವ್ಯಕ್ತಿ ಕೆಳಜಾತಿಗೆ ಸೇರಿದ ವ್ಯಕ್ತಿ ಎಂದು ಗುರುತಿಸಬಹುದು. ಆ ವ್ಯಕ್ತಿಯ ವೃತ್ತಿ ಮತ್ತು ಉಡುಪು ಅವನ ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತಿರುತ್ತದೆ. ಈ ಚಪ್ಪಲಿ ಹೊಲೆಯುವ ವೃತ್ತಿಯನ್ನು ಸಮಾಜದಲ್ಲಿ ಕೀಳಾಗಿ ಭಾವಿಸಲಾಗಿದೆ. ಚಪ್ಪಲಿ ಹೊಲೆಯುವ ವೃತ್ತಿಯನ್ನು ಒಂದು ಸಮುದಾಯದ ಕೆಲಸ ಎಂದು ಸಮಾಜದಲ್ಲಿ ಸೀಮಿತ ಮಾಡಲಾಗಿತ್ತು. ಈ ವೃತ್ತಿ ಸಮಾಜದಲ್ಲಿ ಬೈಗುಳಾಗಿಯೂ ಬಳಕೆಯಲ್ಲಿದೆ. ಹೇಳಿದ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಪ್ರಯೋಜನಕ್ಕೆ ಬರದ ವ್ಯಕ್ತಿಯನ್ನು 'ಚಪ್ಪಲಿ ಹೊಲೆಯಾಕೆ ಹೋಗು', 'ಚಪ್ಪಲಿ ಹೊಲೆಯೋಕು ಲಯಕ್ಕಿಲ್ಲ ನೀನು' ಎಂಬಂತಹ ಬೈಗುಳುಗಳನ್ನು ಸಮಾಜದಲ್ಲಿ ಬಳಕೆ ಮಾಡುವುದನ್ನು ಕಾಣುತ್ತೇವೆ. ಅಂದರೆ ಈ ವೃತ್ತಿ ಎಲ್ಲದಕ್ಕಿಂತಲೂ ಕೀಳಾದುದು ಎಂದು ಭಾವಿಸಲಾಗಿದೆ ಎಂದು ಹೇಳಬಹುದು.

ಇತ್ತೀಚಿನ ಜಾಗತೀಕರಣದ ಸಂದರ್ಭದಲ್ಲಿ ಈ ಚಪ್ಪಲಿಯ ವ್ಯಾಪಾರಕ್ಕೆ ದೊಡ್ಡ ಮಾರುಕಟ್ಟೆಯಿದೆ. ಚಪ್ಪಲಿಗಳಿಗೆ ದೊಡ್ಡ ದೊಡ್ಡ ಸಿನಿಮಾ ನಟರು ಜಾಹಿರಾತುಗಳನ್ನು ನೀಡುತ್ತಿದ್ದಾರೆ. ಇದರಿಂದ ಇವರ ಸಾಮಾಜಿಕ ಸ್ಥಾನಮಾನ ಸಮಾಜದಲ್ಲಿ ಕುಗ್ಗುವುದಿಲ್ಲ. ಆರ್ಥಿಕವಾಗಿಯೂ ಸಹ ಬಲಿಷ್ಠರಾಗುತ್ತಿದ್ದಾರೆ. ಈ ಚಪ್ಪಲಿಯ ವ್ಯಾಪಾರದಿಂದಲೇ ಬಂಡವಾಳಶಾಹಿಗಳ ಮತ್ತು ನಟರ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕತೆ ಪ್ರಾಬಲ್ಯಗೊಳ್ಳುತ್ತಾ ಹೋಗುತ್ತದೆ. ಆದರೆ ಅದೇ ಕೆಳಜಾತಿಯವರು ಇಂದಿಗೂ ಸಹ ಈ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕತೆ ಇಂದೂ ಸಹ ಪ್ರಾಬಲ್ಯ ಹೊಂದಿಲ್ಲ. ಸಾಮಾಜ ಅವರನ್ನು ಕೀಳಾಗಿಯೇ ಕಾಣುತ್ತಿದೆ. ಈ ರೀತಿಯಾಗಿ ವೃತ್ತಿಯ ಸಂಕೇತವೂ ಕೂಡ ಜಾತಿ ಸೂಚಕವಾಗಿ ಕೆಲಸ ಮಾಡುತ್ತಿರುತ್ತದೆ. ಈ ವೃತ್ತಿಗಳು ಕೆಳಜಾತಿ ಪಾತ್ರಗಳ ಸಾಮಾಜಿಕ ಸ್ಥಾನಮಾನವನ್ನು

ನಿರ್ಧರಿಸುತ್ತಿರುತ್ತವೆ. ಈ ಬಾಹ್ಯ ಸಂಕೇತಗಳ ಮೂಲಕ ಅವರ ಸಾಮಾಜಿಕ ಚಹರೆಗಳು ಕಂಡು ಬರುತ್ತವೆ ಎಂದು ಹೇಳಬಹುದು.

ಶಿವಯ್ಯ ನಿರ್ದೇಶನದ 'ಕೃಷ್ಣ ನೀ ಬೇಗನೆ ಬಾರೋ' ಚಲನಚಿತ್ರದಲ್ಲಿ ಸಂಕೇತ ಭಾಷೆಗೆ ಸಂಬಂಧಿಸಿದಂತೆ ಒಂದು ಉದಾಹರಣೆಯನ್ನು ನೋಡಬಹುದು.

"ಕೆಳಜಾತಿ ಮಹಾದೇವಯ್ಯನ ಮಗಳು ರಾಧೆಗೆ ಒಬ್ಬ ವ್ಯಕ್ತಿಯ ಜೊತೆ ಮದುವೆ ಮಾಡುತ್ತಾರೆ. ಆ ವ್ಯಕ್ತಿ ಕುಡಿದು ಬಂದು ಮಹಾದೇವಯ್ಯನ ಜೊತೆ ಜಗಳವಾಡುತ್ತಾನೆ. ಜಗಳಮಾಡುವ ಸಂದರ್ಭದಲ್ಲಿ ರಾಧೆಯನ್ನು ಮದುವೆ ಆದ ವ್ಯಕ್ತಿ ಆಕಸ್ಮಿಕವಾಗಿ ಸಾಯುತ್ತಾನೆ. ಆಗ ರಾಧೆಯು ಹಣೆಯ ಮೇಲೆ ಕುಂಕುಮ ಇಡುವುದಿಲ್ಲ ಮತ್ತು ಬಿಳಿ ಸೀರೆಯನ್ನು ತೊಟ್ಟಿರುತ್ತಾಳೆ." (ಚಲನಚಿತ್ರ: ಕೃಷ್ಣ ನೀ ಬೇಗನೆ ಬಾರೋ). ಇದು ವಿಧವೆಯ ಸಂಕೇತವಾಗಿ ಕಾಣುತ್ತದೆ. ಭಾರತೀಯ ಸಮಾಜದಲ್ಲಿ ಗಂಡ ಸತ್ತ ನಂತರ ಕುಂಕುಮ ಇಡುವುದಿಲ್ಲ. ಆದರೆ ಇಲ್ಲಿ ರಾಧೆಗೆ ಬಿಳಿಸೀರೆಯನ್ನು ಉಡಿಸಿದ್ದಾರೆ. ಬಳಿ ಸೀರೆಯು ಇಲ್ಲಿ ವಿಧವೆಯ ಸಂಕೇತವಾಗಿ ಕಂಡುಬರುತ್ತದೆ. ಆದರೆ ಕೆಳಜಾತಿ ಮಹಿಳೆಯರು ಗಂಡ ಸತ್ತ ನಂತರ ಬಿಳಿಸೀರೆಯನ್ನು ಉಡುವುದಿಲ್ಲ. ಹಣೆಯಲ್ಲಿನ ಕುಂಕುಮ ಮತ್ತು ತಾಳಿಯನ್ನು ತೆಗೆಯುತ್ತಾರೆ. ಆದರೆ ಯಾವುದೋ ಒಂದು ಸಮುದಾಯದಲ್ಲಿ ಮಾತ್ರ ಬಳಿಸೀರೆಯನ್ನು ಉಡುತ್ತಾರೆ. ನಿರ್ದೇಶಕರು ವಿಧವೆಯ ಸಂಕೇತವನ್ನು ಸೂಚಿಸುವುದಕ್ಕಾಗಿ ರಾಧೆಗೆ ಬಿಳಿ ಸೀರೆಯನ್ನು ಹಾಕಿಸಿದ್ದಾರೆ. ಆದರೆ ಬಿಳಿಸೀರೆ ಒಂದು ಸಮುದಾಯದ ಸಂಸ್ಕೃತಿಯನ್ನು ಮಾತ್ರ ಪ್ರತಿನಿಧಿಸುವಂತದ್ದು. ಇದೇ ಭಾರತೀಯ ಸಂಸ್ಕೃತಿ ಎಂದು ಹೇಳಲು ಸಾಧ್ಯವಿಲ್ಲ ಎನ್ನಬಹುದು. ಈ ಬಿಳಿಸೀರೆ ವಿಧವೆಯ ಸಂಕೇತವಾಗಿ ಕಂಡುಬಂದರು ಅದು ಕೆಳಜಾತಿ ಮಹಿಳೆ ವಿಧವೆಯ ಸಂಕೇತವಾಗಿ ಕಂಡುಬರುವುದಿಲ್ಲ ಎಂದು ಹೇಳಬಹುದು. ಈ ರೀತಿಯಾಗಿ ಸಂಕೇತಗಳ ಮೂಲಕ ಸಾಮಾಜಿಕ ಚಹರೆಯನ್ನು ಕಾಣಬಹುದು.

ಹೊಂಗಳ್ಳಿ ಸೋಮಣ್ಣ ಅವರ 'ತಮಟೆ' ಎಂಬ ಕಥೆಯಲ್ಲಿ 'ತಮಟೆ' ಜಾತಿ ಸೂಚಕವಾಗಿ ಹೇಗೆ ಕೆಲಸಮಾಡುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು.

"ಹೊಂಗಳ್ಳಿ ಸೋಮಣ್ಣನವರು ತಮಟೆ(೧೯೯೩) ಕಥಾ ಸಂಕಲನ ಏಳು ಕಥೆಗಳಿಂದ ಕೂಡಿದ್ದು, ಹಳ್ಳಿಗಾಡಿನ ಅನುಭವ ಹಾಗೂ ಅಲ್ಲಿಯ ಮಾತಿನ ಸೊಗಡನ್ನು ಹಿಡಿದುಕೊಂಡು ರೂಪುಗೊಂಡಿದೆ. ಈ ಗುಣವೇ ಸತ್ವಕ್ಕೆ ಮುಖಮಾಡಿದೆ. ಅಕ್ಷರಸ್ಥ ಹೋರಾಟಗಾರ ಮಗ ಮತ್ತು ಸಂಪ್ರದಾಯವಾದಿ ಪರಂಪರೆಯ ಹಿನ್ನೆಲೆಯ ತಂದೆ ಮಗನ ಸಂಘರ್ಷವೇ 'ತಮಟೆ' ಕಥಾ ವಸ್ತು. ಇದಕ್ಕೆ 'ತಮಟೆ' ನುಡಿಸುವುದೇ ಕಾರಣವಾಗುತ್ತದೆ. ತಮಟೆ ನುಡಿಸುವ ವ್ಯಕ್ತಿಯ ಬದುಕು ಕ್ಷೀಣಿಸುವ, ಅವಮಾನಿಸುವುದಕ್ಕೆ ಕಾರಣವಾಗುವುದರಿಂದ ನಿರಾಕರಿಸಬೇಕೆನ್ನುವ ಮಗನ

ಗುಣ ತಂದೆ ಮಗನ ವೈರತ್ವಕ್ಕೆ ಕಾರಣವಾಗಿ ಅದೇ ಮಗನ ಜೀವಕ್ಕೆ ಕುತ್ತಾದಾಗ ತಮಟೆಗಿಂತ ಮಗನೇ ಮುಖ್ಯ ಎಂಬ ತಿರುವು ಕಥೆ ಪಡೆದುಕೊಳ್ಳುತ್ತದೆ" (ಅರವಿಂದ ಮಾಲಗತ್ತಿ, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೫, ಪುಟ-೪೩೧). ಈ ಉದಾಹರಣೆಯಲ್ಲಿ ಆಧುನಿಕ ಶಿಕ್ಷಣ ಪಡೆದ ವ್ಯಕ್ತಿಯ ಮತ್ತು ಸಂಪ್ರದಾಯದ ಹಿನ್ನೆಲೆಯ ವ್ಯಕ್ತಿಯ ನಡುವೆ ಸಂಘರ್ಷವನ್ನು ಕಾಣಬಹುದು. ಸನಾದಿ ಅಪ್ಪಣ್ಣ ಚಲನಚಿತ್ರದಲ್ಲಿಯೂ ಸಹ ಇದೇ ರೀತಿಯ ಸಾಮಾಜಿಕ ಬಿಕ್ಕಟ್ಟು ಇರುವುದನ್ನು ಕಾಣಬಹುದು. ತಮಟೆ ಹೇಗೆ ಜಾತಿ ಸೂಚಕವಾಗಿ ಕೆಲಸ ಮಾಡುತ್ತದೆ? ಮತ್ತು ಅದರಿಂದ ಆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಏನಾಗುತ್ತದೆ? ಎಂಬ ಆತಂಕ ಶಿಕ್ಷಣ ಪಡೆದ ವ್ಯಕ್ತಿಯಲ್ಲಿದೆ. ಈ ತಮಟೆಯಿಂದ ನಮ್ಮ ಜಾತಿಯನ್ನು ಗುರುತಿಸುತ್ತಾರೆ. ಸಾಮಾಜಿಕವಾಗಿ ಗೌರವವನ್ನು ಕೊಡುವುದಿಲ್ಲ, ಸಮಾಜದಲ್ಲಿ ಕೀಳಾಗಿ ಕಾಣುತ್ತಾರೆ ಎಂಬ ಆತಂಕ ಶಿಕ್ಷಣ ಪಡೆದ ವ್ಯಕ್ತಿಯಲ್ಲಿ ಕಾಣುತ್ತೇವೆ. ತಮಟೆ ಸಮುದಾಯದ ಅಸ್ಮಿತೆಯಾ ಬದುಕಾಗಿ ಅವನ ತಂದೆಯಲ್ಲಿ ಕಂಡುಬರುತ್ತದೆ. ಈ ರೀತಿಯಾಗಿ ಕೆಲವು ವೃತ್ತಿಪರಿಕರಗಳು ಸಾಮಾಜಿಕ ಚಹರೆಗಳನ್ನು ಸೂಚಿಸುತ್ತಿರುವುದನ್ನು ಕಾಣಬಹುದು.

ಮೊಗಳ್ಳಿ ಗಣೇಶ್ ಅವರ 'ಪ್ರಾಣಿಗಳು' ಎಂಬ ಕಥೆಯಲ್ಲಿಯೂ ಸಹ 'ತಮಟೆ' ಎಂಬ ವಾದ್ಯ ಜಾತಿಸೂಚಕವಾಗಿ ಕಂಡುಬಂದಿರುವುದನ್ನು ಕಾಣಬಹುದು. "ಕೆಲವು ಹುಡುಗರು ಬಂದು ಆ ಟಿನ್ನುಗಳನ್ನು ಕೇಳಿ ತಮಟೆ ಬಡಿಯಲು ಬಾರದೆಂತಲೂ ಟಿನ್ನುಗಳನ್ನು ಕೊಟ್ಟರೆ ಅವನ್ನೇ ತಮಟೆಯಾಗಿಸಿಕೊಂಡು ಪ್ರಾರಂಭಿಕ ಗಸ್ತಿಗಳನ್ನು ಹಾಕಿ ಕಲಿಕೆಯ ಪ್ರಯೋಗ ಮಾಡುತ್ತೇವೆಂದು ಬೇಡಿಕೊಂಡಿದ್ದರು. ಈ ಚಿಕ್ಕ ಹುಡುಗರಿಗೆ ತಮಟೆಗಳನ್ನು ದೊಡ್ಡವರು ಕೊಡುತ್ತಲೂ ಇರಲಿಲ್ಲ. ಕಾಳಣ್ಣನಿಗೆ ಹುಡುಗರ ಬುದ್ಧಿಗೆ ಮನಸ್ಸು ನಲಿದಾಡಿತು.

ಕಾಲೇಜು ಓದುತ್ತಿರುವ ತಮ್ಮ ಜಾತಿಯ ಪುಂಡ ಹುಡುಗರು ತಮಟೆಯನ್ನು ಕಂಡರೆ ಹುಲಿ ಕಂಡಂತೆ ಓಡಿ ಅವನ್ನು ತೂತು ಮಾಡಿ; ನಮ್ಮ ಜಾತಿಯನ್ನೆಲ್ಲ ತಮಟೆಯ ಮೂಲಕ ಹರಾಜು ಹಾಕುತ್ತೀರಿ ಎಂದು ಗದ್ದಲವೆಬ್ಬಿಸಿದ್ದನ್ನು ನೆನಪಿಸಿಕೊಂಡು ಹುಡುಗರಿಗೆ ಕರುಣೆತೋರಿ ಭರ್ಜರಿಯಾದ ಮೂರು ಟಿನ್ನುಗಳನ್ನು ಕೊಟ್ಟುಬಿಟ್ಟಿದ್ದ.(ಗಣೇಶ್ ಮೊಗಳ್ಳಿ, ಮೊಗಳ್ಳಿ ಕಥೆಗಳು, ಪುಟ, ೧೮೨)

ಈ ಮೇಲಿನ ಉದಾಹರಣೆಯಲ್ಲಿಯೂ ಸಹ ತಮಟೆ ಜಾತಿ ಸೂಚಕವಾಗಿ ಕಂಡುಬರುತ್ತದೆ. ಕೆಳಜಾತಿ ಹಿರಿಯರಿಗೆ ತಮಟೆ ಅಸ್ಮಿತೆಯಾಗಿ ಕಂಡುಬಂದರೆ ಕೆಳಜಾತಿ ಶಿಕ್ಷಣ ಪಡೆದ ಪಾತ್ರಗಳಿಗೆ ಜಾತಿ ಸಂಕೇತವಾಗಿ, ಅಸ್ಪೃಶ್ಯತೆಯ ಸಂಕೇತವಾಗಿ ಕಂಡುಬರುತ್ತದೆ. ನಮ್ಮ ಜಾತಿಯನ್ನೆಲ್ಲ ತಮಟೆಯ ಮೂಲಕ ಯಾಕೆ ಹರಾಜು ಹಾಕುತ್ತೀರಿ ಎಂಬ ಮಾತುಗಳನ್ನು ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳು ಮಾತನಾಡುತ್ತವೆ. ಈ ರೀತಿಯ ವರ್ತನೆಗೆ ಅವರು ಅನುಭವಿಸಿದ

ಅವಮಾನ, ಶೋಷಣೆ ಸಾಮಾಜಿಕ ಒತ್ತಡಗಳೇ ಕಾರಣಗಳಾಗಿವೆ. ಆದ್ದರಿಂದ ಸಮುದಾಯದ ಸಂಕೇತಗಳನ್ನು ನಿರಾಕರಿಸುತ್ತಾರೆ ಎಂದು ಹೇಳಬಹುದು.

ಶಿವರಾಮ ಕಾರಂತರ 'ಗರ್ಭಗುಡಿ' ನಾಟಕದಲ್ಲಿ 'ಬಾಯಾರು' ಎಂಬುದು ಜಾತಿ ಸೂಚಕವಾಗಿ ಕಂಡುಬರುವುದನ್ನು ನೋಡಬಹುದು.

"ಮಾಂಕು: ಅಲ್ಲ ಬುದ್ಧಿ ತಲೆ ತಿರುಗುತ್ತಿದೆ.....ಸ್ವಲ್ಪ ನೀರು.

ಮಾಣೇಶ: ತಲೆ ತಿರುಗದೆ ಇರುತ್ತದೆಯೋ? ಮೂಗಿನ ಸೊಳ್ಳೆಯವರೆಗೂ ಹೆಂಡ ಕಂಡಿದರೆ.....

ಮಾಂಕು: ಪ್ರಮಾಣಕ್ಕೂ ಹೆಂಡ ಕುಡಿಯಲಿಲ್ಲ ಬುದ್ಧಿ...

ಸಣ್ಣಮು: ಅವನೆಂದದ್ದು ಕೇಳಿದೆಯೋ ಮಾಗೇಶ 'ನೀರು' ಬೇಕಂತೆ ಮುಂಡೇ ಮಗನಿಗೆ 'ನೀರು' ಬೇಕಂತೆ. 'ಬಾಯಾರು' ಅನ್ನಲ್ಲಿಕ್ಕೆ ಸಂಕಟ ನೀರು ಇಲ್ಲಿ ಇಲ್ಲ ನಡಿ. ಬೇಕಾದರೆ ನಿನಗಿಷ್ಟು 'ಬಾಯಾರು' ಹಾಕುವ.

ಮಾಂಕು: ಏನೋ ಬಾಯಿತಪ್ಪಿ ಹಾಗೆಂದೇ ಬುದ್ಧಿ.....ಘಟ್ಟದ ಮೇಲೆ ಹಾಗೆಯೇ...

ಮಾಣೇಶ: ಮುಚ್ಚುಬಾಯಿ...ಘಟ್ಟದ ಮೇಲೆ ಹಾಗೆನ್ನುತ್ತಾರಂತೆ....ಶೋಕು ಇವನಿಗೆ. ಇದೇನು ಘಟ್ಟವಲ್ಲ. ಹಾಳೆ ಅಲ್ಲಿರಿಸಿ ದೂರ ಹೋಗು. ಅಬ್ಬಬ್ಬ ಕಲಿಕಾಲ! ಬಾಯಾರು ಹೋಗಿ ನೀರಾಯಿತು. ಕೂಳು ಹೋಗಿ ಅನ್ನವಾಯಿತು(ಶಿವರಾಮ ಕಾರಂತ, ಶಿವರಾಮ ಕಾರಂತರ ಸಾಹಿತ್ಯಶ್ರೇಣಿ ಸಾಹಿತ್ಯ-೨೩, ನಾಟಕಗಳು, ಪುಟ, ೧೫೧-೧೫೨).

ಈ ಮೇಲಿನ ಉದಾಹರಣೆಲ್ಲಿ 'ಹಾಳೆ' ಎಂಬ ವಸ್ತು 'ಬಾಯಾರು' ಎಂಬ ಪದ ಎರಡು ಜಾತಿಸೂಚಕಗಳಾಗಿ ಕಾಣುತ್ತವೆ. 'ಹಾಳೆ' ಎಂದರೆ ಅಡಿಕೆಯ ಹಾಳೆಯಿಂದ ಮಾಡುವ ಒಂದು ಟೊಪ್ಪಿ. ಕರಾವಳಿ ಪ್ರದೇಶದಲ್ಲಿ ಹಾಳೆ ಎಂದು ಕರೆಯುತ್ತಾರೆ. 'ಬಾಯಾರು' ಎಂದರೆ ಕೀಳೆನಿಸಲ್ಪಡುವರು ಕುಡಿಯುವ ನೀರನ್ನು ಕರೆಯುವ ಹೆಸರು. ಕೆಳಜಾತಿಯವರು ಹೀಗೆ ಕರೆಯಬೇಕೆಂಬ ನಿಯಮ ಹಾಕಲಾಗಿದೆ. ಈ ಅಡಿಕೆಯ ಟೊಪ್ಪಿಯನ್ನು ಕೆಳಜಾತಿಯವರು ಮಾತ್ರ ತಲೆಗೆ ಹಾಕಿಕೊಳ್ಳುವುದಕ್ಕೆ ಮತ್ತು ನೀರು ಕುಡಿಯುವುದಕ್ಕೆ ಬಳಸುತ್ತಾರೆ. ಮೇಲ್ಜಾತಿಯವರು ಅಡಿಕೆಯ ಟೊಪ್ಪಿಗೆಯನ್ನು ಬಳಸುವುದಿಲ್ಲ. ಈ ರೀತಿಯ ಅಡಿಕೆಯ ಟೊಪ್ಪಿಗೆಗಳು ಚೋಮನದುಡಿ ಚಲನಚಿತ್ರದಲ್ಲಿ ಕೆಳಜಾತಿ ವ್ಯಕ್ತಿಗಳಲ್ಲಿ ಕಂಡುಬರುತ್ತವೆ. ಹಾಗೆಯೇ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲೂ ಸಹ ಕೆಳಜಾತಿ ವ್ಯಕ್ತಿಗಳು ಮಾತ್ರ ಈ ರೀತಿಯ ಅಡಿಕೆಯ ಟೊಪ್ಪಿಗೆಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ ಎಂದು ಹೇಳಬಹುದು.

ಈ 'ಬಾಯಾರು' ಎಂಬ ಪದ ಕೆಳಜಾತಿಯವರು ಕುಡಿಯುವ ನೀರಿಗಾಗಿ ಬಳಸುವ ವಿಧವಾಗಿದೆ. ಈ ಪದವೂ ಸಹ ಜಾತಿಸೂಚಕವಾಗಿ ಕಂಡುಬರುತ್ತದೆ. ಮೇಲ್ಜಾತಿ ಪಾತ್ರಗಳು ಕೆಳಜಾತಿಯ ಈ ಪದವನ್ನೇ ಬಳಸಬೇಕು ಎಂದು ನಿರೀಕ್ಷಿಸುವುದು ಮತ್ತು 'ನೀರು ಎಂಬ ಪದವನ್ನು ಕೆಳಜಾತಿಯವರು ಬಳಸಬಾರದು ಎಂಬ ನಿರ್ಬಂಧ ಹೇರಿರುವುದನ್ನು ಇಲ್ಲಿ ಕಾಣಬಹುದು. ಈ ರೀತಿಯಾಗಿ ಕೆಳಜಾತಿಗಳ ಜಾತಿಸೂಚಕಗಳು ಸಂಕೇತ ಭಾಷೆಯಲ್ಲಿ ಕಂಡುಬರುತ್ತವೆ. ಆ ಪಾತ್ರಗಳ ಸಾಮಾಜಿಕ ಚಹರೆಗಳನ್ನು ಈ ಸಂಕೇತಗಳು ಸೂಚಿಸುತ್ತವೆ ಎಂದು ಹೇಳಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದರೆ ಕೆಳಜಾತಿ ಪಾತ್ರಗಳ ಉಡುಪು ಅವರು ಬಳಸುವ ವಸ್ತುಗಳು, ಮೈಮೇಲೆ ಧರಿಸುವ ತೊಡುಗೆಗಳು, ಆಚರಿಸುವ ಸಂಪ್ರದಾಯಿಕ ಆಚರಣೆಯ ಸಂಕೇತಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಸೂಚಿಸುತ್ತಿರುತ್ತವೆ. ಸಮಾಜದಲ್ಲಿ ಕೆಳಜಾತಿ ಪಾತ್ರಗಳನ್ನು ಬಾಹ್ಯ ಸಂಕೇತಗಳ ಮೂಲಕ ಅವರ ಸಮಾಜೋ-ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಳ್ಳಬಹುದು. ಜಾತಿಸಂಕೇತಗಳು ಕೆಳಜಾತಿ ಹಿರಿಯ ಪಾತ್ರಗಳಿಗೆ ಇರಿಸು ಮುರಿಸು ಉಂಟುಮಾಡದಿದ್ದರೂ ಶಿಕ್ಷಣ ಪಡೆದ ಕೆಳಜಾತಿ ಪಾತ್ರಗಳಿಗೆ ಇರಿಸು ಮುರಿಸು ಮತ್ತು ಅವಮಾನಗಳಾಗಿ ಕಾಣುತ್ತವೆ. ಕೆಳಜಾತಿ ಕೆಲವು ಸಮುದಾಯಗಳಲ್ಲಿ ಸನಾದಿ, ತಮಟೆಗಳು ವೃತ್ತಿಗಳು ಸಾಂಸ್ಕೃತಿಕ ಅನನ್ಯತೆಯಾಗಿ ಉಳಿದುಕೊಂಡಿವೆ. ಈ ವಾದ್ಯಗಳ ಮೂಲಕ ಜಾತಿಗಳನ್ನು ಸೂಚಿಸಲಾಗುತ್ತದೆ. ಸಮಾಜದಲ್ಲಿ ಈ ವೃತ್ತಿ ಮಾಡುವವರನ್ನು ಮೇಲ್ಜಾತಿಯವರ ಸಾಂಸ್ಕೃತಿಕ ಕಾರ್ಯಗಳಿಗೆ ಬಳಸಿಕೊಳ್ಳುತ್ತಾರೆ. ಈ ವೃತ್ತಿಗಳನ್ನು ಮಾಡದಿದ್ದರೆ ಕೆಲವು ಸಂದರ್ಭಗಳಲ್ಲಿ ಸಾಂಸ್ಕೃತಿಕ ಕಾರ್ಯಗಳು ನಡೆಯುವುದಿಲ್ಲ. ಹಾಗಾಗಿ ಮೇಲ್ಜಾತಿಯವರ ಸಾಂಸ್ಕೃತಿಕ ಆಚರಣೆಗಳಿಗೆ ಈ ವೃತ್ತಿಯಲ್ಲಿ ತೊಡಗಿರುವವರನ್ನು ಬಳಸಿಕೊಳ್ಳುತ್ತಾರೆ. ಆದರೂ ಆ ವೃತ್ತಿಯನ್ನು ಮಾಡುವವರನ್ನು ಅಸ್ಪೃಶ್ಯರೆಂದು ಸಮಾಜದಲ್ಲಿ ಅವಮಾನಕ್ಕೆ ಒಳಪಡಿಸುವ ಸಂದರ್ಭಗಳು ಇವೆ.

ಜಾಗತೀಕರಣ ಸಂದರ್ಭದಲ್ಲಿ ಇಂತಹ ವಾದ್ಯಗಳನ್ನು ಬಳಸಿಕೊಂಡು ದೊಡ್ಡ ದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಕಂಡುಬುರುತ್ತದೆ. ಇಂದು ಜಾಗತಿಕ ಮಟ್ಟದಲ್ಲಿ ಈ ವಾದ್ಯಗಳಿಗೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಆದರೆ ಹಳ್ಳಿಗಳಲ್ಲಿ ಈ ವಾದ್ಯಗಳು ಜಾತಿಸೂಚಕಗಳಾಗಿ ಕೆಲಸ ಮಾಡುವುದನ್ನು ನಾವು ಕಾಣಬಹುದು. ಇದೇ ವೃತ್ತಿಯನ್ನು ಬಂಡವಾಳಶಾಹಿಗಳು ತಮ್ಮ ವ್ಯಾಪಾರಕ್ಕೆ ಬಳಸಿಕೊಂಡಿವೆ. ಅದು ಜಾತಿಸೂಚಕವಾಗಿ ಕಂಡುಬರುವುದಿಲ್ಲ. ಈ ಸೂಕ್ಷ್ಮತೆಗಳ ರಾಜಕಾರಣವನ್ನು ಅರ್ಥಮಾಡಿಕೊಳ್ಳಬೇಕಿದೆ.

ಇಂದು ಈ ವಾದ್ಯಗಳ ವ್ಯಾಪ್ತಿಯ ಸ್ವರೂಪ ಬದಲಾಗುತ್ತಿದೆ. ಇವು ಒಂದು ಸಮುದಾಯದ ಕೇಂದ್ರವಾಗಿ ಇವತ್ತು ಉಳಿದುಕೊಂಡಿಲ್ಲ. ಬೇರೆ ಬೇರೆ ಸಮುದಾಯಗಳು ಸಂಗೀತದ ಭಾಗವಾಗಿ

ಇವುಗಳನ್ನು ಕಲಿಯುತ್ತಿದ್ದಾರೆ. ಇಲ್ಲಿ ಜಾತಿಸೂಚಕವಾಗಿ, ಸಾಮಾಜಿಕ ಅವಮಾನಕ್ಕೆ ಒಳಗಾಗುವುದಿಲ್ಲ. ಅದೇ ಒಂದು ಸಮುದಾಯ ತನ್ನ ಸಂಸ್ಕೃತಿಯ ಭಾಗವಾಗಿ ಬಳಸಿದಾಗ ಸಮುದಾಯದ ಅನನ್ಯತೆ, ಅಸ್ಮಿತೆ ಎಂದು ಬಳಸಿದಾಗ ಸಮಾಜದಲ್ಲಿ ಅವರ ಸಾಮಾಜಿಕ ಸ್ಥಾನಮಾನ ಕಾಣುತ್ತದೆ. ಸಮಾಜದಲ್ಲಿ ಅವರನ್ನು ನೋಡುವ ದೃಷ್ಟಿಕೋನವೇ ಬೇರೆಯಾಗುತ್ತದೆ.

ಈ ರೀತಿಯಾಗಿ ಉಡುಪು, ವಸ್ತುಗಳು, ಸಾಂಸ್ಕೃತಿಕ ಆಚರಣೆಗಳಲ್ಲಿ ಬಳಸುವ ಸಂಕೇತಗಳ ಮೂಲಕ ಕೆಳಜಾತಿ ಪಾತ್ರಗಳ ಸಾಮಾಜಿಕ, ಸಾಂಸ್ಕೃತಿಕ ಚಹರೆಗಳನ್ನು ಕಂಡುಕೊಳ್ಳಲಾಗಿದೆ.

೬.೨.೨. ಸಂಕೇತ ಭಾಷೆ: ಮೇಲ್ಜಾತಿ ಪಾತ್ರಗಳು

ಸಂಕೇತಗಳು ಸಮಾಜದಲ್ಲಿ ವ್ಯಕ್ತಿಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಸೂಚಿಸುತ್ತಿರುತ್ತವೆ. ಅವರು ಬಳಸುವ ವಸ್ತುಗಳು, ಧರಿಸುವ ಉಡುಗೆ-ತೊಡುಗೆಗಳು, ಆಚರಿಸುವ ಸಂಪ್ರದಾಯಿಕ ಸಂಕೇತಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಮಗಳನ್ನು ಸೂಚಿಸುತ್ತವೆ. ಮೇಲೆ ಸಂಕೇತ ಭಾಷೆಯಲ್ಲಿ ಕೆಳಜಾತಿ ಪಾತ್ರಗಳ ಸಾಮಾಜಿಕ ಚಹರೆಯನ್ನು ಚರ್ಚಿಸಲಾಗಿದೆ. ಇಲ್ಲಿ ಮೇಲ್ಜಾತಿ ಪಾತ್ರಗಳ ಸಾಮಾಜಿಕ ಚಹರೆಗಳು ಸಂಕೇತ ಭಾಷೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಚರ್ಚಿಸಲಾಗಿದೆ. ಅವರು ಧರಿಸುವ ಉಡುಗೆ-ತೊಡುಗೆಗಳು, ಬಳಸುವ ವಸ್ತುಗಳು ಸಾಮಾಜಿಕ ಸ್ಥಾನಮಾನ ಮತ್ತು ಜಾತಿಯ ಸ್ಥಾನಮಾನವನ್ನು ತಿಳಿಸುತ್ತವೆ. ಈ ರೀತಿಯ ಸಂಕೇತಗಳನ್ನು ಕೆಲವು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಚರ್ಚಿಸಲಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರಗಳ ಸಂಕೇತ ಭಾಷೆಗೆ ಸಂಬಂಧಿಸಿದಂತೆ ಉದಾಹರಣೆಯನ್ನು ನೋಡಬಹುದು. "ಕೊಲ್ಲೂರು ದೇವಸ್ಥಾನಕ್ಕೆ ಪೂಜಾರಿಯಾಗಿ ಕನ್ನಡ ಜಿಲ್ಲೆಯಿಂದ ಬಂದಾತನು ಕೆಲವು ವರ್ಷಗಳಲ್ಲಿಯೇ ನಾಡಿನಲ್ಲಿ ದೊಡ್ಡ ಜಮೀನ್ದಾರನಾಗಿಯೂ ಶ್ರೀಮಂತನೂ ಎಂದು ಹೆಸರು ಪಡೆಯಲು ಹೇಗೆ ಸಾಧ್ಯವಾಗುತ್ತಿತ್ತು? ತೊಟ್ಟ ಜನಿವಾರ, ಉಟ್ಟ ಪಾಣಿಪಂಚೆ ಬಹುಶಃ ಕೈಲೊಂದು ಪಂಚಪಾತ್ರೆ ಇಷ್ಟೆ ಆಸ್ತಿಯಾಗಿ ಬಂದಿದ್ದ ಬಡ ಹಾರುವರು ಈಗ ದೊಡ್ಡ ಚೌಕಿ ಮನೆಯ ಯಜಮಾನನಾಗಿ ದರ್ಬಾರು ನಡೆಸಲು ಹೇಗೆ ಸಾಧ್ಯವಾಗುತ್ತಿತ್ತು?"(ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೧೮೭).

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಉಟ್ಟ ಉಡುಗೆ, ತೊಟ್ಟ ತೊಡುಗೆಗಳನ್ನು ನೋಡಿದರೆ ಒಂದು ಮೇಲ್ಜಾತಿ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂದು ತಿಳಿಯುತ್ತದೆ. ಜನಿವಾರ, ಪಾಣಿಪಂಚೆ, ಪಂಚಪಾತ್ರೆ ಈ ವಸ್ತುಗಳು ಬ್ರಾಹ್ಮಣ ಸಮುದಾಯದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಸಾಂಪ್ರದಾಯಿಕ ಪದ್ಧತಿಯ ಭಾಗವಾಗಿ ಜನಿವಾರ, ಪಂಚಪಾತ್ರೆಗಳನ್ನು ಈ ಸಮುದಾಯದಲ್ಲಿ

ಬಳಸಲಾಗುತ್ತದೆ. ಇವು ಕೂಡ ಜಾತಿಸೂಚಕವಾಗಿ ಕೆಲಸಮಾಡುತ್ತದೆ. ಕೆಳಜಾತಿ ವ್ಯಕ್ತಿಗಳಲ್ಲಿ ಜನಿವಾರದ ಬಳಕೆ ಕಂಡುಬರುವುದಿಲ್ಲ. ಜನಿವಾರ ಒಂದು ಸಮುದಾಯದ ಸಾಂಸ್ಕೃತಿಕ, ಸಾಂಪ್ರದಾಯಿಕ ಅನನ್ಯತೆಯಾಗಿ ಕೆಲಸಮಾಡುತ್ತದೆ ಎಂದು ಹೇಳಬಹುದು.

ಇದೇ ಕಾದಂಬರಿಯಲ್ಲಿ ಉಡುಪಿಗೆ ಸಂಬಂಧಿಸಿದ ಸಂಕೇತಭಾಷೆಯನ್ನು ಉದಾಹರಣೆಯಾಗಿ ನೋಡಬಹುದು. ಉಡುಪನ್ನು ನೋಡಿದಾಗ ಇವರು ಇಂತಹ ಜಾತಿಯವರು ಎಂದು ಹೇಳಬಹುದು. ಉಡುಪು ಕೂಡ ಜಾತಿಸೂಚಕವಾಗಿರುವುದನ್ನು ಗಮನಿಸಬಹುದು.

"ತನ್ನ ತಾಯಿ ಮುಂತಾದವರ ಗೊಬ್ಬೆ ಸೆರಗಿನ ಮಲೆನಾಡಿನ ಉಡುಗೆಯನ್ನೇ ನೋಡಿ ಅಭ್ಯಾಸವಾಗಿದ್ದ ತಿಮ್ಮುಗೆ ಹಾರುವರ ಹೆಂಗಸರ ಉಡುಗೆಯ ರೀತಿ ವಿನೋದಕರವಾಗಿತ್ತು. ಅದರಲ್ಲಿಯೂ ಕಚ್ಚೆ ಹಾಕಿದಂತೆ ಸೀರೆ ಉಟ್ಟಿದ್ದವರನ್ನು ನೋಡಿ ಅವನಿಗೆ ನಗೆ ತಡೆಯಲಾಗಲಿಲ್ಲ; "ಏನೋ ಕಾಡಣ್ಣಯ್ಯ ಗಂಡಸರ ಹಾಂಗೆ ಕಚ್ಚೆ ಹಾಕಿದ್ದಾರಲ್ಲೋ ಥೂ!" ಎಂದು ಪಿಸುಗುಟ್ಟಿದನು. "ಅದೊಂದು ತರದ ಬಿರಾಂಬರ ಉಡಿಗೆ ಕಣೋ!" ಎಂದು ವಿವರಿಸಿದನು. ಕಾಡು ತಿಮ್ಮುಗೆ ಉಡಿಗೆ ತೊಡಿಗೆಯಲ್ಲಾಗಲಿ, ರೂಪದಲ್ಲಾಗಲಿ, ಬಣ್ಣದಲ್ಲಾಗಲಿ ತನ್ನ ಹಳೆಮನೆ ಅತ್ತೆಮ್ಮ ಬೆಟ್ಟಳ್ಳಿ ಅತ್ತೆಮ್ಮ ಮುಂತಾದವರ ಮುಂದೆ ಯಾವ 'ಹಾರ್ತಿ'ಯೂ ಚೆಂದ ಕಾಣಿಸಲಿಲ್ಲ. (ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ, ೪೨೯).

ಈ ಮೇಲಿನ ಉದಾಹರಣೆಯಲ್ಲಿ ಉಡುಗೆಯೂ ಸಹ ಒಂದು ಸಮುದಾಯ ಮತ್ತು ಸಂಪ್ರದಾಯವನ್ನು ಸೂಚಿಸುತ್ತದೆ ಎಂದು ಹೇಳಬಹುದು. ಉಡುಗೆ ತೊಟ್ಟಿರುವ ಶೈಲಿಯಲ್ಲಿ ಬೇರೆ ಸಮುದಾಯದ ಮಹಿಳೆಯರಿಗಿಂತ ಈ ಬ್ರಾಹ್ಮಣ ಮಹಿಳೆಯರ ಶೈಲಿ ಭಿನ್ನವಾಗಿದೆ. ಈ ಸೀರೆ ಉಟ್ಟವರ ಶೈಲಿ ಬ್ರಾಹ್ಮಣ ಸಮುದಾಯ ಮಹಿಳೆಯ ಉಡುಪಿನ ಶೈಲಿ ಎಂದು ಹೇಳಬಹುದು. ಈ ಉಡುಪು ಕೂಡ ಸಾಮಾಜಿಕ ಚಹರೆಯನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಯು.ಆರ್.ಅನಂತಮೂರ್ತಿ ಅವರ 'ಭಾರತೀಪುರ' ಕಾದಂಬರಿಯಲ್ಲಿ ಮೇಲ್ಜಾತಿ ಪಾತ್ರಗಳ ಸಂಕೇತಭಾಷೆಗೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೋಡಬಹುದು.

"ಸೀತರಾಮಯ್ಯ ನೋಡಲು ಭರ್ಜರಿ ಮನುಷ್ಯ. ಕಿವಿಯಲ್ಲಿ ವಜ್ರದ ಒಂಟಿ; ಬೆನ್ನಿನ ಮೇಲೆ ಇಳಿಬಿಟ್ಟ ಅರ್ಧ ನೆರೆತ ತುಂಬು ಜುಟ್ಟು; ಕುತ್ತಿಗೆಯಲ್ಲಿ ಬಂಗಾರದಲ್ಲಿ ಕಟ್ಟಿದ ರುದ್ರಾಕ್ಷಿ, ಹಣೆಯಲ್ಲಿ ಮಂಜುನಾಥನ ಸ್ಪೆಶಲ್ ಪ್ರಸಾದವಾದ ಕಸ್ತೂರಿ ಬೆರೆಸಿದ ಕುಂಕುಮ' (ಅನಂತಮೂರ್ತಿ. ಯು.ಆರ್, ಭಾರತೀಪುರ, ಪುಟ–೧೯೦)

ಈ ಮೇಲಿನ ಉದಾಹರಣೆಯನ್ನು ಗಮನಿಸಿದರೆ ಮೈಮೇಲೆ ಇರುವ ಉಡುಗೆ–ತೊಡುಗೆಗಳನ್ನು ನೋಡಿದರೆ ಮೇಲ್ಜಾತಿಯ ವ್ಯಕ್ತಿ ಎಂದು ಗುರುತಿಸಬಹುದು. ಸೀತರಾಮಯ್ಯ

ಎಂಬ ಹೆಸರೇ ಅವರು ಮೇಲ್ಜಾತಿ ವ್ಯಕ್ತಿ ಎಂದು ತಿಳಿಸುತ್ತದೆ. ಸಂಕೇತಗಳು ಸಹ ಜಾತಿ ಸೂಚಕಗಳಾಗಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಕಿವಿಗಳಲ್ಲಿ ವಜ್ರದ ಒಂಟಿ, ಜುಟ್ಟು, ರುದ್ರಾಕ್ಷಿ ಈ ಎಲ್ಲ ಸಂಕೇತಗಳು ಮೇಲ್ಜಾತಿ ಸಂಕೇತಗಳಾಗಿವೆ ಎಂದು ಹೇಳಬಹುದು. ಮೈಸೂರು ಭಾಗದಲ್ಲಿ ಕೆಳಜಾತಿ ವ್ಯಕ್ತಿಗಳಲ್ಲೂ ಸಹ ತಲೆಯಲ್ಲಿ ಜುಟ್ಟು ಕಂಡುಬರುತ್ತದೆ. ಉದಾಹರಣೆಗೆ ಕಾವೇರಿ ಚಲನಚಿತ್ರದಲ್ಲಿ ಚಿಕ್ಕನರಸ, ದೊಡ್ಡನರಸ ಮತ್ತು ಮುನಿಯನ ಮಾದರಿ ಚಲನಚಿತ್ರದಲ್ಲಿ ಕೆಳಜಾತಿಯ ಮುನಿಯನಿಗೆ ಜುಟ್ಟು ಇರುವುದನ್ನು ಕಾಣಬಹುದು. ಈ ರೀತಿ ಜುಟ್ಟು ಬಿಟ್ಟ ಮಾತ್ರಕ್ಕೆ ಮೇಲ್ಜಾತಿ ಪಾತ್ರಗಳ ಅಂತಸ್ತಿಗೆ ಇವರು ಸಮನಾಗಿರುವುದಿಲ್ಲ. ಇದರಿಂದ ಕೆಳಜಾತಿ ಪಾತ್ರಗಳ ಸಾಮಾಜಿಕ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಗಳು ಕಂಡುಬರುವುದಿಲ್ಲ. ಮೇಲ್ಜಾತಿ ವ್ಯಕ್ತಿಗಳಿಗೆ ಮಾತ್ರ ಈ ರೀತಿಯ ಸಂಕೇತಗಳಿಂದ ಗೌರವ, ಉನ್ನತ ಸ್ಥಾನಗಳನ್ನು ಸಿಗುವುದು ಕಾಣಬಹುದು. ಉಡುಪು, ಆಭರಣ, ಆಚರಣೆ ಭಾಗವಾಗಿ ಬಳಸಲಾಗುವ ವಸ್ತುಗಳು, ಹೆಸರುಗಳು ಇನ್ನು ಮುಂತಾದ ಸಂಕೇತಗಳು ಜಾತಿ ಸೂಚಕಗಳಾಗಿ ಕೆಲಸ ಮಾಡುತ್ತವೆ ವ್ಯಕ್ತಿ ಮತ್ತು ಸಮುದಾಯಗಳ ಈ ಸಂಕೇತಗಳ ಮೂಲಕ ಸಾಮಾಜಿಕ ಚಹರೆಗಳನ್ನು ಕಂಡುಕೊಳ್ಳಲಾಗಿದೆ.

ದತ್ತರಾಜ್ ಚಿ. ನಿರ್ದೇಶನದ 'ಕಾಮನಬಿಲ್ಲು' ಚಲನಚಿತ್ರದಲ್ಲಿ ಮೇಲ್ಜಾತಿ ವ್ಯಕ್ತಿಯ ಉಡುಗೆ-ತೊಡುಗೆಯ ಮೂಲಕ ಸಾಮಾಜಿಕ ಚಹರೆಯನ್ನು ಗುರುತಿಸುವ ಉದಾಹರಣೆಯನ್ನು ನೋಡಬಹುದು. ಈ ಚಿತ್ರದ ನಾಯಕನಾದ ಸೂರ್ಯನಾರಾಯಣರಾವ್ ಅವರ ತಂದೆಯ ಮೈಮೇಲೆ ಬಿಳಿ ಪಂಚೆ, ಬಳಿ ಉಡುಪು, ವಿಭೂತಿ, ಜನಿವಾರ, ಜುಟ್ಟು ಈ ರೀತಿಯ ಸಂಕೇತಗಳು ಕಂಡುಬರುತ್ತವೆ"(ಚಲನಚಿತ್ರ: ಕಾಮನಬಿಲ್ಲು).

ಈ ಮೇಲಿನ ಉದಾಹರಣೆಯಲ್ಲಿ ಮೇಲ್ಜಾತಿ ವ್ಯಕ್ತಿಯ ಮೈಮೇಲೆ ಬಿಳಿಪಂಚೆ, ಬಿಳಿವಸ್ತ್ರ, ವಿಭೂತಿ, ಜನಿವಾರ ಉಡುಗೆ-ತೊಡುಗೆಗಳು ಕಂಡುಬರುವುದರಿಂದ ಆ ವ್ಯಕ್ತಿಯ ಸಾಮಾಜಿಕ ಚಹರೆಯನ್ನು ಗುರುತಿಸಬಹುದಾಗಿದೆ. ಜನಿವಾರ, ವಿಭೂತಿ ಜಾತಿ ಸೂಚಕಗಳಾಗಿ ಕಾಣಿಸಿಕೊಳ್ಳುತ್ತವೆ. ಜುಟ್ಟು ಮೇಲ್ಜಾತಿ ಕೇರಿಯ ವ್ಯಕ್ತಿಯಲ್ಲಿ ಕಂಡುಬರುವುದಿಲ್ಲ ಎಂದು ಹೇಳಬಹುದು. ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿ ತಲೆಯಹಿಂದೆ ಜುಟ್ಟು ಕಂಡುಬರುವುದು ವಿರಳ ಎಂದು ಹೇಳಬಹುದು. ಈ ರೀತಿಯ ಸಂಕೇತಗಳಿಂದ ಆಯಾ ಸಮುದಾಯದ ಸಾಮಾಜಿಕ ಚಹರೆಗಳನ್ನು ಗುರುತಿಸಬಹುದು.

ಸಿದ್ದಲಿಂಗಯ್ಯ ನಿರ್ದೇಶನದ 'ಹೇಮಾವತಿ' ಚಲನಚಿತ್ರದಲ್ಲಿ ಸಂಕೇತ ಭಾಷೆಗೆ ಸಂಬಂಧಿಸಿದ ಉದಾಹರಣೆಯನ್ನು ನೋಡಬಹುದು.

"ಬ್ರಾಹ್ಮಣರು, ಲಿಂಗಾಯತರ ಬಾಹ್ಯ ಸಂಕೇತಗಳು ಅವರ ಜಾತಿಗಳನ್ನು ಸೂಚಿಸುತ್ತವೆ. ಬ್ರಾಹ್ಮಣ ವ್ಯಕ್ತಿಗಳು ನಾಮಗಳನ್ನು ಹಣೆಗೆ, ಎದೆಗೆ ಹಾಕಿಕೊಂಡಿದ್ದರೆ, ಜನಿವಾರವನ್ನು ಹಾಕಿಕೊಂಡಿದ್ದರೆ, ಶುಭ್ರವಾದ ಬಟ್ಟೆಗಳನ್ನು ತೊಟ್ಟಿದ್ದಾರೆ. ಲಿಂಗಾಯತ ವ್ಯಕ್ತಿಗಳು ಹಣೆ, ಮೈ ಕೈಗಳಿಗೆಲ್ಲ ವಿಭೂತಿ ಬಳಿದುಕೊಂಡಿದ್ದಾರೆ, ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿಕೊಂಡಿದ್ದಾರೆ"(ಚಲನಚಿತ್ರ: ಹೇಮಾವತಿ)

ಈ ಮೇಲಿನ ಉದಾಹರಣೆಯಲ್ಲಿ ಬ್ರಾಹ್ಮಣ ವ್ಯಕ್ತಿಗಳು ಹಣೆ ಮೇಲೆ ನಾಮ ಹಾಕಿಕೊಂಡಿದ್ದರೆ, ಲಿಂಗಾಯತರು ಹಣೆಯಮೇಲೆ ವಿಭೂತಿಯನ್ನು ಹಾಕಿಕೊಂಡಿರುತ್ತಾರೆ. ಬ್ರಾಹ್ಮಣರು ಜನಿವಾರ ಹಾಕಿಕೊಂಡರೆ, ಲಿಂಗಾಯತ ರುದ್ರಾಕ್ಷಿ ಮಾಲೆಯನ್ನು ಹಾಕಿಕೊಂಡಿರುತ್ತಾರೆ. ಈ ರೀತಿಯ ಬಾಹ್ಯ ಸಂಕೇತಳನ್ನು ಜಾತಿ ಸೂಚಕಗಳನ್ನಾಗಿ ಕೆಲಸಮಾಡುತ್ತವೆ ಎಂದು ಹೇಳಬಹುದು. ಈ ಸಂಕೇತಗಳಿಂದ ಸಹ ಆ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸಲಾಗುತ್ತದೆ ಎಂದು ಹೇಳಬಹುದು. ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಈ ಸಂಕೇತ ಭಾಷೆಯಲ್ಲಿ ಕಂಡುಬರುತ್ತವೆ.

ಬೇಂದ್ರೆ ದ.ರಾ. ಅವರ 'ಉದ್ಧಾರ' ಎಂಬ ನಾಟಕದಲ್ಲಿ ಮೇಲ್ಜಾತಿ ಪಾತ್ರಗಳ ಸಂಕೇತಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೋಡಬಹುದು. ಕೆಲವು ಬಾಹ್ಯ ಸಂಕೇತಗಳು ಅವರ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತವೆ. ಜಾತಿಸೂಚಕವಾಗಿಯೂ ಕೆಲಸ ಮಾಡುತ್ತಿರುತ್ತವೆ. ಲಿಂಗಾಯತ ಸಮುದಾಯದ ರುದ್ರಯ್ಯ, ಬ್ರಾಹ್ಮಣ ವ್ಯಕ್ತಿ ವಿಘ್ನೇಶ್ವರ ಶಾಸ್ತ್ರಿಗೆ ಹೇಳಿರುವ ಮಾತು ಹೀಗಿದೆ.

"ನಿಮ್ಮದು ಜನಿವಾರ, ನಮ್ಮದು ಶಿವದಾರ; ನಿಮ್ಮದು ಭಸ್ಮ, ನಮ್ಮದು ವಿಭೂತಿ, ನಿಮ್ಮದು ಈಶ್ವರ, ನಮ್ಮದು ಲಿಂಗ, ನಿಮ್ಮದು ಓಂನಮಃ ಶಿವಾಯ, ನಮ್ಮದು ಶಿವಾಯ ನಮಃ ಓಂ, ನಮ್ಮ ನಿಮ್ಮ ಯಂತ್ರ-ಮಂತ್ರ ಎಲ್ಲಾ ಒಂದೇ ಐತಿ! ಹೀಗಿದ್ದೂ ಒಬ್ಬರ್ನ ಕಂಡ್ರೋಬ್ಬರು ಗುರ್ರ್ ಅಂತ ಯಾಕ ಅಂತಿವೋ ಏನೋ! ಇದರ ಒಳಗುಟ್ಟು ತಿಳಿದ್ಹಾಂಗ ಆಗ್ಯೆತಿ"(ಬೇಂದ್ರೆ. ದ.ರಾ, ಉದ್ದಾರ, ಪುಟ-೪೩)

ಈ ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಬ್ರಾಹ್ಮಣ ಮತ್ತು ಲಿಂಗಾಯತ ಜಾತಿಯ ಆಚರಣೆಯ ಬಾಹ್ಯ ಸಂಕೇತಗಳು ಜಾತಿಯನ್ನು ಸೂಚಿಸುತ್ತವೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಬ್ರಾಹ್ಮಣರು ಜನಿವಾರ ಹಾಕಿದರೆ, ಲಿಂಗಾಯತರು ಶಿವದಾರ ಹಾಕುತ್ತಾರೆ. ಬ್ರಾಹ್ಮಣರು ಭಸ್ಮ ಧರಿಸಿದರೆ, ಲಿಂಗಾಯತರು ವಿಭೂತಿ ಧರಿಸುತ್ತಾರೆ. ಈ ರೀತಿಯ ಸಂಕೇತಗಳು ಜಾತಿ ಸೂಚಕಗಳಾಗಿ ಗುರುತಿಸಲ್ಪಡುತ್ತವೆ ಎಂದು ಹೇಳಬಹುದು. ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಈ ಸಂಕೇತಗಳು ಪ್ರತಿನಿಧಿಸುತ್ತವೆ. ಇವುಗಳ ಮೂಲಕ ಸಾಮಾಜಿಕ ಚಹರೆಯನ್ನು ಗುರುತಿಸಬಹುದು.

ಈ ಮೇಲಿನ ಎಲ್ಲಾ ಉದಾಹರಣೆಗಳನ್ನು ಗಮನಿಸಿದಾಗ ಮೇಲ್ಜಾತಿ ವ್ಯಕ್ತಿಗಳ ಮೈಮೇಲೆ ಇರುವ ಸಂಕೇತಗಳು ಮತ್ತು ಅವರು ಬಳಸುವ ವಸ್ತುಗಳು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಪ್ರತಿನಿಧಿಸುತ್ತಿರುತ್ತವೆ. ಅವರ ಜಾತಿ ಸೂಚಕಗಳಾಗಿ ಆ ಸಂಕೇತಗಳು ಕೆಲಸಮಾಡುತ್ತಿರುತ್ತವೆ. ಬಾಹ್ಯ ಸಂಕೇತಗಳ ಮೂಲಕ ಮೇಲ್ಜಾತಿ ವ್ಯಕ್ತಿಗಳ ಸಾಮಾಜಿಕ, ಸಾಂಸ್ಕೃತಿಕ, ಸಮಾಜೋ-ಆರ್ಥಿಕ ನೆಲೆಗಳನ್ನು ಕಂಡುಕೊಳ್ಳಬಹುದು. ಜನಿವಾರ, ಶಿವದಾರ, ವಿಭೂತಿ, ನಾಮ, ಪಂಚಪಾತ್ರೆ ಈ ಎಲ್ಲಾ ಸಂಕೇತಗಳು ಮೇಲ್ಜಾತಿ ವ್ಯಕ್ತಿಗಳ ಸಂಕೇತಗಳಾಗಿ ಕಾಣಿಸುತ್ತವೆ. ಕೆಳಜಾತಿ ವ್ಯಕ್ತಿಗಳನ್ನು ಸೂಚಿಸುವುದಿಲ್ಲ. ಆದ್ದರಿಂದ ಜಾತಿ ಸೂಚಕವಾಗಿ ಈ ಸಂಕೇತಗಳು ಕೆಲಸಮಾಡುತ್ತವೆ ಎಂದು ಹೇಳಬಹುದು. ಈ ರೀತಿಯಾಗಿ ಸಂಕೇತ ಭಾಷೆಯಲ್ಲಿ ಮೇಲ್ಜಾತಿ ಪಾತ್ರಗಳ ಸಾಮಾಜಿಕ ಚಹರೆಗಳನ್ನು ಕಂಡುಕೊಳ್ಳಬಹುದು.

ಅಶಾಬ್ದಿಕ ಸಂವಹನ, ಆಂಗಿಕ ಮತ್ತು ಸಂಕೇತ ಭಾಷೆ ಎಂಬ ಎರಡು ಘಟಕಗಳನ್ನು ಒಳಗೊಂಡಿದೆ. ಈ ಘಟಕಗಳ ವ್ಯಾಪ್ತಿಯು ಅಧ್ಯಯನಗಳಿಗೆ ತಕ್ಕಂತೆ ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಇಲ್ಲಿ ಆಂಗಿಕ ಮತ್ತು ಸಂಕೇತ ಭಾಷೆಯಲ್ಲಿ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ನೋಡಲಾಗಿದೆ. ಈ ಅಶಾಬ್ದಿಕ ಸಂವಹನದ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳು ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಆಂಗಿಕ ಭಾಷಾಭಿನಯ ಮತ್ತು ಸಂಕೇತ ಭಾಷೆಯ ಮೂಲಕ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸ ಅಥವಾ ಸಾಮಾಜಿಕ ಚಹರೆಗಳನ್ನು ಕಂಡುಕೊಳ್ಳಲಾಗಿದೆ. ಈ ರೀತಿಯ ಸಾಮಾಜಿಕ ಚಹರೆಗಳು ಕಂಡುಬರಲು ನಿರ್ದಿಷ್ಟವಾಗಿ ಒಂದು ಕಾರಣವನ್ನು ಹೇಳಲು ಆಗುವುದಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಈ ಸಾಮಾಜಿಕ ಚಹರೆಗಳಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಹಾಗೆಯೇ ಆಧುನೀಕರಣ ಆಧುನಿಕ ಶಿಕ್ಷಣ, ವೃತ್ತಿಗಳಿಂದಾಗಿಯೂ ಕೆಳಜಾತಿ ಮತ್ತು ಮೇಲ್ಜಾತಿ ಪಾತ್ರಗಳಲ್ಲಿ ಸಾಮಾಜಿಕ ಚಹರೆಯಲ್ಲಿ ಚಲನೆ ಮತ್ತು ಪಲ್ಲಟಗಳು ಉಂಟಾಗಿರಬಹುದು ಎಂದು ಹೇಳಬಹುದು.

ಭಾಷೆ ಹೇಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದೋ ಹಾಗೆಯೇ ಆಂಗಿಕ ಮತ್ತು ಸಂಕೇತ ಭಾಷೆಯೂ ಸಹ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ಕನ್ನಡದಲ್ಲಿ ಆಂಗಿಕ ಮತ್ತು ಸಂಕೇತ ಭಾಷೆಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿರುವುದು ವಿರಳ. ಈ ಅಶಾಬ್ದಿಕ ಸಂವಹನ ಕ್ಷೇತ್ರದಲ್ಲಿ ಕನ್ನಡದ ಮಟ್ಟಿಗೆ ಅಧ್ಯಯನ ನಡೆಸುವುದಕ್ಕೆ ಅವಕಾಶವಿದೆ ಎಂದು ಹೇಳಬಹುದು.

* * *

ಕೋಷ್ಟಕ–೧

ಆಂಗಿಕ ಚಲನೆಗೆ ಸಂಬಂಧಿಸಿದ ಕೋಷ್ಟಕ ಪಟ್ಟಿ

ಕ್ರಸಂ	ಕೆಳಜಾತಿ ಪಾತ್ರಗಳು	ಮೇಲ್ಜಾತಿ ಪಾತ್ರಗಳು
೧.	ಸೊಂಟ, ಬೆನ್ನುಭಾಗಿ ನಿಲ್ಲುವುದು	ಜೋರಾದ ಧ್ವನಿಯಲ್ಲಿ ಗದರುವುದು
೨.	ದೂರಸರಿದು ನಿಲ್ಲುವುದು	ಹುಬ್ಬು ಗಂಟಿಕ್ಕಿಕ್ಕೊಳ್ಳುವುದು
೩.	ನಿವೇದಿಸುವ, ಬೇಡುವ ಧ್ವನಿ	ಕೈಬೆರಳನ್ನು ತೋರಿಸುವುದು
೪.	ದೇಹವನ್ನು ಕುಬ್ಜಗೊಳಿಸುವ ಶೈಲಿ	ಎದೆಯುಬ್ಬಿಸಿ ಗಾಂಭೀರ್ಯದಿಂದ ನಡೆಯುವುದು
೫.	ತಲೆ ಕೆರೆದುಕೊಳ್ಳುವುದು	ಕಣ್ಣು ಕೆಂಪಾಗಿ ಮಾಡುವುದು
೬	ಅಡ್ಡಬಿದ್ದು ನಮಸ್ಕರಿಸುವುದು	ಆಕ್ರಮಣ ಶೈಲಿ
೭	ಅಂಜಿಕೆ ಮತ್ತು ಭಯ	ಆದೇಶಿಸುವ ಶೈಲಿ
೮.	ಹೆಗಲಮೇಲಿನ ತೆಗೆದು ಕೈಯಲ್ಲಿಹಿಡಿಯುವುದು	ಕೈಕಾಲುಗಳ ಚಲನೆಯ ಶೈಲಿ
೯	ಮೇಲೆ ಕಟ್ಟಿದ ಪಂಚೆ ಕೆಳಗೆ ಬಿಡುವುದು	ದುರುಗುಟ್ಟಿ ನೋಡುವುದು
೧೦.	ಹೇಳಬೇಕಾದುದ್ದನ್ನು ಹೇಳದೇ ತೊದಲುವುದು	————

ಕೋಷ್ಟಕ–೨

.ಸಂಕೇತ ಭಾಷೆಗೆ ಸಂಬಂಧಿಸಿದ ಕೋಷ್ಟಕ ಪಟ್ಟಿ

ಕ್ರ.ಸಂ	ಸಂಕೇತ	ಕೆಳಜಾತಿ ಪಾತ್ರ	ಮೇಲ್ಜಾತಿ ಪಾತ್ರ
೧.	ಉಡುಪು	ಲಂಗೋಟಿ/ಚಡ್ಡಿ	ಅಂಗಿ, ಪಂಚೆ
೨.	ಮೀಸೆ	ದೊಡ್ಡದಾಗಿ ಬಿಡುವುದಕ್ಕೆ ನಿರ್ಬಂಧ	ಪ್ರತಿಷ್ಠೆ
೩.	ಜುಟ್ಟು	ಅಗೌರವ	ಪ್ರತಿಷ್ಠೆ, ಅಸ್ಮಿತೆ
೪.	ಜನಿವಾರ	ನಿರ್ಬಂಧ	ಜಾತಿ ಸಂಕೇತ
೫.	ನಾಮ	ನಿರ್ಬಂಧ	ಜಾತಿ ಸಂಕೇತ
೬.	ವಿಭೂತಿ	ನಿರ್ಬಂಧ	ಜಾತಿ ಸಂಕೇತ

ಕೋಷ್ಟಕ–೩

.ಜಾತಿ ಸೂಚಕ ಸಂಕೇತದ ಕೋಷ್ಟಕ ಪಟ್ಟಿ

ಕ್ರ.ಸಂ	ಸಂಕೇತ	ಕೆಳಜಾತಿ ಹಿರಿಯ ಪಾತ್ರಗಳು	ಕೆಳಜಾತಿ ಶಿಕ್ಷಣ ಪಡೆದ ಪಾತ್ರಗಳು
೧.	ಶಹನಾಯಿ	ಅಸ್ಮಿತೆ, ವೃತ್ತಿ, ಸಂಸ್ಕೃತಿ	ಅವಮಾನ, ವಿರೋಧ, ಅಗೌರವ
೨.	ತಮಟೆ	ವೃತ್ತಿ, ಬದುಕು, ಸಂಸ್ಕೃತಿ	ಅವಮಾನ, ವಿರೋಧ, ಅಗೌರವ
೩.	ಚಪ್ಪಲಿ	ವೃತ್ತಿ, ಬದುಕು	ಸಾಮಾಜಿಕ ಅಪಮಾನ

ಅಧ್ಯಾಯ: ಏಳು

ಸಮಾರೋಪ

ಅಧ್ಯಾಯ: ಏಳು

ಸಮಾರೋಪ

ಸಾಮಾಜಿಕ ವ್ಯವಸ್ಥೆಯ ಪ್ರತಿಫಲನ ಭಾಷೆಯಲ್ಲಿ ಕಂಡುಬರುತ್ತದೆ. ಸಾಮಾಜಿಕ ಶ್ರೇಣಿಯ ಸ್ತರವಿನ್ಯಾಸಗಳನ್ನು ನಿರ್ವಹಿಸುವ ಕೆಲಸಕ್ಕೂ, ಕಾಪಿಟ್ಟುಕೊಳ್ಳುವುದಕ್ಕೂ ಭಾಷೆಯನ್ನು ಸಾಧನವಾಗಿ ಬಳಸಲಾಗುತ್ತದೆ. ಕಲಾಭಿವ್ಯಕ್ತಿಯು ಸೃಜನಶೀಲವಾದರೂ ಸಾಮಾಜಿಕ ವಾಸ್ತವಗಳೇ ಈ ಅಭಿವ್ಯಕ್ತಿಗೆ ಮೂಲ ಆಕರವಾಗಿರುತ್ತದೆ. ಬರವಣಿಗೆ ಮತ್ತು ದೃಶ್ಯರೂಪದ ಅಭಿವ್ಯಕ್ತಿಗಳಲ್ಲಿ ನಿರೂಪಕರು/ ರಚನೆಕಾರರು ಆಶಯದ ನೆಲೆಗಳಲ್ಲಿ ಸಾಮಾಜಿಕ ವಾಸ್ತವಕ್ಕೆ ಭಿನ್ನವಾಗಿ 'ಕೃತಿ'ಯನ್ನು ರೂಪಿಸಿದ ನಿರೂಪಣೆಯ ಸಂದರ್ಭದಲ್ಲಿ ಸಾಮಾಜಿಕ ವಾಸ್ತವಗಳನ್ನು ಬಿಟ್ಟರೆ ಅಸಹಜವಾಗುತ್ತದೆ.

ಈ ಅಧ್ಯಯನದಲ್ಲಿ ದಲಿತ ಪಾತ್ರಗಳನ್ನು ಕ್ರೋಢೀಕರಿಸಿ ಅಭಿವ್ಯಕ್ತಿಯ ವಿವಿಧ ಮಜಲುಗಳನ್ನು ಗ್ರಹಿಸಲಾಗಿದೆ. ಆಕರಗಳನ್ನು ನೋಡುವಾಗ ಸಮಾಜ ಶಾಸ್ತ್ರೀಯ ವಿವರಣೆಯ ಹಿನ್ನೆಲೆಯಿಂದ ಪಾತ್ರಗಳನ್ನು ಗಮನಿಸಲಾಗಿದೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿನ ಶ್ರೇಣೀಕೃತ ಜಾತಿವ್ಯವಸ್ಥೆ ಭಾಷಿಕ ನೆಲೆಗಳಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ ಎಂಬುದನ್ನು ಸಂವಹನ ಮತ್ತು ಅಭಿವ್ಯಕ್ತಿಯ ಬೇರೆ ಬೇರೆ ನೆಲೆಗಳಿಂದ ಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಪ್ರಧಾನವಾಗಿ ಮಾತಿನಲ್ಲಿ ವ್ಯಕ್ತವಾಗುವ ಪಾತ್ರಗಳ 'ಗುರುತು'ಗಳು ಪಾತ್ರಗಳ ಸಾಮಾಜಿಕ ಸಂಬಂಧ, ಅಂತರದ ನೆಲೆ ಚಹರೆಗಳನ್ನು ನಿರ್ದಿಷ್ಟ ಪಡಿಸುವ ಭಾಷಿಕ ಸಂವಹನ ಘಟಕಗಳನ್ನು ಪರಿಶೀಲಿಸಲಾಗಿದೆ. ಇದರಲ್ಲಿ ವ್ಯಕ್ತಿನಾಮಗಳು, ಜಾತಿವಾಚಕಗಳು, ಸಂಬೋಧನಾ ರೂಪಗಳು, ಉಲ್ಲೇಖಿಸಲ್ಪಡುವ ರೂಪಗಳು ನಿರೂಪಣೆಗೆ ರಚನಾಕಾರರ ಆಯ್ಕೆಗಳು–ಪಾತ್ರಗಳ ನಡುವಿನ ಸಂಭಾಷಣೆಯ ರಚನೆಗಳು, ಬೈಗಳು, ಗಾದೆಗಳಂತಹ ಸಂಕಥನಗಳನ್ನು ಪರಿಶೀಲಿಸಲಾಗಿದೆ. ಹಾಗೆಯೇ ನಿರೂಪಕರು ನಿರೂಪಣೆಯಲ್ಲಿ ಅಂದರೆ ಬರವಣಿಗೆಯಲ್ಲಿ ಆಯ್ಕೆ ಮಾಡಿಕೊಂಡಿರುವ ಭಾಷಿಕ ರಚನೆಯ ಸ್ವರೂಪವನ್ನು ಗಮನಿಸಿದೆ. ಪಾತ್ರಗಳ ಅಭಿವ್ಯಕ್ತಿಯ ವ್ಯಾಪ್ತಿಗೆ ಬಣ್ಣ, ಆಭರಣ, ಉಡುಪು, ಆಂಗಿಕ ಭಾಷೆ, ಅಶಾಬ್ದಿಕ ಸಂವಹನ, ಮೌನದ ಚಲನೆಗಳು ಸಾಮಾಜಿಕ ನೆಲೆಗಳನ್ನು ಅವರ ಸ್ತರ ವಿಭಜನೆಯ ಮಾನವ ಸಂಬಂಧದ ನೆಲೆಗಳನ್ನು ಹತ್ತಿರ ದೂರದ ಸ್ಪೃಶ್ಯ ಮತ್ತು ಅಸ್ಪೃಶ್ಯತೆಯ, ಅಧೀನತೆ, ಪ್ರಾಬಲ್ಯತೆ, ಅವಲಂಬನೆಯ ನೆಲೆಗಳನ್ನು ಆಧರಿಸಿ ಹೇಗೆ ರಚನೆಗೊಂಡಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಬರವಣಿಗೆಯ ಮುಕ್ತತೆ, ಸಾಧ್ಯತೆ ಮತ್ತು ದೃಶ್ಯ ಮಾಧ್ಯಮದ ಮಿತಿಗಳನ್ನು, ತೊಡಕುಗಳನ್ನು ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಸಾಮಾಜಿಕ ವಾಸ್ತವ ಮತ್ತು ಕೃತಿ ರಚನೆಯ, ರಚನೆಕಾರರ ಆಶಯಗಳ ಮೂಲಕ ಕೃತಿ ಮತ್ತು ಸಾಮಾಜಿಕ ವಾಸ್ತವದ ನಡುವಿನ ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಸಮಾಜದಲ್ಲಿರುವ ಸಾಮಾಜಿಕ ಸ್ತರವಿನ್ಯಾಸಗಳು ಕಲಾಭಿವ್ಯಕ್ತಿಯಲ್ಲೂ ಸಹ ಕಂಡುಬರುತ್ತವೆ. ಜಾತಿಯಾಧಾರಿತ ಅಸಮಾನತೆಗಳು ಭಾಷೆಯಲ್ಲಿ ಅಭಿವ್ಯಕ್ತಗೊಂಡಿವೆ. ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿನ ದಲಿತ ಪಾತ್ರಗಳ ಮೂಲಕ ಈ ಅಸಮಾನತೆಗಳು ಭಾಷಿಕವಾಗಿ ಮೂಡಿಬಂದಿರುವ ಬಗೆಯನ್ನು ಕಂಡುಕೊಳ್ಳಲಾಗಿದೆ.

ಶ್ರೇಣಿಕರಣ ಸಮಾಜದಲ್ಲಿ ಜಾತಿಯು ಬಹಳ ಮುಖ್ಯವಾಗಿ ಕಾರ್ಯನಿರ್ವಹಿಸುತ್ತಿರುತ್ತದೆ. ಮೇಲ್ಜಾತಿಯ ವ್ಯಕ್ತಿಗಳು ಕೆಳಜಾತಿಯ ವ್ಯಕ್ತಿಗಳನ್ನು ಆಳುವಂತೆ ಭಾಷೆಯಲ್ಲಿಯೂ ಸಹ ತನ್ನ ಯಜಮಾನಿಕೆಯನ್ನು ಸಾಧಿಸುತ್ತಿರುತ್ತಾರೆ. ಕೆಳಜಾತಿ ವ್ಯಕ್ತಿಗಳ ಭಾಷೆಯಲ್ಲಿ ಆಳ್ವಿಕೆ ಕಂಡುಬರುವುದಿಲ್ಲ. ವಿನಂತಿ ಹೇಳಲೋ ಬೇಡವೋ ಎಂಬ ದ್ವಂದ್ವ, ಅಂಜಿಕೆ ಮುಂತಾದ ಅಂಶಗಳು ಅವರ ಭಾಷೆಯಲ್ಲಿ ಕಂಡುಬರುತ್ತವೆ. ಈ ರೀತಿಯ ಅಂಜಿಕೆ, ದ್ವಂದ್ವ, ವಿನಂತಿ ಧ್ವನಿಗಳು ಅವರ ಒಡೆಯರ ಅಥವಾ ಧಣಿಗಳ ಹತ್ತಿರ ಸಂಭಾಷಣೆ ಸಂದರ್ಭದಲ್ಲಿ ಕಾಣಲಾಗುತ್ತದೆ. ಮನೆಯಲ್ಲಿ ಇವರ ಯಜಮಾನಿಕತ್ವ ಇರುತ್ತದೆ.

ಭಾಷೆಯೂ ದಲಿತ ಪಾತ್ರಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಚಹರೆಗಳನ್ನು ಸೂಚಿಸುತ್ತಿರುತ್ತದೆ. ದಲಿತ ಪಾತ್ರಗಳು ಆಡುವ ಭಾಷೆ, ಉಡುವ ಉಡುಪು, ತಿನ್ನುವ ಆಹಾರ, ಆಚರಿಸುವ ಆಚರಣೆ, ಬಳಸುವ ವಸ್ತುಗಳು, ಹೆಸರುಗಳು ಇವರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಚಹರೆಗಳನ್ನು ಪ್ರತಿನಿಧಿಸುತಿರುತ್ತದೆ. ಮೇಲ್ಜಾತಿಯವರು ಕೆಳಜಾತಿ ಪಾತ್ರಗಳಿಗೆ ಬಳಸುವ ಗಾದೆ ಮತ್ತು ಬೈಗುಳಗಳಲ್ಲಿಯೂ ಸಹ ಸಾಮಾಜಿಕ ಸ್ತರವಿನ್ಯಾಸವನ್ನು ಕಾಣಬಹುದು.

ಜಾತಿಯ ಕಾರಣಕ್ಕಾಗಿ ಆರ್ಥಿಕ, ಸಾಮಾಜಿಕವಾಗಿ ಅನೇಕ ಅವಮಾನ ಮತ್ತು ಶೋಷಣೆಯನ್ನು ದಲಿತ ಪಾತ್ರಗಳು ಅನುಭವಿಸಲಾಗಿದೆ. ಜಾತಿಯ ಕಾರಣಕ್ಕಾಗಿ ಭೂಮಿಯಿಂದ ಗೌರವಸ್ಥಾನಮಾನಗಳಿಂದ ವಂಚಿತರಾಗಿರುತ್ತಾರೆ. ಇವೆಲ್ಲವೂ ಸಮಾಜೋ-ಸಾಂಸ್ಕೃತಿಕ ರಾಜಕಾರಣವನ್ನು ಸೂಚಿಸುತ್ತದೆ.

ಬೈಗುಳ ಗಾದೆಗಳ ಮೂಲಕ ದಲಿತ ಪಾತ್ರಗಳ ಸಾಮಾಜಿಕ ಚಹರೆ ಹೊರಹೊಮ್ಮಿದೆ, ಮೇಲ್ಜಾತಿ ಪಾತ್ರಗಳ ಮನೋಧೋರಣೆಯೂ ಸಹ ಹೊರಹೊಮ್ಮುತ್ತಿರುತ್ತದೆ. ಹೊಲೆಮುಂಡೇದೆ ಗುಲಾಮ ಬಡ್ಡಿಮಗ, ಕತ್ತೆಬಡವ, ಮಾದಿಗ ಸೂಳೆಮಗ, ಬಡವನ ಕೋಪ ದವಡೆಗೆ ಮೂಲ ಬಡವ ನೀನು ಮಡಿಗಿದಂಗೆ ಇರು, ದನಾ ತಿನ್ನುವನಿಗೆ ಗೊಬ್ಬರರದ ಆಣೆ ಎಂಬ ಬೈಗುಳ

ಮತ್ತು ಗಾದೆಗಳು ಕೆಳಜಾತಿಯವರು ಬಳಸುವ ಬೈಗುಳ, ಗಾದೆಗಳಲ್ಲಿ ಮೇಲ್ಜಾತಿಯವರು ಕೆಳಜಾತಿಯವರಿಗೆ ಬಳಸುವ ಸಂಕಥನಗಳಾಗಿವೆ. ಈ ರೀತಿಯ ಬೈಗುಳ ಮತ್ತು ಗಾದೆಗಳು ಸೃಷ್ಟಿಯಾಗಲು ಅಥವಾ ಬಳಸಲು ಕಾರಣಗಳೇನು? ಎಂದು ಗಮನಿಸಿದರೆ ಮೇಲ್ಜಾತಿಯವರ ಸಾಮಾಜಿಕ ಮತ್ತು ಆರ್ಥಿಕ ಪ್ರಾಬಲ್ಯತೆಗಳು ಕಾರಣಗಳಾಗಿರುತ್ತವೆ. ಅವರ ಆಲೋಚನೆಗೆ ತಕ್ಕ ಬೈಗುಳ, ಗಾದೆಗಳನ್ನು ಬಳಸುತ್ತಾರೆ. ಹೊಲೆಮುಂಡೇದೆ, ದರಿದ್ರಮುಂಡೆದೆ, ಪ್ರಾರಬ್ಧವೆ ರಂಡೆಮುಂಡೆ ಎಂಬಂತಹ ಬೈಗುಳಗಳನ್ನು ಬ್ರಾಹ್ಮಣ ಸಮುದಾಯದ ಪಾತ್ರಗಳು ಹೆಚ್ಚಿನ ಪ್ರಮಾಣದಲ್ಲಿ ಬಳಸಿರುವುದು ಕಂಡುಬರುತ್ತದೆ.

ಕತ್ತೆಬಡವ, ಗುಲಾಮಬಡ್ಡಿಮಗ ಎಂಬ ಬೈಗುಳಗಳನ್ನು ಒಕ್ಕಲಿಗ ಸಮುದಾಯದವರು ಜಮೀನ್ದಾರರು ಹೆಚ್ಚಿನ ಪ್ರಮಾಣದಲ್ಲಿ ಬಳಸಿದ್ದಾರೆ. ಇಲ್ಲಿ ಸಾಮಾಜಿಕ ಮತ್ತು ಆರ್ಥಿಕತೆಯ ಆಧಾರದ ಮೇಲೆ ಬಳಸಿರುವುದು ಕಂಡುಬರುತ್ತದೆ. ಬಡವನ ಕೋಪ ದವಡೆಗೆ ಮೂಲ, ಬಡವ ನೀನು ಮಡಗಿದಂಗೆ ಇರು ಎಂಬ ಗಾದೆಗಳು ಉಳಿಗಮಾನ್ಯ ಪದ್ಧತಿಯ ಮನಸ್ಥಿತಿಯನ್ನು ಸೂಚಿಸುತ್ತದೆ. ಸಮಾಜದ ಶ್ರೇಣೀಕರಣ ವ್ಯವಸ್ಥೆಯನ್ನು ಪೋಷಿಸುವಂತ ಮನಸ್ಥಿತಿಯಾಗಿದೆ. ಸಮಾಜದ ಯಥಾಸ್ಥಿತಿಯನ್ನು ಬಯಸುತ್ತಿರುವ ಮನೋಧೋರಣೆಯಾಗಿದೆ. ಕೆಳಜಾತಿಯವರು ತಮಗೆ ತಾವೆ ಈ ಗಾದೆಗಳನ್ನು ಹೇಳಿಕೊಳ್ಳುವಂತೆ ಮಾಡಲಾಗಿದೆ. ದಲಿತ ಪಾತ್ರಗಳನ್ನು ಶೋಷಣೆ, ಅವಮಾನದ ವಿರುದ್ಧ ಪ್ರತಿಭಟಿಸುವಂತೆ, ಅಸಹಾಯಕರನ್ನಾಗಿ ಮಾಡಿ ಅವರಿಂದಲೇ ಈ ರೀತಿಯ ಗಾದೆಗಳನ್ನು ಬಳಸುವಂತೆ ಒಂದು ಆಲೋಚನ ಕ್ರಮವನ್ನು ರೂಢಿಸಲಾಗಿದೆ. ಈ ರಿತಿಯಾಗಿ ದಲಿತ ಪಾತ್ರಗಳು ಅಭಿವ್ಯಕ್ತಗೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

ಸಮಾಜ, ಸಂಸ್ಕೃತಿ ಮತ್ತು ಜೀವನ ವಿಧಾನಗಳು ಸಮಾಜದ ಹಲವು ಸ್ತರಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ಭಾಷೆಯಲ್ಲೂ ಸಹ ವ್ಯಕ್ತಿ ಸಮುದಾಯ ಸಂಸ್ಕೃತಿಗಳ ಸಾಮಾಜಿಕ ಚಹರೆಗಳು ಗೋಚರಿಸುತಿರುತ್ತವೆ. ಸಮಾಜದಲ್ಲಿರುವ ವಾಸ್ತವದ ಚಹರೆಗಳು ಕಲಾಭಿವ್ಯಕ್ತಿಯಲ್ಲೂ ಕಂಡುಬಂದಿರುವುದನ್ನು ಕಂಡುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಕೆಲವು ಆಯ್ದ ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿನ ದಲಿತ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸವನ್ನು ಸಂಬೋಧನೆ, ಉಲ್ಲೇಖ, ವ್ಯಕ್ತಿನಾಮ, ಬೈಗುಳ, ಗಾದೆ, ಅಶಾಬ್ದಿಕ ಸಂವಹನಗಳಾದ ಆಂಗಿಕ ಮತ್ತು ಸಂಕೇತಗಳ ಮೂಲಕ ಕಂಡುಕೊಳ್ಳಲಾಗಿದೆ.

ಭಾರತೀಯ ಸಮಾಜದಲ್ಲಿ ಸಂಬೋಧನೆಯಲ್ಲಿ ಮತ್ತು ಉಲ್ಲೇಖದಲ್ಲಿ ಕೆಳಜಾತಿ ವ್ಯಕ್ತಿಗಳು ಮೇಲ್ಜಾತಿಯವರಿಂದ ಅಗೌರವಕ್ಕೆ ಒಳಗಾಗುತ್ತಿರುತ್ತಾರೆ. ಶತಶತಮಾನಗಳಿಂದಲೂ ಕೆಳಜಾತಿ ವ್ಯಕ್ತಿಗಳನ್ನು ಗೌರವ ಸಂಬೋಧನೆಯಿಂದ ದೂರ ಉಳಿಸಿರುವುದನ್ನು ಸಾಮಾಜಿಕ ವಾಸ್ತವದಲ್ಲಿ

ಕಾಣಬಹುದು. ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಎರಡು ನೆಲೆಯಲ್ಲಿಯೂ ಕೆಳಜಾತಿ ವ್ಯಕ್ತಿಗಳಿಗೆ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸದೇ ಸಂಬೋಧಿಸಿರುವುದನ್ನು ಮತ್ತು ಉಲ್ಲೇಖಿಸಿರುವುದನ್ನು ಕಂಡುಕೊಳ್ಳಲಾಗಿದೆ.

ಸಮಾಜದ ವಾಸ್ತವದ ಸಂಗತಿಗಳನ್ನೇ ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮಗಳು ಪ್ರತಿಬಿಂಬಿಸಿವೆ. ಕಾದಂಬರಿ, ಚಲನಚಿತ್ರ, ಕಥೆ ಮತ್ತು ನಾಟಕಗಳಲ್ಲಿ ದಲಿತ ಪಾತ್ರಗಳು ಸಂಬೋಧನೆ ಮತ್ತು ಉಲ್ಲೇಖಗಳಲ್ಲಿ ಅಭಿವ್ಯಕ್ತಿಗೊಂಡಿರುವ ಬಗೆಯನ್ನು ಚರ್ಚಿಸಲಾಗಿದೆ. ದಲಿತ ಪಾತ್ರಗಳು ಮೇಲ್ಜಾತಿ ಪಾತ್ರಗಳನ್ನು ಗೌರವಸೂಚಕ ಮತ್ತು ಬಹುವಚನಗಳಿಂದಲೇ ಸಂಬೋಧಿಸಿರುವುದು ಮತ್ತು ಉಲ್ಲೇಖಿಸಿರುವುದನ್ನು ಕಂಡುಕೊಳ್ಳಲಾಗಿದೆ. ಆದರೆ ಮೇಲ್ಜಾತಿ ಪಾತ್ರಗಳು ಸಾಮಾನ್ಯವಾಗಿ ದಲಿತ ಪಾತ್ರಗಳನ್ನು ಗೌರವಸೂಚಕದಿಂದ ಸಂಬೋಧಿಸಿರುವುದು ಮತ್ತು ಉಲ್ಲೇಖಿಸಿರುವುದು ಕಂಡುಬರುವುದಿಲ್ಲ. ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳಲ್ಲಿ ಮಾತ್ರ ಈ ಬದಲಾವಣೆ ಕಂಡುಬಂದಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕೆಲವೊಮ್ಮೆ ದಲಿತ ಪಾತ್ರಗಳನ್ನು ಸಂಬೋಧಿಸುವಾಗ ಅಣ್ಣ, ಅಕ್ಕ, ಅಮ್ಮ, ಅಪ್ಪ, ಅವ್ವ, ಅಯ್ಯ ಎಂಬ ವಾರ್ಗಿಕಗಳನ್ನು ಹೆಸರಿನ ಮುಂದೆ ಸೇರಿಸಿ ಸಂಬೋಧಿಸಿದ್ದರೂ ಸಾಮಾನ್ಯ ಸಂಬೋಧನೆಯಾಗಿ ಬಳಕೆಯಾಗಿವೆಯೇ ಹೊರತು ಗೌರವ ಸಂಬೋಧನೆಯಾಗಿ ಬಳಕೆಯಾಗಿಲ್ಲ. ಸೃಜನಶೀಲ ಬರವಣಿಗೆ ಮತ್ತು ಚಲನಚಿತ್ರಗಳಲ್ಲಿ ಮೂಡಿಬಂದಿರುವ ದಲಿತ ಪಾತ್ರಗಳ ಹೆಸರು ವಾರ್ಗಿಕಗಳಿಲ್ಲದ ಹೆಸರುಗಳೇ ಹೆಚ್ಚಾಗಿರುವುದು ಕಂಡುಬರುತ್ತದೆ. ದಲಿತ ಪಾತ್ರಗಳ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ, ಸಂಬೋಧಿಸಿ ಮತ್ತು ಉಲ್ಲೇಖಿಸಿರುವುದೇ ಹೆಚ್ಚಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಮೇಲ್ಜಾತಿ ಪಾತ್ರಗಳನ್ನು ದಲಿತ ಪಾತ್ರಗಳು ಸಂಬೋಧಿಸುವಾಗ ಮತ್ತು ಉಲ್ಲೇಖಿಸುವಾಗ ಗೌರವಸೂಚಕ ಮತ್ತು ಬಹುವಚನಗಳನ್ನು ಬಳಸುತ್ತವೆ. ಒಡೆಯ, ಒಡತಿ, ಗೌಡ, ಗೌಡ್ತಿ, ಧಣಿ, ಸ್ವಾಮಿ, ಬಾಣಾರೆ, ದೆತ್ತೀ, ಬುದ್ಧಿ, ತಂದೆ, ಅಮ್ಮಾರೇ, ಅಯ್ಯಾರೇ, ದೇವ್ರೇ ಸಾಹುಕಾರ್ರೇ ಎಂಬಂತಹ ಗೌರವಸೂಚಕಗಳನ್ನು ಬಳಸಿ ಸಂಬೋಧಿಸುತ್ತಾರೆ. ಪರೋಕ್ಷ ನೆಲೆಯಲ್ಲಿಯೂ ಗೌರವಸೂಚಕ ಮತ್ತು ಬಹುವಚನದಿಂದಲೇ ಉಲ್ಲೇಖಿಸಿರುವುದನ್ನು ಕಂಡುಕೊಳ್ಳಲಾಗಿದೆ.

ಶಿಕ್ಷಣ ಪಡೆದ ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳನ್ನು ಗೌರವಸೂಚಕ ಮತ್ತು ಬಹುವಚನಗಳಿಂದ ಸಂಬೋಧಿಸಿರುವುದು ಮತ್ತು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಶಿಕ್ಷಣ ಪಡೆದ ಪ್ರಜ್ಞಾವಂತರಲ್ಲಿ ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆ ಅಲ್ಪಮಟ್ಟಿಗೆ ಈ ಅಧ್ಯಯನದಲ್ಲಿ ಬದಲಾಗಿರುವುದನ್ನು ಕಂಡುಕೊಳ್ಳಲಾಗಿದೆ. ಅಭಿವ್ಯಕ್ತಿಯ ಸಾಮಾಜಿಕ ಸ್ತರವಿನ್ಯಾಸದಲ್ಲಿ ಸಂಬೋಧನೆ ರೂಪಗಳು ಮತ್ತು ಉಲ್ಲೇಖಿಸಲ್ಪಟ್ಟ ರಚನೆಗಳು ಭಾಷಿಕವಾಗಿ ಭಿನ್ನತೆಯಿಂದ ಕೂಡಿರುವುದಕ್ಕೆ

ಕೆಲವು ಕಾರಣಗಳನ್ನು ಗುರುತಿಸಬಹುದು. ಅವುಗಳಲ್ಲಿ ಮುಖ್ಯವಾಗಿ ಜಾತಿ, ಲಿಂಗ, ವಯಸ್ಸು, ಶಿಕ್ಷಣ, ಪ್ರದೇಶ, ಆರ್ಥಿಕ ಯಜಮಾನಿಕೆ, ಅಧಿಕಾರ ಇವುಗಳು ಸಂಬೋಧನೆ ಮತ್ತು ಉಲ್ಲೇಖಗಳಲ್ಲಿ ಸಾಮಾಜಿಕ ಸ್ತರವಿನ್ಯಾಸಕ್ಕೆ ಮುಖ್ಯಕಾರಣವಾಗಿರುತ್ತವೆ. ಹಾಗೂ ಸಮಾಜದಲ್ಲಿ ರೂಪಿಸಲ್ಪಟ್ಟಿರುವ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳು ಕೂಡ ಯಾರು ಯಾರಿಗೆ ಹೇಗೆ ಸಂಬೋಧಿಸಬೇಕು ಮತ್ತು ಯಾರನ್ನು ಹೇಗೆ ಉಲ್ಲೇಖಿಸಬೇಕು ಎಂಬುದನ್ನು ನಿಯಂತ್ರಿಸುತ್ತಿರುತ್ತವೆ. ಉದಾಹರಣೆಗೆ ದೇವನೂರು ಮಹಾದೇವ ಅವರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಎಂಬ ಕಥೆಯಲ್ಲಿ ಕೆಳಜಾತಿ ವ್ಯಕ್ತಿಯ ಹೆಸರು 'ರಾಜ' ಎಂಬ ಹೆಸರನ್ನು, ರಾಜ ಎಂದು ಸಂಬೋಧಿಸದೇ 'ಗೀಜ' ಎಂದು ಸಂಬೋಧಿಸುವುದು ಮೇಲ್ಜಾತಿಯವರ ಮನೋಧೋರಣೆಯನ್ನು ಸೂಚಿಸುತ್ತದೆ. ಮೇಲ್ಜಾತಿಯವರು ಕೆಳಜಾತಿ ವ್ಯಕ್ತಿಗಳನ್ನು ಗೌರವದಿಂದ ಸಂಬೋಧಿಸಿದರೆ ಕೆಳಜಾತಿ ವ್ಯಕ್ತಿಗಳಿಗೆ ಒಳ್ಳೆಯದಾಗುವುದಿಲ್ಲ ಎಂಬಂತಹ ಮೌಢ್ಯತೆಯನ್ನು ಬಿತ್ತಿರುವ ಸಂಗತಿಗಳು ಕೂಡ ಕಂಡುಬರುತ್ತವೆ. ಈ ರೀತಿಯಾಗಿ ಸಮಾಜದಲ್ಲಿ ಸಂಬೋಧನೆ ಮತ್ತು ಉಲ್ಲೇಖಗಳು ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಕಾರ್ಯನಿರ್ವಹಿಸಿದ್ದನ್ನು ಕಂಡುಕೊಳ್ಳಲಾಗಿದೆ.

ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ದಲಿತ ಮತ್ತು ದಲಿತೇತರ ಪಾತ್ರಗಳ ಸಮುದಾಯಗಳು ಉಲ್ಲೇಖದ ಬಳಕೆ ನೆಲೆಯಲ್ಲಿ ಮೇಲ್ಜಾತಿ ಸಮುದಾಯದ ಹೆಸರು ವ್ಯಕ್ತಿನಾಮದೊಂದಿಗೆ ಅಥವಾ ಪ್ರತ್ಯೇಕವಾಗಿ ಉಲ್ಲೇಖ ಮಾಡುವಾಗಲೂ ಗೌರವಸೂಚಕ ಮತ್ತು ಪ್ರತಿಷ್ಠೆಯ ಭಾಗವಾಗಿ ಬಳಕೆಯಾಗುತ್ತಿದೆ. ಆದರೆ ಕೆಳಜಾತಿ ಸಮುದಾಯದ ಹೆಸರು ವ್ಯಕ್ತಿನಾಮದೊಂದಿಗೆ ಅಥವಾ ಪ್ರತ್ಯೇಕವಾಗಿ ಉಲ್ಲೇಖ ಮಾಡುವಾಗ ಅಗೌರವಸೂಚಕವಾಗಿ ಬಳಕೆಯಾಗಿ ಅವರ ಸಾಮಾಜಿಕತೆ ಇಳಿಮುಖಚಲನೆಯ ಪ್ರಕ್ರಿಯೆಯಾಗಿ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಗೌಡ, ಗೌಡ್ತಿ, ಹೆಗ್ಗಡೆ, ಹೆಗ್ಗಡತಿ ಎಂದು ಉಲ್ಲೇಖ ಮಾಡುವುದಕ್ಕೂ ಹೊಲೆಯ, ಮಾದಿಗ, ಹೊಲತಿ, ಮಾದಗಿತ್ತಿ ಎಂದು ಉಲ್ಲೇಖ ಮಾಡುವುದಕ್ಕೂ ಸಾಮಾಜಿಕ ಭಿನ್ನತೆ ಇರುವುದು ಕಂಡುಬರುತ್ತದೆ. ಗೌಡರು, ಗೌಡ್ತಮ್ಮ, ಹೆಗ್ಗಡೆರು, ಹೆಗ್ಗಡ್ತಮ್ಮ ಎಂದು ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ಬಳಕೆಯಾಗಿದೆ. ಆದರೆ ಹೊಲೆಯಪ್ಪ ಹೊಲೆಯಮ್ಮ, ಮಾದಿಗಪ್ಪ ಎಂದು ಉಲ್ಲೇಖ ಮಾಡಲು ಸಾಧ್ಯವಿಲ್ಲದಿರುವುದನ್ನು ಕಂಡುಕೊಳ್ಳಲಾಗಿದೆ.

ಸೃಜನಶೀಲ ಬರವಣಿಗೆ ಮತ್ತು ದೃಶ್ಯಮಾಧ್ಯಮದಲ್ಲಿ ಉಲ್ಲೇಖದ ಬಳಕೆಯ ನೆಲೆಗಳಲ್ಲಿ ಒಬ್ಬ ವ್ಯಕ್ತಿಗೆ ಬಳಕೆಯಾಗುವಂತಹ ಬಹುವಚನ ರೂಪಗಳು ಮತ್ತು ಜಾತಿಯ ಹೆಸರುಗಳು ಉಲ್ಲೇಖಗಳಲ್ಲಿ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಮಾದಿಗರ ಚೆನ್ನ, ಹೊಲೆಯರ ಗುತ್ತಿ ಎಂದು ಉಲ್ಲೇಖ ಮಾಡುವುದಕ್ಕೂ ಸುಬ್ಬಣ್ಣ ಹೆಗ್ಗಡೇರು, ಕಲ್ಲಯ್ಯ ಗೌಡರು ಎಂದು ಉಲ್ಲೇಖ ಮಾಡುವುದಕಕೂ ಸಾಮಾಜಿಕ ವ್ಯತ್ಯಾಸಗಳಿವೆ. ಈ ಎರಡು ಜಾತಿಸೂಚಕವಾಗಿಯೇ

ಬಳಕೆಯಾಗಿದ್ದರೂ ಇಬ್ಬರಿಗೂ ದೊರೆಯುವ ಸಾಮಾಜಿಕ ಸ್ಥಾನಮಾನ ಬೇರೆ ಬೇರೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

ನಿರೂಪಣೆಯಲ್ಲಿ ಉಲ್ಲೇಖ ಮಾಡುವುವಾಗ ಮೇಲ್ಜಾತಿ ಪಾತ್ರಗಳಿಗೆ ಅವರು ಎಂದು ಬಳಸುವುದು ಕೆಳಜಾತಿ ವ್ಯಕ್ತಿಗೆ ಹೆಸರಿಡಿದು ಅಥವಾ ಏಕವಚನದಲ್ಲಿ ಬಳಸಿರುವುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ

ಮೇಲ್ಜಾತಿ ಪಾತ್ರಗಳು : ಸಂಕಪ್ಪಯ್ಯ/ನ – ಸಂಕಪ್ಪಯ್ಯನವರು

ಸುಬ್ಬಣ್ಣ ಹೆಗ್ಗಡೆ – ಸುಬ್ಬಣ್ಣ ಹೆಗ್ಗಡೆರು

ದಾನಮ್ಮ ಹೆಗ್ಗಡತಿ/ಯ – ದಾನಮ್ಮ ಹೆಗ್ಗಡತಿಯವರು

ಕೆಳಜಾತಿ ಪಾತ್ರಗಳು : ಚೋಮ – ಚೋಮನ

ದುರ್ಗ – ದುರ್ಗನ

ಚಂದ್ರಿ – ಚಂದ್ರಿಯ

ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಮೇಲ್ಜಾತಿಯವರಿಗೆ ಬಳಕೆಯಾಗುವಂತಹ ಗೌರವಸೂಚಕ ಮತ್ತು ಬಹುವಚನಗಳು ಕೆಳಜಾತಿಯವರಾದ ಚೋಮಣ್ಣನವರು, ದುರ್ಗಪ್ಪನವರು, ಚಂದ್ರಮ್ಮನವರು ಇಂದು ಎಲ್ಲಿಯೂ ಸಹ ಉಲ್ಲೇಖದಲ್ಲಿ ಬಳಕೆಯಾಗಿಲ್ಲದಿರುವುದನ್ನು ಕಂಡುಕೊಳ್ಳಲಾಗಿದೆ.

ಕೆಳಜಾತಿ ವ್ಯಕ್ತಿಗಳ ಹೆಸರಿಗೆ ವಿಶೇಷವಾಗಿ ಜಾತಿಯನ್ನು ಸೇರಿಸಿ ಉಲ್ಲೇಖಿಸಿ ಗುರುತಿಸಲಾಗಿದೆ. ಜಾತಿಯಿಂದ ಇವರನ್ನು ಗುರುತಿಸಿದಾಗ ಇವರ ಸಾಮಾಜಿಕ ಸ್ಥಾನಮಾನ ಇಳಿಮುಖ ಚಲನೆಗೊಳ್ಳುತ್ತದೆ. ಆದರೆ ಮೇಲ್ಜಾತಿ ವ್ಯಕ್ತಿಗಳಿಗೆ ಜಾತಿವಾಚಕಗಳು ಸೇರಿ ಬಳಕೆಯಾದರೆ ವ್ಯಕ್ತಿ ಗೌರವವನ್ನು ಹೆಚ್ಚಿಸುವುದಕ್ಕಾಗಿ ಜಾತಿವಾರ್ಗಿಕಗಳು ಬಳಕೆಯಾಗುತ್ತವೆ. ಉದಾಹರಣೆಗೆ ಗೌಡ್ರೇ, ಹೆಗ್ಗಡೇರೆ ಇತ್ಯಾದಿ ಜಾತಿವಾರ್ಗಿಕಗಳು ಅವರ ಸಾಮಾಜಿಕ ಪ್ರತಿಷ್ಠೆಯನ್ನು ಸೂಚಿಸುತ್ತಿರುವುದು ಕಂಡುಬರುತ್ತದೆ.

ಸೃಜನಶೀಲ ಕೃತಿಗಳು ಮತ್ತು ಚಲನಚಿತ್ರಗಳಲ್ಲಿ ಸಂಬೋಧನಾ ಮತ್ತು ಉಲ್ಲೇಖದ ಬಳಕೆ ನೆಲೆಯ ಒಂದೇ ಸಮುದಾಯದ ವ್ಯಕ್ತಿಗಳಲ್ಲಿ ಸಮಾನ ಗೌರವ ಸ್ಥಾನಮಾನ ಇರುವುದನ್ನು ಕಂಡುಕೊಳ್ಳಲಾಗಿದೆ.

ಕೆಳಜಾತಿ ಪಾತ್ರಗಳಲ್ಲಿ ವಾರ್ಗಿಕಗಳಿಲ್ಲದ ಹೆಸರುಗಳು ಹೆಚ್ಚಾಗಿ ಕಂಡುಬರುತ್ತವೆ. ಅಪ್ಪ, ಅಮ್ಮ, ಅಕ್ಕ, ಅಣ್ಣ, ಅಯ್ಯ ಎಂಬ ವಾರ್ಗಿಕಗಳು ಹೆಸರಿನ ಜೊತೆಗೆ ಸೇರಿರುವ ವ್ಯಕ್ತಿನಾಮಗಳು ಇವೆ. ಕೆಳಜಾತಿ ಪಾತ್ರಗಳಲ್ಲಿ ಗೌಡ, ಶಾಸ್ತ್ರೀ, ಅಯ್ಯಂಗಾರ್, ಹೆಗ್ಗಡೆ, ಶೆಟ್ಟಿ ಎಂಬ ವೃತ್ತಿ/ ಜಾತಿಸೂಚಕ ವಾರ್ಗಿಕಗಳು ಹೆಸರಿನೊಂದಿಗೆ ಕಂಡುಬರುವುದಿಲ್ಲ.

ಕೆಲವು ವ್ಯಕ್ತಿನಾಮಗಳು ಕೆಳಜಾತಿ ಪಾತ್ರಗಳ ಹೆಸರುಗಳಂತೆ ಕಂಡುಬರುವ ಮೇಲ್ಜಾತಿ ಪಾತ್ರಗಳ ಹೆಸರುಗಳಿವೆ. ಉದಾಹರಣೆಗೆ ಗುಳ್ಳ, ಲಚ್ಚ, ದುರ್ಗಿ, ಮಾದ ಇವುಗಳಲ್ಲಿ ಕೆಲವು ಮುದ್ದು ನಾಮವಾಗಿ ಇನ್ನೂ ಕೆಲವು ವರ್ತನೆ ಮತ್ತು ಸ್ವಭಾವಕ್ಕೆ ಅನುಗುಣವಾಗಿ ರಚನೆಕಾರರು/ನಿರ್ದೇಶಕರು ಕಲಾಭಿವ್ಯಕ್ತಿಯಲ್ಲಿ ಬಳಕೆ ಮಾಡಿದ್ದಾರೆ. ಈ ರೀತಿಯಾಗಿ ಹೆಸರಿರುವುದರಿಂದ ಅವರ ಸಾಮಾಜಿಕ ಸ್ಥಾನಮಾನಕ್ಕೆ ಯಾವುದೇ ದಕ್ಕೆಯಾಗುವುದಿಲ್ಲ. ಆದರೆ ಕೆಳಜಾತಿ ಪಾತ್ರಗಳ ಸ್ಥಾನಮಾನ ಮಾತ್ರ ಇಳಿಮುಖಗೊಳ್ಳುವುದನ್ನು ಕಂಡುಕೊಳ್ಳಲಾಗಿದೆ.

ಮೇಲ್ಜಾತಿ ಮತ್ತು ಕೆಳಜಾತಿ ಪಾತ್ರಗಳ ಹೆಸರುಗಳು ಒಂದೇ ಆಗಿದ್ದರೂ ಅವುಗಳು ಬಳಕೆಯಾಗಿರುವ ಕ್ರಮ ಬೇರೆ ಬೇರೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಮೇಲ್ಜಾತಿ ಪಾತ್ರಗಳ ಹೆಸರುಗಳು ತಿಮ್ಮು, ರಾಮು ಎಂದು ಬಳಕೆಯಾದರೆ ಕೆಳಜಾತಿ ಪಾತ್ರಗಳ ಹೆಸರುಗಳು ತಿಮ್ಮ, ರಾಮ್ಯ ಎಂದು ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಸಾಕುಪ್ರಾಣಿಗಳಿಗೆ ಕೆಳಜಾತಿ ಪಾತ್ರಗಳ ಹೆಸರುಗಳನ್ನು ಇಡುವ ಮಾದರಿ ಕಂಡುಬರುತ್ತದೆ. ಆದರೆ ಎಲ್ಲಿಯೂ ಸಹ ಮೇಲ್ಜಾತಿ ಪಾತ್ರಗಳ ಹೆಸರುಗಳು ಸಾಕುಪ್ರಾಣಿಗಳಿಗೆ ಇಡುವ ಮಾದರಿ ಕಂಡುಬರುವುದಿಲ್ಲ. ಉದಾಹರಣೆಗೆ ಕರಿಯ, ಕಾಳ, ಕೆಂಚ, ಕೆಂಪ, ಬೀರ, ಹುಲಿಯ, ಎಂಬ ಮುಂತಾದ ಹೆಸರುಗಳು ನಾಯಿ, ಎತ್ತು, ಕುರಿ ಇತ್ಯಾದಿ ಸಾಕುಪ್ರಾಣಿಗಳಿಗೆ ಹೆಸರಿಟ್ಟಿರುವುದನ್ನು ಕಂಡುಕೊಳ್ಳಲಾಗಿದೆ.

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಹೆಸರುಗಳನ್ನು ಹೇಳಬಾರದು ಎಂಬ ನಿಷೇಧ, ನಿರ್ಬಂಧ ಮತ್ತು ನಂಬಿಕೆಯಿರುವುದು ಕಂಡುಬರುತ್ತದೆ.

ಸಾಮಾಜಿಕ ಒತ್ತಡ, ಜಾತಿಯ ಅವಮಾನಗಳು, ಆಧುನೀಕರಣ, ಮತಾಂತರ ಪ್ರಕ್ರಿಯೆ, ಪ್ರತಿಷ್ಠೆ, ಶಿಕ್ಷಣದ ಪ್ರಭಾವದಿಂದ ಕೆಳಜಾತಿ ಪಾತ್ರಗಳ ವ್ಯಕ್ತಿನಾಮಗಳಲ್ಲಿ ಚಲನೆ ಮತ್ತು ಪಲ್ಲಟಗೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

ಬೈಯಲ್ಪಡುವ ಮತ್ತು ಬೈಗುಳಕ್ಕೊಳಪಟ್ಟವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು ನಡವಳಿಕೆಯ ಕಟ್ಟುಪಾಡುಗಳನ್ನು ಜಾತಿ ಕೇಂದ್ರಿತ, ಲಿಂಗಕೇಂದ್ರಿತ, ವರ್ಗಕೇಂದ್ರಿತ ಬೈಗುಳಗಳ ಮೂಲಕ ತಿಳಿಯಲು ಪ್ರಯತ್ನಿಸಲಾಗಿದೆ.

ರಂಡೆ, ಮುಂಡೆ, ಶೂದ್ರ, ದರಿದ್ರ, ಪ್ರಾರಬ್ಧ ಎಂಬ ಪದಗಳನ್ನು ಬಳಸಿ ರಂಡೆಗಂಡ, ಮುಂಡೆಗಂಡ, ರಂಡಮುಂಡೆ, ಹೊಲೆಮುಂಡೆಮಗ ದರಿದ್ರಮುಂಡೆದೆ, ಪ್ರಾರಬ್ಧವೇ ಎಂಬಂತಹ ಬೈಗುಳಗಳನ್ನು ಕೆಳಜಾತಿ ಪಾತ್ರಗಳಿಗೆ ಬ್ರಾಹ್ಮಣ ಸಮುದಾಯದ ಪಾತ್ರಗಳು ಹೆಚ್ಚಾಗಿ ಬಳಸಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಜಮೀನ್ದಾರರು, ಗೌಡ ಸಮುದಾಯದ ಪಾತ್ರಗಳು ಕೆಳಜಾತಿ ಪಾತ್ರಗಳಿಗೆ ಸೂಳೆಮಗ, ಬೋಳಿಮಗ, ಗುಲಾಮ, ಬಡವ, ಬಡ್ಡಿಮಗ, ಹೊಲೆಸೂಳೆಮಗ, ಮಾದಿಗಸೂಳೆಮಗ ಎಂಬಂತಹ ಬೈಗುಳಗಳನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ.

ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ವಿರುದ್ಧ ಮಾತನಾಡುವ ಮತ್ತು ಪ್ರತಿಭಟಿಸುವ ಸಂದರ್ಭವೇ ವಿರಳ, ಮೇಲ್ಜಾತಿಯವರನ್ನು ಬೈಯ್ಯುವುದು ಇನ್ನೂ ವಿರಳ. ಪ್ರತ್ಯಕ್ಷವಾಗಿ ಬೈಯದೆ ಪರೋಕ್ಷ ಮತ್ತು ನೆವದಿಂದ ಬೈಯ್ಯುವ ಸಂದರ್ಭಗಳು ಹೆಚ್ಚಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಮೇಲ್ಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳಿಗೆ ಬೈಯ್ಯುವಾಗ ತಮ್ಮ ಸಮುದಾಯದ ಹೆಸರನ್ನು ಆರೋಪಿಸಿ ಬೈಗುಳಗಳಲ್ಲಿ ಬಳಸಿರುವುದು ಕಂಡುಬರುವುದಿಲ್ಲ. ತಮ್ಮ ಜಾತಿಗಿಂತ ಕೀಳೆಂದು ಭಾವಿಸಿದ ಸಮುದಾಯಗಳನ್ನು ಉಲ್ಲೇಖಿಸಿ ಬೈಯ್ಯುತ್ತಾರೆ. ಆಯಾ ಸಮುದಾಯದವರು ತಮ್ಮ ಸಮುದಾಯಗಳನ್ನು ಆರೋಪಿಸಿ ಬೈಯ್ಯುವುದಿಲ್ಲ. ತಮಗಿಂತ ಮೇಲು ಎಂದು ಭಾವಿಸಿರುವ ಜಾತಿಗಳನ್ನು ಸಹ ಆರೋಪಿಸಿ ಬೈಯ್ಯುವುದು ಸಾಧ್ಯವಿಲ್ಲದಿರುವುದನ್ನು ಕಂಡುಕೊಳ್ಳಲಾಗಿದೆ.

ಕೆಳಜಾತಿ ಮಹಿಳೆಯರು ತನ್ನ ಗಂಡನಿಗೆ ಬೈಯ್ಯುವಂತೆ ಮೇಲ್ಜಾತಿ ಮಹಿಳೆಯರು ತನ್ನ ಗಂಡನಿಗೆ ಬೈಯ್ಯುವುದು ವಿರಳ. ಈ ಪ್ರಕ್ರಿಯೆಯನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮೇಲ್ಜಾತಿ ವ್ಯಕ್ತಿಗಳು ಕೆಳಜಾತಿ ವ್ಯಕ್ತಿಗಳಿಗೆ ಬಳಸಿರುವ ಗಾದೆಗಳಲ್ಲಿ ಜಾತಿ, ಸಾಮಾಜಿಕತೆ, ವರ್ಗ, ಅಸ್ಪೃಶ್ಯತೆ, ಆರ್ಥಿಕ ಅಂಶಗಳು, ಪುರೋಹಿತಶಾಹಿ ಮನೋಧೋರಣೆ, ಉಳಿಗಮಾನ್ಯ ಪದ್ಧತಿಯ ಆಲೋಚನೆ ಗಾದೆಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

ಗಾದೆಗಳನ್ನು ಬಳಸುವವರು ಅವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ಆಲೋಚನೆಗಳು ಮನಸ್ಸಿನಲ್ಲಿ ಅಡಕಗೊಂಡಿರುತ್ತವೆ. ಈ ಹಿನ್ನೆಲೆಯಿಂದ ಗಾದೆಗಳನ್ನು ಬಳಕೆ ಮಾಡಿರುವುದು ಕಂಡುಬರುತ್ತದೆ.

ಬ್ರಾಹ್ಮಣ ಸಮುದಾಯದ ಪಾತ್ರಗಳು ಜಾತಿಗೆ ಸಂಬಂಧಿಸಿ ಗಾದೆಗಳನ್ನು ಹೆಚ್ಚಾಗಿ ಬಳಸಿದರೆ ಜಮೀನ್ದಾರ, ಒಕ್ಕಲಿಗ, ಗೌಡ ಇನ್ನಿತರ ಮೇಲ್ಜಾತಿ ಸಮುದಾಯದವರು ವರ್ಗ, ಅಂತಸ್ತು, ಆರ್ಥಿಕತೆಗೆ ಸಂಬಂಧಿಸಿದ ಗಾದೆಗಳನ್ನು ಹೆಚ್ಚಾಗಿ ಬಳಸಿರುವುದನ್ನು ಕಂಡುಕೊಳ್ಳಲಾಗಿದೆ.

ಕನ್ನಡದಲ್ಲಿ ಅಶಾಬ್ದಿಕ ಸಂವಹನ ಕುರಿತು ಅಧ್ಯಯನಗಳು ನಡೆದಿರುವುದು ವಿರಳ. ಆಂಗಿಕ ಭಾಷೆಯು ವ್ಯಕ್ತಿಗಳ ಸಾಮಾಜಿಕತೆಯನ್ನು ಸೂಚಿಸುತ್ತಿರುತ್ತದೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ವಯಸ್ಸು, ಶಿಕ್ಷಣ ಇನ್ನೂ ಮುಂತಾದ ಅಂಶಗಳ ಮೂಲಕ ಅಶಾಬ್ದಿಕ ಸಂವಹನದಲ್ಲಿ ಪಾತ್ರಗಳ ಸಾಮಾಜಿಕ ಸ್ತರವಿನ್ಯಾಸವನ್ನು ಕಂಡುಕೊಳ್ಳಲಾಗಿದೆ.

ಮೇಲ್ಜಾತಿ ಪಾತ್ರಗಳ ಮುಂದೆ ಕೆಳಜಾತಿ ಪಾತ್ರಗಳು ಕೈಕಟ್ಟಿಕೊಂಡು, ತಲೆಕೆರೆದುಕೊಳ್ಳುತ್ತಾ, ಕೈಮುಗಿದು, ಸೊಂಟಬಗ್ಗಿಸಿ, ಹೆಗಲ ಮೇಲಿರುವ ಟವಲನ್ನು ತೆಗೆದು ಕೈಯಲ್ಲಿ ಹಿಡಿದು, ಮೇಲೆ ಕಟ್ಟಿದ ಲುಂಗಿಯನ್ನು ಕೆಳಗೆ ಇಳಿ ಬಿಟ್ಟು, ಧ್ವನಿಯನ್ನು ಸಣ್ಣಗೆ ಮಾಡಿ, ದೂರ ಸರಿದು ನಿಂತು, ಸಂಕೋಚ ಮತ್ತು ಭಯದಿಂದ ಮಾತನಾಡುವ ಸಂದರ್ಭಗಳು ಹೆಚ್ಚಾಗಿರುವುದನ್ನು ಕಂಡುಕೊಳ್ಳಲಾಗಿದೆ. ಮೇಲ್ಜಾತಿ ಪಾತ್ರಗಳು ಕೆಳಜಾತಿ ಪಾತ್ರಗಳ ಜೊತೆ ಗಡಸು ಧ್ವನಿಯಲ್ಲಿ

ಅಧಿಕಾರವಾಣಿಯಿಂದ ಕೈತೋರಿಸಿ, ಕಣ್ಣನ್ನು ಕೆಂಪಾಗಿಮಾಡಿ, ಕೋಪದಿಂದ ಹುಬ್ಬೇರಿಸುತ್ತ ಆದೇಶಿಸುವ ರೀತಿಯಲ್ಲಿ ಮೇಲ್ಜಾತಿ ಪಾತ್ರಗಳ ಆಂಗಿಕ ಅಭಿವ್ಯಕ್ತಿಯಿರುವುದನ್ನು ಕಂಡುಕೊಳ್ಳಲಾಗಿದೆ.

ಆಂಗಿಕಭಾಷೆ ಏಕಮುಖವಾಗಿರುವುದಿಲ್ಲ. ಮೇಲ್ಜಾತಿ ಪಾತ್ರಗಳು ಸಹ ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲುವ, ತಲೆಕೆರೆದುಕೊಳ್ಳುವ, ದೇಹವನ್ನು ಸಂಕೋಚದಿಂದ ಕುಬ್ಜಗೊಳಿಸುವ ಪ್ರಕ್ರಿಯೆ ನಡೆಯುತ್ತದೆ. ಆದರೆ ಇಲ್ಲಿ ಜಾತಿ ಕಾರಣಕ್ಕಾಗಿ ಅಪಮಾನಗಳು, ಅವಮಾನಗಳು ಆಗುವುದಿಲ್ಲ. ಅಧಿಕಾರಿಗಳಿಗೆ, ದೊಡ್ಡವರಿಗೆ ಗೌರವ ಮತ್ತು ಅತಿವಿನಯ ತೋರಿಸುವ ಸಲುವಾಗಿ ಈ ಆಂಗಿಕ ಪ್ರಕ್ರಿಯೆ ನಡೆಯುವುದನ್ನು ಕಂಡುಕೊಳ್ಳಲಾಗಿದೆ.

ಕೆಲವು ಸಂದರ್ಭದಲ್ಲಿ ಕೆಳಜಾತಿ ಪಾತ್ರಗಳು ಮೇಲ್ಜಾತಿ ಪಾತ್ರಗಳ ಎದುರಿಗೆ ಪ್ರತಿಭಟಿಸಿ ನಿಂತಿರುವ ಸಂದರ್ಭಗಳು ಕಂಡುಬಂದಿವೆ. ಆದರೆ ತೀವ್ರ ಶೋಷಣೆಗೆ, ಅವಮಾನಕ್ಕೆ ಮತ್ತು ಸ್ವಾಭಿಮಾನಕ್ಕೆ ದಕ್ಕೆಯುಂಟಾದಾಗ ಪ್ರತಿಭಟಿಸಿರುವ ಸಂದರ್ಭಗಳು ಕಂಡುಬಂದಿವೆ. ಈ ರೀತಿಯ ಉದಾಹರಣೆಗಳು ಸಿಗುವುದು ವಿರಳ.

ಮಾತು ಮತ್ತು ಬರಹಗಳು ಎಂಬ ಭಾಷಿಕ ಘಟಕಗಳಲ್ಲಿ ಪದ ಮತ್ತು ವಾಕ್ಯಗಳು ಹೇಗೆ ಅರ್ಥಗ್ರಹಿಕೆಯ ನೆಲೆಗಳನ್ನು ಸೂಚಿಸುತ್ತವೆಯೋ ಹಾಗೆಯೇ ಸಂಕೇತಗಳು ಸಹ ಅರ್ಥಗ್ರಹಿಕೆ ನೆಲೆಗಳನ್ನು ಸೂಚಿಸುತ್ತಿರುತ್ತವೆ. ಜಾತಿಯ ಸಂಕೇತಗಳಾದ ಕಿವಿಯಲ್ಲಿ ಧರಿಸುವ ಒಲೆ, ಕೈಗಡಗ, ನಾಮ, ಮುದ್ರೆ, ಶಿವಧಾರ, ಜನಿವಾರ ಮುಂತಾದವುಗಳು ಜಾತಿ ಸಂಕೇತಗಳಾಗಿ ವ್ಯಕ್ತವಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಬಳಸುವ ಧರಿಸುವ ಉಡುಗೆ–ತೊಡುಗೆಗಳು ಆಚರಿಸುವ ಸಂಪ್ರದಾಯಿಕ ಆಚರಣೆಗಳು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಸೂಚಿಸುತ್ತಿರುತ್ತವೆ. ವ್ಯಕ್ತಿಗಳ ಉಡುಗೆ–ತೊಡುಗೆ, ಆಚರಣೆಗಳ ಮೂಲಕ ಸಂಕೇತಗಳು ಮತ್ತು ವೃತ್ತಿಯ ಸಂಕೇತಗಳಾದ ತಮಟೆ, ಚಪ್ಪಲಿ, ಸನಾದಿ ಮುಂತಾದ ಸಂಕೇತಗಳು ಜಾತಿಸೂಚಕವಾಗಿ ಕೆಲಸ ಮಾಡುವುದಲ್ಲದೇ ಅವರ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಶಿಕ್ಷಣ ಪಡೆದ ವ್ಯಕ್ತಿಗಳಿಗೆ ತಮಟೆ, ಸನಾದಿ, ಚಪ್ಪಲಿ ಹೊಲೆಯುವ ವೃತ್ತಿ, ಕೀಳರಿಮೆ, ಅವಮಾನ, ಜಾತಿಸೂಚಕ ನೆಲೆಯಾಗಿ ಕಂಡರೆ ಸಮುದಾಯದ ಹಿರಿಯರು

ಅಸ್ಮಿತೆ, ಸಂಸ್ಕೃತಿ, ಪಾರಂಪರಿಕ ಪದ್ಧತಿಯಾಗಿ ಸ್ವೀಕರಿಸಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

* * *

ಆಕರ ಗ್ರಂಥಗಳು

ಮೂಲ ಆಕರಗಳು

ಕಾದಂಬರಿಗಳು

೧. ಅನಂತಮೂರ್ತಿ. ಯು. ಆರ್., ೨೦೧೬, ಭಾರತೀಪುರ, ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಅನಂತಮೂರ್ತಿ. ಯು. ಆರ್., ೨೦೦೬, ಸಂಸ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪. ಆಮೂರು ಜಿ.ಎಸ್.,(ಸಂ) ೨೦೦೫, ಶ್ರೀರಂಗ ಸಾರಸ್ವತ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೫. ಕುವೆಂಪು., ೨೦೧೭, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು.

೬. ಚದುರಂಗ., ೨೦೦೬, ವೈಶಾಖ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭. ದೇವನೂರು ಮಹದೇವ., ೨೦೧೭, ಕುಸುಮಬಾಲೆ, ಅಭಿನವ ಪ್ರಕಾಶನ, ಬೆಂಗಳೂರು.

೮. ನಾಗರಾಜ್ ಮುಳ್ಳೂರು., ೧೯೯೨, ಮರಣ ಮಂಡಲ ಮಧ್ಯದೊಳಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೯. ಭೈರಪ್ಪ ಎಸ್.ಎಲ್., ೨೦೦೪, ದಾಟು, ಸಾಹಿತ್ಯ ಬಂಡಾರ ಪ್ರಕಾಶನ, ಬೆಂಗಳೂರು.

೧೦. ರಾವ್‌ಬಹದ್ದೂರ., ೨೦೧೧, ಗ್ರಾಮಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಚಲನಚಿತ್ರಗಳು

೧. ಕಾರಂತ ಬಿ.ವಿ., (ನಿ)., ೧೯೭೫, ಚೋಮನದುಡಿ,

೨. ಗಿರೀಶ ಕಾರ್ನಾಡ್ (ನಿ) ೧೯೭೩, ಕಾಡು

೩. ಜಂಧ್ಯಾಲ (ನಿ), ೧೯೮೨, ಆನಂದ ಭೈರವಿ,

೪. ದತ್ತರಾಜ್ ಚಿ.(ನಿ) ೧೯೮೩ ಕಾಮನಬಿಲ್ಲು

೫. ದೊರೆ – ಭಗವಾನ್ (ನಿ) ೧೯೮೧ ಮುನಿಯನ ಮಾದರಿ

೫. ಪುಟ್ಟಣ್ಣ ಕಣಗಾಲ್ ಎಸ್, ಆರ್, (ನಿ), ೧೯೭೮, ಪಡುವಾರಳ್ಳಿ ಪಾಂಡವರು.

೬. ರಾಜು ಕೆ.ವಿ. (ನಿ) ೧೯೯೬, ಹುಲಿಯಾ

೭. ರೆಡ್ಡಿ ಎಚ್.ಎನ್. (ನಿ) ೧೯೭೫, ಕಾವೇರಿ

೭. ವಿಜಯ್ (ನಿ), ೧೯೭೭, ಸನಾದಿ ಅಪ್ಪಣ್ಣ

೮. ಶಿವಯ್ಯ (ನಿ) ೧೯೮೬ ಕೃಷ್ಣನೀ ಬೇಗನೇ ಬಾರೋ

೯. ಸಿದ್ಧಲಿಂಗಯ್ಯ (ನಿ) ೧೯೮೨, ಹೇಮಾವತಿ

ಕಥೆಗಳು

೧. ಉಷಾ ಪಿ ರೈ. ಕೆ., (ಪ್ರ.ಸಂ), ಸಂಧ್ಯಾರೆಡ್ಡಿ ಕೆ.ಆರ್, ಶಾಂತಾಕುಮಾರಿ (ಸಂ), ೨೦೦೫, ಲೇಖಕಿಯರ ಸಣ್ಣ ಕಥೆಗಳು ಭಾಗ-೨, ಸಂಪುಟ-೧,

೨. ಕೃಷ್ಣಮೂರ್ತಿ ಹನೂರು ಮತ್ತು ಬಾನು ಮುಷ್ತಾಕ್(ಸಂ) ೨೦೦೬, ಸುವರ್ಣ ಕಥಾ ಸಂಕಲನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ನಾಯಕ ಡಿ.ಬಿ, ನಾಯಕ. ಕೆ.ಎಸ್(ಸಂ), ೨೦೦೮, ಕಥಾ ಸಂಗಮ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೪. ಫಕೀರ್ ಮಹಮದ್ ಕಟ್ಪಾಡಿ ಕೃಷ್ಣಮೂರ್ತಿ ಹನ್ನೂರು(ಸಂ), ೨೦೦೪, ಕನ್ನಡದ ಮೂವತ್ತು ಕಥೆಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ.

೩. ಮೊಗಳ್ಳಿ ಗಣೇಶ್., ೨೦೦೮, ಮೊಗಳ್ಳಿ ಕಥೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು.

೪. ಲಂಕೇಶ ಪಿ.,(ಸಂ) ೨೦೧೨, ಪಾ<ಚಾಲಿ ದೀಪಾವಳಿ ರಾಜೋತ್ಸವ ಸಂಚಿಕೆ-೧೯೭೪) ಲಂಕೇಶ ಪ್ರಕಾಶನ, ಬೆಂಗಳೂರು.

೫. ಶ್ರೀನಿವಾಸ., ೨೦೧೧, ಸಣ್ಣ ಕಥೆಗಳು, ಸಮಗ್ರ ಭಾಗ-೨, ಮಾಸ್ತಿ ವೆಂಕಟೇಶ್ವರ, ಅಯ್ಯಂಗಾರ್ ಜೀವನ ಕಾರ್ಯಾಲಯ, ಟ್ರಸ್ಟ್(ರಿ) ಬೆಂಗಳೂರು.

೬. ಸದಾಶಿವ ಕೆ., ೧೯೯೮, ಸಮಗ್ರ ಕಥೆಗಳು, ಪ್ರಿಸಂ, ಕಥಾಮಾಲಿಕೆ, ಬೆಂಗಳೂರು.

ನಾಟಕಗಳು

೧. ಅಮೂರ ಜಿ.ಎಸ್., (ಸಂ), ೨೦೦೫, ಶ್ರೀರಂಗ ಸಾರಸ್ವತ-೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಅಮೂರ ಜಿ.ಎಸ್., (ಸಂ), ೨೦೦೫, ಹುಯಿಲಗೋಳ ನಾರಾಯಣರಾಯರ ಸಮಗ್ರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ಚಂದ್ರಶೇಖರ ಪಾಟೀಲ, ಮಾಲತಿ ಎಸ್., (ಸಂ), ೨೦೦೬, ಸುವರ್ಣ ನಾಟಕ(ಏಕಾಂಕ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪. ಚನ್ನಣ್ಣ ವಾಲಿಕಾರ., ೨೦೦೨, ಸಮಗ್ರ ನಾಟಕ ಸಂಪುಟ, ದಲಿತ ಬಂಡಾಯ ಕೇಂದ್ರ, ಗುಲಬರ್ಗಾ.

೫. ಬೇಂದ್ರೆ ದ.ರಾ., ೧೯೯೫, ಉದ್ಧಾರ, ಶ್ರೀಮಾತಾ ಪ್ರಕಾಶನ, ಧಾರವಾಡ.

೬. ಭಾಸ್ಕರ ಟಿ.ಎಂ., ೨೦೦೭, ಭೂಮಿ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಯಲಬುರ್ಗಾ.

೭. ಶಿವರಾಮ ಕಾರಂತ., ೨೦೦೫. ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಾಹಿತ್ಯ-೨೩, ನಾಟಕಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೮ ಶ್ರೀನಿವಾಸರಾಜು ಚಿ. (ಸಂ), ೨೦೦೬, ಸುವರ್ಣ ನಾಟಕ ಭಾಗ-೧, (ಪೂರ್ಣಾವಧಿ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಪೂರಕ ಆಕರಗಳು

೧. ಅರ್ಜುನ ಗೋಳಸಂಗಿ,(ಸಂ) ೨೦೦೦, ದಲಿತಪ್ರಜ್ಞೆ, ದಲಿತ ಸಾಹಿತ್ಯ ಪರಿಷತ್ತು, ಗದಗ.

೨. ಅಮರೇಶ ನುಗಡೋಣಿ., ೨೦೦೮, ತಮಂಧದ ಕೇಡು, ಧಾತ್ರಿ ಪುಸ್ತಕ, ಬೆಂಗಳೂರು.

೩. ಅಮೂರ ಜಿ.ಎಸ್.,(ಸಂ) ೨೦೦೫, ಶ್ರೀರಂಗ ಸಾರಸ್ವತ-೩, ಸಂಪುಟ-೩, ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು.

೪. ಅರವಿಂದ ಮಾಲಗತ್ತಿ., ೧೯೯೯, ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು.

೫. ಅರವಿಂದ ಮಾಲಗತ್ತಿ., ೨೦೧೪, ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಅರವಿಂದ ಮಾಲಗತ್ತಿ., ೨೦೦೬, ಮೂಲ ಪದ್ಯಗಳ ಕಾರ್ಯ, ಅಲ್ಲಮ ಪ್ರಕಾಶನ, ಮೈಸೂರು.

೭. ಅರವಿಂದ ಮಾಲಗತ್ತಿ., ೨೦೧೬, ಮುಗಿಯದ ಕಥೆಗಳು, ಅಲ್ಲಮ ಪ್ರಕಾಶನ, ಮೈಸೂರು.

೮. ಅರವಿಂದ ಮಾಲಗತ್ತಿ.,(ಪ್ರ.ಸಂ), ೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂ-೬, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೯. ಅರವಿಂದ ಮಾಲಗತ್ತಿ.,(ಪ್ರ.ಸಂ), ೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂ–೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೦. ಉಷಾ ಕೆ.ಪಿ.ರೈ.,(ಪ.ಸಂ), ಸಂಧ್ಯಾರೆಡ್ಡಿ ಕೆ.ಆರ್, ಶಾಂತಕುಮಾರಿ, ೨೦೧೫, ಲೇಖಕರ ಸಣ್ಣ ಕಥೆಗಳು ಸಂಪುಟ–೧,

೧೧. ಕೃಷ್ಣ ಪರಮೇಶ್ವರ ಭಟ್ಟ., ೨೦೧೩, ಭಾಷೆ ಮತ್ತು ಸಾಮಾಜಿಕ ಸಂದರ್ಭ, ಅಭಿನವ ಪ್ರಕಾಶನ, ಬೆಂಗಳೂರು.

೧೨. ಕೆಂಪೇಗೌಡ., ೨೦೧೦, ಸಾಮಾಜಿಕ ಭಾಷಾವಿಜ್ಞಾನ ರೂಪುರೇಷೆಗಳು, ಸಾಹಿತ್ಯ ಮಾಲಿಕಾ ಪ್ರಕಾಶನ, ಮೈಸೂರು.

೧೩. ಗಿರಿಜಾಪತಿ ಎನ್.ಎ., ೨೦೦೭, ಕನ್ನಡ ಭಾಷಾವಲೋಕ, ಸುಮುಖ ಪ್ರಕಾಶನ, ಬೆಂಗಳೂರು.

೧೪. ಗಿರೀಶ ಕಾರ್ನಾಡ್., (ಸಂ), ಮಾಲತಿ ಎಸ್, ೨೦೦೭, ಸಮಗ್ರ ನಾಟಕ, ಮನೋಹರ ಗ್ರಂಥಮಾಲಾ, ಧಾರವಾಡ.

೧೫. ಗೋವಿಂದರಾಜು ಸಿ.ಆರ್.,(ಸಂ) ೨೦೧೭, ಸಿನಿಮಾ ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಚನ್ನಣ್ಣ ವಾಲೀಕಾರ., ೨೦೦೨, ಸಮಗ್ರ ನಾಟಕ ಸಂಪುಟ– ದಲಿತ ಬಂಡಾಯ ಸಾಹಿತ್ಯ ಕೇಂದ್ರ, ಗುಲ್ಬರ್ಗಾ.

೧೭. ಚನ್ನಪ್ಪ ಹನೂರು., ೨೦೦೭, ಬೆಲ್ಲದ ದೋಣಿ, ವಿಜಯಲಕ್ಷ್ಮೀ ಪ್ರಕಾಶನ, ಕುವೆಂಪು ನಗರ, ಮೈಸೂರು.

೧೮. ಚಂದ್ರಶೇಖರ ಕಂಬಾರ., ೨೦೦೪, ನೆಲ ಸಂಪಿಗೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೯. ಚಂದ್ರಶೇಖರ ಪಾಟೀಲ್.,(ಸಂ), ೨೦೦೬, ಸುವರ್ಣ ಸಾಹಿತ್ಯ (ಏಕಾಂತ) ಭಾಗ–೧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೦. ಚಂದ್ರಪೂಜಾರಿ ಎಂ, ಚಂದ್ರಶೇಖರ್ ಟಿ.ಆರ್, ಶ್ರೀಧರ್ ವಿ.ಎಸ್(ಸಂ), ೨೦೧೫, ಸಾಮಾಜಿಕ ಮತ್ತು ಮಾನವಿಕ, ಅಧ್ಯಯನಗಳ ಪರಿಭಾಷಿಕ ಕೋಶ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೨೧. ಚಂದ್ರಿಕಾ.ಪಿ.,(ಸಂ), ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ ಪ್ರಕಾಶನ, ಬೆಂಗಳೂರು.

೨೨. ಜವರೇಗೌಡ., ೨೦೧೪, ಕುವೆಂಪು ಸಾಹಿತ್ಯ ವಿಲೋಕನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೩. ತ್ರಿವೇಣಿ., ೨೦೦೮, ಕನ್ನಡ ಗಾದೆಗಳಲ್ಲಿ ಸ್ತ್ರೀ, ಲೇಖಕಿ-ಪ್ರಕಾಶಕಿ-ತ್ರಿವೇಣಿ, ಮೈಸೂರು.

೨೪. ದೇವನೂರು ಮಹದೇವ., ೨೦೧೫, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು.

೨೫. ದೇವಯ್ಯ ಹರವೆ., ೨೦೧೫, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೬. ನಂಜುಂಡಾರಾಧ್ಯರು., ೧೯೮೨, ಹಿಂದೂ ಧರ್ಮ ಮತ್ತು ಅಸ್ಪೃಶ್ಯತೆ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಹುಬ್ಬಳ್ಳಿ.

೨೭. ನಾಗರಾಜ ಸಿ.ಪಿ., ಕನ್ನಡ ಬಯ್ಗುಳಗಳ ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು.

೨೮. ನಾರಾಯಣ. ಕೆ.ವಿ, ಮಲ್ಲಿಕಾರ್ಜುನ ಮೇಟಿ, ಜಲಪತಿ ಆರ್.,(ಸಂ), ೨೦೧೬, ಕನ್ನಡ ನುಡಿಯ ಆಕರ ಕೋಶ, ಕುವೆಂಪು ಭಾಷಾ ಭಾರತಿ ಪ್ರಸಾರಾಂಗ, ಬೆಂಗಳೂರು.

೨೯. ನಾರಾಯಣಸ್ವಾಮಿ.ಜಿ., ೨೦೦೩, ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ, ಮೋಹನ ಪ್ರಕಾಶನ, ಬೆಂಗಳೂರು.

೩೦. ಪಾಂಡುರಂಗಬಾಬು.ಡಿ., ೨೦೦೫, ನುಡಿನೋಟ, ಆಕಾಶ ಪ್ರಕಾಶನ, ಹೊಸಪೇಟೆ.

೩೧. ಪಾಂಡುರಂಗಬಾಬು.ಡಿ., ೨೦೦೫, ನಮ್ಮಾತು, ಆಕಾಶ ಪ್ರಕಾಶನ, ಹೊಸಪೇಟೆ.

೩೨. ಪುರುಷೋತ್ತಮ ಬಿಳಿಮಲೆ., ೨೦೦೫, ಬಂಡಾಯ-ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೩. ಪುರುಷೋತ್ತಮ ಬಿಳಿಮಲೆ., ೨೦೦೫, ಬಂಡಾಯ-ದಲಿತ ಚಳುವಳಿ ಮತ್ತು ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೪. ಪ್ರೇಮ ಪಲ್ಲವಿ. ಸಿ.ಬಿ., ೨೦೧೪, ಕನ್ನಡ ಚಲನಚಿತ್ರ: ಭಾಷೆ ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೩೫. ಬೇನಾಳ ಎಚ್.ಎಸ್.,(ಸಂ), ೨೦೧೬, ದಲಿತ ಹೋರಾಟದ ಹಾಡುಗಳು, ಸಹನಾ ಪ್ರಕಾಶನ, ಕಲಬುರ್ಗಿ.

೩೬. ಭಟ್ಟ., ಜಿ.ಎಸ್., (ಪ್ರ.ಸಂ), ೨೦೧೧, ದಲಿತ ಸಾಹಿತ್ಯ, ಚೇತನ್ ಬುಕ್ ಹೌಸ್, ಬೆಂಗಳೂರು.

೩೭. ಮಹದೇವಯ್ಯ.ಪಿ., ೨೦೦೬, ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ, ವಿಜಯಲಕ್ಷ್ಮೀ ಪ್ರಕಾಶನ, ಮೈಸೂರು.

೩೮. ಮಹದೇವಯ್ಯ.ಪಿ., ೨೦೧೪, ಕನ್ನಡ ನುಡಿ ಬಳಕೆಯ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಮಾನಸ.ಕೆ.ವಿ., ೨೦೦೮, ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೦. ಮುನಿವೆಂಕಟಪ್ಪ ವಿ.,(ಸಂ), ೨೦೧೪, ದಲಿತ ಸಾಹಿತ್ಯ, ದರ್ಶನ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೧. ಮುನಿವೆಂಕಟಪ್ಪ ವಿ., ೨೦೧೧, ದಲಿತ ಸಾಹಿತ್ಯ ಸಮೀಕ್ಷೆ, ವಾಣಿ ಪ್ರಕಾಶನ, ಮೈಸೂರು.

೪೨. ಮೊಗಳ್ಳಿ ಗಣೇಶ., ೨೦೧೫, ದಲಿತಪದ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ಮೊಗಳ್ಳಿ ಗಣೇಶ., ೨೦೧೫, ಜಾತಿ ಮೀಮಾಂಸೆ, ಅಭಿನವ ಪ್ರಕಾಶನ, ಬೆಂಗಳೂರು.

೪೪. ಮೋಹನ್ ರಾಂ. ಎನ್. ಕೆ., ೨೦೧೭, ದಲಿತರ ದೇವಸ್ಥಾನ ಪ್ರವೇಶದ ಸಾವಿರ ವರ್ಷ: ದಲಿತರು ಮರೆತ ರಾಮಾನುಜ, ಐ. ಬಿ.ಎಚ್, ಪ್ರಕಾಶನ, ಬೆಂಗಳೂರು.

೪೫. ರಾಘವ್ ನಂಬಿಯಾರ., ೨೦೧೨, ದ್ರಾವಿಡ ನಾಡು ನುಡಿ, ಅಂಕಿತ ಪುಸ್ತಕ, ಬೆಂಗಳೂರು.

೪೬. ರಾಮೇಗೌಡ, ೨೦೦೮, ಕಿಟೆಲ್ ಕೋಶದ ಗಾದೆಗಳು, ಡಿ.ವಿ.ಕೆ, ಮೂರ್ತಿ ಪ್ರಕಾಶನ, ಮೈಸೂರು.

೪೭. ಲಕ್ಷ್ಮೀಪತಿ ಸಿ.ಜಿ., ೨೦೦೭, ಕ್ಯಾಸ್ಟ್ ಕೆಮಿಸ್ಟ್ರಿ, ಸಖಿ ಪ್ರಕಾಶನ, ಹೊಸಪೇಟೆ.

೪೮. ವೆಂಕಟೇಶ ಮಲ್ಲೇಶಪುರಂ(ಸಂ), ೨೦೦೯, ಕನ್ನಡ ಭಾಷಾಧ್ಯಯನ ತತ್ತ್ವ ವ್ಯಾಪ್ತಿ–ಜಿಜ್ಞಾಸೆ, ಪ್ರತಿಭಾ ಪ್ರಕಾಶನ, ಮೈಸೂರು.

೪೯. ಶಕುಂತಲಾ ಸಿಂಧೂರ., ೨೦೦೯, ಏಕಲವ್ಯ ಉಪಾಖ್ಯಾನ, (ಒಂದು ತೌಲನಿಕ ಅಧ್ಯಯನ) ಹೇಮಂತ ಸಾಹಿತ್ಯ, ಬೆಂಗಳೂರು.

೫೦. ಶಿವಕುಮಾರ್ ಜಿ.,(ಸಂ) ೨೦೧೧, ದನಿಯಿಲ್ಲದವರ ದನಿ ನಾಡೋಜ ಡಾ. ಸಿದ್ಧಲಿಂಗಯ್ಯ, ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ.

೫೧. ಶಿವಾರೆಡ್ಡಿ. ಕೆ.ಸಿ.,(ಸಂ), ೨೦೦೩, ಕುವೆಂಪು ಸಮಗ್ರ ಗದ್ಯ,(ಸಂಪುಟ-೧) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೨. ಸನದಿ ಬಿ.ಎ., ಸವಿತಾ ನಾಗಭೂಷಣ(ಸಂ) ೨೦೦೬, ಸುವರ್ಣ-ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. (ಮೂ.ಪ)ಕಾವ್ಯ

೫೩. ಸಾಂಬವಮೂರ್ತಿ., ೨೦೦೪, ಭಾಷೆ ಮತ್ತು ಅಶಾಬ್ದಿಕ ಸಂವಹನ, ಸಿ.ವಿ.ಜಿ ಪಬ್ಲಿಕೇಶನ್, ಬೆಂಗಳೂರು.

೫೪. ಸಿದ್ಧಲಿಂಗಯ್ಯ., ೨೦೧೫, ನನ್ನ ಜನಗಳು ಮತ್ತು ಇವರ ಕವಿತೆಗಳು, ಕಾಂತಿಸಿರಿ ಪ್ರಕಾಶನ, ಬೆಂಗಳೂರು.

೫೫. ಸಿದ್ಧಲಿಂಗಯ್ಯ., ೨೦೧೫, ಉರಿಕಂಡಾಯ, ಅಂಕಿತ ಪುಸ್ತಕ, ಬೆಂಗಳೂರು.

೫೬. ಸೋಮಶೇಖರ ಅಪ್ಪಗೆರೆ., ೨೦೦೬, ಬೆಳ್ಳಿಕಿರಣ, ಪ್ರಸಾದ ನಜೆಸ್ಸಿನ್, ಮೈಸೂರು.

೫೭. ಹನುಮಂತಯ್ಯ. ಎಲ್., ೧೯೯೯, ಕಥಾ ಕಥನ, ಸಿ.ವಿ.ಜಿ ಪಬ್ಲಿಕೇಶನ್, ಬೆಂಗಳೂರು.

೫೮. ಹಸನ್ ನಯೀಂ ಸುರಕೋಡ್, (ಅನು) ೨೦೧೪, ಜಾತಿ ಪದ್ಧತಿ, ಲಂಕೇಶ ಪ್ರಕಾಶನ, ಬೆಂಗಳೂರು.

೫೯. ಹೆಗಡೆ ಆರ್.ಪಿ.,(ಅನು) ೨೦೧೪, ದಲಿತ ಸಾಹಿತ್ಯದ ಸೌಂದರ್ಯ ಶಾಸ್ತ್ರ, ಲಡಾಯಿ ಪ್ರಕಾಶನ, ಗದಗ.

* * *